ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ

(ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಪುರುಷೋತ್ತಮ ಎಸ್.ಆರ್.

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ

(ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಪುರುಷೋತ್ತಮ ಎನ್.ಆರ್.

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೦

ಸಂಶೋಧಕರ ಪ್ರಮಾಣ ಪತ್ರ

'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' (ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಹೆಬ್ಬಾಲೆ ಕೆ. ನಾಗೇಶ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಈ ಸಂಶೋಧನ ಮಹಾಪ್ರಬಂಧವು ಮೂಲವಾಗಿದ್ದು, ಇಡಿಯಾಗಿ ಇಲ್ಲವೆ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ಪುರುಷೋತ್ತಮ ಎನ್.ಆರ್.
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ: 20/11/2020

ಮಾರ್ಗದರ್ಶಕರ ದೃಢೀಕರಣ ಪತ್ರ

ಪುರುಷೋತ್ತಮ ಎನ್.ಆರ್. ಇವರು **'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' (ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸಿದ್ದಾರೆ. ಈ ಮಹಾಪ್ರಬಂಧವು ಮೂಲವಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

20/11/2020

ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ: 20/11/2020

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವ್ಯಾಪ್ತಿ

೧.೫. ಅಧ್ಯಯನದ ವಿಧಿ ವಿಧಾನಗಳು

೧.೬. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧.೧. ಪ್ರಸ್ತಾವನೆ

ಜನಪದ ಸಾಹಿತ್ಯ ಮಾನವನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುವಂತಹದ್ದು. ಇದು ಮಾನವನ ಬದುಕಿನ ಸಂಸ್ಕೃತಿ, ಅವನ ಜೀವನ ವಿಧಾನ, ವಿವಿಧ ಸನ್ನಿವೇಶ ಹಾಗೂ ಘಟನಾವಳಿಗಳನ್ನು ತಿಳಿಯುವುದಕ್ಕೆ ಸೂಕ್ತ ಆಕರ ಹಾಗೂ ಅವಕಾಶಗಳನ್ನು ಒದಗಿಸಿದೆ. ಜಾನಪದದ ಒಂದು ಪ್ರಕಾರವಾಗಿ ಕಂಡುಬರುವ 'ಜನಪದ ಗೀತೆಗಳು' ಇಂದು ಬರಿ ಗೀತೆಗಳಾಗಿ ಉಳಿದಿಲ್ಲ. ಅವು ಜನಪದರ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದ್ದು, ಅವರ ಬದುಕಿನ ವಿವಿಧ ಮಗ್ಗಲುಗಳನ್ನು ನಮಗೆ ದರ್ಶಿಸುತ್ತವೆ. ಇಂತಹ ಗೀತೆಗಳು ಹುಟ್ಟಿದ್ದು ಮನಸ್ಸುಗಳು ಅರಳುವ ಬಡವರ ಗುಡಿಸಲಿನಲ್ಲಿ. ಬೆವರು ಸುರಿಸಿ ದುಡಿಯುವ ಜನರ ಶ್ರಮದ ಬದುಕಿನಲ್ಲಿ ಎಂಬುದು ವಾಸ್ತವ ಸತ್ಯ. ಹಾಗಾಗಿಯೇ ಈ ಸಾಹಿತ್ಯ ಪ್ರಕಾರ ಬಹಳಷ್ಟು ದಿನಗಳವರೆಗೆ ಅಸಡ್ಡೆ ಹಾಗೂ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. 'ಹಿತ್ತಲ ಗಿಡ ಮದ್ದಲ್ಲ' ಎಂಬಂತೆ ಇದರ ಚಿಕಿತ್ಸಕ ಗುಣ ಹಲವು ದಿನಗಳವರೆಗೆ ನಮ್ಮವರಿಗೆ ಲಭ್ಯವಾಗಲೇ ಇಲ್ಲ. ಇಂತಹ ಚಿಕಿತ್ಸಕ ಗುಣದ ಜನಪದ ಗೀತೆಗಳನ್ನು ಪರಿಚಯಿಸುವ ಮೂಲಕ ಅವುಗಳ ಮೌಲ್ಯವನ್ನು ಅರ್ಥೈಸಬೇಕಾಗಿದೆ. ಹಾಗೂ ಸಂಸ್ಕೃತಿಯ ಒಳತಿರುಳನ್ನು ಎಲ್ಲರಿಗೂ ತಿಳಿಸಿಕೊಡುವ ಜವಾಬ್ದಾರಿ ಎಲ್ಲ ಪ್ರಜ್ಞಾವಂತರ ಮೇಲೂ ಇದೆ.

ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಒಂದಾದ 'ಜನಪದ ಗೀತೆ'ಗಳನ್ನು 'ಹಳ್ಳಿಯ ಹಾಡು' ಎಂತಲೂ ಕರೆಯುತ್ತಾರೆ. ವಾಕ್ ಪರಂಪರೆಯ ಮೂಲಕ ಅನಕ್ಷರಸ್ಥ ಜನ ಸಮುದಾಯದ ನಡುವೆ ನಿರಂತರವಾಗಿ ಸಾಗುತ್ತ ಉಳಿದು ಬಂದಿರುವ ಜನಪದರ ಕಾವ್ಯವೇ ಜನಪದ ಗೀತೆ ಎನಿಸಿಕೊಂಡಿದೆ. ಜಾನಪದ ಸಾಹಿತ್ಯವು ಜನಪದರ ಜೀವಾಳ, ಅವರ ಉಸಿರು. ಅದು ಅವರ ಸಜೀವತೆಯ ಲಕ್ಷಣ. ಅದು ನಿರಕ್ಷರಿಗಳ ಸ್ವತ್ತಾಗಿದ್ದರೂ ಅನುಭವದ ಬೆಳಕಿನ ಮೂಲಕ ಕೈಹಿಡಿದು ನಡೆಸುವಂತಹದ್ದು. ಇದು ಜೀವನದ ಶ್ರೀಮಂತಿಕೆಯ ಮೌಲ್ಯಗಳನ್ನು ಕಲಿಸಿಕೊಡುತ್ತದೆ. ಇಲ್ಲಿ ಜನ ಸಾಮಾನ್ಯರ ಬೇಕು ಬೇಡಗಳಿಗೆ ಬೆಲೆಯಿದೆ. ಸುಖ-ದುಃಖ, ಆಸೆ-ಆಕಾಂಕ್ಷೆಗಳಿಗೆ ಮನ್ನಣೆ ಇದೆ. ಜೀವನ ಶ್ರದ್ಧೆಯನ್ನು ಕಲಿಸಿಕೊಡುವ ಇದು ಮೌಲ್ಯಗಳ ಭಂಡಾರ. ರಾಗೌ ಅವರು "ಅನಕ್ಷರಸ್ಥ ಜನ ಸಮೂಹದ ನಡುವೆ ವಾಕ್ಸಂಪ್ರದಾಯದ ಮೂಲಕ ಹರಿದು ಬಂದಿರುವ ಒಂದು ಗುಂಪಿನ ಕಾವ್ಯ

ಮತ್ತು ಸಂಗೀತಗಳ ಸಮಾವೇಶದಿಂದಾದುದು ಜನಪದ ಗೀತೆ"[1] ಎಂದು ಹೇಳುವ ಮಾತುಗಳು ಜನಪದ ಸಾಹಿತ್ಯದ ಹುಟ್ಟು ಹಾಗೂ ಅದು ಸಾಗಿ ಬಂದ ವಿವರಗಳನ್ನು ನಮ್ಮ ಗಮನಕ್ಕೆ ತಂದುಕೊಡುತ್ತದೆ. ಜೊತೆಗೆ ಬಿ.ಎಂ.ಶ್ರೀ ಅವರು ಜನಪದ ಸಾಹಿತ್ಯವನ್ನು ಕುರಿತು "ಜನವಾಣಿ ಬೇರು, ಕವಿವಾಣಿ ಹೂವು"[2] ಎಂದು ಹೇಳಿರುವ ಮಾತು ಅತ್ಯಂತ ಧ್ವನಿಪೂರ್ಣವಾಗಿದೆ. ಏಕೆಂದರೆ ಜನಪದ ಸಾಹಿತ್ಯ ನಿಂತ ನೀರಲ್ಲ. ಅದು ಸದಾ ಚಲನಶೀಲವಾದುದು. ನಮ್ಮ ಬದುಕಿನ ಪ್ರತಿಯೊಂದು ನಂಬಿಕೆ, ಆಚರಣೆ, ಸಂಪ್ರದಾಯ ಎಲ್ಲವೂ ಕೂಡ ಜನಪದರ ಮೂಲದಿಂದ ಹುಟ್ಟಿದವಾಗಿವೆ.

ಜನಪದ ಸಾಹಿತ್ಯ ಪ್ರಕಾರವನ್ನು ಮೂಲೆಗುಂಪು ಮಾಡಲು ಪ್ರಮುಖ ಕಾರಣವೆಂದರೆ ಅದು ತಳಸಮುದಾಯದವರ ಹಾಗೂ ಅನಕ್ಷರಸ್ಥರ ಸೃಷ್ಟಿ ಎಂಬುದು. ಹಾಗಾಗಿ ಈ ಕ್ಷೇತ್ರದ ಕಡೆ ಪಂಡಿತ ವರ್ಗ ಎನ್ನಿಸಿಕೊಂಡ ಸಮುದಾಯಗಳು ಅನೇಕ ವರ್ಷಗಳವರೆಗೆ ಇತ್ತ ಗಮನ ಹರಿಸಲಿಲ್ಲ ಎಂಬುದು ಕಂಡುಬರುತ್ತದೆ. ಭಾರತ ಹಾಗೂ ಕರ್ನಾಟಕದ ಸಂದರ್ಭದಲ್ಲಿ ವಸಾಹತುಶಾಹಿಯ ಕಾರಣವಾಗಿ ನಮ್ಮ ನಾಡಿಗೆ ಬಂದ ಬ್ರಿಟೀಷ್ ಅಧಿಕಾರಿಗಳಿಂದ ಈ ಸಾಹಿತ್ಯ ಪ್ರಕಾರಕ್ಕೆ ಒಂದು ಘನತೆ ಪ್ರಾಪ್ತಿಯಾಯಿತೆಂದರೆ ತಪ್ಪಾಗಲಿಕ್ಕಿಲ್ಲ. ಮೌಖಿಕ ಪ್ರಕಾರವಾಗಿ ಜನಜೀವನದಲ್ಲಿ ಬೆರೆತು ಹೋಗಿದ್ದ ಜಾನಪದ ಅವರ ಗಮನ ಸೆಳೆದದ್ದು ಆಶ್ಚರ್ಯವಲ್ಲ. ಇವರಲ್ಲಿ ಅನೇಕರು ಶ್ರೀಮಂತವಾಗಿದ್ದ ಜಾನಪದವನ್ನು ವ್ಯವಹಾರಿಕ ದೃಷ್ಟಿಯಿಂದ, ಮತ್ತೆ ಕೆಲವರು ವೈಯಕ್ತಿಕ ಆಸಕ್ತಿ ಹಾಗೂ ಕುತೂಹಲಗಳ ಕಾರಣವಾಗಿ ಸಂಪಾದನೆ, ಸಂಗ್ರಹ ಮತ್ತು ಅಧ್ಯಯನಗಳಂತಹ ಕಾರ್ಯಗಳಿಗೆ ತಮ್ಮನ್ನು ತೊಡಗಿಸಿಕೊಂಡರು. ಇದರ ಫಲವೇ ಮುಂದಿನ ದಿನಗಳಲ್ಲಿ ಹಲವು ಸಂಘ ಸಂಸ್ಥೆಗಳು, ಆಸಕ್ತರು, ವಿಶ್ವವಿದ್ಯಾಲಯಗಳು ಜಾನಪದವನ್ನು ಒಂದು ಪ್ರತ್ಯೇಕ ಅಧ್ಯಯನದ ಜ್ಞಾನ ಶಿಸ್ತಾಗಿ ಅಧ್ಯಯನ ಮಾಡಲು ಕಾರಣವಾಯಿತು.

ಪ್ರತಿಯೊಂದು ಸ್ಥಳ, ನಾಡು ಸಹ ತನ್ನ ಒಡಲಾಳದಲ್ಲಿ ಸಮೃದ್ಧವಾದ ಜಾನಪದ ವಸ್ತು, ವಿಷಯಗಳನ್ನು ಒಳಗೊಂಡಿರುತ್ತದೆ. ಈ ಜಾನಪದ ಕುರುಹುಗಳು ಅತ್ಯಂತ ಸೂಕ್ಷ್ಮವಾಗಿದ್ದು, ಮಾನವನ ಬದುಕು ಹಾಗೂ ಜಾನಪದ ಸಂಸ್ಕೃತಿಗಳು ಬದಲಾದಂತೆ ತನ್ನ ಸ್ವರೂಪವನ್ನು ಕಾಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವ ಗುಣವನ್ನು ಒಳಗೊಂಡಿರುತ್ತದೆ. ಹೀಗಾಗಿ ಇದು ನಿತ್ಯ ಪರಿವರ್ತನಶೀಲವಾದ ಗುಣಗಳುಳ್ಳದ್ದು. ಜಾನಪದವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅತ್ಯಂತ ಸೂಕ್ಷ್ಮ ನೆಲೆಯಲ್ಲಿ ಜಾನಪದ ಕುರುಹುಗಳನ್ನು ನಾವು ಶೋಧಿಸಬೇಕಾಗುತ್ತದೆ. ಇದುವರೆಗೆ ಜಾನಪದ ಕುರಿತು ಅಧ್ಯಯನಗಳು ನಡೆದಿದ್ದರೂ ಸಮಗ್ರ ನೆಲೆಯಲ್ಲಿ ನಡೆದಿರುವ ಅಧ್ಯಯನಗಳು ವಿರಳ.

ಭಾರತದ ಪ್ರತಿಯೊಂದು ಹಳ್ಳಿ ಹಳ್ಳಿಯೂ ಕೂಡ ಜಾನಪದದ ಗಣಿಗಳಾಗಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ಇಂತಹ ಪ್ರಾಂತೀಯ ನೆಲೆಯಲ್ಲಿನ ಅಧ್ಯಯನಗಳು ಇಂದಿನ ಅಗತ್ಯಗಳಾಗಿವೆ.

ಇದಕ್ಕೆ ಮಹತ್ವದ ಕಾರಣವೆಂದರೆ ಜಾಗತೀಕರಣ ಹಾಗೂ ಉದಾರೀಕರಣದ ಭರಾಟೆಯಲ್ಲಿ ಅವನತಿಯ ಹಂತವನ್ನು ತಲುಪುತ್ತಿರುವ ಜಾನಪದವನ್ನು ಸಂರಕ್ಷಿಸುವುದು. ಹಾಗೂ ಜಾನಪದವನ್ನು ಅಧ್ಯಯನ ಮಾಡುವುದರಿಂದ ನಮ್ಮ ಗತಕಾಲದ ಬದುಕಿನ ಜೀವನ ಕ್ರಮ, ಸಂಸ್ಕೃತಿ, ನಮ್ಮ ಪೂರ್ವಿಕರ ಪಾರಂಪರಿಕ ಜ್ಞಾನ ಮೊದಲಾದವುಗಳನ್ನು ಶೋಧಿಸಿಕೊಳ್ಳುವುದಕ್ಕೆ ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಮೈಸೂರು ಸಂಸ್ಥಾನದ ವ್ಯಾಪ್ತಿಗೆ ಒಳಪಟ್ಟಿದ್ದಂತಹ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ತನ್ನದೇ ಆದ ಸಾಂಸ್ಕೃತಿಕ ಹಿರಿಮೆಯನ್ನು ಒಳಗೊಂಡಿದೆ. ಹೀಗಾಗಿ ಪ್ರಸ್ತುತ ಸಂಶೋಧನೆಯ ಅಧ್ಯಯನದಲ್ಲಿ ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಲಾಗುವುದು.

೧.೨. ಅಧ್ಯಯನದ ಉದ್ದೇಶ

'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' (ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಂಡಿದ್ದು, ಪ್ರಸ್ತುತ ಅಧ್ಯಯನದ ಉದ್ದೇಶವನ್ನು ಕೆಳಗಿನಂತೆ ಗುರುತಿಸಿಕೊಳ್ಳಲಾಗಿದೆ.

೧. 'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯವನ್ನು ಕುರಿತು ಸಂಶೋಧನೆ ನಡೆಸುವ ಜೊತೆಗೆ ಜನಪದ ಗೀತೆಗಳನ್ನು ಕೇಂದ್ರವಾಗಿಟ್ಟುಕೊಂಡು ನಡೆದಿರುವ ಅಧ್ಯಯನಗಳನ್ನು ವಿಶ್ಲೇಷಿಸುವ ಉದ್ದೇಶವನ್ನು ಇಲ್ಲಿ ಕೈಗೊಳ್ಳಲಾಗಿದೆ.

೨. ಚನ್ನರಾಯಪಟ್ಟಣ ತಾಲ್ಲೂಕು ಹಳೇ ಮೈಸೂರು ಸಂಸ್ಥಾನಕ್ಕೆ ಒಳಪಟ್ಟಿದ್ದ ಪ್ರಾಂತವಾಗಿದ್ದು, ಈ ಪ್ರದೇಶವನ್ನು ಹಲವಾರು ರಾಜ ಮನೆತನಗಳು ಆಳ್ವಿಕೆ ನಡೆಸಿರುವುದು ಕಂಡು ಬರುತ್ತದೆ. ಇದರ ಫಲವಾಗಿ ಹಲವಾರು ಧರ್ಮಗಳು ಸಂಗಮಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಜನಪದರ ಬದುಕಿನ ಮೇಲೆ ವಿವಿಧ ಧರ್ಮಗಳು ಪ್ರಭಾವ ಬೀರುವ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

೩. ಜನಪದರ ಬದುಕಿನ ಭಾಗವಾಗಿಯೇ ಬೆಳೆದು ಬಂದಿರುವ ಜನಪದ ಗೀತೆಗಳ ಮೂಲಕ ಈ ಪ್ರಾಂತ್ಯದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

೪. ಜನಪದ ಗೀತೆಗಳಲ್ಲಿ ಅಡಗಿರುವ ಸಾಂಸ್ಕೃತಿಕ ಅಂಶಗಳನ್ನು ಪ್ರಕಾರಗಳ ಹಿನ್ನೆಲೆಯಲ್ಲಿ ತಾರ್ಕಿಕವಾಗಿ ಚರ್ಚಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

೫. ಜಾಗತೀಕರಣದ ಸಂದರ್ಭದಲ್ಲಿ ಪರಂಪರಾಗತವಾಗಿ ಮುಂದುವರಿದುಕೊಂಡು ಬಂದಿರುವಂತಹ ಜನಪದ ಆಚರಣೆ, ಸಂಪ್ರದಾಯ ಹಾಗೂ ಸಂಸ್ಕೃತಿಯು ದಿನದಿಂದ ದಿನಕ್ಕೆ ತನ್ನ ಮೌಲ್ಯಗಳನ್ನು ಕಳೆದುಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಪರಿಸರದ ಜನಪದ ಗೀತೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

೬. ಇದುವರೆಗೆ ಜನಪದ ಗೀತೆಗಳನ್ನು ಸಮಗ್ರವಾದ ಅಧ್ಯಯನಕ್ಕೆ ಒಳಪಡಿಸಿದ್ದರೂ ಕೂಡ ಪ್ರಾದೇಶಿಕ ನೆಲೆಯಲ್ಲಿ ಅಧ್ಯಯನಗಳು ಇನ್ನೂ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

೭. ಜನಪದ ಗೀತೆಗಳಲ್ಲಿನ ವಸ್ತು, ಭಾವ ಪ್ರಪಂಚ, ದಿನನಿತ್ಯದ ಜೀವನಕ್ಕೆ ಸಂಬಂಧಪಟ್ಟದ್ದು. ಈ ಹಿನ್ನೆಲೆಯಲ್ಲಿ ಅಲ್ಲಿನ ಜೀವನ ವಿಧಾನಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

೮. ಜನಪದ ಗೀತೆಗಳಲ್ಲಿ ವ್ಯಕ್ತವಾಗಿರುವ ಮಹಿಳಾ ಸಂವೇದನೆ ಮತ್ತು ಅವರ ಸಂಘರ್ಷದ ಮನೋಭಾವಗಳನ್ನು ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವನ್ನು ಒಳಗೊಂಡಿದೆ.

೯. ಜಾನಪದ ಸಾಹಿತ್ಯವು ಮೌಖಿಕ ಸಾಹಿತ್ಯವಾಗಿದ್ದು, ಅದು ಸ್ಥಳದಿಂದ ಸ್ಥಳಕ್ಕೆ ಕಾಲದಿಂದ ಕಾಲಕ್ಕೆ ಭಿನ್ನವಾಗಿರುತ್ತದೆ. ಈ ಅಂಶಗಳ ಆಧಾರದ ಮೇಲೆ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳು ಕರ್ನಾಟಕದ ಉಳಿದ ಪ್ರಾಂತ್ಯಗಳಿಗಿಂತ ಹೇಗೆ ಭಿನ್ನವಾಗಿವೆ ಎಂಬುದನ್ನು ಅಧ್ಯಯನದ ನೆಲೆಯಲ್ಲಿ ಗುರುತಿಸುವ ಉದ್ದೇಶವನ್ನು ಹೊಂದಲಾಗಿದೆ.

೧೦. ಜನಪದ ಗೀತೆಗಳಲ್ಲಿ ಅಡಗಿರುವ ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವ ಹಾಗೂ ವಿಶ್ಲೇಷಣೆಗೆ ಒಳಗು ಮಾಡುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ.

ಈ ರೀತಿಯಾಗಿ ಮೇಲೆ ಚರ್ಚಿಸಿರುವ ಉದ್ದೇಶಗಳನ್ನು ಪ್ರಧಾನವಾಗಿ ಅಧ್ಯಯನದ ನೆಲೆಯಾಗಿರಿಸಿಕೊಂಡು ಪ್ರಸ್ತುತ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇವುಗಳನ್ನು ಒಳಗೊಂಡಂತೆ ಅಧ್ಯಯನದ ಸಂದರ್ಭದಲ್ಲಿ ಸಂಶೋಧನೆಗೆ ಪೂರಕವಾದ ಇತರ ನೆಲೆಗಳನ್ನು ಬಳಸಿಕೊಳ್ಳಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಕರ್ನಾಟಕವು ಜಾನಪದ ಸಾಹಿತ್ಯದ ನೆಲವೀಡಾಗಿದ್ದು, ಇಲ್ಲಿನ ಪ್ರತಿಯೊಂದು ಹಳ್ಳಿಗಳಲ್ಲೂ ಜಾನಪದದ ವಿವಿಧ ಪ್ರಕಾರಗಳ ಅಮೂಲ್ಯ ಸಾಹಿತ್ಯ ಪರಂಪರೆಯನ್ನು ಕಾಣಬಹುದು. ಅದು ಜನಪದ ಗೀತೆ, ಕತೆ, ಮಹಾಕಾವ್ಯ, ಕಥನ ಕವನ, ಲಾವಣಿ ಹೀಗೆ ಹಲವು ಪ್ರಕಾರಗಳಲ್ಲಿದ್ದು, ಜನಮಾನಸದಲ್ಲಿ ಉಳಿದು ಬಂದಿದೆ. ಇಂತಹ ಜಾನಪದ ಸಾಹಿತ್ಯದ ಅಧ್ಯಯನವನ್ನು ಸಮಗ್ರ ಕರ್ನಾಟಕವನ್ನು ಒಳಗೊಂಡಂತೆ ಕ್ಷೇತ್ರಕಾರ್ಯದ ವ್ಯಾಪ್ತಿಗೆ ಅಳವಡಿಸಿಕೊಳ್ಳುವುದು ಕ್ಲಿಷ್ಟಕರ ಕೆಲಸ. ಒಂದು ವೇಳೆ ಸಮಗ್ರ ಕರ್ನಾಟಕವನ್ನು ಕ್ಷೇತ್ರಕಾರ್ಯಕ್ಕೆ ಆರಿಸಿಕೊಂಡರೆ ಪ್ರಾದೇಶಿಕ ವೈಶಿಷ್ಟ್ಯಗಳು ಅಧ್ಯಯನದಿಂದ ಹೊರಗುಳಿಯುವ ಸಾಧ್ಯತೆ ಇದೆ. ಆದ್ದರಿಂದ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ಕರ್ನಾಟಕದ ಪ್ರತಿಯೊಂದು ಹಳ್ಳಿ, ತಾಲ್ಲೂಕು, ಜಿಲ್ಲೆಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳುವುದು ಉತ್ತಮ. ಇದರಿಂದಾಗಿ ಒಂದು ಹಳ್ಳಿಯ, ತಾಲ್ಲೂಕಿನ ಸಮಗ್ರ ಜಾನಪದ ಸಾಹಿತ್ಯವನ್ನು

ಅಭ್ಯಸಿಸಬಹುದು. ಈ ದಿಸೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಕ್ಷೇತ್ರಕಾರ್ಯಕ್ಕೆ ಚನ್ನರಾಯಪಟ್ಟಣ ತಾಲ್ಲೂಕನ್ನು ಆರಿಸಿಕೊಳ್ಳಲಾಗಿದೆ.

'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ'ಕ್ಕೆ ಸಂಬಂಧಿಸಿದಂತೆ ಸಂಗ್ರಹ ಕಾರ್ಯ ಸರಳ ಮತ್ತು ಸುಲಭವಲ್ಲ. ಕಾರಣ ಜನಪದ ಗೀತೆಗಳ ಸಂರಕ್ಷಕರಾಗಿರುವ ಹಳ್ಳಿಯ ಹೆಣ್ಣುಮಕ್ಕಳು ತಮ್ಮಲ್ಲಿನ ಸಾಹಿತ್ಯವನ್ನು ಅಷ್ಟು ಸುಲಭ ಮತ್ತು ಶೀಘ್ರವಾಗಿ ಬಿಟ್ಟುಕೊಡುವವರಲ್ಲ. ಕಾರಣ, ಉದ್ದೇಶ ಮೊದಲಾದವುಗಳನ್ನೆಲ್ಲ ತಿಳಿದುಕೊಂಡು ತಮ್ಮ ಮನಸ್ಸಿಗೆ ಸರಿ ಎನಿಸಿದಾಗ ಮಾತ್ರ ಆ ಗೀತೆಗಳನ್ನು ಹೊರಹಾಕಲು ಅಡಿ ಇಡುತ್ತಾರೆ. ಇಲ್ಲದಿದ್ದಲ್ಲಿ ಹಲವು ನೆಪಗಳ ಮೂಲಕ ನಮ್ಮನ್ನು ಬರಿ ಗೈಲಿ ಕಳುಹಿಸುತ್ತಾರೆ. ಈ ದೃಷ್ಟಿಯಿಂದ ಗಮನಿಸಿದಾಗ 'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಚಾರವು ಪ್ರಮುಖವಾಗಿದ್ದು, ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳನ್ನು ಅಭ್ಯಸಿಸುವುದಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ದಿನ ನಿತ್ಯ ಜರುಗುವ ಮದುವೆ, ಜೋಗುಳ, ಭಜನೆ, ಪೂಜೆಯ ಕಾರ್ಯಕ್ರಮಗಳಲ್ಲಿ ವಿಶೇಷವಾಗಿ ಈ ಭಾಗದ ಸಂಸ್ಕೃತಿ, ಇಲ್ಲಿನ ಜನರ ಜೀವನ ವಿಧಾನಗಳನ್ನು ಕಾಣುತ್ತೇವೆ. ಚನ್ನರಾಯಪಟ್ಟಣವು ಹಾಸನ ಜಿಲ್ಲೆಯ ಬಹು ಮುಖ್ಯವಾದ ಕೇಂದ್ರ ಭಾಗವಾಗಿದೆ. ಈಗಾಗಲೇ ಚನ್ನರಾಯಪಟ್ಟಣ ತಾಲ್ಲೂಕನ್ನು ಕುರಿತು ಸಾಹಿತ್ಯಿಕವಾಗಿ ಅನೇಕ ಅಧ್ಯಯನಗಳು ನಡೆದಿವೆ. ಆದರೂ ಇಲ್ಲಿನ ಜನಪದ ಗೀತೆಗಳನ್ನು ಕುರಿತ ಸಮಗ್ರ ಅಧ್ಯಯನಗಳು ವಿರಳ. ಅವುಗಳನ್ನು ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸುವ ಕೆಲಸಗಳು ನಡೆಯಬೇಕು. ಈ ಹಿನ್ನೆಲೆಯಲ್ಲಿ ಈ ಅಧ್ಯಯನವು ಸೂಕ್ತವಾಗಿ, ಕ್ರಮಬದ್ಧವಾಗಿ ಸಾಗಬೇಕಾಗಿರುವುದು ಮುಖ್ಯವಾದುದು. ಈ ಉದ್ದೇಶವನ್ನಿಟ್ಟುಕೊಂಡು ಇಲ್ಲಿನ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಭಾರತದಂತೆಯೇ ಕರ್ನಾಟಕದ ಈ ನೆಲವು ತನ್ನ ಸಾವಿರಾರು ವರ್ಷಗಳ ಚರಿತ್ರೆಯ ಹಾದಿಯಲ್ಲಿ ಹಲವು ಜನಾಂಗ, ಸಂಸ್ಕೃತಿ, ಧರ್ಮ, ಪಂಥಗಳ ಉಗಮಕ್ಕೆ ಕಾರಣವಾಗಿದೆ. ಈ ಸಮಯದಲ್ಲಿ ಸಂಘರ್ಷ ಹಾಗೂ ಪತನಗಳು ಇಲ್ಲದಿಲ್ಲ. ಇಂತಹ ಸಂಘರ್ಷ, ಹೊಸ ಉದಯಗಳ ಪ್ರಕ್ರಿಯೆಯಲ್ಲಿ ಹೊಸ ಮಾರ್ಗಗಳನ್ನು ಹುಡುಕಿಕೊಳ್ಳುತ್ತ, ಅವುಗಳನ್ನು ಒಪ್ಪಿಕೊಳ್ಳುತ್ತ ಸಾಗಿರುವುದು ಕಂಡುಬರುತ್ತದೆ. ಈ ಎಲ್ಲಾ ಅಂಶಗಳು ಇಲ್ಲಿನ ಜಾನಪದ ಸಾಹಿತ್ಯದ ಮೇಲೆ ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪ್ರಭಾವಗಳನ್ನು ಬೀರಿವೆ. ಇಂತಹ ಸಾಂಸ್ಕೃತಿಕ ಸಂದರ್ಭಗಳ ಅಧ್ಯಯನಕ್ಕೆ ಜನಪದ ಗೀತೆಗಳು ಹುಲುಸಾದ ಕ್ಷೇತ್ರವಾಗಿವೆ.

ಚನ್ನರಾಯಪಟ್ಟಣವು ಹಾಸನ ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದು. ಇಲ್ಲಿ ಹಿಂದೂ ಧರ್ಮ, ಜೈನ ಧರ್ಮಗಳೆರಡೂ ಇಲ್ಲಿನ ಸಾಹಿತ್ಯ, ಸಂಸ್ಕೃತಿ, ಜನಜೀವನದ ಮೇಲೆ ಪ್ರಭಾವ ಬೀರಿವೆ. ಈ ಪ್ರದೇಶವು ಹೆಬ್ಬಾರ್ ಅರಸರು, ಹೊಯ್ಸಳರು, ಹೊಯ್ಸಳ ಅರಸರ ಸಾಮಂತರೂ,

ಮೈಸೂರು ಒಡೆಯರೂ, ಕಾನಕಾನಹಳ್ಳಿಯ ಪ್ರಭುಗಳ ಆಳ್ವಿಕೆಗೆ ಒಳಪಟ್ಟಿತ್ತು. ಈ ರೀತಿಯಾಗಿ ಇವರೆಲ್ಲರ ಆಳ್ವಿಕೆಗೆ ಒಳಪಟ್ಟು ಆರ್ಥಿಕವಾಗಿ, ಧಾರ್ಮಿಕವಾಗಿ ಅಭಿವೃದ್ಧಿಗೊಳ್ಳುತ್ತ, ಕೆರೆ, ಕಾಲುವೆಗಳು, ದೇವಸ್ಥಾನ, ಮಠಮಾನ್ಯಗಳ ಮೂಲಕ ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಂಡಿದೆ. ಇದರ ಜೊತೆಗೆ ಸಾಹಿತ್ಯ, ಕಲೆ, ವಾಸ್ತುಶಿಲ್ಪದಲ್ಲಿಯೂ ತನ್ನದೇ ಆದ ಸ್ಥಾನವನ್ನು ಪಡೆದಿದೆ. ಇಂತಹ ಪರಿಸರವು ಜಾನಪದ ಸಾಹಿತ್ಯವನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡಿದ್ದು, ಆ ಮೂಲಕ ಇಲ್ಲಿನ ಪ್ರದೇಶದ ಜನಜೀವನವನ್ನು ನಮಗೆ ದರ್ಶಿಸುತ್ತಿದೆ. ಈ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಈ ಅಧ್ಯಯನದ ವ್ಯಾಪ್ತಿಯು ಚನ್ನರಾಯಪಟ್ಟಣ ತಾಲ್ಲೂಕನ್ನು ಒಳಗೊಂಡಿರುತ್ತದೆ.

೧.೪. ಅಧ್ಯಯನದ ಸ್ವರೂಪ

'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' (ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ. ಪ್ರಸ್ತುತ ವಿಷಯಕ್ಕೆ ಪೂರಕವಾದ ನೆಲೆಯಲ್ಲಿ ಇದರ ಸ್ವರೂಪವನ್ನು ಎಂಟು ಅಧ್ಯಾಯಗಳಲ್ಲಿ ನಿಗದಿಪಡಿಸಿಕೊಳ್ಳಲಾಗಿದೆ. ಹೀಗಾಗಿ ಈ ಅಧ್ಯಯನದ ಸ್ವರೂಪ ಈ ಮುಂದಿನಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಅಧ್ಯಯನದ ವಿಧಾನಗಳು ಹಾಗೂ ಇದುವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ಅಧ್ಯಯನಕ್ಕೆ ಸಂಬಂಧಿಸಿದ ವಿವರಣೆ ಇದೆ. ಹಾಗೂ ಈ ಅಧ್ಯಯನದ ಹಿಂದಿನ ಒತ್ತಡಗಳನ್ನು ಸಮಕಾಲೀನ ನೆಲೆಯಲ್ಲಿ ಪರಿಚಯಿಸಲಾಗಿದೆ. ಜೊತೆಗೆ ಇದರ ವ್ಯಾಪ್ತಿಯನ್ನು ಸಹ ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯವಾದ 'ಚನ್ನರಾಯಪಟ್ಟಣ ತಾಲ್ಲೂಕಿನ ಭೌಗೋಳಿಕ ಇತಿಹಾಸದ ಅವಲೋಕನ' ಎಂಬ ಅಧ್ಯಾಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಾದೇಶಿಕತೆಯನ್ನು ಪರಿಚಯಿಸಲಾಗಿದೆ. ಇದರಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಭೌಗೋಳಿಕ ನೆಲೆ, ಚಾರಿತ್ರಿಕ ಚಹರೆ, ಸಾಮಾಜಿಕ ಬದುಕು, ಸಾಂಸ್ಕೃತಿಕ ಅನನ್ಯತೆ, ಧಾರ್ಮಿಕತೆ ಮೊದಲಾದವು ಸೇರ್ಪಡೆಗೊಂಡಿವೆ.

ಮೂರನೆಯ ಅಧ್ಯಾಯವಾದ 'ಜನಪದ ಗೀತೆಗಳ ಮೌಖಿಕ ಪರಂಪರೆ' ಎಂಬ ಅಧ್ಯಾಯದ ಅಡಿಯಲ್ಲಿ ಮೌಖಿಕ ಪರಂಪರೆಯಲ್ಲಿ ಜನಪದ ಗೀತೆಗಳು ಬೆಳೆದು ಬಂದಿರುವ ಬಗೆಯನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಜನಪದ ಗೀತೆಗಳ ರಚನೆ, ಶೈಲಿ, ಅವುಗಳ ಮೌಲ್ಯ, ಸ್ವರೂಪ ಹಾಗೂ ರಮ್ಯತೆಯ ವಿಚಾರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯವಾದ 'ವಾರ್ಷಿಕಾವರ್ತನದ ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಲೋಕಾನುಸಂಧಾನ' ಎಂಬ ಅಧ್ಯಾಯದಲ್ಲಿ ೧. ಮದುವೆ ಹಾಡುಗಳು, ೨. ಮೈನೆರೆದ ಹಾಡುಗಳು,

೩. ಜೋಗುಳ ಹಾಡುಗಳು, ೪. ಸೋಬಾನ ಹಾಡುಗಳು, ೫. ಶಿಶು ಗೀತೆಗಳು, ೬. ಸಾವಿನ ಹಾಡುಗಳು, ೭. ಹಾಸ್ಯ ಮತ್ತು ವಿಡಂಬನಾ ಜನಪದ ಗೀತೆಗಳು, ೮. ಕೌಟುಂಬಿಕ ಜೀವನದ ಗೀತೆಗಳು, ೯. ಆರತಿ ಹಾಡುಗಳು, ೧೦. ಕೋಲಾಟದ ಹಾಡುಗಳು ಎಂದು ವಿಂಗಡಿಸಿಕೊಳ್ಳಲಾಗಿದೆ.

ಐದನೆಯ ಅಧ್ಯಾಯವಾದ 'ಕ್ರಿಯಾವರ್ತನ ಜನಪದ ಗೀತೆಗಳ ಸಾಂಸ್ಕೃತಿಕ ಅನನ್ಯತೆ' ಎಂಬ ಅಧ್ಯಾಯದಲ್ಲಿ ಕ್ರಿಯಾವರ್ತನದ ಜನಪದ ಹಾಡುಗಳಾದ ೧. ಒಕ್ಕಲುತನದ ಹಾಡುಗಳು, ೨. ಬೀಸುವ ಹಾಡುಗಳು, ೩. ಕುಟ್ಟುವ ಹಾಡುಗಳು, ೪. ಒಗಟಿನ ಹಾಡುಗಳು, ೫. ಪೌರಾಣಿಕ ಹಾಡುಗಳು ಎಂಬುದಾಗಿ ವರ್ಗೀಕರಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಆರನೆಯ ಅಧ್ಯಾಯವಾದ 'ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಸಂವೇದನೆಗಳು' ಎಂಬುದರಲ್ಲಿ ೧. ಜನಪದ ಗೀತೆಗಳು ಮತ್ತು ರಾಷ್ಟ್ರೀಯತೆಯ ಪ್ರಜ್ಞೆ ೨. ನೀತಿ, ಮಾನವತೆಯ ಮೌಲ್ಯಗಳು ಹಾಗೂ ಸಂಬಂಧಗಳು, ೩. ಸಮಾನತೆ ಮತ್ತು ವೈಚಾರಿಕತೆಯ ವಿವೇಚನೆ, ೪. ಪಶು, ಪಕ್ಷಿ, ಪ್ರಾಣಿಗಳ ಜೀವನ ಪ್ರೀತಿ, ೫. ಜನಪದ ಗೀತೆಗಳು ಮತ್ತು ಜನಪದರ ಅವಿನಾಭಾವ ಸಂಬಂಧ ಎಂಬವುಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಏಳನೆಯ ಅಧ್ಯಾಯವಾದ 'ಜನಪದ ಗೀತೆಗಳಲ್ಲಿ ಮಹಿಳಾ ಪ್ರತಿನಿಧೀಕರಣ' ಎಂಬುದರಲ್ಲಿ ಜನಪದ ಗೀತೆಗಳಲ್ಲಿ ವ್ಯಕ್ತವಾಗಿರುವ ಮಹಿಳೆಯರ ವಿವಿಧ ರೀತಿಯ ಪ್ರತಿಭಟನಾತ್ಮಕ ಅಂಶಗಳನ್ನು, ಮಹಿಳೆಯರ ಪಾಲ್ಗೊಳ್ಳುವಿಕೆ, ಕೃಷಿ ಹಾಗೂ ಸಾಂಸಾರಿಕ ಬದುಕು ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯ ಪ್ರತಿನಿಧೀಕರಣಗಳನ್ನು ವಿಶ್ಲೇಷಣೆಗೆ ಒಳಗು ಮಾಡಲಾಗಿದೆ.

ಎಂಟನೆಯ ಅಧ್ಯಾಯವಾದ 'ಜನಪದ ಗೀತೆಗಳು ಮತ್ತು ಆಧುನಿಕತೆಯ ಮುಖಾಮುಖಿ' ಎಂಬ ಅಧ್ಯಾಯದಲ್ಲಿ ಆಧುನಿಕತೆಯೊಂದಿಗೆ ಜನಪದ ಗೀತೆಗಳು ಯಾವ ರೀತಿಯಾಗಿ ಅನುಸಂಧಾನ ಕ್ರಿಯೆಗೆ ಒಳಗಾಗಿವೆ ಹಾಗೂ ಮುಖಾಮುಖಿಯಾಗುತ್ತಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಜೊತೆಗೆ ಆಧುನಿಕತೆಗೆ ಸಿಲುಕಿ ನಾಶವಾಗುತ್ತ ಯಾವ ರೀತಿಯ ಪಲ್ಲಟಗಳನ್ನು ಅನುಭವಿಸುತ್ತಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

'ಸಮಾರೋಪ'ದಲ್ಲಿ ಅಧ್ಯಯನದ ಫಲಿತಗಳು, ಪರಾಮರ್ಶನ ಗ್ರಂಥಗಳು, ವಕ್ತೃವಿವರ, ಛಾಯಾಚಿತ್ರಗಳು ಹಾಗೂ ಭೂಪಟದ ವಿವರಗಳನ್ನು ನೀಡಲಾಗಿದೆ. ಇದಿಷ್ಟು ಪ್ರಸ್ತುತ ಅಧ್ಯಯನದ ಸ್ವರೂಪವಾಗಿದೆ. ಇದರ ಅಡಿಯಲ್ಲಿ ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೫. ಅಧ್ಯಯನದ ವಿಧಿ ವಿಧಾನಗಳು

'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' (ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು, ಪ್ರಸ್ತುತ ಸಂಶೋಧನಾ ಮಹಾ ಪ್ರಬಂಧದ ಅಧ್ಯಯನದ ವೈಧಾನಿಕತೆ ಅಥವಾ ವಿಧಾನಗಳು ಈ ರೀತಿಯಾಗಿವೆ.

ಪ್ರಸ್ತುತ ಅಧ್ಯಯನಕ್ಕೆ ಪ್ರಮುಖವಾಗಿ ವಿಮರ್ಶಾತ್ಮಕ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಅಧ್ಯಯನದ ವಿಷಯವು ಮೌಖಿಕ ನೆಲೆಯದ್ದಾಗಿರುವ ಕಾರಣವಾಗಿ ಚಾರಿತ್ರಿಕ ಭೌಗೋಳಿಕ ವಿಧಾನವನ್ನು ಅನುಸರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅಧ್ಯಯನಗಳನ್ನು ವಿಂಗಡಿಸಿಕೊಂಡು ಪ್ರಾದೇಶಿಕ ನೆಲೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವುದಾಗಿದೆ.

ಕ್ಷೇತ್ರಕಾರ್ಯ ವಿಧಾನದ ಮೂಲಕವಾಗಿ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳನ್ನು ಸಂಗ್ರಹಿಸಲಾಗಿದ್ದು, ಅವುಗಳನ್ನು ವಿಶ್ಲೇಷಿಸುವ ಮೂಲಕವಾಗಿ ಸಂಶೋಧನೆಯನ್ನು ಮುಂದುವರೆಸಲಾಗಿದೆ. ಇದಕ್ಕಾಗಿ ವಿಶ್ಲೇಷಣಾ ವಿಧಾನವನ್ನು ಅನುಸರಿಸಲಾಗಿದೆ.

ಜನಪದ ಗೀತೆಗಳನ್ನು ಕುರಿತ ಅಧ್ಯಯನವನ್ನು ನಡೆಸಿರುವ ವಿದ್ವಾಂಸರು ಜನಪದ ಗೀತೆಗಳ ಬಗ್ಗೆ ತಾಳಿರುವ ತಾತ್ತ್ವಿಕ ನಿಲುವುಗಳನ್ನು ಗುರುತಿಸಲು ದೇಶೀಯ ಅಧ್ಯಯನ ವಿಧಾನವನ್ನು ಬಳಸಿಕೊಳ್ಳಲಾಗಿದೆ.

ಪ್ರಸ್ತುತ ಸಂಶೋಧನಾ ವಿಷಯದ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಳ್ಳಲು ಕುಟ್ಟುವುದು, ನಾಟಿ, ಕೂರಿಗೆ ಹೊಡೆಯುವುದು, ಹಬ್ಬ, ಹರಿದಿನ, ಉತ್ಸವ, ಮೆರವಣಿಗೆ, ಆಚರಣೆಗಳಂತಹ ವಿಶೇಷ ಸಾಂಸ್ಕೃತಿಕ ಸಂದರ್ಭದ ದಿನಗಳನ್ನು ಆಯ್ಕೆ ಮಾಡಿಕೊಂಡು ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕಾರಣ ಈ ರೀತಿಯ ವಿಶೇಷ ದಿನಗಳಲ್ಲಿ ಜನಪದ ಗೀತೆಗಳನ್ನು ಹಾಡುವುದು ಕಂಡುಬರುತ್ತದೆ.

ಜನಪದ ಗೀತೆಗಳ ಅಧ್ಯಯನವು ಇತರ ಪ್ರಕಾರಗಳೊಡನೆ ಹೊಂದಿರುವ ಸಂಬಂಧಗಳ ಹಿನ್ನೆಲೆಯಲ್ಲಿ ಸಂದರ್ಭಕ್ಕನುಸಾರವಾಗಿ ಅಂತರ್‌ಶಿಸ್ತೀಯ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಸಂಗ್ರಹಿಸುವ ಉದ್ದೇಶದಿಂದಾಗಿ ಜಾನಪದ ಗೀತೆಗಳನ್ನು ಹಾಡುವ ಜನಪದ ಕಲಾವಿದರು ಹಾಗೂ ವಕ್ತೃಗಳೊಂದಿಗೆ ಸಂದರ್ಶನ ಮತ್ತು ಸಂವಾದಗಳನ್ನು ನಡೆಸಲಾಗಿದೆ. ಈ ಮೂಲಕ ಸಂಶೋಧನೆಗೆ ಪೂರಕವಾದ ಅಗತ್ಯ ಅಂಶಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಿರುವ ಮಾಹಿತಿಯನ್ನು ಆಧಾರವಾಗಿರಿಸಿಕೊಂಡು ವಿಶ್ಲೇಷಣೆ ಮತ್ತು ವ್ಯಾಖ್ಯಾನಾತ್ಮಕ ನೆಲೆಯಲ್ಲಿ ಪ್ರಸ್ತುತ ಸಂಶೋಧನೆಯನ್ನು ಮುಂದುವರಿಸಲಾಗಿದೆ. ಜೊತೆಗೆ ಪ್ರದರ್ಶನ ಸಿದ್ಧಾಂತ, ಪ್ರಶ್ನಾವಳಿ ವಿಧಾನ, ಪುರಾಣ ಮೂಲ ಸಿದ್ಧಾಂತ ಹಾಗೂ ರಾಷ್ಟ್ರೀಯವಾದಿ ಸಿದ್ಧಾಂತಗಳನ್ನು ಸಹ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಅಧ್ಯಯನವನ್ನು ಮಾಡಲು ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇದುವರೆಗೂ ಪ್ರಕಟವಾಗಿರುವ ಕೃತಿಗಳು, ಸಂಶೋಧನಾ ಮಹಾಪ್ರಬಂಧಗಳನ್ನು ಹಾಗೂ ಲೇಖನಗಳನ್ನು ಪೂರಕವಾಗಿ ಬಳಸಿಕೊಂಡು ಚರ್ಚೆ ಹಾಗೂ ಸಂವಾದವನ್ನು ನಡೆಸಲಾಗಿದೆ. ಇದು ಕೂಡ ಅಧ್ಯಯನದ ವೈಧಾನಿಕತೆಯಾಗಿದೆ.

೧.೬. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಇಂದು ಹಲವಾರು ಅಧ್ಯಯನಗಳು ನಡೆದಿವೆ. ಇದರಲ್ಲಿ ಹಲವಾರು ಸಂಶೋಧಕರು, ವಿದ್ವಾಂಸರು ಹಾಗೂ ಪಾಶ್ಚಿಮಾತ್ಯ ವಿದ್ವಾಂಸರ ಕೊಡುಗೆಯೂ ಸೇರಿದೆ. ಇದರ ಫಲವಾಗಿ ಇಂದು ನಮ್ಮ ಮುಂದೆ ಅನೇಕ ಸಾಹಿತ್ಯಿಕ ಆಕರಗಳು ಇವೆ. ಕನ್ನಡ ಜಾನಪದ ಗೀತ ಪ್ರಕಾರವನ್ನು ಕುರಿತು ಬಂದಿರುವ ಅಧ್ಯಯನಗಳನ್ನು ಈ ಮುಂದಿನಂತೆ ಅವಲೋಕಿಸಬಹುದು.

ಪಿಎಚ್.ಡಿ. ಸಂಶೋಧನಾ ಪ್ರಬಂಧಗಳು

ಬಿ.ಎಸ್.ಗದ್ದಿಗೀಮಠ ಅವರ ಸಂಶೋಧನಾ ಮಹಾಪ್ರಬಂಧ 'ಕನ್ನಡ ಜಾನಪದ ಗೀತಗಳು'. ಇದು ಕರ್ನಾಟಕ ವಿಶ್ವವಿದ್ಯಾಲಯವು ೧೯೫೫ ರಲ್ಲಿ ಪಿಎಚ್.ಡಿ ಪದವಿಗಾಗಿ ಮಾನ್ಯ ಮಾಡಿದ ಪ್ರಬಂಧವಾಗಿದೆ. ಕನ್ನಡ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆದ ಮೊದಲ ಪಿಎಚ್.ಡಿ ಸಂಶೋಧನಾ ಪ್ರಬಂಧ ಎಂಬ ವಿಶೇಷತೆಯೂ ಈ ಪ್ರಬಂಧಕ್ಕಿದೆ. ಪ್ರಸ್ತುತ ಪ್ರಬಂಧವು ಹದಿಮೂರು ಅಧ್ಯಾಯಗಳು ಹಾಗೂ ಅನುಬಂಧವನ್ನು ಒಳಗೊಂಡಿದೆ. ಇದರಲ್ಲಿ ಉತ್ತರ ಕರ್ನಾಟಕದ ಜನ ಜೀವನಕ್ಕೆ ಸಂಬಂಧಿಸಿದಂತೆ ಅಲ್ಲಿನ ಜನಪದ ಗೀತೆಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿರುವ ಜಾನಪದ ಹಾಡುಗಳನ್ನು ಅವರು ಮರೇಗುದ್ದಿ (ಜಮಖಂಡಿ), ಗಲಗಲಿ, ನಾಗರಾಳ, ಹಲಗಲಿ, ಬಾಗಲಕೋಟೆ, ಸಂಗಮ, ತಾಳಿಕೋಟೆ, ಮಮದಾಪುರ, ಬಬಲೇಶ್ವರ, ಕೆರೂರು, ನರಗುಂದ, ನವಲಗುಂದ, ಕೆಲವಡಿ, ಬದಾಮಿ, ಜಾಲೀಹಾಳ, ನರೇಗಲ್ಲು, ಮುಳುಗುಂದ, ತೊರಗಲ್ಲು, ಕಡಕೋಳ, ಮುರಗೋಡ, ಬೈಲಹೊಂಗಲ, ವಡಗಾವಿ (ಬೆಳಗಾವಿ) ಗೋಕಾವಿ, ಧಾರವಾಡ, ಹುಬ್ಬಳ್ಳಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿಯ ಹೆಣ್ಣು ಮಕ್ಕಳು ಹಾಡುವುದನ್ನು ಕೇಳಿಕೊಂಡು ಸಂಕಲಿಸಿರುವುದಾಗಿ ನಿಬಂಧಕಾರರು ಹೇಳಿಕೊಂಡಿದ್ದಾರೆ. ಜನಪದ ಗೀತೆಗಳ ಅಧ್ಯಯನದ ಸಂದರ್ಭದಲ್ಲಿ ಈ ಪ್ರಬಂಧಕ್ಕೆ ವಿಶೇಷವಾದ ಸ್ಥಾನವಿದೆ. ಅಲ್ಲದೆ ದೀರ್ಘವಾದ ಹಾಡುಗಳ ಸಂಗ್ರಹದ ಕೊರತೆಯನ್ನು ನೀಗಿಸುವ ಪ್ರಯತ್ನವನ್ನು ಸಹ ಮಾಡಲಾಗಿದೆ ಎಂದು ಹೇಳಿಕೊಂಡಿದ್ದಾರೆ.

ನಂ.ತಪಸ್ವಿಕುಮಾರ್ ಅವರ ಸಂಶೋಧನಾ ಮಹಾಪ್ರಬಂಧ 'ಕನ್ನಡ ಜಾನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ'. ಪ್ರಸ್ತುತ ಕೃತಿಯು ಕನ್ನಡ ಜನಪದ ಗೀತೆಗಳ ಆಧಾರದ ಹಿನ್ನೆಲೆಯಲ್ಲಿ ಕನ್ನಡ ಜನಪದ ಸಂಸ್ಕೃತಿಯ ಸ್ವರೂಪವನ್ನು ಅರಿತುಕೊಳ್ಳುವ ಮುಖ್ಯ ಉದ್ದೇಶವನ್ನು ಹೊಂದಿದೆ. ಜೊತೆಗೆ ಜನತೆಯಲ್ಲಿ ಕಾಲ ಕಾಲಕ್ಕೆ ಆಗಿರುವ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಸ್ಥೂಲವಾಗಿ ಸಮೀಕ್ಷಿಸುವ ಪ್ರಯತ್ನ ಸಹ ಇಲ್ಲಿದೆ. ಈ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯದ ಸ್ವರೂಪ, ಜನಪದರ ನಿತ್ಯ ಜೀವನ ಕ್ರಮ, ಅವರ ಕೌಟುಂಬಿಕ ಬದುಕು, ರಸಿಕತೆ, ವೀರಜೀವನ, ಹಬ್ಬ ಹರಿದಿನ, ಸಂಸ್ಕೃತಿಯ ಗೊತ್ತು ಗುರಿಗಳು, ಜನಪದ ಕಲೆಗಳು ಮೊದಲಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ವಸಂತಮಾಲಾ ರಾ. ಅರಗಂಜಿ ಅವರ ಸಂಶೋಧನಾ ಪ್ರಬಂಧ 'ಜನಪದ ಪದ್ಯ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ'. ಪ್ರಸ್ತುತ ಕೃತಿಯು ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ ಉತ್ತರ ಕರ್ನಾಟಕದ ಕುಟ್ಟುವ, ಬೀಸುವ, ಲಾವಣಿ, ಕೋಲಾಟ, ಸೋಬಾನ ಪದ, ದೊಡ್ಡಾಟದ ಪದಗಳು, ಸಣ್ಣಾಟದ ಪದಗಳು, ತ್ರಿಪದಿ, ಖಂಡಕಾವ್ಯಗಳು ಮುಂತಾದವುಗಳನ್ನು ಪ್ರಸ್ತುತ ಅಧ್ಯಯನಕ್ಕೆ ಅಳವಡಿಸಿಕೊಂಡಿದ್ದಾರೆ. ಜೊತೆಗೆ ಅಲ್ಲಿ ವ್ಯಕ್ತವಾಗಿರುವ ಸ್ತ್ರೀಯ ವಿಭಿನ್ನ ಸಂವೇದನೆಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ದೇವೇಂದ್ರಕುಮಾರ ಸಿ. ಹಕಾರಿಯವರ ಸಂಶೋಧನಾ ಮಹಾಪ್ರಬಂಧ 'ಜಾನಪದ : ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ'. ಪ್ರಸ್ತುತ ಪ್ರಬಂಧವು ಸಾಂಸ್ಕೃತಿಕ ಅಧ್ಯಯನವಾಗಿದೆ. ಕೃತಿಯಲ್ಲಿ ಜನಪದ ಗೀತೆಗಳ ಲಕ್ಷಣಗಳು, ಸೃಷ್ಟಿ ಕ್ರಿಯೆ, ಹಂತಿಯ ಹಾಡು, ಜೋಗುಳದ ಹಾಡು ಇವುಗಳ ಕ್ರಿಯಾರೂಪಗಳನ್ನು ರೇಖಾಚಿತ್ರಗಳೊಂದಿಗೆ ವಿವರಿಸಿದ್ದಾರೆ. ಇಲ್ಲಿ ಈರೋಬಿ, ಕೆರೆಗೆ ಹಾರ, ಉತ್ತರದೇವಿ, ಸಿರಿ ಕವಲಿ, ಹಲಗಲಿ ಬೇಡರು, ಗ್ವಾರಲಣ್ಣನ ವೀರಗಾಥಾ ಮೊದಲಾದ ಹನ್ನೊಂದು ಕಥನ ಗೀತೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಧ್ಯಯನದ ಅನುಕೂಲತೆಗಾಗಿ ೧. ವಸ್ತು, ಶೈಲಿ, ಕಲಾತ್ಮಕತೆ, ಭಾವ ಸೌಂದರ್ಯ, ೨. ಸಾಮಾಜಿಕ ಬದ್ಧತೆ ಮತ್ತು ೩. ಮೌಲ್ಯಗಳು, ಸ್ಥಿರ ಪರಿವರ್ತನ ಗುಣಗಳ ವಿಶ್ಲೇಷಣೆ ಎಂಬ ಮೂರು ಹಂತಗಳನ್ನು ಮಾಡಿಕೊಂಡಿದ್ದಾರೆ.

ಎನ್.ಆರ್.ನಾಯಕ ಅವರ ಸಂಶೋಧನಾ ಪ್ರಬಂಧ 'ಕಾರವಾರ ಜಿಲ್ಲೆಯ ಜನಪದ ಗೀತೆಗಳು'. ಪ್ರಸ್ತುತ ಕೃತಿಯು ಜನಪದ ಗೀತೆಗಳಲ್ಲಿ ಅಭಿವ್ಯಕ್ತವಾದ ಕಾರವಾರ ಜಿಲ್ಲೆಯ ಜನತೆಯ ಸಂಸ್ಕೃತಿ ಮತ್ತು ರೂಢಿ, ನಂಬಿಕೆ, ಸಂಪ್ರದಾಯಗಳನ್ನು ಪರಿಶೀಲಿಸಿ ಗೀತೆಗಳ ಸಾಹಿತ್ಯಿಕ ಮೌಲ್ಯವನ್ನು ನಿರ್ಣಯಿಸುವ ಉದ್ದೇಶ ಹೊಂದಿದೆ. ಈ ಪ್ರಬಂಧದಲ್ಲಿನ 'ಕೌಟುಂಬಿಕ ಹಾಗೂ ಲೋಕ ನೀತಿಯ ಗೀತೆಗಳು' ಎಂಬ ಮೂರನೇ ಅಧ್ಯಾಯ ಪ್ರಮುಖವಾಗಿದೆ. ಇದರಲ್ಲಿ "ನಿತ್ಯ ಬದುಕಿನ ನೋವು ನಲಿವು, ರಾಗ ದ್ವೇಷ, ಭಯ, ಉತ್ಸಾಹ, ರುದ್ರ-ರಮಣೀಯತೆಗಳನ್ನು ಜಾನಪದರು ತ್ರಿಪದಿಗಳಲ್ಲಿ ಬಣ್ಣಿಸಿದ್ದಾರೆ. ಭಿನ್ನ ಸಮಯ ಸನ್ನಿವೇಶಗಳಲ್ಲಿ ಪುಟಿದೆದ್ದ ಈ ತ್ರಿಪದಿಗಳಲ್ಲಿ ಭಾವಗೀತೆಯ ಸತ್ವವಿದೆ. ಜನಜೀವನದ ಕುಲುಮೆಯಲ್ಲಿ ಬೆಂದು, ಅಪರಂಜಿಯಾಗಿ ಹೊರಬಂದ ಈ ಗೀತೆಗಳಲ್ಲಿ ಕೌಟುಂಬಿಕ ಜೀವನದ ನೈಜ ಚಿತ್ರಗಳು ಪ್ರಕೀರ್ಣಗೊಂಡು ನಿಂತಂತೆ, ಅಭಿಜಾತ ಕಾವ್ಯಗಳಲ್ಲಿ ನಿಂತಿಲ್ಲ. ಈ ಭಾವಗೀತಾತ್ಮಕ ತ್ರಿಪದಿಗಳು ಜನಜೀವನದ ಹಂದರದ ಮೇಲೆ ಹಬ್ಬಿ ಹಸುರಿಸಿದ, ಜನಪದ ಸಾಹಿತ್ಯ ಬಳ್ಳಿಯ ಸೌಗಂಧ ಪುಷ್ಪಗಳು. ಹೆಚ್ಚಾಗಿ ಇವು ಹೆಂಗಳೆಯರ ಹೃದಯ ಗಹ್ವರಗಳಿಂದ ಉಗಮ ಪಡೆದುದರಿಂದಾಗಿ, ಹೆಣ್ಣು ತಾಯಾಗಿ, ಮಗಳಾಗಿ, ಹೆಂಡತಿಯಾಗಿ, ಅತ್ತೆ-ಸೊಸೆಯಾಗಿ ಜೀವನದಲ್ಲಿ ಪಟ್ಟ-ಪಾಡು ಹಾಡಾಗಿ ಹರಿದುದೇ ಹೆಚ್ಚು ಇಲ್ಲಿ"[೩] ಎಂಬ ಮಾತುಗಳು ಜನಪದ ಗೀತೆಗಳಲ್ಲಿ ಅಭಿವ್ಯಕ್ತವಾಗಿರುವ ಜನಪದ ಹಾಗೂ ಜನಪದ ಹೆಣ್ಣುಮಗಳ ಜೀವನವನ್ನು ನಮ್ಮ ಮುಂದಿಡುತ್ತವೆ.

ಅನಿತಾ ಭಂಡಾರೆ ಅವರ ಸಂಶೋಧನಾ ಮಹಾಪ್ರಬಂಧ 'ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು'. ಇಲ್ಲಿ ಭಾರತೀಯ ಪರಂಪರೆಯನ್ನು ರೂಢಿಸಿಕೊಂಡ ಹೆಣ್ಣು ತನ್ನ ಬದುಕಿನ ತುಂಬಲೂ ಅನುಭವಿಸಿದಂತಹ ಸುಖ ದುಃಖಗಳನ್ನು ಕುರಿತು ಚರ್ಚಿಸಿದ್ದಾರೆ. ಜನಪದ ಹೆಣ್ಣು ಮಕ್ಕಳು ತಮ್ಮ ಅನುಭವಗಳನ್ನು ಹಾಡುಗಳಾಗಿ ಹೊರ ಹೊಮ್ಮಿಸಿರುವುದು ಇಲ್ಲಿ ಕಂಡುಬರುತ್ತದೆ.

ಬಂದದ್ದು ಬರಲವ್ವ ಎದೆಗೊಟ್ಟು ನಿಲಬೇಕು
ಹೆದರಿದರೆ ಬೆನ್ನು ಬಿಡದವ್ವ । ನನ ಮಗಳ
ಒದಗಿದರೆ ದುಃಖ ಒಳನುಂಗ.

ಎಂಬ ಮಾತುಗಳು ಜೀವನದ ಸತ್ಯವನ್ನು ಮನಗಾಣಿಸುತ್ತವೆ. ಪ್ರಬಂಧದಲ್ಲಿನ 'ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮಹಿಳಾ ಸಂವೇದನೆಗಳು, ಎಂಬ ಮೂರನೆ ಅಧ್ಯಾಯವು ಜನಪದ ಹೆಣ್ಣು ಮಗಳು ತಾನು ಮಗಳಾಗಿ, ಸೊಸೆಯಾಗಿ ಜೀವನದಲ್ಲಿ ವಿವಿಧ ಪಾತ್ರವನ್ನು ವಹಿಸಿದ ಬದುಕಿನ ವಿವರಗಳನ್ನು ಸೋದಾಹರಣವಾಗಿ ವಿಶ್ಲೇಷಿಸಿದ್ದಾರೆ. "ಸಾಂಸಾರಿಕ ಜೀವನದ ಬಗ್ಗೆ ಹೇಳಬೇಕೆಂದರೆ ಜನಪದ ತ್ರಿಪದಿ ಸಾಹಿತ್ಯವನ್ನು ರಚಿಸಿದ ಕೀರ್ತಿ ಜನಪದ ಗರತಿಗೆ ಸಲ್ಲುತ್ತದೆ. ಹೊರ ಜಗತ್ತಿನ ಅರಿವು ಜನಪದ ಮಹಿಳೆಗೆ ಇಲ್ಲವಾದರೂ ಸಂಸಾರದಲ್ಲಿ ತನ್ನದೇ ಆದ ಶ್ರೇಷ್ಠ ಲೋಕವನ್ನು ಆಕೆ ಕಂಡುಕೊಂಡಿದ್ದಾಳೆ. ಜೀವನದಲ್ಲಿ ತಾನು ಅನುಭವಿಸಿದ ಕಷ್ಟ-ಕಾರ್ಪಣ್ಯಗಳನ್ನು ಕಂಡು ಕತ್ತಲೆ ಬೆಳಕನ್ನು ತನ್ನದೇ ಆದ ಸಾಹಿತ್ಯದ ಮುಖಾಂತರ ಹೇಳಿಕೊಂಡಿದ್ದಾಳೆ. ತಾನು ಜೀವನದಲ್ಲಿ ಜಿಗುಪ್ಸೆಗೊಂಡ ಕ್ಷಣಗಳನ್ನು ಅರಗಿಸಿಕೊಂಡ ನೋವಿನ ವಿರುದ್ಧದ ಆಕ್ರೋಶವನ್ನು ತನ್ನದೇ ಆದ ಸಾಹಿತ್ಯದ ಮುಖಾಂತರ ಹೊರಸೂಸಿದ್ದಾಳೆ. ಅವಳು ಹಾಡಿರುವ ಹಾಡಿನಲ್ಲಿ ತನ್ನ ಸಾಂಸಾರಿಕ ಜೀವನದ ಸ್ಪಷ್ಟ ಕಲ್ಪನೆಯಿದೆ. ಸಂಸಾರವೆಂಬ ರಂಗಮಂಟಪದಲ್ಲಿ ಅವಳು ಅಭಿನಯಿಸಿದ ಬೇರೆ ಬೇರೆ ಪಾತ್ರಗಳ ಚಿತ್ರಣ ಅವಳ ಗೀತೆಗಳಲ್ಲಿ ಸಲೀಸಾಗಿ ಹರಿದು ಬಂದಿದೆ"[೪] ಎಂಬ ಮಾತುಗಳು ಗಮನಿಸತಕ್ಕವು. ಈ ಅಭಿಪ್ರಾಯವು ಜನಪದ ಹೆಣ್ಣಿನ ಇಡೀ ಬದುಕಿನ ವಿವರಗಳನ್ನು ನಮ್ಮ ಕಣ್ಣು ಮುಂದೆ ತರುತ್ತದೆ.

ಡಾ.ಗಾಯತ್ರಿ ನಾವಡ ಅವರ ಸಂಶೋಧನಾ ಪ್ರಬಂಧ 'ಕರಾವಳಿ ಜಾನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು'. ಪ್ರಸ್ತುತ ಮಹಾಪ್ರಬಂಧದಲ್ಲಿ ಸ್ತ್ರೀವಾದಿ ನೆಲೆಯ ಹಿನ್ನೆಲೆಯಲ್ಲಿ ಕರಾವಳಿ ಜನಪದ ಸಾಹಿತ್ಯವನ್ನು ಕುರಿತು ಮೊಟ್ಟ ಮೊದಲ ಬಾರಿಗೆ ಸಂಶೋಧನಾತ್ಮಕ ಅಧ್ಯಯನವನ್ನು ಕೈಗೊಂಡಿದ್ದಾರೆ. ಇದು ಕರ್ನಾಟಕ ಜಾನಪದ ಕುರಿತ ಮೊದಲ ಸ್ತ್ರೀವಾದಿ ಸಂಶೋಧನಾ ವಿವೇಚನೆಯೂ ಆಗಿದೆ. ಸಂಶೋಧನಾ ಪ್ರಬಂಧದ ನಾಲ್ಕನೇ ಅಧ್ಯಾಯವಾದ 'ಮಾತೃರೂಪಿ ಸಂಸ್ಕೃತಿ ಮತ್ತು ಕರಾವಳಿ ಜನಪದ ಸಾಹಿತ್ಯ' ಎಂಬುದರ 'ಜನಪದ ಗೀತೆಗಳು' ಎಂಬ ಉಪ ಅಧ್ಯಾಯದಲ್ಲಿ ಹೆಣ್ಣಿನ ನೂರಾರು ಅನುಭವಗಳ ಅಭಿವ್ಯಕ್ತಿಯಾದ ಜನಪದ ಗೀತೆಗಳನ್ನು ಕುರಿತು ಚರ್ಚಿಸಿದ್ದಾರೆ. ಜನಪದ ಗೀತೆಗಳು ಆಕೆಯ ದೈನಂದಿನ ಬದುಕಿನಲ್ಲಿ ಎದುರಾಗುವ ಇಕ್ಕಟ್ಟು,

ಸಂಕಟ, ಸಂಘರ್ಷಗಳಿಗೆ ಆಕೆ ನೀಡಿದ ಪ್ರತಿಕ್ರಿಯೆಯ ಅಂಶಗಳನ್ನು ಇಲ್ಲಿ ಗುರ್ತಿಸುವ ಪ್ರಯತ್ನ ಮಾಡಿದ್ದಾರೆ. ಇವು ಆಕೆಯ ಒಡಲ ಅನುಭವಕ್ಕೆ ಜೀವಕೊಟ್ಟ ಹೊಸ ಚೈತನ್ಯಗಳಾಗಿದ್ದು ಜೀವನದ ಸತ್ಯವನ್ನು ನಮಗೆ ತಿಳಿಸಿಕೊಡುವ ಕಾರಣವಾಗಿ ಬಹಳ ಮುಖ್ಯವಾಗುತ್ತವೆ.

ಕೃತಿಗಳು

ರಾಜಪ್ಪ ಟಿ.ಎಸ್. ಅವರ ಕೃತಿ 'ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು'. ಪ್ರಸ್ತುತ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳನ್ನು ಸಂಗ್ರಹಿಸಲಾಗಿದೆ. ಇಲ್ಲಿ ಈ ಭಾಗದ ಸ್ತುತಿ ಗೀತೆಗಳು, ಬಾಂಧವ್ಯ ಗೀತೆಗಳು, ಶಿಶುಪ್ರಾಸಗಳು ಹಾಗೂ ಕಥನ ಗೀತೆಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಇಲ್ಲಿನ ಕಥನ ಗೀತೆಗಳು ಸಾಮಾಜಿಕ ಹಿನ್ನೆಲೆಯಲ್ಲಿ ಮೂಡಿಬಂದವುಗಳಾಗಿದ್ದು, ಸ್ತ್ರೀಲೋಕದ ವಿವಿಧ ಹೋರಾಟದ ಚಿತ್ರಗಳನ್ನು ವಿಶಿಷ್ಟ ರೀತಿಯಲ್ಲಿ ಬಣ್ಣಿಸುತ್ತವೆ. "ನಮ್ಮ ಜನಪದರ ಪ್ರಾರ್ಥನೆ ಎಂದರೆ ಅವರ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಬರುವಂತೆ ಇಲ್ಲಿಯೂ ಅವರ ಬದುಕು ಪ್ರತಿಬಿಂಬಿಸುತ್ತದೆ. ಕಡೆಗೆ ಅವರ ಬದುಕೇ ಪ್ರಾರ್ಥನೆಯಾಗಿ ಮೈದಾಳುತ್ತದೆ"[೫] ಎಂಬ ಮಾತುಗಳು ಪ್ರಮುಖವಾದವು. ಜನರ ಬದುಕನ್ನು ಬಿಟ್ಟು ಜನಪದ ಸಾಹಿತ್ಯವಿಲ್ಲ. ಜನಪದ ಸಾಹಿತ್ಯ ಜನಪದರ ಬದುಕಿನ ಪ್ರತಿಬಿಂಬ.

ಯಶೋಧರಾ ಶಾಸ್ತ್ರೀ ಅವರ ಕೃತಿ 'ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು'. ಪ್ರಸ್ತುತ ಕೃತಿಯಲ್ಲಿ ಗುಲಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳನ್ನು ಸಂಗ್ರಹಿಸಲಾಗಿದೆ. ಅವುಗಳನ್ನು ಶಾಸ್ತ್ರೀಯ ಚೌಕಟ್ಟಿಗೆ ಒಳಪಡಿಸಿ ಅಧ್ಯಯನ ಮಾಡಲಾಗಿದೆ. ಉತ್ತಮ ಕೌಟುಂಬಿಕ ಜೀವನಕ್ಕೆ ಬೇಕಾಗಬಲ್ಲ ದೈವ ಶಕ್ತಿ, ಸೌಹಾರ್ಧತೆ, ವಿಶಾಲ ದೃಷ್ಟಿಕೋನ, ಕೌಟುಂಬಿಕ ಜೀವನ, ಮಧುರ ಸಂಬಂಧ, ಭಾವೈಕ್ಯತೆ ಮೊದಲಾದ ಜೀವನ ಮೌಲ್ಯಗಳನ್ನು ಅಡಕಗೊಳಿಸಿಕೊಂಡಿರುವ ಸಂಪ್ರದಾಯದ ಹಾಡುಗಳನ್ನು ಇಲ್ಲಿ ಪ್ರಮುಖವಾಗಿ ಚರ್ಚಿಸಿದ್ದಾರೆ. 'ಜನಪದ ಸುಖ-ದುಃಖ, ಹಾಸ್ಯ ವಿಡಂಬನೆ, ಈರ್ಷೆ, ಮತ್ಸರ ಮುಂತಾದವುಗಳ ನೇರ ನಿರೂಪಣೆಯು ಕಥೆ, ಗೀತೆ, ಒಗಟು, ಗಾದೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ವ್ಯಕ್ತವಾಗಿರುತ್ತದೆ' ಎಂಬ ನಿಬಂಧಕಾರರ ಮಾತು ಪ್ರಮುಖವಾದವು. ಜಾನಪದದ ವಿವಿಧ ಪ್ರಕಾರಗಳಲ್ಲಿ ಜನಪದರ ಸಂಪೂರ್ಣ ಜೀವನ ಚಿತ್ರಣ ಅಡಕಗೊಂಡಿದೆ.

'ಬೀದರ ಜಿಲ್ಲೆಯ ಜನಪದ ಗೀತೆಗಳು' ಎಂಬ ಕೃತಿಯನ್ನು ಪರಾಮರ್ಶಿಸಲಾಗಿದೆ. ಈ ಸಂಕಲನದಲ್ಲಿ ಬೀದರ ಜಿಲ್ಲೆಯ ಲಾವಣಿ ಹಾಗೂ ಗೀತೆಗಳನ್ನು ಕುರಿತು ಒಂದು ಕ್ರಮಬದ್ಧವಾದ ಅಭ್ಯಾಸವನ್ನು ನಡೆಸುವ ಮೊದಲ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿನ ಗೀತೆಗಳು ಅಲ್ಲಿನ ಜನರ ಜೀವನವನ್ನು ಕುರಿತ ವಿವರಗಳನ್ನು ನೀಡುತ್ತವೆ.

'ಬೀದರ್ ಜಿಲ್ಲೆಯ ಜಾನಪದ ಗೀತೆಗಳು' ಎಂಬ ಕೃತಿಯನ್ನು ಪರಾಮರ್ಶಿಸಲಾಗಿದ್ದು, ಪೂರಕವಾದ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳಲಾಗಿದೆ. ಈ ಸಂಗ್ರಹದಲ್ಲಿ ಜಾನಪದ ಗೀತೆಗಳನ್ನು

ಜನಪದ ಕಥನ ಗೀತೆಗಳು, ಕೋಲಾಟದ ಪದಗಳು ಹಾಗೂ ತತ್ವಪದಗಳೆಂದು ವಿಂಗಡಿಸಿಕೊಂಡಿದ್ದಾರೆ. "ಜನಪದ ಗೀತೆಗಳು ಜೀವನದಿಂದ ಹುಟ್ಟಿಕೊಂಡ ಸಾಹಿತ್ಯವಾದರೂ ಅವು ಜೀವನಕ್ಕೆ ಅತುಲ ಬಲದಾಯಕವಾಗಿವೆ. ಜನಪದ ಸಾಹಿತ್ಯವಾಗಲಿ, ಗೀತೆಗಳಾಗಲಿ, ನಮ್ಮ ಬದುಕಿಗೆ ತೀವ್ರತೆಯನ್ನು, ಸಕಾಲಕ್ಕೆ ತಡೆಯನ್ನು ಒದಗಿಸುತ್ತದೆ. ಜನಪದ ಗೀತೆಗಳು ಸಾಮಾನ್ಯ ಜನರ ದುಡಿತದ ಶ್ರಮವನ್ನು ಮರೆಯಿಸಿ ನಾಳಿನ ಚಿಂತೆಯನ್ನು ಬಯಲು ಮಾಡುವುವು. ಅಂತೆಯೇ ಜನಪದ ಸಾಹಿತ್ಯವೆಂದರೆ ಜೀವನ ಸಾಹಿತ್ಯ. ಬದುಕಿಗೆ ತುಂಬಾ ಸನಿಹವಾದ ಸಾಹಿತ್ಯ"[೬] ಎಂಬ ಮಾತುಗಳು ಗಮನಿಸತಕ್ಕವು. ಏಕೆಂದರೆ ಜನಪದ ಗೀತೆಗಳಲ್ಲಿ ಅವರ ಜೀವನ ಕ್ರಮದ ಪೂರ್ಣ ವಿವರಗಳಿವೆ.

ನಾಗನಾಯ್ಕ ರಾಮೇನಹಳ್ಳಿ ಅವರ ಕೃತಿ 'ಹೆಚ್.ಡಿ.ಕೋಟೆ ತಾಲ್ಲೂಕಿನ ಜನಪದ ಗೀತೆಗಳು'. ಇದು ನಾಗನಾಯ್ಕ ಅವರು ಸಂಪಾದಿಸಿರುವ ಜನಪದ ಗೀತೆಗಳ ಸಂಕಲನ. ಇದರಲ್ಲಿ ಸ್ತ್ರೀಯರ ಗೀತೆಗಳು, ಪುರುಷರ ಗೀತೆಗಳು ಹಾಗೂ ದೈವಿಕ ಗೀತೆಗಳು ಎಂಬ ವಿಭಾಗ ಕ್ರಮದಲ್ಲಿ ಹೆಚ್.ಡಿ.ಕೋಟೆ ತಾಲ್ಲೂಕಿನ ಜನಪದ ಗೀತೆಗಳನ್ನು ಕ್ಷೇತ್ರಕಾರ್ಯದ ಮೂಲಕ ದಾಖಲಿಸಿ ಕೊಟ್ಟಿದ್ದಾರೆ. ಈ ಜನಪದ ಗೀತೆಗಳಲ್ಲಿ ಸ್ತ್ರೀಪಾತ್ರ ಪ್ರಧಾನವುಳ್ಳ ಕೆಲವು ಕಥನ ಗೀತೆಗಳು ಇರುವುದು ಗಮನಿಸುವಂತಹ ಸಂಗತಿ. ಸಂಗ್ರಾಹಕರೆ ಹೇಳಿಕೊಂಡಂತೆ 'ಹೆಗ್ಗಡ ದೇವನಕೋಟೆ ತಾಲ್ಲೂಕಿನ ಜನಪದ ಗೀತೆಗಳು' ಹದಿನಾಲ್ಕು ಜನಪದ ಗೀತೆಗಳನ್ನೊಳಗೊಂಡ ಒಂದು ಕೃತಿ. ಈ ಗೀತೆಗಳು ಮೈಸೂರು ಜಿಲ್ಲೆಯ ಹಿಂದುಳಿದ ಹಾಗೂ ಬುಡಕಟ್ಟು ಜನರು ನೆಲೆಸಿರುವ ತಾಲ್ಲೂಕೆಂದು ಗುರುತಿಸಲ್ಪಡುವ ಹೆಗ್ಗಡದೇವನಕೋಟೆ ತಾಲ್ಲೂಕಿನವುಗಳಾಗಿವೆ. ಇವುಗಳನ್ನು ತಾಲ್ಲೂಕಿನ ಊರೂರುಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಹಾಡುಗಾರರಿಂದ ಕ್ಯಾಸೆಟ್‌ನಲ್ಲಿ ರೆಕಾರ್ಡಿಂಗ್ ಮಾಡಿಕೊಳ್ಳುವ ಮೂಲಕ ಸಂಗ್ರಹಿಸಿ ಬರೆಯಲಾಗಿದೆ.

ಕೊನೆ ಟಿಪ್ಪಣಿಗಳು

೧. ಜನಪದ ಸಾಹಿತ್ಯ ಸಂಚಯ, ಪು.ಸಂ-೦೧.

೨. ಗರತಿಯ ಹಾಡು, ಪ್ರಸ್ತಾವನೆ, ಪು.ಸಂ-೦೬.

೩. ಕಾರವಾರ ಜಿಲ್ಲೆಯ ಜನಪದ ಗೀತೆಗಳು, ಪು.ಸಂ-೮೨.

೪. ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು, ಪು.ಸಂ-೩೩.

೫. ಬಳ್ಳಾರಿ ಜಿಲ್ಲೆಯ ಜಾನಪದ ಗೀತೆಗಳು, ಪು.ಸಂ-೧೩.

೬. ಬೀದರ್ ಜಿಲ್ಲೆಯ ಜಾನಪದ ಗೀತೆಗಳು, ಪು.ಸಂ-೦೮.

ಅಧ್ಯಾಯ : ಎರಡು

ಚನ್ನರಾಯಪಟ್ಟಣ ತಾಲ್ಲೂಕಿನ ಭೌಗೋಳಿಕ ಇತಿಹಾಸದ ಅವಲೋಕನ

೨.೧ ಭೌಗೋಳಿಕತೆ

೨.೨ ಚಾರಿತ್ರಿಕತೆ

೨.೩ ಸಾಮಾಜಿಕ ಜೀವನ

೨.೪ ಸಾಂಸ್ಕೃತಿಕ ಅನನ್ಯತೆ

೨.೫ ಧಾರ್ಮಿಕತೆ

ಅಧ್ಯಾಯ : ಎರಡು

ಚನ್ನರಾಯಪಟ್ಟಣ ತಾಲ್ಲೂಕಿನ ಭೌಗೋಳಿಕ ಇತಿಹಾಸದ ಅವಲೋಕನ

ಚನ್ನರಾಯಪಟ್ಟಣವು ಹಾಸನ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ, ಹಾಗೂ ಅದರ ಆಡಳಿತ ಕೇಂದ್ರವಾಗಿದೆ. ಇದು ಬೆಂಗಳೂರಿನಿಂದ ೧೪೭ ಕಿಲೋಮೀಟರ್ ದೂರದಲ್ಲಿದೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ೦೬ ಹೋಬಳಿಗಳಿವೆ. ೧) ನುಗ್ಗೇಹಳ್ಳಿ, ೨) ಹಿರಿಸಾವೆ, ೩) ಬಾಗೂರು, ೪) ಶ್ರವಣ ಬೆಳಗೊಳ, ೫) ದಂಡಿಗನಹಳ್ಳಿ, ೬) ಕಸಬಾ. ಈ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯು ರಾಜಕೀಯವಾಗಿ ಹೊಳೆ ನರಸೀಪುರ ಕ್ಷೇತ್ರಕ್ಕೆ ಸೇರಿದೆ.

೨.೧. ಭೌಗೋಳಿಕತೆ

ಹಾಸನ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲಿ ಕಲ್ಪವೃಕ್ಷದ ನಾಡಾದ ಚನ್ನರಾಯಪಟ್ಟಣ ತಾಲ್ಲೂಕು ಪ್ರಮುಖವಾದುದು. ಇದು ಗಂಗ ರಾಜರು ಆಳಿದ ಪ್ರದೇಶ. ಚನ್ನರಾಯಪಟ್ಟಣವು ಉತ್ತರ ಅಕ್ಷಾಂಶ ೧೨.೫೪° ಮತ್ತು ಪೂರ್ವ ರೇಖಾಂಶ ೭೬.೨೬° ರಲ್ಲಿದೆ. ಹಾಸನ ಜಿಲ್ಲೆಯ ಪೂರ್ವ ಭಾಗದಲ್ಲಿರುವ ತಾಲ್ಲೂಕು ಅದರ ಮುಖ್ಯ ಸ್ಥಳ. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪೮ ರಲ್ಲಿ ಆಯಕಟ್ಟಾದ ಸ್ಥಳದಲ್ಲಿ ಈ ಪಟ್ಟಣವಿದೆ. ಜಿಲ್ಲಾ ಕೇಂದ್ರ ಹಾಸನದಿಂದ ೩೮ ಕಿ.ಮೀ ಹಾಗೂ ಮೈಸೂರಿನಿಂದ ೮೦ ಕಿ.ಮೀ ದೂರದಲ್ಲಿದೆ.

"ಉತ್ತರದಲ್ಲಿ ಅರಸೀಕೆರೆ ತಾಲ್ಲೂಕು ಮತ್ತು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕು, ಪೂರ್ವದಲ್ಲಿ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ಮತ್ತು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು, ದಕ್ಷಿಣದಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕು, ನೈಋತ್ಯ ಮತ್ತು ಪಶ್ಚಿಮದಲ್ಲಿ ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕುಗಳು ಚನ್ನರಾಯಪಟ್ಟಣ ತಾಲ್ಲೂಕನ್ನು ಸುತ್ತುವರೆದಿವೆ. ವಿಸ್ತೀರ್ಣ ೧,೦೪೨.೨೬ ಚ.ಕಿ.ಮೀ, ಜನಸಂಖ್ಯೆ ೨,೭೮,೧೧೨ (೨೦೦೧), ಜನವಸತಿ ಇರುವ ಗ್ರಾಮಗಳ ಸಂಖ್ಯೆ ೩೬೫"[೧] ಎಂಬ ವಿವರಗಳು ಚನ್ನರಾಯಪಟ್ಟಣ ತಾಲ್ಲೂಕಿನ ಭೌಗೋಳಿಕ ಅಂಶಗಳನ್ನು ಸ್ಪಷ್ಟಪಡಿಸುತ್ತವೆ.

ಅಲ್ಲದೆ ಯಾವುದೇ ಭೂಪ್ರದೇಶದ ಅಭಿವೃದ್ಧಿಗೆ ಅದು ಒಳಗೊಂಡಿರುವ ಭೌಗೋಳಿಕ ಅಂಶಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಅಲ್ಲಿ ದೊರಕುವ ನೈಸರ್ಗಿಕ ಸಂಪನ್ಮೂಲಗಳಾದ

ನೀರು, ಗಾಳಿ, ಖನಿಜಗಳು ಮೊದಲಾದ ಪ್ರಾಕೃತಿಕ ಸಂಪತ್ತು ಅಲ್ಲಿನ ಜನರ ಜೀವನ ಮಟ್ಟ ಹಾಗೂ ಆರ್ಥಿಕತೆಯ ಸುಧಾರಣೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಜೊತೆಗೆ ಯಾವುದೇ ಒಂದು ಭೌಗೋಳಿಕ ಪರಿಸರ ಅದರ ಅಭಿವೃದ್ಧಿಯ ಜೊತೆಗೆ ಅಲ್ಲಿನ ಸಾಂಸ್ಕೃತಿಕ ರಾಯಭಾರಿಯಾಗಿಯೂ ಕಾರ್ಯ ನಿರ್ವಹಿಸುತ್ತಿರುತ್ತದೆ. ಹಾಗೆಯೇ ಸಾಂಸ್ಕೃತಿಕವಾಗಿ ಅಲ್ಲಿನ ಜನ ಜೀವನದ ಮೇಲೆ ಅನೇಕ ರೀತಿಯ ಪ್ರಭಾವಗಳನ್ನು ಬೀರುತ್ತಿರುತ್ತದೆ. ಒಂದು ಪ್ರದೇಶದ ಸಂಸ್ಕೃತಿಗೂ ಮತ್ತೊಂದು ಪ್ರದೇಶದ ಸಂಸ್ಕೃತಿಗೂ ವ್ಯತ್ಯಾಸಗಳಿರುವುದು ಈ ರೀತಿಯ ಭೌಗೋಳಿಕ ಅಂಶಗಳ ಕಾರಣವಾಗಿ ಎಂಬುದು ಗಮನಿಸತಕ್ಕ ಸಂಗತಿಯಾಗಿದೆ.

೨.೨ ಚಾರಿತ್ರಿಕತೆ

ಚನ್ನರಾಯಪಟ್ಟಣ ತಾಲ್ಲೂಕು ಸಾಂಸ್ಕೃತಿಕವಾಗಿ ಹಾಗೂ ಐತಿಹಾಸಿಕವಾಗಿ ಸಮೃದ್ಧವಾದ ಪ್ರದೇಶವಾಗಿದೆ. ಚಾರಿತ್ರಿಕವಾಗಿ ಮೌರ್ಯ, ಕದಂಬ, ಗಂಗ, ರಾಷ್ಟ್ರಕೂಟ, ಬಾಣ ಮತ್ತು ಕಲ್ಯಾಣ ಚಾಲುಕ್ಯ ಮನೆತನಗಳ ಆಳ್ವಿಕೆಗೆ ಒಳಪಟ್ಟಿರುವುದು ಕಂಡುಬರುತ್ತದೆ. ಆಡಳಿತ, ಧರ್ಮ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕ್ಷೇತ್ರಕ್ಕೆ ಈ ಎಲ್ಲ ರಾಜಮನೆತನಗಳು ವಿಪುಲವಾದ ಕೊಡುಗೆಗಳನ್ನು ನೀಡಿರುವುದು ತಿಳಿಯುತ್ತದೆ.

ಈ ತಾಲ್ಲೂಕಿನ ಚಾರಿತ್ರಿಕ ವಿಚಾರಗಳನ್ನು ಗಮನಿಸುವುದಾದರೆ "ಹೊಳೆನರಸೀಪುರದ ಪಾಳೇಗಾರ ಲಕ್ಕಪ್ಪನಾಯಕ ಮತ್ತು ಪುಟ್ಟಗಿರಿಜ ಎಂಬುವವರು ಶ್ರೀ ಚೆನ್ನಕೇಶವ ಸ್ವಾಮಿಯ ಅನುಗ್ರಹದಿಂದ ಮಗನನ್ನು ಪಡೆದ ಕಾರಣ ಚೆನ್ನರಾಯಪಟ್ಟಣ ಎಂಬ ಹೆಸರು ಬಂದಿದೆ.

೧೬೦೦ ರ ಸುಮಾರಿಗೆ ಪಾಳೇಗಾರ ಲಕ್ಕಪ್ಪ ನಾಯಕ ತನ್ನ ಮಗನಾದ ಚನ್ನರಾಯನಿಗೆ ಜಹಗೀರಾಗಿ ಕೊಟ್ಟನು. ಹಾಗೂ ೧೬೩೩ ರಲ್ಲಿ ಮೈಸೂರು ಚಾಮರಾಜ ಒಡೆಯರ ಆಡಳಿತಕ್ಕೆ ಒಳಪಟ್ಟಿತು.

ಕ್ರಿ.ಶ.೧೧೮೫ ರಲ್ಲಿ ಸಾತಲಾದೇವಿಯ ತಂದೆಯು ಹೊಯ್ಸಳ ದೊರೆ ವೀರಬಲ್ಲಾಳನಿಗೆ ಈ ಸ್ಥಳವನ್ನು ಅಗ್ರಹಾರವನ್ನಾಗಿ ಮಾಡಬೇಕೆಂದು ಆಜ್ಞಾಪಿಸಿದಾಗ ಅದರಂತೆ ಈ ಊರು 'ಅಮೃತನಾಥಪುರ' ಅಗ್ರಹಾರವಾಗುತ್ತದೆ"[೨] ಎಂಬ ವಿವರಗಳು ಈ ತಾಲ್ಲೂಕಿನ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತವೆ.

ಮತ್ತೊಂದು ಅಭಿಪ್ರಾಯದ ಪ್ರಕಾರ "ಇದರ ಹಿಂದಿನ ಹೆಸರು ಕೊಳತೂರು. ಆಗ ಇಲ್ಲಿ ಒಂದು ಅಗ್ರಹಾರ ಮಾತ್ರ ಇತ್ತು. ಮಾಚಲದೇವಿ ಮತ್ತು ಶಾಂತಲದೇವಿ ಎಂಬ ಇಬ್ಬರು ಇದರ ಈಶಾನ್ಯದಲ್ಲಿರುವ ವಿಶಾಲವಾದ ಕೆರೆಯನ್ನು ಕಟ್ಟಿಸಿದರು ಎಂದು ಹೇಳಲಾಗಿದೆ. ಸು.೧೬೦೦ ರಲ್ಲಿ ಹೊಳೆನರಸೀಪುರದ ಪಾಳೆಯಗಾರ ಲಕ್ಷ್ಮಪ್ಪನಾಯಕ ಇದನ್ನು ಪಟ್ಟಗಿರಿ ರಾಜನಿಂದ ಪಡೆದುಕೊಂಡು ತನ್ನ ಮಗ ಚನ್ನರಾಯನಿಗೆ ಜಹಗೀರಾಗಿ ಕೊಟ್ಟ. ಚನ್ನಿಗರಾಯ ದೇವಾಲಯದಿಂದ ಊರಿಗೆ

'ಚನ್ನರಾಯಪಟ್ಟಣ' ಎಂಬ ಹೆಸರು ಬಂತು. ಇಲ್ಲಿ ದೊಡ್ಡ ಬಸವಯ್ಯನೆಂಬ ಪಾಳೆಯಗಾರ ಕಟ್ಟಿಸಿದ ಹಳೆಯ ಕೋಟೆಯನ್ನು ಹೈದರ್ ಆಲಿ ಪುನರ್ ನಿರ್ಮಿಸಿದ"[೩] ಎಂಬ ವಿವರಗಳು ತಿಳಿದು ಬರುತ್ತವೆ. ಇವೆಲ್ಲಾ ಅಭಿಪ್ರಾಯಗಳಿಂದ ಈ ಸ್ಥಳಕ್ಕೆ 'ಚನ್ನರಾಯಪಟ್ಟಣ' ಎಂಬ ಹೆಸರು ಬಂದ ರೀತಿ, ಅದಕ್ಕೆ ಕಾರಣಕರ್ತರಾದ ವ್ಯಕ್ತಿಗಳು ಹಾಗೂ ವಿಚಾರಗಳು ಸ್ಪಷ್ಟವಾಗುತ್ತವೆ. ಜೊತೆಗೆ 'ಚನ್ನರಾಯ' ಎಂಬುವವನು ಇದರ ಮೂಲ ಪುರುಷನೆಂಬುದು ವೇದ್ಯವಾಗುತ್ತದೆ.

ಜೈನ ಸಾಹಿತ್ಯವನ್ನಾಗಲೀ, ಜಗತ್ತಿನ ಅದ್ಭುತ ಸ್ಮಾರಕಗಳ ವಿಚಾರವನ್ನಾಗಲೀ, ನಾವು ಪ್ರಸ್ತಾಪಿಸುವಾಗಲೂ, ಚನ್ನರಾಯಪಟ್ಟಣದ ಹೆಸರನ್ನು ಅನಿವಾರ್ಯವಾಗಿ ಬಳಸಲೇಬೇಕು. ಚನ್ನರಾಯನ + ಪಟ್ಟಣ ಅಥವಾ ಚನ್ನರಾಯನಾಳಿದ ಪಟ್ಟಣ ಇವೆರಡೂ ಕಂಡುಬಂದರೂ ಈ ಊರಿನ ಪೂರ್ವೀತಿಹಾಸ ಅರಿಯುವುದು ಸಮಂಜಸವಾಗಿದೆ. ಸ್ಥಳ ಪುರಾಣದ ಪ್ರಕಾರ 'ಅಮೃತನಾಥಪುರ' ಎಂತಲೂ, ಇತರ ಚರಿತ್ರೆಗಳ ಪ್ರಕಾರ 'ಕಬ್ಬುಡ ನಾಡು', 'ತುಂಗಣಿನಾಡು', 'ಕೊಳತ್ತೂರು', 'ಚನ್ನರಾಯಪಟ್ಟಣ' ಹೀಗೆ ಈ ಊರಿನ ಹೆಸರು ಆಯಾಯ ಅರಸು, ಪ್ರಮುಖರ ಸ್ಮರಣಾರ್ಥದ ನೆನಪಾಗಿ ಬದಲಾಗತ್ತಾ ಬಂದಿದೆ.

ಹನ್ನೆರಡನೇ ಶತಮಾನಕ್ಕೆ ಮುಂಚೆ 'ಹೆಬ್ಬಾರ್' ಅರಸರ ಆಳ್ವಿಕೆ ಕಾಲದಲ್ಲಿ ಈ ಊರಿಗೆ ಕೊಳತ್ತೂರು, ಮುಂದೆ ಕ್ರಿ.ಶ.೧೬೦೦ ರಲ್ಲಿ ಹೊಳೆನರಸೀಪುರದ ಲಕ್ಕಪ್ಪ ನಾಯಕನು ಈ ಕೊಳತ್ತೂರನ್ನು ಆಳುತ್ತಿದ್ದ 'ಪುಟ್ಟಗಿರಿ ರಾಜಾ ಹೆಬ್ಬಾರ್' ಎಂಬ ಅರಸನನ್ನು ಸೋಲಿಸಿ ತನ್ನ ಮಗ ಚನ್ನರಾಯನಿಗೆ ಉಂಬಳಿಯಾಗಿ ಈ ಊರನ್ನು ಕೊಟ್ಟನು. ಆಗ ಚನ್ನರಾಯ ಈ ಊರಿನ ಪುರೋಭಿವೃದ್ಧಿ, ಧಾರ್ಮಿಕ ಸುಧಾರಣೆಗಳನ್ನು ಮಾಡಿರುತ್ತಾನೆ. ಮುಂದೆ ೧೫ನೇ ಶತಮಾನದಿಂದೀಚೆಗೆ ಚನ್ನಪಟ್ಟಣದ ಸರಹದ್ದನ್ನು ಆಳುತ್ತಿದ್ದ ದೊಡ್ಡಯ್ಯ, ಬಸಯ್ಯ ಇವರು ಈ ಕೇಂದ್ರವನ್ನು ಅಗ್ರಹಾರವಾಗಿ ಮಾಡಿಕೊಂಡು ಆಳುತ್ತಿದ್ದಾಗ ಈ ಪರಿಸರಕ್ಕೆ 'ಕಬ್ಬುಡ ನಾಡು' ಮತ್ತು 'ತುಂಗಣಿನಾಡು' ಎಂದು ಕರೆಯಲಾಯಿತು.

ಈ ಅಗ್ರಹಾರ ಕೇಂದ್ರವು ಅನೇಕ ಕಲೆಗಳನ್ನು ಹುಟ್ಟು ಹಾಕಿದ ಸ್ಥಳವೆಂದು ತಿಳಿದುಬರುತ್ತದೆ. ಐತಿಹಾಸಿಕ ಕಾಲದಲ್ಲಿ ಗುರುಕುಲಗಳೇ ಅಗ್ರಹಾರ ಆಗಿದ್ದರಿಂದ ಅನೇಕ ಶಾಸ್ತ್ರೀಯ ಅಭ್ಯಾಸಗಳು ಇಲ್ಲಿ ಜರುಗುತ್ತಿದ್ದವು. ಹೊಯ್ಸಳರಸರ ದಂಡನಾಯಕ ಅಮೃತಮಯ್ಯನು ಹೊಯ್ಸಳ ದೊರೆ ವೀರಬಲ್ಲಾಳನಿಗೆ ಈ ಊರನ್ನು ಕ್ರಿ.ಶ. ೧೧೦೮ ರಲ್ಲಿ ಗುರುಕುಲವನ್ನಾಗಿ ಮಾಡಬೇಕೆಂದು ತಿಳಿಸಿದಾಗ, ಈ ಅಮೃತನಾಥಪುರವನ್ನು ಅಗ್ರಹಾರವನ್ನಾಗಿ ಮಾಡಿದ್ದಾರೆಂದು ತಿಳಿದುಬರುತ್ತದೆ. ಇಲ್ಲಿಯೇ ಮಾಚನಾದೇವಿ, ಸಾಂತಲಾದೇವಿಯರೆಂಬ ಇಬ್ಬರು ನೃತ್ಯಗಾರ್ತಿಯರು ಇಲ್ಲಿಯ ಒಂದು ಕೆರೆಯನ್ನು ಕಟ್ಟಿಸಿರುತ್ತಾರೆ.

ಹೊಯ್ಸಳರಸರ ಸಾಮಂತರೂ ಮೈಸೂರು ಒಡೆಯರೂ, ಕಾನಕಾನಹಳ್ಳಿಯ ಪ್ರಭುಗಳೂ ಧಾರ್ಮಿಕವಾಗಿ ಈ ಕ್ಷೇತ್ರವನ್ನು ಅಭಿವೃದ್ಧಿಗೊಳಿಸುತ್ತಾ ಕೆರೆ, ಕಾಲುವೆ, ದೇವಸ್ಥಾನ, ಮಠ

ಮಾನ್ಯಗಳನ್ನು ಕಟ್ಟಿಸಿರುತ್ತಾರೆ. ಈ ವಿಚಾರಗಳಿಂದ ಅಲ್ಲಿನ ಜನರ ಜೀವನೋಪಾಯಕ್ಕಾಗಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವುದು ತಿಳಿಯುತ್ತದೆ. ಜೊತೆಗೆ ಆಳರಸರ ಸಮಾಜಮುಖಿ ಚಟುವಟಿಕೆಗಳೂ ಸಹ ನಮ್ಮ ಗಮನವನ್ನು ಸೆಳೆಯುತ್ತವೆ. ಇಲ್ಲಿನ ಚೆನ್ನರಾಯ ಸ್ವಾಮಿ ದೇವಾಲಯವು ಹೊಯ್ಸಳರ ಕಾಲದ ಅಮೃತಯ್ಯ ದಂಡ ನಾಯಕನು ಕಟ್ಟಿಸಿದ ದೇವಾಲಯ ಆಗಿರಬಹುದಾಗಿದೆ. ಇದು ವಾಸ್ತುಶಿಲ್ಪ ದೃಷ್ಟಿಯಿಂದಲೂ ಪ್ರಮುಖವಾಗಿದ್ದು, ೧೪ ರಿಂದ ೧೫ ನೇ ಶತಮಾನದಲ್ಲಿ ನಿರ್ಮಿತವಾಗಿರಬಹುದಾಗಿದೆ. ಚಂದ್ರಶೇಖರಸ್ವಾಮಿ ಈ ದೇವಾಲಯವನ್ನು ಪ್ರಭು ದೊಡ್ಡಯ್ಯನವರ ಮಗ ಬಸವಯ್ಯನು ಕ್ರಿ.ಶ. ೧೫೮೫ ರಲ್ಲಿ ಕಟ್ಟಿಸಿ ಚಂದ್ರಶೇಖರಸ್ವಾಮಿಯವರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾನೆ.

"ಹೊಯ್ಸಳರ ಕಾಲದಲ್ಲಿ ಚನ್ನರಾಯಪಟ್ಟಣಕ್ಕೆ ಕೊಳತ್ತೂರು ಎಂಬ ಹೆಸರಿದ್ದಿತು. ಕ್ರಿ.ಶ.೧೫೦೦ ರವರೆವಿಗೂ ಇದೇ ಹೆಸರು ಕಂಡುಬರುತ್ತದೆ. ಅನಂತರ ವಿಜಯನಗರದ ಅಧಿಕಾರಿಯಾದ ಚೆನ್ನರಾಯ ಎಂಬುವನಿಂದ ಇದಕ್ಕೆ ಈಗಿನ ಹೆಸರು ಬಂದಿರಬಹುದು. ಹೊಯ್ಸಳರ ಕಾಲದಲ್ಲಿ ಅಮೃತಯ್ಯ ದಂಡನಾಯಕನು ಚನ್ನಕೇಶವ ಮತ್ತು ಅಮೃತನಾಥ ದೇವಾಲಯಗಳನ್ನು ಕಟ್ಟಿಸಿ, ಅಗ್ರಹಾರಕ್ಕೆ ಅಮೃತನಾಥಪುರವೆಂದು ಹೆಸರಿಟ್ಟಿದ್ದನು. ಚೆನ್ನಕೇಶವ ದೇವಾಲಯ ಬಳಪದ ಕಲ್ಲಿನಿಂದ ಕಟ್ಟಿದ್ದರೂ ಸಾಮಾನ್ಯವಾದ ಹೊಯ್ಸಳ ಶೈಲಿಯಲ್ಲಿ ಸುಂದರವಾಗಿದೆ. ಹೊರಗಿನ ಜಗತಿ ಗೋಡೆಗಳು, ಕೈಪಿಡಿ ಗೋಡೆಯ ಶಿಖರಗಳು ಇವೆ. ಮುಖ ಮಂಟಪದಲ್ಲಿ ಎರಡು ದುಂಡಾದ ಸ್ತಂಭಗಳಿವೆ. ವಿಜಯ ನಗರದ ಕಾಲದಲ್ಲಿ ಇದಕ್ಕೆ ಮತ್ತೊಂದು ಮುಖಮಂಟಪ ಮಹಾದ್ವಾರ, ಗೋಪುರವನ್ನು ಸೇರಿಸಿರುವರು. ನವರಂಗದ ಮೇಲ್ಛಾವಣಿಗಳಲ್ಲಿ ರೇಖಾಚಿತ್ರಗಳಿವೆ. ಭುವನೇಶ್ವರಿಯಲ್ಲಿ ದಿಕ್ಪಾಲಕರೂ ಮಧ್ಯದಲ್ಲಿ ಜೋಲಾಡುವ ಶಂಖವೂ ಇದೆ. ನವರಂಗದ ಸ್ತಂಭಗಳು ಘಂಟಾಕಾರವಾಗಿವೆ. ಸುಖನಾಸಿಯ ಮೇಲ್ಛಾವಣಿಯಲ್ಲಿ ಪದ್ಮವಿದೆ. ಗರ್ಭಗುಡಿಯಲ್ಲಿ ಚೆನ್ನಕೇಶವ ವಿಗ್ರಹವಿದೆ"[೪] ಎಂಬ ವಿಚಾರಗಳು ಚನ್ನರಾಯಪಟ್ಟಣದ ಚಾರಿತ್ರಿಕ ಅಂಶಗಳನ್ನು ತಿಳಿಸಿಕೊಡುವ ಜೊತೆಗೆ ಚೆನ್ನಕೇಶವ ದೇವಾಲಯದ ಕಲಾ ಸೌಂದರ್ಯದ ಸೊಬಗನ್ನು ನಮಗೆ ಪರಿಚಯಿಸುತ್ತವೆ. ಈ ಅಂಶಗಳಿಂದಾಗಿಯೆ ಚನ್ನರಾಯಪಟ್ಟಣವು ಅದ್ಭುತ ಕಲಾ ಸೌಂದರ್ಯದ ತವರೂರೆನಿಸಿದ್ದು, ಸಾಂಸ್ಕೃತಿಕ ಅಧಿಪತ್ಯವನ್ನು ಸಾಧಿಸಿದೆ.

ಇದಲ್ಲದೆ "ಬೇಲೂರಿನ ನಾರ್ವೆ, ಅರಸೀಕೆರೆ, ಹೊಳೆನರಸೀಪುರ, ಆಲೂರು ತಾಲ್ಲೂಕಿನ ಕರಡಿಗುಡ್ಡ, ಸಕಲೇಶಪುರ ತಾಲ್ಲೂಕಿನ ಕ್ಯಾನಹಳ್ಳಿ ಗುಡ್ಡ, ಗೊದ್ದು, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಆಯಾ ಕಾಲಘಟ್ಟದ ಆದಿ ಮಾನವರ ಸಮಾಧಿ ವೃತ್ತಗಳು, ಮೃತ್ಪಾತ್ರೆಗಳು, ನೆಲೆಗಳು, ಶಿಲಾ ಕೊಡಲಿಗಳು ದೊರೆತಿವೆ"[೫]. ಈ ಸಂಗತಿಗಳು ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಾಚೀನ ಜನ ಜೀವನದ ಮೇಲೆ ಬೆಳಕನ್ನು ಚೆಲ್ಲುತ್ತವೆ. ಆ ಮೂಲಕ ಇದರ ಇತಿಹಾಸದ ಕಾಲಗಣನೆಯನ್ನು ಆದಿಮ ಕಾಲಘಟ್ಟಕ್ಕೆ ಕೊಂಡೊಯ್ಯುತ್ತವೆ.

೨.೩. ಸಾಮಾಜಿಕ ಜೀವನ

ಹಾಸನ ಜಿಲ್ಲೆಯ ಪ್ರಮುಖ ತಾಲ್ಲೂಕಾಗಿರುವ ಚನ್ನರಾಯಪಟ್ಟಣ ತಾಲ್ಲೂಕು ಕೃಷಿ ಪ್ರಧಾನವಾದ ಸಾಮಾಜಿಕ ಬದುಕನ್ನು ಅವಲಂಬಿಸಿದೆ. ಇಲ್ಲಿ ಹಲವು ಧರ್ಮ, ಜಾತಿ, ವೃತ್ತಿ, ಕಸುಬು, ಪಂಗಡಗಳ ಜನ ಸಮುದಾಯದವರು ವಾಸಿಸುತ್ತಿದ್ದಾರೆ. ಪ್ರಮುಖವಾಗಿ ಸಂಪ್ರದಾಯ, ಸದಾಚಾರಗಳಲ್ಲಿ ನಂಬಿಕೆಯಿರುವ, ಹಿರಿಯರ ಹಿರಿಮೆಯನ್ನು ನೆನಪಿಸಿಕೊಂಡು ಕೃತಜ್ಞತೆಯಿಂದ, ಹೆಮ್ಮೆಯಿಂದ ಬದುಕುವವರಾಗಿದ್ದಾರೆ. ಇಲ್ಲಿ ಜಾನಪದ ಸಂಸ್ಕೃತಿ ಅಚ್ಚ ಹಸಿರಾಗಿದ್ದು, ಸಹಬಾಳ್ವೆಯ ಬದುಕು ಇಲ್ಲಿ ಸಾಗಿದೆ.

ಪ್ರಮುಖವಾಗಿ ಭತ್ತ, ರಾಗಿ, ಕಬ್ಬು, ಕಾಫಿ ಹಾಗೂ ಏಲಕ್ಕಿಗಳನ್ನು ಬೆಳೆಯುತ್ತಾರೆ. ರಾಗಿಯನ್ನು ವಿಶೇಷವಾಗಿ ಅರಸೀಕೆರೆಯ ಎಲ್ಲ ಮೈದಾನ ಭಾಗಗಳಲ್ಲಿ, ಚನ್ನರಾಯಪಟ್ಟಣ, ಹಾಸನ, ಅರಕಲಗೂಡುಗಳಲ್ಲಿ ಬೆಳೆಯಲಾಗುತ್ತದೆ. ಚನ್ನರಾಯಪಟ್ಟಣ, ಹೊಳೆನರಸೀಪುರ ಮತ್ತು ಹಾಸನ ತಾಲ್ಲೂಕಿನ ಕೆಲವು ಭಾಗಗಳು ಬಂಡೆಗಲ್ಲುಗಳಿಂದ ಕೂಡಿದ್ದು, ಕೃಷಿಗೆ ಯೋಗ್ಯವಾಗಿಲ್ಲ. ತೆಂಗು ವ್ಯವಸಾಯ ಅರಸೀಕೆರೆ, ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿ ಹೆಚ್ಚಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಾಗುವ ಮದುವೆ ಸಮಾರಂಭಗಳಲ್ಲಿ ಹೆಣ್ಣು ಗಂಡುಗಳನ್ನು ಊರಿನಲ್ಲೆಲ್ಲ ಮೆರವಣಿಗೆ ಮಾಡಿಸುತ್ತಾರೆ. ಎತ್ತಿನ ಗಾಡಿಯ ಮೇಲೆ ಅಡ್ಡ ಹಲಗೆ ಹಾಕಿ, ಅಲಂಕರಿಸಿ, ಹೆಣ್ಣು ಗಂಡುಗಳನ್ನು ಜೊತೆಯಾಗಿ ಕೂರಿಸುತ್ತಾರೆ. ಗ್ರಾಮದ ಬೀದಿ ಬೀದಿಗಳಲ್ಲಿ ಸಂಚರಿಸಿ, ಮನೆ ಮನೆಯ ಮುಂದೂ ನಿಲ್ಲಿಸಿ, ಪ್ರತಿ ಮನೆಯವರೂ ನೀಡುವ ಅಕ್ಕಿ, ಕುಂಕುಮ ಪಡೆಯುವ ಮೂಲಕ ಅವರ ಆಶೀರ್ವಾದ ಪಡೆಯುತ್ತಾರೆ.

ಪ್ರತಿವರ್ಷ ಗ್ರಾಮ ದೇವತೆಯ ಹಬ್ಬಗಳು ಸುಗ್ಗಿಯ ಕಾಲದಲ್ಲಿ ನಡೆಯುತ್ತವೆ. ಈ ಹಬ್ಬಗಳು ಹಲವು ದಿನಗಳವರೆಗೆ ನಡೆಯುತ್ತವೆ. ಗ್ರಾಮದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿರುವ ಸಂಪ್ರದಾಯಗಳು ಹಾಗೂ ವಿಧಿ ನಿಯಮಗಳಂತೆ ಕಾರ್ಯಕ್ರಮಗಳು ಜರುಗುತ್ತವೆ. ಗ್ರಾಮದೇವತೆಯನ್ನು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮೆರವಣಿಗೆ ಮಾಡಿ, ದೇವತೆಯನ್ನು ಸ್ತುತಿಸುತ್ತಾರೆ. ಹಬ್ಬ ಜಾತ್ರೆಯ ಖರ್ಚು ವೆಚ್ಚಕ್ಕಾಗಿ ಹಣವನ್ನು ಭಕ್ತಾದಿಗಳಿಂದ ಸಂಗ್ರಹಿಸುವ ಪರಿಪಾಠವಿದೆ. ಇಲ್ಲೆಲ್ಲ ಸಾಮರಸ್ಯದ ಸಹಭಾಗಿತ್ವವಿದೆ.

ಗ್ರಾಮದಲ್ಲಿ ಹಿರಿಯರೂ, ಮುಖಂಡರೂ ಸತ್ತಾಗ ಅವರ ಶವಗಳನ್ನು ಊರಿನಲ್ಲಿ ಮೆರವಣಿಗೆ ಮಾಡುವಾಗ, ಶವವನ್ನು ಸಂಬಂಧಿಸಿದವರ ಹೊಲ, ತೋಟಗಳಲ್ಲಿ ಹೂಳಲು ಕೊಂಡೊಯ್ಯುವಾಗ ಅವರ ಸ್ತುತಿ ಪಠನ ನಡೆಯುತ್ತದೆ. ಹಬ್ಬ ಹರಿದಿನಗಳ ಸಂದರ್ಭದಲ್ಲಿ ಗ್ರಾಮದೇವತೆಯ ಮೆರವಣಿಗೆ ನಡೆಯುತ್ತದೆ. ಊರಿನ ಬೀದಿಗಳಲ್ಲಿ ಊರಾಡಿಸಿ ಊರಿನ ಮಧ್ಯದ ರಂಗದ ಕಲ್ಲಿನ ಮೇಲೆ ಕೂರಿಸಿ ದೈವದ ಸ್ತುತಿ ಮಾಡುತ್ತಾರೆ.

ಕೃಷಿ ಇಲ್ಲಿನ ಪ್ರಧಾನ ಆರ್ಥಿಕ ಚಟುವಟಿಕೆಯಾಗಿದೆ. ಸಕ್ಕರೆ ಮತ್ತು ತೆಂಗಿನಕಾಯಿ ಇಲ್ಲಿನ ಪ್ರಧಾನ ವಾಣಿಜ್ಯ ಬೆಳೆಗಳಾಗಿವೆ. ಇದರ ಜೊತೆಗೆ ರಾಗಿ, ಆಲೂಗಡ್ಡೆ, ಸೂರ್ಯಕಾಂತಿ ಹಾಗೂ ಭತ್ತ ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ. ಜೊತೆಗೆ ಚನ್ನರಾಯಪಟ್ಟಣ ತಾಲ್ಲೂಕು ಕ್ರೋಮೈಟ್ ಮೊದಲಾದ ಖನಿಜ ಸಂಪನ್ಮೂಲಗಳನ್ನು ಸಹ ಒಳಗೊಂಡಿದೆ.

ಕರ್ನಾಟಕ ಹಾಗೂ ಭಾರತದ ಪ್ರತಿಯೊಂದು ಹಳ್ಳಿ, ಗ್ರಾಮದ ಮೇಲೆ ಜಾತಿ ಪದ್ಧತಿಯು ಪ್ರಭಾವ ಬೀರಿರುವಂತೆ, ಚನ್ನರಾಯಪಟ್ಟಣ ತಾಲ್ಲೂಕಿನ ವಿವಿಧ ಕ್ಷೇತ್ರಗಳ ಮೇಲೆ ಪ್ರಭಾವ ಬೀರಿದೆ. ಅವರ ಜನವಸತಿ, ಸಂಸ್ಕೃತಿ, ಊಟೋಪಚಾರ, ಜೀವನ ಕ್ರಮ, ಉಡುಗೆ ತೊಡುಗೆ ಮೊದಲಾದ ಅಂಶಗಳಲ್ಲಿ ಭಿನ್ನತೆಗಳು ಕಂಡುಬರುವುದು ತಿಳಿಯುತ್ತದೆ. ಇಲ್ಲಿ ಮೇಲ್ಜಾತಿ, ಅನುಕೂಲವಂತರು, ಅನ್ಯ ಧರ್ಮೀಯರು, ಕೆಳವರ್ಗದ ಸಮುದಾಯದವರೆಲ್ಲರು ಬದುಕನ್ನು ಸಾಗಿಸುತ್ತಿರುವುದು ಕಂಡುಬರುತ್ತದೆ. ಇಲ್ಲಿ ಇತರ ಹಳ್ಳಿಗಳಲ್ಲಿ ಇರುವಂತೆಯೇ ಜಾತಿಯ ಏಣಿ ಶ್ರೇಣಿಗಳಿವೆ.

ಹಾಸನ ಜಿಲ್ಲೆಯಲ್ಲಿ ಕಂಡುಬರುವಂತೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿಯು ಸಹ ಹೆಚ್ಚಿನ ಸಂಖ್ಯೆಯಲ್ಲಿ ಹಿಂದೂಗಳು ಹಾಗೂ ಉಳಿದಂತೆ ಮುಸ್ಲಿಂರು, ಕ್ರೈಸ್ತರು, ಜೈನರು ವಾಸಿಸುತ್ತಿದ್ದಾರೆ. ಇವರು ಅನೂಚಾನವಾಗಿ ತಾವು ನಡೆಸಿಕೊಂಡು ಬಂದಿರುವ ಆಚಾರ–ವಿಚಾರ, ಧರ್ಮ, ಸಂಪ್ರದಾಯ, ಜೀವನ ಪದ್ಧತಿಗಳ ಪರಂಪರೆಯನ್ನು ಮುನ್ನೆಡೆಸಿಕೊಂಡು ಸಾಗಿದ್ದಾರೆ. ಇಲ್ಲಿ ಸಮಾಜ ಜೀವನಕ್ಕೆ ತಮ್ಮದೇ ಆದ ರೀತಿಯ ಕಾಣಿಕೆಗಳನ್ನು ನೀಡುತ್ತ ಬಂದಿರುವ ಜೈನರನ್ನೂ ಕಾಣಬಹುದು. ಕಲೆ, ವಾಸ್ತುಶಿಲ್ಪ, ಸಂಸ್ಕೃತಿಯ ಅವಿಸ್ಮರಣೀಯ ಕೊಡುಗೆಗಳು ಇವರದ್ದಾಗಿವೆ.

ವ್ಯಾಪಾರವೇ ಇಲ್ಲಿನ ಜನರ ಮುಖ್ಯ ಕಸುಬಾಗಿದ್ದು, ಧರ್ಮಸಾಮರಸ್ಯ ಹಾಗೂ ಸಹಬಾಳ್ವೆಯ ಜೀವನ ಇವರದ್ದಾಗಿದೆ. ಬಹುಪಾಲು ಹಳ್ಳಿಗರ ವೃತ್ತಿ ಬೇಸಾಯವಾಗಿದ್ದು, ಇದರ ಜೊತೆಗೆ ಪಶುಪಾಲನೆ, ಹಂದಿ, ಕುರಿ, ಕೋಳಿ ಸಾಕಣೆಗಳನ್ನು ಮಾಡುತ್ತಿದ್ದಾರೆ. ಗ್ರಾಮಸ್ಥರಲ್ಲಿ ಪರಸ್ಪರ ಸಹಕಾರ, ಸಹಬಾಳ್ವೆಯ ಮನೋಭಾವವಿದ್ದು, ಆದರ್ಶದ ಬದುಕುಗಳನ್ನು ಕಾಣಲು ಅವಕಾಶಗಳಿವೆ. ಇಲ್ಲಿನ ಕುಟುಂಬ ವ್ಯವಸ್ಥೆ ಗ್ರಾಮೀಣ ಜನಜೀವನದ ತಳಹದಿಯ ಮೇಲೆ ನಿಂತಿದ್ದು, ದೈವ ಭಕ್ತಿ, ಪ್ರಾಮಾಣಿಕತೆ, ಗುರು ಹಿರಿಯರಲ್ಲಿ ವಿಧೇಯತೆ, ನೀತಿಯುತ ಜೀವನ ವಿಧಾನಗಳು ಇವರದ್ದಾಗಿವೆ.

ಜೊತೆಗೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ವೀರಶೈವ, ಬೌದ್ಧ ಮೊದಲಾದ ಧರ್ಮದ ಜನರಿದ್ದಾರೆ. ಇವೆಲ್ಲವು ತಮ್ಮದೇ ಆದ ನಡೆ–ನುಡಿ, ರೂಢಿ ಸಂಪ್ರದಾಯಗಳನ್ನು ಅನುಸರಿಸಿಕೊಂಡು ಬಂದಿವೆ. ಇಲ್ಲಿನ ಜನ ಜೀವನವನ್ನು ಗಮನಿಸಿದರೆ ಒಂದೇ ರೀತಿಯ ಉಡುಗೆ, ತೊಡುಗೆ, ಭಾಷೆ ಇದ್ದರೂ ಕೂಡ ಕೆಲವೊಮ್ಮೆ ಧರ್ಮ, ಆಚಾರ, ವಿಚಾರ, ಸಂಸ್ಕೃತಿ ಮೊದಲಾದವುಗಳಲ್ಲಿ ವಿಶಿಷ್ಟತೆಯಿಂದ ಕೂಡಿರುವುದು ಕಂಡುಬರುತ್ತದೆ. ಚನ್ನರಾಯಪಟ್ಟಣ ತಾಲ್ಲೂಕಿನ ಬಹಳಷ್ಟು ಹಳ್ಳಿಗಳು ಅದರಲ್ಲೂ ಬಾಗೂರು, ಶ್ರವಣಬೆಳಗೊಳ, ನುಗ್ಗೇಹಳ್ಳಿ ಮೊದಲಾದ ಹೋಬಳಿಗಳ ಜನರು

ತುಮಕೂರು ಮತ್ತು ಮಂಡ್ಯ ಜಿಲ್ಲೆಗಳ ಜನರ ಸಂಸ್ಕೃತಿಗೆ ಹೆಚ್ಚಿನ ರೀತಿಯಲ್ಲಿ ಹೊಂದಿಕೊಂಡಿರುವುದು ತಿಳಿಯುತ್ತದೆ.

೨.೪. ಸಾಂಸ್ಕೃತಿಕ ಅನನ್ಯತೆ

ಹಲವು ಧರ್ಮ, ಮತ, ಪಂಥಗಳನ್ನು ಒಳಗೊಂಡ ಜನರಿರುವ ಚನ್ನರಾಯಪಟ್ಟಣ ತಾಲ್ಲೂಕು ತನ್ನದೇ ಆದ ಸಾಂಸ್ಕೃತಿಕ ಅನನ್ಯತೆ ಹಾಗೂ ಅಸ್ಮಿತೆಯನ್ನು ಒಳಗೊಂಡಿದೆ. ಆ ಮೂಲಕ ಕರ್ನಾಟಕದ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಅದ್ಭುತ ಕಲಾ ಪರಿಸರವನ್ನು ಹೊಂದುವ ಮೂಲಕ ಪ್ರವಾಸಿಗರ ಪ್ರೇಕ್ಷಣೀಯ ಸ್ಥಳವೂ ಆಗಿದ್ದು, ಸಂಸ್ಕೃತಿಯ ಹೆಗ್ಗುರುತಾಗಿದೆ. ಸಾಂಸ್ಕೃತಿಕವಾಗಿ ಭಿನ್ನ ಸಂಪ್ರದಾಯಗಳ ವ್ಯಕ್ತಿಗಳು ಜೀವಿಸಿದ್ದರೂ ಏಕ ಮನೋಭಾವ ಹಾಗೂ ಸಹಬಾಳ್ವೆಯ ಸಂಸ್ಕೃತಿ ಇಲ್ಲಿನದಾಗಿದೆ. ಕಲೆ, ಸಂಗೀತ, ನಾಟಕ, ಚಿತ್ರಕಲೆ, ಸಾಹಿತ್ಯ ಮೊದಲಾದ ಕ್ಷೇತ್ರಗಳ ವ್ಯಕ್ತಿಗಳು ಇಲ್ಲಿದ್ದು, ಇಲ್ಲಿನ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ತಮ್ಮದೇ ಆದ ಹಬ್ಬ-ಹರಿದಿನ, ದೈವಗಳ ಆರಾಧನೆ, ಧಾರ್ಮಿಕ ಚಟುವಟಿಕೆಗಳಿಗೆ ಅವಕಾಶವಿದ್ದು, ಸಾಂಘಿಕ ಜೀವನ ಸಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕು ಚಾರಿತ್ರಿಕವಾಗಿ ಪ್ರಾಚೀನ ಇತಿಹಾಸವನ್ನು ಹೊಂದಿರುವಂತಹದ್ದು. ಇದು ತನ್ನ ಹೆಸರಿನಲ್ಲಿಯೇ ಪಟ್ಟಣದ ಸಾಂಸ್ಕೃತಿಕ ವೈಭವವನ್ನು ಮೈಗೂಡಿಸಿಕೊಂಡಿರುವ ಸಾಂಸ್ಕೃತಿಕ ಸಮೃದ್ಧಿಯ ಪ್ರದೇಶವಾಗಿದೆ. ಸಂಸ್ಕೃತಿ ಹಾಗೂ ಜಾನಪದೀಯತೆಯಿಂದ ಸಮೃದ್ಧವಾಗಿರುವ ಚೆನ್ನರಾಯಪಟ್ಟಣ ಹಲವು ಧರ್ಮ, ಜಾತಿಯವರ ಧಾರ್ಮಿಕ ನಂಬಿಕೆ, ಚಟುವಟಿಕೆಗಳಿಂದ ಕೂಡಿರುವಂತಹದ್ದು. ಸದಾ ಆಧ್ಯಾತ್ಮಿಕವಾದ ಚೈತನ್ಯವನ್ನು ಪಡೆಯುವ ನಗರವಾಗಿ, ಎಲ್ಲ ಜನರ ಬದುಕಿನ ನಂಬಿಕೆಗಳಿಗೆ ಪ್ರಾಮುಖ್ಯತೆಯನ್ನು ನೀಡಿದೆ.

ಹಲವು ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟು, ರಾಜರ ಸಾಮ್ರಾಜ್ಯದ ಭಾಗವಾಗಿ, ಆರ್ಥಿಕತೆಯ ಮುಖ್ಯ ನೆಲೆಯಾಗಿ, ಈ ತಾಲ್ಲೂಕು ಬೆಳೆದು ನಿಂತಿದೆ. ಜೊತೆಗೆ ಧಾರ್ಮಿಕತೆಯ ಚೈತನ್ಯದ ಸೆಲೆಯಾಗಿ, ಹಲವು ಕಲೆ, ವಾಸ್ತು ಶಿಲ್ಪಗಳ ಸ್ಮಾರಕಗಳ ತಾಣವಾಗಿ ತನ್ನ ಜನಪ್ರಿಯತೆಯನ್ನು ಗಳಿಸಿಕೊಂಡಿದೆ.

ಚನ್ನರಾಯಪಟ್ಟಣ ತಾಲ್ಲೂಕು ಆರಂಭದ ದಿನಗಳಲ್ಲಿ ಒಂದು ಸೀಮಿತವಾದ ಸಂಸ್ಕೃತಿಯನ್ನು ಪ್ರತಿನಿಧಿಸುವ ಉದ್ದೇಶದಿಂದ ನಿರ್ಮಾಣವಾದ ನಗರವಾದರೂ, ನಂತರದ ದಿನಗಳಲ್ಲಿ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಹಲವು ಸಂಸ್ಕೃತಿಯ ಜನರ ಜೀವನ ವಿಧಾನ, ಬದುಕಿನ ಕ್ರಮಗಳನ್ನು ಅಪ್ಪಿಕೊಳ್ಳುತ್ತ, ಒಪ್ಪಿಕೊಳ್ಳುತ್ತ ಸಾಂಘಿಕ ಜೀವನದತ್ತ ಹೆಜ್ಜೆ ಹಾಕಿದೆ. ಇಲ್ಲಿ ಕರ್ನಾಟಕದ ಎಲ್ಲ ಧರ್ಮ, ಜಾತಿ, ಮತ, ಪಂಥಗಳ ಸಂಸ್ಕೃತಿಯನ್ನು ನೋಡಬಹುದಾಗಿದ್ದು, ಧರ್ಮ ಸಮನ್ವಯ ಮನೋಭಾವದ ದೃಷ್ಟಿ ಕಂಡುಬರುತ್ತದೆ.

ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಪ್ರಾಚೀನತೆಯನ್ನು ಕುರಿತು ಮಾತನಾಡುವಾಗ ಚನ್ನರಾಯಪಟ್ಟಣ ತಾಲ್ಲೂಕಿನ ಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ಮುಖ್ಯ ಆಕರಗಳಾಗಿ ನಿಲ್ಲುತ್ತವೆ. "ಶ್ರವಣಬೆಳಗೊಳ, ಭರತೂರು, ಶಾಂತಿಗ್ರಾಮ, ಬೇಲೂರು, ಚನ್ನರಾಯಪಟ್ಟಣ ಮುಂತಾದೆಡೆ ಕಂಡುಬಂದ ಶಾಸನಗಳು ಪ್ರಾದೇಶಿಕತೆಯನ್ನು ಮೀರಿ ಒಟ್ಟಾರೆ ಕನ್ನಡ ಸಂಸ್ಕೃತಿಗೆ ನೀಡಿದ ಕಾಣಿಕೆಗಳೇ ಆಗಿವೆ. ಶ್ರವಣಬೆಳಗೊಳದ (೮೫ನೇ ಶಾಸನ) ಶಾಸನದಲ್ಲಿ ಬೊಪ್ಪಣ್ಣ ಪಂಡಿತ ಎಂಬ ಕವಿ ೨೭ ವೃತ್ತಗಳಲ್ಲಿ ಗೊಮ್ಮಟನನ್ನು ಸ್ತುತಿಸಿದ್ದಾನೆ. ಕಲ್ಲಿನ ಮೇಲೆ ಬರೆದ ಏಕೈಕ ಕನ್ನಡ ಕಾವ್ಯ ಎಂಬ ಹೆಗ್ಗಳಿಕೆ ಪ್ರಸ್ತುತ ಕೃತಿಗಿದೆ"[೬] ಎಂಬ ಮಾತುಗಳು ಚನ್ನರಾಯಪಟ್ಟಣ ತಾಲ್ಲೂಕು ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಕೊಟ್ಟಿರುವ ಕೊಡುಗೆಗಳಿಗೆ ಸಾಕ್ಷಿಯಾಗುವ ಮೂಲಕ ಅಲ್ಲಿನ ಸಾಂಸ್ಕೃತಿಕ ಅನನ್ಯತೆಯನ್ನು ಪರಿಚಯಿಸುತ್ತವೆ. ಅಲ್ಲದೆ ಶ್ರವಣಬೆಳಗೊಳದ ಸ್ಥಾನಿಕ ಚನ್ನಪ್ಪಯ್ಯನ ಪುತ್ರನಾದ 'ಪಂಚಬಾಣ' ಎಂಬ ಕವಿ ಸಾಂಗತ್ಯದಲ್ಲಿ 'ಭುಜಬಲಿ ಚರಿತೆ' ಎಂಬ ಕೃತಿಯನ್ನು ಹಾಗೂ ಕೆಲವು ಹಾಡುಗಳನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಶ್ರವಣಬೆಳಗೊಳದ ಗೊಮ್ಮಟೇಶ ಈ ಕೃತಿಯ ಮುಖ್ಯ ವಸ್ತುವಾಗಿದೆ. ಜೊತೆಗೆ ಶ್ರವಣಬೆಳಗೊಳದ ಗೊಮ್ಮಟನನ್ನು ವಸ್ತುವಾಗಿಟ್ಟುಕೊಂಡು ರಚಿತವಾದ ಹಲವು ಕಾವ್ಯಗಳಲ್ಲಿ ಇದು ಗಮನಾರ್ಹವಾದುದು. ಇದರಲ್ಲಿ ಕವಿಯು ತಾನು ಮಹಾ ಮಸ್ತಕಾಭಿಷೇಕವನ್ನು ಕಂಡ ಕ್ಷಣಗಳನ್ನು ಹಚ್ಚ ಹಸಿರಾಗಿ ದಾಖಲಿಸಿದ್ದಾನೆ.

ಇದಲ್ಲದೆ ಆಧುನಿಕ ಸಂದರ್ಭದಲ್ಲಿಯೂ ಸಹ ಸಾಹಿತ್ಯ ಹಾಗೂ ಸ್ವಾತಂತ್ರ್ಯ ಹೋರಾಟಗಳಂತಹ ಕ್ಷೇತ್ರಗಳಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ಅನೇಕ ಮಹನೀಯರು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕಂಡುಬರುತ್ತಾರೆ. ಕನ್ನಡದ ಖ್ಯಾತ ಕಾದಂಬರಿಕಾರರೆನಿಸಿದ ಡಾ.ಎಸ್.ಎಲ್.ಭೈರಪ್ಪನವರು ಚನ್ನರಾಯಪಟ್ಟಣ ತಾಲ್ಲೂಕಿನ ಸಂತೇಶಿವರದಲ್ಲಿ ಜನಿಸಿದವರು. 'ಪರ್ವ', 'ಉತ್ತರಾಯಣ', 'ಯಾನ', 'ವಂಶವೃಕ್ಷ', 'ತಬ್ಬಲಿಯು ನೀನಾದೆ ಮಗನೆ', 'ದಾಟು' ಮೊದಲಾದವು ಇವರ ಪ್ರಮುಖ ಕಾದಂಬರಿಗಳಾಗಿವೆ. ಹಾಸನ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಗೌರವ ಪಡೆದ ಜೆ.ಆರ್.ನಂಜೇಗೌಡರು ಚನ್ನರಾಯಪಟ್ಟಣ ತಾಲ್ಲೂಕಿನ ಜಿವಾರದಲ್ಲಿ ೧೯೦೩ರಲ್ಲಿ ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಉಪಕುಲಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಇವರು 'ವಿಹಂಗಮ' ಎಂಬ ಕಾವ್ಯ ನಾಮದಿಂದ ಸಾಹಿತ್ಯ ರಚಿಸಿದ್ದು, 'ಅಂತರಂಗ ಬಹಿರಂಗ', 'ಕುವೆಂಪು ಸಾರಸ್ವತಲೋಕ', 'ಕೆರಿಬಿಯನ್ ದ್ವೀಪಗಳಲ್ಲಿ ಆಡಳಿತ ಭಾಷೆ ಕನ್ನಡ' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಡಾ.ನಲ್ಲೂರು ಪ್ರಸಾದ್ ಅವರು ಚನ್ನರಾಯಪಟ್ಟಣ ತಾಲ್ಲೂಕಿನ ನಲ್ಲೂರಿನವರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿಯೂ ಸಹ ಚನ್ನರಾಯಪಟ್ಟಣ ತಾಲ್ಲೂಕು ವಿಶೇಷವಾದ ಕೊಡುಗೆಯನ್ನು ನೀಡಿದೆ. ಈ ತಾಲ್ಲೂಕಿನ "ಆನೆಕೆರೆ ಕೃಷ್ಣಮೂರ್ತಿ, ಸಂಜೀವಯ್ಯ, ಸಂಜೀವಶೆಟ್ಟಿ, ಕೆ.ಎನ್.ಬಾಳೇಗೌಡ, ಬಸವಯ್ಯ, ಬೋರಯ್ಯ, ಹಿರಿಸಾವೆ ಬೋರಯ್ಯ, ಬೋರೇಗೌಡ, ದಮ್ಮನಿಂಗಲ ಬೋರೇಗೌಡ, ಹೊನ್ನಮಾರನಹಳ್ಳಿ ಬೋರೇಗೌಡ, ಚಂದ್ರೇಗೌಡ, ಡಿ.ಗೋವಿಂದದಾಸ್, ಚನ್ನಯ್ಯ,

ದೊಡ್ಡೇಗೌಡ, ಎಂ.ಪಿ.ದೊಡ್ಡಲಕ್ಕಪ್ಪ, ಗೋವಿಂದಯ್ಯ, ಗೌಡಯ್ಯ, ಹಗರಿಗೌಡ, ಅಣ್ಣೇಗೌಡ, ಬಳದಾರಗೌಡ, ಹಲಗೇಗೌಡ, ಹನುಮಯ್ಯ, ಹನುಮೇಗೌಡ, ಹುಚ್ಚೇಗೌಡ, ಜವರೇಗೌಡ, ಕಾಳಪ್ಪ, ಕಾಳೇಗೌಡ, ಕಪನಿಗೌಡ, ಕರಿಯಯ್ಯ, ಕರಿಯಪ್ಪ, ಕೃಷ್ಣಪ್ಪ, ಲಕ್ಷ್ಮಣ, ಲಕ್ಕಪ್ಪ, ಲಕ್ಕೇಗೌಡ, ಕೆಂಚಪ್ಪ, ಲಕ್ಷ್ಮಯ್ಯ, ಮರಿಗೌಡ, ನಂಜಯ್ಯ, ಬೆಕ್ಕದ ನಂಜಯ್ಯ, ಅರುವನಳ್ಳಿ ನಂಜೇಗೌಡ, ಕಾಂತರಾಜಪುರದ ನಂಜಯ್ಯ, ಬೂಕನಹಳ್ಳಿ ನಂಜಯ್ಯ, ಜಿನ್ನೇನಹಳ್ಳಿ ನಂಜಪ್ಪ, ತಮ್ಮಯ್ಯ, ಕಾಂತರಾಜಪುರದ ನಂಜೇಗೌಡ, ನರಸಣ್ಣ, ನಿಂಗಯ್ಯ, ಪಾಪಯ್ಯ, ಪುಟ್ಟ ಲಕ್ಕೇಗೌಡ, ಪುಟ್ಟಸ್ವಾಮಿ, ಹೆಚ್.ಜಿ.ರಾಧಾಕೃಷ್ಣ, ಸಿ.ವಿ.ರಾಜಗೋಪಾಲ್, ಸಿ.ವಿ.ರಾಮಕೃಷ್ಣಶೆಟ್ಟಿ, ರಾಮಲಿಂಗಯ್ಯ, ರಾಮಯ್ಯ, ರಂಗೇಗೌಡ, ಸಂಜೀವೇಗೌಡ, ಸಣ್ಣ ನಂಜಪ್ಪ, ಶಿವಯ್ಯ, ಬರಾಳು ಶಿವವ್ವ, ಶಿವನಂಜಪ್ಪ, ಶಿವಪ್ಪ, ಸಿದ್ಧಯ್ಯ, ಸಿಂಗ್ರೀಗೌಡ, ಸೋಮೇಗೌಡ, ವೀರಭದ್ರಯ್ಯ, ಭೋಜಪ್ಪ, ಬಿ.ಎನ್.ಬೋರಯ್ಯ, ಬೋರಯ್ಯ, ಎಸ್.ಎನ್.ಸಣ್ಣಪ್ಪ, ರಂಗೇಗೌಡ, ಸಣ್ಣ ನಂಜಪ್ಪ, ಶಿವೇಗೌಡ, ಶಿವನಂಜಪ್ಪ, ಬಿ.ಎಲ್.ತಿಮ್ಮೇಗೌಡ, ಹೆಚ್.ಕೆ.ಕೃಷ್ಣಮೂರ್ತಿ”[೭] ಮೊದಲಾದವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ತಾಲ್ಲೂಕಿಗೆ ಗೌರವವನ್ನು ತಂದುಕೊಟ್ಟಿದ್ದಾರೆ.

ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ನಂದಿ ಧ್ವಜ ಕುಣಿತದ ಕಲೆಯನ್ನು ಕಾಣಬಹುದು. ಕಚ್ಚೆಪಂಚೆ, ಕಸೆಯಂಗಿ, ತಲೆಗೆ ರುಮಾಲು, ಹಣೆಗೆ ವಿಭೂತಿ ಬಳಿದುಕೊಂಡು ನಂದಿ ಧ್ವಜವನ್ನು ಹೊತ್ತು ಕುಣಿಸಲಾಗುತ್ತದೆ. ಈ ನಂದಿ ಧ್ವಜಕ್ಕೆ 'ನಂದಿ ಕೋಲು', 'ನಂದೀ ಕಂಬ' ಎಂಬ ಇತರ ಹೆಸರುಗಳೂ ಇವೆ. ಇದರ ಜೊತೆಗೆ ಕೋಲಾಟ, ತೊಗಲು ಗೊಂಬೆಯಾಟ, ಕರಪಾಲ ಮೇಳ, ಸೂತ್ರದ ಬೊಂಬೆಯಾಟ ಮೊದಲಾದ ಜನಪದ ಪ್ರದರ್ಶನ ಕಲೆಗಳು ಸಹ ಕಂಡುಬರುತ್ತವೆ.

ಹಾಸನ ಜಿಲ್ಲೆಯಂತೆಯೇ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿಯೂ ಸ್ತ್ರೀಯರಿಗೆ ಸನ್ಯಾಸಿನಿಯರಾಗಿ ಬದುಕಲು ಅವಕಾಶಗಳಿದ್ದವು. ಜೊತೆಗೆ ಅವರು ಸಹ ದೇವಾಲಯ, ಬಸದಿ, ಕೆರೆ, ಕಟ್ಟೆ ಮುಂತಾದವುಗಳನ್ನು ಕಟ್ಟಿಸಿ ಅವುಗಳಿಗೆ ದಾನ ದತ್ತಿಗಳನ್ನು ನೀಡಲು ಮುಕ್ತ ಅವಕಾಶ ಮತ್ತು ಸ್ವಾತಂತ್ರ್ಯಗಳಿದ್ದದ್ದು ತಿಳಿದುಬರುತ್ತದೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳು ಹಾಗೂ ಪುರಾತತ್ವ ಆಧಾರಗಳಿಂದ ಜನ ಸಾಮಾನ್ಯರ ರಕ್ಷಣೆ ಮತ್ತು ನೆಮ್ಮದಿಯುತ ಜೀವನಕ್ಕೆ ಆದ್ಯತೆ ನೀಡಿದ್ದ ವಿವರಗಳು ತಿಳಿಯುತ್ತವೆ. ಅಲ್ಲದೆ ರಾಜ್ಯದೊಳಗೆ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ಎಲ್ಲರೂ ನಿರಂತರವಾಗಿ ಶ್ರಮಿಸುತ್ತಿದ್ದರು ಎಂಬ ವಿವರಗಳು ಸಹ ಇಲ್ಲಿನ ಶಾಸನ ಮತ್ತು ಪುರಾತತ್ವ ಆಧಾರಗಳಿಂದ ಸ್ಪಷ್ಟವಾಗುತ್ತವೆ.

ಜನರ ಒಳಿತಿಗಾಗಿ ಕೆರೆ ಕಟ್ಟೆಗಳನ್ನು ನಿರ್ಮಿಸಿ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಡಲಾಗಿದೆ. ಭೂಮಿ ಹಾಗೂ ಗ್ರಾಮಗಳನ್ನು ದತ್ತಿ ನೀಡಲಾಗಿದೆ. ದಾನ, ದತ್ತಿಗಳನ್ನು ನೀಡಿ ತೆರಿಗೆಗಳಿಂದ ವಿನಾಯ್ತಿ ನೀಡಿರುವ ಸಂಗತಿಗಳು ಕಂಡುಬರುತ್ತವೆ. ಎಲ್ಲ ಧರ್ಮದವರಿಗೂ ವಾಸಿಸಲು ಉತ್ತಮ ವಾತಾವರಣವನ್ನು ಕಲ್ಪಿಸಿಕೊಟ್ಟಿರುವ ವಿಚಾರಗಳು ಈ ಪ್ರದೇಶದ ಸಾಂಸ್ಕೃತಿಕ ಅನನ್ಯತೆಗೆ ವಿಶೇಷ ಮೆರುಗನ್ನು ನೀಡಿವೆ.

೨.೫. ಧಾರ್ಮಿಕತೆ

ಚನ್ನರಾಯಪಟ್ಟಣ ತಾಲ್ಲೂಕು ಹಲವು ಧರ್ಮ, ಜನಾಂಗ, ಸಂಸ್ಕೃತಿಯ ಜನರು ವಾಸಿಸುತ್ತಿರುವ ಪ್ರದೇಶ. ಇಲ್ಲಿ ಹಿಂದೂ, ಮುಸ್ಲಿಂ, ಜೈನ ಮೊದಲಾದ ಧರ್ಮಗಳ ಜನರು ವಾಸವಿದ್ದು, ಧಾರ್ಮಿಕ ಸಾಮರಸ್ಯವನ್ನು ಕಾಣಬಹುದು. ಇದರ ನಡುವೆ ಅನೇಕ ರೀತಿಯ ಜಾತಿ, ಕೋಮು ಹಾಗೂ ಧಾರ್ಮಿಕ ಸಂಘರ್ಷಗಳೂ ಇವೆ. ವಿವಿಧ ಮತ, ಪಂಥ, ಜನಾಂಗಗಳ ಜನರಿದ್ದಾಗ್ಯೂ ತಮ್ಮದೇ ಆದ ಧರ್ಮ, ಸಂಸ್ಕೃತಿಯನ್ನು ಆಚರಿಸಿಕೊಂಡು ಮುಂದುವರೆಸಲು ಇಲ್ಲಿ ಅವಕಾಶಗಳಿವೆ. ಧಾರ್ಮಿಕವಾಗಿ ಮುಕ್ತ ಅವಕಾಶಗಳಿದ್ದು, ಇಲ್ಲಿನ ಜನತೆ ಸಮಾನ ಮನಸ್ಕರಾಗಿದ್ದು, ಸಾಮಾಜಿಕವಾಗಿ ಅಭಿವೃದ್ಧಿ ಹೊಂದುವಂತಹ ವಾತಾವರಣ ಹಾಗೂ ಮನಸ್ಥಿತಿ ಇಲ್ಲಿನದಾಗಿದೆ.

ಧಾರ್ಮಿಕ ಸಾಮರಸ್ಯವಿದ್ದ ಕಾರಣವಾಗಿ ಈ ತಾಲ್ಲೂಕಿಗೆ ಕೇರಳ, ತಮಿಳುನಾಡು, ಉತ್ತರ ಕರ್ನಾಟಕ ಮೊದಲಾದ ಸ್ಥಳಗಳಿಂದ ಹಲವು ವ್ಯಾಪಾರಿ ಗುಂಪುಗಳು ಬಂದು, ತಮ್ಮ ವ್ಯಾಪಾರ ವಹಿವಾಟುಗಳನ್ನು ಮುಗಿಸಿಕೊಂಡು ಹಿಂದಿರುಗುತ್ತಿದ್ದರು. ಈ ರೀತಿಯಾಗಿ ಬಂದವರಲ್ಲಿ ಕೆಲವರು ಇಲ್ಲಿಯೇ ನೆಲಸಿರುವುದು ಕೆಲವು ಶಾಸನಗಳಿಂದ ತಿಳಿದುಬರುತ್ತದೆ. ಇವರು ವಸಾಹತುಗಳನ್ನು ಸ್ಥಾಪಿಸಿಕೊಂಡು ತಮ್ಮ ಜೀವನವನ್ನು ಸಾಗಿಸಿದವರು. ಅವರಲ್ಲಿ ಕೇರಳದ ಮಲೆಯಾಳಿಗಳು ಪ್ರಮುಖರು. ಇವರು ಅರಸೀಕೆರೆ ತಾಲ್ಲೂಕಿನ ಬೆಂಡೆಯ ಕೆರೆ, ಮುತ್ತನ ಹೊಸವೂರು, ಶಂಕರನಹಳ್ಳಿ ಮೊದಲಾದ ಕಡೆ ವಸಾಹತುಗಳನ್ನು ಸ್ಥಾಪಿಸಿ ಬದುಕಿದರು. ಇವರಿಗೆ ಹೊಯ್ಸಳ ದೊರೆಗಳು ಪ್ರೇರಕರಾಗಿ ನಿಂತದ್ದು ಶಾಸನಗಳಿಂದ ತಿಳಿದುಬರುತ್ತದೆ. ಇದರ ಜೊತೆಗೆ ಮುತ್ತನ ಹೊಸವೂರಿಗೆ ಪಾಂಡ್ಯ ನಾಡಿನಿಂದ ಅನೇಕರು ಬಂದು ನೆಲೆಸಿದ್ದು ತಿಳಿಯುತ್ತದೆ. ಈ ರೀತಿಯಾಗಿ ಬಂದು ನೆಲೆಸಿದ ಅನ್ಯ ಧರ್ಮದ ಜನರಿಗೆ ಇಲ್ಲಿನ ರಾಜರ ಆಶ್ರಯದೊಂದಿಗೆ, ಜನರ ಸಹಬಾಳ್ವೆಯೂ ಸಿಕ್ಕಿರುವುದನ್ನು ಕಾಣಬಹುದು. ಇಲ್ಲಿ ರಾಜರು ಧಾರ್ಮಿಕ ಸಾಮರಸ್ಯಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವುದು ಇಲ್ಲಿ ದೊರೆತ ಹಲವು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಜೈನರಿಗೆ ಹಾಗೂ ವೈಷ್ಣವರಿಗೆ ನಡೆದ ಧಾರ್ಮಿಕ ಕಲಹ ಹಾಗೂ ಅದನ್ನು ಖುದ್ದು ಬುಕ್ಕ ಮಹಾರಾಜನೆ ನಿಂತು ಬಗೆಹರಿಸಿದ ಸಂಗತಿ ಬಹು ಪ್ರಮುಖವಾದುದು. ಜೊತೆಗೆ ಧಾರ್ಮಿಕ ಸಾಮರಸ್ಯ ಹಾಗೂ ಧರ್ಮ ಸಮನ್ವಯದ ದೃಷ್ಟಿಯಿಂದ ಈ ಸಂಗತಿಯು ಗಮನಿಸತಕ್ಕ ಚಾರಿತ್ರಿಕ ಸಂಗತಿಯಾಗಿದೆ. ಏಕೆಂದರೆ ರಾಜನಾದವನು ಯಾವುದೋ ಒಂದು ಕೋಮನ್ನೋ, ಧರ್ಮವನ್ನೋ ಓಲೈಸದೇ ಎಲ್ಲ ಧರ್ಮದವರನ್ನೂ ಏಕ ದೃಷ್ಟಿಯಿಂದ ಕಾಣುತ್ತ ಅವರಲ್ಲಿ ಧಾರ್ಮಿಕ ಕಲಹಗಳಾಗದಂತೆ ಎಚ್ಚರಿಸುವ ಮನಸ್ಥಿತಿಗಳು ಉತ್ತಮವಾದವು. ಅಲ್ಲದೆ ಈ ಗುಣಗಳು ಉತ್ತಮ ಆಡಳಿತದ ಚಾಕಚಕ್ಯತೆಗಳ ಜೊತೆಗೆ ಧಾರ್ಮಿಕ ಸಾಮರಸ್ಯವನ್ನು ಬಯಸುವ ಮನೋಭಾವವನ್ನೂ ತಿಳಿಸಿಕೊಡುತ್ತದೆ. ಈ ಕಾರಣವಾಗಿ ಧರ್ಮ ಸಮನ್ವಯ ಮತ್ತು ಸಾಮರಸ್ಯವನ್ನು ಮೆರೆದ ಬುಕ್ಕನ ಧರ್ಮ ಸಮನ್ವಯ ಗುಣ ಹಾಗೂ ಸೌಹಾರ್ದತೆಯ ವಿಚಾರಗಳನ್ನು ತಿಳಿಸುವ ಶ್ರವಣ ಬೆಳಗೊಳ ಶಾಸನವು ಇದಕ್ಕೆ

ಸಾಕ್ಷಿಯಾಗಿದೆ. ಎಲ್ಲ ಧರ್ಮದವರನ್ನು ಪ್ರೀತಿ ವಾತ್ಸಲ್ಯದಿಂದ ಕಾಣುವ ಮನಸ್ಸು ಅಂದಿನ ರಾಜರಲ್ಲಿದ್ದುದು ಇದರಿಂದ ಸ್ಪಷ್ಟವಾಗುತ್ತದೆ.

ಚನ್ನರಾಯಪಟ್ಟಣ ತಾಲ್ಲೂಕು ಹಲವು ಧರ್ಮಗಳ ತವರೂರು. ಇಲ್ಲಿ ವಿಷ್ಣುವಿನ ಆರಾಧಕರು, ಶೈವ ಧರ್ಮಾನುಯಾಯಿಗಳು, ಬೌದ್ಧ, ಜೈನ, ಒಕ್ಕಲಿನವರು, ಲಿಂಗಾಯಿತ ಶೆಟ್ಟರು ಹಾಗೂ ವೀರಶೈವ ಮತಾವಲಂಬಿಗಳು ತಮ್ಮ ಮೂಲ ಧಾರ್ಮಿಕ ಆಚರಣೆಗಳೊಂದಿಗೆ ಬದುಕುತ್ತಿರುವುದು ಕಂಡುಬರುತ್ತದೆ. ಇಲ್ಲಿ ಎಲ್ಲ ಧರ್ಮದವರು ನೆಮ್ಮದಿಯಿಂದ ಬದುಕಲು ಅವಕಾಶವಿದೆ. ಜೊತೆಗೆ ಇದಕ್ಕೆ ಆಳರಸರ ಆಶ್ರಯವಿದ್ದು, ಅವರ ಜನೋಪಯೋಗಿ ಕಾರ್ಯಗಳು ಸಹ ಇವುಗಳಿಗೆ ಬೆಂಬಲವಾಗಿದ್ದ ಸಂಗತಿಗಳು ತಿಳಿಯುತ್ತವೆ. ಇದಕ್ಕನುಗುಣವಾಗಿ ಇಲ್ಲಿ ಹಲವು ದೇವಾಲಯಗಳನ್ನು ಕಾಣಬಹುದಾಗಿದೆ. ಈ ದೇವಾಲಯಗಳು ಕಲೆ, ವಾಸ್ತುಶಿಲ್ಪ, ಸಂಸ್ಕೃತಿ ಮೊದಲಾದ ಅಂಶಗಳ ಸಾಕಾರ ಮೂರ್ತಿಗಳಾಗಿದ್ದು, ಇಲ್ಲಿನ ಜನ ಜೀವನದ ಬದುಕಿನ ಪ್ರತ್ಯಕ್ಷ ದರ್ಶಿಗಳಾಗಿವೆ. ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಮುಖ ದೇವಾಲಯಗಳನ್ನು ಗಮನಿಸುವುದಾದರೆ

ಚಂದ್ರಶೇಖರಸ್ವಾಮಿ ದೇವಾಲಯ

ಚಂದ್ರಶೇಖರಸ್ವಾಮಿ ದೇವಾಲಯವು ವಿಜಯ ನಗರದ ಕಾಲಘಟ್ಟದಲ್ಲಿ ರಚಿತವಾದ ದೇವಾಲಯವಾಗಿದೆ. ಇದು ಚನ್ನರಾಯಸ್ವಾಮಿ ದೇವಾಲಯದ ಆಗ್ನೇಯ ಭಾಗದಲ್ಲಿ ಕಂಡುಬರುತ್ತದೆ. "ಊರಿನ ಉತ್ತರ ಕೋಟೆಯ ದ್ವಾರದ ಹತ್ತಿರ ಕಲ್ಯಾಣಿ ಇದೆ. ಇದರ ಪಶ್ಚಿಮದಲ್ಲಿರುವ ಗುಡಿಗಳಲ್ಲಿ ಗಣೇಶ, ನಾಗ, ಲಕ್ಷ್ಮೀನಾರಾಯಣ, ಪಾರ್ವತಿ, ಹೊಯ್ಸಳ ಸಿಂಹ ಪೀಠದ ಮೇಲೆ ಒಂದು ಸಣ್ಣ ವಿಗ್ರಹ, ಚಂದ್ರ, ಗರುಡನ ಮೇಲೆ ವಿಷ್ಣು, ಪಾರ್ವತಿ, ಕೋದಂಡರಾಮ, ವಾಮನ, ಅರ್ಜುನನ ತಪಸ್ಸು, ನರಸಿಂಹ, ಶಿವಲಿಂಗ, ಷಣ್ಮುಖ, ನಂದಿ ವಿಗ್ರಹಗಳಿವೆ. ಊರಿನ ಈಶಾನ್ಯದಲ್ಲಿ ಕೆರೆಯ ಹತ್ತಿರ ಬಳಪದ ಕಲ್ಲಿನ ಸಾತೇಶ್ವರ ದೇವಾಲಯವಿದೆ. ಇದರ ನವರಂಗದ ದುಂಡು ಕಂಬಗಳು, ದ್ವಾರದ ಜಾಲಂದ್ರ ಹೊಯ್ಸಳ ಶೈಲಿಯಲ್ಲಿವೆ. ಗರ್ಭಗುಡಿಯ ಲಿಂಗವನ್ನು ಶಾಂತಲೇಶ್ವರ ಎಂದೂ ದಂಡನಾಯಕ ಮಾಚಯ್ಯನ ಹೆಂಡತಿಯಾದ ಸಾತವ್ವೆಯ ಹೆಸರಿನಲ್ಲಿ ಪ್ರತಿಷ್ಠಿತವಾಯಿತೆಂದು ದೇವಾಲಯದ ಆಗ್ನೇಯದಲ್ಲಿರುವ ಶಾಸನದಿಂದ ತಿಳಿದು ಬರುತ್ತದೆ. ನವರಂಗದಲ್ಲಿ ಗಣೇಶ, ನಂದಿ, ಕೇಶವ ವಿಗ್ರಹಗಳಿವೆ. ದ್ವಾರದ ಮುಂದೆ ಇರುವ ಬಳಪದ ಕಲ್ಲಿನ ಮೇಲೆ ಶಿವನ ಪಾದಗಳು, ಸರ್ಪಗಳು, ತಲೆ ಇಲ್ಲದ ಮನುಷ್ಯರು, ಪ್ರಾಣಿಗಳು ಚಿತ್ರಿತವಾಗಿವೆ"[೫] ಎಂಬ ವಿವರಗಳು ತಿಳಿದುಬರುತ್ತವೆ.

ಗದ್ದೆ ರಾಮೇಶ್ವರ ದೇವಾಲಯ

ಗ್ರಾಮದ ಆಗ್ನೇಯ ಭಾಗದಲ್ಲಿ ಗದ್ದೆರಾಮೇಶ್ವರ ಗುಡಿಯು ಕಂಡುಬರುತ್ತದೆ. ಇದು ಹೊಯ್ಸಳ ಶಿಲ್ಪದ ರಚನೆಯಾಗಿದ್ದು, "ಮೆಟ್ಟಿಲು ಮೆಟ್ಟಿಲಾದ ಗೋಪುರ, ಅದರ ಮೇಲೆ ಅಮಲಕ ಮತ್ತು ಕಲಶ, ಇದರ ಮುಂದೆ ಸಳ ವಿಗ್ರಹ, ಬಳಪದ ಕಲ್ಲಿನ ಗೋಡೆಗಳು, ನವರಂಗ, ಸ್ತಂಭಗಳು ಇವೆ. ಮೇಲ್ಛಾವಣಿಯಲ್ಲಿ ಪದ್ಮವಿದೆ. ನವರಂಗದಲ್ಲಿ ಪಾಳೇಯಗಾರರ ಕಾಲದ ನಂದಿ, ಗಣೇಶ, ಷಣ್ಮುಖ,

ಜನಾರ್ಧನ, ಸೂರ್ಯರ ವಿಗ್ರಹಗಳನ್ನು ಇಟ್ಟಿರುವರು. ಸುಕನಾಸಿ ದ್ವಾರದಲ್ಲಿ ಜಾಲಂದ್ರವಿದೆ. ಗರ್ಭಗುಡಿಯ ಲಿಂಗವು ಸಣ್ಣದಾಗಿದೆ. ಹದಿನೇಳನೆಯ ಶತಮಾನದಲ್ಲಿ ಕಣಶಿಲೆಯ ಮುಖ ಮಂಟಪವನ್ನು ನಿರ್ಮಿಸಲಾಗಿದೆ. ಒಂದು ಕಂಬದ ಮೇಲೆ ಕೊಕ್ಕುಗಳಲ್ಲಿ ಆನೆಗಳನ್ನು ಹಿಡಿದಿರುವ ಗಂಡಭೇರುಂಡ ಚಿತ್ರಿತವಾಗಿದೆ. ದೇವಾಲಯದ ಮುಂದಿನ ಅಂಗಳದಲ್ಲಿ ಬಳಪದ ಕಲ್ಲಿನ ಸ್ತಂಭದ ಮೇಲೆ ದ್ವಿಮುಖದ ನಂದಿ ಇದೆ” ಎಂಬ ವಿವರಗಳು ಈ ದೇವಾಲಯದ ಶಿಲ್ಪಕಲಾ ಸೌಂದರ್ಯವನ್ನು ಮನ ಮುಟ್ಟುವಂತೆ ವರ್ಣಿಸುತ್ತವೆ.

ಚನ್ನಕೇಶವ ದೇವಾಲಯ

ಚನ್ನರಾಯಪಟ್ಟಣ ತಾಲ್ಲೂಕಿನ ಮತ್ತೊಂದು ಪ್ರಮುಖ ದೇವಾಲಯವಿದು. “ಈ ದೇವಾಲಯವನ್ನು ಹೊಳೆನರಸೀಪುರದ ಲಕ್ಕಪ್ಪನಾಯಕನ ಮಗ ಚನ್ನರಾಯ ಕಟ್ಟಿಸಿದ್ದಾನೆಂದು ತಿಳಿದರೂ, ಇತ್ತೀಚಿನ ಕೆಲವು ಶಾಸನಗಳ ಪ್ರಕಾರ ಕ್ರಿ.ಶ.೧೬೦೦ ರಲ್ಲಿ ಬರುವ ಚನ್ನರಾಯನಿಗಿಂತಲೂ ಮುಂಚೆಯೇ ಈ ದೇವಾಲಯವನ್ನು ಕಟ್ಟಲ್ಪಟ್ಟಿದೆ ಎಂದು ತಿಳಿದು ಬರುತ್ತದೆ. ಕ್ರಿ.ಶ.೧೪೯೧ ರಲ್ಲಿ ದೇವರಾಜ ಒಡೆಯರ ಸಾಮಂತ ದೊಡ್ಡಯ್ಯನವರ ಮಗ, ಬಸವಯ್ಯನು ಈ ದೇವಾಲಯದ ಮುಂದಿನ ದೀಪಾಲೆ ಕಂಬವನ್ನು ಮಾಡಿಸಿದ್ದಾನೆ. ವಾಸ್ತುಶಿಲ್ಪದ ದೃಷಿಯಿಂದ ಹೊಯ್ಸಳರ ಕಾಲದ ದಂಡನಾಯಕ ಅಮೃತಯ್ಯ ಕಟ್ಟಿಸಿದ ಅಮೃತನಾಥ ದೇವಾಲಯವೂ ಇದು ಆಗಿರಲು ಸಾಧ್ಯತೆಗಳಿವೆ[೧೦] ಎಂಬ ವಿವರಗಳು ಈ ದೇವಾಲಯದ ಇತಿಹಾಸದ ಮೇಲೆ ಬೆಳಕನ್ನು ಚೆಲ್ಲುತ್ತವೆ.

ದಿಂಡಗೂರು

ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಮುಖ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಿದು. ಈ ದಿಂಡಗೂರು ಚನ್ನರಾಯಪಟ್ಟಣಕ್ಕೆ ಏಳು ಮೈಲಿ ದೂರವಿದ್ದು, ಈ ಗ್ರಾಮದ ಉತ್ತರ ದಿಕ್ಕಿನಲ್ಲಿ ಕಂಡುಬರುತ್ತದೆ. “ದಿಂಡಗೂರಿನಲ್ಲಿ ಇಮ್ಮಡಿ ವೀರ ಬಲ್ಲಾಳನ ಮಂತ್ರಿಯಾದ ಪಂಡಿತ ದಂಡನಾಥನು ಕ್ರಿ.ಶ. ೧೨೯೯ ರಲ್ಲಿ ಅಗ್ರಹಾರ ಮಾಡಿ ಅದಕ್ಕೆ ಮಲ್ಲಿಕಾರ್ಜುನ ಪುರವೆಂದು ಹೆಸರಿಟ್ಟನು. ಕೇಶವ ಮತ್ತು ಮಲ್ಲಿಕಾರ್ಜುನ ದೇವಾಲಯಗಳನ್ನು ನಿರ್ಮಿಸಿದನು. ಎರಡೂ ಒಂದೇ ಮಾದರಿಯಲ್ಲಿವೆ. ಕೇಶವ ದೇವಾಲಯದ ನವರಂಗ ದ್ವಾರದ ಮೇಲೆ ವೇಣುಗೋಪಾಲ, ಗರ್ಭಗೃಹದ ದ್ವಾರದ ಮೇಲೆ ಗಜಲಕ್ಷ್ಮಿ ಇವೆ. ಗರುಡ ಪೀಠದ ಮೇಲೆ ಆರು ಅಡಿ ಎತ್ತರದ ಕೇಶವ ವಿಗ್ರಹ, ಪದ್ಮ, ಶಂಖ, ಚಕ್ರ, ಗದೆಗಳನ್ನು ಹೊಂದಿದೆ. ಮಲ್ಲೇಶ್ವರ ದೇವಾಲಯವು ಕೇಶವ ದೇವಾಲಯದ ವಿನ್ಯಾಸವನ್ನೇ ಹೋಲುತ್ತದೆ”[೧೧] ಎಂಬ ಮಾತುಗಳು ದಿಂಡಗೂರಿನ ದೇವಾಲಯಗಳ ಸೊಬಗನ್ನು ನಮಗೆ ದರ್ಶಿಸುತ್ತವೆ.

ಅಗ್ರಹಾರ ಬೆಳ್ಗುಳಿ

ಚನ್ನರಾಯಪಟ್ಟಣ ತಾಲ್ಲೂಕಿನ ಮತ್ತೊಂದು ಪ್ರಮುಖ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕೇಂದ್ರವಿದು. ಈ “ಅಗ್ರಹಾರ ಬೆಳಗುಳಿಗೆ ‘ಪಿಳುಗುಳಿ’, ‘ಪಂಜಾಡಿಯ ಬೆಳ್ಗಲಿ’ ಎಂದು ಹೆಸರುಗಳಿದ್ದವು.

ಕ್ರಿ.ಶ.೧೨೧೦ ರಲ್ಲಿ ಕೇಶಿ ರಾಜನು ಇದನ್ನು ಅಗ್ರಹಾರವನ್ನಾಗಿ ಮಾಡಿ, ಕೇಶವ, ಈಶ್ವರ (ಬೆಟ್ಟೇಶ್ವರ) ದೇವಾಲಯಗಳನ್ನು ಕಟ್ಟಿಸಿ ಕೇಶವಪುರವೆಂಬ ಹೆಸರಿಟ್ಟನು. ದೇವಾಲಯವು ದಕ್ಷಿಣಾಭಿಮುಖವಾಗಿ ಪೂರ್ವಕ್ಕೂ, ಪಶ್ಚಿಮಕ್ಕೂ ವಿಸ್ತರಿಸಿದೆ. ದಕ್ಷಿಣದಲ್ಲಿ ನವರಂಗ, ಪಶ್ಚಿಮದಲ್ಲಿ ಈಶ್ವರ ಗುಡಿ, ಉತ್ತರದಲ್ಲಿ ಕೇಶವ ಗರ್ಭಗೃಹ, ಪೂರ್ವದಲ್ಲಿ ಮುಖ ಮಂಟಪ ಹೊಂದಿದೆ. ಮುಖ ಮಂಟಪದ ಉತ್ತರ ಭಾಗದಲ್ಲಿ ಒಂದು ಉತ್ಸವ ವಿಗ್ರಹಗಳ ಗುಡಿ, ಪೂರ್ವದಲ್ಲಿ ಈಶ್ವರನ ಎದುರಿಗೆ ದೊಡ್ಡ ನಂದಿ ಇದೆ. ನವರಂಗದ ಕಂಬಗಳು ಸುಂದರವಾಗಿವೆ. ನವರಂಗದ ಎರಡು ಪಕ್ಕಗಳಲ್ಲಿ ಜಗತಿ ಕಟಾಂಜನಗಳಿವೆ. ಶಿಖರಗಳು ಗಾರೆ ಇಟ್ಟಿಗೆಗಳಿಂದ ಕಟ್ಟಲ್ಪಟ್ಟಿವೆ. ಕೇಶವ ವಿಗ್ರಹ ಎರಡಡಿ ಎತ್ತರದ ಗರುಡ ಪೀಠದ ಮೇಲೆ ಐದಡಿ ಎತ್ತರವಿದೆ. ಪದ್ಮ, ಶಂಖ, ಚಕ್ರ, ಗದೆಗಳನ್ನು ಹಿಡಿದ ಕೇಶವ ವಿಗ್ರಹ ಮನಮೋಹಕವಾಗಿದೆ. ನವರಂಗದಲ್ಲಿ ಮಯೂರ ವಾಹನನಾದ ಷಣ್ಮುಖ, ಕತ್ತಿ, ತ್ರಿಶೂಲ, ಡಮರುಗ ಕಪಾಲ ಹಿಡಿದಿರುವ ದುರ್ಗಾ, ಪೀಠದಲ್ಲಿ ಸಿಂಹ, ಅಕ್ಷಮಾಲಾ, ಅಂಕುಶ ಕಮಲ ಫಲ ಹೊಂದಿರುವ ಗಣೇಶ ವಿಗ್ರಹಗಳಿವೆ. ನಂದಿಯು ದೊಡ್ಡದಾಗಿ ಸಾಲಂಕೃತವಾಗಿದೆ. ನವರಂಗದ ಪೂರ್ವದ್ವಾರದಲ್ಲಿ 'ಶ್ರೀಮತು ಪ್ರತಾಪ ಚಕ್ರವರ್ತಿ ಹೊಯ್ಸಳ ವೀರ ಸೋಮೇಶ್ವರ' ಎಂಬ ಶಾಸನವಿದೆ"[೨] ಇದು ಆಸಕ್ತರಿಗೆ, ಅಭ್ಯಾಸಪ್ರಿಯರಿಗೆ ಸೊಗಸಾದ ವಾಸ್ತುಶಿಲ್ಪವಾಗಿದೆ.

ಆನೆಕೆರೆ

ಆನೆಕೆರೆ ಗ್ರಾಮವು ಚನ್ನರಾಯಪಟ್ಟಣಕ್ಕೆ ಮೂರು ಮೈಲಿ ದೂರವಿದ್ದು, ಗ್ರಾಮದ ಪಶ್ಚಿಮ ದಿಕ್ಕಿಗಿದೆ. ಈ ಗ್ರಾಮಕ್ಕೆ 'ಆನೆಗಳ ಕೆರೆ', 'ಕೇಶವಪುರ' ಎಂದು ಶಾಸನದಲ್ಲಿ ಕರೆದಿರುವುದು ಕಂಡುಬರುತ್ತದೆ. ಈ ಗ್ರಾಮದಲ್ಲಿ "ಕ್ರಿ.ಶ. ೧೮೯೧ ಕ್ಕೆ ಮುಂಚೆಯೇ ಕಟ್ಟಿದ ಏಕಕೂಟ ಚೆನ್ನಕೇಶವ ದೇವಾಲಯವಿದೆ. ಈಚೆಗೆ ಉತ್ತರ ದಕ್ಷಿಣಗಳಲ್ಲಿ ಎರಡು ಗರ್ಭಗುಡಿಗಳನ್ನು ಸೇರಿಸಿದಂತೆ ಕಾಣುತ್ತದೆ. ಪಾಳೆಯಗಾರರ ಕಾಲದಲ್ಲಿ ಭೈರಪ್ಪ ನಾಯಕ ಎಂಬುವವನು ಹೊರಗಿನ ಪ್ರಕಾರವನ್ನು ಶುಭಕೃತ್ ಸಂವತ್ಸರದಲ್ಲಿ ಜೀರ್ಣೋದ್ಧಾರ ಮಾಡಿದನು. ಗರ್ಭಗುಡಿ ನವರಂಗಗಳ ದ್ವಾರದ ಮೇಲೆ ಗಜಲಕ್ಷ್ಮಿ ವಿಗ್ರಹವಿದೆ. ನವರಂಗದ ಮಧ್ಯದಲ್ಲಿರುವ ಭುವನೇಶ್ವರಿಯಿಂದ ಕೆಳಕ್ಕೆ ಜೋಲಾಡುತ್ತಿರುವ ದೊಡ್ಡ ಶಂಖವಿದೆ. ನವರಂಗದ ಕಂಬಗಳು ಹೊಯ್ಸಳ ಶೈಲಿಯಲ್ಲಿ ಸುಂದರವಾಗಿವೆ. ಗರ್ಭಗುಡಿಯಲ್ಲಿ ಆರು ಅಡಿ ಎತ್ತರದ ಕೇಶವ ವಿಗ್ರಹ ಪದ್ಮ, ಶಂಖ, ಚಕ್ರ, ಗದೆಗಳನ್ನು ಹೊಂದಿದೆ. ಗ್ರಾಮದ ದಕ್ಷಿಣದಲ್ಲಿ ಅವಳಿ ದೇವಾಲಯಗಳಿವೆ. ವಾಯುವ್ಯದಲ್ಲಿರುವ ಶಂಭುಲಿಂಗ ದೇವಾಲಯ ಹನ್ನೆರಡನೆಯ ಶತಮಾನದ್ದಾಗಿದೆ"[೩] ಎಂಬ ವಿವರಗಳು ಈ ಗ್ರಾಮ ಹಾಗೂ ಗ್ರಾಮದ ದೇವಾಲಯಗಳ ಪರಿಚಯವನ್ನು ಮಾಡಿಕೊಡುತ್ತವೆ.

ಶ್ರವಣಬೆಳಗೊಳ

ಪ್ರಮುಖ ಜೈನ ಕೇಂದ್ರವಾದ ಶ್ರವಣಬೆಳಗೊಳವು ಇತಿಹಾಸ ಪ್ರಸಿದ್ಧವಾದುದು. ಹಾಸನ ಜಿಲ್ಲಾ ಕೇಂದ್ರದಿಂದ ೫೨ ಕಿಲೋಮೀಟರ್ ಇದ್ದು, ಉತ್ತರ ಭಾರತದವರಿಂದ 'ಜೈನಬದ್ರಿ' ಎಂದು

ಕರೆಸಿಕೊಂಡಿರುವ ಸ್ಥಳವಾಗಿದೆ. ಶ್ರುತಕೇವಲಿಗಳಾದ ಭದ್ರಬಾಹು ಮುನಿಗಳು ಇಲ್ಲಿ ಸಮಾಧಿ ಮರಣ ಹೊಂದಿದ್ದ ವಿವರಗಳು ಹಾಗೂ ಅವರ ಜೊತೆ ಚಂದ್ರಗುಪ್ತ ಮೌರ್ಯನೂ ಕರ್ನಾಟಕದ ಈ ಪ್ರದೇಶಕ್ಕೆ ಬಂದ ಅಂಶಗಳು ತಿಳಿದುಬರುತ್ತವೆ. ಹಾಸನ ಜಿಲ್ಲಾ ಗೆಜೆಟಿಯರ್ ಈ ಕಾಲವನ್ನು ಕ್ರಿ.ಪೂ.೨೯೮ ಎಂದು ತಿಳಿಸಿದೆ. ಇಲ್ಲಿ ಕ್ರಿ.ಶ.ಸುಮಾರು ಆರನೆಯ ಶತಮಾನದಿಂದಲೇ ಶಾಸನಗಳು ಕಂಡುಬರುವುದು ತಿಳಿಯುತ್ತದೆ. ಈ ಸ್ಥಳವು ಜೈನ ಯತಿಗಳ ತಪೋ ಭೂಮಿಯಾಗಿ, ಸಮಾಧಿ ಮರಣದ ಪವಿತ್ರ ತಾಣವಾಗಿ ಪ್ರಸಿದ್ಧಿ ಪಡೆದಿದೆ. ಅಂತೆಯೇ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ತನ್ನದೇ ಆದ ಪಾತ್ರವನ್ನು ವಹಿಸಿದೆ. ಅಲ್ಲದೆ ಈ ಶ್ರವಣಬೆಳಗೊಳವು ದಕ್ಷಿಣ ಭಾರತದಲ್ಲೇ ಪ್ರಥಮ ಜೈನ ಕೇಂದ್ರ ಎನಿಸಿದ್ದು, ಜೈನರ ಪವಿತ್ರ ಯಾತ್ರಾ ಸ್ಥಳವೆಂದು ಕರೆಸಿಕೊಂಡಿದೆ. ಇದಕ್ಕೆ ಇಲ್ಲಿ ದೊರೆತಿರುವ ಶಾಸನಗಳು ಹಾಗೂ ನಿಶಧಿ ಕಲ್ಲು ಶಾಸನಗಳೇ ಸಾಕ್ಷಿಯಾಗಿವೆ. ಇವು ಶ್ರವಣಬೆಳಗೊಳವು ಜೈನರ ಧಾರ್ಮಿಕ ಕೇಂದ್ರವಾಗಿರುವಂತೆಯೇ ಅವರ ಮರಣದ ಮೋಕ್ಷ ಕ್ಷೇತ್ರವಾಗಿ ಪ್ರಸಿದ್ಧಿಗಳಿಸಿತ್ತು ಎಂಬುದನ್ನು ಸಾಕ್ಷೀಕರಿಸುತ್ತವೆ.

"ಶಾಸನಗಳಲ್ಲಿ ಕಟವಪ್ರ, ಕಟಪ, ಕಟ್ವಪ್ಪು, ವೆಳ್ಗೊಳ, ಬೆಳ್ಗೊಳ, ಧವಳತೀರ್ಥ, ಶ್ವೇತ ಸರೋವರ ಇತ್ಯಾದಿಯಾಗಿ ಕರೆಯಲಾಗಿದೆ. ಕಪ್ಪಾದ ಗುಡ್ಡ, ಗಿರಿ, ಸಮಾಧಿ ಗುಹೆ, ಸಮಾಧಿ ಮಾಡತಕ್ಕ ಪ್ರದೇಶವೆಂದು ವಿವರಿಸಲಾಗಿದೆ. ಬೆಳ್ಗೊಳದ ಐತಿಹ್ಯವು ವಿವರಿಸುವಂತೆ ಕ್ರಿ.ಪೂ.ಮೂರನೆಯ ಶತಮಾನದಲ್ಲಿ ಚಂದ್ರಗುಪ್ತ ಮತ್ತು ಅವನ ಗುರು ಭದ್ರಬಾಹುಮುನಿಗಳು ತಮ್ಮ ಪರಿವಾರದೊಂದಿಗೆ ದಕ್ಷಿಣ ಭಾರತದೆಡೆಗೆ ಬಂದು ಕಟ್ವಪ್ಪುವಿನಲ್ಲಿ ನೆಲೆನಿಂತರು. ಮಹಾವೀರನ ನಿರ್ವಾಣದ ನಂತರ ಗೌತಮ, ಭದ್ರಬಾಹು, ಗಣಧರ ಮುಂತಾದವರು ಜೈನಗುರುಗಳಾಗಿದ್ದರು. ಅವರುಗಳಲ್ಲೊಬ್ಬರಾದ ಭದ್ರಬಾಹುಗಳು ಉಜ್ಜಯಿನಿಯಲ್ಲಿದ್ದಾಗ ಹನ್ನೆರಡು ವರ್ಷಗಳ ಬರಗಾಲದಿಂದಾಗಿ ದೇಶವು ಕ್ಷೋಭೆಗೊಳಗಾಗುತ್ತದೆಂಬ ಭವಿಷ್ಯ ವಾಣಿಯಿಂದಾಗಿ ತಮ್ಮ ಸಂಘ ಪರಿವಾರದೊಂದಿಗೆ ದಕ್ಷಿಣ ಭಾರತದ ಕಡೆಗೆ ಬಂದರೆಂದು ಕ್ರಿ.ಶ.೭ನೆಯ ಶತಮಾನದ ಶಾಸನದಲ್ಲಿ ವಿವರಿಸಿದೆ. ಪ್ರಭಾಚಂದ್ರರೆಂಬ ಆಚಾರ್ಯರೊಬ್ಬರು ಸಮಾಧಿ ಹೊಂದಬಯಸಿ, ಕಟವಪ್ರ ಗಿರಿಗೆ ಬಂದು ದೇಹತ್ಯಾಗ ಮಾಡಿದರೆಂದು ವಿವರಿಸಿದೆ. ಕಟ್ವಪ್ಪುವಿಗೆ ಆಗಮಿಸಿದ ಭದ್ರಬಾಹುವನ್ನು ಶ್ರುತಕೇವಲಿ ಭದ್ರಬಾಹುವೆಂದೂ ಚಂದ್ರಗುಪ್ತನನ್ನು ಮೌರ್ಯಚಂದ್ರಗುಪ್ತನೆಂದು ಊಹಿಸಲಾಗಿದೆ.

ಅಲ್ಲಿಂದ ಮುಂದೆ ಸುಮಾರು ಕ್ರಿ.ಶ. ಏಳನೆಯ ಶತಮಾನದವರೆಗೆ ಜೈನ ಸಾಧುಗಳಿಗೆ, ತಪಸ್ವಿಗಳಿಗೆ, ವಿರಾಗಿಗಳಿಗೆ ಸಾಧನೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡು ದೇಹ ತ್ಯಜಿಸುವವರಿಗೆ ಇರುವ ಸಾಧನಾ ಸ್ಥಳವಾಗಿತ್ತು. ಅಜ್ಞಾತವಾಗಿ, ಏಕಾಂತವಾಗಿ ಸಾಧನೆ ಮಾಡುತ್ತ ಮುಕ್ತಿಯ ಗುರಿಯೆಡೆಗೆ ಸಾಗುವ ಶ್ರಮಣರ ತಾಣವಾಗಿತ್ತು. ಮುಕ್ತಿಯೇ ಗುರಿಯಾಗಿದ್ದು, ಲೌಕಿಕ ಜೀವನಕ್ಕೆ ವಿಮುಖರಾಗಿ ನಿಂತ ಸಾಧಕರಿಗಲ್ಲದೆ ಉಳಿದವರಿಗೆ ಚಿಕ್ಕಬೆಟ್ಟವು ಆಕರ್ಷಣೆಯ ಕೇಂದ್ರವಾಗಿರಲಿಲ್ಲ. ಭದ್ರಬಾಹು ಮುನಿಗಳು ಇಲ್ಲಿ ಸಮಾಧಿ ಮರಣವನ್ನು ಹೊಂದಿದ ನಂತರ ಬೆಳ್ಗೊಳವು ಸಾಧಕ

ಭಕ್ತರನ್ನು ಆಕರ್ಷಿಸತೊಡಗಿತು. ಋಷಿಗಿರಿ ಎಂದು ಒಮ್ಮೊಮ್ಮೆ ಕರೆದರೂ ಸಮಾಧಿ ಬೆಟ್ಟ ಅಥವಾ ಕಟವಪ್ರ ಎನ್ನುವ ಹೆಸರೇ ಪ್ರಸಿದ್ಧವಾಯಿತು. ಮುಂದೆ ಇನ್ನೂ ಅನೇಕರು ಸಮಾಧಿ ಮರಣವನ್ನು ಬಯಸಿ ಮುಕ್ತಿಗೆ ಸಂದರು. ಇಂತಹವರಲ್ಲಿ ಕಂತಿಯರು, ಶ್ರಮಣರು, ಗುಡ್ಡರೂ ಇದ್ದರು. ಸಮಾಧಿ ಹೊಂದಿದವರ ಸ್ಮರಣಾರ್ಥವಾಗಿ ಸ್ಮಾರಕಗಳನ್ನು ಕೊರೆಸುವುದು ಒಂದು ಸಂಪ್ರದಾಯದಂತೆ ಬೆಳೆಯತೊಡಗಿತು"[೧೪] ಎಂಬ ವಿಚಾರಗಳು ಶ್ರವಣಬೆಳಗೊಳದ ಇತಿಹಾಸ ಮತ್ತು ಪರಂಪರೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ. ಇದರ ಜೊತೆಗೆ ಶ್ರವಣಬೆಳಗೊಳದ ಪ್ರದೇಶದಲ್ಲಿ ಜೈನಧರ್ಮ, ಜೈನ ಯತಿಗಳು ಹಾಗೂ ಜೈನ ಸಾಂಸ್ಕೃತಿಕ ಪರಿಸರವು ನೆಲೆ ನಿಂತ ಇತಿಹಾಸದ ವಿವರಗಳನ್ನು ತಿಳಿಸಿಕೊಡುತ್ತವೆ.

ಶ್ರವಣಬೆಳಗೊಳಕ್ಕೆ 'ಕಟವಪ್ರ'[೧೫] ಹಾಗೂ 'ಕಟ್ವಪ್ಪು'[೧೬] ಮೊದಲಾದ ಪ್ರಾಚೀನ ಹೆಸರುಗಳು ಇದ್ದದ್ದು ಇಲ್ಲಿ ದೊರೆತಿರುವ ಶಾಸನಗಳಿಂದ ತಿಳಿಯುತ್ತದೆ. "ಹೊಯ್ಸಳರಿಗೆ ಮುಂಚೆ ಗಂಗರಾಜನಾದ ಶಿವಮಾರನು ಒಂದು ಬಸದಿಯನ್ನು ಮಾಡಿಸಿದನು. ಮಾರಸಿಂಹ ಚಾವುಂಡರಾಯರ ಕಾಲದಲ್ಲಿ ಶ್ರವಣಬೆಳಗೊಳವು ಪ್ರಸಿದ್ಧವಾದ ಕ್ಷೇತ್ರವಾಗಿ ಭಾರತದ ನಾನಾ ಭಾಗಗಳಿಂದ ಜೈನರನ್ನು ಆಕರ್ಷಿಸಿತು. ಕೊನೆಯ ರಾಷ್ಟ್ರಕೂಟ ರಾಜನಾದ ಇಂದ್ರನು ಅಂತ್ಯದ ದಿನಗಳನ್ನಿಲ್ಲಿ ಕಳೆದನು. ಚಾವುಂಡರಾಯನು ಗೊಮ್ಮಟೇಶ್ವರ ವಿಗ್ರಹದ ಜೀರ್ಣೋದ್ಧಾರವನ್ನು ಮಾಡಿಸಿ ಚಾವುಂಡರಾಯ ಬಸದಿಯನ್ನು ಕಟ್ಟಿಸಿದನು. ಅತ್ತಿಮಬ್ಬೆ ಕವಿರತ್ನರು ಇಲ್ಲಿಗೆ ಬಂದಿದ್ದರೆಂಬುದಕ್ಕೆ ಶಾಸನ ಮತ್ತು ಸಾಹಿತ್ಯಾಧಾರಗಳಿವೆ. ಕಲ್ಯಾಣದ ಚಾಲುಕ್ಯ ಚಕ್ರವರ್ತಿಗಳು ಇಲ್ಲಿ ಯಾವ ಕಟ್ಟಡಗಳನ್ನು ಕಟ್ಟಿಸಿದಂತೆ ಕಂಡುಬರುವುದಿಲ್ಲ. ಅಜಿತಸೇನ, ನೇಮಿಸೇನ, ಆರ್ಯಸೇನ ಮುಂತಾದವರು ಗೊಮ್ಮಟ ಪ್ರತಿಷ್ಠಾ ಕಾಲದಲ್ಲಿ 'ಗೊಮ್ಮಟಸಾರ' ಇತ್ಯಾದಿ ಗ್ರಂಥಗಳನ್ನು ರಚಿಸಿ ಚಾಮುಂಡರಾಯನಿಗೆ 'ಗೊಮ್ಮಟರಾಯ' ಅಥವಾ 'ರಾಯ' ಎಂಬ ಬಿರುದನ್ನು ಕೊಟ್ಟರು. ಚಾಮುಂಡರಾಯನ ಮಗನಾದ ಜಿನದೇವಣ್ಣನು ಬೆಳ್ಗೊಳದಲ್ಲಿ ಒಂದು ಬಸದಿಯನ್ನು ಕಟ್ಟಿಸಿದನು"[೧೭] ಎಂಬ ಅಂಶಗಳು ತಿಳಿದುಬರುತ್ತವೆ. ಸಾಂಸ್ಕೃತಿಕ ರಾಯಭಾರಿಯಾಗಿ ಜೈನರಿಗೆ ಪವಿತ್ರ ಕ್ಷೇತ್ರ ಎನಿಸಿದ ಶ್ರವಣಬೆಳಗೊಳವು ಐತಿಹಾಸಿಕ ಕ್ಷೇತ್ರವೂ ಆಗಿದೆ.

'ವಿಂಧ್ಯಗಿರಿ' ಮತ್ತು 'ಚಂದ್ರಗಿರಿ' ಎಂಬ ಎರಡು ಬೆಟ್ಟಗಳು ಶ್ರವಣಬೆಳಗೊಳದಲ್ಲಿ ಕಂಡುಬರುತ್ತವೆ. ಗಂಗರ ದೊರೆ ರಾಚಮಲ್ಲನ ಮಂತ್ರಿಯಾದ ಚಾವುಂಡರಾಯನು ಕೆತ್ತಿಸಿದ 'ಬಾಹುಬಲಿ' ಮೂರ್ತಿಯು ಇಲ್ಲಿ ಸ್ಥಾಪಿತವಾಗಿದೆ. ಇದು ಮೂರ್ತಿ ಶಿಲ್ಪಕಲೆಯ ಅದ್ಭುತ ಸೌಂದರ್ಯವನ್ನು ಹೊತ್ತು ನೋಡುಗರ ಮನಸೂರೆಗೊಳ್ಳುತ್ತದೆ. ಇದರ ಜೊತೆಗೆ ಶ್ರವಣಬೆಳಗೊಳದಲ್ಲಿ ಭಂಡಾರಿ ಬಸದಿ, ಮಠದ ಬಸದಿ, ನಗರ ಜಿನಾಲಯ, ದಾನಶಾಲೆ ಬಸದಿ, ಮಂಗಾಯಿ ಬಸದಿ ಹಾಗೂ ಅಕ್ಕನ ಬಸದಿ ಎಂಬ ಆರು ಬಸದಿಗಳಿವೆ. ವಾಸ್ತುಶಿಲ್ಪ ಕಲೆಯ ಹಿನ್ನೆಲೆಯಲ್ಲಿ ಅಕ್ಕನ ಬಸದಿ ಗಮನ ಸೆಳೆಯುತ್ತದೆ. ಇವುಗಳ ಜೊತೆಗೆ ಐತಿಹಾಸಿಕವಾಗಿ, ಧಾರ್ಮಿಕವಾಗಿ ಹಾಗೂ ಕಲಾತ್ಮಕತೆಯ ದೃಷ್ಟಿಯಿಂದ ಮಹತ್ವವೆನಿಸಿರುವ ಗೊಮ್ಮಟೇಶ್ವರನ ಬೃಹತ್ ಏಕಶಿಲಾ ವಿಗ್ರಹ ದೊಡ್ಡ ಬೆಟ್ಟದ

ಆಕರ್ಷಣೆಯ ಕೇಂದ್ರ ಬಿಂದುವಾಗಿದೆ. ಪ್ರಮುಖವಾಗಿ ಧಾರ್ಮಿಕ ಪರಂಪರೆ ಹಾಗೂ ಐತಿಹಾಸಿಕ ಪರಂಪರೆಗಳೆರಡರ ಮೇಳೈಕೆ ಶ್ರವಣಬೆಳಗೊಳದ ವಿಶಿಷ್ಟತೆಯಾಗಿದೆ. ತೀರ್ಥ ಕ್ಷೇತ್ರ, ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಐತಿಹಾಸಿಕ ಕ್ಷೇತ್ರವೂ ಆಗಿರುವಂತೆ ಶ್ರವಣಬೆಳಗೊಳವು ಪ್ರವಾಸಿ ತಾಣವೂ ಆಗಿದೆ.

ಶ್ರವಣಬೆಳಗೊಳದ ಕಟ್ಟಡಗಳಲ್ಲಿ "ಸು. ೮೦೦ ರಿಂದ ೧೧೦೦ ರವರೆಗೆ ಭದ್ರಬಾಹು ಗುಹೆ, ಶಿವಮಾರ ಚಂದ್ರಪ್ರಭ ಬಸದಿ (ಕ್ರಿ.ಶ.೮೦೦), ಕಂಚಿನ ದೊಣೆ (೯೦೦), ಇರುವೆ ಬ್ರಹ್ಮದೇವ (೯೫೦), ಮುಂದಿನ ಗುಳ್ಳೆ ಕಾಯಜ್ಜಿ, ತ್ಯಾಗ ಬ್ರಹ್ಮ ಕಂಬ, ಅಖಂಡ ಬಾಗಿಲು (೯೭೦-೯೯೦), ಚಾಮುಂಡರಾಯ ಬಸದಿಯ ಮೇಲ್ಭಾಗ, ಹಳೆಬೆಳಗೊಳದ ಪಾಶ್ವನಾಥ (೧೦೯೪)"[೧೮] ಮೊದಲಾದ ಬಸದಿ ಹಾಗೂ ಕಟ್ಟಡಗಳು ನಿರ್ಮಾಣವಾಗಿರುವುದು ಕಂಡುಬರುತ್ತದೆ. ಜೊತೆಗೆ ಚಿಕ್ಕಬೆಟ್ಟದ ಶಾಂತಿನಾಥ, ಸುಪಾರ್ಶ್ವ, ಶಾಂತೀಶ್ವರ, ಒದೆಗಲ್ ಬಸ್ತಿಗಳು, ಭರತೇಶ್ವರ ವಿಗ್ರಹ, ಮಜ್ಜಿಗಣ್ಣ ಬಸದಿ, ಪಾರ್ಶ್ವನಾಥ ಬಸದಿ ಮೊದಲಾದ ಕಟ್ಟಡಗಳು ಸಹ ನಿರ್ಮಿತವಾಗಿವೆ.

ಚನ್ನರಾಯಪಟ್ಟಣ ತಾಲ್ಲೂಕಿನ ಈ ಶ್ರವಣಬೆಳಗೊಳವು ಕರ್ನಾಟಕದಲ್ಲಿಯೇ ಅತಿ ಹೆಚ್ಚು ಶಿಲಾ ಶಾಸನಗಳು ದೊರೆತಿರುವ ಸ್ಥಳವೆಂಬ ಪ್ರಸಿದ್ಧಿಗೂ ಭಾಜನವಾಗಿದೆ.

ಕೊನೆ ಟಿಪ್ಪಣಿಗಳು

೧. htttps://kn.wikipedia.org/w/index.php?title= ಚನ್ನರಾಯಪಟ್ಟಣ &oldid =822692. ಇಂದ ಪಡೆಯಲ್ಪಟ್ಟಿದೆ. (ಉಲ್ಲೇಖಗಳು ೧)ಹಾಸನ ಇತಿಹಾಸ ೨)ಹೊಯ್ಸಳ ಟೂರಿಸಮ್).
೨. ಲೇಖನ-ಚನ್ನರಾಯಪಟ್ಟಣ ಒಂದು ಸುತ್ತು, ಎ.ಎಂ.ಜಯರಾಂ, ಪು.ಸಂ-೫ ಮತ್ತು ೬.
೩. ಲೇಖನ-ಚನ್ನರಾಯಪಟ್ಟಣ ಒಂದು ಸುತ್ತು, ಎ.ಎಂ.ಜಯರಾಂ, ಪು.ಸಂ-೫ ಮತ್ತು ೬.
೪. ಹೊಯ್ಸಳ ವಾಸ್ತುಶಿಲ್ಪ, ಡಾ॥ ಎಸ್.ಶ್ರೀಕಂಠಶಾಸ್ತ್ರೀ, ಪು.ಸಂ-೧೧೨.
೫. ಹಾಸನ ಜಿಲ್ಲಾ ವೈಶಿಷ್ಟ್ಯ, ಉದಯ ರವಿ, ಪು.ಸಂ-೪.
೬. ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ, ಪು.ಸಂ-೫೧೦.
೭. ಹಾಸನ ಜಿಲ್ಲಾ ವೈಶಿಷ್ಟ್ಯ, ಪು.ಸಂ-೪೬.
೮. ಹೊಯ್ಸಳ ವಾಸ್ತುಶಿಲ್ಪ, ಪು.ಸಂ-೧೧೩.
೯. ಹೊಯ್ಸಳ ವಾಸ್ತುಶಿಲ್ಪ, ಪು.ಸಂ-೧೧೩.
೧೦. ಲೇಖನ-ಚನ್ನರಾಯಪಟ್ಟಣ ಒಂದು ಸುತ್ತು, ಎ.ಎಂ.ಜಯರಾಂ, ಪು.ಸಂ-೫ ಮತ್ತು ೬.
೧೧. ಹೊಯ್ಸಳ ವಾಸ್ತುಶಿಲ್ಪ, ಪು.ಸಂ-೬೬.
೧೨. ಹೊಯ್ಸಳ ವಾಸ್ತುಶಿಲ್ಪ, ಪು.ಸಂ-೮೪.
೧೩. ಹೊಯ್ಸಳ ವಾಸ್ತುಶಿಲ್ಪ, ಪು.ಸಂ-೬೬.
೧೪. ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.ಸಂ-೮೫.
೧೫. ಶ್ರವಣಬೆಳಗೊಳ ಶಾಸನ, ಕ್ರಿ.ಶ.ಸು ೭೦೦.
೧೬. ಶ್ರವಣಬೆಳಗೊಳ ಶಾಸನ, ಕ್ರಿ.ಶ.ಸು ೭೦೦.
೧೭. ಹೊಯ್ಸಳ ವಾಸ್ತುಶಿಲ್ಪ, ಪು.ಸಂ-೧೭೨.
೧೮. ಹೊಯ್ಸಳ ವಾಸ್ತುಶಿಲ್ಪ, ಪು.ಸಂ-೧೭೪.

ಅಧ್ಯಾಯ : ಮೂರು

ಜನಪದ ಗೀತೆಗಳ ಮೌಖಿಕ ಪರಂಪರೆ

ಅಧ್ಯಾಯ : ಮೂರು

ಜನಪದ ಗೀತೆಗಳ ಮೌಖಿಕ ಪರಂಪರೆ

ನಮಗೆ ತಿಳಿದಿರುವಂತೆ ಜಾನಪದ ಎಂಬುದು ಮಾನವನ ಬದುಕು ಹಾಗೂ ಆತನ ಆಗುಹೋಗುಗಳ ಕಥನವಾಗಿದೆ. ಜನಪದ ಸಾಹಿತ್ಯದ ಸೃಷ್ಟಿ ಆರಂಭದಲ್ಲಿ ಮೌಖಿಕವಾಗಿದ್ದು, ನಂತರದ ದಿನಮಾನಗಳಲ್ಲಿ ಅದು ಗ್ರಂಥಸ್ಥ ರೂಪವನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಜಾನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಒಂದಾದ 'ಜನಪದ ಗೀತೆಗಳು' ಸಹ ಮೌಖಿಕ ರೂಪದ ಸೃಷ್ಟಿಗಳೆ. "ಮೌಖಿಕ ಎನ್ನುವ ಪದವು ಲಿಖಿತ ರೂಪದ ಅಕ್ಷರ ಕಾವ್ಯಕ್ಕಿಂತ ಭಿನ್ನ ಎಂಬುದನ್ನು ಒತ್ತಿ ಹೇಳುತ್ತದೆ"[1] ಎಂಬ ಮಾತು ಮೌಖಿಕ ಎಂಬ ಪದ ಒಳಗೊಂಡಿರುವ ಅರ್ಥ ಸಾಧ್ಯತೆಗಳನ್ನು ನಮ್ಮ ಗಮನಕ್ಕೆ ತರುತ್ತದೆ. ಜನಪದ ಗೀತೆಗಳು ಅನಕ್ಷರಸ್ಥರಾದ ಗಾಯಕ ಪರಂಪರೆಯ ಜನಸಮೂಹದ ಪರಂಪರೆಯ ಮೂಲಕ ಹಲವು ತಲೆಮಾರುಗಳಿಂದ ಹರಿದು ಬಂದಿರುವುದು ತಿಳಿಯುತ್ತದೆ.

ಜನಪದ ಸಾಹಿತ್ಯದ ಹುಟ್ಟು ಜನಪದರ ಜೀವನಾಧಾರ ಕಸುಬಾದ ಕೃಷಿಯಲ್ಲಿದೆ ಎಂಬುದು ನಮಗೆ ಈಗಾಗಲೆ ತಿಳಿದಿರುವಂತಹದ್ದು. ಈ ಕೃಷಿ ಪದ್ಧತಿಯು ನಮ್ಮ ಭಾರತೀಯ ಸಂಸ್ಕೃತಿ, ಪರಂಪರೆಯಷ್ಟೇ ಪ್ರಾಚೀನವಾದುದು. ಈ ಹಿನ್ನೆಲೆಯಲ್ಲಿ ಕೃಷಿ ಎಂಬುದು ಶ್ರಮವನ್ನು ಹಾಗೂ ಸಮಯವನ್ನು ಬಯಸುವ ಕಾರ್ಯ ಚಟುವಟಿಕೆಯಾಗಿರುವ ಕಾರಣವಾಗಿ, ಆ ಕೃಷಿ ಮಾಡುವಿಕೆಯ ಸಂದರ್ಭದಲ್ಲಿನ ಆಯಾಸ ಅಥವಾ ಶ್ರಮವನ್ನು ಪರಿಹರಿಸಿಕೊಳ್ಳಲೆಂದೇ ಹುಟ್ಟಿಕೊಂಡವು ಜನಪದ ಗೀತೆಗಳಾಗಿವೆ. ಜೊತೆಗೆ ಬದುಕು ಹಾಗೂ ಕೆಲಸದ ನಡುವಿನ ಏಕತಾನತೆಯನ್ನು ಹೋಗಲಾಡಿಸುವ ಉದ್ದೇಶದಿಂದಲೂ ಜನಪದ ಗೀತೆಗಳ ಸೃಷ್ಟಿ ನಡೆದಿದೆ. ಇಲ್ಲಿ ತಮ್ಮ ಕೆಲಸದ ನಡುವೆಯೇ ಜನಪದ ಗೀತೆಗಳ ಹುಟ್ಟು ಹಾಗೂ ಅವುಗಳ ಬಳಕೆ, ಪ್ರಸಾರದ ಕ್ರಿಯೆಗಳು ಜರುಗುತ್ತವೆ. ಮುಖ್ಯವಾಗಿ ಕೃಷಿ ಚಟುವಟಿಕೆ ಎಂಬುದು ಆಚರಣೆ, ಸಂಪ್ರದಾಯಗಳ ಮೂಲಕ ನಡೆಯುವಂತಹದ್ದು. ಈ ಕಾರಣವಾಗಿ ಕೃಷಿಯನ್ನು ಅವಲಂಬಿಸಿರುವ ಪ್ರತಿಯೊಂದು ಸಮುದಾಯವು ಸಹ ತನ್ನದೇ ಆದ ರೂಢಿ, ಸಂಪ್ರದಾಯ, ಆಚರಣೆಗಳನ್ನು ಅವರು ಅನುಸರಿಸುತ್ತಿರುವುದನ್ನು ಕಾಣಬಹುದು. ಈ ಸಂದರ್ಭಗಳಲ್ಲಿ ಆಚರಣೆ, ಸಂಪ್ರದಾಯಗಳ ಭಾಗವಾಗಿಯೂ ಸಹ ಜನಪದ ಗೀತೆಗಳ ಉಗಮವಾಗುವುದು. ಇವುಗಳಲ್ಲಿ ಶ್ರದ್ಧೆ, ಭಕ್ತಿ, ಧಾರ್ಮಿಕ ಪ್ರಜ್ಞೆ ಪ್ರಧಾನವಾಗಿರುವುದು ಕಂಡು ಬಂದರೂ ಸಹ ಅದರ ಪ್ರಧಾನ ಉದ್ದೇಶ ಶ್ರಮ ಪರಹಾರವೆಂಬುದು ಗಮನಿಸುವಂತಹದ್ದು.

ಕೃಷಿಗೆ ಸಂಬಂಧಿಸಿದ ಹಾಡುಗಳು ಮೌಖಿಕ ಸಾಹಿತ್ಯದ ಮುಖ್ಯ ಭಾಗಗಳಾಗುತ್ತವೆ. ಕೃಷಿ ಸಂಬಂಧಿಯಾದ ಕೆಲವು ಕಾರ್ಯಗಳಾದ ಉಳುವುದು, ಬಿತ್ತುವುದು, ನಾಟಿ ಹಾಕುವುದು, ಸುಗ್ಗಿ ಮೊದಲಾದ ಸಂದರ್ಭದಲ್ಲಿ ಹಾಡಲ್ಪಡುವ ಹಾಡುಗಳು ವೈಯಕ್ತಿಕವಾಗಿ ಕೆಲವೊಮ್ಮೆ ಸಾಮೂಹಿಕವಾಗಿ ಹಾಡುವಿಕೆಗೆ ಒಳಗೊಳ್ಳುವುದುಂಟು. ಇಂತಹ ಪದಗಳ ಹಿಂದಿನ ಮುಖ್ಯ ಆಶಯ ಒಳ್ಳೆಯ ಬೆಳೆಯನ್ನು ಕೊಡುವಂತೆ ದೈವವನ್ನು ಬೇಡುವ ಪ್ರಾರ್ಥನಾ ರೂಪದಲ್ಲಿರುತ್ತವೆ.

ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಜನಪದರು ಔಪಚಾರಿಕವಾಗಿ ಶಾಲೆಗಳಿಗೆ ತೆರಳಿ ಶಿಕ್ಷಣವನ್ನು ಪಡೆದವರಲ್ಲ. ಜನಪದರು ಬದುಕು ಎಂಬ ಜೀವಂತ ಶಾಲೆಯ ವಿದ್ಯಾರ್ಥಿಗಳು. ಹಾಗಾಗಿ ಅವರ ಅಭಿವ್ಯಕ್ತಿ ಲಿಖಿತ ಅಥವಾ ಗ್ರಂಥಸ್ಥವಾಗಿರದೆ ಅವು ಮೌಖಿಕ ರಚನೆಗಳಾಗಿವೆ. ಹೀಗೆ ಮೌಖಿಕವಾಗಿ ರಚಿತವಾದ ಜನಪದ ಗೀತೆಗಳು ಮೌಖಿಕ ಪರಂಪರೆಯ ಹಾದಿಯಲ್ಲಿ ಮುಂದುವರೆದು, ಅಧ್ಯಯನದ ಅವಶ್ಯಕತೆಗಳಿಗಾಗಿ ಮುಂದೊಂದು ದಿನ ಅವು ಗ್ರಂಥಸ್ಥವಾಗಿರುವುದು ಕಂಡುಬರುತ್ತದೆ. ಜನಪದ ಗೀತೆಗಳನ್ನು ಹಾಡುವ ಸಂದರ್ಭಕ್ಕೆ ಅನುಗುಣವಾಗಿ ಕೆಲಸದ ಹಾಡುಗಳು, ಕುಣಿತದ ಹಾಡುಗಳು, ವ್ರತಾಚರಣೆಯ ಹಾಡುಗಳು, ಸ್ತುತಿ ಪದಗಳು ಮುಂತಾಗಿ ವಿಂಗಡಿಸಿಕೊಳ್ಳಲಾಗಿದೆ. ಇದರ ಜೊತೆಗೆ ಆಯಾ ಕೆಲಸಗಳಿಗೆ ಅನುಗುಣವಾಗಿ ನಾಟಿ ಪದಗಳು, ಬೀಸುವ ಪದಗಳು, ಹಚ್ಚೆಯ ಪದಗಳು, ಹಂತಿ ಹಾಡುಗಳು ಹೀಗೆ ಇನ್ನೂ ಹಲವು ಹಾಡುಗಳಿದ್ದು ಇವೆಲ್ಲವೂ ಸಹ ಕೃಷಿ ಚಟುವಟಿಕೆಗಳೊಂದಿಗೆ ತಮ್ಮ ಸಹ ಸಂಬಂಧವನ್ನು ಹೊಂದಿರುತ್ತವೆ.

ಪ್ರಾಚೀನ ಕಾಲಘಟ್ಟದ ಭಾರತೀಯ ಸಾಹಿತ್ಯದ ಬಹುಭಾಗ ಮೌಖಿಕ ಪರಂಪರೆಯದು. ಅದು ತೋಂಡೀ ಪರಂಪರೆಯಲ್ಲಿ ತಲೆಮಾರಿನಿಂದ ತಲೆಮಾರುಗಳಿಗೆ ಸಾಗಿ ಬಂದಿದೆ. "ಭಾರತದಲ್ಲಿ ಮೌಖಿಕ ಪರಂಪರೆಯು ಅಕ್ಷರ ಪೂರ್ವಯುಗಕ್ಕೆ ಸೇರಬೇಕೆಂದೇನೂ ಇಲ್ಲ. ಅಕ್ಷರ ಪೂರ್ವಯುಗದಲ್ಲಿ ನಾಗರೀಕತೆಯು ವಿಕಾಸದ ಮೊದ ಮೊದಲ ಹಂತಗಳಲ್ಲಿ ಇರುತ್ತದೆ. ಭಾರತದಲ್ಲಾದರೋ ಇತಿಹಾಸದ ಒಂದು ನಿರ್ದಿಷ್ಟ ಹಂತದಲ್ಲಿ ಈ ಎರಡೂ ಪರಂಪರೆಗಳು ಜೀವಂತವಾಗಿಯೇ ಉಳಿದಿರುತ್ತವೆ. ಕುತೂಹಲಕಾರಿಯಾದ ಈ ಸಹಬಾಳ್ವೆಗೆ ಮುಖ್ಯ ಕಾರಣವೆಂದರೆ ಪ್ರಸ್ತುತವಾದ ಎರಡು ಪರಂಪರೆಗಳ ನಡುವೆ ಜನಾಂಗಿಕವಾದ ವ್ಯತ್ಯಾಸವೇನೂ ಇಲ್ಲ. (ಅವು ಪ್ರತಿನಿಧಿಸುವ ಮೌಲ್ಯ ಸಂಹಿತೆಗಳು ಬೇರೆ ಬೇರೆ ಇರಬಹುದು) ಈ ದೇಶದಲ್ಲಿ ಅಕ್ಷರ ಜ್ಞಾನವು ಸಾಂಸ್ಕೃತಿಕವಾದ ಹಾಗೂ ಆಧ್ಯಾತ್ಮಿಕವಾದ ಅನುಭವಗಳನ್ನು ಪಡೆಯಲು ಅನಿವಾರ್ಯವಲ್ಲ. ನಮ್ಮ ಅನೇಕ ಸಂತರು ಮತ್ತು ಅನುಭಾವಿಗಳು ನಿರಕ್ಷರಸ್ಥರಾಗಿದ್ದಾರೆ. ಆದರೂ ಅವರು ಪ್ರಥಮ ದರ್ಜೆಯ ಕಾವ್ಯವನ್ನು ಸೃಷ್ಟಿಸಿದ್ದಾರೆ"[೨] ಎಂಬ ಮಾತುಗಳು ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆ ಹಾಗೂ ಮೌಖಿಕ ಸಾಹಿತ್ಯ ಸಾಗಿ ಬಂದಿರುವ ಹಾದಿಯನ್ನು ಕುರಿತು ತಿಳಿಸುತ್ತದೆ.

ಶಿಷ್ಟ ಸಾಹಿತ್ಯದಲ್ಲಿ ಓದುಗನ ಎದುರು ಲೇಖಕ ಇರಬೇಕೆಂಬ ನಿಯಮ ಇಲ್ಲ. ಆದರೆ ತೋಂಡೀ ಪರಂಪರೆಯಾದ ಜನಪದ ಸಾಹಿತ್ಯದಲ್ಲಿ ಗಾಯಕ ಕೇಳುಗರ ಸಮ್ಮುಖದಲ್ಲೇ

ಹಾಡಬೇಕಾಗುತ್ತದೆ. ಹಾಗಾಗಿ ಇಲ್ಲಿ ಹೇಳುವವರು ಇರುವಂತೆಯೇ ಕೇಳುವ ವರ್ಗವು ಕಂಡುಬರುತ್ತದೆ. 'ಹೇಳುವ' ಮತ್ತು 'ಕೇಳುವ' ಈ ಪರಂಪರೆಗಳು ಜನಪದ ಸಾಹಿತ್ಯದ ಬಹುಮುಖ್ಯ ಲಕ್ಷಣವಾದ ತೋಂಡಿ ಪರಂಪರೆಯ ವಿಚಾರಗಳನ್ನು ಮನಗಾಣಿಸುತ್ತದೆ. ಈ ಕಾರಣವಾಗಿ ಮೌಖಿಕ ಪರಂಪರೆಯು ಭಾರತ ದೇಶದಲ್ಲಿ ಇಂದಿಗೂ ಉಳಿದಿರುವುದು ಕಂಡುಬರುತ್ತದೆ. "ಮೌಖಿಕ ಸಾಹಿತ್ಯವನ್ನು ವಾಚಿಕ ಕಲೆ ಅಥವಾ ಅಭಿವ್ಯಕ್ತಿಕ ಸಾಹಿತ್ಯ ಎಂದೂ ಕರೆಯುವುದುಂಟು. ಇದನ್ನು ಜನಪದ ಸಾಹಿತ್ಯ ಎಂದೂ ಗುರುತಿಸಲಾಗುವುದು"[೫] ಎಂಬ ಅಭಿಪ್ರಾಯ ಸಹ ಜನಪದ ಗೀತೆಗಳ ಮೌಖಿಕ ಪರಂಪರೆಯನ್ನೆ ತಿಳಿಸುತ್ತದೆ. ವಿಶೇಷವಾಗಿ ಜನಪದ ಸಾಹಿತ್ಯ ಕ್ಷೇತ್ರದಲ್ಲಿ ಲಾವಣಿಕಾರರು, ಗಾಯಕರು ವಿವಿಧ ಬಗೆಯ ಗೀತೆಗಳ ಶ್ರೀಮಂತಿಕೆಯನ್ನು ಹೊಂದಿದ್ದಾರೆ. ಮೌಖಿಕ ಪರಂಪರೆಯಲ್ಲಿರುವ ಕಥನ ಗೀತೆಗಳಿಗೆ ಗಾತ್ರದಲ್ಲಿ ಮಿತಿಯೆಂಬುದು ಇಲ್ಲ. ಹಾಡುಗ ಮತ್ತು ಕೇಳುಗ ಇವರಿಬ್ಬರೂ ದಣಿದು ಆಯಾಸಗೊಂಡಾಗ ಅವು ಮುಕ್ತಾಯವಾಗುತ್ತವೆ.

ಮೌಖಿಕ ಹಾಗೂ ಲಿಖಿತ ಸಾಹಿತ್ಯಗಳು ಪರಸ್ಪರವಾಗಿ ಪ್ರಭಾವಿತವಾಗಿರುವುದು ತಿಳಿಯುತ್ತದೆ. ಮೌಖಿಕ ಸಾಹಿತ್ಯವು ಗ್ರಂಥಸ್ಥ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರಿರುವುದು ಸ್ಪಷ್ಟವಾಗಿದೆ. "ಮೌಖಿಕ ಸಾಹಿತ್ಯದಲ್ಲಿ ವ್ಯಕ್ತಿಗಳಿಗೆ ಹೆಸರುಗಳು ಕಂಡುಬರುವುದಿಲ್ಲ. ತಮ್ಮದೇ ಆದ ಚರಿತ್ರೆಯನ್ನು ಹೊಂದಿರುವ ಅಡ್ಡ ಹೆಸರುಗಳ ಮೂಲಕ ಅವುಗಳನ್ನು ಗುರುತಿಸಲಾಗುತ್ತದೆ"[೬] ಎಂಬ ಮಾತುಗಳು ಮೌಖಿಕ ಸಾಹಿತ್ಯದ ಸ್ವರೂಪವನ್ನು ತಿಳಿಸಿಕೊಡುತ್ತವೆ. ಜೊತೆಗೆ ಈ ಅಭಿಪ್ರಾಯವು ಜನಪದ ಸಾಹಿತ್ಯದ ಸಾಂಸ್ಕೃತಿಕ ಅನನ್ಯತೆಯ ಸಂಗತಿಗಳನ್ನು ನಮ್ಮ ಗಮನಕ್ಕೆ ತಂದುಕೊಡುತ್ತದೆ.

೩.೧. ರಚನೆ ಮತ್ತು ಶೈಲಿ

ಮುಖ್ಯವಾಗಿ ಜನಪದ ಗೀತೆಗಳನ್ನು ನೋಡಿದರೆ ಅವುಗಳ ರಚನೆ, ರೂಪ, ಸ್ವರೂಪಗಳು ಅತ್ಯಂತ ಸರಳ ಹಾಗೂ ಸ್ಪಷ್ಟವಾಗಿವೆ. ತ್ರಿಪದಿ ರೂಪದ ಮೂರು ಸಾಲುಗಳೆ ಜನಪದ ಗೀತೆಗಳ ಮೂಲರೂಪ. ಜನಪದರು ತಮ್ಮ ಮನದ ನೋವು, ನಲಿವು, ಸುಖ, ದುಃಖ, ಆಸರಿಕೆ, ಬೇಸರಿಕೆ ಮೊದಲಾದ ಭಾವನೆಗಳನ್ನು ವ್ಯಕ್ತಪಡಿಸಲು ಈ ತ್ರಿಪದಿಯನ್ನು ಬಳಸಿಕೊಂಡಿರುವುದು ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ತ್ರಿಪದಿ ಪ್ರಕಾರವು ಅವರ ಸರಳವಾದ ಅಭಿವ್ಯಕ್ತಿ ಕ್ರಮಕ್ಕೆ, ವೈವಿಧ್ಯಕ್ಕೆ ಒದಗಿ ಬಂದಿರುವುದುಂಟು. ತ್ರಿಪದಿ ರೂಪದಲ್ಲಿರುವ ಗೀತೆಗಳಲ್ಲಿ ಎರಡನೇ ಸಾಲು ಪುನರಾವರ್ತನೆಯಾಗುವ ಮೂಲಕ ನಾಲ್ಕು ಸಾಲಾಗುತ್ತದೆ. ಈ ರೀತಿಯಾಗಿ ಜನಪದ ಕಾವ್ಯ ಸರಳವಾದ ಛಂದಸ್ಸಿನಲ್ಲಿಯೆ ರಚಿತವಾಗುತ್ತ ಅನೇಕ ವೈವಿಧ್ಯಗಳನ್ನು ಮೆರೆಯುತ್ತದೆ.

"ಬಹುಪಾಲು ಎಲ್ಲ ಜನಪದ ಗೀತೆಗಳೂ ಅನಂತವಾದ ವಾಕ್ಯ ರಚನೆಯ ಭ್ರಮೆಯನ್ನು ಉಂಟು ಮಾಡುತ್ತವೆ. ಕವಿತೆಯು ಯಾವ ಆಕಾರವನ್ನು ತಳೆಯುತ್ತದೆಂದು ಮೊದಲೇ ಹೇಳಲು ಸಾಧ್ಯವಿಲ್ಲ. ಏಕೆಂದರೆ ಅದು ಹಾಡುಗಾರಿಕೆಯ ಜೊತೆ ಜೊತೆಯಲ್ಲಿಯೇ ತನ್ನ ಆಕೃತಿಯನ್ನು ರೂಪಿಸಿಕೊಳ್ಳುತ್ತಿರುತ್ತದೆ"[೭] ಎಂಬ ಮಾತುಗಳು ಜನಪದ ಗೀತೆಗಳ ರಚನೆ ಮತ್ತು ಶೈಲಿಯನ್ನು

ಕುರಿತು ಚರ್ಚಿಸುತ್ತವೆ. ಅಲ್ಲದೆ ಜನಪದ ಗೀತೆಗಳ ಹುಟ್ಟು ಗಾಯನ ಪರಂಪರೆಯಲ್ಲಿ ಅಡಗಿರುವ ವಿಚಾರವನ್ನು ಸಹ ಈ ಅಭಿಪ್ರಾಯವು ತಿಳಿಸಿಕೊಡುತ್ತದೆ.

ಜನಪದ ಗೀತೆಗಳು ಯಾವತ್ತು ರಚನೆಯಾದವು? ಅವುಗಳ ರಚನಾಕಾರರು ಯಾರು? ಅವರ ದೇಶ, ಕಾಲ ಮೊದಲಾದವುಗಳನ್ನು ತಿಳಿಯಲು ಸಾಕಷ್ಟು ಆಧಾರಗಳು ನಮ್ಮಲ್ಲಿ ಲಭ್ಯವಿಲ್ಲ. ಸರಳ ಹಾಗೂ ಶ್ರಮ ಜೀವಿಗಳಾದ ಜನಪದ ಕವಿಗಳು ಪ್ರಚಾರ ಪ್ರಿಯರಲ್ಲದ ಕಾರಣವಾಗಿ ಜನಪದ ಗೀತೆಗಳ ರಚನೆಯ ಸಂದರ್ಭದಲ್ಲಿ ತಮ್ಮ ಹೆಸರಿನ ವಿಚಾರವಾಗಿ ಮೌನ ವಹಿಸಿರುವಂತಿದೆ. ಅಲ್ಲದೆ ನಿರಕ್ಷರಿಗಳಾದ ಇವರು ಸಂತೋಷದಿಂದ ಹೃದಯ ತುಂಬಿ ಬಂದಾಗ ಆತ್ಮ ತೃಪ್ತಿಗಾಗಿ ಹಾಡಿದರು. ಪ್ರಚಾರ ಹಾಗೂ ಪ್ರಸಿದ್ಧಿಯ ಸಂಗತಿಗಳು ಅವರಿಗೆ ಮುಖ್ಯವೆನಿಸಿರಲಿಲ್ಲ. ಈ ಹಾಡಿಗೆ ಇಂಥದ್ದೇ ಮಟ್ಟು, ರಾಗ, ತಾಳಗಳು ಬೇಕೆಂಬ ಅರಿವೂ ಇರಲಿಲ್ಲ. ತಮಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ಜನಪದ ಗೀತೆಗಳನ್ನು ರಚಿಸಿ ಹಾಡಿದರು. ಜನಪದ ಗೀತೆಗಳ ರಚನೆ ಇಂಥಹದ್ದೇ ಸಮಯದಲ್ಲಿ ಆಗಿದೆ ಎಂದು ಹೇಳಲು ಬರುವುದಿಲ್ಲ.

ಶ್ರಮ ಜೀವಿಗಳಾದ ಜನಪದರು ಮುಂಜಾನೆಯೆದ್ದು ರಾಗಿ ಬೀಸುವಾಗ, ಭತ್ತ ಕುಟ್ಟುವಾಗಿನಿಂದ ಹಿಡಿದು, ಕಸ ಗುಡಿಸುವ, ಸಾರಿಸಿ ರಂಗವಲ್ಲಿ ಇಡುವ, ಮೊಸರು ಕಡೆಯುವ, ತೊಟ್ಟಿಲು ತೂಗುವ, ಗಾಡಿ ಹೊಡೆಯುವಾಗ, ಹೊಲ ಉಳುವಾಗ, ಪೈರು ನಾಟಿ ಮಾಡುವಾಗ, ಕಳೆ ಕೀಳುವಾಗ ಹೀಗೆ ದಿನ ನಿತ್ಯದ ಕೆಲಸಗಳ ನಡುವೆಯೇ ಅವುಗಳನ್ನು ರಚಿಸಿ ಗುಂಪುಗೂಡಿ ಹಾಡಿದ್ದಾರೆ. ಆ ಹಾಡಿನ ಮೂಲಕವೇ ತಮ್ಮ ಜೀವನ ಸಾರ್ಥಕ್ಯವನ್ನು ಕಂಡುಕೊಂಡಿರುವುದು ಅವರ ವಿಶಾಲ ಮನಸ್ಸಿನ ದ್ಯೋತಕವಾಗಿದೆ.

"ಜನಪದ ಗೀತೆಗಳ ಸೃಷ್ಟಿ ಸಾಮೂಹಿಕವೋ, ವೈಯಕ್ತಿಕವೋ ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಕಲೆಯೆಂಬುದು ವ್ಯಕ್ತಿ ಸೃಷ್ಟಿಯ ವಸ್ತು. ಅದು ಒಬ್ಬನ ಮನಸ್ಸನ್ನು ಹೇಳುತ್ತದೆ. ಅವನ ಮನಸ್ಸಿನಂತೇ ಮನಸ್ಸುಳ್ಳ ಸಾವಿರ ಜನರು ಇರಬಹುದಾದರೂ ಸೃಷ್ಟಿಕಾರ ಮಾತ್ರ ಒಬ್ಬನೇ. ಅವನ ಸೃಷ್ಟಿಯನ್ನು ಕಂಡಾಗ 'ನಾನು ಇದನ್ನೇ ಹೇಳುತ್ತಿದ್ದೆ', 'ನಾನು ಹೀಗೆಯೇ ಎಣಿಸಿದ್ದೆ' ಎಂದು ಹಲವರಿಗೆ ಅನಿಸಬಹುದು. ಹಾಗೆ ಅನಿಸುವುದರಿಂದಲೇ ಅದು ಜನಪ್ರಿಯವಾಗುತ್ತದೆ. ಒಬ್ಬ ವ್ಯಕ್ತಿಯ ಮನೋಭಾವ, ಕಲ್ಪನೆ, ಅನುಭವ ಮೊದಲಾದವುಗಳನ್ನು ಅವು ಹೊರಗೆಡಹುತ್ತವೆ. ಒಬ್ಬ ವ್ಯಕ್ತಿಯಲ್ಲಿ ಸುತ್ತಣ ಜೀವನದ ಸಂವೇದನೆಯಿಂದ ಅವು ಉದ್ರೇಕಗೊಳ್ಳುತ್ತವೆ. ಈ ಅಭಿಪ್ರಾಯದ ಮೇರೆಗೆ ಈ ಕಲೆಯ ಸೃಷ್ಟಿ ಆರಂಭದಲ್ಲಿ ವೈಯಕ್ತಿಕ"[೬] ಎಂಬ ಮಾತುಗಳು ಗಮನಿಸುವಂತಹವು. ಇವು ಜನಪದ ಗೀತೆಗಳ ರಚನೆಯನ್ನು ಕುರಿತು ತಿಳಿಸಿಕೊಡುತ್ತವೆ. ಜನಪದ ಗೀತೆಗಳ ವಸ್ತು, ವಿಷಯ ಜನಪದರೇ ಆಗಿದ್ದು, ಅವರ ಜೀವನದ ನೋವು, ನಲಿವು ಬದುಕಿನ ಕ್ರಮಗಳನ್ನೆ ಜನಪದ ಗೀತೆಗಳಿಗೆ ಆಕರವನ್ನಾಗಿಸಿದ್ದಾರೆ. ಹಾಗಾಗಿ ಜನಪದ ಗೀತೆಗಳ ರಚನೆಗೆ ಆಕರಗಳ ಹಾಗೂ ವಸ್ತುವಿನ ಕೊರತೆಯಾಗಲೀ, ಗೊಂದಲಗಳಾಗಲೀ ಜನಪದರಲ್ಲಿ ಕಾಣಲು ಸಾಧ್ಯವಿಲ್ಲ.

ಜನಪದ ಗೀತೆಗಳ ಕರ್ತೃಗಳೆನಿಸಿದ ಜನಪದರು ಅನಕ್ಷರಸ್ಥರಾದರೂ, ಜೀವನದ ಪಾಠಶಾಲೆಯ ವಿದ್ಯಾರ್ಥಿಗಳಾಗಿ ಬದುಕಿನ ಶಿಕ್ಷಣವನ್ನು ಕಲಿತವರು. ಹೀಗಾಗಿ ಅವರನ್ನು ಅಜ್ಞಾನಿಗಳೆಂದಾಗಲಿ, ಹಳ್ಳಿ ಮುಕ್ಕರೆಂದಾಗಲಿ ಕರೆಯುವಂತಿಲ್ಲ. ಅವರು ಬದುಕಿನ ಜೀವಂತ ಶಿಕ್ಷಣವನ್ನು ಪಡೆದವರು. ಹಾಗಾಗಿ ಅವರು ಹಲವು ರಾತ್ರಿಗಳವರೆಗೆ ಹಾಡುವ ಮಹಾಕಾವ್ಯಗಳಂತಹ ಕೃತಿಗಳನ್ನು ಕೇಳಿ ತಿಳಿದು ತಾವೂ ಮುಂದುವರೆಸಿದ್ದಾರೆ. ಇದು ತಲೆಮಾರಿನಿಂದ ತಲೆಮಾರಿಗೆ ತಮ್ಮ ಹಿರಿಯರಾದ ತಾತ ಮುತ್ತಾತರಿಂದ ಕೇಳುತ್ತ ಅದ್ಭುತವಾದ ಈ ಸಾಹಿತ್ಯವನ್ನು ಮುಂದಿನ ಪೀಳಿಗೆಗೆ ರಕ್ಷಿಸಿ ನೀಡಿದ್ದಾರೆ. ಇದು ತಂದೆ, ತಾಯಿಯಿಂದ ಮಕ್ಕಳಿಗೆ ಸಾಗಿ ಬರುತ್ತದೆ.

"ಜನಪದ ಗೀತೆ ರೂಪಿತವಾದುದು ಅದು ಹುಟ್ಟಿದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಂದಲೇ' (C M Bowra, Primitive Song, P.4). ಇದಕ್ಕೆ ಕಾರಣರಾದ ಜನರ ಪರಿಸ್ಥಿತಿಗಳು ನಮಗೆ ತಿಳಿದಂತೆ ಅತ್ಯಂತ ಸರಳವಾದುದು. ಸಿ.ಎಂ.ಬೌರಾ ಅವರು ಜನಪದ ಗೀತೆಗಳ ಉಗಮವನ್ನು ಪುರಾತನ ಜನರು ಬೇಟೆಯಾಡುತ್ತಿದ್ದ ಪರಿಸ್ಥಿತಿಯಿಂದಲೇ ಹೊರಡಿಸಲು ಪ್ರಯತ್ನಿಸಿದ್ದಾರೆ"[೭] ಎಂಬ ಬೌರಾ ಅವರ ಅಭಿಪ್ರಾಯವು ಜನಪದ ಗೀತೆಗಳ ರಚನೆಯ ಇತಿಹಾಸವು ಪುರಾತನ ಜನರ ಬೇಟೆಯೊಂದಿಗೆ ಹೊಂದಿರುವ ಸಹ ಸಂಬಂಧವನ್ನು ಕುರಿತು ಚರ್ಚಿಸುತ್ತದೆ. ಏಕೆಂದರೆ ಬೇಟೆಯು ಆದಿ ಮಾನವನ ಪ್ರಮುಖ ಜೀವನೋಪಾಯವಾಗಿದ್ದು, ಮಾನವ ಜೀವಿಯ ಆಹಾರದ ಅವಶ್ಯಕತೆಯನ್ನು ಪೂರೈಸಿರುವ ಬಹುಮುಖ್ಯವಾದ ಅಂಶವಾಗಿದೆ.

ಜನಪದ ಗೀತೆಗಳ ರಚನೆಯ ಕಾಲ ಯಾವುದು ಎಂಬುದನ್ನು ತಿಳಿಯುವುದು ಕಷ್ಟ. ಅದಕ್ಕೆ ಉತ್ತರ ಪ್ರಶ್ನೆಯಷ್ಟು ಸರಳವಾಗಿಲ್ಲ. ಹಾಗೆಯೆ ಇವುಗಳಲ್ಲಿನ ವಿಷಯಗಳಿಗೆ, ಭಾವನೆಗಳಿಗೆ, ಕಲ್ಪನೆಗಳಿಗೆ ಕಾರಣೀಭೂತವಾದ ಘಟನೆಗಳು ಹಾಗೂ ಸಂದರ್ಭಗಳು ಯಾವುವು, ಯಾವ ಕಾಲ, ಪ್ರಾಂತ್ಯ ಹಾಗೂ ಯಾವ ಜನರವು ಎಂಬ ವಿವರಗಳನ್ನು ಹುಡುಕುವುದು ಸಹ ಕಷ್ಟವಾಗಿದೆ. ಅಲ್ಲದೆ ಇವು ಬಾಯಿಂದ ಬಾಯಿಗೆ ಮೌಖಿಕವಾಗಿ ಹರಿದು ಬಂದಿರುವಂಥ ಸಾಹಿತ್ಯ ರೂಪವಾಗಿರುವ ಕಾರಣವಾಗಿ ಮೂಲದಲ್ಲಿ ಬಳಸಿದ ಭಾಷೆ, ಪದಗಳು ಬದಲಾಗಿ, ಇತ್ತೀಚಿನ ಪದಗಳೂ ಸೇರಿಕೊಂಡಿವೆ. ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಇವುಗಳ ರಚನೆ ಹಾಗೂ ಉಗಮವನ್ನು ಇದಮಿತ್ಥವೆಂದು ಹೇಳಲು ಸಾಧ್ಯವಾಗದು. "ಜಾನಪದ ಗೀತಗಳ ಮಾಧ್ಯಮ ಎನ್ನುವಾಗ, ಅವೆಲ್ಲ ಅಧಿಕವಾಗಿ ಹಾಡುಗಬ್ಬಗಳ ರೂಪದಲ್ಲಿವೆ ಎಂಬುದನ್ನು ನಾವು ಮರೆಯಬಾರದು. ಅವು ಕೇವಲ ಸಾಹಿತ್ಯವಾಗಿಲ್ಲ. ಸಂಗೀತ ಮತ್ತು ಸಾಹಿತ್ಯಗಳೆರಡನ್ನೂ ಕೂಡಿಯೇ ಹೊರ ಹೊಮ್ಮಿದ ಶರೀರ ಅವುಗಳದ್ದು. ಇವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದು ಜಡ. ಕೆಲವು ಜಾತಿಯ ಗೀತ ಪ್ರಕಾರಗಳಲ್ಲಿ ಸಾಹಿತ್ಯ ಪ್ರಧಾನವಾಗಿದ್ದು, ಅವನ್ನು ಅನಂತರ ಹಾಡಲು ಅಳವಡಿಸಿರುವುದು ಕಾಣುತ್ತೇವೆ. ಅನೇಕ ಜಾನಪದ ತ್ರಿಪದಿಗಳು ಇಂಥವು"[೮] ಎಂಬ ಶಿವರಾಮ ಕಾರಂತರ ಮಾತುಗಳು ಜನಪದ ಗೀತೆಗಳ ಉಗಮ ಮತ್ತು ಅವುಗಳ ಸ್ವರೂಪವನ್ನು ಕುರಿತವಾಗಿವೆ.

ಮುಖ್ಯವಾಗಿ ಜನಪದ ಗೀತೆಗಳ ವಸ್ತು ಬುದ್ಧಿ ಪ್ರಧಾನವಾಗಿರದೆ, ಅದು ಭಾವ ಪ್ರಧಾನವಾಗಿರುತ್ತದೆ. ಇದರಿಂದಾಗಿ ಇವು ಜನಸಮುದಾಯಕ್ಕೆ ಹೆಚ್ಚು ಆಪ್ಯಾಯಮಾನ ಎನಿಸುತ್ತವೆ. ಅವರ ಮನಸ್ಸಿನ ಹತ್ತಿರ ಸರಿಯುತ್ತವೆ. ಅಲ್ಲದೆ ಜನಪದ ಗೀತೆಗಳು ಏನನ್ನೇ ಹೇಳಲಿ ಸುತ್ತಿಬಳಸಿ ಹೇಳದೆ ಯಾರಿಗೆ ಹೇಳಬೇಕೋ ಅವರಿಗೆ ನೇರ ಮತ್ತು ಸರಳವಾಗಿ ಹೇಳಿ ಮುಗಿಸುತ್ತವೆ. ಇದು ಗೀತೆಗಳ ಮುಖ್ಯ ಗುಣವಾಗಿದ್ದು, ಹೇಳಬೇಕಾದ ವಿಷಯದ ಕಡೆ ಗಮನ ಹರಿಯುವಂತೆ ಮಾಡುತ್ತವೆ.

"ಜನಪದ ಸಾಹಿತ್ಯದ ಇತರ ಪ್ರಕಾರಗಳಂತೆಯೇ ಜನಪದ ಗೀತೆಗಳ ಉಗಮ ಕಾಲ ಯಾವುದೆಂದು ಖಚಿತವಾಗಿ ಹೇಳಲಾಗುವುದಿಲ್ಲ. ಆದರೆ ಅವು ಹುಟ್ಟಿ ಬೆಳೆದದ್ದಂತೂ ಶುದ್ಧವಾದ ವಾಕ್ ಸಂಪ್ರದಾಯದಲ್ಲಿಯೇ. ಇದಕ್ಕೆ ಕಾರಣರಾದವರು ಮಾತ್ರ ಅನಕ್ಷರಸ್ಥರಾದ ಸಾಮಾನ್ಯ ಜನ. ಜನಪದ ಗೀತೆಗಳನ್ನು ರಚಿಸುವ, ಹಾಡುವ ಮತ್ತು ಬೋಧಿಸುವ ಯಾವ ಕ್ರಮಬದ್ಧ ತಂತ್ರವೂ ಸಾಮಾನ್ಯವಾಗಿ ಇಲ್ಲ. ಕೇಳುವುದರಿಂದ, ನೆನಪಿಟ್ಟುಕೊಳ್ಳುವುದರಿಂದ, ಹಾಡುವವರ ಜೊತೆ ಧ್ವನಿಗೂಡಿಸುವುದರಿಂದ ಅವುಗಳನ್ನು ಕಲಿಯಲಾಗುತ್ತದೆ. ಈ ಮಾದರಿಯಲ್ಲೇ ಅದು ತಲೆಮಾರಿನಿಂದ ತಲೆಮಾರಿಗೆ ಹಾದು ಬಂದಿದೆ. ಜನಪದ ಹಾಡುಗಾರರಿಗೆ ಇವುಗಳ ಸ್ವರೂಪ ಮತ್ತು ರಚನೆಗೆ ಸಂಬಂಧಿಸಿದಂತೆ ಯಾವ ಪ್ರಜ್ಞಾಪೂರ್ವಕವಾದ ಅರಿವೂ ಇರುವುದಿಲ್ಲ. ಹೀಗೆ ಒಂದು ಸಮುದಾಯದ ಆಶಯಗಳನ್ನು ಅಭಿವ್ಯಕ್ತಿಸುವ ಉದ್ದೇಶವನ್ನು ಹೊಂದಿರುವ ಜನಪದ ಗೀತೆಯ ಮುಖ್ಯ ಲಕ್ಷಣಗಳೆಂದರೆ ವಾಕ್ಸಂಪ್ರದಾಯ ಮತ್ತು ಅಜ್ಞಾತ ಕರ್ತೃತ್ವ"[೯] ಎಂಬ ಮಾತುಗಳು ಜನಪದ ಗೀತೆಗಳ ಉಗಮ ಹಾಗೂ ಅವುಗಳ ಮೌಖಿಕ ಪರಂಪರೆಯನ್ನು ಕುರಿತು ಚರ್ಚಿಸುತ್ತವೆ.

ಶೈಲಿ ಹಾಗೂ ರಚನೆಯ ದೃಷ್ಟಿಯಿಂದ ಜನಪದ ಗೀತೆಗಳ ಹರಹು ಎರಡು ಮೂರು ಸಾಲುಗಳ ಚಿಕ್ಕ ಚಿಕ್ಕ ಬಿಡಿ ಹಾಡುಗಳಿಂದ ಹಿಡಿದು ಸಾವಿರಾರು ಸಾಲುಗಳ, ಅನೇಕ ರಾತ್ರಿಗಳವರೆಗೂ ಹಾಡಿದರೆ ಮುಗಿಯದಷ್ಟು ವಿಸ್ತಾರತೆಯನ್ನು ಹೊಂದಿವೆ. "ಜನಪದ ಸಾಹಿತ್ಯದ ಶೈಲಿಯನ್ನು ರೂಪಿಸುವಲ್ಲಿ ಪ್ರಮುಖವಾಗಿ ಪ್ರಾಸ, ಅನುಪ್ರಾಸ, ಧ್ವನ್ಯನುಕರಣೆ (Onomatopoeia), ಛಂದೋಗತಿ (Rhythm), ಪ್ರತೀಕ (Symbol), ಪಡೆನುಡಿ, ವ್ಯಂಗ್ಯಾರ್ಥ, ಭಾಷಾ ರಚನೆಗಳ ಸರಳತೆ ಮೊದಲಾದ ಕಾವ್ಯಾಂಶಗಳು ಕಾರಣವಾಗುತ್ತವೆ. ಜನಪದ ಕಾವ್ಯದಲ್ಲಿ ಪ್ರಾಸಕ್ಕಿಂತ ಅನುಪ್ರಾಸಕ್ಕೆ ಹೆಚ್ಚು ಮಹತ್ವವಿದ್ದರೂ ಆದಿಪ್ರಾಸ ಅಲ್ಲಲ್ಲಿ ಕಾವ್ಯದ ಸೊಗಸನ್ನು ಹೆಚ್ಚಿಸುವುದನ್ನು ನಾವು ಗುರುತಿಸುತ್ತೇವೆ.

ಆಡಿನ ಮಲಿಹಂಗ । ಜೋಡ ನಾವಿಬ್ಬರು ।
ಆಡಬ್ಯಾಡ ತಂಗಿ ಕದನವ । ಜಗಳಕ
ಜೋಡಿನ ಹಕ್ಕಿ ಅಗಲ್ಯಾವ ॥"[೧೦]

ಎಂಬ ಮಾತುಗಳು ಹಾಗೂ ಜನಪದ ಗೀತೆಯು ಜನಪದ ಗೀತೆಗಳ ರಚನೆಯ ಶೈಲಿಯನ್ನು ನಮ್ಮ ಗಮನಕ್ಕೆ ತಂದುಕೊಡುತ್ತದೆ. ಅಲ್ಲದೆ ಕನ್ನಡದ ಜನಪದ ಗೀತೆಗಳ ಮುಖ್ಯ ಛಂದಸ್ಸು ತ್ರಿಪದಿಯಾಗಿದ್ದು, ಈ ಗೀತೆಗಳಿಗೆ ಒಂದು ಬಂಧವನ್ನು ಒದಗಿಸಿದೆ.

"ಕನ್ನಡ ಜನಪದ ಕಾವ್ಯ ಸಂಸ್ಕೃತಿ ಛಂದಸ್ಸನ್ನೂ ಬ್ರಹ್ಮ, ವಿಷ್ಣು, ರುದ್ರಗಣಗಳೆಂಬ ವಿಭಜನೆಯನ್ನೂ ಮೀರಿ, ವ್ಯಾಪಕಗೊಂಡಿದೆ ಎಂಬ ವಿದ್ವಾಂಸರ (ಹಕಾರಿ. ೧೫೭) ಮಾತು ನೂರಕ್ಕೆ ನೂರು ಸತ್ಯ. ಪ್ರತಿಯೊಂದು ಜನಪದದ ಭಾಷೆಯಲ್ಲಿ ಅದಕ್ಕನುಗುಣವಾದ ಸ್ವಯಂ ನಿರ್ಮಿತವಾದ ಧ್ವನಿ, ನಾದ, ಲಯ, ತಾಳ, ಛಂದಸ್ಸುಗಳಾಗಿ ಮಾರ್ಪಡುತ್ತವೆ. ಈ ವಿಭಿನ್ನತೆಯಿಂದಾಗಿ ಕಾವ್ಯ ವೈವಿಧ್ಯವೂ ಉಂಟಾಗುತ್ತದೆ. ಈ ಲಯ ತಾಳಗಳು ಮೂಲತಹ ಬದುಕಿನ ಪರಿಸರದಲ್ಲಿಯ ಸಹಜ ಕ್ರಿಯೆಯನ್ನು ಅಥವಾ ಆಡು ಮಾತಿನ ಒಳಗಿರುವ ಸಹಜವಾದ ಲಯ ತಾನಗಳನ್ನು ಅವಲಂಬಿಸಿ ಹುಟ್ಟುವ ಸಾಧ್ಯತೆ ಹೆಚ್ಚು. ಮಾತಿನ ಗತಿಯೇ ನಾದದಲ್ಲಿ ಕರಗಿ ಹಾಡಾಗಿ ರೂಪಾಂತರಗೊಳ್ಳಬಹುದು"[೧೧] ಎಂಬ ಮಾತುಗಳು ನಮ್ಮ ಗ್ರಾಮೀಣ ಜನರ ದಿನನಿತ್ಯದ ವ್ಯಾವಹಾರಿಕ ಭಾಷೆಯಲ್ಲಿನ ಪದ ವಿನ್ಯಾಸ ಕ್ರಮವನ್ನು ಬದಲಾಯಿಸುವುದರ ಮುಖೇನ ಜನಪದ ಸಾಹಿತ್ಯ ಶೈಲಿ ಉಂಟಾಗುವುದನ್ನು ತಿಳಿಸಿಕೊಡುತ್ತದೆ.

ಒಟ್ಟಿನಲ್ಲಿ ನಮ್ಮ ಕನ್ನಡ ಜನಪದ ಗೀತೆಗಳು ಜನಪದರ ಸಮಷ್ಟಿ ಪ್ರಜ್ಞೆಯಿಂದ ಹುಟ್ಟಿ ನಂತರದಲ್ಲಿ ಸಾಮೂಹಿಕವಾಗಿ ಬಳಕೆಯಗುತ್ತಿರುವ ಲಲಿತ ಕಲಾತ್ಮಕ ಅಭಿವ್ಯಕ್ತಿಯ ಮಾಧ್ಯಮಗಳಾಗಿವೆ. ಅಲ್ಲದೆ "ಜನಪದ ಭಾಷೆಯೇ ಜನಪದ ಸಾಹಿತ್ಯಕ್ಕೆ ಮೂಲ ಮಾಧ್ಯಮವಾಗಿರುವುದೇ ಜನಪದ ಸಾಹಿತ್ಯ ಶೈಲಿಯ ವೈವಿಧ್ಯತೆಗೆ, ಸೌಂದರ್ಯಕ್ಕೆ ಹಾಗೂ ಆಪ್ಯಾಯಮಾನಕ್ಕೆ ಮೂಲ ಕಾರಣ. ಆದುದರಿಂದಲೇ ಎಮರ್ಸನ್ ಜನಪದ ಭಾಷೆಯನ್ನು ಕುರಿತು (As this is the first language, so it is the last) (ಜನಪದ ಭಾಷೆ ಮೊದಲ ನುಡಿಯಾಗಿರುವಂತೆ ಕೊನೆಯದೂ ಹೌದು)"[೧೨] ಎಂದು ಹೇಳಿದ ಮಾತು ಔಚಿತ್ಯಪೂರ್ಣ ಹಾಗೂ ಸಮಂಜಸವಾಗಿದೆ.

ಸರಳತೆ ಮತ್ತು ಸ್ಪಷ್ಟತೆ ಜನಪದ ಗೀತೆಗಳ ಪ್ರಮುಖ ಲಕ್ಷಣಗಳು. ಅದು ಏನನ್ನೇ ವಿವರಿಸಲಿ ನೇರವಾಗಿ ಹೇಳುತ್ತದೆ. "ಸಾಮಾನ್ಯವಾಗಿ ಜನಪದ ಗೀತೆಗಳನ್ನು ರಚಿಸುವುದಕ್ಕೆ ಮತ್ತು ಹಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಔಪಚಾರಿಕ ಬೋಧನಾ ತಂತ್ರವೊಂದು ಇರುವುದಿಲ್ಲ. ಅವು ಕಿವಿಯ ಮೂಲಕ ಕಲಿತುಕೊಂಡವು ಮತ್ತು ಹಾಗೆಯೇ ತಲೆಮಾರಿನಿಂದ ತಲೆಮಾರಿಗೆ ಸಾಗಿದವು. ಅವುಗಳ ರೂಪ ಅಥವಾ ರಚನೆಯನ್ನು ಕುರಿತಾದ ಯಾವುದೇ ಬುದ್ಧಿಪೂರ್ವಕ ಅರಿವು ಜನಪದ ಗಾಯಕರಿಗೆ ಇರುವುದಿಲ್ಲ. ಅವರ ಮನಸ್ಸಿನಲ್ಲಿ ಯಾವುದೇ ಸೌಂದರ್ಯಾತ್ಮಕ ಅಥವಾ ವಿಶ್ಲೇಷಕ ಸಿದ್ಧಾಂತವೂ ಇರುವುದಿಲ್ಲ. ತಾಂತ್ರಿಕವಾಗಿ ಶಿಷ್ಟವಾಗಿ ಹೋಗಿರುವ ನಮ್ಮ ಸಂಗೀತದ ಅನುಷ್ಠಾನದ ಕಲಿಕೆ ಹಾಗೂ ಪೂರ್ವಾಭ್ಯಾಸಗಳ ಲಕ್ಷಣಗಳಾವುವೂ ಇಲ್ಲಿ ಕಂಡುಬರುವುದಿಲ್ಲ"[೧೩] ಎಂಬ ಮಾತುಗಳು ಜನಪದ ಗೀತೆಗಳ ರಚನಾ ಪರಂಪರೆಯನ್ನು ಕುರಿತು ಚರ್ಚಿಸುತ್ತವೆ.

ಏಕೆಂದರೆ ಜನಪದ ಗೀತೆಗಳ ಮೂಲ ರಚನಾಕಾರರು ಯಾರು? ಎಂಬುದು ನಮಗಿನ್ನೂ ಗೊತ್ತಿಲ್ಲ. ಇವು ಪ್ರತಿ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಹಸ್ತಾಂತರಗೊಳ್ಳುತ್ತ ಬಳಕೆಯಲ್ಲಿ ಇರುವಂತಹವು. ಈ ನಡುವೆ ಹಲವು ಗಾಯಕರಿಂದ ಗೊತ್ತಿದ್ದೊ ಗೊತ್ತಿಲ್ಲದೆಯೋ ಬಹಳಷ್ಟು

ಮಾರ್ಪಾಡುಗಳು ಇವುಗಳಲ್ಲಿ ಸೇರಿ ಹೋಗಿವೆ. ಜನಪದ ಗೀತೆಗಳ ಸೃಷ್ಟಿಕ್ರಿಯೆ ಎಂಬುದು ಒಬ್ಬನಿಂದ ಪ್ರಾರಂಭವಾದದ್ದಲ್ಲ. ಅಂತೆಯೇ ಅದು ಒಬ್ಬನಿಂದ ಮುಕ್ತಾಯವಾಗುವುದೂ ಇಲ್ಲ. ಅದು ವಾಕ್ ಪರಂಪರೆಯ ಮೂಲಕ ಅನೇಕ ವ್ಯಕ್ತಿ ಹಾಗೂ ತಲೆಮಾರುಗಳ ನಡುವೆ ಹರಡಿಕೊಂಡು ಮುನ್ನಡೆದಿರುವಂತಹದ್ದು.

೩.೨. ಮೌಲ್ಯ ಮತ್ತು ಸ್ವರೂಪ

ಜನಪದ ಗೀತೆಗಳ ಮುಖ್ಯ ಗುಣ ಮೌಲ್ಯ ಹಾಗೂ ನೀತಿ ನಿರೂಪಣೆ. ಸಮಾಜಮುಖಿಯಾದ ಬದುಕನ್ನು ಕಟ್ಟಿಕೊಳ್ಳುವ ಬಹುಮುಖ್ಯ ಒತ್ತಾಸೆಯ ಮೌಲ್ಯವನ್ನು ಇವು ಪ್ರತಿಪಾದಿಸುತ್ತವೆ. ಜೀವಮುಖಿಯಾದ ಈ ಗೀತೆಗಳು ನಮ್ಮ ಜನಪದರ ಸ್ಮರಣೆಯಲ್ಲಿ ಮಾಸಿ ನೆನಪಿನ ಪಟಲಕ್ಕೆ ಸೇರಿದ ಜನರ ಜೀವನ ವಿಧಾನಗಳು ಹಾಗೂ ಸಾಮಾಜಿಕ ಸಂಗತಿಗಳ ಮೇಲೆ ಹಿನ್ನೋಟವನ್ನು ಒದಗಿಸುತ್ತವೆ. ಕೆಟ್ಟ ಕೆಲಸಗಳನ್ನು ಮಾಡದೆ ಒಳ್ಳೆಯ ಬದುಕನ್ನು ಸಾಗಿಸುವಂತೆ ಪ್ರೇರೇಪಿಸುವ ಇವು ಜನಪದರ ಸಾಮಾಜಿಕ ಜೀವನದಲ್ಲಿ ಪ್ರಧಾನ ಪಾತ್ರವನ್ನು ವಹಿಸಿವೆ. ದುಷ್ಟ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ ಒದಗುವ ಶಿಕ್ಷೆ ಹಾಗೂ ಅದರ ಪರಿಣಾಮಗಳನ್ನು, ಬದುಕಿನ ಗಾಢತೆಗಳನ್ನು ಕುರಿತು ಇವು ಚಿಂತಿಸುತ್ತವೆ. ಮಾನವನ ದೈನಂದಿನ ಆಗುಹೋಗುಗಳಲ್ಲಿ ಈ ಗೀತೆಗಳು ಹಾಸುಹೊಕ್ಕಾಗಿದ್ದು, ಆತನ ಪ್ರತಿಯೊಂದು ಹಂತದಲ್ಲಿಯು ಮೌಲ್ಯಯುತವಾದ ಬದುಕನ್ನು ಕಟ್ಟಿಕೊಳ್ಳುವಂತೆ ಉತ್ತೇಜಿಸುತ್ತವೆ.

ಜನಪದ ಗೀತೆಗಳು ಜೀವನದ ಕ್ರೂರ ವಾಸ್ತವಕ್ಕೆ ಹಿಡಿದ ಕೈಗನ್ನಡಿಗಳಾಗಿದ್ದು, ಬದುಕಿನ ಸತ್ಯವನ್ನು ಯಥಾವತ್ತು ನಮ್ಮ ಕಣ್ಣ ಮುಂದೆ ಚಿತ್ರಿಸಿ ನಮ್ಮ ಮನವನ್ನು ಕಲಕುತ್ತವೆ. ಇವು ಇಷ್ಟಕ್ಕೇ ನಿಲ್ಲದೆ ಜೀವನ ಸಮಸ್ಯೆಗಳತ್ತ ಗಂಭೀರವಾಗಿ ಯೋಚಿಸಲು ಹಚ್ಚಿ ಅವುಗಳಿಗೆ ಪರಿಹಾರೋಪಾಯಗಳನ್ನು ಸಹ ಹುಡುಕುವಂತೆ ಮಾಡುತ್ತವೆ. ಮೌಢ್ಯ, ಕ್ರೂರತೆ, ಸುಳ್ಳು, ಮೋಸ, ಸ್ವಾರ್ಥ, ವಂಚನೆಗಳಂತಹ ಸಣ್ಣತನಗಳಿಂದ ಸಂಭವಿಸುವ ಅನಾಹುತಗಳನ್ನು ಹಾಗೂ ಅವುಗಳಿಂದ ಉಂಟಾಗುವ ದಾರುಣ ಸಂಗತಿಗಳನ್ನು ಮನಮುಟ್ಟುವಂತೆ ನಿವೇದಿಸುತ್ತವೆ. ಜೊತೆಗೆ ಅಂತಹ ದುಷ್ಟ ಕಾರ್ಯಗಳಿಂದ ದೂರವಿರುವಂತೆ ಮನಸ್ಸನ್ನು ಪರಿವರ್ತಿಸುತ್ತವೆ. ಬಹುಮುಖ್ಯವಾಗಿ ಜನಪದ ಗೀತೆಗಳು ಕಷ್ಟಕೋಟಲೆಗಳನ್ನು ನುಂಗಿ ಬದುಕನ್ನು ಸಾಗಿಸುವ ಛಲ ಹಾಗೂ ಜೀವನ ಪ್ರೀತಿಯನ್ನು ಕಲಿಸಿಕೊಡುತ್ತವೆ. ಇಂತಹ ಕಷ್ಟ ಪರಂಪರೆಗಳನ್ನು ಈಜಿ ದಡ ಸೇರಿದಾಗ ಸಿಗುವ ಸುಖದ ನೆಲೆಯನ್ನು ಕೂಡ ಪರಿಚಯಿಸುತ್ತವೆ. ಕಷ್ಟದಲ್ಲಿರುವ ಮನಕ್ಕೆ ನೆಮ್ಮದಿ ತಂದು, ಬದುಕಿಗೆ ಆತ್ಮವಿಶ್ವಾಸವನ್ನು ತುಂಬುವ ಜನಪದ ಗೀತೆಗಳ ಈ ಗುಣ ಅವುಗಳಿಗೆ ವಿಶೇಷವಾದ ಮೆರುಗನ್ನು ನೀಡಿದೆ.

ಜನಪದ ಗೀತೆಗಳಲ್ಲಿ ಮಾನವೀಯತೆಗೆ ಹೆಚ್ಚು ಒತ್ತು ನೀಡಲಾಗಿದೆ. ಇವುಗಳಲ್ಲಿ ಎಲ್ಲರನ್ನು ಪ್ರೀತಿಸುವ ಮಾನವೀಯ ಗುಣಗಳು ಕಂಡುಬರುತ್ತವೆ. ಏಕೆಂದರೆ ಜನ ಜೀವನದ ವಾಸ್ತವ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನ ಇವುಗಳ ಮುಖ್ಯ ಉದ್ದೇಶವಾಗಿರುವ ಕಾರಣವಾಗಿ ನಿತ್ಯ

ಜೀವನದ ವಿವರಗಳ ಮುಖೇನ ವಾಸ್ತವ ಪ್ರಪಂಚವನ್ನು ನಮ್ಮ ಗಮನಕ್ಕೆ ತರುತ್ತವೆ. ಆ ಮೂಲಕ ಅಲ್ಲಿನ ಬದುಕಿನ ರೀತಿ, ನೀತಿ, ಸ್ನೇಹ, ವಿಶ್ವಾಸ, ಪ್ರೀತಿ, ಮಮತೆಗಳ ಸವಿಯನ್ನು ನಮಗೆ ಉಣಬಡಿಸುತ್ತವೆ.

ಪ್ರತಿಯೊಂದು ಜನಪದ ಗೀತೆಗಳು ಕೂಡ ಒಂದಲ್ಲಾ ಒಂದು ಮೌಲ್ಯವನ್ನು ಕುರಿತೇ ಚಿಂತಿಸುತ್ತವೆ.

"ಬೆಳ್ಳನ್ನ ಬಿಳಿಯೆತ್ತ ಬೆಳ್ಳಿಯ ಬಾರಕೋಲು
ಬಂಗಾರದ ಛಡಿಯ ಬಲಗೈಗೆ । ಹಿಡಕೊಂಡು
ಹೊನ್ನ ಬಿತ್ಯಾರ ಹೊಳಿಸಾಲೊ"[೧೪]

ಎನ್ನುತ್ತಾರೆ ಜನಪದರು. ಈ ಜನಪದ ಗೀತೆಯು ಕೃಷಿ ಚಟುವಟಿಕೆಯನ್ನು ಕುರಿತು ಹೇಳುತ್ತಿದ್ದರೂ ಸಹ ಇದರಲ್ಲಿನ ಆಶಯ ಮತ್ತು ಮೌಲ್ಯಗಳು ಬಹಳ ಅರ್ಥಪೂರ್ಣವಾದವು. ಅಲ್ಲದೆ ಇಲ್ಲಿ ಬಳಕೆಯಾಗಿರುವ ಬಿಳಿಯೆತ್ತು, ಬೆಳ್ಳಿಯ ಬಾರುಕೋಲು, ಬಂಗಾರದ ಛಡಿ ಇವೆಲ್ಲವೂ ಕೂಡ ನಮ್ಮ ಜನಪದರ ಹೃದಯ ಶ್ರೀಮಂತಿಕೆ ಹಾಗೂ ತುಂಬು ಬಾಳ್ವೆಯನ್ನು ಸಂಕೇತಿಸುತ್ತವೆ. ಇವೆಲ್ಲವು ಶ್ರೀಮಂತರ ಬಳಿ ಇರುವ ವಸ್ತುಗಳಾದರೂ ಕೂಡ ಜನಪದರು ತಮ್ಮಲ್ಲಿರುವ ವಸ್ತುಗಳನ್ನೆ ಚಿನ್ನ, ಬೆಳ್ಳಿಗಳೆಂದುಕೊಂಡು ಸುಖಪಟ್ಟವರು. ಅಲ್ಲದೆ 'ಹೊನ್ನ ಬಿತ್ಯಾರ ಹೊಳಿಸಾಲೊ' ಎಂಬುದು ಅರ್ಥಪೂರ್ಣವಾದ ಕಲ್ಪನೆಯಾಗಿದೆ. ಹೊಳಿ ಸಾಲಲ್ಲಿ ಹೊನ್ನನ್ನು ಬಿತ್ತಿ ಹೊನ್ನನ್ನು ಬೆಳೆಯುವ ಆಲೋಚನೆ ನಿಜಕ್ಕೂ ಬೆರಗು ಮೂಡಿಸುವಂತಹದ್ದು. ಬದುಕನ್ನು ಬಂಗಾರವಾಗಿಸಿಕೊಳ್ಳುವ ಮೌಲ್ಯಯುತವಾದ ಆಲೋಚನಾ ಕ್ರಮ ಇಲ್ಲಿದೆ. ಅಲ್ಲದೆ

"ಹಾಲುಂಡ ತವರೀಗಿ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ । ಕುಡಿಯಂಗ
ಹಬ್ಬಲೆ ಅವರ ರಸಬಳ್ಳಿ"[೧೫]

ಎಂದು ಹೆಣ್ಣು ಮಗಳು ತಾನು ಹುಟ್ಟಿ ಬೆಳೆದ ತವರನ್ನು ಹಾಡಿ ಹರಸಿದ್ದಾಳೆ. ಆಕೆಯ ಮನದಲ್ಲಿ ತನ್ನ ತವರಿಗೆ ಸಲ್ಲಿಸುವ ಅನುಪಮವಾದ ಧನ್ಯತಾ ಮನೋಭಾವವಿದೆ. ಇದು ನಮ್ಮ ಸಂಸ್ಕೃತಿಯು ಜನಪದ ಹೆಣ್ಣುಗಳಿಗೆ ಕಲಿಸುವ ಬಹುದೊಡ್ಡ ಮೌಲ್ಯ. ತಾನು ಹಾಡಿ, ನಲಿದ ತನ್ನ ತವರು ಯಾವತ್ತೂ ಹಾಳಾಗದಿರಲೆಂದು ಹರಸುತ್ತಾಳೆ. ತನ್ನ ಹೃದಯ ಪೂರ್ವಕವಾದ ಕೃತಜ್ಞತೆಗಳನ್ನು ಸಮರ್ಪಿಸಿ ಧನ್ಯಳಾಗಿದ್ದಾಳೆ. ಹೊಳೆ ಹಾಗೂ ಹೊಳೆ ದಂಡೆಗಳು ಜನಪದ ಗೀತೆಗಳಲ್ಲಿ ಹೆಚ್ಚು ಬಾರಿ ಉಲ್ಲೇಖಿತವಾಗಿವೆ. ಇವುಗಳು ಜನರ ಜೀವನ ವಿಧಾನ ಹಾಗೂ ನಮ್ಮ ಜಲ ಮೂಲದ ಸಂಸ್ಕೃತಿಯನ್ನು ಅರಿವಿಗೆ ತರುತ್ತವೆ. ಏಕೆಂದರೆ ಮಾನವನು ತಾನು ಜೀವನವನ್ನು ಕಟ್ಟಿಕೊಂಡದ್ದೇ ನೀರಿನ ಮೂಲಗಳಿರುವ ಕಡೆ. ಹೊಳೆ, ನದಿ, ಕೆರೆಗಳ ಬಳಿ ತಾನು ವಾಸಿಸಲು ಪ್ರಾರಂಭಿಸುತ್ತ ಕುಟುಂಬವನ್ನು ನಿರ್ಮಿಸಿಕೊಂಡು ತನ್ನ ಜೀವನ ಪರಂಪರೆಯನ್ನು ಮುಂದುವೆರಸಿದ್ದಾನೆ. ಹೀಗಾಗಿ

ನದಿ, ಹೊಳೆ, ಹೊಳೆ ದಂಡೆಗಳು ನಮ್ಮ ಜನಪದ ಗೀತೆಗಳ ಸಂದರ್ಭದಲ್ಲಿ ಮತ್ತೆ ಮತ್ತೆ ಉಲ್ಲೇಖಿತವಾಗುತ್ತ ನಮ್ಮ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪರಿಚಯಿಸುತ್ತವೆ. ಅಲ್ಲದೆ ತನ್ನ ಬದುಕನ್ನು ಕುರಿತ ಆಕೆಯಲ್ಲಿನ ಮೌಲ್ಯ ಪ್ರಜ್ಞೆ ಹೀಗಿದೆ.

"ಕೂಲಿ ಮಾಡಿದರೇನ, ಕೋರಿ ಹೊತ್ತರೇನ
ನನಗ ನಮರಾಯ ಬಡವೇನ । ಬಂಗಾರ
ಮಾಲು ಇದ್ದಾಂಗ ಮನೆಯಾಗ"[೧೬]

ಗೃಹಿಣಿಯಾದವಳಿಗೆ ತನ್ನ ಪತಿಯನ್ನು ಹೊರತುಪಡಿಸಿ ಬೇರೇನು ಬೇಡ. ಆತ ಕೂಲಿ ಮಾಡಿದರೆ ಏನು? ಕೋರಿ ಹೊತ್ತರೇನು? ಆತ ಬಡವ ಎಂಬ ಅಳುಕಾಗಲಿ, ನೋವಾಗಲಿ ಈಕೆಗಿಲ್ಲ. ಏಕೆಂದರೆ ಆತ ಬಡವನಾದರೂ ತನ್ನ ಜೊತೆಯಲ್ಲಿದ್ದರೆ ಬಂಗಾರದ ಮಾಲು ಮನೆಯಲ್ಲಿದ್ದಷ್ಟು ಮೌಲ್ಯವಂತ ಎಂಬ ಆಕೆಯ ಮನಸ್ಥಿತಿ ನಿಜಕ್ಕೂ ಅಭಿನಂದನಾರ್ಹವಾದುದು. ಆಕೆಗೆ ತನ್ನ ಪತಿಯೊಬ್ಬ ಜೊತೆಯಲ್ಲಿದ್ದರೆ ಸಾಕು. ಎಂತಹ ಕಷ್ಟಗಳನ್ನು ಸಹ ಸಹಿಸುತ್ತಾಳೆ.

ಹೆಣ್ಣು ಹಣ, ಐಶ್ವರ್ಯಗಳಿಗಿಂತ ಬೇಡಿಕೊಳ್ಳುವುದು ಒಂದನ್ನೆ ಅದು

"ಸತ್ತು ಹುಟ್ಟುವದೊಲ್ಲೆ, ಸಾಯು ಗಂಡನ್ನೊಲ್ಲೆ
ಸತ್ತಿಕರ ಮಗಳ ಗೌರವ್ವ । ನಿನ್ನಂಥ
ಮುತ್ತೈದಿತನವ ಕೊಡು ನಮಗ ॥"[೧೭]

ಎಂದು ಬೇಡಿಕೊಳ್ಳುತ್ತಾಳೆ. ನನಗೆ ಮತ್ತೆ ಹುಟ್ಟು, ಸಾವುಗಳು ಬೇಕಿಲ್ಲ. ಸಾಯುವ ಗಂಡ ಬೇಕಿಲ್ಲ. ಸತ್ಯವಂತರ ಮಗಳಾದ ಗೌರವ್ವನಂತಹ ಮುತ್ತೈದೆತನವನ್ನು ಮಾತ್ರ ತನಗೆ ನೀಡುವಂತೆ ಬೇಡಿಕೊಳ್ಳುತ್ತಾಳೆ.

ಸೂಕ್ಷ್ಮವಾಗಿ ಅವಲೋಕಿಸಿದರೆ ಜನಪದ ಗೀತೆಗಳಿಗು ಹಾಗೂ ಮೌಲ್ಯಗಳಿಗು ಅವಿನಾಭಾವ ಸಂಬಂಧವಿದೆ. ಜನಪದರು ತಾವು ವಾಸಿಸುತ್ತಿದ್ದ ಸಮಾಜ ಒಪ್ಪಿದ್ದ ಸಾಮಾಜಿಕ ಮೌಲ್ಯಗಳನ್ನು ತಾವೂ ಕೂಡ ಒಪ್ಪಿಕೊಂಡಿದ್ದರು. ಹಾಗಾಗಿ ಇವರ ಪ್ರತಿನಿತ್ಯದ ಕೆಲಸ ಕಾರ್ಯಗಳಲ್ಲಿ ನೀತಿ ಹಾಗೂ ಮೌಲ್ಯ ಪ್ರಜ್ಞೆ ಹಾಸುಹೊಕ್ಕಾಗಿರುವುದು ಕಂಡುಬರುತ್ತದೆ. ಕೃಷಿ ಪ್ರಧಾನವಾದ ಕಾಯಕವನ್ನು ಅನುಸರಿಸುತ್ತಿದ್ದ ಜನಪದರು ಅದರಲ್ಲೆ ದೈವವನ್ನು ಕಂಡವರು. ತಮ್ಮೆಲ್ಲ ಸುಖ-ದುಃಖಗಳಿಗೆ ತಾವು ಮಾಡುವ ಕಾಯಕಗಳೇ ಕಾರಣ ಎಂದು ನಂಬಿದ್ದರು. ಆ ಕಾರಣವಾಗಿಯೆ ಇವರು ಅನುಸರಿಸುತ್ತಿದ್ದ ಹಾಗೂ ಅಭಿವ್ಯಕ್ತಿಸುತ್ತಿದ್ದ ಮೌಲ್ಯಗಳು ಸರಳಗೊಳಿಸಿದ ನೀತಿಗಳಾಗಿದ್ದವು. ಇವರ ಅಭಿವ್ಯಕ್ತಿ ಕ್ರಮದಲ್ಲಿ ಸೂಕ್ಷ್ಮವಾಗಿ ಮಾನವೀಯ ಸಂಬಂಧಗಳು ಯಾವಾಗಲೂ ಕ್ರಿಯಾಶೀಲವಾಗಿರುತ್ತಿದ್ದವು. ಇದಕ್ಕೆ ಮುಖ್ಯ ಕಾರಣ ಜನಪದರು ಬದುಕುತ್ತಿದ್ದ ಸಮಾಜದ ಸಮಷ್ಟಿ ಪ್ರಜ್ಞೆ ಹಾಗೂ ಅದನ್ನು ಜೀವಂತವಾಗಿರಿಸಿದ್ದ ಸಮಾಜ.

ಯಾವುದೇ ರೀತಿಯ ಕಷ್ಟ ಸುಖಗಳು ಶಾಶ್ವತವಲ್ಲ ಎಂಬ ಅನುಭವದ ಅರಿವು ಇವರಿಗಿದ್ದಿತು. ಹಾಗಾಗಿಯೇ ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಬದಿಗೊತ್ತಿ ತಮ್ಮ ಪ್ರತಿ ಕೆಲಸ ಕಾರ್ಯಗಳಲ್ಲಿಯೂ ಸಹಾನುಭೂತಿ, ಕರುಣೆ ಎಂಬ ಸಮಾಜದ ಹಿತಚಿಂತನೆಗಳನ್ನು ತಮ್ಮ ಮನಸ್ಸಿನಲ್ಲಿ ಹೊಂದಿದ್ದರು. ಸಮಾಜದ ಹಾಗೂ ಜನ ಸಮುದಾಯದ ಹಿತ ಮುಖ್ಯವಾಗಿದ್ದ ಕಾರಣವಾಗಿ ಮೌಲ್ಯ ಎಂಬ ಚೌಕಟ್ಟನ್ನು ತಾನೇ ನಿರ್ಮಿಸಿಕೊಂಡು ಅನುಷ್ಠಾನಕ್ಕೆ ತಂದುಕೊಂಡಿದ್ದರು. ಈ ರೀತಿಯ ಮೌಲ್ಯ ಪರಂಪರೆಯುಳ್ಳ ಜನಪದ ಗೀತೆಗಳು ನಮ್ಮಲ್ಲಿ ಬಹಳಷ್ಟಿವೆ. ಇವುಗಳ ಪ್ರಧಾನ ಆಶಯ ಒಳಿತು ಮಾಡಬೇಕೆಂಬ ಹೃದಯ ವೈಶಾಲ್ಯದ ಸ್ವಯಂ ಪ್ರಜ್ಞೆ. ಇದು ಮಗು ಹುಟ್ಟಿದ ನಂತರದಲ್ಲಿ ತಾಯಿಯಿಂದಲೆ ಮೊದಲಾಗುತ್ತದೆ.

"ಆಚಾರಕರಿವಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನ ಕಂದ
ಜ್ಯೋತಿಯೇ ಆಗು ಜಗಕೆಲ್ಲ॥"[೧೮]

ಎಂದು ತಾಯಿಯೊಬ್ಬಳು ತನ್ನ ಮಗುವಿಗೆ ಹೇಳುತ್ತ ಹಾಲುಣಿಸುವ ಕ್ರಮ ನಮ್ಮ ಕನ್ನಡ ಜನಪದ ಗೀತೆಗಳ ಬಹು ದೊಡ್ಡ ಮೌಲ್ಯ ಪರಂಪರೆಯನ್ನು ನಮಗೆ ಮನಗಾಣಿಸುತ್ತದೆ. ಏಕೆಂದರೆ ತಾಯಿಯಾದವಳು ತನ್ನ ಮಗನಿಗೆ ನೀನು ಒಳ್ಳೆಯ ಮನುಷ್ಯನಾಗು. ಆಚಾರ, ನೀತಿಗಳ ಒಡೆಯನಾಗು. ಮಾತಿನಲಿ ಚೂಡಾಮಣಿಯಾಗು ಹಾಗೂ ಜಗಕ್ಕೆ ಜ್ಯೋತಿಯಾಗು, ಬೆಳಕಾಗು ಎಂಬಂತಹ ಬುದ್ಧಿ ಮಾತುಗಳನ್ನು ಹೇಳಿಕೊಡುತ್ತ, ಆತನನ್ನು ಉತ್ತಮ ನಾಗರೀಕನನ್ನಾಗಿಸುವ ಈ ಗುಣ ಅರ್ಥಪೂರ್ಣವಾದುದು. ಹೀಗಾಗಿ ಜನಪದ ಗೀತೆಗಳು ಇಂದಿಗೂ ತಮ್ಮ ಜೀವಂತಿಕೆಯನ್ನು ಉಳಿಸಿಕೊಂಡಿವೆ.

ಜನಪದ ಗೀತೆಗಳು ನಮ್ಮ ನಿತ್ಯ ಜೀವನದ ಕೆಲಸಗಳೊಂದಿಗೆ ನಿರಂತರವಾಗಿ ಸಾಗಿರುವಂತಹವು. ಇವು ಅನಕ್ಷರಸ್ಥ ಸಮಾಜವು ರೂಢಿಸಿಕೊಂಡ ಕಾವ್ಯ ಹಾಗೂ ಸಂಗೀತಗಳ ಸಮಾಗಮದ ಸಂಕೇತವಾಗಿವೆ. ಇದು ವಾಕ್ ಸಂಪ್ರದಾಯದಲ್ಲಿ ಉಳಿದು ಬಂದಿರುವ ಪ್ರಕಾರ. ಜೀವನದ ಸಾರವನ್ನು ತಿಳಿಸುವ ಈ ಅಮೂಲ್ಯ ಗೀತೆಗಳು ಅಜ್ಞಾತ ಕವಿಗಳ ಸೃಷ್ಟಿಯಾಗಿದ್ದು, ನಂತರದಲ್ಲಿ ಸಾಮೂಹಿಕ ಬಳಕೆಗೆ ಒಳಪಟ್ಟಿವೆ. ಆದರೆ ಬಳಕೆಯ ವಿಚಾರ ಬಂದಾಗ ವ್ಯಕ್ತಿಗತವಾದ ನೆಲೆಯಲ್ಲಿ ನಿಲ್ಲುವುದು ಜನಪದ ಗೀತೆಗಳ ವಿಶೇಷವಾಗಿದೆ. ಜೀವನದ ವಿವಿಧ ಘಟ್ಟಗಳಾದ ಬಾಲ್ಯ, ಯೌವ್ವನ, ವೃದ್ಧಾಪ್ಯಗಳಿಗೆ ಸಂಬಂಧಿಸಿದಂತೆ ಬದುಕಿನ ಎಲ್ಲ ಘಟ್ಟಗಳವರೆಗೆ ಜನಪದ ಗೀತೆಗಳ ವ್ಯಾಪ್ತಿ ಇದೆ. ಬದುಕಿನ ಪ್ರತಿಯೊಂದು ಹಂತದಲ್ಲಿಯೂ ಇವು ಮನುಷ್ಯನ ಜೊತೆಗಿರುವಂತಹವು. ಸರಳತೆ, ನೇರ ಅಭಿವ್ಯಕ್ತಿ ಮತ್ತು ಹೃದಯಸ್ಪರ್ಶಿ ಗುಣಗಳು ಜನಪದ ಗೀತೆಗಳ ಮೂಲಭೂತ ಗುಣಗಳಾಗಿವೆ.

ಇವುಗಳ ಸ್ವರೂಪವನ್ನು ಕುರಿತು ಚರ್ಚಿಸುವುದಾದರೆ "ಜನಪದ ಗೀತೆಯ ರೂಪ ತೀರ ಸರಳವಾದುದು. ಸಾಮಾನ್ಯವಾಗಿ ಚಿಕ್ಕ ರೂಪಗಳಲ್ಲಿ ಬಳಕೆಯಲ್ಲಿದೆ. ಪದ್ಯದಲ್ಲಿ ನಿಯಮಿತ ಸಂಖ್ಯೆಯ

ಸಾಲುಗಳು ಒಂದು ಘಟಕವಾಗಿ ಕಾಣಿಸುತ್ತಿದ್ದು, ಗೀತೆಯ ಉದ್ದಕ್ಕೂ ಅವು ಪುನರಾವರ್ತನೆಗೊಳ್ಳುತ್ತವೆ. ಭಿನ್ನ ರೂಪಗಳನ್ನು ಗುರುತಿಸುವುದು ಪದ್ಯದಲ್ಲಿನ ಸಾಲುಗಳ ಸಂಖ್ಯೆಯಿಂದ ಮತ್ತು ಪದ್ಯ ರಚನೆಯ ಮಾದರಿಯನ್ನು ರೂಪಿಸುವ ಲಕ್ಷಣಗಳಿಂದ, ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಸಾಲು ಪರಿಚಿತವಾದುದು. ನಮ್ಮ ಬಹುತೇಕ ಜನಪದ ಗೀತೆಗಳು ತ್ರಿಪದಿಯಲ್ಲಿರುವುದನ್ನು ನೆನಪು ಮಾಡಿಕೊಳ್ಳಬಹುದು. ಹಾಡುವಾಗ ಇದು ಚೌಪದಿ ರೂಪ ತಾಳುವುದನ್ನೂ ಗಮನಿಸಬೇಕು. ಪದ್ಯದ ಸಾಲಿನ ವ್ಯವಸ್ಥೆ ಎರಡು ಸಾಮಾನ್ಯ ತತ್ತ್ವಗಳನ್ನು ಅನುಸರಿಸಿರುತ್ತದೆ; ಶಿಷ್ಟ ಕಾವ್ಯದಲ್ಲಿ ನಮಗೆ ಬಹುತೇಕ ಪರಿಚಿತವಿರುವ ಛಂದೋಬದ್ಧ ನಿಯತ ಪಾದಗಳಿಂದಾದುದು ಒಂದು; ಪಾದವೊಂದನ್ನು ರೂಪಿಸುವ ಸ್ವರಭಾರ ಅಥವಾ ಮಾತ್ರೆಯ ವೈದೃಶ್ಯಗಳು ಪಾತ್ರವಹಿಸುವುದರ ಬದಲು ಅಕ್ಷರಗಳ ನಿರ್ದಿಷ್ಟ ಸಂಖ್ಯೆಯಿಂದಾದುದು ಮತ್ತೊಂದು. ಜನಪದ ಗೀತೆಯಲ್ಲಿ ಪಾದವೊಂದು ಬಹಳಷ್ಟು ಅಸ್ಥಿರವಾದುದು ಅಕ್ಷರ ಸಂಖ್ಯೆ ಬೇಕಾದ ಹಾಗೆ ಬದಲಾಗಬಹುದಾದದ್ದು. ಕೆಲವು ಭಾಷೆಗಳಲ್ಲಿ ಪಾದವೇ ಮುಖ್ಯವಾಗಿರಬಹುದು. ಇನ್ನು ಕೆಲವು ಭಾಷೆಗಳಲ್ಲಿ ಅಕ್ಷರಗಳೇ ಪ್ರಧಾನವಾಗಿರಬಹುದು. ಇಲ್ಲವೆ, ಇವೆರಡೂ ಒಟ್ಟಿಗೆ ಮುಖ್ಯವೆನಿಸಬಹುದು ಒಟ್ಟಿನಲ್ಲಿ ಪದ್ಯಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು; ಒಂದು – ಪ್ರತಿ ಸಾಲಿನಲ್ಲಿಯೂ ಒಂದೇ ರೀತಿಯ ಛಂದೋಬದ್ಧ ರಚನೆ ಇರುವಂಥದು; ಎರಡು – ಅದು ಇಲ್ಲದಿರುವಂಥದು"[೧೯] ಎಂಬ ಮಾತುಗಳು ಜನಪದ ಗೀತೆಗಳ ಸ್ವರೂಪವನ್ನು ಕುರಿತು ಚರ್ಚಿಸುತ್ತವೆ. ಏಕೆಂದರೆ ಜನಪದ ಗೀತೆಗಳ ರಚನಾಕಾರ ಅಜ್ಞಾತ ಕವಿಯಾಗಿದ್ದಾನೆ. ಅವುಗಳು ಮೌಖಿಕವಾಗಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿದ್ದರೂ ಸಹ ಅವು ತನ್ನದೇ ಆದ ಮಟ್ಟುಗಳು, ಛಂದಸ್ಸು, ಲಯಗಳಿಂದ ಕೂಡಿದ ರಚನಾ ಸ್ವರೂಪವನ್ನು ಒಳಗೊಂಡಿವೆ.

ಜನಪದ ಗೀತೆಗಳಲ್ಲಿ ಹೆಚ್ಚಿನವು ತ್ರಿಪದಿಯಲ್ಲಿವೆ. ಅಲ್ಲದೆ "ಕನ್ನಡ ಜನಪದ ಗೀತೆಗಳು ಆರಂಭದ ಕಾಲದಲ್ಲಿ ತಮಿಳಿನ 'ಕುರುಳ್'ನಂತೆ ಎರಡು ಪಾದಗಳನ್ನು ಹೊಂದಿದ್ದು, ಕಾಲ ಕಳೆದಂತೆ ಮೂರು ಪಾದಗಳಾಗಿ 'ತ್ರಿಪದಿ' ಎಂಬ ಹೆಸರು ಬಂದಿರಬಹುದೆನ್ನುತ್ತಾರೆ ಕನ್ನಡ ಛಂದಸ್ಸಿನ ಇತಿಹಾಸಕಾರರು. ತ್ರಿಪದಿಯ ಮೊದಲನೆಯ ಪಾದ ಮತ್ತು ಎರಡನೆಯ ಪಾದದ ಮೂರು ಗುಣಗಳಷ್ಟನ್ನೇ ಆ ಪ್ರಾರಂಭ ಕಾಲದ ದ್ವಿಪದಿಗಳು ಹೊಂದಿದ್ದವೆಂದೂ, ಒಟ್ಟು ಏಳು ಗಣಗಳನ್ನು ಮಾತ್ರ ಹೊಂದಿದ್ದ ಆ ದ್ವಿಪದಿಗಳನ್ನೇ 'ಏಳೆ' ಎಂದು ಕರೆದಿರಬಹುದೆಂದೂ ತೋರುತ್ತದೆ. ನಮ್ಮ ಜನಪದ ಸಾಹಿತ್ಯದಲ್ಲಿ ಇಂದಿಗೂ ತ್ರಿಪದಿಯ ಮೊದಲ ಏಳು ಗಣಗಳಷ್ಟನ್ನೇ ಹೊಂದಿರುವ ನುಡಿಗಳನ್ನುಳ್ಳ ಗೀತೆಗಳು ಉಳಿದು ಬಂದಿವೆ"[೨೦] ಎಂಬ ಅಭಿಪ್ರಾಯವು ಜನಪದ ಗೀತೆಗಳ ಸ್ವರೂಪವನ್ನು ಮನಗಾಣಿಸುತ್ತದೆ.

ಅಲ್ಲದೆ "ಜನಪದ ಗೀತೆ ಭಾವಗೀತೆಯ ಸ್ವರೂಪ ಹೊಂದಿದೆ. ಶತಮಾನಗಳ ಹಿಂದೆ ಹುಟ್ಟಿದ ಇದು ಸತ್ವ ಹಾಗೂ ಸ್ವರೂಪದಲ್ಲಿ ಭಾವಗೀತೆಗೆ ಸಂವಾದಿಯಾಗಿದೆ. ಶಿಷ್ಟ ಭಾವಗೀತೆಗೆ

ಸ್ಫೂರ್ತಿ ನೀಡುವ ಶಕ್ತಿ ಜನಪದ ಭಾವಗೀತೆಗಿದೆ. ಅಲೆಕ್ಸಾಂಡರ್ ಎಚ್.ಕ್ರಾಪೆಯವರ ಪ್ರಕಾರ ಜನಪದ ಗೀತೆ ಸಂಗೀತಯುಕ್ತವಾದ ಭಾವಗೀತೆ; ಇದರ ಕರ್ತೃ ಅಜ್ಞಾತ. ಅಂದರೆ 'ಜನಪದ'ವೇ ಕರ್ತೃ; ಜನಪದ ವರ್ಗದಲ್ಲಿ (ಅನಕ್ಷರಸ್ಥರಲ್ಲಿ) ಅನಾದಿ ಕಾಲದಿಂದ ಉಳಿದು ಬರುತ್ತದೆ. ಈ ಅಭಿಪ್ರಾಯಗಳು ಎಲ್ಲಾ ಜನಪದ ಗೀತೆಗಳಿಗೂ ಅನ್ವಯಿಸುತ್ತವೆ. ಜನಪದ ಗೀತೆ ಬರವಣಿಗೆಗೆ ಹೊರತಾಗಿ ಜನಪದರಲ್ಲಿ ಉಳಿದು ಬಂದಿದೆ"[೨೧] ಎಂಬ ಮಾತುಗಳು ಜನಪದ ಗೀತೆಗಳ ಸ್ವರೂಪವನ್ನು ಚರ್ಚಿಸುತ್ತವೆ.

೩.೩. ರಮ್ಯತೆ

'ರಮ್ಯತೆ' ಎಂಬುದು ಜನಪದ ಗೀತೆಗಳ ಆತ್ಮ. ಅದು ಗೀತೆಗಳ ಜೀವಂತಿಕೆಯೂ ಹೌದು. "ಚೆಲುವು"[೨೨] ಹಾಗೂ "ಸೌಂದರ್ಯ"[೨೩] ಎಂಬ ಪದಶಃ ಅರ್ಥವನ್ನು 'ರಮ್ಯತೆ' ಎಂಬ ಪದವು ಒಳಗೊಂಡಿದ್ದರೂ ಸಹ ಜನಪದ ಗೀತೆಗಳ ಸಂದರ್ಭದಲ್ಲಿ ಈ ಅರ್ಥಗಳು ಇಷ್ಟಕ್ಕೇ ನಿಲ್ಲದೆ ವಿಶಾಲವಾದ ಅರ್ಥವನ್ನು ಪಡೆದುಕೊಳ್ಳುತ್ತವೆ. ಜನಪದ ಗೀತೆಗಳ ಸೊಗಸು ಅವುಗಳ ಭಾಷೆಯಲ್ಲಿದ್ದು, ಅವುಗಳನ್ನು ಹಾಡುವಂತಹ ಸಹಜವಾದ ಲಯ, ನಾದ, ಶೈಲಿಗಳಿಂದ ಮೈದುಂಬಿರುತ್ತದೆ. ರಮ್ಯತೆ ಎಂಬುದು ಬದುಕನ್ನು ಕುರಿತು ಸಾಕ್ಷಾತ್ಕರಿಸಿಕೊಂಡ ಒಂದು ಜೀವನ ದೃಷ್ಟಿಕೋನ. ಇದು ಅನುಭವದ ಅಂತರಾಭಿವ್ಯಕ್ತಿಯಾಗಿದ್ದು, ಜನಪದ ಗೀತೆಗಳಲ್ಲಿ ಮಾತ್ರವಲ್ಲದೆ ಜಾನಪದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಈ ರಮ್ಯತೆಯನ್ನು ಕಾಣಲು ಸಾಧ್ಯವಿದೆ.

ಜೀವನ ಪ್ರೀತಿ, ಉತ್ಸಾಹ, ಚಲನೆ, ಪ್ರತಿಯೊಂದಕ್ಕು ತನ್ನನ್ನು ತಾನು ತೊಡಗಿಸಿಕೊಳ್ಳುವ ಗುಣ ಇವೆಲ್ಲವು ಜನಪದ ಗೀತೆಗಳು ಒಳಗೊಂಡಿರುವ ರಮ್ಯತೆಯ ಬಹುಮುಖ್ಯ ಲಕ್ಷಣಗಳಾಗಿವೆ. ಜನಪದರು ಜೀವನವನ್ನು ಕುರಿತು ತಾವು ಹೊಂದಿರುವ ಉತ್ಕಟವಾದ ಜೀವನ ಪ್ರೀತಿಯನ್ನು ಜನಪದ ಗೀತೆಗಳ ಮೂಲಕ ಅಭಿವ್ಯಕ್ತಿಪಡಿಸಿದ್ದಾರೆ. ಮುಕ್ತತೆ, ಸಹಜತೆ ಮತ್ತು ಸರಳತೆಯಿಂದ ಕೂಡಿದ ಗೀತೆಗಳು ಕನ್ನಡ ಜನಪದರಲ್ಲಿ ಹಲವಾರಿವೆ. ಈ ಸಹಜತೆ ಹಾಗೂ ಅತಿಮಾನುಷ ವ್ಯಕ್ತಿತ್ವದ ಬಗೆಗಿನ ಒಲವು ರಮ್ಯತೆಯ ಇನ್ನೊಂದು ಲಕ್ಷಣವಾಗಿದೆ.

ರಮ್ಯತೆಯು ಜನಪದರ ಹಸಿ ಹಸಿಯಾದ ತಾಜಾ ಅನುಭವಗಳ ಗಣಿಯಾಗಿದ್ದು, ಈ ಗೀತೆಗಳ ಹುಟ್ಟು ಸಹಜವಾದುದು. ಜನಪದ ಗೀತೆಗಳಲ್ಲಿನ ರಮ್ಯತೆ ಎಂದರೆ ಅದು ಗೀತೆಗಳ ಮೂಲಕ ಅಭಿವ್ಯಕ್ತಿಸುವ ಜೀವನ ಸೌಂದರ್ಯವೇ ಆಗಿದೆ. ಈ ಸೌಂದರ್ಯದ ಪ್ರಜ್ಞೆಯು ಜನಪದರಿಗೆ ಪ್ರಕೃತಿ ಸಹಜವಾದುದು. ಭಗವಂತನನ್ನು ಪ್ರಕೃತಿಯೊಂದಿಗೆ ಸಾಕ್ಷಾತ್ಕರಿಸಿಕೊಂಡು, ಸಮೀಕರಿಸಿಕೊಂಡು ಆರಾಧಿಸುವ ಜನಪದರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿಯೇ ದೈವವನ್ನು ಕಾಣುವಂತಹವರು. ಅವರು ಕಾಣುವ ದೈವದ ಬಗೆಗಿನ ರಮ್ಯ ಕಲ್ಪನೆ ಹೀಗಿದೆ.

"ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಯಾಗ ಕಣ್ಣು ತೆರೆದಾನ ಲಿಂಗಯ್ಯ
ನೋಡಟಿಕೆ ನಿದ್ದಿ ಬಯಲಾಗಿ"[೨೪]

ಜನಪದರು ತಾವು ಬದುಕುವ ಪರಿಸರ ಹಾಗೂ ತಮ್ಮ ಸನಿಹದಲ್ಲಿಯೆ ದೈವವನ್ನು ಕಾಣುವವರು. ದೇವರನ್ನು ಹುಡುಕಿಕೊಂಡು ಮೈಲು ದೂರಗಳವರೆಗೆ ನಡೆಯುವವಲ್ಲ. ತಮ್ಮ ಸುತ್ತಲಿನ ಗಿಡ, ಮರ, ಸೂರ್ಯ, ಚಂದ್ರ, ಮಳೆ, ಗಾಳಿ, ಗುಡುಗು, ಸಿಡಿಲು, ಬೆಳಕು, ಪ್ರಾಣಿ, ಪಕ್ಷಿ, ಹಾವು, ಚೇಳು, ಬೆಟ್ಟ, ಗುಡ್ಡ ಮೊದಲಾದವುಗಳಲ್ಲಿಯೆ ದೈವವನ್ನು ಕಂಡುಕೊಂಡವರು. ಹಾಗಾಗಿಯೇ ಜನಪದರು ದೇವರನ್ನು ಅಮೂರ್ತ ಶಕ್ತಿಯೆಂದು ಭಾವಿಸುವುದೇ ಇಲ್ಲ. ಅವನು ಕೂಡ ನಮ್ಮಂತೆಯೇ ಎಂದು ಭಾವಿಸುವಂತಹವರು. ಅಲ್ಲದೆ ಜನಪದ ಗೀತೆಗಳಲ್ಲಿ ಅನುಭಾವದ ದಟ್ಟವಾದ ಚಿತ್ರಣವನ್ನು ಅತ್ಯಂತ ಸಹಜವಾಗಿ ಕಟ್ಟಿಕೊಡುತ್ತಾರೆ. ಜನಪದರ ಸೌಂದರ್ಯ ಪ್ರಜ್ಞೆ, ಸೊಬಗು, ವರ್ಣನೆ ಎಲ್ಲವೂ ಸೇರಿ ಜನಪದರಲ್ಲಿ ರಮ್ಯತೆ ಎನಿಸಿಕೊಳ್ಳುತ್ತದೆ.

ರಮ್ಯತೆಯನ್ನು ನಾವು ಜನಪದ ಗೀತೆಗಳಲ್ಲಿ ಬಹಳ ಮುಖ್ಯವಾಗಿ ಎರಡು ಕಡೆ ನೋಡಬಹುದು. ಒಂದು – ಭಾಷೆಯ ಅಭಿವ್ಯಕ್ತಿ ಕ್ರಮದಲ್ಲಿ ಹಾಗೂ ಎರಡನೆಯದು – ಜನಪದ ಗೀತೆಗಳು ಒಳಗೊಂಡಿರುವ ವಸ್ತು–ವಿಷಯ–ತತ್ವಗಳಲ್ಲಿ. ಅಲ್ಲದೆ ಅದರ ನಾದ, ಲಯ ತುಂಬಿದ ಹಾಡುಗಾರಿಕೆಯಲ್ಲಿ ಹಾಗೂ ಭಾವನೆಗಳಲ್ಲಿ ಜನಪದರು ನೆಲದ ಮಕ್ಕಳು. ಅವರು ತಮ್ಮ ತಾಯಿಯ ಸೊಬಗನ್ನು ಕುರಿತು ವಿವರಿಸುವ ಅಂಶಗಳು ಜನಪದ ಗೀತೆಗಳಲ್ಲಿ ಅಚ್ಚರಿ ಮೂಡಿಸುವಂತೆ ಚಿತ್ರಣಗೊಂಡಿವೆ. ಅದರ ಜೊತೆಗೆ ಜಗತ್ತಿನ ಸೃಷ್ಟಿಯ ಬಗ್ಗೆ ಅತೀವ ಕುತೂಹಲ. ಜಗದ ಜೀವಿಗಳ ಜೀವಂತಿಕೆಯ ಚಟುವಟಿಕೆಗಳಲ್ಲಿ ಅವರು ದೇವರನ್ನು ಕಾಣುತ್ತಾರೆ. ಜನಪದ ಗೀತೆಗಳಲ್ಲಿ ಭಾಷೆ ಆಡು ನುಡಿಗೆ ತುಂಬಾ ಹತ್ತಿರವಾಗಿರುತ್ತದೆ. ಅಲ್ಲದೆ ಪ್ರಕೃತಿಗೆ ಹತ್ತಿರವಾದ ರೂಪಕ, ಉಪಮೆಗಳನ್ನು ಬಳಸಿಕೊಂಡು ಜನಪದ ಗೀತೆಗಳನ್ನು ರಚಿಸಿದ್ದಾರೆ.

ತ್ರಿಪದಿ ಬಹುಮುಖ್ಯವಾದ ಪ್ರಕಾರವಾಗಿದ್ದು, ಇದರಲ್ಲಿ ಜನಪದರು ಜನಪದ ಗೀತೆಗಳನ್ನು ರಚಿಸಿದ್ದಾರೆ. ಭಾವ ಮಯವಾದ ಜನಪದ ಗೀತೆಗಳು ಅತ್ಯಂತ ರಮ್ಯವಾದ ರೋಚಕ ಚಿತ್ರಣಗಳನ್ನು ಒಳಗೊಂಡಿವೆ. ಈ ಗೀತೆಗಳಲ್ಲಿ ಸಾಲುಗಳ ಪುನರಾವರ್ತನೆಯನ್ನು ಕಾಣುತ್ತೇವೆ. ಅಲ್ಲದೆ ಗೀತೆಗಳ ಪ್ರಾರಂಭದ ಮೊದಲ ಸಾಲಿನ ಅಕ್ಷರವು ಇತರೆ ಸಾಲುಗಳ ಮೊದಲ ಅಕ್ಷರಗಳು ಒಂದೇ ರೀತಿ ಇರುತ್ತವೆ. ಇದರ ಮೂಲಕ ಗೀತೆಗಳಲ್ಲಿನ ಗೇಯತೆಯು ಇವುಗಳನ್ನು ಹಾಡಲು ಹಾಗೂ ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗುತ್ತದೆ. ಜನಪದ ಗೀತೆಗಳ ಕೊನೆಯ ಸಾಲು ಆರಂಭದ ಸಾಲುಗಳಂತೆಯೇ ಮಹತ್ವವಾದ ಬೆಡಗು ಹಾಗೂ ಭಾವನಾ ಸೌಂದರ್ಯವನ್ನು ಹೊಂದಿರುತ್ತದೆ.

ಗೀತೆಗಳಲ್ಲಿ ಅಲೌಕಿಕ ಸಂಗತಿಗಳನ್ನು ಸಹಜವಾಗಿ ಪರಿಸರಕ್ಕೆ ಹೋಲಿಸುತ್ತ ಹಾಡುವುದು ಕಂಡುಬರುತ್ತದೆ. ಆ ಮೂಲಕ ಅಮೂರ್ತ ಸಂಗತಿಗಳನ್ನೂ ಮೂರ್ತಗೊಳಿಸಿ ಪ್ರತಿಯೊಂದನ್ನೂ

ಪ್ರೀತಿ ಮಾಡುತ್ತಾರೆ. ಜಗತ್ತಿನ ಸಮಸ್ತ ರಚನೆಗಳನ್ನು ಅರಿಯುವುದು ಜನಪದ ಗೀತೆಗಳಲ್ಲಿನ ಬಹುದೊಡ್ಡ ಶಕ್ತಿ. ಇದು ನಿಜಕ್ಕೂ ಅಚ್ಚರಿ ಉಂಟುಮಾಡುತ್ತದೆ. ಬದುಕಿನ ಸಂಬಂಧಗಳ ರಮ್ಯತೆಯನ್ನು ಜನಪದರು ಗೀತೆಗಳಲ್ಲಿ ಸೆರೆ ಹಿಡಿದಿರುವ ರೀತಿ ಅದ್ಭುತವಾದುದು. ಜನಪದ ಗೀತೆಗಳಲ್ಲಿನ ರಮ್ಯತೆಯು ಸಂಪೂರ್ಣವಾಗಿ ಇಂದ್ರಿಯ ಪ್ರಧಾನವಾದ ಅನುಭವಗಳಿಂದ ದಕ್ಕಿಸಿಕೊಂಡು ಸೌಂದರ್ಯಮಯವಾಗಿರುತ್ತದೆ. ದೇವರು, ದೇವತೆ, ದೆವ್ವ ಎಂಬ ಅನಂತತೆಯ ಸಂಗತಿಗಳನ್ನು ಸಹ ನಿತ್ಯ ಜೀವನದಲ್ಲಿ ಬಳಸುವ ವಸ್ತುಗಳಿಂದ, ಸಂಬಂಧಗಳಿಂದ ಪೂಜೆಗೆ ಒಳಪಡಿಸುತ್ತಾರೆ.

ಶಿಷ್ಟದ ರಮ್ಯತೆ ಆದರ್ಶಗಳಿಂದ ಕೂಡಿದ್ದರೆ, ಜನಪದರ ರಮ್ಯತೆ ವಾಸ್ತವ ಪ್ರಕೃತಿಯಿಂದ ಕೂಡಿರುತ್ತದೆ. ಜನಪದ ಗೀತೆಗಳಲ್ಲಿ ಸಂಬಂಧಗಳ ವರ್ಣನೆಯ ರಮ್ಯತೆಯು ಅತ್ಯಂತ ಮನೋಹರವಾಗಿರುತ್ತದೆ. ಇಲ್ಲಿನ ಸಂಬಂಧಗಳಲ್ಲಿ ಯಾವುದೇ ರೀತಿಯ ವಯಸ್ಸಿನ ಭೇದ, ವ್ಯತ್ಯಾಸಗಳು ಇರುವುದಿಲ್ಲ. ಇಲ್ಲಿ ಗಂಡು–ಹೆಣ್ಣು, ಅಪ್ಪ–ಅಮ್ಮ, ಅಕ್ಕ–ತಂಗಿ, ಅಣ್ಣ–ತಮ್ಮ ಎಲ್ಲರೂ ಸಮಾನವಾಗಿ ತಮ್ಮ ತಮ್ಮ ಸಂಬಂಧಗಳ ಬಗ್ಗೆ ತಾವು ಹೊಂದಿರುವ ಪ್ರೀತಿಯ ಭಾವನೆಯನ್ನು ಅತ್ಯಂತ ಸರಳವಾಗಿ ಅಭಿವ್ಯಕ್ತಿ ಮಾಡುತ್ತಾರೆ ಎನ್ನುವುದೇ ಸೊಗಸಿನಿಂದ ಕೂಡಿದೆ. ಯಾವುದೇ ರೀತಿಯ ಮುಜುಗರ, ನಾಚಿಕೆ, ಸಂಕೋಚಗಳಿಲ್ಲದೆ ತಂಗಿ, ತಮ್ಮ, ಅಣ್ಣ, ಅಕ್ಕ ಮೊದಲಾದವರು ಒಬ್ಬರು ಮತ್ತೊಬ್ಬರ ಬಗ್ಗೆ ಮಾಡುವ ನಿಷ್ಕಲ್ಮಶವಾದ ಹೊಗಳಿಕೆ, ಗುಣಗಳ ವರ್ಣನೆ, ಪ್ರೀತಿಯ ಭಾವನೆಗಳು ಜನಪದ ಗೀತೆಗಳಲ್ಲಿನ ರಮ್ಯತೆಯನ್ನು ಅಗ್ರ ಸ್ಥಾನಕ್ಕೇರಿಸಿವೆ.

ಭವ್ಯತೆ ಜನಪದ ಗೀತೆಗಳಲ್ಲಿನ ಮುಖ್ಯವಾದ ಮತ್ತೊಂದು ಪರಿಕಲ್ಪನೆಯಾಗಿದೆ. ಸಾಮಾನ್ಯವಾಗಿ ಭವ್ಯತೆಯ ಅಂಶ ಎಲ್ಲ ಜನಪದ ಗೀತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕೆ ಕಾರಣವಾದ ಜನಪದ ಗೀತೆಗಳಲ್ಲಿನ ಸ್ಫೂರ್ತಿಯನ್ನು ಗಮನಿಸಬಹುದಾಗಿದೆ. ಅದು ತನ್ನ ಸುತ್ತಮುತ್ತಲಿನ ಜಗತ್ತಿನ ಸೊಗಸನ್ನು ಅತ್ಯಂತ ಮುಕ್ತವಾಗಿ ನೋಡುತ್ತದೆ. ಆದ್ದರಿಂದ ಜನಪದರ ಅಭಿವ್ಯಕ್ತಿಯಲ್ಲಿ ರಮ್ಯತೆ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ

> "ಹೋಗಿ ಬಾರೆ ನೀನು ಹೊನ್ನೊಲೆ ಕಿವಿಯೋಳೆ
> ಕೆನ್ನೇಲಿ ಸೂರ್ಯ ಹೊಳೆವವಳೆ ಸೊಸೆ ಮುದ್ದೆ
> ತೌರು ಒಳ್ಳೇದೆಂದು ಇರಬೇಡ"[೨೫]

ಎಂದು ಅತ್ತೆ ತನ್ನ ಸೊಸೆಗೆ ಹೇಳಿ ಕಳುಹಿಸುವ ಈ ಜನಪದ ಗೀತೆಯಲ್ಲಿನ 'ಕೆನ್ನೇಲಿ ಸೂರ್ಯ ಹೊಳೆವವಳೆ' ಎಂಬಂತಹ ಸಾಮಾನ್ಯವಾದ ಸಾಲಿನಲ್ಲಿ ಇಡೀ ಸೂರ್ಯನ ಸೊಬಗು ಆ ಹೆಣ್ಣಿನ ಕೆನ್ನೆಯಲ್ಲಿದೆ ಎಂಬ ಭಾವನೆ ನಿಜಕ್ಕೂ ಜನಪದ ಗೀತೆಗಳ ರಮ್ಯತೆಗೆ ಸಾಕ್ಷಿಯಾಗಿದೆ. ಹೆಣ್ಣಿನ ಸೊಬಗು, ಶೀಲ, ನಾಚಿಕೆ, ಸಿರಿವಂತಿಕೆ ಎಲ್ಲವನ್ನೂ ಜನಪದರು ಗೀತೆಗಳಲ್ಲಿ ರಮ್ಯತೆಯ ಪ್ರಧಾನ ಸಂಕೇತವಾಗಿ ಬಳಸುತ್ತಾರೆ. ಇಲ್ಲಿನ ಹೊಗಳಿಕೆ ಸಾಮಾನ್ಯವಾದುದಲ್ಲ. ಅದು ದೈತ್ಯ ಆದರ್ಶದಲ್ಲಿ ಬರುವಂತಹದ್ದು. ಆದ್ದರಿಂದ ಜನಪದ ಗೀತೆಗಳ ರಮ್ಯತೆ ವಿಶೇಷವಾಗಿ ಭಾಷೆಯಲ್ಲಿ ವಾಚ್ಯಾರ್ಥವಾಗಿ

ಬರುವಷ್ಟೇ ಅದು ಧ್ವನ್ಯಾರ್ಥ ಹಾಗೂ ಲಕ್ಷ್ಯಾರ್ಥವಾಗಿಯೂ ಬರುತ್ತದೆ. ಇದು ಜನಪದ ಗೀತೆಗಳಲ್ಲಿನ ಭಾಷೆಯ ಸೊಗಸಾಗಿದೆ.

ಜನಪದ ಗೀತೆಗಳಲ್ಲಿನ ರಮ್ಯತೆಗೆ ಬಳಕೆಯಾಗುವ ಸಂಗತಿಗಳಲ್ಲಿ ಹೆಣ್ಣು, ಹೆಣ್ಣಿನ ವಯಸ್ಸು, ತಾಯ್ತನ, ಲಾವಣ್ಯ, ಮಮತೆಗಳು ಮುಖ್ಯವಾಗಿವೆ. ಜನಪದ ಗೀತೆಗಳಲ್ಲಿ ರಮ್ಯತೆಗೆ ಭಾಷೆ ಎಷ್ಟು ಕಾರಣವೋ ಅಷ್ಟೇ ಕಾರಣ ಅವರ ಬದುಕು. ಮಣ್ಣಿನ ಬದುಕನ್ನು ಕುರಿತ ಅವರ ಧೋರಣೆಗಳು, ನೋಟಗಳು ಶಿಷ್ಟ ಸಾಹಿತ್ಯಕ್ಕಿಂತ ತುಂಬಾ ಭಿನ್ನವಾಗಿವೆ.

ಜನಪದರ ರಮ್ಯತೆ ಜಾನಪದ ಜಗತ್ತಿನ ತುಂಬೆಲ್ಲಾ ಹರಡಿಕೊಂಡಿದೆ. ಇಲ್ಲಿ ಸಂಬಂಧಗಳಲ್ಲಿ, ಭಾವಗಳಲ್ಲಿ, ವಿಚಾರ, ತತ್ತ್ವಗಳು, ಆಚರಣೆಗಳು, ಕುಣಿತ, ಹಾಡು, ಪೂಜೆ, ಭಕ್ತಿ, ಗಂಡು, ಹೆಣ್ಣುಗಳ ದೇಹಾಕೃತಿಯಲ್ಲಿ, ಪ್ರಾಣಿ ಪಕ್ಷಿಗಳ ಮೈ ಬಣ್ಣಗಳಲ್ಲಿ, ಹೊಲಗದ್ದೆಗಳ ಹಸಿರು, ಬರಗಾಲಗಳಲ್ಲಿ ಇನ್ನೂ ಹತ್ತು ಹಲವಾರು ವಿಚಾರಗಳನ್ನು ಜನಪದರ ಬದುಕಿನ ವಲಯಗಳಲ್ಲಿ ಕಾಣಬಹುದು. ಅದರಲ್ಲೂ ವಿಶೇಷವಾಗಿ ಮಮತೆ, ಪ್ರೀತಿ, ಕಾಮ ಮತ್ತು ಪೂಜೆಯ ಭಾವನೆಗಳಲ್ಲಿ ರಮ್ಯತೆ ಅತ್ಯಂತ ಹೆಚ್ಚಾಗಿ ಮೂಡಿ ಬಂದಿದೆ.

ಕೊನೆ ಟಿಪ್ಪಣಿಗಳು

೧. ಜಾನಪದ ಕರ್ನಾಟಕ, ಸಂಪುಟ-೧, ಸಂಚಿಕೆ-೨, ಜೂನ್ ೨೦೦೨, ಪು.ಸಂ-೦೨.

೨. ಸುವರ್ಣ ವಿಚಾರ ಸಾಹಿತ್ಯ, ಪು.ಸಂ-೧೬೨.

೩. ಜಾನಪದ ಸ್ವರೂಪ ಮತ್ತು ವ್ಯಾಖ್ಯೆ, ಪು.ಸಂ-೦೮.

೪. ತಮಿಳುನಾಡಿನ ಜಾನಪದ, ಪು.ಸಂ- ೧೩೩.

೫. ಸುವರ್ಣ ವಿಚಾರ ಸಾಹಿತ್ಯ, ಪು.ಸಂ-೧೬೨.

೬ ಕಾರವಾರ ಜಿಲ್ಲೆಯ ಜನಪದ ಗೀತೆಗಳು, ಪು.ಸಂ-೦೮.

೭ ಜಾನಪದ ತತ್ತ್ವಗಳು, ಪು.ಸಂ-೫೫.

೮. ಜಾನಪದ ಗೀತೆಗಳು, ಪು.ಸಂ-೦೮.

೯. ಜಾನಪದ ದರ್ಶನ, ಪು.ಸಂ-೫೩.

೧೦. ಸುವರ್ಣ ಜಾನಪದ, ಪು.ಸಂ-೪೫೦.

೧೧. ಸುವರ್ಣ ಜಾನಪದ, ಪು.ಸಂ-೪೫೨.

೧೨. ಸುವರ್ಣ ಜಾನಪದ, ಪು.ಸಂ-೪೫೬.

೧೩. ಜಾನಪದ ತತ್ತ್ವಗಳು, ಪು.ಸಂ-೫೦.

೧೪. ಜನಪದ ಸಾಹಿತ್ಯ ಪ್ರಕಾರಗಳು, ಪು.ಸಂ-೧೨.

೧೫. ಗರತಿಯ ಹಾಡು, ಪು,ಸಂ-೩೩.

೧೬. ಗರತಿಯ ಹಾಡು, ಪು,ಸಂ-೮೧.

೧೭. ಕನ್ನಡ ಜಾನಪದ ಗೀತಗಳು, ಪು.ಸಂ-೮೬.

೧೮. ಜಾನಪದ ಪ್ರಚಾರ, ಪು.ಸಂ-೯೨.

೧೯. ಜಾನಪದ ತತ್ತ್ವಗಳು, ಪು.ಸಂ-೫೩.

೨೦. ಕರ್ನಾಟಕ ಸಂಶೋಧನಾ ಜಾನಪದ, ಪು.ಸಂ-೩೯-೪೦.

೨೧. ಜಾನಪದ : ಸ್ವರೂಪ ಮತ್ತು ಸಾಹಿತ್ಯ, ಪು.ಸಂ-೪೩.

೨೨. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ-೧೦೮೫.

೨೩. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ-೧೦೮೫.

೨೪. ಜಾನಪದ ಸತ್ತ್ವ ಮತ್ತು ತತ್ತ್ವ, ಪು.ಸಂ-೧೨೦.

೨೫. ಜಾನಪದ ಸತ್ತ್ವ ಮತ್ತು ತತ್ತ್ವ, ಪು.ಸಂ-೧೧೫.

ಅಧ್ಯಾಯ : ನಾಲ್ಕು

ವಾರ್ಷಿಕಾವರ್ತನದ ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಲೋಕಾನುಸಂಧಾನ

೪.೧ ಮದುವೆಯ ಹಾಡುಗಳು.

೪.೨ ಮೈನೆರೆದ ಹಾಡುಗಳು

೪.೩ ಜೋಗುಳ ಹಾಡುಗಳು

೪.೪ ಸೋಬಾನ ಹಾಡುಗಳು

೪.೫ ಶಿಶು ಗೀತೆಗಳು

೪.೬ ಸಾವಿನ ಹಾಡುಗಳು

೪.೭ ಹಾಸ್ಯ ಮತ್ತು ವಿಡಂಬನಾ ಜನಪದ ಗೀತೆಗಳು

೪.೮ ಕೌಟುಂಬಿಕ ಅಥವಾ ದಾಂಪತ್ಯ ಜೀವನ ಗೀತೆಗಳು

೪.೯ ಆರತಿ ಹಾಡುಗಳು

೪.೧೦ ಕೋಲಾಟದ ಹಾಡುಗಳು

ಅಧ್ಯಾಯ : ನಾಲ್ಕು

ವಾರ್ಷಿಕಾವರ್ತನದ ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಲೋಕಾನುಸಂಧಾನ

ಜನಪದ ಗೀತೆಗಳು ಹೊತ್ತು ಕಳೆಯಲೆಂದೋ ಅಥವಾ ಮನರಂಜನೆಗೆಂದೋ ಸೀಮಿತವಾದ ಉದ್ದೇಶದಿಂದ ರಚಿತವಾದವುಗಳಲ್ಲ. ಅವುಗಳಲ್ಲಿ ಮಾನವ ಜೀವನದ ಹಲವಾರು ನೆಲೆ-ಬೆಲೆಗಳು ಹಾಸು ಹೊಕ್ಕಾಗಿವೆ. ಮನುಷ್ಯನ ವ್ಯಕ್ತಿತ್ವಕ್ಕೆ ಸಾಣೆ ಹಿಡಿದು ತಿದ್ದಿ ತೀಡುವ ಕೆಲಸವನ್ನು ಸಹ ಜನಪದ ಸಾಹಿತ್ಯ ಮಾಡುತ್ತದೆ. ಅದಕ್ಕಾಗಿಯೇ ಇದಕ್ಕೆ ಜೀವನದ ಹತ್ತು ಹಲವು ಮುಖಗಳನ್ನು ತೆರೆದು ತೋರಿಸುವ ಸಾಮರ್ಥ್ಯ ಇದೆ. ವಾರ್ಷಿಕಾವರ್ತನದ ಜನಪದ ಗೀತೆಗಳನ್ನು ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗೆ ನಡೆಯುವ ಘಟನೆಗಳ ಜೀವನಾವರ್ತನವೆಂದೇ ಹೇಳಬಹುದು. ಈ ವಾರ್ಷಿಕಾವರ್ತನ ಗೀತೆಗಳಲ್ಲಿ ಮನುಷ್ಯ ಜೀವಿಯ ಹುಟ್ಟಿನಿಂದ ಹಿಡಿದು ಸಾವಿನವರೆಗಿನ ಬದುಕಿನ ಕಥನವಿದೆ.

ಇಂತಹ ಜೀವನಾವರ್ತನ ಜನಪದ ಗೀತೆಗಳಲ್ಲಿ ಮನುಷ್ಯನ ಜೀವನದ ಪ್ರಮುಖ ಘಟ್ಟಗಳಾದ ಬಾಲ್ಯ, ಮೈನೆರೆಯುವಿಕೆ, ಮದುವೆಯಿಂದ ಹಿಡಿದು ಸಾವಿನವರೆಗಿನ ಹಾಡುಗಳಿವೆ. ಮದುವೆಯ ಹಾಡುಗಳಲ್ಲಿ ಹೆಣ್ಣನ್ನು ನೋಡಿ, ಮದುವೆಯನ್ನು ನಿಶ್ಚಯಿಸುವ ಫಳಿಗೆಯಿಂದ ಹಿಡಿದು ಮದುವೆಯ ದಿನ ಬರೆಯುವ ಹಸೆ, ಅರಶಿಣ ಶಾಸ್ತ್ರ, ಗಂಡು ಹೆಣ್ಣಿನ ಕಡೆಯವರನ್ನು ಹೊಗಳುವ ಮತ್ತು ತೆಗಳುವ, ದಿಬ್ಬಣ, ಮದು ಮಕ್ಕಳ ವರ್ಣನೆ ಮೊದಲಾದ ಹತ್ತು ಹಲವು ವಿಚಾರಗಳಿಗೆ ಸಂಬಂಧಿಸಿದ ಹಾಡುಗಳನ್ನು ಗಮನಿಸಬಹುದಾಗಿದೆ. ಹೆಣ್ಣು ಮೈನೆರೆಯುವ ಕ್ರಿಯೆಯನ್ನು ಕುರಿತ ಮೈನೆರೆದ ಹಾಡುಗಳಲ್ಲಿ ಹೆಣ್ಣು ಮೈನೆರೆದಳೆಂದು ತಿಳಿದ ನಂತರ ಬಂಧು ಬಳಗ, ನೆರೆ ಹೊರೆಯವರೆಲ್ಲ ಸೇರಿ 'ಗುಡ್ಲು ಕೂಡುವ' ಶಾಸ್ತ್ರ ಮಾಡುವಲ್ಲಿಂದ ಹಿಡಿದು 'ಒಸಗೆ' ಸಮಾರಂಭದವರೆಗು ಹಲವು ಹಾಡುಗಳನ್ನು ಹಾಡುವುದನ್ನು ನೋಡಬಹುದು.

ಜೋಗುಳದ ಹಾಡುಗಳಲ್ಲಿ ಮಕ್ಕಳ ಲಾಲನೆ, ಪಾಲನೆ ಕುರಿತಂತಹ ಆನಂದದಾಯಕ ಕ್ಷಣಗಳ ವಿವರಗಳು ಕಂಡುಬರುತ್ತವೆ. ಇವುಗಳಂತೆಯೆ ಸೋಬಾನೆ ಹಾಡುಗಳು, ಶಿಶು ಗೀತೆಗಳನ್ನು ಸಹ ಗಮನಿಸಬಹುದಾಗಿದೆ. ಮೈನೆರೆತ ಸಮಯ ಹಾಗೂ ಮದುವೆಯ ಸಂದರ್ಭಗಳಲ್ಲಿ ಸೋಬಾನೆ ಹಾಡುಗಳು ಹಾಡಲ್ಪಡುತ್ತವೆ. ಶಿಶು ಗೀತೆಗಳಲ್ಲಿ ಮಕ್ಕಳ ಕಲ್ಪನಾ ಲೋಕದ ಅರಳುವಿಕೆ ನಮ್ಮ

ಗಮನವನ್ನು ಸೆಳೆಯುತ್ತವೆ. ಇವುಗಳಲ್ಲಿ ಮಕ್ಕಳು ಸಮಾಜ, ಸಂಸ್ಕೃತಿ, ನಾಡು, ನುಡಿಗಳನ್ನು ಅವುಗಳದೇ ಆದ ಕಲ್ಪನೆ, ಯೋಚನಾ ಲಹರಿಗಳ ಹಿನ್ನೆಲೆಯಲ್ಲಿ ಗ್ರಹಿಸಿರುವ ವಿವರಗಳು ಪ್ರಮುಖವಾಗಿವೆ. ಸಾವಿನ ಹಾಡುಗಳಲ್ಲಿ ವಿಶೇಷವಾಗಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ನಿಧನರಾದ ವ್ಯಕ್ತಿಗಳನ್ನು ಕುರಿತು ಅವರ ವ್ಯಕ್ತಿತ್ವ, ನಡೆ ನುಡಿಗಳನ್ನು ಹೊಗಳಿ ಹಾಡುವ ಸಾವಿನ ಪದಗಳನ್ನು ಗಮನಿಸಬಹುದಾಗಿದೆ. ಹಾಸ್ಯ ಹಾಗೂ ವಿಡಂಬನಾ ಗೀತೆಗಳಲ್ಲಿ ಆರೋಗ್ಯಕರವಾದ ಜರಿಯುವಿಕೆಗಳು ಕಂಡುಬರುತ್ತವೆ.

ದಾಂಪತ್ಯ ಗೀತೆಗಳಲ್ಲಿ ಗಂಡ – ಹೆಂಡಿರ ಬದುಕಿನ ನೈಜ ಚಿತ್ರಣಗಳ ವಿವರಗಳಿವೆ. ಇಲ್ಲಿ ಪತಿ – ಪತ್ನಿಯರ ನಡುವಿನ ಸರಸ – ಸಲ್ಲಾಪಗಳಿವೆ. ಪ್ರೀತಿ, ಪ್ರೇಮದ ಗುಣಾತಿಶಯಗಳು, ಹುಸಿ ಮುನಿಸು, ಕೋಪ ಮುಂತಾದ ಅದ್ಭುತವಾದ ದಾಂಪತ್ಯ ಚಿತ್ರಣಗಳ ರಸಲೋಕದ ದರ್ಶನವಿದ್ದು, ಓದುಗರ ಮನಸ್ಸನ್ನು ಸೆಳೆಯುತ್ತವೆ. ಆರತಿ ಹಾಡುಗಳು ದೇವರ ಪೂಜೆ ಹಾಗೂ ಉತ್ಸವದ ಸಮಯದಲ್ಲಿ ಹಾಡಲ್ಪಡುತ್ತವೆ. ಇವುಗಳ ಜೊತೆಗೆ ಸಾಂಸ್ಕೃತಿಕ ಪ್ರತಿನಿಧಿಗಳಾಗಿರುವ ಕೋಲಾಟದ ಹಾಡುಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ವಾರ್ಷಿಕಾವರ್ತನದ ಗೀತೆಗಳು ಪ್ರಮುಖವಾಗಿ ಮನುಷ್ಯನ ಹುಟ್ಟಿನಿಂದ ಆರಂಭವಾಗಿ ಅವನ ಸಾವಿನವರೆಗಿನ ಎಲ್ಲ ವಿವರಗಳನ್ನು ನಮಗೆ ತಿಳಿಸಿಕೊಡುತ್ತವೆ. ಈ ಕಾರಣವಾಗಿ ಇವು ಅಧ್ಯಯನ ಯೋಗ್ಯವಾಗಿದ್ದು, ಪ್ರಮುಖವಾದ ಪಾತ್ರವನ್ನು ವಹಿಸಿವೆ.

೪.೧. ಮದುವೆಯ ಹಾಡುಗಳು

ವಿವಾಹ ಬಂಧನ ಎಂಬುದು ಗಂಡು ಹೆಣ್ಣಿನ ಬದುಕಿನಲ್ಲಿ ಬರುವ ಒಂದು ಸುಮಧುರ ಕ್ಷಣ. ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ಮದುವೆಗೆ ವಿಶೇಷ ಪ್ರಾಧಾನ್ಯತೆ ಹಾಗೂ ಪ್ರಾಶಸ್ತ್ಯವಿದೆ. ಇವುಗಳಲ್ಲಿ ಹಲವು ಶಾಸ್ತ್ರ, ವಿಧಿ, ವಿಧಾನಗಳು ಮೇಳೈಸಿಕೊಂಡಿರುವುದು ಕಂಡುಬರುತ್ತವೆ. ಮದುವೆ ಎಂಬುದು ಕೇವಲ ಗಂಡು–ಹೆಣ್ಣಿಗೆ ಮಾತ್ರ ಸೀಮಿತವಾದದ್ದಲ್ಲ. ಅದು ಇಡೀ ಸಮಾಜದ ಒಳಗೊಳ್ಳುವಿಕೆಯ ಪ್ರಕ್ರಿಯೆಯಾಗಿದ್ದು, ಸಾಂಪ್ರದಾಯಿಕ ರೀತಿಯಲ್ಲಿ ಆಚರಣೆ, ವಿಧಿ, ವಿಧಾನಗಳ ಚೌಕಟ್ಟಿನೊಳಗೆ ನಡೆಯುತ್ತದೆ. ಹೆಣ್ಣನ್ನು ನೋಡುವ ಮೊದಲ ದಿನದಿಂದ ಹಿಡಿದು ಮದುವೆಯಾಗಿ ಮದುಮಕ್ಕಳನ್ನು ಮನೆಗೆ ಕರೆತರುವವರೆಗೂ ಹಲವು ರೀತಿಯ ಸಾಂಸ್ಕೃತಿಕ ಪ್ರಕ್ರಿಯೆಗಳು ಜರುಗುತ್ತವೆ. ವಿವಾಹ, ಕುಟುಂಬ ಎಂಬ ಸಾಮಾಜಿಕ ಸಂಸ್ಥೆಗಳು ನಮ್ಮ ಜನಪದ ಸಂಸ್ಕೃತಿಯ ಮೂಲ ಸೆಲೆಯಾಗಿದ್ದು, ಮೌಲ್ಯಯುತವಾದ ಸಂಬಂಧಗಳ ಬೆಸೆಯುವಿಕೆಯೂ ಆಗಿವೆ.

ಈ ಹಿನ್ನೆಯಲ್ಲಿ ಮದುವೆ ಮನೆಯ ಸಂಭ್ರಮಕ್ಕೆ ಜನಪದರಲ್ಲಿನ ಮದುವೆಯ ಹಾಡುಗಳು ಇನ್ನಷ್ಟು ಮೆರುಗನ್ನು ನೀಡುತ್ತವೆ. ಈ ಮದುವೆಯ ಹಾಡುಗಳು ಗಂಡು ಹೆಣ್ಣನ್ನು ನೋಡುವ ಹಾಗೂ ಹೆಣ್ಣು ಗಂಡನ್ನು ನೋಡುವ ಕ್ಷಣದಿಂದ ಪ್ರಾರಂಭವಾಗಿ ಮದುವೆಯ ಹಲವು ಹಂತಗಳಾದ ವೀಳ್ಯೆ ಶಾಸ್ತ್ರ, ಬೀಗರನ್ನು ಬರಮಾಡಿಕೊಳ್ಳುವುದು, ಅರಿಶಿಣ ಹಚ್ಚುವ ಶಾಸ್ತ್ರ, ಎಣ್ಣೆ ಹಚ್ಚುವ ಶಾಸ್ತ್ರ,

ಬೀಗರನ್ನು ಜರಿಯುವಿಕೆ ಮೊದಲಾದ ಸಂದರ್ಭಗಳಲ್ಲಿ ಮದುವೆಯ ಹಾಡುಗಳು ಹೇಳಲ್ಪಡುತ್ತವೆ. ಇಲ್ಲೆಲ್ಲಾ ಇಡೀ ಊರು ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆ ಇರುತ್ತದೆ.

ಮದುವೆಗೆ ಪ್ರಯಾಣ ಬೆಳೆಸುವ ಸಂಭ್ರಮ ಹೇಳತರದು. ಬಂಧು ಬಳಗದವರನ್ನೆಲ್ಲ ಕರೆದುಕೊಂಡು ಸಂತೋಷ, ಸಡಗರದಿಂದ ಹೊರಡುವ ದೃಶ್ಯ ಅದ್ಭುತವಾದುದು. ಸಿಂಗರಿಸಿದ ಎತ್ತುಗಳನ್ನು ಕಟ್ಟಿದ ಕಮಾನು ಗಾಡಿಗಳಲ್ಲಿ ಸಂಭ್ರಮದಿಂದ ಮದುವೆಗಳಿಗೆ ತೆರಳುತ್ತಿದ್ದ ಸನ್ನಿವೇಶಗಳು ಹೊಸತೊಂದು ಗಂಧರ್ವ ಲೋಕವನ್ನು ಸೃಷ್ಟಿಸುತ್ತಿದ್ದವು. ಆ ಪಯಣದ ಸವಿಯನ್ನು ಜನಪದರು ಈ ರೀತಿಯಾಗಿ ವಿವರಿಸಿದ್ದಾರೆ.

"ಕಳಸಾ ತಕ್ಕೊಳ್ಳೆ ಕಳೆಯುಳ್ಳ ಮುತ್ತೈದೆ
ವರುಷಕೆ ನೂರು ಮದುವೆಯು । (ಯಾ)ಗಲೆಂದು
ಹರಸಿ ತಕ್ಕೊಳ್ಳೆ ಕಳಸವ

ಗಿಂಡಿ ತಕ್ಕೊಳ್ಳೆ ಅಂದುಳ್ಳೆ ಮುತ್ತೈದೆ
ತಿಂಗಳಿಗೆ ನೂರು ಮದುವೆಯು । (ಯಾ)ಗಲೆಂದು
ರಂಬೆ ತಕ್ಕೊಳ್ಳೆ ಕಳಸವ

ಬಾಗಿಲ ಬಿಟ್ ಹೊಳ್ಡುವಾಗ ಬಾಳೆ ಪಲ್ಲೈಸ್ಯಾವೆ
ಬಾಗಲ ಗೌಳಿ ನುಡಿದವೆ । ಮದಲಿಂಗನ
ಅಕ್ಕಯ್ತಕ್ಕೊಳ್ಳೆ ಕಳಸವ

ಹಟ್ಟಿ ಬಿಟ್ ಹೊಳ್ಡುವಾಗ ಹಣ್ಣು ಪಲ್ಲೈಸ್ಯಾವೆ
ಹಟ್ಯಾಗ್ಲ ಗೌಳಿ ನುಡಿದವೆ । ಮದಲಿಂಗನ
ತಂಗ್ಯಮ್ಮ ತಕ್ಕೊಳ್ಳೆ ಕಳಸವ

ಅಂಗ್ಳ ಬಿಟ್ ಹೊಳ್ಡುವಾಗ ನಿಂಬೆ ಪಲ್ಲೈಸ್ಯಾವೆ
ಅಂಗಳದ ಗೌಳಿ ನುಡಿದವೆ । ಮದಲಿಂಗನ
ಅತ್ತಿಗೆ ತಕ್ಕೊಳ್ಳೆ ಕಳಸವ

ಹಟ್ಟೀಗ್ಹೊರಟನೆ ಅವರಪ್ಪಯ್ಯ ಕರೆದನೆ
ಹತ್ತೆಮ್ಮೆ ಜೋಕೆ ಮನೆ ಜೋಕೆ । ಅಪ್ಪಾಜಿ
ಮಿತ್ರೇ ಗೆದ್ದು ನಾಳೆ ಬರುತೀನಿ

ಮಿತ್ರೇ ಗೆದಿಯೋಕೆ ನನ್ನಿಚ್ಚೆ ನಿನ್ನಿಚ್ಚೆ
ಮನೆದೇವರ ಕರುಣೆ ನಿನ ಮ್ಯಾಲೆ । ಇದ್ದರೆ
ನಾರೀ ಗೆದ್ದು ನಾಳೆ ಬರಹೋಗು

ಬಾಗಿಲಿಗೆ ಬಂದನೆ ತಾಯಿಯ ಕರೆದನೆ
ಆರೆಮ್ಮೆ ಜೋಕೆ ಮನೆ ಜೋಕೆ । ತಾಯವ್ವ
ನಾರೀ ಗೆದ್ದು ನಾಳೆ ಬರುತೀನಿ

ನಾರಿಯ ಗೆದಿಯಾಕೆ ನನ್ನಿಚ್ಛೆ ನಿನ್ನಿಚ್ಛೆ
ಮನೆದೇವರ ಕರುಣೆ ನಿನ ಮ್ಯಾಲೆ । ಇದ್ದರೆ
ನಾರೀ ಗೆದ್ದು ನಾಳೆ ಬರಹೋಗು

ಅಂಗಳಕೆ ಬಂದನೆ ತಂಗಿಯ ಕರೆದನೆ
ಏಳೆಮ್ಮೆ ಜೋಕೆ ಮನೆ ಜೋಕೆ । ತಂಗ್ಯಮ್ಮ
ರಂಬೇ ಗೆದ್ದು ನಾಳೆ ಬರುತೀನಿ

ರಂಬೆಯ ಗೆದಿಯಾಕೆ ನನ್ನಿಚ್ಛೆ ನಿನ್ನಿಚ್ಛೆ
ಗುರುದೇವರ ಕರುಣೆ ನಿನ ಮ್ಯಾಲೆ । ಇದ್ದರೆ
ರಂಬೇ ಗೆದ್ದು ನಾಳೆ ಬರಹೋಗು

ಹತ್ತು ಬೆರಳಿಗೆ ಹತ್ತು ಕೆತ್ತಿಸಿದ ಹೊನ್ನುಂಗುರ
ಒಪ್ಪಕೆ ಬಿಳಿ ಎಲೆ ಹಿಡಕೊಂಡು । ಮತಿಗಟ್ಟದ
ಅಪ್ಪ ಮಲ್ಲಯ್ಗೆ ಶರಣೆನ್ನಿ

ಐದು ಬೆರಳಿಗೆ ಐದು ಕೆತ್ತಿಸಿದ ಹೊನ್ನುಂಗುರ
ಆಯಕೆ ಬಿಳಿಯೆಲೆ ಹಿಡಕೊಂಡು । ಮತಿಗಟ್ಟದ
ರಾಯ ಮಲ್ಲಯ್ಗೆ ಶರಣೆನ್ನಿ

ಮೂರು ಬೆರಳಿಗೆ ಮೂರು ಕೆತ್ತಿಸಿದ ಹೊನ್ನುಂಗುರ
ಅಂದಕೆ ಬಿಳಿಯೆಲೆ ಹಿಡಕೊಂಡು । ಮತಿಗಟ್ಟದ
ತಂದೆ ಮಲ್ಲಯ್ಗೆ ಶರಣೆನ್ನಿ

ಹಾಗೆ ಶರಣೆನ್ನಿ ಹೀಗೆ ಶರಣೆನ್ನಿ
ಮ್ಯಾಗಳ ದೇವರಿಗೆ ಶರಣೆನ್ನಿ । ನಮ್ ಭಾಗದ
ಸ್ವಾಮಿ ಮಲ್ಲಯ್ಗೆ ಶರಣೆನ್ನಿ

ಸಂದಿಯ ಮನೆಗೆ ಬಂಧಿಸಿ ಬೀಗ ಹಾಕಿ
ಕೆಂಬರುಗಣ್ಣಿನ ತುರುಕರ । ಕಾವಲಿಟ್ಟು
ರಂಬೇರು ನೀವ್ ಹೊರಡಿ ಮದುವೆಗೆ

ಗೌಡರ ಮನೆಗೆ ಬೇಗದಿ ಬೀಗ ಹಾಕಿ
ರಾವುಗಣ್ಣಿನ ತುರುಕರ । ಕಾವಲಿಟ್ಟು
ಗೌಡರೆ ನೀವ್ ಹೊರಡಿ ಮದುವೆಗೆ

ಅಕ್ಕ ನೀವ್ ಹೊರಡಿ ಅಕ್ಕಯ್ಯ ನೀವ್ ಹೊರಡಿ
ಪುತ್ರಯ್ಹಾಲುಂಬೊ ವಳಲೆಯ । ಹೇರಿಗ್ಹಾಕಿ
ಮಿತ್ರೇರು ನೀವ್ ಹೊರಡಿ ಮದುವೆಗೆ

ತಂಗಿ ನೀವ್ ಹೊರಡಿ ತಂಗ್ಯಮ್ಮ ನೀವ್ ಹೊರಡಿ
ಕಂದಯ್ಹಾಲುಂಬೊ ವಳಲೆಯ । ಹೇರಿಗ್ ಹಾಕಿ
ಮಿತ್ರೇರು ನೀವ್ ಹೊರಡಿ ಮದುವೆಗೆ

ತಾಯಿ ನೀವ್ ಹೊರಡಿ ತಾಯವ್ವ ನೀವ್ ಹೊರಡಿ
ಬಾಲಯ್ಹಾಲುಂಬೊ ವಳಲೆಯ । ಹೇರಿಗ್ಹಾಕಿ
ಮಿತ್ರೇರ್ ನೀವ್ ಹೊರಡಿ ಮದುವೆಗೆ"[೧]

ಮದುವೆಯ ಪಯಣದೊಂದಿಗೆ ಹಲವು ಸಾಂಸ್ಕೃತಿಕ ಅಂಶಗಳು ಮಿಳಿತಗೊಂಡಿವೆ. ಮದುಮಗನೊಂದಿಗೆ ಮುತ್ತೈದೆಯರು ತೆಗೆದುಕೊಂಡು ಹೋಗುವ 'ಕಳಸ' ತನ್ನದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಹೊಂದಿದೆ. ಎಲ್ಲ ಶುಭ ಸಂದರ್ಭಗಳಲ್ಲಿಯೂ ಸಹ ಇದು ಪ್ರಮುಖವಾದ ಸ್ಥಾನವನ್ನು ಹೊಂದಿದೆ. ಆ ಕಾರಣವಾಗಿಯೆ ಜನಪದರು ಕಳೆಯುಳ್ಳ ಮುತ್ತೈದೆಯನ್ನು ಕುರಿತು ವರುಷಕ್ಕೆ ನೂರು ಮದುವೆಗಳು ಆಗಲೆಂದು ಹರಸುತ್ತ ಕಳಸವನ್ನು ತೆಗೆದುಕೊಳ್ಳುವಂತೆ ಹೇಳುತ್ತಾರೆ. ಇದರ ಹಿಂದಿರುವ ಆಶಯ ಉತ್ತಮವಾದುದು. ಎಲ್ಲರಿಗೂ ಒಳಿತಾಗಲೆಂಬ ಹಾರೈಕೆ ಇದರ ಹಿಂದಿದೆ.

ಹಾಗೆಯೆ ಅಂದುಳ್ಳ ಮುತ್ತೈದೆಗೆ ಗಿಂಡಿಯನ್ನು ತೆಗೆದುಕೊಳ್ಳಲು ಹೇಳಿ ಬಾಳೆ, ಹಣ್ಣು, ನಿಂಬೆ ಪಲ್ಲೆಗಳ ಸೇವೆ ಆದ ನಂತರ ಮದುಮಗ ತನ್ನ ತಂದೆ, ತಾಯಿ, ತಂಗಿಯರನ್ನು ಕುರಿತು ಮನೆಯ ಕಡೆ ಜೋಪಾನ. ತಾನು ಮಿತ್ರೆಯನ್ನು ಗೆದ್ದು ಬರಲೆಂದು ಹೋಗುತ್ತಿರುವುದಾಗಿ ತಿಳಿಸುತ್ತ ಅವರನ್ನು ಮದುವೆಗೆ ಆಹ್ವಾನಿಸಿ ಆಶೀರ್ವಾದ ಪಡೆಯುತ್ತಾನೆ.

ಜನಪದರಲ್ಲಿ ಯಾವುದೇ ಕೆಲಸಗಳ ಪ್ರಾರಂಭದಲ್ಲಿ ಬಾಳೆ, ನಿಂಬೆ ಮೊದಲಾದ ಹಣ್ಣುಗಳ ಫಲಾಹಾರಗಳ ಭೋಜನ ಮಾಡಿ ಸಂತೃಪ್ತ ಮನಸ್ಸಿನಿಂದ ಹೊರಡುವುದು ಕಂಡುಬರುತ್ತದೆ. ಮುಂದುವರೆದು ಸಂದಿಯ ಮನೆ, ಗೌಡರ ಮನೆಗಳಿಗೆ ಹೋಗಿ ಅವರ ಮನೆಗಳಿಗೆ ಕೆಂಬರುಗಣ್ಣಿನ ಹಾಗೂ ರಾವುಗಣ್ಣಿನ ತುರುಕರನ್ನು ಕಾವಲಿಟ್ಟು ಮದುವೆಗೆ ಹೊರಡುವಂತೆ ಕೇಳಿಕೊಳ್ಳುತ್ತಾನೆ. ಅದೇ ರೀತಿ ಅಕ್ಕ, ತಂಗಿ, ತಾಯಿಯರನ್ನು, ಅವರ ಪುತ್ರರು ಹಾಲುಂಬುವ ವಳಲೆಯನ್ನು ಹೇರಿಗ್ಹಾಕಿಕೊಂಡು

ಮದುವೆಗೆ ಹೊರಡಬೇಕೆಂದು ಕೇಳಿಕೊಳ್ಳುತ್ತಾರೆ. ಊರಿನಲ್ಲಿರುವ ಎಲ್ಲ ಸಮುದಾಯದವರನ್ನು ಮದುವೆಗೆ ಕರೆಯುವ ಗುಣ ಜನಪದರ ಸಮಷ್ಟಿ ಪ್ರಜ್ಞೆಗೆ ನಿದರ್ಶನವಾಗಿದೆ. ಅಲ್ಲದೆ ಇಲ್ಲಿ ಪ್ರತಿಯೊಬ್ಬರ ಮನೆ ಮನೆಗೂ ಹೋಗಿ ಮದುವೆಗೆ ಕರೆಯುವ ಗುಣ ಜನಪದರ ಸಹಬಾಳ್ವೆಗೆ ಸಾಕ್ಷಿಯಾಗಿದೆ. ಅದರಂತೆಯೆ ಇದು ಸಂಸ್ಕೃತಿಯ ಜೀವ ಸೆಲೆಯೂ ಆಗಿದೆ.

ಈ ರೀತಿ ಬಂದ ದಿಬ್ಬಣವನ್ನು ಹೆಣ್ಣಿನವರು ಎದುರುಗೊಳ್ಳುವ ರೀತಿಯೂ ಸಹ ನಮ್ಮ ಸಂಸ್ಕೃತಿಯ ಭಾಗವೇ ಆಗಿದೆ. ಅವರನ್ನು ಪ್ರೀತಿಯಿಂದ, ಆತ್ಮೀಯತೆಯಿಂದ ಆಹ್ವಾನಿಸುತ್ತ ಹಾಸ್ಯ, ವಿನೋದದ ಮೂಲಕ ಬರಮಾಡಿಕೊಳ್ಳುತ್ತಾರೆ. ಆ ಸಮಯದ ಸಡಗರ, ಸಂಭ್ರಮ, ಉತ್ಸಾಹಗಳನ್ನು ಹೇಳತೀರದು. ಆ ಸಂದರ್ಭವನ್ನು ಜನಪದರು ಈ ರೀತಿಯಾಗಿ ವರ್ಣಿಸಿದ್ದಾರೆ.

"ಅಂಕದೇರಿ ಮೇಲೆ ಬಿಂಕದ ಗೂಡಾರ್ ಹುಯ್ದು
ಕೆಂಚೆ ನಿನ್ನಳಿಯ ಬರುತಾನೆ । ಬೇಲೂರ
ಸಂಪಿಗೆ ಮುಡಿಸೆ ಮಗಳಿಗೆ

ಆಲದೇರಿ ಮೇಲೆ ಬೆಲ್ಲದ ಗೂಡಾರ್ ಹುಯ್ದು
ನಲ್ಲೆ ನಿನ್ನಳಿಯ ಬರುತಾನೆ । ಬೇಲೂರ
ಮಲ್ಲಿಗೆ ಮುಡಿಸೆ ಮಗಳಿಗೆ

ಎತ್ತೆಲ್ಲಿ ಬಿಟ್ಟರಿ ಬುತ್ತೆಲ್ಲಿ ಉಂಡಿರಿ
ಸುಕ್ಕರ ನಿಮಗೆಲ್ಲಿ ಉದಿಸಿದ । ಮತಿಗಟ್ಟದ
ಸ್ವಾಮಿ ಮಲ್ಲಯ್ನ ಗುಡಿಯಾಗೆ

ಬೀಡೆಲ್ಲಿ ಬಿಟ್ಟರಿ ಬಾನವೆಲ್ಲುಂಡಿರಿ
ಸೂರ್ಯ ನಿಮಗೆಲ್ಲಿ ಉದಿಸಿದ । ಮತಿಗಟ್ಟದ
ಅಪ್ಪ ಮಲ್ಲಯ್ನ ಗುಡಿಯಾಗೆ

ಹತ್ತು ವರಾದ ಕೊಪ್ಪನಿಕ್ಕಿದಾಳೆ
ಎತ್ತಿನ ಮುಂದೆ ಕಳಸವ । ಹಿಡಿದಿರುವೋಳು
ಸೆಟ್ಟಿ ಮದುವಣನ ಹಿರಿಯಕ್ಕ

ನಾರಿ ಬಂಗಾರದ ವಾಲೆಯನಿಟ್ಟಿದಾಳೆ
ಹೋರಿಯ ಮುಂದೆ ಕಳಸವ । ಹಿಡಿದಿರುವೋಳು
ರಾಯ ಮದುವಣನ ಕಿರುದಂಗಿ

ಒಂದು ವರದ ಬಂದಿಯನಿಕ್ಕಿದಾಳೆ
ನಂದಿಯ ಮುಂದೆ ಬಳುಕುತ । ಬರುವೋಳು
ಸುಂದರ ಮದುವಣನ ಹಡದವ್ವ

ಈ ವೂರ ಮುಂದೊಂದು ಆಲದ ಮರವಿಲ್ಲ
ನಮ್ ಆನೆ ಕಟ್ವಾಕೆ ನೆರಳಿಲ್ಲ । (ಲ್ಲೀ) ಊರಾಗೆ
ನಮ ರಾಯರು ಮುಖ ತೊಳೆಯೊ ಕೊಳವಿಲ್ಲ

ಈ ವೂರ ಮುಂದೊಂದು ಅತ್ತಿಯ ಮರವಿಲ್ಲ
(ನಮ್) ಎತ್ತು ಕಟ್ವಾಕೆ ನೆರಳಿಲ್ಲ । (ಲ್ಲೀ) ಊರಾಗೆ
ಮಿತ್ರೇರು ಮುಖ ತೊಳೆಯೊ ಕೊಳವಿಲ್ಲ"[೨]

ಅಂಕದೇರಿ ಮೇಲೆ ಬಿಂಕದಿಂದ ಗೂಡಾರವನ್ನು ಹಾಕಿಕೊಂಡು ಬೀಗರ ಮನೆಯ ದಾರಿಯನ್ನು ಕ್ರಮಿಸುತ್ತಿರುವವರನ್ನು ಎದುರುಗೊಳ್ಳಲು ಹೆಣ್ಣಿನ ತಾಯಿಯಾದ ಕೆಂಚಿಗೆ ಹೇಳಲಾಗುತ್ತಿದೆ. ನಿನ್ನಳಿಯ ಬರುತ್ತಿದ್ದಾನೆ ನಿನ್ನ ಮಗಳಿಗೆ ಬೇಲೂರಿನ ಸಂಪಿಗೆ ಹಾಗೂ ಮಲ್ಲಿಗೆ ಹೂಗಳನ್ನು ಮುಡಿಸಿ ಸಿಂಗರಿಸುವಂತೆ ಹೇಳುತ್ತಾರೆ. ಗಂಡಿನ ಕಡೆಯ ಹೆಂಗಸರಲ್ಲಿ ಕಳಸವನ್ನು ಹಿಡಿದಿರುವವಳು ಹತ್ತು ವರಾದ ಕೊಪ್ಪವನ್ನು ಇಕ್ಕಿದ್ದಾಳೆ. ಬಂಗಾರದ ವಾಲೆಯನ್ನು ಇಟ್ಟುಕೊಂಡಿದ್ದಾಳೆ. ಮತ್ತೊಬ್ಬಳು ಒಂದು ವರದ ಬಂದಿಯನ್ನು ಇಟ್ಟುಕೊಂಡಿರುವ ಚಿತ್ರಣಗಳು ಜನಪದರ ಸೌಂದರ್ಯ ಪ್ರಜ್ಞೆಯನ್ನು ಮನಗಾಣಿಸುತ್ತವೆ.

ಈ ರೀತಿಯಾಗಿ ಬಂದ ಗಂಡಿನವರು ಆ ಊರಿನ ಕೊರತೆಗಳನ್ನು ಕುರಿತು ಆಕ್ಷೇಪಿಸುವುದೂ ಕಂಡುಬರುತ್ತದೆ. ವರನ ತಾಯಿ ಆ ಊರಿನ ಮುಂದೆ ಒಂದು ಆಲದ ಮರವೂ ಇಲ್ಲ. ನಮ್ಮ ಆನೆಯನ್ನು ಕಟ್ಟಲು ನೆರಳಿಲ್ಲ. ಊರಿನಲ್ಲಿ ನಮ್ಮ ರಾಯರು ಮುಖ ತೊಳೆಯಲು ಕೊಳವಿಲ್ಲ. ಹಾಗೆಯೆ ನಮ್ಮ ಎತ್ತು ಕಟ್ಟಲು ಅತ್ತಿಯ ಮರದ ನೆರಳಿಲ್ಲ. ಮಿತ್ರೇರು ಮುಖ ತೊಳೆಯಲು ಕೊಳವಿಲ್ಲವೆಂದು ನುಡಿಯುವ ಮಾತುಗಳೂ ಸಹ ನಮ್ಮ ಗಮನವನ್ನು ಸೆಳೆಯುತ್ತವೆ. ಇಲ್ಲಿ ಬಳಕೆಯಾಗಿರುವ ಆನೆ, ಎತ್ತು, ಆಲದ ಮರ, ಅತ್ತಿಯ ಮರ, ಕೊಳ ಮೊದಲಾದವು ನಮ್ಮ ಜನಪದರ ತುಂಬು ಬಾಳಿನ ಸಂಕೇತಗಳಾಗಿವೆ.

ಮದುವೆಯ ದಿನದ ಮದು ಮಕ್ಕಳ ಅಲಂಕಾರ ನಮ್ಮ ಜನಪದರಿಗೆ ಇನ್ನಿಲ್ಲದ ಖುಷಿಯನ್ನು ನೀಡುತ್ತದೆ. ತಮ್ಮ ಕರುಳ ಕುಡಿಗಳನ್ನು ಸೊಗಸಿನಿಂದ ಅಲಂಕೃತಗೊಂಡ ವಸ್ತ್ರ, ವಡವೆಗಳಿಂದ ಕೂಡಿದ ಅವರನ್ನು ನೋಡುವುದೇ ಜನಪದರಿಗೊಂದು ಹಿಗ್ಗಿನ ಸಂಗತಿ. ಈ ಖುಷಿಯ ಮನಸ್ಸಿನಿಂದ ಮದು ಮಕ್ಕಳನ್ನು ಸಿಂಗರಿಸುವ ತಂದೆ, ತಾಯಿ, ಗೆಳೆಯ, ಗೆಳತಿಯರು, ಸೋದರ ಮಾವ, ಅಕ್ಕ, ತಂಗಿ, ಬಂಧು ಬಳಗ ಮೊದಲಾದರೆಲ್ಲ ಬಗೆ ಬಗೆಯಾಗಿ ಸಿಂಗಾರ ಮಾಡಿ ತಮ್ಮ ಮನದ ಸಂತೋಷವನ್ನು ಅಭಿವ್ಯಕ್ತಪಡಿಸುತ್ತಾರೆ. ಆ ಸಂದರ್ಭದ ಕ್ಷಣಗಳನ್ನು ಜನಪದರು ಈ ರೀತಿಯಾಗಿ ಜನಪದ ಗೀತೆಯ ಮೂಲಕ ಕಟ್ಟಿಕೊಟ್ಟಿರುವುದನ್ನು ಕಾಣಬಹುದು.

"ಅಂದುಳ್ಳೆ ಗೆಣೆಯರು ಚೆಂದುಳ್ಳೆ ಗೆಣೆಯರು
ಅಂದ ಚಂದುಳ್ಳೆ ಗೆಣೆಯರು । ಅಪ್ಪಯ್ಯಗೆ
ಅಂಗಿ ತೊಡಿಸ್ಯಾರೊಂದೊಲಪಿನ

ಆಯುಳ್ಳೆ ಗೆಣೆಯರು ಛಾಯುಳ್ಳೆ ಗೆಣೆಯರು
ಆಯ ಛಾಯುಳ್ಳೆ ಗೆಣೆಯರು । ಅಪ್ಪಯ್ಯಗೆ
ಪಾಗ ಸುತ್ತ್ಯಾರೊಂದಲಪಿನ । ಅಪ್ಪಯ್ಯಗೆ
ಆಯ ನೋಡಾರೆ ಗೆಣೆಯರು

ತಾಯಿ ತನ್ನ ಮಗನ ಆಯ ನೋಡೇನೆಂದು
ಅಂಗಳದಾಗಿದ್ದೊ ಅವರವ್ವ । ಅವರಪ್ಪಯ್ಯ
ದೇವರಾಗಿದ್ದೊ ಹಸೇ ಮೇಲೆ

ತಂದೆ ತನ್ನ ಮಗನ ಅಂದ ನೋಡೇನೆಂದು
ಅಂಗಳದಾಗಿದ್ದೊ ಅವರಪ್ಪ । ಅಪ್ಪಯ್ಯ
ಲಿಂಗನಾಗಿದ್ದೊ ಹಸೇ ಮೇಲೆ

ಹಸೆಗೆದ್ದು ಬರುವಾಗ ಋಷಿಗಳ ನೆನೆ ಮಗನೆ
ದೆಸೆ ಮೂರುತಿ ನಮ್ಮ ಗುರುವಿನ । ಪಾದಾ ನೆನೆದು
ಸಿಸುವೆ ಬಂದೇರು ಹಸೆ ಮೇಲೆ

ಮಣೆಗೆದ್ದು ಬರುವಾಗ ಮುನಿಗಳ ನೆನೆ ಮಗನೆ
ಮನಮೂರುತಿ ನಮ್ಮ ಗುರುವಿನ । ಪಾದಾ ನೆನೆದು
ಮಗನೆ ಬಂದೇರು ಮಣೆ ಮೇಲೆ

ಸಾದ ಅಣಿಮಾಡಿ ಆಯಕೆ ಭರಣಿ ತುಂಬಿ
ತಾಯವ್ ನಾಲ್ವರ ಕರೆದಾಳೆ । ಈ ಮನೆ
ಪುತ್ರಯ್ಯೆಗ್ಗೆ ಸಾದ ನಿಡುವೋಕೆ

ಗಂಧ ಅಣಿಮಾಡಿ ಚಂದಕೆ ಭರಣಿ ತುಂಬಿ
ತಂಗ್ಯವ್ ನಾಲ್ವರ ಕರೆದಾಳೆ । ಈ ಮನೆ
ಕಂದಯ್ಯೆಗ್ಗೆ ಗಂಧನಿಡುವೋಕೆ

ಸಾದ ಇಡುವಾಗ ಪಾಗಿನ ಮೇಲಿನ ಸರಸ
ಕಂಡರೆ ನಮಗೆ ಹೆದರಿಕೆ । ಪರಮೇಶ್ವರಗೆ
ಗಂಧವನಿಟ್ಟು ಜಯವೆನ್ನಿ"[೨]

ಮದುವೆಯ ಸಂಭ್ರಮ ಎಂಬುದು ಅಲ್ಲಿ ಪಾಲ್ಗೊಂಡಿರುವ ಎಲ್ಲರಿಗೂ ಹಿಗ್ಗನ್ನು ತರುವಂತಹದ್ದು. ಅಲ್ಲಿನ ಶಾಸ್ತ್ರ, ಸಂಪ್ರದಾಯಗಳಲ್ಲಿ ಖುಷಿ ಖುಷಿಯಿಂದ ಭಾಗವಹಿಸುತ್ತಾರೆ. ಹಾಗೆಯೆ ಮದು ಮಗನ ಅಲಂಕಾರದ ವಿಷಯದಲ್ಲಿ ಇನ್ನಿಲ್ಲದಂತೆ ಆಸಕ್ತಿ ವಹಿಸುವ ನಮ್ಮ ಜನಪದರು ಮದುಮಗನನ್ನು

ಸಿಂಗರಿಸಿ ಹಸೆ ಮಣೆಗೆ ಕರೆತರುವ ವಿಚಾರವನ್ನು ಈ ಗೀತೆಯಲ್ಲಿ ಮನದಣಿಯೆ ವರ್ಣಿಸಿದ್ದಾರೆ. ಅಂದವುಳ್ಳ, ಚಂದವುಳ್ಳ ಗೆಳೆಯರೆಲ್ಲ ಸೇರಿ ಮದುವಣಿಗನಿಗೆ ಒಲವಿನಿಂದ ಅಂಗಿಯನ್ನು ತೊಡಿಸಿದ್ದಾರೆ. ಈ ಸಂದರ್ಭವನ್ನು ಕಣ್ತುಂಬಿಕೊಳ್ಳುತ್ತಿರುವ ಆತನ ತಂದೆ ತಾಯಿಗಳ ಸಂತೋಷ ಕೂಡ ಅಷ್ಟೇ ಸಂಭ್ರಮದಿಂದ ಕೂಡಿದೆ. ಆತನನ್ನು ಎಲ್ಲ ದೈವಗಳಿಗು ನಮಿಸುತ್ತ, ಪರಮೇಶ್ವರನಿಗೆ ಸಾದವನ್ನಿಟ್ಟು, ಗಂಧವನ್ನಿಟ್ಟು ಜಯವೆನ್ನುತ್ತ ಮದುವೆ ಮಂಟಪಕ್ಕೆ ಕರೆತರುತ್ತಾರೆ. ಈ ಸನ್ನಿವೇಶಗಳು ನಮ್ಮ ಜನಪದರ ಬದುಕಿನ ಅರ್ಥಪೂರ್ಣತೆಯ ಅರಿವನ್ನು ನಮಗೆ ದರ್ಶನ ಮಾಡಿಸುತ್ತವೆ. ಜೊತೆಗೆ ಗುರು ಹಿರಿಯರ ಮೇಲಿರುವ ಉನ್ನತವಾದ ಗೌರವ ಭಾವನೆಗಳನ್ನು ಅಭಿವ್ಯಕ್ತಪಡಿಸುತ್ತವೆ.

೪.೨. ಮೈನೆರೆದ ಹಾಡುಗಳು

ಜನಪದರು ತಮ್ಮ ಬದುಕಿನ ಪ್ರತಿಯೊಂದು ಕ್ಷಣಗಳನ್ನೂ ಸಂಭ್ರಮದಿಂದ ಕಳೆಯುವಂತಹವರು. ದುಃಖವನ್ನು ಮರೆತು ಸಂತೋಷವನ್ನು ಹಂಚುವವರು. ಹಾಗಾಗಿ ಗ್ರಾಮೀಣರ ಬಾಳಿನಲ್ಲಿ ಘಟಿಸುವ ಎಲ್ಲವೂ ಮಹತ್ವದ ವಿಷಯಗಳೇ, ಸಂತೋಷಪಡುವ ಸಂದರ್ಭಗಳೇ. ಅಂತಹವುಗಳಲ್ಲಿ ಹೆಣ್ಣು ಮಕ್ಕಳು ಮೈನೆರೆಯುವುದು ಸಹ ಒಂದು. ಪಟ್ಟಣಗಳಲ್ಲಿ ರಹಸ್ಯತೆಯನ್ನು ಕಾಪಾಡುವ ಈ ಪ್ರಸಂಗವನ್ನು ಹಳ್ಳಿಗರು ಬಹಿರಂಗವಾಗಿ, ಚಂದದಿಂದ ಆಚರಿಸುತ್ತಾರೆ. ಮೈನೆರೆದ ಹಾಡುಗಳು ಹೆಣ್ಣು ಮಗಳೊಬ್ಬಳು ಋತುಮತಿಯಾದ ನಂತರದಲ್ಲಿ ಆಚರಿಸಲ್ಪಡುವ ಅನೇಕ ವಿಧಿ, ವಿಧಾನ, ಶಾಸ್ತ್ರಗಳ ಸಂದರ್ಭಗಳಲ್ಲಿ ಹೇಳಲ್ಪಡುತ್ತವೆ. ಈ ಸಂದರ್ಭವು ಹೆಣ್ಣಿನ ಬದುಕಿನ ಒಂದು ಪ್ರಮುಖವಾದ ಘಟ್ಟ.

ಹೆಣ್ಣು ಮಕ್ಕಳು 'ಋತುಮತಿ'ಯರಾಗುವುದನ್ನು ಜನಪದರು 'ಹೆಣ್ಣು ಮೈನೆರೆದಳು' ಎಂದು ಕರೆಯುತ್ತಾರೆ. ಈ ಮೈನೆರೆಯುವಿಕೆಯು ಹೆಣ್ಣಿನ ಜೀವನದಲ್ಲಿ ಮಹತ್ವದ ಘಟ್ಟವಾಗಿದೆ. ಆಕೆಗೆ ಹೆಣ್ತನದ ನಿಜವಾದ ಅನುಭವದ ಅನುಭೂತಿ ಪ್ರಾರಂಭವಾಗುವ ಸಮಯ. ಅಲ್ಲದೆ ಮೈನೆರೆಯುವಿಕೆಯು ಹೆಣ್ಣಿನ ಫಲವಂತಿಕೆಯ ಸಂಕೇತವೂ ಆಗಿದೆ. ಅಲ್ಲದೆ ಆಕೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ವೈವಾಹಿಕ ಬದುಕಿಗೆ ಅಣಿಯಾಗುವ ಮಹತ್ವದ ಸಂದರ್ಭವೂ ಹೌದು. ಹೀಗಾಗಿ ಅದು ಹೆಣ್ಣಿನ ಜೀವನದ ಹೊಸ ಬದುಕಿನ ತಿರುವಿನ ಸಂಭ್ರಮವೂ ಆಗಿದೆ.

ಹೆಣ್ಣು ಮಕ್ಕಳು ಮೈನೆರೆದರು ಎಂದು ತಿಳಿದ ಕೂಡಲೆ ಅಕ್ಕಪಕ್ಕದ ಮನೆಯ ಮುತ್ತೈದೆಯರಿಂದ ನೀರೆರೆಯಿಸುವ ಸಂಪ್ರದಾಯವಿದೆ. ಅಂದು ಆಕೆಗೆ 'ಗುಡಿಲು ಕೂರಿಸುವ' ಶಾಸ್ತ್ರ ಮಾಡುತ್ತಾರೆ. ಅರಳಿ, ಅತ್ತಿ, ಮತ್ತೆ ಕೆಲವು ಭಾಗಗಳಲ್ಲಿ ಹಲಸಿನ ಮರದ ಕೊಂಬೆಗಳನ್ನು ಕಡಿದು ತಂದು ಗುಡಿಸಿನ ರೀತಿಯಲ್ಲಿ ರೂಪಿಸಿ ಅದರ ಮೇಲೆ ನೆಲ್ಲು ಹುಲ್ಲನ್ನು ಹಾಕುತ್ತಾರೆ. ಇದರ ಜೊತೆಗೆ ಹಸಿರು ಉಂಡು ಕಳ್ಳಿಯನ್ನು ಸಹ ಬಳಸಲಾಗುತ್ತದೆ. ನಂತರ ಹೆಣ್ಣು ಮಗಳನ್ನು ಅದರಲ್ಲಿ ಕೂರಿಸಿ ಹಲವು ರೀತಿಯ ಶಾಸ್ತ್ರ, ಸಂಪ್ರದಾಯಗಳನ್ನು ಮಾಡುತ್ತಾರೆ.

ಈ ರೀತಿಯ ಹಸಿರು ಮರದ ಕೊಂಬೆಗಳು ಸಮೃದ್ಧತೆಯ ಸಂಕೇತವಾಗಿದ್ದು, ಆ ಹೆಣ್ಣು ಮಗಳ ಮುಂದಿನ ಬದುಕು ಸಹ ಇದೇ ರೀತಿಯಾಗಿ ಸುಖ, ಶಾಂತಿ, ನೆಮ್ಮದಿ, ಸಮೃದ್ಧತೆಗಳಿಂದ ತುಂಬಿರಲಿ ಎಂಬುದು ಇದರ ಹಿಂದಿರುವ ಬಹುಮುಖ್ಯವಾದ ಆಶಯವಾಗಿದೆ. ಹೂವು, ಬಳೆ, ಹೊಸ ಬಟ್ಟೆ ತೊಡಿಸಿ ಆಕೆಯನ್ನು ಸಿಂಗರಿಸುವರು. ಇಂತಹ ಸಮಯದಲ್ಲಿ ಹಲವು ಮೈನೆರೆದ ಹಾಡುಗಳನ್ನು ಹಾಡಲಾಗುತ್ತದೆ. ಈ ರೀತಿ ಹಾಡುಗಳನ್ನು ಹಾಡುತ್ತ ನಡು ನಡುವೆ ನಗು, ಹಾಸ್ಯ ಮಾಡುವಿಕೆ ಮೊದಲಾದ ಅದ್ಭುತ ಕ್ಷಣಗಳು ಇಲ್ಲಿ ಕಂಡುಬರುತ್ತವೆ. ಈ ಸಮಯದಲ್ಲಿ ಮೈನೆರೆದ ಹೆಣ್ಣು ಮಕ್ಕಳಿಗೆ ಎಳ್ಳು, ಬೆಲ್ಲ, ಕೊಬ್ಬರಿ ಮೊದಲಾದ ಆಹಾರ ಪದಾರ್ಥಗಳನ್ನು ತಿನ್ನಲು ನೀಡಲಾಗುತ್ತದೆ.

ಹೆಣ್ಣು ಮೈನೆರೆಯುವುದು ಆಕೆಯ ಜೀವಿತದ ಪ್ರಮುಖವಾದ ಘಟ್ಟ. ಇದು ಆಕೆ ದೈಹಿಕವಾಗಿ ಫಲವಂತಿಕೆಯ ಹಂತವನ್ನು ತಲುಪುವ ಸಮಯ. ಆ ಕಾರಣವಾಗಿಯೆ ಜನಪದರು ಈ ಸಮಯವನ್ನು ವಿಶೇಷವಾಗಿ ಸಂಭ್ರಮಿಸುವರು. ಹಾಗೆಂದು ಜನಪದರಿಗೆ ಹೆಣ್ಣು ಭೋಗದ ವಸ್ತುವಲ್ಲ. ಅದರಾಚೆಗೆ ಇಡೀ ಮಾನವ ಕುಲದ ಮುಂದುವರಿಕೆಯ ಮಹತ್ವದ ಜವಾಬ್ದಾರಿ ಹೊರಲು ದೈಹಿಕವಾಗಿ ಸಿದ್ದಳಾಗುವ ಹೊರಳುವಿಕೆಯ ಸಮಯ. ಆದ್ದರಿಂದಲೇ ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿಗೆ ಅಪಾರವಾದ ಗೌರವಾದರಗಳಿವೆ.

ಹೆಣ್ಣು ಮಗಳು ಮೈನೆರೆತಳು ಎಂದು ತಿಳಿದಾಗ ಜನಪದರು ಸಂಭ್ರಮದಿಂದ ತನ್ನ ಬಂಧು ಬಳಗದವರೊಂದಿಗೆ ಆ ಖುಷಿಯ ಕ್ಷಣವನ್ನು ಹಂಚಿಕೊಂಡು ಸಂಭ್ರಮಿಸುತ್ತಾರೆ. ಆ ಸಮಯದಲ್ಲಿ ಹಲಸಿನ ಸೊಪ್ಪು, ಅತ್ತಿ ಕೊಂಬೆ, ಭತ್ತದ ಹುಲ್ಲಿನಿಂದ ಮಾಡಿದ ಗುಡಿಸಿಲನ್ನು ತಯಾರಿಸಿ ಅದರೊಳಗೆ ಕೂರಿಸುತ್ತಿದ್ದರು. ಇದನ್ನು 'ಗುಡ್ಲು ಕೂಡುವ' ಶಾಸ್ತ್ರ ಎಂದು ಕರೆಯುತ್ತಾರೆ. ಇದರ ಹೊಣೆಗಾರಿಕೆ ಸೋದರ ಮಾವ ಇಲ್ಲವೆ ಮಾವನಿಗೆ ಸಮಾನರಾದ ವ್ಯಕ್ತಿಗಳದ್ದಾಗಿರುತ್ತದೆ. ಇಲ್ಲಿ ಬಳಸುವ ಹಸಿರು ಸಮೃದ್ಧಿಯ ಸಂಕೇತ. ಅಂತೆಯೇ ಬೆಳವಣಿಗೆ ಮತ್ತು ಫಲವಂತಿಕೆಯ ಪ್ರತೀಕವೂ ಹೌದು.

ಸಾಮಾನ್ಯವಾಗಿ ಹೆಣ್ಣು ಮಕ್ಕಳು ತಮ್ಮ ಹನ್ನೆರಡನೆಯ ವಯಸ್ಸಿಗೆ ಮೈನೆರೆಯುವುದು ಕಂಡುಬರುತ್ತದೆ. ಹೀಗೆ ಋತುಮತಿಯಾದ ತಂಗಿಗೆ ಅಣ್ಣನೊಬ್ಬನು ತಾನು ಏನನ್ನು ಉಡುಗೊರೆಯಾಗಿ ನೀಡಲಿ ಎಂದು ಯೋಚಿಸುವ ಅಂಶ ಈ ಗೀತೆಯಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

"ಹನ್ನೆರಡು ವರುಷಕ್ಕೆ ಕನ್ನೆ ಮೈನೆರೆದಾಳ
ನಾನೇನ ಒಲ್ಲೆ ಕೊಡವೀಗಿ । ತಂಗೀಗಿ
ಕನ್ನಡಿ ಕುಬುಸ ನನೆ ದಂಡಿ"[೪]

ಹನ್ನೆರಡು ವರ್ಷಕ್ಕೆ ಋತುಮತಿಯಾದ ತನ್ನ ತಂಗಿಗೆ ಅಣ್ಣನಾದವನು ಕನ್ನಡಿ, ಕುಬುಸ, ನನೆ ದಂಡಿಗಳಂತಹ ಮಂಗಳಕರವಾದ ವಸ್ತುಗಳನ್ನು ನೀಡುವುದಾಗಿ ಯೋಚಿಸುತ್ತಾನೆ. ಕನ್ನಡಿ,

ಕುಬುಸಗಳು ನಮ್ಮ ಸಂಸ್ಕೃತಿಯಲ್ಲಿನ ಶುಭ ಸೂಚಕವಾದ ಮಂಗಳಕರ ದ್ರವ್ಯಗಳು. ಎಲ್ಲಕ್ಕಿಂತ ಮುಖ್ಯವಾಗಿ ಹೆಣ್ಣು ಮಗಳೊಬ್ಬಳು ತನ್ನ ತವರಿಂದ ಬಯಸುವುದೂ ಕೂಡ ಇದನ್ನೆ. ಕನ್ನಡಿ, ಕುಬುಸ, ಅರಿಶಿಣ, ಕುಂಕುಮ ಮೊದಲಾದವುಗಳನ್ನು ತವರಿನ ಅಣ್ಣ ತಮ್ಮ, ತಂದೆ ತಾಯಿಯರ ಕಡೆಯಿಂದ ನಿರೀಕ್ಷಿಸುತ್ತಾಳೆ. ಮೈನೆರೆದ ಸಮಯದಲ್ಲಿನ ಹಾಡುಗಳನ್ನು ಗಮನಿಸುವುದಾದರೆ

"ಹಸಿರು ವರ್ಣದ ಸೀರೆಯುಟ್ಟು
ಕುಂಕುಮದ ಸಕಲ ನಿಸ್ತ್ರೇ
ಸ್ರುಕುದೇವಿ ಯಾವಾಗ ಮೈನೆರೆದಳೋ
ಹಾಲು ಅನ್ನುಂಡಿದ್ದಳು ಸ್ರುಕುದೇವಿ
ಹಳದಿ ಸೀರುಟ್ಟಿದ್ದಳು ಸ್ರುಕುದೇವಿ
ಹಳದಿ ನಾಟಕದಲ್ಲಿ ಗೊಂಬೆಯನ್ನು ಹಿಡಕಂಡು
ರಂಬೆ ತಾ ಮೈನೆರೆದಳು ಸ್ರುಕುದೇವಿ
ರಂಬೆ ತಾ ಮೈನೆರೆದಳು

ಹಸಿರು ವರ್ಣದ ಸೀರೆನುಟ್ಟು
ಕುಂಕುಮದ ಸಕಲ ನಿಸ್ತ್ರೇ
ಸ್ರುದೇವಿ ಯಾವಾಗ ಮೈನೆರೆದಳೋ
ಮೊಸರು ಅನ್ನುಂಡಿದ್ದಳು ಸ್ರಕುದೇವಿ
ಹಸಿರು ಸೀರುಟ್ಟಿದ್ದಳು ಸ್ರುದೇವಿ
ಹಸಿರು ನಾಟಕದಲ್ಲಿ ಗೊಂಬೆ ತಾ ಹಿಡಕಂಡು
ರಂಬೆ ತಾ ಮೈನೆರೆದಳು ಸ್ರುಕುದೇವಿ
ರಂಬೆ ತಾ ಮೈನೆರೆದಳು

ಹಸಿರು ವರ್ಣದ ಸೀರೆನುಟ್ಟು
ಕುಂಕುಮದ ಸಕಲ ನಿಸ್ತ್ರೇ
ಸ್ರುಕುದೇವಿ ಯಾವಾಗ ಮೈನೆರೆದಳೋ
ತುಪ್ಪ ಅನ್ನುಂಡಿದ್ದಳು ಸ್ರುಕುದೇವಿ
ಒಪ್ಪ ಸೀರುಟ್ಟಿದ್ದಳು ಸ್ರುಕುದೇವಿ
ಒಪ್ಪುವ ನಾಟಕದಲ್ಲಿ ಗೊಂಬೆ ತಾ ಹಿಡಕಂಡು
ರಂಬೆ ತಾ ಮೈನೆರೆದಳು ಸ್ರುಕುದೇವಿ
ರಂಬೆ ತಾ ಮೈನೆರೆದಳು

ಹಸಿರು ವರ್ಣದ ಸೀರೆನುಟ್ಟು
ಕುಂಕುಮದ ಸಕಲ ನಿಸ್ತ್ರೇ
ಸ್ರುಕುದೇವಿ ಯಾವಾಗ ಮೈನೆರೆದಳೋ"[39]

ಪ್ರಸ್ತುತ ಗೀತೆಯು ಹೆಣ್ಣುಮಗಳು ಮೈನೆರೆದ ಸಂದರ್ಭವನ್ನು ಕುರಿತ ವಿವರಗಳನ್ನು ತಿಳಿಸಿಕೊಡುತ್ತದೆ. ಹಸಿರು ವರ್ಣದ ಸೀರೆಯುಟ್ಟು ಕುಂಕುಮದ ಸಕಲ ನಿಸ್ತ್ರೇ ಸ್ರುಕುದೇವಿ ಮೈನೆರೆದ ಸಂಗತಿ ಕಂಡುಬರುತ್ತದೆ. ಹಾಲು ಅನ್ನ ಉಂಡು, ಹಳದಿ ನಾಟಕದಲ್ಲಿ ಗೊಂಬೆಯನ್ನು ಹಿಡಕಂಡು ಆಟವಾಡುತ್ತಿದ್ದ ಸ್ರುಕುದೇವಿ ಯಾವಾಗ ಮೈನೆರೆದಳೋ ಎಂಬ ಬೆರಗು ಇಲ್ಲಿದೆ.

ಇಲ್ಲಿ ಉಲ್ಲೇಖಿತವಾಗಿರುವ ಹಸಿರು ವರ್ಣದ ಸೀರೆ, ಹಳದಿ ಸೀರೆ, ಗೊಂಬೆ, ಕುಂಕುಮ, ಮೊಸರು ಅನ್ನ, ತುಪ್ಪ ಅನ್ನ ಇವೆಲ್ಲವು ನಮ್ಮ ಸಂಸ್ಕೃತಿಯ ಭಾಗವೇ ಆಗಿದ್ದು, ಪ್ರತಿನಿತ್ಯ ಜನಪದರ ಬದುಕಿನಲ್ಲಿ ಬಳಕೆಯಾಗುತ್ತಿರುವಂತಹವಾಗಿವೆ. ಈ ಗೀತೆಯಲ್ಲಿ ಹಾಲು ಅನ್ನ, ತುಪ್ಪ ಅನ್ನ ಊಟ ಮಾಡಿಕೊಂಡು ಗೊಂಬೆಯೊಂದಿಗೆ ಆಟವಾಡುವ ವಯಸ್ಸಿನವಳಾದ ಹೆಣ್ಣು ಮಗಳು ಮೈನೆರೆತ ಸಂಗತಿ ಜನಪದರಿಗೆ ಸಂಭ್ರಮ, ಸಡಗರದ ಜೊತೆಗೆ ಆಶ್ಚರ್ಯದ ರೀತಿಯಾಗಿಯೂ ಕಂಡಿರುವುದು ತಿಳಿಯುತ್ತದೆ.

ಗುಡಿಲು ಶಾಸ್ತ್ರ ಮಾಡಿ ಸೂತಕ ಕಳೆದ ನಂತರ ಹೆಣ್ಣು ಮಗಳ ಅಪ್ಪನಿಗೆ ಈ ವಿಚಾರ ತಿಳಿದಾಗಿನ ಸಂದರ್ಭದ ಆತನ ಸಂತೋಷ ಹೀಗಿದೆ.

"ಏರಿ ಚಿನ್ನದ ಏರಿ ಏರಿ ರನ್ನದ ಏರಿ
ಏರಿ ಹಿಂದಲ ಎಲೆದೋಟ-ದೊಳಗಿರುವ
ಅವರಪ್ಪಾಜಿ ಕೇಳಾನೆ ವಸಗೆಯ

ವಸಗೆ ಕೇಳ್ಯಾನೆ ಹುಸಿನಗುವ ನಕ್ಕಾನೆ
ಎಸಳು ಮಲ್ಲಿಗೆಯ ಬಿಡಿಸ್ಯಾನೆ-ಬಿಡಿಸಿ ಮಾಲೆಯ ಕಟ್ಟಿ
ಮಗಳಿದ್ದ ಬಳಿಗೆ ಕಳಿವ್ಯಾನೆ

ಕಟ್ಟಿ ಚಿನ್ನದ ಕಟ್ಟೆ ಕಟ್ಟೆ ರನ್ನದ ಕಟ್ಟೆ
ಕಟ್ಟೆ ಹಿಂದಲ ಎಲೆದೋಟ-ದೊಳಗಿರುವ
ಅವರಣ್ಣಯ್ಯ ಕೇಳ್ಯಾನೆ ವಸಗೆಯ

ವಸಗೆ ಕೇಳ್ಯಾನೆ ಹುಸಿ ನಗುವ ನಕ್ಕಾನೆ
ಸಣ್ಣ ಮಲ್ಲಿಗೆಯ ಬಿಡಿಸ್ಯಾನೆ-ಬಿಡಿಸಿ ಮಾಲೆಯ ಕಟ್ಟಿ
ತಂಗಿದ್ದ ಬಳಿಗೆ ಕಳಿವ್ಯಾನೆ"[40]

ಚಿನ್ನದ ಏರಿಯ ಕೆರೆಯ ಹಿಂದಲ ಎಲೆದೋಟದೊಳಗಿರುವ ಅವರಪ್ಪಾಜಿಗೆ ಮಗಳ ವಸಗೆಯ ಸುದ್ದಿ ತಿಳಿದು ಆತ ಹುಸಿ ನಗುವನ್ನು ನಗುತ್ತಾನೆ. ಎಸಳು ಮಲ್ಲಿಗೆಯ ಹೂವನ್ನು ಬಿಡಿಸಿ ಮಾಲೆಯ ಕಟ್ಟಿ ಮಗಳಿದ್ದ ಸ್ಥಳಕ್ಕೆ ಕಳಿಸಿದ್ದಾನೆ. ಅದರಂತೆಯೇ ಚಿನ್ನದ ಕಟ್ಟೆಯನ್ನು ಕಟ್ಟಿದ್ದ ಕಟ್ಟೆಯ ಹಿಂದಲ ಎಲೆದೋಟದಲ್ಲಿರುವ ಅವರಣ್ಣಯ್ಯ ಈ ಸುದ್ದಿಯನ್ನು ಕೇಳಿ ಹುಸಿ ನಗುವ ನಕ್ಕಾನೆ. ಸಣ್ಣ ಮಲ್ಲಿಗೆಯ ಬಿಡಿಸಿ ಮಾಲೆಯ ಕಟ್ಟಿ ತಂಗಿ ಇದ್ದ ಬಳಿಗೆ ಕಳಿಸಿದ್ದಾನೆ. ಇಲ್ಲಿ ಅಪ್ಪ ಹಾಗೂ ಅಣ್ಣನ ಸಂಭ್ರಮ ಮತ್ತು ಅವರು ಮಲ್ಲಿಗೆಯ ಮಾಲೆಯನ್ನು ಕಟ್ಟಿ ಕಳುಹಿಸುವ ಸಂಗತಿಗಳು ಬಹಳ ಪ್ರಮುಖವಾದವು.

ನಮ್ಮಲ್ಲಿ ಹೂವು ಶುಭ ಸೂಚಕದ ಸಂಕೇತವಾಗಿದ್ದು, ಮಂಗಳಕರ ದ್ರವ್ಯವಾಗಿದೆ. ಇಂತಹ ಹೂವಿನ ಮಾಲೆಯನ್ನು ಆ ಹೆಣ್ಣು ಮಗಳಿಗೆ ಕಳುಹಿಸಿಕೊಟ್ಟಿದ್ದಾರೆ. ಅಲ್ಲದೆ ಇಲ್ಲಿ ಉಲ್ಲೇಖಿತವಾಗುವ ಕೆರೆ, ಏರಿ, ಕಟ್ಟೆ, ಎಲೆದೋಟಗಳು ಜನಪದರ ಮುಖ್ಯ ಜೀವನಾಧಾರ ಕಸುಬಾದ ಕೃಷಿ ಸಂಸ್ಕೃತಿಯನ್ನು ಪರಿಚಯಿಸುತ್ತವೆ. ಮುಂದುವರೆದು ಆಕೆಗೆ ಒಸಗೆಯನ್ನು ಹಾಕಿ ಹಾಡುವ ಪದಗಳು ಹೀಗಿವೆ.

"ಎದ್ದು ಬಾರಮ್ಮ ನಿನ್ ಹೆಜ್ಜೇಯ ನೋಡೇನು
ದೊಡ್ಡೋರ ಮಗಳೇ ಹೌದೇನೆ – ನಿನ ಕಾಲಗಳ
ಉದ್ದಿನ ಕಾಳಷ್ಟು ಪದುಮವ – ನೋಡೇನು
ಎದ್ದು ಬಾರ್ಹಸೆಯಾ ಜಗಲಿಗೆ

ನಡೆದು ಬಾರಮ್ಮೀ ನಿನ್ ನಡಿಗೆಯ ನೋಡೇನು
ನಡೆಯಲಿ ಕುಂಕುಮ ಉದುರುತ – ತಾಯಮ್ಮೀ
ನಡೆದು ಬಾರ್ಹಸೆಯಾ ಜಗಲಿಗೆ

ವಜ್ರರಾಯರ ಮಗಳು ಬಿಜ್ಜಳ ರಾಯರ ಸೊಸೆ
ವಜ್ರದ ಕಂಬಾ ಮರೆಗಂಡು – ಇರುವೋಳ
ಮುದ್ದೀಸಿ ಹಸೆಗೇ ಕರೆದರೆ

ಕಾಮರಾಯರ ಮಗಳು ಭೀಮ ರಾಯರ ಸೊಸೆ
ಗಾಜೀನ ಕಂಬಾ ಮರೆಗಂಡು – ಇರುವೋಳ
ಭಾವುಸಿ ಹಸೆಗೇ ಕರೆದರೆ

ಅತ್ತಲಿಂದ ಕರೆತನ್ನಿ ತೆಕ್ಕೇಯ ನೆರಿಗ್ಯೋಳ
ಚಿತ್ತಾರ ನೆಂಬಿ ನಗುವೋ[ಳ] – ತಾಯಮ್ಮೀಯ
ಅತ್ತಲಿಂದ ಹಸೆಗೆ ಕರೆತನ್ನಿ

ಒಳಗ್ನಿಂದ ಕರೆತನ್ನಿ ಕವಳಿಗೆ ನೆರಿಗ್ಯೋಳ
ಧವಳಾರ ನೆಂಬೀ ನಗುವೋ[ಳ] – ತಾಯಮ್ಮೀಯ
ಒಳಗಳಿಂದ್ಹಸೆಗೇ ಕರೆತನ್ನಿ

ಚಿನ್ನದ ಬಾಚಣಿಗೇ ಕನ್ನೇರು ತಕ್ಕೊಂಡು
ಕೆನ್ನೆ ಹಿಂಗೊರಳ ಬಿಗಿಬಾಚಿ – ಕಟ್ಯಾರಲ್ಲೇ
ಚನ್ನಣ್ಣನೆಂಬೋ ಚವಲಿ[ಯ] – ರಾಗಟೆ ಮ್ಯಾಲೆ
ಪುಟ್ಟ ಮಲ್ಲಿಗೆ ಮುಡಿಸ್ಯಾರೇ

ಮುತ್ತಿನ ಬಾಚಣಿಕೆ ನಿಸ್ತ್ರೇರು ತಕ್ಕೊಂಡು
ಕೆಪ್ಪೇ ಹಿಂಗುರುಳು ಬಿಗಿ ಬಾಚಿ – ಕಟ್ಯಾರಲ್ಲೇ
ಚಿಕ್ಕಣ್ಣನೆಂಬೋ ಚವಲಿ[ಯ] – ರಾಗಟೆ ಮ್ಯಾಲೆ
ಪುಟ್ಟ ಮಲ್ಲಿಗೆ ಮುಡಿಸ್ಯಾರೇ

ಹತ್ತು ಚಿಬ್ಬಾಲ್ಹೂವ ಕಟ್ಟಿ ಮುಡಿದೀ ದಾಳೆ
ಕೊಪ್ಪಾನಿಟ್ಟಾಳೇ ರವಿಯಾದ – ಮೈಸೂರ
ಹೋಗಿ ನಾಲೋರ ಕಿರುದಂಗಿ

ಆರು ಚಿಬ್ಬಾಲ್ಹೂವ ಸೇರಿಸಿ ಮುಡಿದೀದಾಳೆ
ವಾಲೇ ನಿಟ್ಟಾಳೇ ರವಿಯಾದ – ಮೈಸೂರ
ಹೋಗಿ ಆಲೋರ ಕಿರುದಂಗಿ

ಹತ್ತೇ ವರಕೆ ಪಟ್ಟೇಯ ತಂದಾರೇ
ತುಪ್ಪಕದ್ದಿದರೆ ನೆನೆಯ[ದು] – ದಂಥಾ ಸೀರೆ
ಪುತ್ರಾ ನೀ ನುಟ್ಟು ಹಸೆಗೇಳೆ

ಹನ್ನೆಳ್ಡೋರಾದ ಬಣ್ಣಾವ ತಂದಾರೇ
ಎಣ್ಣೇಗದ್ದಿದರೆ ನೆನೆಯ [ದು] – ದಂಥಾ ಸೀರೆ
ಕನ್ನೇ ನೀನುಟ್ಟು ಹಸೆಗೇಳೆ

ಬಣ್ಣದ ರವಿಕೆಗೆ ಬೆನ್ನ ಮೇಗಳ ದಿಬ್ಬಿ
ಹನ್ನೆರಡೆ ಹೊಲಿಗೆ ಬಿಡಿ ಮ[ಗ್ಗು] – ಗ್ಗಿನ ರವಿಕೆಯ
ಅವರಣ್ಣಯ್ಯ ಕೊಂಡು ಕಳುವ್ಯಾನೆ

ಪಟ್ಟೇ ರವಿಕೆಗೆ ಹೊಟ್ಟೇಮೇಗಳ ದಿಬ್ಬಿ
ಇಪ್ಪತ್ತೆ ಹೊಲಿಗೆ ಬಿಡಿ ಮ[ಗ್ಗು] – ಗ್ಗಿನ ರವಿಕೆಯ
ಅವರಕ್ಕಯ್ಯ ಕೊಂಡು ಕಳುವ್ಯಾಳೆ

ದೂರದ ಸೀಮಿಂದ ತಾಯೀ ಬಳಗಾ ಬಂದು
ಹೋರೀ ಮೇಗು ಬಂದೋ ಮಡಲ[ಕ್ಕಿ] – ಕೃಚ್ಚಿನ ಬೆಲ್ಲ
ಸುವ್ವರದ ಗೌರ ಶೆರಗೊಡ್ಡೇ

ಅತ್ತಲ ಸೀಮಿಂದ ಅವರಪ್ಪನ ಬಳಗಾ ಬಂದು
ಎತ್ತಿನ ಮೇಗು ಬಂದು ಮಡುಲ[ಕ್ಕಿ] – ಕೃಚ್ಚಿನ ಬೆಲ್ಲ
ಸುವ್ವರದ ಗೌರ ಸೆರಗೊಡ್ಡೇ

ಜಾಜೀ ಹೂಗಳಿರ ಜಾಜೀಯ ಕಾಯ್ಗಳಿರ
ಜಾವಾ ಜಾವಾಕೋದೋ ಗಿಣಿಗ[ಳಿರ] – ಟ್ಲೋಗನ ಬನ್ನಿ
ಜಾಣೆಯ ಮಗಳ ಒಸಗೆಗೇ

ಸಂಪಿಗೆ ಹೂಗಳಿರ ಸಂಪಿಗೆ ಕಾಯ್ಗಳಿರ
ಸಂಪತ್ತಿನಲ್ಲೋದೋ ಗಿಣಿಗ [ಳಿರ] – ಟ್ಲೋಗನ ಬನ್ನಿ
ಕೆಂಚೆಯ ಮಗಳ ಒಸಗೆಗೇ.

ಹೂವ್ ಬಂದವೆ ಜಾಣೆ ಹೂವು ಮಲ್ಲೀಗ್ಹೂವು
ಹೂವೋಜಿ ಹೂವು ನಿಜಗಲ್ಲ – ದುರ್ಗಾದಿಂದ
ಹೂವ್ಬಂದವು ಜಾಣೇ ತುರಬಿಗೇ

ಕಾಯ್ಬಂದವು ಜಾಣೇ ಕಾಯಿ ತೆಂಗಿನ ಕಾಯಿ
ಕಾಯೋಜಿ ಕಾಯಿ ನಿಜಗಲ್ಲ – ದುರ್ಗಾದಿಂದ
ಕಾಯ್ಬಂದವು ಜಾಣೇ ಮಡಲಿಗೇ

ಹಣ್ಬಂದವು ಜಾಣೆ ಹಣ್ಣು ಬಾಳೇಹಣ್ಣು
ಹಣ್ಣೋಜಿ ಹಣ್ಣು ನಿಜಗಲ್ಲ – ದುರ್ಗಾದಿಂದ
ಹಣ್ಬಂದವೆ ಜಾಣೇ ಸೆರಗಿಗೇ”[೭]

ಗುಡಿಸಿಲಿಗೆ ಕೂರಿಸಿ ಶಾಸ್ತ್ರ ಮಾಡಿದ ನಂತರ ಒಸಗೆಯ ಪದಗಳನ್ನು ಹಾಡುತ್ತ ನಿನ್ನ ಹೆಜ್ಜೇಯ ನೋಡುವೆವು, ದೊಡ್ಡೋರ ಮಗಳಾದ ನೀನು ಒಮ್ಮೆ ಎದ್ದು ಬಾರಮ್ಮ ಎಂದು ಹಾಡುತ್ತಾರೆ. ಆಕೆ ವಜ್ರರಾಯರ ಮಗಳು ಬಿಜ್ಜಳ ರಾಯರ ಸೊಸೆ. ಅವರು ವಜ್ರದ ಕಂಬದ ಹಿಂದೆ ಮರೆಯಾಗಿ ನಿಂತಿರುವವಳನ್ನು ಮುದ್ದಿಸಿ ಹಸೆಗೆ ಕರೆಯುತ್ತಾರೆ. ಕಾಮರಾಯರ ಮಗಳು, ಭೀಮರಾಯರ ಸೊಸೆಯಾದ ಆಕೆ ಗಾಜೀನ ಕಂಬದ ಮರೆಯಲ್ಲಿ ಇರುವಂತಹವಳನ್ನು ಭಾವಿಸಿ ಹಸೆಗೆ ಕರೆದಿದ್ದಾರೆ. ಚಿತ್ತಾರ, ಧವಳಾರ ನೆಂಬಿ ನಗುವಂತಹವಳನ್ನು ಹಸೆಗೆ ಕರೆತಂದು ಚಿನ್ನದ, ಮುತ್ತಿನ ಬಾಚಣಿಗೆಯಲ್ಲಿ ತಲೆಯನ್ನು ಬಾಚಿ ಪುಟ್ಟ ಮಲ್ಲಿಗೆ ಮುಡಿದ ವಿವರಗಳಿವೆ.

ಹತ್ತು ವರಕೆ ಪಟ್ಟೇಯ ತಂದಿದ್ದಾರೆ. ಹನ್ನೆರಳ್ಡೋರಾದ ಬಣ್ಣಾವ ತಂದಿದ್ದಾರೆ. ದೂರದ ಸೀಮೆಯಿಂದ ತಾಯಿಯ ಬಳಗ ಹೋರಿಯ ಮೇಲೆ ಮಡಿಲಕ್ಕಿ, ಅಚ್ಚು ಬೆಲ್ಲವನ್ನು ತಂದಿದ್ದಾರೆ. ಅತ್ತಲ ಸೀಮೆಂದ ಅವರಪ್ಪನ ಬಳಗ ಎತ್ತಿನ ಮೇಲೆ ಮಡಿಲಕ್ಕಿಯನ್ನು ಅಚ್ಚು ಬೆಲ್ಲವನ್ನು ತಂದಿದ್ದಾರೆ. ಜಾಜೀ ಹೂಗಳು, ಜಾಜೀಯ ಕಾಯ್ಗಳು ಜಾಣೆಯ ಮಗಳ ಒಸಗೆಗೆ ಹೋಗೋಣವೆಂದು ಕರೆದಿವೆ. ನಿಜಗಲ್ಲ ದುರ್ಗಾದಿಂದ ಹೂವು, ಕಾಯಿ, ಹಣ್ಣುಗಳು ಆಕೆಗೆ ಉಡುಗೊರೆಯಾಗಿ ಬಂದ ವಿವರಗಳು ಈ ಗೀತೆಯಲ್ಲಿ ಕಂಡುಬರುತ್ತವೆ. ಮುಂದುವರೆದು

"ಸಣದೊಂದು ಬಾಚಣಿಗೆ
ಸಣದೊಂದು ಸೀರಣಿಗೆ
ಸಣ್ಣಣ್ಣನೆಂಬ ಚವಲೀಯ-ಚವಾಲೀಯ
ಸಣ್ಣಣ್ಣನೆಂಬ ಚವಲೀ ತುರುಬಿನ ಮ್ಯಾಲೆ
ಸಣ್ಣ ಮಲ್ಲೀಗೆ ಹರಿವಾರೆ-ಹರೀವಾರೆ

ದೊಡದೊಂದು ಬಾಚಣಿಗೆ
ದೊಡದೊಂದು ಸೀರಣಿಗೆ
ದೊಡ್ಡಣ್ಣನೆಂಬ ಚವಲೀಯ-ಚವಾಲೀಯ
ದೊಡ್ಡಣ್ಣನೆಂಬ ಚವಲೀ ತುರುಬಿನ ಮ್ಯಾಲೆ
ದೊಡ್ಡಮಲ್ಲೀಗೆ ಹರಿವಾರೆ-ಹರೀವಾರೆ

ಪುಟದೊಂದು ಬಾಚಣಿಗೆ
ಪುಟದೊಂದು ಸೀರಣಿಗೆ
ಪುಟ್ಟಣ್ಣನೆಂಬ ಚವಲೀಯ-ಚವಾಲಿಯ
ಪುಟ್ಟಣ್ಣನೆಂಬ ಚವಲೀ ತುರುಬಿನ ಮ್ಯಾಲೆ
ಪುಟ್ಟ ಮಲ್ಲೀಗೆ ಹರಿವಾರೆ-ಹರೀವಾರೆ

ಬೇಲೂರ ಮಲ್ಲೀಗೆ ಬೇಲೆಲ್ಲ ಪರಿಮಳ
ತಟ್ಟೇಯನ್ಹಾಸಿ ಉದರಿಸಿ-ಉದರಿಸಿ
ತಟ್ಟೇಯನ್ಹಾಸಿ ಉದರಿಸಿ ಮಾಲೆಯಕಟ್ಟಿ
ಮುಚಿಗ್ಯಂಡು ಹೋಗೋ ಮಡಿವಾಳ-ಮಡಿವಾಳ
ಮುಚಿಗ್ಯಂಡು ಹೋಗೋ ಮಡಿವಾಳರಸೆಟ್ಟಿ
ಹದ್ದಿನ ನೆರಳು ಕವದಾವೆ-ಕವಾದಾವೆ

ಆಲೂರ ಮಲ್ಲೀಗೆ ಬೇಲೆಲ್ಲ ಪರಿಮಳ
ತಟ್ಟೇಯನ್ಹಾಸಿ ಉದರಿಸಿ-ಉದರಿಸಿ
ತಟ್ಟೇಯನ್ಹಾಸಿ ಉದರಿಸಿ ಮಾಲೇಯ ಕಟ್ಟಿ

ಮುಚಿಗ್ಯಂಡು ಹೋಗೋ ಮಡಿವಾಳ–ಮಡೀವಾಳ
ಮುಚಿಗ್ಯಂಡು ಹೋಗೋ ಮಡಿವಾಳರ ಸೆಟ್ಟಿ
ಕಾಗೆಯ ನೆರಳು ಕವದಾವೆ–ಕವಾದಾವೆ

ಏರಿ ಚಿನ್ನಾದೇರಿ ಏರಿ ರನ್ನಾದೇರಿ
ಏರಿಂದ ಕೆಳಗೆ ಎಲಿದೋಟ ಎಲಿದೋಟ
ಏರಿಂದ ಕೆಳಗೆ ಎಲಿದೋಟದೊಳಗಿರುವ
ಅವರ್ ಮಾವಯ್ಯ ಕೇಳಾರೆ ವಸಿಗೇಯ–ವಸಿಗೇಯ

ವಸಿಗೇಯ ಕೇಳಾರೆ ಹುಸಿನಗೆ ನಕ್ಕಾರೆ
ಏಸಳು ಸಂಪೀಗೆ ಬಡಿಸಾರೆ–ಬಿಡಿಸಾರೆ
ಏಸಳು ಸಂಪೀಗೆ ಬಿಡಸಿ ಮಾಲೆಯ ಕಟ್ಟಿ

ಮುಚಿಗ್ಯಂಡು ಹೋಗೋ ಮಡಿವಾಳ–ಮಡಿವಾಳ
ಮುಚಿಗ್ಯಂಡು ಹೋಗೋ ಮಡೀವಾಳಾರಸೆಟ್ಟಿ
ಹದ್ದುನ ನೆರಳು ಕವದಾವೆ–ಕವಾದಾವೆ"[೮]

ಪ್ರಸ್ತುತ ಗೀತೆಯಲ್ಲಿ ಮೈನೆರೆದ ಹೆಣ್ಣು ಮಗಳು ಸಣ್ಣದೊಂದು ಬಾಚಣಿಗೆ, ಸೀರಣಿಗೆಯಿಂದ ತುರುಬನ್ನು ಬಾಚಿ ದೊಡ್ಡ ಮಲ್ಲಿಗೆ ಹೂವನ್ನು ತುರುಬಿಗೆ ಮುಡಿದ ವಿವರಗಳು ಕಂಡುಬರುತ್ತವೆ. ಬೇಲಿಯಲ್ಲೆಲ್ಲಾ ಪರಿಮಳ ಸೂಸುವ ಬೇಲೂರ ಮಲ್ಲಿಗೆ, ಆಲೂರ ಮಲ್ಲಿಗೆ ಹೂಗಳ ವಿವರಗಳಿವೆ. ವಸಗೆಯ ಸುದ್ದಿಯನ್ನು ಕೇಳಿದ ಅವರ ಮಾವಯ್ಯ ಹುಸಿ ನಗೆಯನ್ನು ನಕ್ಕು ಎಸಳು ಸಂಪೀಗೆ ಹೂವನ್ನು ಬಿಡಿಸಿ ಸಂಪೀಗೆ ಮಾಲೆಯನ್ನು ಕಟ್ಟಿ ನೀಡುವ ಸಂಗತಿಗಳಿವೆ. ಇಲ್ಲಿ ಕಂಡುಬರುವ ಬಾಚಣಿಗೆ, ಸೀರಣಿಗೆ, ಚವಲಿ, ಮಡಿವಾಳಸೆಟ್ಟಿ, ಮಲ್ಲಿಗೆ, ಸಂಪಿಗೆ ಇವೆಲ್ಲವು ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆ. ಜನಪದರ ಯಾವುದೇ ಶುಭ ಸಂದರ್ಭಗಳಲ್ಲಿ ಇವು ಪ್ರಮುಖವಾದ ಸ್ಥಾನವನ್ನು ವಹಿಸುತ್ತವೆ. ಇವುಗಳಿಲ್ಲದೆ ಯಾವುದೇ ಕಾರ್ಯಗಳು ಜರುಗುವುದಿಲ್ಲ.

ಅಲ್ಲದೆ ಮಡಿವಾಳಸೆಟ್ಟಿ ಜನಪದರಲ್ಲಿ ಪ್ರಮುಖವಾದ ಸಾಂಸ್ಕೃತಿಕ ವ್ಯಕ್ತಿಯಾಗಿದ್ದಾನೆ. ಹಬ್ಬ ಹರಿದಿನ, ಮೈನೆರೆದಾಗ, ಮದುವೆ ಮೊದಲಾದ ಸಂದರ್ಭಗಳಲ್ಲಿ ಈತನ ಉಪಸ್ಥಿತಿಯಲ್ಲಿ ಅನೇಕ ಕಾರ್ಯಗಳು ಜರುಗುತ್ತವೆ. ಮೈನೆರೆದ ಹೆಣ್ಣು ಮಗಳಿಗೆ ಉಟ್ಟುಕೊಳ್ಳಲು ಮೊದಲು ಮಡಿವಾಳಸೆಟ್ಟಿಯ ಮನೆಯ ವಸ್ತ್ರಗಳನ್ನು ಕೊಡುವುದು ಹಾಗೂ ವಿವಾಹದ ಸಮಯದಲ್ಲಿ ಮದುವೆಯ ಚಪ್ಪರವನ್ನು ಸಿಂಗರಿಸಲು ಕಟ್ಟುವ ಬಟ್ಟೆಗಳು ಸಹ ಮಡಿವಾಳ ಸೆಟ್ಟಿಯ ಮನೆಯವೇ ಆಗಿವೆ. ಈ ಪದ್ಧತಿಗಳು ಇಂದಿಗೂ ನಮ್ಮ ಗ್ರಾಮೀಣ ಜನ ಜೀವನದಲ್ಲಿ ಹಾಸು ಹೊಕ್ಕಾಗಿವೆ. ಮಡಿವಾಳ ಸೆಟ್ಟಿಯ ಪಾಲ್ಗೊಳ್ಳುವಿಕೆ ಇಲ್ಲದೆ ಯಾವುದೇ ಕೆಲಸಗಳು ನಡೆಯುವುದಿಲ್ಲ.

೪.೩. ಜೋಗುಳದ ಹಾಡುಗಳು

'ಜೋಗುಳದ ಹಾಡುಗಳು' ಮಕ್ಕಳನ್ನು ಮಲಗಿಸುವಾಗ, ತೊಟ್ಟಿಲನ್ನು ತೂಗುವಾಗ ತಾಯಂದಿರು ಹೇಳುವ ಇಂಪಾದ ಹಾಡುಗಳಾಗಿವೆ. ಇವು ಮೆಲು ದನಿಯ ಹಾಡುಗಳಾಗಿದ್ದು, 'ಜೋ ಜೋ' ಅಥವಾ 'ಲಾಲಿ' ಎಂಬ ಸೊಲ್ಲು ಈ ಹಾಡುಗಳಲ್ಲಿರುವುದು ಕಂಡುಬರುತ್ತದೆ. ಮುಖ್ಯವಾಗಿ ಮಕ್ಕಳ ಅಂದ, ಚೆಂದ, ಕೀಟಲೆ, ತುಂಟತನ, ಆಟಪಾಠಗಳ ವರ್ಣನೆಗಳೂ ಕೂಡ ಈ ಹಾಡುಗಳಲ್ಲಿರುತ್ತವೆ. ಹಿರಿಯರು ಕಿರಿಯರು ಎನ್ನದೆ ಎಲ್ಲರನ್ನು ಆಕರ್ಷಿಸುವ ಲಾಲಿ ಪದಗಳು ಮಕ್ಕಳನ್ನು ಮಲಗಿಸುವ ಸಮಯದಲ್ಲಿ ಹಾಡಲ್ಪಡುತ್ತವೆ. ಈ ಹಾಡುಗಳು ಅನಕ್ಷರಸ್ಥ ಸ್ತ್ರೀಯರಿಂದ ರಚಿಸಲ್ಪಟ್ಟವಾಗಿವೆ.

'ಜೋ ಎಂದು ಕೂಗೀsರೆ ಗೋಪಿ ಕೃಷ್ಣನ ಜೋ ಜೊ
ದೇವ ಲೋಕದಿಂದ ದೇವಗನ್ನೇರೂ ಬಂದು
ಜೋಗುಳವ ಪಾಡಿ ತೂಗಿದರೂ ಜೋ ಜೋ
ಜೋ ಅಂದರೆ ಕೃಷ್ಣನಾ ಜೋ ಅಂದರೆ ಬಾಲಾನಾ
ಜೋಗುಳವ ಪಾಡಿ ತೂಗಿದರು ಜೋ..............'

ಜೋಗುಳದ ಹಾಡುಗಳು ಹೆಸರೇ ಸೂಚಿಸುವಂತೆ ಅಳುತ್ತಿರುವ ಮಗುವನ್ನು ಸಮಾಧಾನಪಡಿಸುತ್ತ ಮಲಗಿಸುವ ಸಂದರ್ಭದಲ್ಲಿ ಹೇಳುವ ಹಾಡುಗಳು. ಮುಖ್ಯವಾಗಿ ಈ ಪದಗಳನ್ನು ತೊಟ್ಟಿಲು ತೂಗುವಾಗ ಇಲ್ಲವೆ ಅಳುತ್ತಿರುವ ಮಗುವನ್ನು ತಟ್ಟಿ ತೊಡೆಯ ಮೇಲೆ ಅಥವಾ ಹೆಗಲ ಮೇಲೋ ಹಾಕಿಕೊಂಡು ಮಲಗಿಸುವಾಗ ಹಾಡುತ್ತಾರೆ. ಈ ಹಾಡುಗಳ ದಾಟಿ ಒಂದು ತೆರನಾಗಿದ್ದು, ಅಳುವ ಮಗು ಈ ಹಾಡಿನ ದನಿಗೆ ಹಾಗೆಯೇ ನಿದ್ದೆಗೆ ಜಾರುತ್ತದೆ. ಇಂದು ಈ ಹಾಡುಗಳು ಕಣ್ಮರೆಯಾಗುತ್ತಿವೆ.

ಜೋಗುಳದ ಹಾಡುಗಳನ್ನು 'ಲಾಲಿ ಪದ', 'ನಿದ್ದೆ ಪದ' ಹಾಗೂ 'ತೊಟ್ಟಿಲು ಪದ' ಎಂಬ ಹೆಸರುಗಳಿಂದಲೂ ಕರೆಯುವರು. ಮಗುವನ್ನು ತೊಟ್ಟಿಲಲ್ಲಿ, ತೋಳುಗಳ ಮೇಲೆ ಅಥವಾ ತೊಡೆಯ ಮೇಲೆ ಮಲಗಿಸಿಕೊಂಡು ಅವುಗಳು ನಿದ್ರೆ ಹೋಗುವಂತೆ ಮೃದುವಾಗಿ ತಟ್ಟುತ್ತ ಹೇಳುವ ಜೋಗುಳ ಪದಗಳ ಇಂಪು, ಅವುಗಳ ಮಾಧುರ್ಯಭರಿತ ದನಿ ಅವರ್ಣನೀಯವಾದುದು. ಈ ಕಾರಣವಾಗಿಯೆ ಜೋಗುಳ ಪದಗಳನ್ನು ಹಾಡುವ ಮೂಲಕ ಮಕ್ಕಳನ್ನು ಮಲಗಿಸುವುದೂ ಒಂದು ಕಲೆ. ಮಕ್ಕಳು ಮಲಗದೆ ಅಳುವ, ರಚ್ಚೆ ಹಿಡಿಯುವ ಮೂಲಕ ತೊಂದರೆ ಕೊಟ್ಟಾಗ ತಾಯಿಯಾದವಳು ಜೋಗುಳದ ಪದಗಳ ಮೂಲಕ ಆ ಮಗುವಿನ ಮನಸ್ಸನ್ನು ಗೆಲ್ಲುತ್ತಾಳೆ.

'ಹಾಲು ಕುಡಿಯಪ್ಪ ಬಂಗಾರ', 'ನೀನು ನನ್ನ ಚಿನ್ನ', 'ನಿನಗೆ ಬಂಗಾರದ ಗಿಲಕಿ ಮಾಡಿಸಿಕೊಡುವೆ' ಎಂದು ಹಲವು ರೀತಿಯಾಗಿ ಆ ಮಗುವನ್ನು ಒಲಿಸಿಕೊಳ್ಳುವ ಜನಪದ ಹೆಣ್ಣಿನ ವಾತ್ಸಲ್ಯ ಈ ಹಾಡುಗಳಲ್ಲಿದೆ. ಬಡತನದ ಬವಣೆಯಲ್ಲಿದ್ದರೂ ಆಕೆಗೆ ಅದರ ನೋವಿಲ್ಲ. ಬದಲಿಗೆ ತನ್ನ ಮಗುವೇ ಆಕೆಗೆ ಇಂದ್ರ, ಚಂದ್ರ, ಬಂಗಾರ, ರಾಜಕುಮಾರ ಈ ರೀತಿಯ ಹೋಲಿಕೆ ಆಕೆಯ ಮನದ ನೋವನ್ನು ಮರೆ ಮಾಚಿ ಬದುಕನ್ನು ಮುನ್ನಡೆಸಲು ತುಂಬುವ ಸ್ಫೂರ್ತಿಯು ನಿಜಕ್ಕೂ

ಆಶ್ಚರ್ಯಕರವಾದದ್ದು. ಮಗುವನ್ನೇ ತನ್ನ ಸರ್ವಸ್ವ ಎಂದುಕೊಂಡಿರುವ ನಿಸ್ವಾರ್ಥ ಜೀವಿಗೆ ಆ ಮಗುವೇ ಆಕೆಯ ಜೀವದ ಉಸಿರು. ಆ ಮಗುವಿನ ನಗು, ಅಳು, ತುಂಟಾಟ, ರಚ್ಚೆ ಹಿಡಿಯುವಿಕೆ, ಮೋಹಕತೆ ಎಲ್ಲವೂ ಅವಳಿಗೆ ಹಿತಕರವಾದವೇ.

"ಆಡಿ ಬಾ ನನ ಕಂದ ಅಂಗಾಲ ತೊಳದೇನು
ತೆಂಗೀನ ಕಾಯ ತಿಳಿನೀರ । ತಕ್ಕೊಂಡು
ಬಂಗಾರ ಪಾದ ತೊಳೆದೇನು"[೯]

ತಾಯಿ ಹೃದಯ ತನ್ನ ಕಂದನಿಗೆ ಗೆಳೆಯರೊಂದಿಗೆ ಆಟವಾಡಿ ಬರುವಂತೆ ತಿಳಿಸಿ, ಆಟದ ನಂತರ ಬಂದ ಕಂದನ ಅಂಗಾಲನ್ನು ತೊಳೆಯುತ್ತೇನೆಂದು ಹೇಳುತ್ತಾಳೆ. ಜೊತೆಗೆ ತೆಂಗಿನ ಕಾಯಿಯ ತಿಳಿನೀರಿನಿಂದ ಬಂಗಾರದಂತಹ ಪಾದವನ್ನು ತೊಳೆಯುವುದಾಗಿ ತಿಳಿಸುತ್ತಾಳೆ. ಇಲ್ಲಿ ಆಕೆ ಬಳಕೆ ಮಾಡಿರುವ ತೆಂಗಿನ ಕಾಯ ತಿಳಿನೀರು, ಬಂಗಾರದ ಪಾದ ಮೊದಲಾದ ಪದಗಳು ಆಕೆಯ ಮನದಲ್ಲಿನ ತನ್ನ ಮಗುವಿನ ಬಗೆಗಿನ ಸೊಗಸಾದ ಕಲ್ಪನೆಯನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ.

"ಅಳುವ ಕಂದನ ತುಟಿಯು ಹವಳದಾ ಕುಡಿಯಂಗ
ಕುಡಿಹುಬ್ಬು ಬೇವಿನೆಸಳಂಗ । ಕಣ್ಣೋಟ
ಶಿವನ ಕೈಯಲಗು ಹೊಳೆದಂಗ"[೧೦]

ಅಳುವ ಕಂದನನ್ನು ವರ್ಣಿಸುವ ಈ ಗೀತೆಯು ಜನಪದ ಹೆಣ್ಣು ಮಗಳ ಮನದ ರಸಿಕತೆಗೆ ಹಿಡಿದ ಕನ್ನಡಿಯಾಗಿದೆ. ಆ ಮಗುವಿನ ತುಟಿ, ಕುಡಿಹುಬ್ಬು, ಕಣ್ಣೋಟಗಳನ್ನು, ಹವಳದ ಕುಡಿಗೆ, ಬೇವಿನ ಚಿಗುರಿಗೆ, ಶಿವನ ಕೈಯಲಗಿನ ಹೊಳಪಿಗೆ ಹೋಲಿಸಿ ಮನದಣಿಯುವಷ್ಟು ನಲಿಯುತ್ತಾಳೆ. ಮುಂದುವರೆದು

"ತೊಟ್ಟಿಲಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ । ಕಂದಯ್ಯಗ
ಮುತ್ತಿನ ದೃಷ್ಟಿ ಇಳಿದೇನ"[೧೧]

ತೊಟ್ಟಿಲೊಳಗೆ ಮಲಗಿರುವ ಮಗುವನ್ನು ತೊಳೆದ ಮುತ್ತಿಗೆ ಹೋಲಿಸಿ ಆನಂದಿಸುತ್ತಾಳೆ. ಹೊಟ್ಟೆ ಮೇಲು ಮಾಡಿ ಮಲಗಿರುವ ತನ್ನ ಕಂದನಿಗೆ ಮುತ್ತಿನ ದೃಷ್ಟಿಯನ್ನು ತೆಗೆಯುವುದಾಗಿ ಹೇಳಿಕೊಳ್ಳುತ್ತಾಳೆ. ಅಲ್ಲದೆ,

"ಎಲ್ಲರ ಮಕ್ಕಳಂಗೆ ಅಲ್ಲ ಕಣೆ ನನ್ನಯ್ಯ
ನಲ್ಲರಳುಗಣ್ಣು ನಗೆ ಮುಖ । ಕಾಮನ
ಬಿಲ್ಲು ಹೋಲ್ತಾವೆ ಕುಡಿಹುಬ್ಬು"[೧೨]

ತನ್ನ ಮಗುವನ್ನು ಎಲ್ಲ ಮಕ್ಕಳಂತೆ ಅಲ್ಲ. ಆತ ನಲ್ಲರಳುಗಣ್ಣಿನ ನಗೆ ಮುಖದವನು. ಆತನ ಕುಡಿಹುಬ್ಬು ಕಾಮನ ಬಿಲ್ಲನ್ನು ಹೋಲುತ್ತವೆ ಎನ್ನುತ್ತಾಳೆ. ಮೇಲಿನ ಈ ಜನಪದ ಗೀತೆಗಳಲ್ಲಿ ಮಗುವಿನ ಅಂಗಾಂಗಗಳು ಹಾಗೂ ಆ ಮಗುವಿನ ಗುಣಗಳ ವರ್ಣನೆಯಲ್ಲಿ ಬಳಕೆಯಾಗಿರುವ ರೂಪಕಗಳು ಅದ್ಭುತವಾಗಿವೆ. ಇವುಗಳು ತಾಯಿಯ ಮನದಲ್ಲಿನ ಮಧುರ ಭಾವನೆಗಳನ್ನು ತಿಳಿಸಿಕೊಡುವಂತೆಯೇ ವರ್ಣನೆಯ ಚೆಲುವಿನಿಂದ ತುಂಬಿದೆ.

“ಆಡೊ ಮಕ್ಕಳಿರ ನಮ್ಮರಗಿಣಿಯ ಕಾಣೀರ ?
ಕಂಡ ಮಕ್ಕಳಿರ ಕರತನ್ನಿ । ಕಂದಯ್ಯ
ಉಂಡೋಗಲಿಲ್ಲ ಹಸಿದಾನು”[೧೩]

ಊಟ ಮಾಡದೆ ಆಡಲು ಹೋದ ಮಗನನ್ನು ಕುರಿತ ತಾಯಿಯ ಆತಂಕ, ದುಗುಡಗಳು ಇಲ್ಲಿ ಮುಪ್ಪುರಿಗೊಂಡಿವೆ. ಅದಕ್ಕಾಗಿ ಆ ಜೀವ ಆಟವನ್ನು ಆಡುತ್ತಿರುವ ಮಕ್ಕಳಲ್ಲಿ ತನ್ನ ಮಗನನ್ನು ಹುಡುಕುತ್ತ ಆತನನ್ನು ನೀವು ಯಾರಾದರೂ ನೋಡಿದಿರ ಎಂದು ಕೇಳುತ್ತಾಳೆ. ಹಾಗೆಯೇ ಆತ ಎಲ್ಲಿರುವನೆಂಬುದನ್ನು ನೋಡಿದ್ದರೆ ಕರೆದು ತನ್ನಿ ಎಂದು ಆತನ ಇತರ ಗೆಳೆಯರಿಗೆ ಹೇಳುವ ಮಾತುಗಳು ಅರ್ಥಪೂರ್ಣವಾಗಿವೆ. ಏಕೆಂದರೆ ತಾಯಿ ಹೃದಯವೇ ಅಂತಹದ್ದು, ತಾನು ಊಟ ಮಾಡದೆ ಉಪವಾಸವಿದ್ದರೂ ಸಹ, ಮಗನನ್ನು ಉಪವಾಸವಿರಲು ಬಿಡುವುದಿಲ್ಲ. ತಾಯಿಯ ಮನಸ್ಸು ಎಂದಿಗೂ ಅದನ್ನು ಸಹಿಸಿಕೊಳ್ಳುವುದಿಲ್ಲ. ಹೀಗಾಗಿಯೆ ನಮ್ಮ ಜನಪದ ಸಾಹಿತ್ಯದಲ್ಲಿ ತಾಯಿಗೆ ಬಹು ಎತ್ತರದ ಸ್ಥಾನವಿದೆ.

“ನನ್ನಯ್ಯಾನಂಥೋರು ಹನ್ನೆರಡು ಮಕ್ಕಳು
ಹೊನ್ನೇಯ ಮರದ ನೆರಳೇಲಿ । ಆಡುವಾಗ
ಸನ್ಯಾಸಿ ಜಪವ ಮರೆತಾನು”[೧೪]

ಈ ಗೀತೆಯಲ್ಲಿ ತಾಯಿಯು ಮಕ್ಕಳ ಆಟದ ಸೊಬಗನ್ನು ಕುರಿತು ವರ್ಣಿಸುತ್ತಾಳೆ. ಹೊನ್ನೆಯ ಮರದ ನೆರಳಿನಲ್ಲಿ ಹನ್ನೆರಡು ಜನ ಮಕ್ಕಳು ಸೇರಿ ಆಟವನ್ನು ಆಡುತ್ತಿರಲು ಆ ಸೊಗಸಿಗೆ ಜಪವನ್ನು ಮಾಡುತ್ತಿದ್ದ ಸನ್ಯಾಸಿ ಕೂಡ ತನ್ನ ಜಪವನ್ನು ಮರೆತು ಆ ಮಕ್ಕಳ ಆಟವನ್ನು ನೋಡುತ್ತ ನಿಂತ ಎನ್ನುತ್ತಾನೆ ಕವಿ. ಮಕ್ಕಳ ಆಟದ ಸೊಗಸೇ ಅಂತಹದ್ದು, ಎಂತಹವರನ್ನಾದರೂ ಮರುಳುಗೊಳಿಸಿ ಮಂತ್ರ ಮುಗ್ಧರನ್ನಾಗಿಸುತ್ತದೆ. ಆ ಮೂಲಕ ಅವರ ಲಕ್ಷ್ಯವನ್ನು ತಮ್ಮತ್ತ ಆಕರ್ಷಿಸಬಲ್ಲ ಮಾಂತ್ರಿಕತೆ ಆ ಮಕ್ಕಳ ಆಟದಲ್ಲಿದೆ.

‘ಕಂದಾನ ಕಿರಿಕಿರಿ ಇಂದೇನು ಹೇಳಲಿ
ಬಿಂದೀಗಿ ಹಾಲು ಸುರಿಯೆಂದ । ಸಂಜೀಯ
ಚಂದ್ರಮನ ತಂದು ನಿಲಿಸೆಂದ’

ಮಕ್ಕಳು ಕೆಲವೊಮ್ಮೆ ಕಿರಿಕಿರಿ ಮಾಡಿ ಚಂಡಿ ಹಿಡಿಯುವುದೂ ಉಂಟು. ಆ ಸಮಯಲ್ಲಿ ಅವುಗಳಿಗೆ ಏನು ಕೊಟ್ಟರೂ ಬೇಕಿಲ್ಲ. ಬಾನಿನ ಚಂದ್ರನನ್ನೇ ಅಪೇಕ್ಷಿಸಿ ಆತನನ್ನು ತಂದುಕೊಡುವಂತೆ ಪೀಡಿಸುವ ಮಕ್ಕಳು ಏನು ಮಾಡಿದರೂ ಸಮಾಧಾನಗೊಳ್ಳುವುದಿಲ್ಲ. ಆದರೆ ಇದಕ್ಕೆ ತಾಯಿ ಎಂದಿಗೂ ಬೇಸರಗೊಳ್ಳುವುದಿಲ್ಲ. ಆಕೆಗೆ ಮಗುವಿನ ಕಿರಿ ಕಿರಿ ಸಹ ಚೆಲುವಿನಿಂದ ಕಂಗೊಳಿಸುತ್ತದೆ.

"ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆಗೆಲಸ । ಕಂದನಂಥ
ಮಕ್ಕಳಿರಲವ್ವ ಮನೆತುಂಬ"[೧೫]

ಮಗುವಿನ ಅಳು ಕೂಡ ಆಕೆಗೆ ಬೇಸರ ತರಿಸುವುದಿಲ್ಲ. ಅಂದವಾಗಿ ಕಾಣುತ್ತದೆ. ಮಗು ಅತ್ತರೂ ಆ ಮಗುವನ್ನು ಬಿಡಲು ತಾಯಿ ತಯಾರಿಲ್ಲ. ಆ ಮಗುವನ್ನು ಸಮಾಧಾನಿಸಲು ಹೋಗಿ ಮನೆಗೆಲಸಗಳೆಲ್ಲ ಕೆಟ್ಟರೂ ಸಹ ಚಿಂತೆ ಇಲ್ಲ ಆಕೆಗೆ. ಏಕೆಂದರೆ ಮನೆತುಂಬ ಮಕ್ಕಳಿರಬೇಕು. ಮನೆ ಯಾವತ್ತೂ ಮಕ್ಕಳಿಂದ ತುಂಬಿದ್ದಾಗ ಮಾತ್ರ ಜೀವನದ ಪರಿಪೂರ್ಣತೆ ಸಾಧ್ಯವಾಗುವುದು. ಮಕ್ಕಳಿಲ್ಲದ ಮನೆ ಖುಷಿ, ಸಂತೋಷಗಳಿಂದ ವಂಚಿತವಾದ ಘೋರ ಕಗ್ಗತ್ತಲು. ಆ ಕಾರಣವಾಗಿಯೆ ನಮ್ಮ ಜನಪದರು ಹೇಳುವುದು 'ಮಕ್ಕಳಿರಲವ್ವ ಮನೆತುಂಬ' ಎಂದು. ಆಗ ಉಡಿ ತುಂಬ, ಮನದ ತುಂಬ ಖುಷಿ, ಸಂತೋಷಗಳು ತುಂಬಿ ತುಳುಕುತ್ತವೆ.

"ಜೋಗುಳ ಹಾಡಿದೆರ ಆಗಾಲೆ ಕೇಳ್ಯಾನು
ಹಾಲ ಹಂಬಲವ ಮರೆತಾನು । ಕಂದಯ್ಗೆ
ಜೋಗುಳದಾಗೆ ಅತಿಮುದ್ದು"[೧೬]

ಈ ಗೀತೆಯು ಜೋಗುಳದ ಪದಗಳಿಗೆ ಇರುವ ಶಕ್ತಿಯನ್ನು ತಿಳಿಸುತ್ತದೆ. ಜೋಗುಳದ ಪದಗಳನ್ನು ಹಾಡಿದರೆ ಲಾಲಿಸಿ ಕೇಳುವ ಮಗುವು ಹಾಲಿನ ಹಂಬಲವನ್ನೇ ಮರೆಯುತ್ತದೆ ಎನ್ನುತ್ತಾನೆ ಕವಿ. ಈ ರೀತಿಯಾಗಿ ಹಾಲಿನ ಹಂಬಲವನ್ನು ಮರೆತು ಜೋಗುಳದ ಪದಗಳನ್ನು ಆಲಿಸುವ ಮಗುವು ಜೋಗುಳದ ಪದಗಳಂತೆಯೇ ತಾಯಿಗೆ ಅತಿ ಮುದ್ದಾದುದು. ಇದಕ್ಕಿಂತ ತಾಯಿಗೆ ಬೇರೆ ಐಶ್ವರ್ಯಗಳು ಬೇಕಿಲ್ಲ. ತನ್ನ ಭಾವ ಕಲ್ಪನೆಯಲ್ಲಿ ಆ ಮಗುವೇ ಆಕೆಗೆ ಸಕಲವೂ ಆಗಿ ಕಂಗೊಳಿಸುತ್ತದೆ.

೪.೪. ಸೋಬಾನ ಹಾಡುಗಳು

'ಸೋಬಾನೆ ಪದಗಳು' ಅಥವಾ 'ಸೋಬಾನದ ಹಾಡುಗಳ'ನ್ನು ವಿವಾಹ ಮುಂತಾದ ಶುಭ ಸಮಾರಂಭಗಳಲ್ಲಿ ಹೆಂಗಸರು ಹಾಡುವಂತಹ ಪದಗಳಾಗಿವೆ. ಮದುವೆ ಕಾರ್ಯಕ್ರಮಗಳ ಸಂದರ್ಭಗಳಲ್ಲಿ ನಾಲ್ಕೈದು ಜನ ಹೆಂಗಸರು ಸಾಮಾನ್ಯವಾಗಿ ಒಟ್ಟಿಗೆ ಸೇರಿ ಈ ಸೋಬಾನೆ ಹಾಡುಗಳನ್ನು ಹಾಡುತ್ತಾರೆ. ಸೋಬಾನೆ ಪದಗಳನ್ನು ಹಾಡುವಾಗ ಹೆಂಗಸರು ಎರಡು ಗುಂಪುಗಳನ್ನು ಮಾಡಿಕೊಳ್ಳುತ್ತಾರೆ. ಒಂದು ಗುಂಪಿನವರು ಎರಡು ಚರಣಗಳನ್ನು ಹಾಡಿದರೆ, ಎರಡನೆಯ

ಗುಂಪಿನವರು ಮೊದಲ ಸಾಲನ್ನು ಬಿಟ್ಟು ಎರಡನೆಯ ಸಾಲನ್ನು ಮಾತ್ರ ಹೇಳುತ್ತ ಆ ಹಾಡನ್ನು ಮುಂದುವರೆಸುವುದು ಕಂಡುಬರುತ್ತದೆ.

ಇಲ್ಲಿ ಪ್ರತಿಯೊಂದು ಶಾಸ್ತ್ರಕ್ಕೂ ಸಂಬಂಧಿಸಿದಂತೆ ಬೇರೆ ಬೇರೆ ಸೋಬಾನೆ ಪದಗಳಿರುವುದನ್ನು ಗಮನಿಸಬಹುದು. ಹಿಂದೆ ಮದುವೆ ಕಾರ್ಯಕ್ರಮಗಳು ಹಲವು ದಿನಗಳವರೆಗೆ ನಡೆಯುತ್ತಿದ್ದವು. ಈ ಸಂದರ್ಭಗಳಲ್ಲಿ 'ಶಾಸ್ತ್ರ'ಗಳನ್ನು ಚಾಚೂ ತಪ್ಪದೆ ಪಾಲಿಸಲಾಗುತ್ತಿತ್ತು. ಅಲ್ಲದೆ ಇವುಗಳಿಗೆ ಬೇಕಾದ ಬಿಡುವೂ, ಪುರುಸೊತ್ತು, ಮುಖ್ಯವಾಗಿ ಮನಸ್ಸು ಎಲ್ಲವೂ ಇದ್ದವು. ಪ್ರತಿಯೊಂದು ಶಾಸ್ತ್ರ ಮಾಡುವಾಗಲೂ ಸಹ ಒಂದೊಂದು ಬಗೆಯ ಹಾಡನ್ನು ಒಂದೊಂದು ತರಹದ ಧಾಟಿಯಲ್ಲಿ ಹೇಳುತ್ತಿದ್ದರು.

ಆದರೆ ಇಂದು ಆಧುನಿಕತೆಯ ಪ್ರಭಾವ ಹಾಗೂ ಬದುಕಿನ ಸಂಕೀರ್ಣತೆಯ ಕಾರಣದಿಂದಾಗಿ ಸೋಬಾನ ಹಾಡುಗಳು ಕಣ್ಮರೆಯಾಗುತ್ತಿವೆ. ಜೊತೆಗೆ ನಮ್ಮ ಕಿವಿ ತಮಟೆಯಿಂದ ದೂರವಾಗುತ್ತಿವೆ. ಇಂದಿನ ಮದುವೆಗಳು ಆಡಂಬರ ಹಾಗೂ ತೋರಿಕೆಯ ಪ್ರದರ್ಶನದ ಜಿದ್ದಿಗೆ ಬಿದ್ದು ನೀರಸವಾದ ಮದುವೆಗಳಾಗುತ್ತಿವೆ. ಸೋಬಾನೆ ಹಾಡುಗಳಾಗಲಿ, ಶಾಸ್ತ್ರಗಳಾಗಲಿ ಇಲ್ಲವೇ ಇಲ್ಲ. ಇದ್ದರೂ ಕಾಟಾಚಾರಕ್ಕೆಂಬಂತೆ ಹಾಡಲಾಗುತ್ತದೆ. ಇದರ ಜೊತೆಗೆ ಸಿನಿಮಾ ಹಾಡುಗಳ ಪ್ರಭಾವವಿರುವ ಆರ್ಕೇಸ್ಟ್ರಾಗಳಂತಹ ಸಂಗೀತ ಕಾರ್ಯಕ್ರಮಗಳು ಇಂತಹ ಜನಪದರ ಸಾಂಸ್ಕೃತಿಕ ಚಹರೆಗಳನ್ನು ಮೂಲೆಗುಂಪು ಮಾಡುತ್ತಿವೆ. ಇಂದು ಈ ಸಿನಿಮಾ ಹಾಡುಗಳು ಸೋಬಾನೆ ಹಾಡುಗಳ ಸ್ಥಾನವನ್ನು ತಾವು ಆಕ್ರಮಿಸಿಕೊಂಡಿದ್ದು, ಮೂಲ ಸಂಸ್ಕೃತಿ ಹಾಗೂ ಸಾಮರಸ್ಯವನ್ನು ನಾಶಗೊಳಿಸುತ್ತಿವೆ. ಇಷ್ಟಾಗಿಯೂ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಲಲ್ಲಿ ಕೇಳಲಿಕ್ಕೆ ಸಿಗುತ್ತವೆ.

ಮದುವೆ ಸಂಬಂಧಿಯಾಗಿ ಜರುಗುವ ಕಾರ್ಯಕ್ರಮಗಳಲ್ಲಿ ಹೆಂಗಸರು ಗುಂಪು ಗುಂಪಾಗಿ ಸೇರಿ ಹೇಳುವ ಪದಗಳನ್ನು ಸೋಬಾನ ಪದಗಳೆಂದು ಕರೆಯುವರು. ಮದುವೆ ಮಾನವನ ಬದುಕಿನ ಬಹುಮುಖ್ಯ ಘಟ್ಟ. ಇಂತಹ ವಿವಾಹ ಕಾರ್ಯಗಳು ಹಿಂದೆ ಒಂದು ವಾರದಿಂದ ಹಿಡಿದು ಒಂದು ತಿಂಗಳವರೆಗೂ ನಡೆಯುತ್ತಿದ್ದುದು ತಿಳಿದುಬರುತ್ತದೆ. ಇಂತಹ ಸಮಯದಲ್ಲಿ ಬಂಧು, ಬಳಗ, ರಕ್ತ ಸಂಬಂಧಿಗಳು, ಊರಿನ ಜನತೆ ಭಾಗವಹಿಸುತ್ತಿದ್ದರು. ಈ ರೀತಿ ಎಲ್ಲರೂ ಒಂದು ಕಡೆ ಸೇರಿ ಸಂತೋಷದಿಂದ ಮದುವೆಯಾಗುವ ಹೆಣ್ಣು-ಗಂಡುಗಳನ್ನೆ ಶಿವ-ಪಾರ್ವತಿಯರೆಂದುಕೊಂಡು ಮದುವೆಗೆ ಸಂಬಂಧಿಸಿದ ಪದಗಳನ್ನು ಹೇಳುತ್ತಿದ್ದರು.

ಮದುವೆಯ ಸಂದರ್ಭದಲ್ಲಿ ರೂಢಿಯಲ್ಲಿದ್ದ ಹಲವಾರು ಶಾಸ್ತ್ರಗಳ ಸಮಯದಲ್ಲಿ ಈ ಹಾಡುಗಳನ್ನು ಹೇಳಲ್ಪಡುತ್ತಿದ್ದುದು ವಿಶೇಷ. ಶಾಸ್ತ್ರದ ನೀರು ತರುವ ಸಮಯ, ಗಂಗೆಯ ಬಳಿ ಕಳಸವನ್ನು ಪೂಜಿಸುವುದು, ವೀಳೆಯ ಶಾಸ್ತ್ರ ಮಾಡುವುದು, ಶಾಸ್ತ್ರದ ಭತ್ತ ಕುಟ್ಟುವ ಸಮಯ, ಹಸೆ ಬರೆಯುವ ಸಮಯ, ಅರಿಶಿಣದ ಎಣ್ಣೆ ಇಡುವ ಸಮಯ, ಮಜ್ಜನ, ಮಡಿಲು ತುಂಬುವುದು,

ಧಾರೆಯೆರೆಯುವ ಸಮಯ, ತಾಳಿ ಕಟ್ಟುವ ಸಂದರ್ಭ ಮೊದಲಾದ ಸಮಯಗಳಲ್ಲಿ ಸೋಬಾನೆ ಹಾಡುಗಳು ಹಾಡಲ್ಪಡುತ್ತವೆ. ಇವೆಲ್ಲವು ನಮ್ಮ ಸಂಸ್ಕೃತಿಯೊಂದಿಗೆ ಬಿಡಿಸಲಾರದಂತಹ ಸಂಬಂಧವನ್ನು ಹೊಂದಿವೆ.

ಸೋಬಾನೆಯ ನಾಂದಿ ಗೀತೆ ಹೀಗಿದೆ.

'ಸರಸತಿ ಸಣ್ಣೋಳೆ ನಗುಮಕುದ ಕೆನ್ನೋಳೆ
ಕಲಕಂಠಕ ಧರಿಸೆ ಗಿರಿಜಮ್ಮ । ಪಾರ್ವತಿ ದೇವಿ
ಕಲಿಸೆ ಕಲ್ಯಾಣದ ಪದನೂರ.

ಪದವ ಕಲಿಸಿದರೆ ನನಗೇನು ಕೊಟ್ಟಿರೆ
ನೆನೆಯಕ್ಕಿ ನೆನೆಗಡಲೆ ಗೊನಿಯ ಬಾಳೆ । ಹಣ್ಣು
ಚಿಬ್ಬಲ್ಲಡಿಕೆ ಚಿಗರೆಲೆ । ತಕ್ಕೊಂಡು
ಕೊಟ್ಟು ಬನ್ನಿ ಗಿರಿಜಮ್ಮನ ಅರಮನಿಗೆ.

ಸೋಬನು ರನ್ನಾವೆ ಸೋಬನ್ನೆ ಚಿನ್ನಾವೆ
ಸೋಬನ್ನೆ ಸಲ್ಲ ಮುಡಿಯೋಳೆ । ಮುದ್ದು ಮುಖದ
ಮೂವನ್ನೆ ದನಿಯ ಕೊಡುಬಾರೆ । ಸರಸತಿ
ಎಲ್ಲಿಗೋದ್ಯಮ್ಮ ಪದ ಬರಲಿ.

ಎಲ್ಲಿಗೋಗಲಿಲ್ಲ ಯಾನಾಡಿಗೋಗಲಿಲ್ಲ
ಸಾಲ ಬೇಲೂರ ಮಳಿಗೆಲ್ಲಿ । ಮಂಜದ ಮೇಲೆ
ಲಾಲಿಸುತ್ತಿದ್ದೊ ಪದನೂರ.

ಅಟ್ಟಬೆಟ್ಟದಲಿ ಪುಟಜಾಜಿ ವನದಲಿ
ಸಟ್ಟೋರೆ ನಿನ್ನ ಹರಸಿದೋ । ಸರಸತಿಯೆ
ಪಟ ಮಂಜದ ಮೇಲೆ ಪಗಡೆಯ । ಆಡೋಳೆ
ಪಗಡೆ ಬಿಟ್ಟಾಡ ಕಲಿಸಮ್ಮ.

ಹಳ್ಳಕೊಳ್ಳದಲಿ ಮುಳುಜಾಜಿ ವನದಲಿ
ಬಲ್ಲೋರೆ ನಿನ್ನ ಹರಸಿದೊ । ಸರಸತಿಯೆ
ಸೋಬಾನೆಂಬೊದೆ ಶಿವನಿಗೆ'.

ಜನಪದರ ಯಾವುದೇ ಕೆಲಸ ಕಾರ್ಯಗಳು ಪ್ರಾರಂಭವಾಗುವುದು ಸರಸ್ವತಿ ಹಾಗೂ ಗಣಪತಿಯನ್ನು ಪ್ರಾರ್ಥಿಸುವ ಮೂಲಕ. ಗಣಪತಿ ನಮ್ಮ ಕೃಷಿ ದೈವ. ಆತನ ಪೂಜಿಸುವಿಕೆ ಇಲ್ಲದೆ ನಮ್ಮ ಯಾವುದೇ ಕಾರ್ಯ ಚಟುವಟಿಕೆಗಳು ಮುಂದುವರೆಯುವುದಿಲ್ಲ. ಹಾಗೆಯೆ ಇಲ್ಲಿನ

ಸೋಬಾನೆ ಗೀತೆಯಲ್ಲಿಯೂ ಜ್ಞಾನ ಹಾಗೂ ಬುದ್ಧಿ ದೇವತೆಯಾದ ಸರಸತಿಯನ್ನು ಸ್ಮರಿಸಿದ್ದಾರೆ ಜನಪದರು. ಗಮನಿಸುವಂತಹ ಮುಖ್ಯ ಸಂಗತಿ ಎಂದರೆ ಜನಪದರ ಹಾಡು, ಹಸೆ, ಸುಖ, ದುಃಖ ಮೊದಲಾದ ಎಲ್ಲ ಸಂದರ್ಭದಲ್ಲು ಜೊತೆಗಿರುವವರು ಶಿವ ಹಾಗೂ ಪಾರ್ವತಿ. ಇವರಿಬ್ಬರು ಕೂಡ ನಮ್ಮ ಸಂಸ್ಕೃತಿಯ ಪ್ರಧಾನ ದೈವಗಳು. ಇವರನ್ನು ಸ್ಮರಿಸುತ್ತಲೆ ತಮ್ಮ ದೈನಂದಿನ ಕಾರ್ಯಚಟುವಟಿಕೆಗಳನ್ನು ಮುಂದುವರೆಸುತ್ತಾರೆ.

ಇಲ್ಲಿನ ಸೋಬಾನೆಯ ನಾಂದಿ ಗೀತೆಯಲ್ಲಿಯೂ ಕೂಡ ನೆನೆಯಕ್ಕಿ, ನೆನೆಗಡಲೆ, ಗೊನಿಯ ಬಾಳೆಯ ಹಣ್ಣು, ಚಿಬ್ಬಲ್ಲಡಿಕೆ, ಚಿಗುರೆಲೆ ಇವೆಲ್ಲವುಗಳನ್ನೂ ತೆಗೆದುಕೊಂಡು ನಮಗೆ ಪದವನ್ನು ಕಲಿಸು ಎಂದು ಸರಸ್ವತಿಯನ್ನು ವಿನಮ್ರತೆಯಿಂದ ಬೇಡಿಕೊಳ್ಳುತ್ತಾರೆ. ಶಿವನಿಗೆ ಸೋಬಾನೆಯೆನ್ನಿ ಎನ್ನುವ ಮೂಲಕ ತಮ್ಮ ಇಷ್ಟ ದೈವವನ್ನು ಪ್ರಾರ್ಥಿಸುತ್ತಾರೆ. ಇಲ್ಲಿನ ನೆನೆಯಕ್ಕಿ, ನೆನೆಗಡಲೆ, ಬಾಳೆ ಗೊನೆ, ಅಡಕೆ, ಚಿಗುರೆಲೆ, ಬೆಟ್ಟದ ಪುಟ್ಟಜಾಜಿ ಹೂವು, ಪಗಡೆ, ಮುಳ್ಳು ಜಾಜಿ ಇವೆಲ್ಲವು ನಮ್ಮ ಸಂಸ್ಕೃತಿಯ ಪ್ರತೀಕಗಳೇ ಆಗಿವೆ. ಇವುಗಳಿಲ್ಲದೆ ಜನಪದರಿಲ್ಲ, ಹಾಗೂ ಅವರ ಯಾವುದೇ ಕಾರ್ಯ ಚಟುವಟಿಕೆಗಳು ನಡೆಯವು.

"ಸೋಬಾನದಿಂದ ಸುಖದಿಂದ, ಸೋಬಾನವೇ ॥ಪ॥

ಕುದುರೇ ಮೇಲ್ ಬರುವೋನು ಚದುರನೆಂಬುತಲಿದ್ದೆ
ಕದುರುಗಾಲಿನ ಮದುವಣ್ಣ – ಸೋಬಾನವೇ
ಸೋಬಾನದಿಂದ
ಕದುರುಗಾಲಿನ ಮದುವಣ್ಣ ನಮ್ಮನೇ
ಚದುರೆಗೆ ನೀನೆಲ್ಲಿ ದೊರಕಿದೋ – ಸೋಬಾನವೇ
ಸೋಬಾನದಿಂದ

ಒಂಟೇಮೇಲ್ ಬರುವೋನು ಬಂಟನೆಂಬುತಲಿದ್ದೆ
ಗಂಟುಗಾಲಿನ ಮದುವಣ್ಣ – ಸೋಬಾನವೇ
ಗಂಟುಗಾಲಿನ ಮದುವಣ್ಣ ನಮ್ಮನೇ
ಬಂಟೆಗೆ ನೀನೆಲ್ಲಿ ದೊರಕಿದೋ – ಸೋಬಾನವೇ
ಸೋಬಾನದಿಂದ"[೧೭]

ಈ ಪದವು ಮದುವೆಯ ಸಮಯದಲ್ಲಿ ಹೆಂಗಸರು ಹೇಳುವ ಪದವಾಗಿದೆ. ಕುದುರೆ ಹಾಗೂ ಒಂಟೆ ಮೇಲೆ ಕೂತು ಬರುತ್ತಿರುವ ಮದುಮಗನನ್ನು ಕುರಿತು ಹೆಣ್ಣು ಮಕ್ಕಳು ಹಾಸ್ಯದಿಂದ ಹಾಡುವ ಹಾಡು ಇದಾಗಿದೆ. ಕದುರುಗಾಲನ್ನು ಹಾಗೂ ಗಂಟುಕಾಲನ್ನು ಒಳಗೊಂಡಿರುವ ಮದುವಣ್ಣ ನಮ್ಮನೆಯ ಚದುರೆಗೆ, ಬಂಟೆಗೆ ನೀನು ಎಲ್ಲಿ ದೊರಕಿದೋ ಎಂದು ಹಾಸ್ಯದಿಂದ ಆತನನ್ನು ಸ್ವಾಗತಿಸುತ್ತ ಬರಮಾಡಿಕೊಳ್ಳುವ ಸಂಗತಿಗಳು ಇಲ್ಲಿ ಕಂಡುಬರುತ್ತವೆ. ಹಾಸನ ಜಿಲ್ಲೆಯ

ಕೆಲವು ತಾಲ್ಲೂಕುಗಳಲ್ಲಿ ಈ ಪದಗಳನ್ನು ಕೋಲಾಟಕ್ಕೂ ಅಳವಡಿಸಿಕೊಂಡು ಹಾಡುವುದನ್ನು ಗಮನಿಸಬಹುದಾಗಿದೆ.

ಮದುವೆಯ ದಿನ ಹಸೆಯ ಕಾರ್ಯಗಳೂ ಜರುಗುತ್ತವೆ. ಮದುವೆಯ ಶುಭ ಸಮಯದಲ್ಲಿ ಬರೆಯುವ 'ಹಸೆ'ಗೆ ಸಂಬಂಧಿಸಿದ 'ಹಸೆಯ ಹಾಡು'ಗಳು ಸಹ ನಮ್ಮ ಸಂಸ್ಕೃತಿಯ ಭಾಗವೇ ಆಗಿವೆ. ಇವುಗಳಲ್ಲಿಯೂ ನಮ್ಮ ಸಂಸ್ಕೃತಿಯ ದೊಡ್ಡ ಭಂಡಾರವೇ ಅಡಗಿದೆ. ಅಕ್ಕಿ ಹಿಟ್ಟು ಹಾಗೂ ಕೆಲವು ಭಾಗಗಳಲ್ಲಿ ಅಕ್ಕಿಯಿಂದ ಹಸೆಯನ್ನು ಬರೆಯುವುದು ಸಹ ಕಂಡುಬರುತ್ತದೆ.

'ಹಸೆಯ ಬರೆಯೋರು ಹಸನಾಗಿ ಬರಿರಮ್ಮ
ಹೊಸಬೆಳ್ಳಿ ಕಡಗ ನಿಮ್ಮ ಕೈಲಿ । ಐದು ಬೆರಳು
ಹಸನಾಗಿ ಬರುಲಿ ಮ್ಯಾಣೆಯ ಮ್ಯಾಲೆ.

ಹಸೆಯ ಬಾರೆಯೋರ ಕೈಲಿ ಹನ್ನೆರಡು ಕಟ್ಟು ವಿಳ್ಯಾವು
ಹಸನಾಗಿ ಹಸೆಯ ಬರಿರಮ್ಮ
ಮುತ್ತಿನ ಕೋಣೆಗೆ ಹೋದಳು ಅವರವ್ವ
ಮುತ್ತ ತುಂಬ್ಯಾಳೆ ಮರ ತುಂಬ । ಅವರವ್ವ
ತಂದು ಸುರಿದವಳೆ ನಡಮನಿಗೆ.

ಮುತ್ತ ಸುರಿದಾಳೆ ಅವ ತಿರುಗಿ ನೋಡ್ಯಾಳೆ
ಚಿತ್ರ ಬಿಡಿರಮ್ಮ ಹಸಿಗೆಲ್ಲ
ಗೋಡಿಗಿದಿರಾಗಿ ಮಾಡಿರಮ್ಮ ಚೌಕವ
ಗೋಡೆ ಮೇಲೆರಡು ಅರಗಿಣಿ । ಕುತುಕೊಂಡು
ಸೋಬಾನದ ನುಡಿಯ ನುಡಿದಾವೆ.

ಆಲದ ಮಣೆಗೇಳಿ ಆರೇಳು ದಿನವಾಯ್ತು
ಆಲದ ಮಣೆ ಬರಲಿಲ್ಲ । ಬಡಗಿಯ ಮೇಲೆ
ಹಸುಕೊಟ್ಟು ಕರುವ ಹೊಡೆದೇವು.

ಹಸೆಗೆ ಬರುವಾಗ ಮನೆದೇವರ ನೆನಿಕೊಳ್ಳೆ
ಮುನಿದೇವರ ಪಾದ ಗತಿಯೆಂದು
ಅತ್ತಾಗು ಶರಣೆನ್ನೆ ಇತ್ತಾಗು ಶರಣೆನ್ನೆ
ನಿಮ್ಮಪ್ಪಾನ ಕಾಲಿಗೆ ಶರಣೆನ್ನೆ
ಸೊಬಾನೆಂಬೋದೆ ಶಿವನಿಗೆ'.

ಹಸೆಯನ್ನು ಬರೆಯುವವರು ಹಸನಾಗಿ ಬರೆಯಿರಿ ಎಂದು ಹೇಳುತ್ತ ಮರದ ತುಂಬ ಮುತ್ತುಗಳನ್ನು ತಂದು ಸುರಿಯುವ ಕ್ರಿಯೆ ಜನಪದರ ಬದುಕನ್ನು ಸಂಕೇತಿಸುತ್ತದೆ. ಮುತ್ತಿನ ಹಸೆಯನ್ನು ಬರೆಯುವ ಮೂಲಕ ಬದುಕನ್ನು ಮೌಲ್ಯಯುತಗೊಳಿಸುವ ಅವರ ಆಲೋಚನಾ ಕ್ರಮ ಅಭಿನಂದನಾರ್ಹ. ಎಂದಿಗೂ ಹಣ, ಅಧಿಕಾರ, ವಸ್ತ್ರ, ಒಡವೆಗಳ ಬಗ್ಗೆ ತಲೆಕೆಡಿಸಿಕೊಂಡವರಲ್ಲ. ಇರುವ ವಸ್ತುಗಳನ್ನೆ ಮುತ್ತು, ರತ್ನಗಳೆಂದುಕೊಂಡು ಬದುಕನ್ನು ಸಾಗಿಸಿದವರು. ಅವರ ಈ ಮನಸ್ಥಿತಿಯೆ ಜನಪದರಿಗೆ ಸ್ಥಿರವಾದ ಸ್ಥಿತಪ್ರಜ್ಞ ಮನಸ್ಸಿನ ರೂಪುಗೊಳ್ಳುವಿಕೆಗೆ ಸಹಾಯಕವಾಗಿದೆ. ಇನ್ನೊಬ್ಬರನ್ನು ನೋಡಿ ಅಸೂಯೆ ಪಟ್ಟವರಲ್ಲ. ತಮ್ಮಲ್ಲಿರುವುದರಲ್ಲೆ ನೆಮ್ಮದಿಯುತ ಬದುಕನ್ನು ಕಟ್ಟಿಕೊಂಡಿದ್ದಾರೆ.

ಸೌಲಭ್ಯ, ಸೌಕರ್ಯಗಳಿಗಿಂತ ಅರ್ಥ ಮಾಡಿಕೊಂಡು ಸಾಂಘಿಕ ಬದುಕನ್ನು ಸಾಗಿಸುವುದು ಅವರಿಗೆ ಮುಖ್ಯವಾದ ಸಂಗತಿಯಾಗಿದೆ. ಈ ವಿಶಾಲ ಮನಸ್ಥಿತಿಯೇ ಜನಪದರ ಬದುಕಿಗೆ ಅರ್ಥಪೂರ್ಣವಾದ ಮೌಲ್ಯವನ್ನು ಒದಗಿಸಿಕೊಟ್ಟಿದೆ. ಅಲ್ಲದೆ ಇಲ್ಲಿ ಬಳಸುವ ಆಲದ ಮಣೆ, ಮೊರ ಇವೆಲ್ಲವು ಜನಪದರ ಸಂಸ್ಕೃತಿಯ ಪ್ರತೀಕಗಳಾಗಿವೆ. ಆಲ, ಅತ್ತಿ, ಹಲಸು, ಅರಳಿ, ಮಾವು, ಉಂಡು ಕಳ್ಳಿ ಮೊದಲಾದ ಮರ ಗಿಡ ಬಳ್ಳಿಗಳು ಜನಪದರ ಬದುಕಿನ ಸಂದರ್ಭದಲ್ಲಿ ಒಂದಲ್ಲಾ ಒಂದು ಹಂತದಲ್ಲಿ ಬಳಕೆಯಾಗುವಂತಹವಾಗಿವೆ. ಇವೆಲ್ಲವು ಸಮೃದ್ಧವಾದ ಬಾಳಿನ ಸಂಕೇತಗಳಾಗಿ ನಮ್ಮ ಗಮನವನ್ನು ಸೆಳೆಯುತ್ತವೆ.

ಮತ್ತೊಂದು ಹಸೆ ಹಾಕುವ ಗೀತೆ ಹೀಗಿದೆ

"ತೆಂಕಲ ಕೇರಿಯ ಕೆಂಚೇರ ಕರಸವ್ವ
ಅಂಚು ಗುಪ್ಪಟ್ಟೆ ಸೆರಗಿನ । ಸೀರೇನುಟ್ಟ
ಕೆಂಚೇರ ಸೋಬನಕೆ ಕರಸವ್ವ

ಬಡಗಲ ಕೇರಿಯ ಬೆಡಗೀರ ಕರಸವ್ವ
ಅಂಚು ಗುಪ್ಪಟ್ಟೆ ಸೆರಗಿನ । ಸೀರೇನುಟ್ಟ
ಚೆಲುವೇರ ಸೋಬನಕೆ ಕರಸವ್ವ

ಮ್ಯಾಗಳ ಕೇರಿಯ ನಾರೇರ ಕರಸವ್ವ
ಅರುಗು ಗುಪ್ಪಟ್ಟೆ ಸೆರಗಿನ । ಸೀರೇನುಟ್ಟ
ಹರದೇರ ಸೋಬನಕೆ ಕರಸವ್ವ

ಹಸೆ ಹಾಕೋ ಮಲ್ಲೀ ಕಸವಿಲ್ಲ ಮುಸುರಿಲ್ಲ
ಹಸಿಯಡಕೆ ಸಿಪ್ಪೆ ಮೊದಲಿಲ್ಲ । ಈ ಮನೇ
ಸೊಸೆಯರಿನ್ನೆಷ್ಟು ಚೆಲುವೇರೊ

ಮಣೆ ಹಾಕೋ ಮಲ್ಲೀ ಕಸವಿಲ್ಲ ಮುಸುರಿಲ್ಲ
ಹಣ್ಣಡಕೆ ಸಿಪ್ಪೆ ಮೊದಲಿಲ್ಲ । ಈ ಮನೇ
ಹೆಣ್ಮಕ್ಕಳೆಷ್ಟು ಚೆಲುವೇರೊ

ಕರುವಿನ ಸಗಣಿಯ ಕಿರುದಂಗೇರು ತಕ್ಕೊಂಡು
ಅರಮನೆಯೊಳಗೆ ನೆಲಾ ಬಳಿದು । ಅದರಂದಕೆ
ಅರುವತ್ತು ಗೀರ ಬರದರೆ

ಹಸುವಿನ ಸಗಣಿಯ ಅವರಕ್ಕಯ್ಯ ತಕ್ಕೊಂಡು
ಉಪ್ಪರಿಗೊಳಗೆ ನೆಲ ಬಳಿದು । ಅದರಂದಕೆ
ಎಪ್ಪತ್ತು ಗೀರ ಬರದರೆ

ಎತ್ತಿನ ಸಗಣಿಯ (ಅವರ್) ಹಡದವ್ವ ತಕ್ಕೊಂಡು
ಚೆಮ್ಮಾಳಿಗೊಳಗೆ ನೆಲ ಬಳಿದು । ಅದರಂದಕೆ
ಎಪ್ಪತ್ತು ಗೀರ ಬರದರೆ

ಬಾಗಿಲೆದುರಿಗೆ ಬರೆಯವ್ವ ಚೌಕವ
ಬಾಗಿಲಾಗೆರಡು ಅರಗಿಳಿ । ಸುರಗಿಳಿ
ಸುವ್ವರದ ನಗೆಯ ನಗುತಾವೆ

ಹಟ್ಟೀಯೆದುರಿಗೆ ಬರೆಯವ್ವ ಪಟ್ಟೆವ
ಹಟ್ಟೀರಲೆರಡು ಅರಗಿಳಿ । ಸುರಗಿಳಿ
ಸುವ್ವರದ ನಗೆಯ ನಗುತಾವೆ

ಅತ್ತ ಬರೆಯೆಂದರೆ ಇತ್ಯಾಕೆ ಬರೆದವ್ವ
ಹಿತ್ತಲ ಬಾಳೆ ಬಲಕಾದೊ । ಸೂಲಿಗರಾಯ
ಎತ್ತ ಮೂಡಿದರೂ ಜಗಕೆಲ್ಲ

ಹಾಗೆ ಬರೆಯೆಂದರೆ ಹೇಗ್ಯಾಕೆ ಬರೆದವ್ವ
ಬಾಗಿಲ ಬಾಳೆ ಬಲಕಾದೊ । ಸೂಲಿಗರಾಯ
ಹ್ಯಾಗೆ ಮೂಡಿದರು ಜಗಕೆಲ್ಲ

ಹಂಡಕ್ಕಿ ದುಂಡಕ್ಕಿ ದುಂಡು ರಾಜಣದಕ್ಕಿ
ಬಂದೂರ ಗದ್ದೆ ಗೊನೆ ಬತ್ತ । ದ ನೆಲ್ಲಕ್ಕಿ
ಬಂದವೆ ನಮ್ಮ ಅರಮನೆಗೆ

ಹಾಲಕ್ಕಿ ನೀಲಕ್ಕಿ ನೀಲವರ್ಣದಕ್ಕಿ
ಬೇಲೂರ ಗದ್ದೆ ಗೊನೆ ಬತ್ತ । ದ ನೆಲ್ಲಕ್ಕಿ
ಸೇರಾವೆ ನಮ್ಮ ಅರಮನೆಗೆ

ಅಕ್ಕಿಯ(ನೇ) ಗಣಿಗೆ ಒತ್ತಿ ನಿಂದಿರುವೋಳೆ
ಸಟ್ಟಿ ಮದುವಣನ ಹಿರಿಯಕ್ಕ । ಕಿರುದಂಗಿ
ಅಕ್ಕೀ ತತ್ತಾರೆ ಹಸೆ ಹುಯ್ಯೆ

ಗೋದುವೆ(ನೇ) ಗಣಿಗೆ ಒರಗಿ ನಿಂದಿರುವೋಳೆ
ರಾಯ ಮದುವಣನ ಹಿರಿಯಕ್ಕ । ಕಡು ಚೆಲುವೆ
ಗೋದ್ವೆ ತತ್ತಾರೆ ಹಸೆ ಹುಯ್ಯೆ

ರಾಜಣದ(ನೇ) ಗಣಿಗೆ ಒರಗಿ ನಿಂದಿರುವೋಳೆ
ರಾಜ ಮದುಣನ ಕಿರುದಂಗಿ । ಕಡು ಚೆಲುವೆ
ರಾಜಣ ತತ್ತಾರೆ ಹಸೆ ಹುಯ್ಯೆ

ಒಂದ ಬರೆಯೆಂದರೆ ಒಂಬತ್ತ ಬರೆದಳೆ
ಒಂಬತ್ತರ ನಡುವೆ ಕೊಳನ್ ಹೂಡಿ । ಪಾಂಡವರ
ಅಂಗಿಯ ಸೆರಗ ಬರೆದರೆ

ಎರಡ ಬರೆಯೆಂದರೆ ಇಪ್ಪತ್ತ ಬರೆದರೆ
ಇಪ್ಪತ್ತರ ನಡುವೆ ಕೊಳನ್ ಹೂಡಿ । ಪಾಂಡವರ
ವಸ್ತರದ ಸೆರಗ ಬರೆದರೆ

ಅಕ್ಕಿಯ ಹಸೆಯ ಯಾರವ್ವ ಬರೆದೋರು
ಅಕ್ಕ ಲಕ್ಕವ್ವ ತುಳಸವ್ವ । ತಿಮ್ಮಪ್ಪನ
ಪಟ್ಟದ ರಾಣ್ಯಸೆಯ ಬರೆದರೆ

ಗೋದಿಯ ಹಸೆಯ ಯಾರವ್ವ ಬರೆದೋರು
ಅಮ್ಮ ಲಕ್ಕಮ್ಮ ತುಳಸಮ್ಮ । ತಿಮ್ಮಪ್ಪನ
ಪಟ್ಟದ ರಾಣ್ಯಸೆಯ ಬರೆದರೆ

ಹಸೆ ಹಾಕ್ ಪಾರ್ವತದೇವಿ ಋಷಿಗಳು ಬಂದವ್ರೆ
ಹಸನಾಗಿ ತುಂಬೆ ಗಿಡ ಬರೆದು । ನಾಲಕು ಮೂಲೆ
ಋಷಿಗಳು ಬೀಸ್ಯಾರೆ ಚವುಲವ

ಮಣೆ ಹಾಕ್ ಪಾರ್ವತದೇವಿ ಮುನಿಗಳು ಬಂದವ್ರೆ
ಅನುವಾಗಿ ತುಂಬೆ ಗಿಡ ಬರೆದು । ನಾಲಕು ಮೂಲೆ
ಮುನಿಗಳು ಬೀಸ್ಯಾರೆ ಚವುಲವ

ಹಸೆಯ ಬರೆದಮ್ಮಗೆ ಮತ್ತೇನ ಕೊಡಬ್ಯೆದು
ಮತ್ತೆ ನಾನೂರು ಗಿಣಿ ಹಿಂಡ । ಬರೆದಮ್ಮಗೆ
ಬಾಳೆಯ ಹಣ್ಣ ಕೊಡಬ್ಯೆದು

ಮಣೆ ಹಾಕಿದಮ್ಮನಿಗೆ ಮತ್ತೇನ ಕೊಡಬ್ಯೆದು
ಮತ್ತೆ ಐನೂರು ಗಿಣಿ ಹಿಂಡ । ಬರೆದಮ್ಮಗೆ
ಕಿತ್ತಲೆ ಹಣ್ಣ ಕೊಡಬ್ಯೆದು"[೧೮]

ಮದುವೆಯ ಸಮಯದಲ್ಲಿ ಹಾಡಲ್ಪಡುವ ಸೋಬಾನೆ ಹಾಡುಗಳಲ್ಲಿ ಹಸೆ ಹಾಕುವ ಪದಗಳು ಹೆಚ್ಚು ಪ್ರಸಿದ್ಧ ಹಾಗು ದೀರ್ಘವಾದವು. ಹೆಂಗಸರೆಲ್ಲ ಗುಂಪಾಗಿ ಸೇರಿ ಹಸೆಯನ್ನು ಬರೆಯುತ್ತ ಹಾಡಿ ನಲಿಯುತ್ತಾರೆ. ಈ ಹಸೆಯ ಹಾಡಿನಲ್ಲಿ ಸೋಬನಕ್ಕೆ ಹಾಗೂ ಹಸೆಯನ್ನು ಬರೆಯಲು ತೆಂಕಲಕೇರಿಯ ಕೆಂಚೇರನ್ನು, ಬಡಗಲ ಕೇರಿಯ ಬೆಡಗಿಯರನ್ನು, ಮ್ಯಾಗಳ ಕೇರಿಯ ನಾರಿಯರನ್ನು ಕರೆಯಲಾಗಿದೆ. ಈ ರೀತಿ ಹಸೆಯನ್ನು ಬರೆಯಲು ಬಂದ ಮಲ್ಲಿಯು ಆ ಮನೆಯ ಸುಖ, ಸಂತೋಷಗಳನ್ನು ವರ್ಣಿಸುತ್ತಾಳೆ. ಆ ಮನೆಯಲ್ಲಿ ಕಸವಿಲ್ಲ, ಮುಸುರಿಲ್ಲ, ಹಸಿಯಡಕೆ, ಹಣ್ಣಡಕೆ ಸಿಪ್ಪೆ ಇಲ್ಲ. ಇಂತಹ ಮನೆಗೆ ಸೊಸೆಯಾಗಿ ಬರುವ ಹೆಣ್ಣಿನ ಅದೃಷ್ಟವನ್ನು ಹೊಗಳುತ್ತ ಹೆಂಗಸರೆಲ್ಲರು ಹಸುವಿನ ಸಗಣಿಯ ತಂದು ಚೆಮ್ಮಾಳಿಗೆ ಒಳಗೆ ನೆಲವನ್ನು ಸಾರಿಸಿ ಎಂಬತ್ತು ಗೆರೆಯ ಹಸೆಯನ್ನು ಬರೆಯಲು ಪ್ರಾರಂಭಿಸಿದ್ದಾರೆ.

ಹಸೆಯನ್ನು ಬರೆಯಲು ಹಂಡಕ್ಕಿ ದುಂಡಕ್ಕಿ ದುಂಡು ರಾಜಣದಕ್ಕಿ, ಬಂದೂರ ಗದ್ದೆ ಗೊನೆ ಬತ್ತದ ನೆಲ್ಲಕ್ಕಿ ಬಂದಿವೆ. ಬೇಲೂರ ಗದ್ದೆ ಗೊನೆ ಬತ್ತದ ನೆಲ್ಲಕ್ಕಿ ಬಂದಿವೆ. ಇವುಗಳ ಜೊತೆಗೆ ಗೋದುವೆಯ ಹಸೆಯನ್ನು ಸಹ ಬರೆದಿದ್ದಾರೆ. ಈ ರೀತಿ ಹಸೆಯನ್ನು ಬರೆದವರನ್ನು ಹಾಗೆಯೆ ಕಳುಹಿಸಲಾರರು ನಮ್ಮ ಜನಪದರು. ಅದಕ್ಕೆ ಅವರಿಗೆ ನಾನೂರು ಗಿಣಿ ಹಿಂಡ ಬರೆದಮ್ಮಗೆ ಬಾಳೆಯ ಹಣ್ಣನ್ನು, ಕಿತ್ತಲೆ ಹಣ್ಣನ್ನು ಕೊಟ್ಟು ಕಳುಹಿಸುತ್ತಾರೆ. ಜನಪದರ ಈ ಕಲ್ಪನೆ ಅದ್ಭುತವಾದುದು. ತಾವೆಷ್ಟೇ ಬಡವರಾದರೂ ಸಹ ತಮ್ಮ ಮನೆಯ ಶುಭ ಕಾರ್ಯಗಳಲ್ಲಿ ಪಾಲ್ಗೊಂಡವರಿಗೆ ತಮ್ಮ ಕೈಲಾದ ಉಡುಗೊರೆಗಳನ್ನು ನೀಡಿ ಕಳುಹಿಸುವುದು ವಾಡಿಕೆ. ಇಂತಹ ಗುಣಗಳೇ ಜನಪದರನ್ನು ಅನುಭವಜನ್ಯವಾದ ವಿವೇಕದ ಬಹು ಎತ್ತರದ ಸ್ಥಾನಕ್ಕೆ ಕೂರಿಸಿವೆ. ಹಾಗಾಗಿ ಇಲ್ಲಿ ಬಳಕೆಯಾಗಿರುವ ಅಕ್ಕಿ, ಗೋಧಿ, ಬಾಳೆ ಮೊದಲಾದವು ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ಮಹತ್ವದ ಸ್ಥಾನವನ್ನು ಹೊಂದಿರುವ ಮಂಗಳಕರವಾದ ದ್ರವ್ಯಗಳಾಗಿವೆ.

ಧಾರೆಯೆರೆಯುವಾಗಿನ ಸೋಬಾನೆಯ ಪದವು ಈ ರೀತಿಯಾಗಿದೆ.

"ಅಂದರ ಗಿರಿಯಿಂದ ಚಂದಿರನ ಗಿರಿಯಿಂದ
ಸೋಬಾನ ಸೋಬಾನವೇ
ಗಂಧ ಮಾರೋರ ಮಳಿಗಿಂದ ಸೋಬಾನ ಸೋಬಾನವೇ
ಗಂಧ ಮಾರೋರ ಮಳಿಗಿಂದ ಬಂದಿರುವೊ ಸೋಬಾನ ಸೋಬಾನವೇ
ಗಿಂಡೀ ತಂದಿಡಿರಿ ಕಳಸಾಕೆ ಸೋಬಾನ ಸೋಬಾನವೇ

ಆಲಕ್ಕಿ ನೀಲಕ್ಕಿ ನೀಲವರ್ಣದಕ್ಕಿ
ಬೇಲೂರು ಗದ್ದೇ ಗೊನೆಬತ್ತ । ದ ನೆಲ್ಲಕ್ಕಿ
ಸೇರ್‍ಯಾವೆ ನಮ್ಮ ಕಳಸಕೆ – ಸೋಬಾನ

ಹಂಡಕ್ಕಿ ದುಂಡಕ್ಕಿ ದುಂಡುರಾಜಣದಕ್ಕಿ
ಬಂದೂರ ಗದ್ದೇ ಗೊನೆಬತ್ತ । ದ ನೆಲ್ಲಕ್ಕಿ
ಹೊಂದ್ಯಾವೆ ನಮ್ಮ ಕಳಸಕೆ – ಸೋಬಾನ

ಈಚೇಲಿ ಗೊಬ್ಬರ ಹಾಕಿ ಕೊಳದಿಂದ ನೀರ್‌ಹುಯ್ದು
ಗಿಡದಿಂದ ಗಿಡಕೆ ತೊಡರುವ । (ತೊಡರೊ) ನಾಗವಳ್ಳಿಯ
ಮಿತ್ರೇರು ತಂದಿಡಿರಿ ಕಳಸಕೆ – ಸೋಬಾನ

ಹೊಡೆಕಲ್ಲ ಮೇದು ಮಡುವಿನ ನೀರ ಕುಡಿದು
ಮರದ ಬುಡದಲ್ಲಿ ಮಲಗುವ । (ಗೊ) ಬಸವೇಶ್ವರನ
ಬಸುಮಂಗ ತಂದಿಡಿರಿ ಕಳಸಕೆ – ಸೋಬಾನ

ಆಚೇಲ್ಹಾಕಿದರೆ ಈಚೇಲಿ ಗಮ್ಮನ್ನೋದೆ
ಕಾತರಂಗಡಿಲಿರುವೋ (ದೆ) । ಸಾಂಬ್ರಾಣಿಯ
ಬೇಗ ಕಂಕಣಕೆ ಅಣಿ ಮಾಡಿ – ಸೋಬಾನ

ಅಲ್ಲಿ ಹಾಕಿದರೆ ಇಲ್ಲಿ ಗಮ್ಮನ್ನೋದೆ
ವಲ್ಲಪುರಂಗಡಿಲಿರುವೋ (ದೆ) । ಸಾಂಬ್ರಾಣಿಯ
ವಲ್ಲಕೆ ಕಂಕಣಕೆ ಅಣಿಮಾಡಿ – ಸೋಬಾನ

ಅಪ್ಪ ಗುರುಸ್ವಾಮಿ ತಪ್ಪನೆ ಬರೋರಲ್ಲ
ಉತ್ತು ಸದರ್ಹೋಗಿ ಕರತನ್ನಿ । ಈ ಮನೆ
ಇಪ್ಪತ್ತು ಗದಿಗೆ ನಡುವಿಗೆ – ಸೋಬಾನ

ಮಠವೇ ಮಠವೆಲ್ಲಿ ಮಠದ ಬಾಗಿಲೆಲ್ಲಿ
ಮಠದಾಗಿರುವಂಥ ಗುರುವೆಲ್ಲಿ । ಮತಿಗಟ್ಟದ
ಮಠವಯ್ತೆ ಮಾವಿನ ವನದಾಗೆ – ಸೋಬಾನೆ

ಹತ್ತು ಬೆರಳಿಗೆ ಹತ್ತು ಕೆತ್ತಿಸಿದ್ ಹೊನ್ನುಂಗುರ
ಒಪ್ಪಕೆ ಬಿಳಿ ಎಲೆ ಮಡಿಸುತ । ಗುರುಸ್ವಾಮಿ
ಪುತ್ರಯ್ಗೆಳೆ ಕಂಕ್ಣ ಧರಿಸ್ಯಾರೆ – ಸೋಬಾನ

ಆರು ಬೆರಳಿಗೆ ಆರು ಕೆತ್ತಿಸಿದ್ಹೊನ್ನುಂಗುರ
ಒಪ್ಪಕೆ ಬಿಳಿಯೆಲೆ ಮಡಿಸುತ । ಗುರುಸ್ವಾಮಿ
ಬಾಲವ್ಗೆಳೆ ಕಂಕ್ಣ ಧರಿಸ್ಯಾರೆ – ಸೋಬಾನ”[೧೯]

ಪ್ರಸ್ತುತ ಸೋಬಾನೆ ಪದವು ಮದುವೆಯ ಸಮಯದಲ್ಲಿ ಧಾರೆಯೆರೆಯುವಾಗ ಹಾಡಲಾಗುತ್ತದೆ. ಇಲ್ಲಿಯೂ ಕಳಸಕ್ಕೆ ವಿಶೇಷವಾದ ಪ್ರಾಮುಖ್ಯತೆ ಇದೆ. ಶುಭ ಸಮಾರಂಭಗಳಲ್ಲಿ ಬಳಸುವ ಎಲ್ಲ ವಸ್ತುಗಳಿಗಿಂತಲೂ ಇದಕ್ಕೆ ಮಹತ್ವದ ಸ್ಥಾನವಿದೆ. ಪ್ರತಿಯೊಂದು ಕೆಲಸ ಕಾರ್ಯಗಳೂ, ವಿಧಿ ವಿಧಾನಗಳೂ 'ಕಳಸ'ದ ಮೇಲ್ವಿಚಾರಣೆಯ ಪಾಲ್ಗೊಳ್ಳುವಿಕೆಯ ಮೂಲಕ ನಡೆಯುತ್ತವೆ. ಅಂದರ ಗಿರಿಯಿಂದ ಚಂದಿರನ ಗಿರಿಯಿಂದ, ಗಂಧ ಮಾರುವವರ ಮಳಿಗಿಂದ ಬಂದಿರುವಂತಹ ಗಿಂಡಿಯನ್ನು ಕಳಸಕ್ಕೆ ತಂದಿಡುವಂತೆ ಹಾಡುತ್ತಾರೆ. ಈ ಕಳಸಕ್ಕೆ ಬಂದು ಸೇರಿರುವ ಅಕ್ಕಿಯು ಬೇಲೂರು ಹಾಗೂ ಬಂದೂರಿನ ಗದ್ದೇ ಗೊನೆ ಬತ್ತದವಾಗಿವೆ. ಮೇಲ್ಗೊಬ್ಬರ ಹಾಕಿ ಬೆಳೆದ ನಾಗವಳ್ಳಿ, ಬಸವೇಶ್ವರನ ಬಸುಮಂಗ, ಸಾಂಬ್ರಾಣಿ, ಕಂಕಣ ಮೊದಲಾದ ಮಂಗಳಕರ ದ್ರವ್ಯಗಳನ್ನು ಆ ಕಳಸಕ್ಕೆ ತಂದಿಡುವಂತೆ ಹೇಳುತ್ತಾರೆ. ಇವೆಲ್ಲವು ಹಾಡಿನ ರೂಪದಲ್ಲಿ ಸಾಗುವುದು ವಿಶೇಷವಾಗಿದ್ದು, ಜನಪದರ ರಸಿಕತೆ ಹಾಗೂ ಕಲಾ ನಿಪುಣತೆಗೆ ಹಿಡಿದ ಸಾಕ್ಷಿಯಾಗಿದೆ. ಇವೆಲ್ಲವೂ ಸಾಂಸ್ಕೃತಿಕವಾಗಿ ಮೌಲ್ಯವನ್ನು ಹೊಂದಿರುವಂತಹವು.

ಈ ಸೋಬಾನದ ಪದದಲ್ಲಿ ಒಂದು ಕಳಸವನ್ನು ನಿರ್ಮಿಸಲು ಬೇಕಾಗುವ ಮುಖ್ಯ ವಸ್ತುಗಳಾವುವು ಮತ್ತು ಅವುಗಳನ್ನು ಎಲ್ಲಿಂದ ತರಲಾಗಿದೆ ಎಂಬ ಸಂಪೂರ್ಣ ಮಾಹಿತಿಯನ್ನು ನೀಡಿದ್ದಾರೆ. ಇಲ್ಲಿ ಬಳಕೆಗೊಂಡಿರುವ ಗಿಂಡಿ, ನೆಲ್ಲಕ್ಕಿ, ನಾಗವಳ್ಳಿ, ಬಸವೇಶ್ವರ ಬಸುಮಂಗ, ಸಾಂಬ್ರಾಣಿ, ಕಂಕಣ ಇವೆಲ್ಲವು ನಮ್ಮ ಸಾಂಸ್ಕೃತಿಕ ಬದುಕಿನ ಜೀವನಾಡಿಗಳಾಗಿವೆ. ಅಲ್ಲದೆ ನಮ್ಮ ಜನಪದರ ಪ್ರತಿಯೊಂದು ಶುಭ ಸಮಾರಂಭಗಳಲ್ಲಿ ಇವು ಇರಲೇಬೇಕು. ಇವುಗಳನ್ನು ಬಿಟ್ಟು ಜನಪದರ ಯಾವ ಕೆಲಸ ಕಾರ್ಯಗಳು, ಆಚರಣೆಗಳು, ಪೂಜಾ ಕಾರ್ಯಗಳಾಗಲಿ ನಡೆಯುವುದಿಲ್ಲ. ಹೀಗಾಗಿ ಕಳಸ ಹಾಗೂ ಅದರಲ್ಲಿ ಉಪಯೋಗಿಸಲ್ಪಡುವ ವಸ್ತುಗಳಿಗೆ ಮಹತ್ವದ ಸ್ಥಾನವಿದೆ.

೪.೫. ಶಿಶು ಗೀತೆಗಳು

'ಶಿಶು ಗೀತೆಗಳು' ಮಕ್ಕಳಿಗಾಗಿಯೇ ರಚಿತವಾದವು. ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಲವು ಮಕ್ಕಳಿಂದ, ಕೆಲವೊಮ್ಮೆ ದೊಡ್ಡವರಿಂದಲೂ ರಚಿತವಾಗಿದ್ದು, ಬಳಕೆಯಲ್ಲಿವೆ. ಹಾಸ್ಯ, ಮನರಂಜನೆಯಂತೆಯೇ ಪ್ರಾಸಪ್ರಿಯತೆಯೂ ಹೆಚ್ಚಾಗಿದ್ದು, ಅರ್ಥ ಸಾಧ್ಯತೆಗಳು ಕಡಿಮೆಯಾಗಿರುತ್ತವೆ. ಯಾವುದೇ ಕಟ್ಟುಪಾಡು, ಅನ್ಯಾಸಕ್ತಿಗಳು, ಹೊರಗಿನ ಪ್ರಭಾವಗಳು ಮೊದಲಾದ ಸಮಾಜ ಪ್ರೇರಿತ ಅಂಶಗಳಿಂದ ದೂರವಿರುವ ಮಕ್ಕಳು ಮುಗ್ಧತೆಯ ಮನಸ್ಸನ್ನು ಹೊಂದಿದವರು. ಎಂತಹುದೇ ಸಮಯವಾದರೂ ಸಮಾಜ ಅಥವಾ ಲೋಕದೊಂದಿಗೆ ತನ್ನ ಪ್ರತಿಕ್ರಿಯೆಗಳನ್ನು ನೀಡದೆ ತನ್ನದೇ ಆದ ಭಾವ ಪ್ರಪಂಚದಲ್ಲಿ ವಿಹರಿಸುವ ಚೇತನಾಮಯಿ ಜೀವಿ. ಎಲ್ಲ ವಸ್ತು, ವಿಷಯಗಳಲ್ಲಿ ಆಸಕ್ತಿಯನ್ನು ಮೂಡಿಸಿಕೊಂಡಿರುವ ಮಗು ತಾನು ಕಂಡು ಕೇಳಿದ ವಸ್ತು ವಿಷಯಗಳನ್ನು ತನ್ನ ಆಸಕ್ತಿಯ ಮೂಲಕ ಅದಕ್ಕೊಂದು ರಚನಾ ಸೃಷ್ಟಿಯನ್ನು ನೀಡುತ್ತದೆ. ಹಿರಿಯರು ಕಿರಿಯರು ಎನ್ನದೆ ಎಲ್ಲರನ್ನೂ ಆಕರ್ಷಿಸುವ ಈ ಹಾಡುಗಳು ಮಕ್ಕಳಿಗಾಗಿಯೆ ರಚಿಸಲ್ಪಟ್ಟಂತಹವು.

ಮಕ್ಕಳನ್ನೇ ಪ್ರಧಾನ ದೃಷ್ಟಿಯಲ್ಲಿಟ್ಟುಕೊಂಡು ರಚಿತವಾಗಿರುವ ಹಾಡುಗಳೆ ಶಿಶು ಗೀತೆಗಳು. ಈ ಶಿಶುಗೀತೆಗಳು ಮಕ್ಕಳಿಗಾಗಿಯೇ ರಚಿತವಾದ ವೈವಿಧ್ಯಮಯವಾದ ಹಾಗೂ ಸಮೃದ್ಧಿಯಾದ ಸಾಹಿತ್ಯ ಭಂಡಾರವಾಗಿವೆ. ಇಲ್ಲಿ ವಿವಿಧ ವಯೋಮಾನದ ಮಕ್ಕಳ ಮನಸ್ಸಿಗೆ ಸಂಬಂಧಿಸಿದ ಗೀತೆಗಳು ರಚಿತವಾಗಿದ್ದು, ದೊಡ್ಡವರಿಂದ ಮಕ್ಕಳಿಗಾಗಿ ಹಾಗೂ ಮಕ್ಕಳಿಂದಲೇ ರಚಿತವಾದ ಅಸಂಖ್ಯಾತ ಶಿಶು ಗೀತೆಗಳಿವೆ. ಇಂದಿನ ಆಧುನಿಕ ಶಿಕ್ಷಣ ಪದ್ಧತಿ ಹಾಗೂ ಜಾಗತೀಕರಣದಂತಹ ಸಂದರ್ಭಗಳಲ್ಲಿ ಶಿಶು ಗೀತೆಗಳು ಕಣ್ಮರೆಯಾಗುತ್ತಿವೆ ಎನಿಸಿದರೂ ಸಹ ಈ ಮಾತನ್ನು ಸಂಪೂರ್ಣವಾಗಿ ಒಪ್ಪಲು ಸಾಧ್ಯವಿಲ್ಲ. ಮನರಂಜನೆಯೇ ಪ್ರಧಾನವಾಗಿರುವ ಶಿಶು ಗೀತೆಗಳು ವಸ್ತು, ಭಾಷೆ, ಪ್ರಾಸ, ಶೈಲಿ ಮೊದಲಾದ ರೀತಿಯ ಹಲವು ಬದಲಾವಣೆಗಳೊಂದಿಗೆ ಇಂದಿಗೂ ಚಾಲ್ತಿಯಲ್ಲಿವೆ.

ಮನರಂಜನೆ, ಹಾಸ್ಯ ಮೊದಲಾದ ಗುಣಗಳೇ ಮುಖ್ಯವಾಗಿದ್ದರೂ ಸಹ ಶಿಶು ಗೀತೆಗಳು ಶಿಕ್ಷಣದ ಭಾಗವಾಗಿಯೂ ಕೆಲಸ ಮಾಡುತ್ತವೆ. ಹದಿ ಹರೆಯದ ಸಂದರ್ಭದಲ್ಲಿನ ದೈಹಿಕ ಹಾಗೂ ಮಾನಸಿಕ ತುಡಿತಗಳ ಕಾರಣವಾಗಿ ಉಂಟಾಗುವ ಕೆಟ್ಟ ಕುತೂಹಲ ಹಾಗೂ ಒತ್ತಡದ ನಿವಾರಣೆಯನ್ನು ಮಾಡುವ ಮೂಲಕ ಶಿಶು ಗೀತೆಗಳು ಲೈಂಗಿಕ ಶಿಕ್ಷಣವನ್ನೂ ನೀಡುತ್ತವೆ. ಲೈಂಗಿಕತೆಗೆ ಸಂಬಂಧಿಸಿದ ಬಹಳಷ್ಟು ವಿಚಾರಗಳು ಶಿಶು ಗೀತೆಗಳಾಗಿ ಹೊರಬರುವ ಮೂಲಕ ಹದಿ ಹರೆಯದ ವಯಸ್ಸಿನ ಮಕ್ಕಳ ಮಾನಸಿಕ ಸ್ಥಿಮಿತತೆಗೆ ಸಹಾಯಕವೂ ಆಗಿವೆ ಎಂದರೆ ತಪ್ಪಾಗದು. ಶಿಶುಗೀತೆಗಳು ಮಕ್ಕಳ ಜನಪದ ಆಟದ ಒಂದು ಭಾಗವೂ ಆಗಿವೆ. ಇವು ಆದಿ ಇಲ್ಲವೆ ಅಂತ್ಯ ಪ್ರಾಸಗಳಿಂದ ಕೂಡಿರುತ್ತವೆ. ಆಕರ್ಷಕವಾದ ಪದ ಪುಂಜಗಳನ್ನು ಹೊಂದಿರುವ ಶಿಶುಗೀತೆಗಳು ಕೆಲವೊಮ್ಮೆ ಯಾವುದೇ ರೀತಿಯ ಅರ್ಥವಂತಿಕೆಯನ್ನು ಹೊಂದಿಲ್ಲದೆಯೂ ಇರುತ್ತವೆ. ಪ್ರಾಸದ ರೀತಿ ಇರುವ ಕಾರಣವಾಗಿ ಮಕ್ಕಳು ಇವುಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಂಡು ಬಳಸುತ್ತವೆ.

ಶಿಶುಗೀತೆಗಳನ್ನು ಹೇಳುವಲ್ಲಿನ ವೇಗ, ಪದ ಪುಂಜಗಳ ಉಚ್ಚಾರ ಮೊದಲಾದವು ಮಕ್ಕಳು ಭಾಷೆಯನ್ನು ಕಲಿಯಲು ಸಹಾಯ ಮಾಡುತ್ತವೆ. ನಗು ತರುವ, ವಿನೋದ ಹುಟ್ಟಿಸುವುದಷ್ಟೇ ಶಿಶುಗೀತೆಗಳ ಕಾರ್ಯವಾಗಿಲ್ಲ. ಅವುಗಳೊಂದಿಗೆ ಹಲವು ಆಚರಣೆ, ನಂಬಿಕೆ, ರೂಢಿ, ಸಂಪ್ರದಾಯಗಳನ್ನು ಸಹ ಹೊತ್ತು ತರುತ್ತವೆ. ಆ ಮೂಲಕ ನಮ್ಮ ಪರಂಪರೆಯ ಅತ್ಯುತ್ತಮ ಅಂಶಗಳನ್ನು ಮುಂದಿನ ಪೀಳಿಗೆಗೆ ಕಾಪಿಡುವ ಹಾಗೂ ಬಳುವಳಿಯಾಗಿ ನೀಡುವ ಮುಖ್ಯ ಅಂಶವು ಕೂಡ ಇಲ್ಲಿ ಕಂಡುಬರುತ್ತದೆ.

ಶಿಶುಗೀತೆಗಳನ್ನು ಅವುಗಳು ಬಳಕೆಯಾಗುವ ರೀತಿ ಹಾಗೂ ಅವುಗಳಲ್ಲಿನ ವಸ್ತು, ವಿಷಯದ ಹಿನ್ನೆಲೆಯಲ್ಲಿ ಅನೇಕ ವಿಧಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

೧. ಸವಾಲು – ಜವಾಬು ರೀತಿಯ ಶಿಶುಗೀತೆಗಳು.

೨. ಕಥನದ ರೀತಿಯ ಶಿಶುಗೀತೆಗಳು.

೩. ಒಗಟು ರೀತಿಯ ಶಿಶುಗೀತೆಗಳು.

೪. ಅಶ್ಲೀಲ ರೀತಿಯ ಶಿಶುಗೀತೆಗಳು.

೫. ಜರಿಯುವ ಹಾಗೂ ಹಾಸ್ಯ ಮಾಡುವ ರೀತಿಯ ಶಿಶುಗೀತೆಗಳು.

೬. ಆಟವನ್ನು ಆಡುವಾಗ ಹೇಳುವ ಶಿಶುಗೀತೆಗಳು.

೭. ಬಯ್ಗುಳ ರೀತಿಯ ಶಿಶುಗೀತೆಗಳು.

ಇವುಗಳನ್ನು ಕೆಳಗಿನಂತೆ ಒಂದೊಂದಾಗಿ ವಿಶ್ಲೇಷಣೆಗೆ ಒಳಪಡಿಸಬಹುದಾಗಿದೆ.

೧. ಸವಾಲು – ಜವಾಬು ರೀತಿಯ ಶಿಶುಗೀತೆಗಳು

ಸಾಮಾನ್ಯವಾಗಿ ಸವಾಲು – ಜವಾಬು ರೀತಿಯ ಶಿಶುಗೀತೆಗಳು ದೀರ್ಘವಾಗಿರುತ್ತವೆ. ಹೀಗೆ ಉದ್ದವಿದ್ದರೂ ಮೇಲಿನ ಸಾಲುಗಳೊಂದಿಗೆ ಹೊಂದಿರುವ ಸಂಬಂಧದ ಕಾರಣ ಅವುಗಳನ್ನು ನೆನಪಿನಲ್ಲಿಟ್ಟುಕೊಂಡು ಹೇಳಲು ಸಹಕಾರಿಯಾಗಿವೆ.

"ಅಚ್ಚುಚ್ಚು
ಬೆಲ್ಲದಚ್ಚು
ಅಲ್ಲಿ ನೋಡು
ಇಲ್ಲಿ ನೋಡು
ಸಂಪಿಗೆ ಮರದಲಿ ಗುಂಪು ನೋಡು
ಯಾವ ಗುಂಪು ?
ಕಾಗೆ ಗುಂಪು
ಯಾವ ಕಾಗೆ ?
ಕಪ್ಪು ಕಾಗೆ

ಯಾವ ಕಪ್ಪು ?
ಮಡಿಕೆ ಕಪ್ಪು
ಯಾವ ಮಡಿಕೆ ?
ಅನ್ನದ ಮಡಿಕೆ
ಯಾವ ಅನ್ನ ?
ತಿನ್ನೊ ಅನ್ನ
ಯಾವ ತಿನ್ನ ?
ಏಟು ತಿನ್ನ
ಯಾವ ಏಟು ?
ದೊಣ್ಣೆ ಏಟು
ಯಾವ ದೊಣ್ಣೆ ?
ದಪ್ಪ ದೊಣ್ಣೆ
ಯಾವ ದಪ್ಪ ?
ನಿನ್ನೊಟ್ಟೆ ದಪ್ಪ ।”[೨೦]

ಈ ಗೀತೆಯಲ್ಲಿ ಮಕ್ಕಳು ಸವಾಲು ಹಾಕುವ ಹಾಗೂ ಆ ಸವಾಲಿಗೆ ಜವಾಬು ನೀಡುವ ಕ್ರಿಯೆಗಳು ಸಾಗುತ್ತವೆ. ಅಲ್ಲದೆ ಇವು ಪ್ರಶ್ನೆ ಮತ್ತು ಉತ್ತರದ ರೂಪದಲ್ಲಿ ಸಾಗುತ್ತವಲ್ಲದೆ, ಮಕ್ಕಳ ಒಂದು ಗುಂಪು ಪ್ರಶ್ನೆ ಹಾಕಿದರೆ, ಮತ್ತೊಂದು ಗುಂಪು ಅದಕ್ಕೆ ಉತ್ತರವನ್ನು ನೀಡಿ ನಗುತ್ತ ದೈನಂದಿನ ಬದುಕನ್ನು ಕಳೆಯುತ್ತವೆ. ಇಲ್ಲಿಯೂ ಹಾಸ್ಯವೇ ಪ್ರಧಾನ ಅಂಶವಾಗಿದೆ. ಪ್ರಾಸಭರಿತವಾದ ರೀತಿಯಲ್ಲಿ ಈ ಶಿಶುಗೀತೆಗಳು ಮುಂದುವರೆಯುತ್ತವೆ.

“ಅಚ್ಚಚ್ಚು
ಬೆಲ್ಲದಚ್ಚು
....
....
ಯಾವ ಮಡಿಕೆ ?
ಕಪ್ಪು ಮಡಿಕೆ
ಯಾವ ಕಪ್ಪು ?
ಇದ್ಲು ಕಪ್ಪು
ಯಾವ ಇದ್ಲು ?
ಸೌದೆ ಇದ್ಲು

ಯಾವ ಸೌದೆ ?
ಕಾಡು ಸೌದೆ
ಯಾವ ಕಾಡು ?
ಸುಡುಗಾಡು ।"[೨೧]

ಈ ಗೀತೆಯು ಸಹ ಪ್ರಶ್ನೆ ಹಾಗೂ ಉತ್ತರದ ರೂಪದಲ್ಲಿಯೆ ಸಾಗುತ್ತದೆ. ಇವುಗಳಲ್ಲಿ ದಿನ ನಿತ್ಯದ ದೈನಂದಿನ ಚಟುವಟಿಕೆಗಳಲ್ಲಿ ಬಳಕೆಯಾಗುವ ಹಾಗೂ ಮಾನವನಿಗೆ ಅಗತ್ಯವಾದ ಅನ್ನ, ಹಾಲು, ಹಸು, ಮಡಕೆ, ಇದ್ಲು, ಸೌದೆ, ಕಾಡು ಮೊದಲಾದವುಗಳ ಚರ್ಚೆ ನಡೆಯುತ್ತದೆ. ಇವೆಲ್ಲವು ಜನಪದರೊಂದಿಗೆ ಹೊಂದಿರುವ ಅವಿನಾಭಾವವಾದ ಸಂಬಂಧವನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ. ಈ ವಸ್ತು ವಿಷಯಗಳನ್ನು ಬಿಟ್ಟು ಜನಪದರ ಜೀವನವಿಲ್ಲ ಎಂಬುದು ನಮಗೆ ಇವುಗಳಿಂದ ಸ್ಪಷ್ಟವಾಗುತ್ತದೆ.

"ಅಜ್ಜಿ ಅಜ್ಜಿ ಯಾವೂರು ?
ಅಪ್ಪ ತುಪ್ಪನ ಹಳ್ಳಿ
ಇಲ್ಲಿಗ್ಯಾಕೆ ಬಂದೆ ?
ದೇವುಸ್ಥಾನಕ್ಕೆ ಬಂದೆ
ಹಣ್ಣು ಕಾಯಿ ಎಲ್ಲಿ ?
ಹಿಂದುಗಡೆ ಬತ್ತಾವೆ.
ಕುಣಿ ಕುಣಿ ಅಜ್ಜಿ
ಕುಣಿಯೋಕೆ ಬರಲ್ಲ
ದೊಣ್ಣೆ ತಗಂಡ್ರಪ್ಪಯ್ಯ
ಕುಣಿತೀನಿ ದಮ್ಮಯ್ಯ ।"[೨೨]

ಇಲ್ಲಿ ಅಜ್ಜಿಯನ್ನು ಪ್ರಶ್ನಿಸುವ ಮತ್ತು ಉತ್ತರ ಪಡೆಯುವ ವಿವರಗಳು ಕಂಡುಬರುತ್ತವೆ. 'ಅಜ್ಜಿ'ಯ ಪರಿಕಲ್ಪನೆ ನಮ್ಮ ಜನಪದ ಸಾಹಿತ್ಯದ ಮೂಲ ಸೊಬಗು ಹಾಗೂ ಸತ್ವ, ಅಜ್ಜಿ ಇಲ್ಲದೆ ಯಾವುದೇ ಜನಪದ ಪ್ರಕಾರಗಳಿಲ್ಲ. ಹೀಗಾಗಿ ಅಪ್ಪ ತುಪ್ಪನ ಹಳ್ಳಿಯಿಂದ ದೇವಸ್ಥಾನಕ್ಕೆಂದು ಬರುವ ಅಜ್ಜಿಯ ಸಂಗತಿಗಳು ಇಲ್ಲಿವೆ. ಇಲ್ಲಿನ ದೇವಸ್ಥಾನ, ಹಣ್ಣುಕಾಯಿ, ಅಜ್ಜಿ, ಕುಣಿತ ಇವೆಲ್ಲವು ನಮ್ಮ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗಗಳೇ ಆಗಿವೆ.

"ಆನೆ ಬಂತೊಂದಾನೆ
ಯಾವೂರ್ ಆನೆ
ಬಿಜಾಪುರದಾನೆ
ಇಲ್ಲಿಗ್ಯಾಕೆ ಬಂತು

ದಾರಿತಪ್ಪಿ ಬಂತು
ಹಿತ್ಲ ಕಡೆಗೋಯ್ತು
ಹೀರೆಕಾಯಿ ತಿಂತು
ಬಚ್ಲ ಕಡೆ ಹೊಯ್ತು
ಬಾಳೆ ಮರ ಮುರಿತು ।"[೨೩]

ಆನೆಯನ್ನು ನೋಡಿದ ಮಕ್ಕಳ ಮನಸ್ಸಿನಲ್ಲಿ ಮೂಡಿದ ಕುತೂಹಲ, ಸಂಶಯಭರಿತ ಮನಸ್ಥಿತಿ, ಆಶ್ಚರ್ಯ ಹಾಗೂ ಪ್ರಶ್ನೆಗಳು ಇಲ್ಲಿ ನಮ್ಮ ಗಮನವನ್ನು ಸೆಳೆಯುತ್ತವೆ. ಆ ಆನೆ ಎಲ್ಲಿಂದ ಬಂತು ? ಇಲ್ಲಿಗೆ ಬರಲು ಕಾರಣವೇನು ? ಎಂದೆಲ್ಲಾ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತ ಸಾಗುವ ಗೀತೆಯು ಅದು ಬಂದ ಸ್ಥಳ ಹಾಗೂ ಕಾರಣಗಳನ್ನು ತಿಳಿಸಿಕೊಡುತ್ತದೆ.

"ಇದೆಂತ ಮೂಟೆ ?
....
ಸಕ್ರೆ ಮೂಟೆ
ತಣ್ಣೀರಲ್ ಸ್ನಾನ ಮಾಡ್ಸನೊ
ಬಿಸ್ನೀರಲ್ ಸ್ನಾನ ಮಾಡ್ಸನೊ
ಬಿಸ್ನೀರಲ್ಲಿ
ಹೊಸ ಸೀರೆ ಉಡ್ಸನೊ
ಹಳೆ ಸೀರೆ ಉಡ್ಸನೊ
ಹೊಸ ಸೀರೆ
ಕರೆ ಕಂಬಳಿ ವಚ್ಚನೊ
ಬಿಳೇ ಕಂಬಳಿ ವಚ್ಚನೊ
ಬಿಳೆ ಕಂಬಳಿ
ಹಳೆ ಕತ್ತಿಲಿ ಕಡ್ಯನೊ
ಹೊಸ ಕತ್ತಲಿ ಕಡ್ಯನೊ
ಹೊಸ ಕತ್ತಿಲಿ
ಅಂಬಾರ ಅಂಬಾರ ಕತ್ತಿಕೊಡು ।"[೨೪]

ಮಕ್ಕಳು ಒಟ್ಟಿಗೆ ಸೇರಿ ಆಡುವಾಗಿನ ಸಮಯದಲ್ಲಿ ಈ ಗೀತೆಯು ಹೇಳಲ್ಪಡುತ್ತದೆ. ಕೈಗಳನ್ನು ಒಟ್ಟಿಗೆ ಮುಷ್ಟಿ ಮಾಡಿ ಒಂದರ ಮೇಲೊಂದು ಇಟ್ಟು ಕೈಯನ್ನೆ ಕತ್ತಿಯಂತೆ ಬಳಸಿ ಕತ್ತರಿಸುವ ಆಟವಿದು. ಆ ರೀತಿ ಕತ್ತರಿಸುವ ಮುನ್ನ ಯಾವ ಕತ್ತಿಯಿಂದ ಕತ್ತರಿಸಬೇಕು ಎಂಬಂತಹ ವಿಷಯಗಳನ್ನು ಪ್ರಶ್ನಿಸುತ್ತ ಉತ್ತರ ಪಡೆಯುತ್ತ ಆಟ ಸಾಗುವ ಕ್ರಿಯೆಯನ್ನು ಇದು ಸೂಚಿಸುತ್ತದೆ.

ಅಲ್ಲದೆ ಮುಖ್ಯವಾಗಿ ನಮ್ಮ ಸಮಾಜದಲ್ಲಿ ಬಳಕೆಯಲ್ಲಿರುವ 'ಬಲಿ' ಆಚರಣೆಯನ್ನು ಸಹ ನಮ್ಮ ನೆನಪಿಗೆ ತರುತ್ತದೆ. ಇಲ್ಲಿ ಉಲ್ಲೇಖವಾಗಿರುವ ಹೊಸ ಸೀರೆ, ಬಿಸಿ ನೀರು, ಕಂಬಳಿ, ಹೊಸ ಕತ್ತಿ ಇವೆಲ್ಲವೂ ಕೂಡ ಬಲಿಯ ಸಂದರ್ಭವನ್ನೆ ಸಾಂಕೇತಿಸುತ್ತವೆ.

"ಕಡೆ ಕಡೆ ಕಂಬ
ಕಂಡಣ್ಣ ಕಂಬ
ಒಲೆ ಹಚ್ಚಕ್ಕೋದೆ
ದೀಪ ಸಿಕ್ತು
ದೀಪ ಏನ್ ಮಾಡ್ದೆ ?
ದೇವ್ರ ಗುಡಿಗೆ ಹಚ್ಚಿದೆ
ದೇವ್ರೇನ್ ಕೊಡ್ತು ?
ಗಂಟೆ ಕೊಡ್ತು
ಗಂಟೆ ಏನ್ ಮಾಡ್ದೆ ?
ಹಸಿಗೆ ಕಟ್ದೆ
ಹಸೇನ್ ಕೊಡ್ತು ?
ಹಾಲ್ ಕೊಡ್ತು
ಹಾಲೇನ್ ಮಾಡ್ದೆ ?
ಅಜ್ಜಿಗೆ ಕೊಟ್ಟೆ
ಅಜ್ಜೇನ್ ಕೊಡ್ತು ?
ತುಪ್ಪ ರೊಟ್ಟಿ ಕೊಡ್ತು
ತುಪ್ಪ ರೊಟ್ಟಿ ಏನ್ ಮಾಡ್ದೆ ?
ಗಿಣಿ ಕೈಲಿ ಕೊಟ್ಟೆ
ಗಿಣಿ ಏನ್ ಕೊಡ್ತು ?
ಮಿಠಾಯಿ ಕೊಡ್ತು
ಮಿಠಾಯಿ ಏನ್ ಮಾಡ್ದೆ ?
ಮೇಷ್ಟ್ರಿಗೆ ಕೊಟ್ಟೆ
ಮೇಷ್ಟ್ರೇನ್ ಕೊಟ್ರು ?
ತಿಕ್ಕೆ ಎರಡು ಕೊಟ್ರು।"[೨೫]

ದೈನಂದಿನ ಬದುಕಿನಲ್ಲಿ ಬಳಕೆಯಾಗುವ ವಸ್ತುಗಳ ಉಲ್ಲೇಖವಿರುವ ಈ ಶಿಶುಗೀತೆಯು ಮಕ್ಕಳ ನೆಚ್ಚಿನ ಗೀತೆ. ಐದಾರು ಮಕ್ಕಳು ಒಟ್ಟಾಗಿ ಸುತ್ತಲೂ ಕುಳಿತು ತಮ್ಮ ಕೈ ಹಾಗೂ

ಬೆರಳುಗಳನ್ನು ಗಂಟೆಯಾಕಾರಲ್ಲಿ ನೆಲದ ಮಲೆ ಇಟ್ಟುಕೊಂಡು ಅದನ್ನ ಒಲೆ ಎಂದು ಭಾವಿಸಿ ಮೇಲಿನ ಶಿಶುಗೀತೆಯನ್ನು ಹಾಡುತ್ತ ಖುಷಿಪಡುತ್ತಾರೆ. ಇಲ್ಲಿನ ಒಲೆ, ದೀಪ, ದೇವರು, ಗಂಟೆ, ಹಸು, ಹಾಲು, ಅಜ್ಜಿ, ರೊಟ್ಟಿ, ಗಿಣಿ, ಮಿಠಾಯಿ, ಮೇಷ್ಟ್ರು ಎಲ್ಲವೂ ಒಂದಕ್ಕೊಂದು ಸೂತ್ರ ರೂಪದ ಸಂಬಂಧವನ್ನು ಹೊಂದಿವೆ.

'ಕೈಯೆಲ್ಲ ಎಲ್ಲೋದೊ ?
ಸಂತೆಗೋದೊ
ಸಂತೆಲೇನ್ ತಂದೊ ?
ಬಾಳೆಹಣ್ ತಂದೊ
ಬಾಳೆಹಣ್ ಏನ್ ಮಾಡ್ದೆ ?
ಹಣ್ ತಿಂದು ಸಿಪ್ಪೆ ಕದಿನಿಂದೆ ಹಾಕಿದೆ
ಕದೇನ್ ಕೊಡ್ತು ?
ಚಕ್ಕೆ ಕೊಡ್ತು
ಚಕ್ಕೆ ಏನ್ ಮಾಡ್ದೆ ?
ಒಲಿಗಾಕ್ದೆ
ಒಲೇನ್ ಕೊಡ್ತು ?
ಬೂದಿ ಕೊಡ್ತು
ಬೂದಿ ಏನ್ ಮಾಡ್ದೆ ?
ಹೊಲಕ್ಕಾಕ್ದೆ
ಹೊಲೇನ್ ಕೊಡ್ತು ?
ಗರಿಕೆ ಕೊಡ್ತು
ಗರಿಕೆ ಏನ್ ಮಾಡ್ದೆ ?
ಹಸಿಗಾಕ್ದೆ
ಹಸೇನ್ ಕೊಡ್ತು ?
ಹಾಲ್ ಕೊಡ್ತು
ಹಾಲೇನ್ ಮಾಡ್ದೆ ?
ವಸಿಕುಡ್ದು ಅಡ್ಡಗೋಡೆ ಮೇಲಿಟ್ಟಿದ್ದೆ ಬೆಕ್ಕು ಕುಡ್ಕಂಡ್ ಹೋಯ್ತು
ಬೆಕ್ಕೇನ್ ಕೊಡ್ತು ?
ಸುಣ್ಕಾಯ್ ಕೊಡ್ತು
ಸುಣ್ಕಾಯ್ ಏನ್ ಮಾಡ್ದೆ ?

ಅತ್ತೆಗೆ ಕೊಟ್ಟೆ
ಅತ್ತೇನ್ ಕೊಟ್ಲು ?
ಹೆಣ್ ಕೊಟ್ಲು'

ಪ್ರಸ್ತುತ ಗೀತೆಯು ಮೇಲಿನ ಗೀತೆಯಂತೆಯೇ ಮಕ್ಕಳೆಲ್ಲರು ಒಂದು ಕಡೆ ಸುತ್ತಲೂ ಕೂತು ಆಡುವಾಗ ಹೇಳುವ ಗೀತೆಯಾಗಿದೆ. ಇಲ್ಲಿಯೂ ಪ್ರಶ್ನೆ ಹಾಗೂ ಉತ್ತರಗಳಿದ್ದು, ಇಲ್ಲಿ ಮಕ್ಕಳ ಸೃಜನಶೀಲ ಮನಸ್ಥಿತಿ ನಮ್ಮ ಗಮನ ಸೆಳೆಯುತ್ತದೆ. ಅಲ್ಲದೆ ಒಂದೊಂದು ಪದಗಳೂ ಹೊಂದಿರುವ ಸಹ ಸಂಬಂಧ ಓದುಗರನ್ನು ಬೆರಗುಗೊಳಿಸುವ ಮೂಲಕ ಅದ್ಭುತವಾದ ರಮ್ಯಲೋಕಕ್ಕೆ ಕೊಂಡೊಯ್ದಂತೆ ಭಾಸವಾಗುತ್ತದೆ.

'ಕೈಯೆಲ್ಲ ಎತ್ತೋದೋ?
ಅತ್ತೆ ಮನೆಗೋದೋ
ಅತ್ತೇನ್ ಕೊಟ್ಲು ?
ತೊಟ್ಲು ಕೊಟ್ಲು
ತೊಟ್ಲೊಳಗೇನಿತ್ತು ?
ಮಗಿತ್ತು
ಮಗೀನ್ ಕೈಲೇನಿತ್ತು ?
ಬಟ್ಲಿತ್ತು
ಬಟ್ಲೊಳಗೆನಿತ್ತು ?
ಸಾರಿತ್ತು
ಸಾರೊಳಗೇನಿತ್ತು ?
ತುಪ್ಪಿತ್ತು
ತುಪ್ಪದ ಮೇಲೆ ಏನ್ ಕೂತಿತ್ತು ?
ನೊಣ ಕೂತಿತ್ತು ।'

ಎಂದು ಹೇಳುತ್ತ ಎಲ್ಲ ಮಕ್ಕಳು ಒಬ್ಬರ ಕಿವಿಗಳನ್ನು, ಮತ್ತೊಬ್ಬರು ಹಿಡಿದುಕೊಂಡು 'ನೊಣ ತಿನ್ನೋ ಗೊರವಯ್ಯಾ, ತುಪ್ಪ ತಿನ್ನೋ ಗೊರವಯ್ಯಾ' ಎಂದು ಹಾಡುತ್ತ ತಲೆ ದೂಗುತ್ತಾರೆ. ಇಲ್ಲಿನ ಪ್ರಶ್ನೆ ಹಾಗೂ ಉತ್ತರಗಳು ಒಂದು ಮತ್ತೊಂದರೊಂದಿಗೆ ಹತ್ತಿರದ ಸಂಬಂಧವನ್ನು ಹೊಂದಿರುವುದು ಕಂಡುಬರುತ್ತದೆ.

"ಡಮ್ಮರೆ ಡಮ್ಮರೆ ಡಂ
ಮನೆ ಸುಟ್ಹೋಯ್ತು
ಯಾವ ಮನೆ ?

ಪೂಜಾರಿ ಮನೆ
ಯಾವ್ ಪೂಜಾರಿ ?
ಜುಟ್ ಪೂಜಾರಿ
ಯಾವ್ ಜುಟ್ಟು ?
ಕೋಳಿ ಜುಟ್ಟು
ಯಾವ್ ಕೋಳಿ ?
ಬಾತ್ ಕೋಳಿ
ಯಾವ್ ಬಾತು ?
ತಿನ್ನೊ ಬಾತು
ಯಾವ್ ತಿನ್ನು ?
ಏಟ್ ತಿನ್ನು
ಯಾವ ಏಟು ?
ದೊಣ್ಣೆ ಏಟು
ಯಾವ್ ದೊಣ್ಣೆ ?
ದಪ್ ದೊಣ್ಣೆ
ಯಾವ ದಪ್ಪ ?
ನಿನ್ನೊಟ್ಟೆ ದಪ್ಪ !”[೨೫]

ಈ ಗೀತೆಯು ಸಹ ಪ್ರಶ್ನೆ ಹಾಗೂ ಉತ್ತರದ ರೂಪದಲ್ಲಿಯೇ ಸಾಗುತ್ತದೆ. ಪೂಜಾರಿಯ ಪಾತ್ರ ನಮ್ಮ ಜನಪದ ಗೀತೆ ಹಾಗೂ ಕಥೆ ಮೊದಲಾದ ಪ್ರಕಾರಗಳಲ್ಲಿ ಹೆಚ್ಚು ಗೇಲಿ ಹಾಗೂ ಹಾಸ್ಯಕ್ಕೆ ಒಳಗಾಗಿರುವಂತಹದ್ದು. ಅಂತಹ ಪೂಜಾರಿಯ ಮನೆ ಸುಟ್ಟುಹೋದ ವಿಷಯದಿಂದ ಹಿಡಿದು ಬಾತುಕೋಳಿಯವರೆಗೆ ಹಾಗೂ ದೊಣ್ಣೆಯ ಪೆಟ್ಟಿನವರೆಗೆ ಈ ಗೀತೆಯ ವಿವರಗಳು ಸಾಗುತ್ತವೆ.

“ತಿಂಗಳ ಮಾವ ತಿಂಗಳ ಮಾವ ಎಲ್ಲಿಗೋಯ್ತೀಯಾ ?
ಸಂತೆಗೋಯ್ತೀನಿ
ಸಂತಿಗ್ಯಾಕೆ ?
ಮಡಕೆ ತರಕ್ಕೆ
ಮಡಕೆ ಯಾಕೆ ?
ದುಡ್ ತುಂಬಕ್ಕೆ
ದುಡ್ ಯಾಕೆ ?
ದನ ತರಕೆ

ದನ ಯಾಕೆ ?
ತಪ್ಪೆ ಇಕ್ಕಕ್ಕೆ
ತಪ್ಪೆ ಯಾಕೆ ?
ಮನೆ ಸಾರ್ಸಕ್ಕೆ
ಮನೆ ಯಾಕೆ ?
ಮಕ್ಳನ್ನೆಲ್ಲ ಸೇರ್ಸಿ ಮದ್ವೆ ಮಾಡಕ್ಕೆ ।"[೨೬]

'ಮಾವ' ಹಾಗೂ 'ಸಂತೆ' ಮಕ್ಕಳು ಹೆಚ್ಚು ಇಷ್ಟಪಡುವ ವ್ಯಕ್ತಿ ಹಾಗೂ ಸ್ಥಳವಾಗಿದೆ. ಅಲ್ಲದೆ ಬಹಳಷ್ಟು ಶಿಶುಪ್ರಾಸಗಳಲ್ಲಿ ಮಾವ ಹಾಗೂ ಸಂತೆಯ ವಿವರಗಳು ಕಂಡುಬರುತ್ತವೆ. ಈ ಸಂತೆಯ ಪರಿಕಲ್ಪನೆ ಜನಪದ ಗೀತೆಗಳಲ್ಲಿ ಮಹತ್ವದ ಸ್ಥಾನವನ್ನು ಹೊಂದಿದೆ. ಇದು ಕೊಡು–ಕೊಳ್ಳುವಿಕೆಯ ಹಾಗೂ ಪರಸ್ಪರ ಮಾಹಿತಿ ವಿನಿಮಯದ ತಾಣವಾಗಿಯೂ ಪ್ರಾಮುಖ್ಯತೆಯನ್ನು ಪಡೆದಿದೆ.

ಜೊತೆಗೆ ಮಕ್ಕಳಿಗೆ ಇಷ್ಟವಾಗುವ ತಿಂಡಿ ತಿನಿಸುಗಳು, ಆಟದ ಸಾಮಗ್ರಿಗಳು ಇಲ್ಲಿ ದೊರಕುವ ಕಾರಣವಾಗಿ ಮಕ್ಕಳಿಗೆ ಸಂತೆ ಎಂಬುದು ಬಹುಪ್ರಿಯವಾದ ಸ್ಥಳವಾಗಿದೆ. ಸಂತೆಗೆ ಹೋಗಿ ಮಡಕೆ ತರುವ, ಅದರಲ್ಲಿ ದುಡ್ಡು ಇಡುವ ಹಾಗೂ ಮನೆಯನ್ನು ಸಾರಿಸಲು ತೊಪ್ಪೆ ಇಡುವ ದನಗಳನ್ನು ತರುವ ಯೋಚನೆಗಳಿರುವುದು ಕಂಡುಬರುತ್ತದೆ. ಅಲ್ಲದೆ ಬ್ಯಾಂಕ್ ಅಥವಾ ಆಧುನಿಕ ಬೀರುಗಳ ವ್ಯವಸ್ಥೆ ಇಲ್ಲದಿರುವ ಕಾಲದಲ್ಲಿ ಹಣವನ್ನು ಮಡಕೆಗಳಲ್ಲಿ ಇಟ್ಟುಕೊಂಡು ರಕ್ಷಿಸಿಕೊಳ್ಳುತ್ತಿದ್ದ ಜನಪದರ ಜೀವನ ಕ್ರಮವನ್ನು ಸಹ ಇದು ತಿಳಿಸಿಕೊಡುತ್ತದೆ.

"ಸಾರು ಸಾರು
ಎಂಥ ಸಾರು
ಮಜ್ಗೆ ಸಾರು
ಎಂಥ ಮಜ್ಗೆ
ಹುಳಿ ಮಜ್ಗೆ
ಎಂಥ ಹುಳಿ
ನಿಂಬೆ ಹುಳಿ
ಎಂಥ ನಿಂಬೆ
ಮೈಸೂರ್ ನಿಂಬೆ
ಎಂಥ ಮೈಸೂರ್
ಹಳ್ಳಿ ಮೈಸೂರ್
ಎಂಥ ಹಳ್ಳಿ
ವಡ್ರಳ್ಳಿ

ಎಂಥ ವಡ್ರು
ಕಲ್ಲೊಡ್ರು
ಎಂಥ ಕಲ್ಲು
ಚೂರ್ ಕಲ್ಲು ।”[೨೭]

ಪ್ರಶ್ನೆ ಮತ್ತು ಉತ್ತರ ರೂಪದಲ್ಲಿ ಸಾಗುವ ಈ ಶಿಶುಗೀತೆಗಳು ನಮ್ಮ ಸಾಂಸ್ಕೃತಿಕ ಜೀವನದ ದರ್ಶನಗಳೇ ಆಗಿವೆ. ಈ ಗೀತೆಯಲ್ಲಿ ಕಂಡುಬರುವ ಮಜ್ಜಿಗೆ ಸಾರು, ಮೈಸೂರು ನಿಂಬೆ, ವಡ್ರಳ್ಳಿ, ಕಲ್ಲೊಡ್ರು ಇವೆಲ್ಲವೂ ಸಹ ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುವ ಅಂಶಗಳೇ ಆಗಿವೆ. ಇಲ್ಲಿ ನಮ್ಮ ಆಹಾರ ಕ್ರಮಗಳು, ಆಹಾರಕ್ಕಾಗಿ ಬಳಕೆಯಾಗುವ ಪರಿಕರಗಳು, ನಮ್ಮ ನಡುವಿನ ವೃತ್ತಿ ಹಾಗೂ ವೃತ್ತಿ ಆಧಾರಿತ ಜಾತಿಗಳು ಮೊದಲಾದ ವಿವರಗಳನ್ನು ಈ ಗೀತೆಯು ನಮಗೆ ತಿಳಿಸಿಕೊಡುತ್ತದೆ. ಮಕ್ಕಳ ಮನರಂಜನೆ ಹಾಗೂ ಹಾಸ್ಯಕ್ಕಾಗಿ ಆ ಪದಗಳನ್ನು ಇಲ್ಲಿ ಬಳಸಿದ್ದಾರೆ ಎಂದುಕೊಂಡರೂ ಸಹ ನಮ್ಮ ಸಾಂಸ್ಕೃತಿಕ ಪರಿಸರದಿಂದ ಇವಾವುವು ಹೊರಗೆ ನಿಲ್ಲುವಂತಹವಲ್ಲ. ಇವೆಲ್ಲವು ನಮ್ಮ ನಡುವಿನ ಸಂಸ್ಕೃತಿಯ ಜೀವಂತ ಪ್ರತೀಕಗಳೇ ಆಗಿವೆ.

೨. ಕಥನದ ರೀತಿಯ ಶಿಶುಗೀತೆಗಳು

ಕಥನದ ರೀತಿಯ ಶಿಶುಗೀತೆಗಳಲ್ಲಿ ಕಥೆಯನ್ನು ಹೇಳುವ ನಿರೂಪಣೆಯನ್ನು ಒಳಗೊಂಡ ಶಿಶುಗೀತೆಗಳು ಕಂಡುಬರುತ್ತವೆ. ಇವುಗಳಲ್ಲಿಯೂ ಆದಿ ಇಲ್ಲವೇ ಅಂತ್ಯ ಪ್ರಾಸಗಳುಳ್ಳ ಪದ ಪುಂಜಗಳನ್ನು ಕಾಣಬಹುದಾಗಿದೆ. ಮಕ್ಕಳಿಗೆ ಅಚ್ಚು ಮೆಚ್ಚಿನ ರೀತಿಯಲ್ಲಿರುವ ಈ ಶಿಶುಗೀತೆಗಳು ದೀರ್ಘ ಸ್ವರೂಪದಲ್ಲಿದ್ದು ಕಥೆಯನ್ನು ಹೇಳುತ್ತವೆ. ಇಲ್ಲಿ ಮಕ್ಕಳ ಯೋಚನಾ ಲಹರಿಗಳು, ಸಂತೋಷ, ಮನರಂಜನೆ, ಹಾಸ್ಯ ಮೊದಲಾದ ಗುಣಗಳು ಕಂಡುಬರುತ್ತವೆ. ಈ ಗೀತೆಗಳನ್ನು ಹೇಳುವ ಮುಖ್ಯ ಉದ್ದೇಶ ಕೂಡ ಮನರಂಜನೆ ಹಾಗೂ ಖುಷಿಪಡುವ ಸಂಗತಿಗಳೇ ಆಗಿವೆ.

“ಎಲ್ಲೂ ಇಲ್ಲದ ಮಳೆ ಬಂದಿತಣ್ಣ
ಎಲ್ಲೂ ಇಲ್ಲದ ಮಳೆ ಬಂದಿದ್ದ ಕಂಡು
ಬಾರೆ ಮೇಲೆ ಚಿಗುರು ಬಂದಿತಣ್ಣ
ಬಾರೆ ಮೇಲೆ ಚಿಗುರು ಬಂದಿದ್ದ ಕಂಡು
ಬೋರಣ್ಣ ಕುರಿಯ ಬುಟ್ಟನಣ್ಣ
ಬೋರಣ್ಣ ಕುರಿಯ ಬುಟ್ಟುದ್ದ ಕಂಡು
ಬೋರಮ್ಮ ಮುದ್ದೆಯ ಹೊತ್ತಳಣ್ಣ
ಬೋರಮ್ಮ ಮುದ್ದೆಯ ಹೊತ್ತದ್ದ ಕಂಡು
ಬೋರಣ್ಣ ಊಟಕ್ಕೆ ಕುಂತನಣ್ಣ
ಬೋರಣ್ಣ ಊಟಕ್ಕೆ ಕುಂತದ್ದ ಕಂಡು

ತೋಳಣ್ಣ ಕುರಿಯ ಹೊತ್ತನಣ್ಣ

ತೋಳಣ್ಣ ಕುರಿಯ ಹೊತ್ತುದ್ದ ಕಂಡು

ಬೋರಣ್ಣ ದೊಣ್ಣೆಯ ಹೊತ್ತನಣ್ಣ

ಬೋರಣ್ಣ ದೊಣ್ಣೆಯ ಹೊತ್ತುದ್ದ ಕಂಡು

ನಾಯಣ್ಣ ಮುದ್ದೆಯ ಹೊತ್ತನಣ್ಣ ।"[೨೮]

ಈ ಗೀತೆಯಲ್ಲಿ ಮಳೆ, ಬಾರೆ, ಚಿಗುರು, ಬೋರಣ್ಣ, ಕುರಿ, ಬೋರಮ್ಮ, ಮುದ್ದೆ, ತೋಳಣ್ಣ, ದೊಣ್ಣೆ, ನಾಯಣ್ಣ ಇವು ಒಂದಕ್ಕೊಂದು ಸೂತ್ರದ ರೂಪದಲ್ಲಿ ಬೆಸೆದುಕೊಂಡು ಕಥೆಯ ರೂಪದ ಅನುಭವವನ್ನು ನೀಡುತ್ತವೆ. ಮಳೆ ಬಿದ್ದ ಕಾರಣವಾಗಿ ಬಾರೆ ಮೇಲೆ ಚಿಗುರು ಹುಟ್ಟುತ್ತದೆ. ಚಿಗುರಿನ ಕಾರಣವಾಗಿ ಬೋರಣ್ಣ ಚಿಗುರು ಮೇಯಿಸಲು ಕುರಿ ಬಿಡುತ್ತಾನೆ. ಕುರಿ ಬಿಟ್ಟ ಕಾರಣವಾಗಿ ಬೋರಣ್ಣನ ಹೆಂಡತಿ ಬೋರಮ್ಮ ಆತನಿಗೆ ಉಣ್ಣಲು ಮುದ್ದೆ ನೀಡುತ್ತಾಳೆ. ಇದೇ ಸಮಯಕ್ಕೆ ಹೊಂಚು ಹಾಕಿದ್ದ ತೋಳಣ್ಣ ಕುರಿಯನ್ನು ಹೊತ್ತೊಯ್ಯುತ್ತಾನೆ. ಇದನ್ನು ಕಂಡ ಬೋರಣ್ಣ ದೊಣ್ಣೆಯೊಂದಿಗೆ ತೋಳಣ್ಣನನ್ನು ಅಟ್ಟಿಕೊಂಡು ಹೋಗುತ್ತಾನೆ. ಪಕ್ಕದಲ್ಲಿದ್ದ ನಾಯಣ್ಣ ಬೋರಣ್ಣನ ಊಟದ ಮುದ್ದೆಯನ್ನು ಕದ್ದುಕೊಂಡು ಹೋಗುತ್ತದೆ. ಹೀಗೆ ಆ ಸಂದರ್ಭದ ಘಟನಾವಳಿಗಳನ್ನು ಕಥಾ ಸ್ವರೂಪದಲ್ಲಿ ಸೂತ್ರ ರೂಪದ ಮುಖೇನ ಹಿಡಿದಿಟ್ಟು ಮಕ್ಕಳು ಹೇಳಿ ಆನಂದಿಸುತ್ತವೆ.

"ಕುಸುಮರ ತಂಗಿ ಕುಸುಮರ ತಂಗಿ ಸಂತೆಗ್ಯಾಕೆ ಹೋಗಿದ್ದೆ

ಎಲೆಗಿಲೆ ಇಲ್ಲ ಅಂತ ಎಲೆ ತರಕ್ಕೋಗಿದ್ದೆ

ಎಲೆತಂದ ಗರ್ತಿ ನೀನು ಎಲೆ ಏನು ಮಾಡಿದೆ

ಮಕ್ಳುಗಿಕ್ಳು ಹಾಕ್ಯಾವಂತ ಮಡ್ಕೆ ಸಂದಿಲಿ ತುರ್ಕಿದ್ದೆ

ಕುಸುಮರ ತಂಗಿ ಕುಸುಮರ ತಂಗಿ ಸಂತೆಗ್ಯಾಕೆ ಹೋಗಿದ್ದೆ

ಅಡ್ಕೆಗಿಡ್ಕೆ ಇಲ್ಲ ಅಂತ ಅಡ್ಕೆ ತರಕ್ಕೋಗಿದ್ದೆ

ಅಡ್ಕೆ ತಂದ ಗರ್ತಿ ನೀನು ಅಡ್ಕೆ ಏನು ಮಾಡಿದೆ

ಮಕ್ಳುಗಿಕ್ಳು ಹಾಕ್ಯಾವಂತ ಮಡ್ಕೆ ಸಂದಿಲಿ ತುರ್ಕಿದ್ದೆ

ಕುಸುಮರ ತಂಗಿ ಕುಸುಮರ ತಂಗಿ ಸಂತೆಗ್ಯಾಕೆ ಹೋಗಿದ್ದೆ

ಸೀರೆ ಗೀರೆ ಇಲ್ಲ ಅಂತ ಸೀರೆ ತರಕ್ಕೋಗಿದ್ದೆ

ಸೀರೆ ತಂದ ಗರ್ತಿ ನೀನು ಸೀರೆ ಏನು ಮಾಡಿದ್ದೆ

ಮಾಸಿಗೀಸಿ ಹೋದತಂತ ಮಡ್ಕೆ ಸಂದಿಲಿ ತುರ್ಕಿದ್ದೆ

ಕುಸುಮರ ತಂಗಿ ಕುಸುಮರ ತಂಗಿ ಸಂತೆಗ್ಯಾಕೆ ಹೋಗಿದ್ದೆ

ಗಂಡಗಿಂಡ ಇಲ್ಲ ಅಂತ ಗಂಡನ್ ತರಕ್ಕೋಗಿದ್ದೆ

ಗಂಡನ್ ತಂದ ಗರ್ತಿ ನೀನು ಗಂಡನ್ ಏನ್ ಮಾಡಿದೆ

ಸತ್ತು ಗಿತ್ತು ಹೋದಾನಂತ ಗುಂಡಿತೋಡಿ ಹೂತಿದ್ದೆ ।"[೨೯]

ಈ ಶಿಶುಗೀತೆಯು ಸವಾಲು ಜವಾಬು ರೀತಿಯ ಶಿಶುಗೀತೆಯಂತೆ ಕಂಡರೂ ಸಹ ಕುಸುಮರ ತಂಗಿ ಸಂತೆಗೆ ಹೋದ ಕತೆಯನ್ನು ನಮಗೆ ತಿಳಿಸುತ್ತದೆ. ಆಕೆ ಸಂತೆಗೆ ಹೋಗಲು ಕಾರಣ ? ಅಲ್ಲಿಂದ ತಂದ ವಸ್ತುಗಳು ಮೊದಲಾದ ವಿವರಗಳನ್ನು ಕಥಾ ಸ್ವರೂಪದಲ್ಲಿ ಈ ಗೀತೆಯು ತಿಳಿಸಿಕೊಡುತ್ತದೆ.

"ಕೊಣ್ನೂರ್ ಸಂತೆಗೆ ಹೋಗ್ಬೇಕಂತೆ
ಅಪ್ಪಂಗು ಅಮ್ಮಂಗು ಚಿಂತ್ಯೋಚಿಂತೆ
ಅಜ್ಜಿಗೆ ಬೇಕು ಎಲೆ ಅಡಿಕೆಯಂತೆ
ಅಜ್ಜನಿಗೆ ಬೇಕು ನೆಶೆ ಡಬ್ಬಿಯಂತೆ
ಅಕ್ಕನಿಗೆ ಬೇಕು ಹಣೆಬಟ್ಟಂತೆ
ಪಾಪುಗೆ ಬೇಕು ಪೀಪಿಯಂತೆ"[೩೦]

ಈ ಶಿಶುಗೀತೆಯಲ್ಲಿ ಕೊಣ್ಣೂರು ಸಂತೆಗೆ ಹೋಗುವ ಅಪ್ಪ ಅಮ್ಮನ ಚಿಂತೆಗೆ ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ. ಅಜ್ಜಿಗೆ ಎಲೆ ಅಡಿಕೆ ಬೇಕಾದರೆ, ಅಜ್ಜನಿಗೆ ನೆಶೆ ಡಬ್ಬಿ ಬೇಕು. ಅಕ್ಕನಿಗೆ ಹಣೆ ಬಟ್ಟು, ಪಾಪುವಿಗೆ ಪೀಪಿ ಹೀಗೆ ಒಬ್ಬೊಬ್ಬರಿಗೆ ಒಂದೊಂದರ ಅವಶ್ಯಕತೆ ಇರುವ ಕಾರಣವಾಗಿ ಅಪ್ಪ ಅಮ್ಮನಿಗೆ ಯಾರಿಗೆ ಏನು ತರಬೇಕೆಂಬ ಗೊಂದಲಕ್ಕೆ ಬೀಳುವುದು ಕಂಡುಬರುತ್ತದೆ. ಅಲ್ಲದೆ ಮುಖ್ಯವಾಗಿ ಕೊಣ್ಣೂರು ಸಂತೆ ಆ ಸುತ್ತ ಮುತ್ತಲಿನ ಹಳ್ಳಿಗರ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುವ ಹಾಗೂ ಆ ಹಳ್ಳಿಗರ ಮೇಲೆ ಬೀರುವ ಸಾಂಸ್ಕೃತಿಕ ಪ್ರಭಾವಗಳು ಸಹ ಇದರಿಂದ ತಿಳಿಯುತ್ತವೆ.

"ತುಮ್ಕೂರಿಂದ ಬರ್ತ ಬರ್ತ
ಇಳ್ಕ ಬಾರಲೇ ಸಿದ್ದಿ ಇಳ್ಕಬಾರಲೆ
ಇಳ್ಕಲಾರೆ ದಮ್ಮಯ್ಯ
ಚಳಿಜರ ಬಂದಯ್ತೆ
ಇಳ್ಕಿಗಿಳ್ಕಿ ಇಟ್ಟಿದ್ದೀನಿ
ಕೇರು ಬಾರಲೇ ಸಿದ್ದಿ ಕೇರು ಬಾರಲೆ
ಕೇರಲಾರೆ ದಮ್ಮಯ್ಯ
ಚಳಿಜರ ಬಂದಯ್ತೆ
ಕೇರಿಗೀರಿ ಇಟ್ಟಿದ್ದೀನಿ
ರುಬ್ಬು ಬಾರಲೇ ಸಿದ್ದಿ ರುಬ್ಬು ಬಾರಲೆ
ರುಬ್ಬಲಾರೆ ದಮ್ಮಯ್ಯ
ಚಳಿಜರ ಬಂದಯ್ತೆ

ರುಬ್ಬಿಗಿಬ್ಬಿ ಇಟ್ಟಿದ್ದೀನಿ
ಕಲ್ಸುಬಾರಲೆ ಸಿದ್ದಿ ಕಲ್ಸುಬಾರಲೆ
ಕಲ್ಸಲಾರೆ ದಮ್ಮಯ್ಯ
ಚಳಿಜರ ಬಂದಯ್ತೆ
ಕಲ್ಸಿಗಿಲ್ಸಿ ಇಟ್ಟಿದ್ದೀನಿ
ತೊಟ್ಟು ಬಾರಲೇ ಸಿದ್ದಿ ತೊಟ್ಟು ಬಾರಲೆ
ತೊಟ್ಟಲಾರೆ ದಮ್ಮಯ್ಯ
ಚಳಿಜರ ಬಂದಯ್ತೆ
ತೊಟ್ಟಿಗಿಟ್ಟಿ ಇಟ್ಟಿದ್ದೀನಿ
ಬೇಸು ಬಾರಲೇ ಸಿದ್ದಿ ಬೇಸು ಬಾರಲೆ
ಬೇಸಲಾರೆ ದಮ್ಮಯ್ಯ
ಚಳಿಜರ ಬಂದಯ್ತೆ
ಬೇಸಿಗೀಸಿ ಇಟ್ಟಿದ್ದೀನಿ
ತಿನ್ನುಬಾರಲೇ ಸಿದ್ದಿ ತಿನ್ನು ಬಾರಲೆ
ತಿಂತೀನಿ ದಮ್ಮಯ್ಯ ತಿಂತೀನಿ ದಮ್ಮಯ್ಯ
ಚಳಿಜರ ಹೊಂಟೋಯ್ತು ।”[೩೧]

ತುಮಕೂರಿನಿಂದ ಬರುವಾಗ ಗಂಡ ತಂದ ದವಸವನ್ನು ಕೇರಲಾರದೆ, ರುಬ್ಬಲಾರದೆ, ಕಲ್ಸಲಾರದೆ ಇರುವ ಹೆಂಡತಿ ಬೇಯಿಸಿ ಇಟ್ಟ ನಂತರ ಊಟಕ್ಕೆ ಬಂದು ಕೂರುವ ಕಥಾನಕದ ವಿವರಗಳು ಇಲ್ಲಿ ಕಂಡುಬರುತ್ತವೆ. ಗಂಡ ಹೇಳಿದ ವಿವರಗಳಿಗೆ ಪ್ರತಿಯಾಗಿ ಹೆಂಡತಿಯಾದ 'ಸಿದ್ದಿ'ಯು ತನಗೆ ಆರೋಗ್ಯ ಸರಿ ಇಲ್ಲ, ಚಳಿ ಜರ ಬಂದಿದೆ ಎಂದು ಕೊಡುವ ಪ್ರತ್ಯುತ್ತರಗಳ ವಿವರಗಳು ಅದ್ಭುತವಾಗಿವೆ. ಅಲ್ಲದೆ ಈ ಶಿಶುಗೀತೆಯಲ್ಲಿ ತುಮಕೂರಿನ ಉಲ್ಲೇಖವಿದ್ದು, ತುಮಕೂರು ಜಿಲ್ಲೆಯು ಹಾಸನ ಜಿಲ್ಲೆಯೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ. ಅದರಂತೆಯೆ ಸಾಂಸ್ಕೃತಿಕ ಕೊಡು ಕೊಳ್ಳುವಿಕೆಯ ಸಂಬಂಧವನ್ನು ಇಟ್ಟುಕೊಂಡಿರುವುದು ಇದರಿಂದ ತಿಳಿಯುತ್ತದೆ.

“ಬಾವಿಯೊಳ್ಗೆ
ಬಿಂದಿಗೆ ಬಿದ್ದೈತೆ
ಬಾರೆ ತಂಗ್ಯಮ್ಮ
ಮಾವ್ ಬಂದವ್ನೆ
ಮೂಲೆಲ್ ಕುಂತವ್ನೆ
ಹಾಕಾಕ್ಕೊಂದು ಅಕ್ಕಿಲ್ಲ
ಕುಯ್ಯಕ್ಕೊಂದ್ ಕೋಳಿಲ್ಲ

ಹಾಲ್ ಕೊಟ್ರೆ ಆಕಳ್‌ಸ್ತಾನೆ
ತುಪ್ಪ ಕೊಟ್ರೆ ತೂಗುಡ್‌ಸ್ತಾನೆ
ಮೊಸ್ರು ಕೊಟ್ರೆ ಮುನಿಸ್‌ಕತ್ತಾನೆ
ಎದ್ದೇಳ್ ನನ್ನಾಟ್ಕಳ್ಳ।"[೩೨]

ಬಡತನದ ಸ್ಥಿತಿಯಲ್ಲಿರುವ ಹೆಣ್ಣು ಮಗಳೊಬ್ಬಳ ಮನೆಗೆ ಮಾವ ಬಂದು ಆತ ಏನು ಕೊಟ್ಟರೂ ತಿನ್ನದೆ ಮುನಿಸಿಕೊಳ್ಳುವ ವಿವರಗಳನ್ನು ಈ ಶಿಶುಗೀತೆಯಲ್ಲಿ ಕಾಣಬಹುದು. ಆಕೆಯ ಸ್ಥಿತಿಯನ್ನು 'ಹಾಕಾಕ್ಕೊಂದು ಅಕ್ಕಿಲ್ಲ' ಎಂಬ ಸಾಲೆ ನಮಗೆ ಮನವರಿಕೆ ಮಾಡಿಕೊಡುತ್ತದೆ. ಇಂಥ ಪರಿಸ್ಥಿತಿಯಲ್ಲಿರುವ ಆಕೆಯ ಮನೆಗೆ ಬಂದ ಮಾವನ ವರ್ತನೆಗಳನ್ನು ಮಕ್ಕಳು ತಮ್ಮ ಶಿಶುಗೀತೆಗಳಲ್ಲಿ ಹಾಡುವ ಮೂಲಕ ಆ ಸನ್ನಿವೇಶದ ವಾಸ್ತವ ಚಿತ್ರಣವನ್ನು ನಮ್ಮ ಗಮನಕ್ಕೆ ತಂದುಕೊಡುತ್ತವೆ.

"ಬೆಟ್ಟದ ಮೇಲೆ ಹೋಗುತ್ತಿದ್ದೆ
ಚಿನ್ನದ ಕೋಲು ಸಿಕ್ಕಿತ್ತು
ಅಪ್ಪನ ಕೈಲಿ ಕೊಟ್ಟಿದ್ದೆ
ಅಪ್ಪ ಏಟು ಕೊಟ್ಟಿತ್ತು
ಅಳುತ್ತ ಅಳುತ್ತ ಹೋಗ್ತಿದ್ದೆ
ಅವ್ವನ ಹತ್ತಿರ ಹೋಗಿದ್ದೆ
ಅವ್ವ ರೊಟ್ಟಿ ಕೊಟ್ಟಿತ್ತು
ಅಣ್ಣನ ಹತ್ತಿರ ಹೋಗಿದ್ದೆ
ಅಣ್ಣ ಬಿಸ್ಕತ್ ಕೊಟ್ಟಿತ್ತು
ಹಳೇ ಮನೆಗೋಗಿದ್ದೆ
ಹಳೇ ಅಂಗಿ ಸಿಕ್ಕಿತ್ತು
ಹೊಸ ಮನೆಗೋಗಿದ್ದೆ
ಹೊಸ ಅಂಗಿ ಸಿಕ್ಕಿತ್ತು
ನಡು ಮನೆಗೋದೆ
ನಡ ಕಸ್ಕಂಡ್ ಬಿತ್ತು।"[೩೩]

ಬೆಟ್ಟದ ಮೇಲೆ ನಡೆದುಕೊಂಡು ಹೋಗುವಾಗ ಸಿಕ್ಕ ಚಿನ್ನದ ಕೋಲಿನಿಂದ ಅಪ್ಪನ ಕೈಯಲ್ಲಿ ಪೆಟ್ಟು ತಿಂದ ಮಗುವೊಂದರ ಅನುಭವಗಳು ಈ ಶಿಶುಗೀತೆಯಲ್ಲಿ ದಾಖಲಾಗಿರುವುದು ಕಂಡುಬರುತ್ತದೆ. ಬಹುಶಃ ಚಿನ್ನದ ವಸ್ತುಗಳು ಮಕ್ಕಳ ಕೈಯಲ್ಲಿದ್ದರೆ ಅವುಗಳಿಗೆ ಅಪಾಯಗಳು, ಕೆಡುಕುಗಳು ಒದಗಿ ಬರಬಹುದಾದ ಕಾರಣದಿಂದಾಗಿ ಅಪ್ಪ ಆ ಮಗುವಿಗೆ ಪೆಟ್ಟು ಕೊಟ್ಟಿರಬಹುದಾದ ಸಾಧ್ಯತೆಗಳಿವೆ. ಏಕೆಂದರೆ ಇಂದಿನ ಸಮಾಜದಲ್ಲಿ ಚಿನ್ನದ ಒಡವೆ, ವಸ್ತ್ರಗಳಿಗಾಗಿ ನಡೆಯುತ್ತಿರುವ ಕೊಲೆ,

ದರೋಡೆ, ಅತ್ಯಾಚಾರಗಳಂತಹ ಪ್ರಕರಣಗಳೇ ಇದಕ್ಕೆ ಸಾಕ್ಷಿಯಾಗಿವೆ. ಹೀಗೆ ಪೆಟ್ಟು ತಿಂದ ಮಗು ತಾಯಿಯಿಂದ ರೊಟ್ಟಿಯನ್ನು, ಅಣ್ಣನಿಂದ ಬಿಸ್ಕತ್ತನ್ನು ಪಡೆದು ತಿನ್ನುತ್ತದೆ. ಹಳೆ ಮನೆಯಲ್ಲಿ ಹಳೆ ಅಂಗಿ, ಹೊಸ ಮನೆಯಲ್ಲಿ ಹೊಸ ಅಂಗಿ ಸಿಕ್ಕು ನಡುಮನೆಯಲ್ಲಿ ನಡ ಕಸಿದುಕೊಂಡು ಬೀಳುವವರೆಗೆ ಇದರ ವಿವರಗಳು ಸಾಗುತ್ತವೆ.

"ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಬೆಲ್ಲಿಲ್ಲ ಜಾಣ ಬೆಲ್ಲಿಲ್ಲ ಜಾಣ
ಮಂಡ್ಯಕೆ ಹೋಯ್ತೀನಿ ಉಂಡೆ ಬೆಲ್ಲ ತತ್ತೀನಿ
ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಬೇಳಿಲ್ಲ ಜಾಣ ಬೇಳಿಲ್ಲ ಜಾಣ
ಬೆಂಗ್ಳೂರ್ಗೆ ಹೋಯ್ತೀನಿ ಸೇರ್ ಬೇಳೆ ತತ್ತೀನಿ
ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಎಣ್ಣಿಲ್ಲ ಜಾಣ ಎಣ್ಣಿಲ್ಲ ಜಾಣ
ಶೆಟ್ರಂಗ್ಡಿಗೋಯ್ತೀನಿ ಸೇರ್ ಎಣ್ಣೆ ತತ್ತೀನಿ
ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಕಾಯಿಲ್ಲ ಜಾಣ ಕಾಯಿಲ್ಲ ಜಾಣ
ತಿಪ್ಟೂರ್‌ಗೆ ಹೋಯ್ತೀನಿ ತಿಪ್ಟೂರ್ ಕಾಯ್ ತತ್ತೀನಿ
ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಹಾಲಿಲ್ಲ ಜಾಣ ಹಾಲಿಲ್ಲ ಜಾಣ
ಹಾಲಮ್ಮನ ಕರ್ಸೆ ಸೇರಾಲ್ ತಗಳೆ
ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಎಲೆಯಿಲ್ಲ ಜಾಣ ಎಲೆಯಿಲ್ಲ ಜಾಣ
ಬಾಳೆ ತೋಟ್‌ಕೋಯ್ತೀನಿ ಕಟ್ಟೆಲೆ ತತ್ತೀನಿ
ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಮಾಡದಿಲ್ಲ ಜಾಣ ಮಾಡದಿಲ್ಲ ಜಾಣ
ಶೆಟ್ರಂಗ್ಡಿಗೋಯ್ತೀನಿ ಬಾರ್‌ಚೋಟಿ ತತ್ತೀನಿ
ಮಾಡೆ ಜಾಣೆ ಹೋಳ್ಗೆ ಮಾಡೆ ಜಾಣೆ
ಮಾಡ್ತೀನಿ ಜಾಣ ಮಾಡ್ತೀನಿ ಜಾಣ।"[೩೪]

ಹೋಳಿಗೆ ಮಾಡು ಎಂದು ಗಂಡನು ಹೆಂಡತಿಗೆ ಹೇಳಿದರೆ ಅದನ್ನು ಮಾಡುವವರು ಯಾರು ಎಂಬ ಸೋಮಾರಿತನದ ಮನೋಭಾವನೆಯಿಂದ ಆಕೆ ಮನೆಯಲ್ಲಿ ಬೇಳೆ, ಬೆಲ್ಲ, ಎಣ್ಣೆ,

ಹಾಲು, ತೆಂಗಿನಕಾಯಿ, ಎಲೆ ಮೊದಲಾದವುಗಳು ಇಲ್ಲ ಎಂದು ಹೇಳಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಅದಕ್ಕೆ ಗಂಡನು ಅವುಗಳನ್ನು ಮಂಡ್ಯ, ಬೆಂಗಳೂರು, ತಿಪಟೂರು, ಶೆಟ್ಟರ ಅಂಗಡಿಯಿಂದ ತಂದು ಕೊಡುವುದಾಗಿ ಹೇಳುತ್ತಾನೆ. ಇಲ್ಲಿ ಉಲ್ಲೇಖವಾಗಿರುವ ಮಂಡ್ಯ, ಬೆಂಗಳೂರು ಹಾಗೂ ತಿಪಟೂರುಗಳು ತಮ್ಮದೇ ಆದ ಸಾಂಸ್ಕೃತಿಕ ಅನನ್ಯತೆಯ ಅಂಶಗಳನ್ನು ಒಳಗೊಂಡಿವೆ.

ಅಲ್ಲದೆ ಇಲ್ಲಿ ಬಳಕೆಯಾಗಿರುವ ಉಂಡೆ ಬೆಲ್ಲ, ಸೇರು, ತಿಪ್ಟೂರ್ ಕಾಯಿ ಇವೆಲ್ಲವು ನಮ್ಮ ಸಮಾಜದಲ್ಲಿ ಜನರು ಯಾವುದೇ ಕೆಲಸ ಕಾರ್ಯಗಳನ್ನು ಮಾಡಲು ತೊಡಗಿದರೂ ಸಹ ಇವು ಬಳಕೆಯಾಗುತ್ತವೆ. ಅಲ್ಲದೆ ಶುಭ ಹಾಗೂ ಮಂಗಳಕರವಾದ ವಸ್ತುಗಳು ಇವಾಗಿದ್ದು ಹೆಚ್ಚು ಬಳಕೆಯಲ್ಲಿವೆ. ಜೊತೆಗೆ ಮಂಡ್ಯದ ಆಲೆಮನೆಗಳಲ್ಲಿ ತಯಾರಾಗುವ 'ಉಂಡೆ ಬೆಲ್ಲ'ದ ವಿವರಗಳು ಇಲ್ಲಿ ತಿಳಿಯುತ್ತವೆ. ಮಂಡ್ಯದ ಸಾಂಸ್ಕೃತಿಕ ಪರಿಸರದಲ್ಲಿನ ಪಾರಂಪರಿಕ ಕಸುಬು ಇದಾಗಿದ್ದು, ನಮ್ಮ ಗಮನವನ್ನು ಸೆಳೆಯುತ್ತದೆ. ಅಲ್ಲದೆ ಇಲ್ಲಿ ಬೆಳೆಯಲಾಗುವ ಕಬ್ಬಿನ ಬೆಳೆ ಸಹ ಈ ಉಂಡೆ ಬೆಲ್ಲದ ಉತ್ಪಾನೆಗೆ ಪೂರಕವಾಗಿದೆ. ಹಾಗೆಯೇ ತಿಪಟೂರು ತೆಂಗಿನಕಾಯಿಗೆ ಪ್ರಸಿದ್ಧವಾಗಿದೆ.

"ಹಕ್ಕಿ ಹಕ್ಕಿ
ಸಣ್ಣ ಹಕ್ಕಿ
ನಮ್ಮೊಲಕೆ ಬರಬೇಡ
ನಮ್ಮಣ್ಣಾ ಕಂಡಾರೆ
ಕಲ್ಲಲ್ಲೇ ಹೊಡೆದಾನು
ಬಿಲ್ಲಲ್ಲೇ ಹೊಡೆದಾನು
ನಮ್ಮಪ್ಪಾ ಕಂಡಾರೆ
ಕಾಲನ್ನೇ ಮುರಿದಾನು
ನಮ್ಮಕ್ಕಾ ಕಂಡಾರೆ
ಪುಕ್ಕವಾ ತರೆದಾಳು
ನಮ್ಮವ್ವಾ ಕಂಡಾರೆ
ಕಾರವಾ ಅರೆದಾಳು ।"[೩೫]

ಪುಟ್ಟ ಹಕ್ಕಿಯೊಂದನ್ನು ಕುರಿತು ಮಗು ಕಟ್ಟಿರುವ ಅದ್ಭುತವಾದ ಶಿಶುಗೀತೆಯಿದು. ತನ್ನ ಹೊಲಕ್ಕೆ ಕಾಳು ಕಡಿಗಳನ್ನು ತಿನ್ನಲು ಬರುವ ಸಣ್ಣ ಹಕ್ಕಿಯೊಂದನ್ನು ಕುರಿತು ಮಗುವಿನ ಮನದಲ್ಲಿ ಮೂಡುವ ಅತ್ಯುತ್ತಮವಾದ ಆಲೋಚನಾ ಕ್ರಮಗಳು ಇಲ್ಲಿ ನಮ್ಮ ಗಮನವನ್ನು ಸೆಳೆಯುತ್ತವೆ. ನಮ್ಮೊಲಕ್ಕೆ ಬಂದರೆ ತನ್ನಣ್ಣ ಕಲ್ಲಲ್ಲಿ ಹೊಡೆಯಬಹುದು. ಬಿಲ್ಲಿನಿಂದ ಹೊಡೆಯಬಹುದು. ಅಪ್ಪ ನೋಡಿದರೆ ಕಾಲನ್ನೇ ಮುರಿಯಬಹುದು. ಅಕ್ಕ ನೋಡಿದರೆ ಪುಕ್ಕವ ತರೆಯಬಹುದು. ಅವ್ವ ನೋಡಿದರೆ ಕಾರವ ಅರೆದು ಸಾರು ಮಾಡಿ ಉಣ್ಣಬಹುದೆಂಬ ಆತಂಕ ಹಾಗೂ ಆ ಪುಟ್ಟ ಹಕ್ಕಿಯ

ಬಗೆಗಿನ ಕಾಳಜಿ ಮಗುವಿನಲ್ಲಿದೆ. ಇದು ನಿಜಕ್ಕೂ ಮಗುವಿನ ಮನಸ್ಸಿನ ಸೃಜನಶೀಲ ಚಿಂತನೆಯನ್ನು ನಮಗೆ ತಿಳಿಸಿ ಕೊಡುತ್ತದೆ.

"ಹಪ್ಪಳ ಹಪ್ಪಳ ಏಕೆ ಒಣಗಲಿಲ್ಲ
ನಾನೇನ್ ಮಾಡ್ಲಿ ಬಿಸ್ಲು ಬರ್ಲಿಲ್ಲ
ಬಿಸ್ಲೆ ಬಿಸ್ಲೆ ಯಾಕ್ ಬರ್ಲಿಲ್ಲ
ನಾನೇನ್ ಮಾಡ್ಲಿ ಹುಲ್ಲು ಅಡ್ಡಬಂತು
ಹುಲ್ಲೇ ಹುಲ್ಲೆ ಯಾಕೆ ಅಡ್ಡ ಬಂದೆ
ನಾನೇನ್ ಮಾಡ್ಲಿ ದನ ಮೇಯ್ಲಿಲ್ಲ
ದನವೇ ದನವೇ ಯಾಕ್ ಮೇಯ್ಲಿಲ್ಲ
ನಾನೇನ್ ಮಾಡ್ಲಿ ಹುಡ್ಗ ಬಿಡ್ಲಿಲ್ಲ
ಹುಡ್ಗ ಹುಡ್ಗ ಯಾಕ್ ಬಿಡ್ಲಿಲ್ಲ
ನಾನೇನ್ ಮಾಡ್ಲಿ ಅಜ್ಜಿ ರೊಟ್ಟಿ ಕೊಡ್ಲಿಲ್ಲ
ಅಜ್ಜಿ ಅಜ್ಜಿ ಯಾಕೆ ರೊಟ್ಟಿ ಕೊಡ್ಲಿಲ್ಲ
ನಾನೇನ್ ಮಾಡ್ಲಿ ಅಜ್ಜ ರಾಗಿ ತರ್ಲಿಲ್ಲ
ಅಜ್ಜ ಅಜ್ಜ ಯಾಕೆ ರಾಗಿ ತರ್ಲಿಲ್ಲ
ನಾನೇನ್ ಮಾಡ್ಲಿ ಅಂಗಡಿ ಬೀಗ ಹಾಕಿತ್ತು
ಅಂಗಡಿ ಅಂಗಡಿ ಯಾಕೆ ಬೀಗ ತೆಗಿಲಿಲ್ಲ
ನಾನೇನ್ ಮಾಡ್ಲಿ ದೇವ್ರು ವರ ಕೊಡಲಿಲ್ಲ ।"[೬೬]

ಪ್ರಶ್ನೆ ಹಾಗೂ ಉತ್ತರದ ರೂಪದಲ್ಲಿ ಸಾಗುವ ಈ ಶಿಶುಗೀತೆಯಲ್ಲಿ ಒಂದರಿಂದ ಮತ್ತೊಂದಕ್ಕೆ ಸಹ ಸಂಬಂಧ ಹಾಗೂ ಕಾರಣಗಳಿರುವುದನ್ನು ಇಲ್ಲಿ ಸಂವಾದದ ರೀತಿಯಲ್ಲಿ ಹೇಳಲಾಗಿದೆ. ಹಪ್ಪಳ ಒಣಗದಿದ್ದಕ್ಕೆ ಅದು ಕೊಡುವ ಕಾರಣ ಬಿಸಿಲು ಬರಲಿಲ್ಲ ಎಂದು. ಬಿಸಿಲು ಬಾರದಿರಲು ಅದು ಕೊಡುವ ಕಾರಣ ಹುಲ್ಲು ಅಡ್ಡ ಬಂತೆಂದು. ಹೀಗೆ ಅವುಗಳ ಕ್ರಿಯೆ – ಪ್ರತಿಕ್ರಿಯೆಗಳು ಸಂವಾದದ ರೀತಿಯಲ್ಲಿ ಸಾಗುತ್ತವೆ. ಇವು ಮಕ್ಕಳ ಮನಸ್ಸಿಗೆ ಮುದ ಕೊಡುವ ಜೊತೆಗೆ ಅವರು ಭಾಷೆಯನ್ನು ಕಲಿಯಲು ಹಾಗೂ ಸ್ಪಷ್ಟ ಉಚ್ಚಾರಣೆಯನ್ನು ರೂಢಿಸಿಕೊಳ್ಳಲು ಸಹ ಈ ಶಿಶುಗೀತೆಗಳು ಸಹಾಯಕವಾಗಿವೆ.

೩. ಒಗಟಿನ ರೀತಿಯ ಶಿಶುಗೀತೆಗಳು

ಒಗಟಿನ ಸ್ವರೂಪದಲ್ಲಿ ಮಾತನಾಡುವುದೆಂದರೆ ಮಕ್ಕಳಿಗೆ ತುಂಬಾ ಇಷ್ಟ. ತಾನು ಹೇಳಬೇಕೆಂದಿರುವ ವಿಷಯವನ್ನು ಒಗಟಿನ ರೂಪದಲ್ಲಿ ಹೇಳುವ ಮೂಲಕ ಇತರರಿಗೆ ಮಾಹಿತಿಯನ್ನು ತಿಳಿಸಲು ಬಯಸುತ್ತಾರೆ. ಏಕೆಂದರೆ ಮಕ್ಕಳ ಮನಸ್ಸು ಯಾವಾಗಲೂ ಕುತೂಹಲದಿಂದ

ತುಂಬಿರುವಂತಹದ್ದು. ಆ ಕಾರಣವಾಗಿ ಈ ರೀತಿಯ ಶಿಶುಗೀತೆಗಳು ಒಗಟಿನ ರೀತಿಯಲ್ಲಿದ್ದು, ಮಕ್ಕಳು ಇವುಗಳನ್ನು ಬಿಡಿಸುವ ಮೂಲಕ ಉತ್ತರವನ್ನು ಹೇಳಿ ನಲಿಯುತ್ತಾರೆ.

"ಉಳ್ಳಾವಳ್ಳಿ ತಮಟೆ
ಎದ್ದೆದ್ ಆಳು
ಆಳ್‌ಮಕ್ಳು ತಾಯಿ
ಗೌರಿ ತಾಯಿ
ಗಂಗೆ ತಾಯಿ
ಚಕ್ಕಿ ತಂದ
ಚಕ್ನೆ ಕೂತ್ಕಂಡ ।"[೩೬]

ಉಳ್ಳಾವಳ್ಳಿ ತಮಟೆ ಎಂದು ಪ್ರಾರಂಭವಾಗುವ ಈ ಶಿಶುಗೀತೆಯಲ್ಲಿ ಮಕ್ಕಳು ಒಗಟೊಂದನ್ನು ಬಿಡಿಸಿ ಹೇಳುವಂತೆ ತನ್ನ ಇತರ ಸ್ನೇಹಿತರನ್ನು ಆಹ್ವಾನಿಸಿ, ಅವರಿಂದ ಉತ್ತರವನ್ನು ಪಡೆಯುತ್ತಾರೆ.

"ಒಕ್ಕಚಿ ಕಾಕ
ಲಾಟಚಿ ಲಾಕ
ಮೂಗುಚಿ ಲಂಬಿ
ನಾಮಕ ನಂದ
ಐಯ್ಯಯ್ಯಪ್ಪನ ಜೋಲಿ
ಆರಮುಕ್ಕನ್ ದಾಳ
ಎಳುವಾ ಲಿಂಗ
ಎಟ್ ನನ್ ಗೊಟ್ಟಿ
ಡಮ್ಮನ್ ಡಸ್ಕು
ಮುತ್ತಿನ ಪಳಗು
ಮೈಸೂರ್ ರಾಜ
ನಾನೇ ಜಟ್ಟಿ ।"[೩೭]

ಪ್ರಾಸದ ಮೂಲಕವೇ ಉತ್ತರ ಹುಡುಕುವ ಒಗಟಿನ ಗೀತೆಯಿದು. ಮೈಸೂರು ರಾಜ, ಜಟ್ಟಿ, ಎಳುವಾ ಲಿಂಗ ಮೊದಲಾದ ವಿವರಗಳ ಮೂಲಕ ಈ ಗೀತೆಯು ಮಕ್ಕಳನ್ನು ಉತ್ತರಿಸುವಂತೆ ಪ್ರೇರೇಪಿಸುತ್ತ ಅವರ ಉಲ್ಲಾಸದ ಕ್ಷಣಗಳನ್ನು ಮುಂದುವರೆಸುತ್ತದೆ.

"ಗುಂಚಕಿ ಗುಂಚಕಿ ಗುರ‍್ರಂತು
ನನ್ ಜೀವ ದಡ್ಡಂತು
ಹಂದಿ ಮನೆ ಡಬ್ಬಂತು

ಆಡ್ ಮೆಯ್ಯೊ ಸೊಪ್ಪು

ಹಣೆಗಿಕ್ಕೊ ಕಪ್ಪು”[೩೮]

ಈ ಶಿಶುಗೀತೆಯು ಸಹ ಮೇಲಿನ ಶಿಶುಗೀತೆಯಂತೆಯೆ ಅಂತ್ಯ ಪ್ರಾಸದ ಮೂಲಕ ಸಾಗುತ್ತ ಮಕ್ಕಳಲ್ಲಿ ಉತ್ತರಿಸುವಂತೆ ಪ್ರೇರೇಪಿಸುತ್ತದೆ. ಈ ರೀತಿಯ ಪ್ರಶ್ನೆ ಮತ್ತು ಉತ್ತರಗಳೆಂದರೆ ಮಕ್ಕಳಿಗೆ ಅಚ್ಚು ಮೆಚ್ಚು. ಆ ಕಾರಣವಾಗಿಯೆ ಮಕ್ಕಳು ಇಂತಹ ಒಗಟಿನ ರೀತಿಯ ಶಿಶುಗೀತೆಗಳನ್ನು ನೆನಪಿನಲ್ಲಿಟ್ಟುಕೊಂಡು, ಪ್ರಯೋಗಿಸುತ್ತ ಮುಂದುವರೆಸಿದ್ದಾರೆ.

೪. ಅಶ್ಲೀಲ ಶಿಶುಗೀತೆಗಳು

ಅಶ್ಲೀಲ ಶಿಶುಗೀತೆಗಳನ್ನು 'ಲಘು ಅಶ್ಲೀಲ' ಹಾಗೂ 'ಗಂಭೀರ ಅಶ್ಲೀಲ' ಶಿಶುಗೀತೆಗಳೆಂದು ವಿಂಗಡಿಸಿಕೊಳ್ಳಬಹುದು. ಲಘು ಅಶ್ಲೀಲ ಶಿಶುಗೀತೆಗಳನ್ನು ಸಣ್ಣ ಸಣ್ಣ ಪುಟಾಣಿ ಮಕ್ಕಳು ಹಾಡಿದರೆ, ಗಂಭೀರ ಅಶ್ಲೀಲ ಶಿಶುಗೀತೆಗಳನ್ನು ಸ್ವಲ್ಪ ಬೆಳೆದ ಮಕ್ಕಳು ಹೇಳಿ ಆನಂದಿಸುತ್ತಾರೆ. ಗಂಭೀರ ಶಿಶುಗೀತೆಗಳು ಸಾರ್ವಜನಿಕವಾಗಿ ಬಳಸಲ್ಪಡುವಂತಹವಲ್ಲವಾಗಿದ್ದು, ಅವುಗಳು ಸಾಮಾನ್ಯವಾಗಿ ಹಿರಿಯ ಮಕ್ಕಳಿಂದ, ವಯಸ್ಕರಿಂದ ಬಳುವಳಿಯಾಗಿ ಬಂದಿರುವಂತಹವಾಗಿವೆ.

“ಏನಿದು ರಮಣಿ

ತಿಗದಲಿ ಸಗಣಿ

ಏರಿ ಮೇಲೆ ಬೇವಿನ ಸೊಪ್ಪು ನೋಡಬಾರದು.

ಅತ್ತೆಕುಟ್ಟೆ ಮೂರು ಮಾತು ಕೇಳಬಾರದು

ಅಜ್ಜಿಯನ್ನು ಪಜ್ಜಿ ಮಾಡಿ

ತಾತಂಗೆ ತಾಳಿಕಟ್ಟಿ

ಡುಂ ಡುಂ ಡುಂ ।”[೩೯]

ಲಘು ಅಶ್ಲೀಲಕ್ಕೆ ಉದಾಹರಣೆಯಾಗಿ ಕಂಡುಬರುವ ಈ ಶಿಶುಗೀತೆಯು ಚಿಕ್ಕ ಮಕ್ಕಳು ಬಳಸುವ ಶಿಶುಗೀತೆಯಾಗಿದೆ. ಮೊದಲ ಎರಡು ಸಾಲುಗಳು ಅಶೀಲದ ರೀತಿ ಕಂಡುಬಂದರೂ, ನಂತರ ಮೂರು ಮತ್ತು ನಾಲ್ಕನೆಯ ಸಾಲುಗಳು ಗಂಭೀರವಾದ ಆಲೋಚನೆಗೆ ನಮ್ಮನ್ನು ತೊಡಗಿಸುತ್ತವೆ. ಜೊತೆಗೆ ಇವು ನಮ್ಮ ಸಾಂಸ್ಕೃತಿಕ ಪರಿಸರದಲ್ಲಿ ಜರುಗುವ ಹಲವು ಆಚರಣೆಗಳನ್ನು ಗಮನಕ್ಕೆ ತಂದುಕೊಡುತ್ತವೆ. 'ಏರಿ ಮೇಲೆ ಬೇವಿನ ಸೊಪ್ಪು ನೋಡಬಾರದು' ಎಂಬ ಸಾಲು ಕೆರೆಯಲ್ಲಿ ನೀರು ಬಂದ ಮೇಲೆ ಹಾಗೂ ಬರದಿರುವ ಸಂದರ್ಭದಲ್ಲಿ ನರಬಲಿ ಹಾಗೂ ಪ್ರಾಣಿ ಬಲಿಗಳ ಹಿನ್ನೆಲೆಯಲ್ಲಿ ನಡೆದಿರುವ ಪೂಜೆ ಪುನಸ್ಕಾರಗಳ ಕ್ರಿಯೆಯನ್ನು ನೆನಪಿಸುತ್ತದೆ. ಅದೇ ರೀತಿ 'ಅತ್ತೆ ಕುಟ್ಟೆ ಮೂರು ಮಾತು ಕೇಳಬಾರದು' ಎಂಬುದು ಅಳಿಯನಾದವನಿಗೆ ಸ್ವಾಭಿಮಾನ ಹಾಗೂ ಆತ್ಮ ಗೌರವಗಳಿರಬೇಕು. ಅತ್ತೆಯ ಊಳಿಗದಲ್ಲಿದ್ದರೆ ಆಕೆಯ ಕಾಲ ಕಸವಾಗುವನು ಎಂಬ ಎಚ್ಚರಿಕೆಯ ಮಾತುಗಳಾಗಿಯು ಕಂಡುಬರುತ್ತವೆ.

"ಒಂದೊಂದ್ ಅವರೆ
ಚಂದ್ರದ ಬೇಳೆ
ಗೊಲ್ಲಾರಜ್ಜಿ
ಏನೇನ್ ಹೆತ್ಲು
ಆನೆ ಹೆತ್ಲು
ಆನೆ ತಿಕ್ಕೆ
(ಆನೆ ಬಾಯ್ಗೆ)
ಬೆಣ್ಣಿಲ್ಲ
ತುಪ್ಪಿಲ್ಲ
ಆಯ್ತಾರ್ ಸಂತೆಗೋಗೋ ದಾರೆಲ್ಲಪ್ಪೋ
(ಹಾಸನದ ಸಂತೆಗೋಗೆ ದಾರೆಲ್ಲಿ)
ಇಲ್ಲಿ
ಇಲ್ಲಾಸಿ ಇಲ್ಲಾಸಿ ।"[೪೦]

ಸಣ್ಣ ಮಕ್ಕಳಿಗೆ ಕಚಗುಳಿ ಇಡುತ್ತ ಹೇಳುವ ಶಿಶುಗೀತೆಯಿದು. ಹಾಸನದ ಸಂತೆಯ ದಾರಿಯನ್ನು ಕೇಳಿ ತಿಳಿಯುವ ಸಮಯದಲ್ಲಿ ಮೂಡಿರಬಹುದಾದ ಶಿಶುಗೀತೆಯಿದು. ಗೊಲ್ಲಾರಜ್ಜಿ ಹೆತ್ತ ಆನೆ, ಆ ಆನೆ ಬೆಣ್ಣೆ ತುಪ್ಪ ತರಲು ಹಾಸನದ ಸಂತೆಗೆ ಹೊರಡುವ ವಿವರಗಳು ಮಕ್ಕಳನ್ನು ರಂಜಿಸುತ್ತವೆ. ಅಲ್ಲದೆ ಪಶುಪಾಲನೆಯನ್ನೆ ಪ್ರಧಾನ ಕಸುಬನ್ನಾಗಿಸಿಕೊಂಡು ಬದುಕುತ್ತಿರುವ ಗೊಲ್ಲ ಸಮುದಾಯದ ಅಜ್ಜಿಗೆ ಸಂಬಂಧಿಸಿದ ವಿವರಗಳು ಇಲ್ಲಿದ್ದು, ಇಲ್ಲಿನ ಬೆಣ್ಣೆ, ತುಪ್ಪ, ಆಯ್ತಾರ್ ಸಂತೆ, ಹಾಸನ ಇವೆಲ್ಲವೂ ಕೂಡ ಗೊಲ್ಲ ಸಮುದಾಯದ ಸಾಂಸ್ಕೃತಿಕ ಬದುಕಿನ ಮೇಲೆ ಬೆಳಕನ್ನು ಚೆಲ್ಲುತ್ತವೆ.

'ಬೆಲ್ ಹೊಡಿತದೆ
ಹಲ್ ಮುರಿತದೆ
ಪೂಜಾರಪ್ಪನ್ ಚಡ್ಡೀಲಿ
ದೇವ್ರ್ ಕುಣೀತದೆ'

ದೇವರ ಗುಡಿಯ ಪೂಜಾರಿಯನ್ನು ಹಾಗೂ ಆತನ ಕಾಮುಕ ನೋಟದ ಮನಸ್ಥಿತಿಯನ್ನು ಕುರಿತು ಕಟ್ಟಿರಬಹುದಾದ ಶಿಶುಗೀತೆಯಿದು. ದೇವಾಲಯಕ್ಕೆ ಬರುವ ಹೆಣ್ಣು ಮಕ್ಕಳನ್ನು ತನ್ನ ಕಾಮುಕ ಕಣ್ಣುಗಳಿಂದ ಮೋಹಿಸಿ ಆಸೆಪಡುವ ಮನಸ್ಥಿತಿಯ ಪೂಜಾರಿಯನ್ನು ರೇಗಿಸುವ ಕಾರಣವಾಗಿ ಸೃಷ್ಟಿಯಾಗಿರುವ ರಚನೆಗಳಾಗಿವೆ.

'ಲೋಕಿ ತಮ್ಮ ಲೋಕಿ ತಮ್ಮ
ಏನು ಮಾಡಿದ

ಕೋಳಿ ತಿಕ್ಕೆ ಕೈ ಎಟ್ಟಿ
ಮೂಸಿ ನೋಡಿದ'

ಲಘು ಅಶ್ಲೀಲ ಶಿಶುಗೀತೆಯಾದ ಇದು ಚಿಕ್ಕ ವಯಸ್ಸಿನ ಮಕ್ಕಳ ತುಂಟಾಟಿಕೆಯನ್ನು ತಿಳಿಸುತ್ತದೆ. ಚಿಕ್ಕ ಮಕ್ಕಳು ಸುಮ್ಮನೆ ಕೂರದೆ ಏನನ್ನಾದರೂ ಮಾಡುವ ತರಲೆ ಕೆಲಸಗಳನ್ನು ಇದು ನೆನಪಿಸುತ್ತದೆ.

'ಸರೋಜಕ್ಕ ಸರೋಜಕ್ಕ ಸಂಪತ್ತು
ಸರೋಜಿ ಗಂಡ ಡ್ರೈವರ್ರು
ಅಚ್ಚೇರಕ್ಕಿ ಬರಾಬರಿ
ಐನೋರ್ ತಿಕ್ಕೊಂದ್ ಇಲಿಮರಿ'

ಸರೋಜ ಎಂಬ ಹೆಸರಿನ ಹೆಣ್ಣು ಮಗಳೊಬ್ಬಳನ್ನು ರೇಗಿಸುವ ಕಾರಣವಾಗಿ ಹುಟ್ಟಿಕೊಂಡ ಈ ಶಿಶುಗೀತೆಯು ಸಹ ಲಘು ಅಶ್ಲೀಲ ಶಿಶುಗೀತೆಯ ಗುಂಪಿಗೆ ಸೇರುತ್ತದೆ.

"ಹೆಣ್ಣೊಬ್ಬಳು ಗಂಡ ಅಂತ ಮಾಡ್ಕೊಂಡಿರ್ತಾಳೆ
ಆದ್ರೂ ಸಿಟಿಲೊಬ್ಬನ್ ನೋಡ್ಕಂಡಿರ್ತಾಳೆ
ಒಂದೆರಡು ದಿನ ಮನೆಲಿರದ್ ಹೆಚ್ ಅನ್ತಾಳೆ
ಯಾವೂರ್‌ಗೋಯಿದ್ದೆ ಅಂದ್ರೆ ಬೆಂಗಳೂರ್ ಅನ್ತಾಳೆ
ಕಳ್ಳಿಯಂಗೆ ಹಳ್ಳಿಗೆ ಬಂದು ಹರಟೆ ಹೊಡಿತಾಳೆ"[೧೦]

ಇದುವರೆಗಿನ ಶಿಶುಗೀತೆಗಳು ಲಘು ಅಶ್ಲೀಲ ಶಿಶುಗೀತೆಗಳಾದರೆ ಈ ಗೀತೆಯು ಗಂಭೀರ ಅಶ್ಲೀಲ ಗೀತೆಯಾಗಿದೆ. ಅಕ್ರಮ ಸಂಬಂಧವನ್ನು ಇಟ್ಟುಕೊಂಡ ಹೆಣ್ಣೊಬ್ಬಳ ವಿವರವನ್ನು ಈ ಶಿಶುಗೀತೆಯು ಕಟ್ಟಿಕೊಡುತ್ತದೆ. ಮದುವೆಯಾಗಿ ಗಂಡನಿದ್ದರೂ ಸಹ ನಗರದಲ್ಲಿ ಒಬ್ಬನೊಂದಿಗೆ ಅಕ್ರಮ ಸಂಬಂಧವನ್ನು ಇಟ್ಟುಕೊಂಡಿರುವ ಆಕೆಯ ವಿವರಗಳು ಇದರಿಂದ ತಿಳಿದುಬರುತ್ತವೆ. ಇದು ಸಮಾಜದ ನಡುವೆ ನಡೆಯುವ ಹಲವು ಅಕ್ರಮ ಚಟುವಟಿಕೆಗಳ ಸಂಬಂಧವನ್ನು ನೆನಪಿಗೆ ತರುತ್ತದೆ.

೫. ಜರಿಯುವ ಅಥವಾ ಹಾಸ್ಯ ಮಾಡುವ ಶಿಶುಗೀತೆಗಳು

ಜರಿಯುವ ಶಿಶುಗೀತೆಗಳು ಸಾಮಾನ್ಯವಾಗಿ ಮಕ್ಕಳು ಪರಸ್ಪರ ಜರಿಯುವಲ್ಲಿ ಬಳಕೆಗೊಳ್ಳುತ್ತವೆ. ಜೊತೆಗೆ ಕೆಲವೊಮ್ಮೆ ತಮ್ಮನ್ನೇ ತಾವು ಜರಿದುಕೊಳ್ಳುವ ಸಮಯದಲ್ಲಿಯೂ ಹೇಳಲ್ಪಡುತ್ತವೆ. ಪ್ರಾಸಬದ್ಧವಾಗಿ ಸಾಗುವ ಈ ಶಿಶುಗೀತೆಗಳ ಪ್ರಮುಖ ಉದ್ದೇಶ ಹಾಸ್ಯ ಅಥವಾ ನಗು ತರಿಸುವಂತಹದ್ದು. ಇಲ್ಲಿ ಅರ್ಥಕ್ಕಿಂತ, ಪ್ರಾಸಕ್ಕೆ ಹೆಚ್ಚಿನ ಮಹತ್ವ ಹಾಗೂ ಪ್ರಾಶಸ್ತ್ಯವಿದ್ದು, ಮಕ್ಕಳ ನಡುವೆ ಬಳಕೆಯಲ್ಲಿವೆ. ಹಾಗೆಂದು ಇವುಗಳು ಅರ್ಥ ಸಂಪತ್ತನ್ನು ಹೊಂದಿರುವುದಿಲ್ಲ ಎನ್ನಲಾಗುವುದಿಲ್ಲ. ಆದರೆ ಪ್ರಾಸದ ಕಡೆ ಹೆಚ್ಚು ಗಮನವಿರುತ್ತದೆ.

'ಕರಿಯಾ ಕರಿಯಾ
ಕಾಲ್ ಮುರಿಯ
ಕಂಡೋರ್ ಮನೆ
ಬೀಗ ಮುರಿಯ'.

ಈ ಗೀತೆಯಲ್ಲಿ ಕರಿಯ ಎಂಬ ಹೆಸರಿನ ಹುಡುಗನನ್ನು ಹಾಸ್ಯ ಮಾಡುತ್ತಿರುವಂತೆ, ಗೇಲಿ ಮಾಡುತ್ತಿರುವಂತೆ ಕಂಡುಬರುತ್ತದೆ. ಆದರೆ ಈ ಗೀತೆಯು ನಮ್ಮ ಸಮಾಜದಲ್ಲಿ ಚಾಲ್ತಿಯಲ್ಲಿರುವ ವರ್ಣಾಶ್ರಮ ಹಾಗೂ ವರ್ಗ ಪದ್ಧತಿಯನ್ನು ಗಮನಕ್ಕೆ ತಂದುಕೊಡುತ್ತದೆ. ಅಲ್ಲದೆ ಕಪ್ಪಗಿರುವವರೆಲ್ಲ ಕಳ್ಳರು, ಕೊಲೆಗಡುಕರು, ಸಂಸ್ಕಾರ, ಆಚಾರ-ವಿಚಾರ ಹೀನರು ಎಂಬ ಕಲ್ಪನೆ ಜನರಲ್ಲಿದ್ದಿತು. ಈ ಅಂಶವನ್ನು ಇಲ್ಲಿನ 'ಕಾಲ್ಮುರಿಯ' ಹಾಗೂ 'ಬೀಗ ಮುರಿಯ' ಎಂಬ ಪದಗಳು ಸಂಕೇತಿಸುತ್ತವೆ. ತಳವರ್ಗದವರನ್ನು ಹಾಗೂ ಕಪ್ಪಾಗಿರುವ ಜನಸಮುದಾಯಗಳನ್ನು ನಮ್ಮ ಸಾಮಾಜಿಕ ವ್ಯವಸ್ಥೆಗಳು ನಡೆಸಿಕೊಳ್ಳುತ್ತಿದ್ದ ಸಂಗತಿಗಳು ಹಾಗೂ ನಮ್ಮ ಸಾಂಸ್ಕೃತಿಕ ಪರಿಸರ, ವಾತಾವರಣಗಳು ಹೇಗಿದ್ದವು ಎಂಬ ವಿಚಾರಗಳು ಸಹ ಇದರಿಂದ ತಿಳಿಯುತ್ತವೆ.

"ಅಕ್ಕ ಅಕ್ಕ ಗಂಡು ಬಂದೈತೆ
ಕಾಗೆಗಿಂತ ಕರ್‍ರಗೈತೆ
ಕುರಂಬಳೆಗಿಂತ ಕುಳ್ಳಗೈತೆ
ಅಕ್ಕ ಅಕ್ಕ ಗಂಡು ಬಂದೈತೆ"[೪೨]

ಈ ಗೀತೆಯಲ್ಲಿ ಅಕ್ಕನನ್ನು ನೋಡಲು ಬಂದ ಗಂಡನ್ನು ಕುರಿತು ಜರಿಯುವ ವಿವರಗಳಿವೆ. ಗಂಡಿನ ರೂಪ ಹಾಗೂ ಆತನ ಸೌಂದರ್ಯವನ್ನು ವಿಡಂಬಿಸುವ ಮೂಲಕ ತನ್ನ ಅಕ್ಕನನ್ನು ಛೇಡಿಸಿ ಅವಳನ್ನು ಸಿಟ್ಟಿಗೇಳಿಸಬೇಕೆಂಬ ಮನೋಭಾವದ ಗುಣ ಇಲ್ಲಿನ ಮಕ್ಕಳಲ್ಲಿರುವುದು ತಿಳಿಯುತ್ತದೆ. ಅಲ್ಲದೆ ಇಲ್ಲಿ ಬಳಸಿರುವ ಕಾಗೆ, ಕಪ್ಪು, ಕುರಂಬಳೆ ಹಾಗೂ ಕುಳ್ಳಗೈತೆ ಎಂಬ ರೂಪಕಗಳು ಮಕ್ಕಳ ಅದ್ಭುತವಾದ ಆಲೋಚನಾ ಕ್ರಮಕ್ಕೆ ಸಾಕ್ಷಿಯಾಗಿವೆ. ಅಲ್ಲದೆ ಇಲ್ಲಿನ ಕಾಗೆ, ಕಪ್ಪು, ಕುರಂಬಳೆಗಳು ನಮ್ಮ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ತನ್ನದೇ ಆದ ಪಾತ್ರವನ್ನು ವಹಿಸಿವೆ. ಮಾನವನ ಜೀವನದಲ್ಲಿನ ಶುಭ ಹಾಗೂ ಅಶುಭದಂತಹ ಯಾವುದೇ ಕಾರ್ಯಗಳಾದರೂ ಸಹ ಇವುಗಳಿಲ್ಲದೆ ಆ ಕೆಲಸ ಕಾರ್ಯಗಳು ಪೂರ್ಣಗೊಳ್ಳುವುದಿಲ್ಲ.

"ಆಮನೆ ಈಮನೆ ಸಂದಿ
ನಮ್ ಕರ ಕಟ್ಟದೊಂದ್ ಗೊಂದಿ
ಸಂತೇಲಿ ಮಾರೋದು ಶುಂಠಿ
ನಮ್ಮೂರಲ್ಲೊಬ್ಬು ಕುಂಟಿ
ಅವಳ್ಗೂ ನಂಗೂ ಜಂಟಿ

ಸಂತೇಲಿ ಮಾರೋದ್ ಸಂಬಾರ
ನಮ್ಮತ್ತೆ ಗಂಡ ಕುಂಬಾರ
ಸಂತೇಲಿ ಮಾರೋದ್ ಬೀಡಿ
ನಮ್ಮೂರಲ್ಲೊಬ್ಬು ಬೋಡಿ
ಅವಳ್ಗೂ ನಂಗೂ ಜೋಡಿ”[೪೩]

ಈ ಶಿಶುಗೀತೆಯು ಅಂತ್ಯಪ್ರಾಸದ ಮೂಲಕ ಅಲ್ಲಿನ ಪರಿಸರ ಹಾಗೂ ಅಲ್ಲಿ ವಾಸಿಸುವ ವ್ಯಕ್ತಿಗಳ ದೈಹಿಕ ಊನಗಳನ್ನು ಹಾಸ್ಯ ಮಾಡುತ್ತದೆ. ಇಲ್ಲಿನ ಹಾಸ್ಯ ಹಾಗೂ ಜರಿಯುವಿಕೆಗಳು ಈ ರೀತಿಯ ಅಂಗವೈಕಲ್ಯದ ವ್ಯಕ್ತಿಗಳನ್ನು ಅವಹೇಳನ ಮಾಡದೆ ಕೇವಲ ರಂಜಿಸುವ ಉದ್ದೇಶವನ್ನು ಮಾತ್ರ ಹೊಂದಿರುತ್ತವೆ. ಯಾರ ಮನಸ್ಸಿಗೂ ನೋವುಂಟುಮಾಡುವ ಉದ್ದೇಶ ಈ ಜರಿಯುವ ಶಿಶುಗೀತೆಗಳಲ್ಲಿ ಇರುವುದಿಲ್ಲ.

‘ಕತೆ ಕತೆ ಕಾರುಂಡ
ದೀಪದ ಮನೆ ನಂಜುಂಡ
ಕತೆ ಕೇಳ್ದವನು ಜೇನುಂಡ
ಕೇಳ್ದೆಯಿದ್ದವರು ಇಲಿ ಸುಂಡ’

ಈ ಶಿಶುಗೀತೆಯು ಹಳ್ಳಿಗಳಲ್ಲಿ ಜರುಗುವ ಹರಿಕಥೆಗಳನ್ನು ಕುರಿತ ವಿವರಗಳನ್ನು ತಿಳಿಸುತ್ತದೆ. ಈ ಶಿಶುಗೀತೆಯಿಂದ ಮಕ್ಕಳಲ್ಲಿ ಕತೆ ಕೇಳದವನು ಇಲಿಸುಂಡವಾಗುವ ಶಾಪ ಹೊಂದುವನು ಎಂಬ ನಂಬಿಕೆಯನ್ನು ಹೊಂದಿರುವುದು ಕಂಡುಬರುತ್ತದೆ. ಅದರಂತೆಯೆ ಕತೆಯನ್ನು ಕೇಳಿದವರಿಗೆ ಜೇನುಂಡಂತಹ ಅನುಭವವಾಗುವುದನ್ನು ಸಹ ಈ ಶಿಶುಗೀತೆಯು ತಿಳಿಸುತ್ತದೆ. ಪ್ರಮುಖವಾಗಿ ಇಲ್ಲಿ ನಾವು ಮಾಡುವ ಕ್ರಿಯಾಪಕ್ರಿಯೆಗಳ ಕಾರಣವಾಗಿ ಅದರಿಂದ ಒದಗುವ ಒಳಿತು ಹಾಗೂ ಕೆಡುಕುಗಳಂತಹ ಪರಿಣಾಮಗಳ ಫಲಿತಾಂಶಗಳನ್ನು ತಿಳಿಸಿಕೊಡುತ್ತದೆ.

“ಕುಂಟ ಕುಂಟ ಕೂರಿಗೆ
ನೆಂಟರಮನೆ ಹೋಳಿಗೆ
ಕಬ್ಬಿನ ಗದ್ದೆಗೆ ನುಗ್ಗಿದ್ದ
ಕಾಲ್‌ಮುರಿಯಂಗೆ ಹೊಡ್ಡಿದ್ರು”[೪೪]

ಕುಂಟನ ಕಾಲಿಗೆ ಆ ಗತಿ ಬರಲು ಕಾರಣ ಏನು? ಎಂಬುದನ್ನು ಹಾಸ್ಯ ಮಾಡುತ್ತ ಹೇಳುವ ಮಕ್ಕಳು, ಕಬ್ಬಿನ ಗದ್ದೆಗೆ ನುಗ್ಗಿ ಕದ್ದು ಕಬ್ಬು ಮುರಿದ ಕಾರಣವಾಗಿ ಆತನಿಗೆ ಕಾಲುಮುರಿಯುವಂತೆ ಹೊಡೆದ ವಿವರಗಳನ್ನು ಎಲ್ಲರೆದುರು ಹೇಳುತ್ತ ಆತನನ್ನು ಜರಿದು ಹಾಸ್ಯ ಮಾಡುತ್ತಾರೆ. ಈ ರೀತಿಯ ಕಳ್ಳತನಗಳು ಬಾಲ್ಯದ ದಿನಗಳಲ್ಲಿ ಪ್ರತಿಯೊಬ್ಬರು ನಡೆಸಿರುವ ತುಂಟಾಟಿಕೆಗಳಾಗಿ ನಮ್ಮ ಸ್ಮೃತಿಪಟಲದಲ್ಲಿ ನೆಲೆಸಿವೆ.

'ಗಂಗಾಧರ
ಗೌರೀವರ
ನಿನ್ದೆಸೆಯಿಂದ
ಸತ್ತೋಯ್ತು
ನಮ್ಮ ಎಮ್ಮೆಕರ'

ಗಂಗಾಧರ ಎಂಬ ಹೆಸರಿನ ಹುಡುಗನನ್ನು ರೇಗಿಸುವ ಸಲುವಾಗಿ ಹೇಳುವ ಈ ಗೀತೆಯು ಗಂಗಾಧರನ ದೆಸೆಯಿಂದ ನನಮ್ಮ ಮನೆಯ ಎಮ್ಮೆಕರ ಸತ್ತು ಹೋಯ್ತೆಂದು ಹೇಳಿ ಆತನನ್ನು ರೇಗಿಸುತ್ತ, ಸಿಟ್ಟಿಗೇಳಿಸುವುದು ಕಂಡುಬರುತ್ತದೆ.

'ಉಂಡಾಡಿ ಗುಂಡ
ಎಂಟು ಲಾಡು ತಿಂದ
ಹೊಟ್ಟೆ ನೋವು ಎಂದ
ಅಮ್ಮನ ಹತ್ತಿರ ಬಂದ
ಕಣ್ಣೀರ್ ತಂದ
ಎಣ್ಣೆ ಹಚ್ಚು ಅಂದ
ಅಪ್ಪ ಕೋಲು ತಂದ
ಕೈಕಟ್ ಬಾಯ್ ಮುಚ್ ಅಂದ'

ಗುಂಡ ಎಂಬ ಹೆಸರಿನ ಹುಡುಗ ಲಾಡನ್ನು ತಿಂದು ಹೊಟ್ಟೆ ನೋವು ಬರಿಸಿಕೊಂಡ ಕಾರಣವಾಗಿ ತಂದೆಯಿಂದ ಹೇಗೆ ಶಿಕ್ಷೆಗೊಳಗಾಗಬೇಕಾಗಿ ಬಂತೆಂಬ ಹಾಸ್ಯದ ಸಂದರ್ಭವನ್ನು ಮಕ್ಕಳು ಹಾಡಿ ನಲಿಯುತ್ತಾರೆ.

'ಗೇರ್ ಗೇರ್ ಮಂಗಣ್ಣ
ಕಡ್ಲೆಕಾಯ್ ನುಂಗಣ್ಣ
ನಿನ್ ತರಾನೆ ಆಡ್ತಾನೆ
ನಮ್ ಪಕ್ಕದ್ಮನೆ ರಂಗಣ್ಣ'

ಪಕ್ಕದ ಮನೆಯ ರಂಗಣ್ಣ ಎಂಬುವವನನ್ನು ಹಾಸ್ಯಮಾಡುವ ಈ ಶಿಶುಗೀತೆಯು ಮಂಗನ ರೀತಿಯ ಬುದ್ಧಿಯವನು ಎಂದು ಆತನನ್ನು ಹಾಸ್ಯ ಮಾಡುತ್ತದೆ.

"ಬೇಲಿ ಮೇಲೆ ಮಡಗಪ್ಪ
ದೊಡ್ಡಪ್ಪ ದೇವ್ರಗುಡಿ
ಚಿಕ್ಕಪ್ಪ ಗಿರಿಮಡಿ

ನಮ್ಮಪ್ಪ ಶೇಖ್‌ದಾರ
ನಮ್ಮವ್ವ ತಾಳೆಗರಿ
ನನ್ ಹೆಸ್ರು ಕೋಳಿಪಿಳ್ಳೆ"[೪೫]

ತನ್ನನ್ನು ಹಾಗೂ ತನ್ನ ಕುಟುಂಬದವರನ್ನು ಜರಿದುಕೊಳ್ಳುವ ಗೀತೆ ಇದು. ತನ್ನ ದೊಡ್ಡಪ್ಪ ದೇವರ ಗುಡಿಯಂತಿದ್ದರೆ, ಚಿಕ್ಕಪ್ಪ ಗಿರಿಮಡಿಯಂತಿರುವವನು. ತನ್ನ ತಂದೆ ಶೇಖ್‌ದಾರನಾದರೆ, ತಾಯಿ ತಾಳೆಗರಿಯಂತಹವಳು. ಆದರೆ ನಾನು ಮಾತ್ರ ಕೋಳಿಪಿಳ್ಳೆಯಂತಿರುವವನು ಎಂದು ತನ್ನನ್ನು ತಾನೇ ಜರಿದುಕೊಳ್ಳಲಾಗುತ್ತದೆ. ಇವೆಲ್ಲ ಹಾಸ್ಯ ಹಾಗೂ ಮನರಂಜನೆಗಾಗಿಯೆ ರಚಿತವಾಗಿರುವಂತಹವು. ಇದನ್ನು ಹೊರತುಪಡಿಸಿ ಬೇರೆಯ ಉದ್ದೇಶಗಳಿರುವುದಿಲ್ಲ.

"ಜಗ್ಗಣಕ ಜಗ್ಗಣಕ ಜಯ್ಯಮ್ನೋರೆ
ಗಂಡ ಬರೊ ಸದ್ದು ಕೇಳಿ ನೀರಿಗೋಗೋರೆ
ಜಗ್ಗಣಕ ಜಗ್ಗಣಕ ಜಯ್ಯಮ್ನೋರೆ
ಗಂಡ್ ಬರೋ ಸದ್ದು ಕೇಳಿ ರಾಗಿ ಬೀಸೋರೆ
ಜಗ್ಗಣಕ ಜಗ್ಗಣಕ ಜಯ್ಯಮ್ನೋರೆ
ನೀಲಗಿರಿ ಬೆಟ್ಟದ ಮೇಲೆ ಗುಂಡಮ್ಮೋರೆ
ಹೋಗಬೇಕು ಹೋಗಬೇಕು ಬೆಂಗಳೂರಿಗೆ
ತರಬೇಕು ತರಬೇಕು ಮುದಿ ಕುರಿಯ
ಕುಯ್ಯಬೇಕು ಕುಯ್ಯಬೇಕು ಮಂಡಚೂರಿಲ್ಲಿ
ಬೇಸಬೇಕು ಬೇಸಬೇಕು ದದ್ದು ಮಡಿಕೇಲಿ
ತಿನ್ನಬೇಕು ತಿನ್ನಬೇಕು ಅಡಕೆ ಪಟ್ಟೇಲಿ।"[೪೬]

ಗಂಡ ಎದುರಿಗಿದ್ದಾಗ ತೋರಿಕೆಗಾಗಿ ಕೆಲಸ ಮಾಡಿ ಆತನಿಲ್ಲದಿರುವಾಗ ಸೋಮಾರಿಯಾಗಿ ಕುಳಿತಿರುವ ಗುಣವುಳ್ಳ ಹೆಣ್ಣೊಬ್ಬಳನ್ನು ಛೇಡಿಸುವ ಕಾರಣವಾಗಿ ಹೇಳುವ ಗೀತೆ ಇದು. ಗಂಡ ಬರುವ ಸದ್ದನ್ನು ಕೇಳಿ ನೀರನ್ನು ತರಲು ಹೋಗುವ, ಹಾಗೆಯೆ ರಾಗಿಯನ್ನು ಬೀಸಲು ಹೋಗುವ ಹೆಣ್ಣನ್ನು ಇಲ್ಲಿ ಜರಿಯಲಾಗಿದೆ. ಹಾಗೆಯೇ ನೀಲಗಿರಿ ಬೆಟ್ಟದ ಗುಂಡಮ್ಮೋರನ್ನು, ಬೆಂಗಳೂರಿಗೆ ಹೋಗಿ ಮುದಿ ಕುರಿಯನ್ನು ತಂದು ಮಂಡಚೂರಿಯಲ್ಲಿ ಕುಯ್ದು, ದದ್ದು ಮಡಿಕೇಲಿ ಬೇಯಿಸಿ ಅಡಕೆ ಪಟ್ಟೇಲಿ ಊಟ ಮಾಡುವಂತೆ ಜರಿಯಲಾಗುತ್ತದೆ. ಇಲ್ಲಿ ಬಳಸುವ ಜಯಮ್ನೋರೆ, ಗುಂಡಮ್ಮೋರೆ, ಮುದಿ ಕುರಿ, ಮಂಡ ಚೂರಿ, ದದ್ದು ಮಡಿಕೆ, ಅಡಿಕೆ ಪಟ್ಟೇ ಇವೆಲ್ಲವು ಆ ರೀತಿಯ ಗುಣಗಳುಳ್ಳ ಹೆಣ್ಣು ಮಕ್ಕಳನ್ನು ರೇಗಿಸುವ ಹಾಗೂ ಸಿಟ್ಟೇಳಿಸುವ ಸಲುವಾಗಿ ಹೇಳುವ ಶಿಶುಗೀತೆಗಳಾಗಿವೆ. ಅಲ್ಲದೆ ಹೊಲಸು ಪದಾರ್ಥಗಳೆಂದು ಕರೆಯುವ ಮಾಂಸ, ಮೀನು ಮೊದಲಾದವುಗಳನ್ನು ಅಡಿಕೆ ಪಟ್ಟೆಗಳಲ್ಲಿ ಊಟ ಮಾಡುವ ಪರಪಾಠ ಇಂದಿಗೂ ರೂಢಿಯಲ್ಲಿದೆ. ಇದು ನಮ್ಮ ಸಾಂಸ್ಕೃತಿಕ ಅಂಶವೂ ಆಗಿದೆ.

"ನಾರಾಯಣಭಟ್ಟನ ಹೊಟ್ಟೆ
ಕುಂಬಳಕಾಯಿ ಹೊಟ್ಟೆ
ಮುಂದೆ ಕುಂತ್ರೆ ಮುಂಭಾರ
ಹಿಂದೆ ಕುಂತ್ರೆ ಹಿಂಭಾರ
ಮಧ್ಯ ಕುಂತ್ರೆ ಗಾಡಿಗೆ ನಷ್ಟ
ಬಿಟ್ಟೇ ಬಿಟ್ಟರೆ ಬಾಡಿಗೆ ನಷ್ಟ"[೪೭]

ಡೊಳ್ಳು ಹೊಟ್ಟೆಯ ವ್ಯಕ್ತಿಗಳನ್ನು ಹಾಸ್ಯ ಮಾಡುವ ಕಾರಣವಾಗಿ ಹೇಳುವ ಶಿಶುಗೀತೆಯಿದು. ಕುಂಬಳಕಾಯಿ ಗಾತ್ರದ ಹೊಟ್ಟೆ ಹೊಂದಿರುವ ದಡೂತಿ ವ್ಯಕ್ತಿಯನ್ನು ಗಾಡಿಯಲ್ಲಿ ಕೂರಿಸಿಕೊಂಡು ಹೊರಟರೆ ಆಗುವ ಅನಾನುಕೂಲತೆಗಳನ್ನು ಹಾಸ್ಯಮಯವಾಗಿ ಇಲ್ಲಿ ಹೇಳಿಕೊಳ್ಳಲಾಗಿದೆ. ಗಾಡಿಯ ಮುಂದೆ ಕೂತರೆ ಮುಂಭಾರವಾಗುತ್ತದೆ. ಹಿಂದೆ ಕೂತರೆ ಹಿಂಭಾರವಾಗುತ್ತದೆ. ಮಧ್ಯೆ ಕುಳಿತರೆ ಗಾಡಿಗೆ ನಷ್ಟವಾಗುತ್ತದೆ. ಇವನ ಸಹವಾಸವೇ ಬೇಡವೆಂದು ಬಿಟ್ಟುಬಿಟ್ಟರೆ ಬಾಡಿಗೆಯ ನಷ್ಟವಾಗುತ್ತದೆ ಎಂಬುದನ್ನು ಮಕ್ಕಳು ಹಾಸ್ಯ ಮಾಡಿ ನಗುತ್ತಾರೆ.

"ಮಾವ ಮಾವ ಮಲ್ಲಾಡಿ
ಮಾವನ ತಿಕ್ಕೆ ಕಲ್ಲೊಡಿ
ಕಲ್ಲಾಡಮ್ಮನ ಕಟ್ಟೇಲಿ
(ಕಾಳೇಗೌಡನ ಕಟ್ಟೇಲಿ)
ಕಾಯಿಸೊಪ್ಪು ಕುಯ್‌ತಿದ್ದೆ
(ಅವರ್ಕೆಸೊಪ್ಪು ಕುಯ್‌ತಿದ್ದೆ)
ಗೂಬಲಕ್ಕಿ ಬಂತು
(ಗೂಬೆ ಮರಿ ಬಂತು)
ಗೂ ಗೂ ಅಂತು
ನನ್ ಜೀವ ದಡಾರಂತು
ಕರೇಕಲ್ ಬಡಾರಂತು
ಮಾವನೊಟ್ಟೆ ಬಡಾರಂತು)"[೪೮]

ಮಾವನನ್ನು ಕುರಿತು ಜರಿಯುವ ಶಿಶುಗೀತೆ ಇದು. ಜೊತೆಗೆ ಗೂಬಲಕ್ಕಿಯ ದನಿಗೆ ಹೆದರಿಕೊಳ್ಳುವ ಸಂದರ್ಭವನ್ನು ಸಹ ಈ ಗೀತೆಯು ಚರ್ಚಿಸುತ್ತದೆ.

'ಸಿದ್ದ ಗೊದ್ದ
ಬಾವಿಗೆ ಬಿದ್ದ
ಎತ್ತಕೆ ಹೋದ್ರೆ

ಕಚ್ಚಕೆ ಬಂದ
ಬೆಲ್ಲ ಕೊಟ್ರೆ
ಬ್ಯಾಡ ಅಂದ
ಕಪ್ಪೆ ಕೊಟ್ರೆ
ಗೊಳಕ್ ಅಂದ'.

ಹೆಸರಿನೊಂದಿಗೆ ವಿಚಿತ್ರ ತರದ ಪ್ರಾಸಯುಕ್ತ ಪದಗಳನ್ನು ಸೇರಿಸಿಕೊಂಡು ಆ ಹೆಸರಿನ ಹುಡುಗರನ್ನು ಗೋಳುಹುಯ್ದುಕೊಳ್ಳುವುದು ಕೂಡ ಮಕ್ಕಳಲ್ಲಿ ರೂಢಿಯಿದೆ. ಮಕ್ಕಳಲ್ಲಿ ಜಗಳಗಳು ನಡೆದು ವಿರಸ ಮೂಡಿದಾಗ ಈ ರೀತಿಯ ಹಾಡುಗಳನ್ನು ಹೇಳುತ್ತ ಆತನನ್ನು ಕೆಣಕಿ ರೇಗಿಸುವುದು ಮಕ್ಕಳ ಸಹಜವಾದ ಮನೋಭಾವವಾಗಿದೆ. ಈ ರೀತಿಯ ಬಹಳಷ್ಟು ಪದ ಅಥವಾ ಹಾಡುಗಳು ಹಾಸ್ಯ, ವಿನೋದ ಹಾಗೂ ನಗುವನ್ನು ಹುಟ್ಟಿಸಲೆಂದೆ ಹೇಳುವುದು ಕಂಡುಬರುತ್ತದೆ. ಆ ಮೂಲಕ ತನ್ನ ಸುತ್ತಮುತ್ತಲು ಇರುವವರನ್ನು ನಗುವಂತೆ ಮತ್ತು ಸಂತೋಷದಿಂದ ಆನಂದಿಸುವ ಸನ್ನಿವೇಶವನ್ನು ಸೃಷ್ಟಿಸುವುದು ಈ ರೀತಿಯ ಹಾಡುಗಳ ಮುಖ್ಯ ಉದ್ದೇಶವಾಗಿರುತ್ತದೆ.

"ಶಾಂತಕ್ಕ ಶಾಂತಕ್ಕ ಚನ್ನಾಗಿದ್ದೀಯಾ
ಮಂಚದ ಮೇಲೆ ಮಲಗಿದ್ದೀಯಾ
ಅವ್ವ ಬಂದರೆ ಅಳುತ್ತಿದ್ದೀಯಾ
ಗಂಡ ಬಂದರೆ ನಗುತ್ತಿದ್ದೀಯಾ"[೪೯]

ಈ ಶಿಶುಗೀತೆಯು ಸಹ ಮೇಲಿನ ಶಿಶುಗೀತೆಯಂತೆಯೆ ಶಾಂತಕ್ಕ ಎಂಬ ಹೆಸರಿನ ಹೆಣ್ಣು ಮಗಳೊಬ್ಬಳನ್ನು ಛೇಡಿಸಲೆಂದೆ ರಚಿತವಾಗಿರುವಂತಹದ್ದು. ಇಲ್ಲಿ ಆ ಹೆಣ್ಣಿನ ಕೌಟುಂಬಿಕ ವಿವರಗಳನ್ನು ತಿಳಿಸಿಕೊಡುತ್ತ ಆಕೆಯ ಸೋಮಾರಿತನ ಹಾಗೂ ತನ್ನ ಗಂಡ ಮತ್ತು ಅವ್ವ ಬಂದರೆ ಆಕೆಯ ಪ್ರತಿಕ್ರಿಯೆಗಳೇನಿತ್ತು ಎಂಬುದರ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಇದು ಶಿಶುಗೀತೆಯಾಗಿದ್ದರೂ ಕೂಡ ನಮ್ಮ ಸಾಂಸ್ಕೃತಿಕ ಪರಿಸರದ ನಡುವಿನ ಕೌಟುಂಬಿಕ ಹಾಗೂ ದಾಂಪತ್ಯ ಜೀವನದ ಹಲವು ಆಯಾಮಗಳನ್ನು ಇವು ನಮಗೆ ತಿಳಿಸಿಕೊಡುತ್ತದೆ.

೬. ಆಟವನ್ನು ಆಡುವಾಗಿನ ಅಥವಾ ಆಟದ ರೀತಿಯ ಶಿಶುಗೀತೆಗಳು

ಮಕ್ಕಳಿಗೆ ಆಟವೆಂದರೆ ಅಚ್ಚು ಮೆಚ್ಚು, ಊಟವನ್ನು ಮರೆತರೂ ಸಹ ಆಟವನ್ನು ಬಿಡುವುದಿಲ್ಲ. ಆಟದ ಸಮಯದಲ್ಲಿ ಹೇಳುವ ಹಾಗೂ ಆಟದ ರೀತಿಯ ಶಿಶುಪ್ರಾಸಗಳು ಅಧಿಕ ಸಂಖ್ಯೆಯಲ್ಲಿವೆ. ಈ ಗೀತೆಗಳಲ್ಲಿ ಹೆಚ್ಚಿನ ಮಕ್ಕಳು ಪಾಲ್ಗೊಳ್ಳುವ ಮೂಲಕ ಆಡಿ ನಲಿಯುತ್ತಾರೆ.

'ಕಣ್ಣಾ ಮುಚ್ಚೆ
ಕಾಡೆ ಗೂಡೆ
ಉದ್ದಿನ ಮೂಟೆ

ಉರುಳೀ ಹೋಯ್ತು
ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೆ
ನಿಮ್ಮಯ ಹಕ್ಕಿ ಬಚ್ಚಿಟ್ಟುಕೊಳ್ಳಿ'

ಈ ಶಿಶುಗೀತೆಯಲ್ಲಿ ಮನರಂಜನೆಯೇ ಪ್ರಧಾನವಾಗಿದ್ದರೂ ಕೂಡ, ಇದರಲ್ಲಿ ಅಡಗಿರುವ ದೊಡ್ಡ ತತ್ವಶಾಸ್ತ್ರ ನಮ್ಮ ಗಮನವನ್ನು ಸೆಳೆಯುತ್ತದೆ. 'ನಮ್ಮಯ ಹಕ್ಕಿ ಬಿಟ್ಟೆ ಬಿಟ್ಟೆ, ನಿಮ್ಮಯ ಹಕ್ಕಿ ಅವಿಸಿಕೊಳ್ಳಿ' ಎನ್ನುವ ಸಾಲುಗಳು ಮಕ್ಕಳ ಆಟದ ವಿವರಗಳನ್ನು ತಿಳಿಸಿದರೂ ಕೂಡ, ಇಹದ ಬದುಕಿನ ಜಂಜಡಗಳನ್ನು ಮುಗಿಸಿ ಹೊರಟಿರುವ ಜೀವಾತ್ಮನ ಕ್ರಿಯೆಗಳನ್ನು ನೆನಪಿಗೆ ತರುತ್ತದೆ.

'ಅವಲಕ್ಕಿ
ಪಾವಲಕ್ಕಿ
ಕಾಂಚಣ
ಮಿಣ ಮಿಣ
ಡಾಂ
ಡೂಂ
ಕೊಸ್ಸೆ
ಪಿಸ್ಸೆ
ಕೊಯ್
ಕೊಟಾರ್'

ಮಕ್ಕಳು ಒಟ್ಟಿಗೆ ಕುಳಿತು ಆಟ ಆಡುವ ಸಮಯದಲ್ಲಿ ಹೇಳಲ್ಪಡುವ ಶಿಶುಗೀತೆಯಿದು. ಮಕ್ಕಳೆಲ್ಲರು ಕೈಗಳನ್ನು ಮುಷ್ಟಿ ಮಾಡಿ ಒಂದರ ಮೇಲೆ ಒಂದನ್ನಿಟ್ಟು ಅವಲಕ್ಕಿ ಪಾವಲಕ್ಕಿ ಎಂದು ಹೇಳುತ್ತ ಒಂದೊಂದೇ ಕೈಯನ್ನು ಕತ್ತರಿಸುತ್ತ ಬರುವ ಆಟವಿದು.

"ಓತಿಕ್ಯಾತ ಓತಿಕ್ಯಾತ ಓಡೋಯ್ತು
ಎದ್ದೇಳೆ ಹುಡ್ಗಿ ಹೊತ್ತಾಯ್ತು
ಅಣ್ಣನ ಮೀಸೆ ಮುರಿದೋಯ್ತು
ಅವ್ವನ ದೋಸೆ ಕೆಟ್ಟೋಯ್ತು
ಅಪ್ಪನ ಚೆಡ್ಡಿ ಬಿದ್ದೋಯ್ತು
ತೊರಳ್ಳಿ ಬಸ್ಸು ಮುಂದಾಯ್ತು"[೫೦]

ಈ ಶೀಶುಗೀತೆಯು ಸಹ ಮಕ್ಕಳೆಲ್ಲರೂ ಸೇರಿ ಗುಂಪು ಆಟಗಳನ್ನು ಆಡುವ ಸಮಯದಲ್ಲಿ ಹೇಳುವ ಶಿಶುಗೀತೆಯಾಗಿದೆ.

"ರತ್ತೋ ರತ್ತೋ
ರಾಯನ ಮಗಳೆ
ಬಿತ್ತೋ ಬಿತ್ತೊ
ಭೀಮನ ಮಗಳೆ
ಹದಿನಾರೆಮ್ಮೆ
ಕಾಯೋಳ್ಯಾರೆ
ಕಟ್ಟೋಳ್ಯಾರೆ
ಕರೆಯೋಳ್ಯಾರೆ
ಕಾಸೋಳ್ಯಾರೆ
ಬೈಟ್‌ಕಂಬ
ಕುಕ್ರು ಬಸ್ವಿ
ಕೂರ್ ಬಸ್ವಿ"[೫೧]

ಗುಂಪು ಆಟದ ಸಮಯದಲ್ಲಿ ಹೇಳುವ ಶಿಶುಗೀತೆಯಿದು. ಮಕ್ಕಳೆಲ್ಲರು ಸೇರಿ ಆಟವಾಡುವ ಸಮಯದಲ್ಲಿ ಇಬ್ಬರು ಮಕ್ಕಳು ಎದುರು ಬದುರು ನಿಂತು ತಮ್ಮ ಕೈಗಳನ್ನು ಮೇಲೆತ್ತಿ ಕಮಾನಿನ ಆಕಾರದಲ್ಲಿ ಮಾಡಿಕೊಂಡು ಅದರಳಗೆ ಮಕ್ಕಳು ನುಗ್ಗಿ ಹೋಗುತ್ತ ಹೇಳುವ ಶಿಶುಗೀತೆಯಿದು. ಇದು ಮಕ್ಕಳಲ್ಲಿ ಹೆಚ್ಚು ಬಳಕೆಯಲ್ಲಿರುವ ಶಿಶುಗೀತೆಯಾಗಿದೆ.

'ಟೋಪಿ ಬೇಕೆ ಟೋಪಿ
ಎಂಥಾ ಟೋಪಿ
ಚಿನ್ನದ ಟೋಪಿ
ಎಷ್ಟು ರೂಪಾಯಿ
ಕೋಟಿ ರೂಪಾಯಿ
ಯಾರಿಗೆ ಬೇಕು
ನಂಗೊಂದ್ ಹಾಕು'

ಈ ಶಿಶುಗೀತೆಯು ಸಹ ಮಕ್ಕಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಮಕ್ಕಳೆಲ್ಲರು ವೃತ್ತಾಕಾರವಾಗಿ ಕುಳಿತು ಆಡುವ ಆಟವಿದು. ಒಬ್ಬ ಹುಡುಗ ಕೈಯಲ್ಲಿ ಟೋಪಿ ಹಿಡಿದು, ಈ ವೃತ್ತದ ಸುತ್ತಲು ಮೇಲಿನ ಶಿಶುಗೀತೆಯನ್ನು ಹಾಡುತ್ತ ಓಡುತ್ತಾನೆ. ಬೇಕಾದವರು ಕೇಳಿ ಆ ಟೋಪಿಯನ್ನು ಪಡೆಯಬಹುದು. ಈ ರೀತಿ ಕೇಳಿ ಪಡೆದ ಮಗು ಮತ್ತೆ ತಾನು ಮಕ್ಕಳ ಸುತ್ತಲೂ ಓಡುತ್ತ ಈ ಶಿಶುಗೀತೆಯನ್ನು ಹಾಡುತ್ತದೆ. ಈ ರೀತಿಯಾಗಿ ಮಕ್ಕಳೆಲ್ಲರು ಆಟದಲ್ಲಿ ಭಾಗವಹಿಸಿ ನಲಿಯುವುದು ಕಂಡುಬರುತ್ತದೆ.

೮. ಬಯ್ಗುಳ ರೀತಿಯ ಶಿಶುಗೀತೆಗಳು

ಸಾಮಾನ್ಯವಾಗಿ ಹಳ್ಳಿಗಳ ಕಡೆ ಕುರಿ, ಕೋಳಿ, ಬೆಳೆದ ತರಕಾರಿ, ಹಣ್ಣು ಹಂಪಲುಗಳನ್ನು ಕಳ್ಳತನ ಮಾಡುವುದು ಸರ್ವೇ ಸಾಮಾನ್ಯ. ಈ ರೀತಿಯಾಗಿ ತನ್ನ ಮನೆಯ ವಸ್ತುಗಳನ್ನು ಕದ್ದಾಗ ಆ ಮನೆಯ ಗೃಹಿಣಿಯು ಬಯ್ದುಕೊಂಡು, ಅವರಿಗೆ ಇಡಿ ಶಾಪ ಹಾಕುವುದು ಕಂಡುಬರುತ್ತದೆ. ಈ ರೀತಿಯ ಬಯ್ಗುಳದ ಶಿಶುಗೀತೆಗಳು ಸಹ ನಮ್ಮ ಜನಪದರಲ್ಲಿದ್ದು, ಮಕ್ಕಳು ಇವುಗಳನ್ನು ಹೇಳುತ್ತ ನಲಿಯುತ್ತವೆ.

"ಅಂದದಿಂದ ಸಾಕಿದ್ನಲ್ಲೆ ಚಂದದ ಕೋಳಿಯಾ
ಅವ್ರ ಮಕ್ಳು ತಿನ್ನ ಮುರ್ಕಂಡ್ರಲ್ಲೆ ಮಟ್ಟೆ ಕೋಳಿಯಾ
ಕಾಳಮ್ನೋರೆ ನೀವೆ ಅಲ್ವೆ ಕಾಲ್ ಮುರ್ದಿದ್ದು
ಪುಟ್ಟಮ್ನೋರೆ ನೀವೆ ಅಲ್ವೆ ಪುಕ್ಕ ತರ್ದಿದ್ದು
ಸಾಕಮ್ನೋರೆ ನೀವೆ ಅಲ್ವೆ ಸಾರು ಮಾಡಿದ್ದು
ತಿಮ್ಮಮ್ನೋರೆ ನೀವೆ ಅಲ್ವೆ ತಿಂದು ನೋಡಿದ್ದು"[೫೨]

ತಾನು ಅಂದದಿಂದ ಸಾಕಿದ್ದ ತನ್ನ ಕೋಳಿಯನ್ನು ತಿಂದವರನ್ನು ಬಯ್ದುಕೊಳ್ಳುವ ಜನಪದ ಹೆಣ್ಣೊಬ್ಬಳ ಮನಸ್ಸನ್ನು ಈ ಶಿಶುಗೀತೆಯು ತಿಳಿಸಿಕೊಡುತ್ತದೆ. ಅಲ್ಲದೆ ಆ ಕೋಳಿಯನ್ನು ತಿನ್ನುವಿಕೆಯಲ್ಲಿ ಆಕೆ ವಾಸಿಸುವ ಇಡೀ ಕೇರಿಯ ಜನರೆಲ್ಲ ಭಾಗಿಯಾಗಿರುವ ವಿವರಗಳು ಕೂಡ ಆಕೆಯ ಮಾತುಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

"ಚಂದದಿಂದ ಸಾಕಿದ್ನಲ್ಲೆ ಕೆಂದ ಕೋಳಿಯಾ
ಮಕ್ಳು ತಿನ್ನ ಮುರ್ಕಂಡ್ರಲ್ಲೆ ಮಟ್ಟೆ ಕೋಳಿಯಾ
ಜಯಮ್ನೋರೆ ನೀವೆ ಅಲ್ವೆ ಜಗಳಕ್ ಬಿಟ್ಟಿದ್ದು
ಭಾಗ್ಯಮ್ನೋರೆ ನೀವೆ ಅಲ್ವೆ ಭಾಗ ಮಾಡಿದ್ದು
ಸಾಕಮ್ನೋರೆ ನೀವೆ ಅಲ್ವೆ ಸಾರು ಮಾಡಿದ್ದು
ಕುಂಟಮ್ನೋರೆ ನೀವೆ ಅಲ್ವೆ ಕಂಪ್ಲೆಂಟ್ ಕೊಟ್ಟಿದ್ದು"[೫೩]

ಈ ಶಿಶುಗೀತೆಯು ಸಹ ಮೇಲಿನ ಶಿಶುಗೀತೆಯ ವಸ್ತುವನ್ನೆ ಒಳಗೊಂಡಿದೆ. ತನ್ನ ಕೋಳಿಯನ್ನು ಕದ್ದು ತಿಂದವರ ಮೇಲೆ ಶಾಪ ಹಾಕುವ ಗೃಹಿಣಿಯ ಮನಸ್ಥಿತಿ ಇಲ್ಲಿ ನಮಗೆ ತಿಳಿಯುತ್ತದೆ. ಈ ಎರಡೂ ಶಿಶುಗೀತೆಗಳಲ್ಲಿ ಆಯಾ ಹೆಸರಿನ ವ್ಯಕ್ತಿಗಳು ಮಾಡಿದ ಕೆಲಸಗಳನ್ನು ಆಯಾ ವ್ಯಕ್ತಿಗಳ ಹೆಸರಿನ ಅಕ್ಷರಗಳ ಮೂಲಕವೇ ಹೇಳಿರುವುದು ವಿಶೇಷವಾಗಿದೆ. ಅಲ್ಲದೆ ಈ ಶಿಶುಗೀತೆಯ ಕೊನೆಯ ಸಾಲಿನಲ್ಲಿರುವ 'ಕಂಪ್ಲೆಂಟ್' ಎಂಬ ಪದ ಆಂಗ್ಲ ಭಾಷೆಯಿಂದ ಎತ್ತಿಕೊಂಡದ್ದಾಗಿದ್ದು, ಶಿಶುಗೀತೆಗಳಲ್ಲಿ ಈ ರೀತಿಯ ಹಲವು ಅನ್ಯ ದೇಶಿಯ ಹಾಗೂ ಭಾಷೆಯ ಪದಗಳನ್ನು ಗುರುತಿಸಬಹುದಾಗಿದೆ.

ಈ ಶಿಶುಗೀತೆಗಳಲ್ಲದೆ ಮಕ್ಕಳಲ್ಲಿ ಇನ್ನೂ ಹಲವು ರೀತಿಯ ಶಿಶುಗೀತೆಗಳು ಬಳಕೆಯಲ್ಲಿವೆ. ಅವುಗಳನ್ನು ಈ ರೀತಿಯಾಗಿ ಚರ್ಚಿಸಬಹುದಾಗಿದೆ.

"ಬೆಂಗಳೂರು ಮುದುಕಿ
ಮುದುಕಿಯ ಗಂಡ
ಗಂಡನ ಮಗಳು
ಮಗಳಾ ಗಂಡ
ಗಂಡನ ಮಗಳು
ಮಗುವಿನ ತಾಯಿ
ತಾಯಿಯ ನಾಯಿ
ನಾಯಿಯ ಬಾಲ
ಸಂತೆಗೆ ಬಂತು"[೫೪]

ಬೆಂಗಳೂರಿನ ಮುದುಕಿ ಹಾಗೂ ಆ ಮುದುಕಿಯ ಕುಟುಂಬದವರೆಲ್ಲರೂ ಮತ್ತು ಮಗುವಿನ ತಾಯಿ ಸಾಕಿದ್ದ ನಾಯಿ ಎಲ್ಲರು ಸೇರಿ ಸಂತೆಗೆ ಬಂದ ವಿವರಗಳನ್ನು ಸುತ್ತಿ ಬಳಸಿ ಈ ಶಿಶುಗೀತೆಯು ಹೇಳುತ್ತದೆ.

"ಶಿವಪ್ಪ ಕಾಯೋ ತಂದೆ
ಮೂರು ಲೋಟ ಕಾಫಿ ದೇವ
ಹಸಿವೆಯನ್ನು ತಾಳಲಾರೆ
ಕಾಫಿ ಕುಡಿಸಯ್ಯ
ಇಡ್ಲಿಯಂತೆ ಚಟ್ನಿಯಂತೆ
ಇಂದ್ರಭವನದಲ್ಲಿ
ದೋಸೆಯಂತೆ ಕಾಫಿಯಂತೆ
ಭಟ್ಟರೋಟ್ಲಲ್ಲಿ"[೫೫]

ಸಿನಿಮಾ ಹಾಡನ್ನೆ ಬಳಸಿಕೊಂಡು ಮಕ್ಕಳು ಕಟ್ಟಿರುವ ಅದ್ಭುತವಾದ ಶಿಶುಗೀತೆಯಿದು. ಇಲ್ಲಿ ಮಕ್ಕಳ ಕಲ್ಪನಾ ಸಾಮರ್ಥ್ಯ, ಹಾಸ್ಯ ಪ್ರಜ್ಞೆಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಸಿನಿಮಾ ಹಾಡಿಗೆ ತಕ್ಕಂತೆ ತಮ್ಮದೇ ಆದ ಪದಗಳನ್ನು ಸೇರಿಸಿಕೊಂಡು ಹಾಡುತ್ತ ಸಂತೋಷಪಡುವ ಮಕ್ಕಳ ಸೃಜನಶೀಲ ಮನಸ್ಥಿತಿ ಅಭಿನಂದನೀಯವಾದುದು.

"ಹೊಸಳ್ಳಿ ಗೌಡ
ಸೊಸೆ ಕರ್‍ಯಾಕೆ ಬಂದ
ಒಂದು ಚಿಪ್ ಬಾಳೇಹಣ್ಣು

ಹೆಂಗೆ ನುಂಗಾಣ
ಮೂರ್ಕಂತೆ ಮಲ್ಲಿಗೆ ಹೂವ
ಹೆಂಗೆ ಕುಯ್ಯಾಣ
ಚಿನ್ನದಂತ ಹೆಣ್‌ಬಿಟ್ಟು
ಹೆಂಗೆ ಸಾಯೋಣ”[೫೬]

ಪ್ರಸ್ತುತ ಗೀತೆಯು ತನ್ನ ಸೊಸೆಯನ್ನು ಕರೆದುಕೊಂಡು ಹೋಗಲು ಬಂದ ಹೊಸಳ್ಳಿ ಗೌಡನ ವಿವರಗಳನ್ನು ತಿಳಿಸುತ್ತದೆ. ಈ ರೀತಿಯ ಅನೇಕ ಶಿಶುಗೀತೆಗಳು ಮಕ್ಕಳ ನಡುವೆ ಬಳಕೆಯಲ್ಲಿರುವುದು ಕಂಡುಬರುತ್ತದೆ.

೪.೬. ಸಾವಿನ ಹಾಡುಗಳು

‘ಸಾವು’ ಅಥವಾ ‘ಮೃತ್ಯು’ ಎಂಬುದು ಮಾನವ ಜೀವಿಯನ್ನೂ ಒಳಗೊಂಡಂತೆ ಎಲ್ಲ ಜೀವಿಗಳ ಕೊನೆಯ ಘಟ್ಟ. ಹಾಗಾಗಿಯೇ ಎಲ್ಲರಿಗೂ ಸಾವೆಂದರೆ ಭಯ. ಸಾವನ್ನು ಸ್ವೀಕರಿಸಲು ಯಾರೂ ಕೂಡ ಸಿದ್ಧರಿಲ್ಲ. ಆದರೆ ಹುಟ್ಟಿದ ಪ್ರತಿಯೊಂದು ಜೀವಿ ಸಹ ಸಾಯಲೇಬೇಕು. ಇದು ಬದುಕಿನ ಸತ್ಯ. ಇದರಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ಸಾವಿನ ವಿಚಾರವಾಗಿ ನಮ್ಮ ಜನಪದರಲ್ಲಿ ಬಗೆ ಬಗೆಯ ಕಲ್ಪನೆ, ಕಥೆಗಳು ರೂಢಿಯಲ್ಲಿವೆ. ಹಾಗೆಯೆ ಸತ್ತ ನಂತರ ವ್ಯಕ್ತಿ ಮುಂದೇನಾಗುತ್ತಾನೆ ಎನ್ನುವ ಬಗ್ಗೆಯೂ ಚಿಂತಿಸುವ ಜನಪದರ ಯೋಚನಾ ಲಹರಿಗಳು ವಿಚಿತ್ರವಾದ ಅನುಭವ ಲೋಕವನ್ನೆ ಪರಿಚಯಿಸುತ್ತವೆ.

ಈ ಹಿನ್ನೆಲೆಯಲ್ಲಿ ಸಾವನ್ನಪ್ಪಿದ ವ್ಯಕ್ತಿಯ ಗುಣ, ಅವಗುಣ ಆತನ ಪರೋಪಕಾರಿ ಮನಸ್ಸನ್ನು ಕುರಿತು ಹೊಗಳುವ ಹಾಗೂ ತೆಗಳುವ ಭಾವನೆಗಳು ಜನಪದರಲ್ಲಿರುವುದು ಕಂಡುಬರುತ್ತದೆ. ಈ ರೀತಿಯ ಭಾವಗಳು ಪದಗಳ ರೂಪವನ್ನು ಪಡೆದು ಸಾವಿನ ಪದಗಳಾಗಿ ಹೊರಬರುವುದನ್ನು ಕಾಣಬಹುದು. ಸತ್ತ ವ್ಯಕ್ತಿಯ ಹೆಸರಿಡಿದು ಹೊಗಳುವ ಪದ್ಧತಿ ವಿಶೇಷವಾಗಿ ಚನ್ನರಾಯಪಟ್ಟಣ ಹಾಗೂ ಹಾಸನ ಜಿಲ್ಲೆಯಲ್ಲಿ ಕಂಡುಬರುವುದನ್ನು ಗಮನಿಸಬಹುದಾಗಿದೆ. ಸಾವಿನ ಸಮೀಪವಿರುವ ಹೆಣ್ಣನ್ನು ಕರೆದುಕೊಂಡು ಹೋಗಲು ಬಂದಿರುವ ಯಮ ಹಾಗೂ ಹೆಣ್ಣಿನ ನಡುವಿನ ಸಂಭಾಷಣೆಯ ರೂಪವಾದ ‘ಜವರಾಯ’ ಎಂಬ ಸಾವಿನ ಪದವನ್ನು ಈ ರೀತಿಯಾಗಿ ಗಮನಿಸಬಹುದಾಗಿದೆ.

“ಜವರಾಯ ಬಂದರೆ ಬರಿಕೈಲಿ ಬರಲಿಲ್ಲ
ಕುಡಗೋಲು ಕೊಡಲೊಂದು ಹೆಗಲೇರಿ
ಒಳ್ಳೆಳ್ಳೆ ಮರನ ಕಡಿಬಂದ
ಫಲಬಿಟ್ಟು ಮರನ ಕಡಿ ಬಂದ

ಎಂದೂ ಬಾರದ ಜವರಾಯ ಇಂದೇಕೆ ಬಂದೀರಿ
ಕೊಳ್ಳಯ್ಯಾ ನೀರ ಕುಡಿ ನೀರ । ಕುಡಿಯೋಕೆ ಬಂದಿಲ್ಲ
ಕೂರೋಕೆ ಬಂದಿಲ್ಲ ಗಂಡನ ಮಡದಿ ನಡೆ ಮುಂದೆ

ಮನೆ ಮುಂದೆ ಚಪ್ಪರ ಹಬ್ಬದ ಸಡಗರ
ಬಿಟ್ಟಿಂಗೆ ಬರಲೋ ಜವರಾಯ । ಹಬ್ಬ ಮಾಡುವಂಥ
ಪುರಚೆಲುವೆ ಬರುತಾಳೆ ಗಂಡನ ಮಡದಿ ನಡೆ ಮುಂದೆ

ಮಳಿ ಮಳಿಗೆ ಹಚ್ಚಿಡ ಮಳಿಗೆ ಮುಂಡಾಸಿನ
ಗಂಡನ ಬಿಟ್ಟು ಹೇಗೆ ಬರಲೋ । ಗಂಡಗೆ ತಕ್ಕಂತ
ದುಂಡೀರು ಬರುತಾರೆ ಗಂಡನ ಮಡದಿ ನಡಿ ಮುಂದೆ

ಹಾಲೂ ಬಾನ ಉಂಡು ತೋಳ ಮೇಲಾಡುವ
ಬಾಲನ ಬಿಟ್ಟು ಹೇಗೆ ಬರಲೋ । ಬಾಲಗೆ ತಕ್ಕಂಥ
ಬಾಲೇರು ಬರುತಾರೆ ಬಾಲನ ತಾಯಿ ನಡೆ ಮುಂದೆ

ಕಾಳು ಕಡ್ಡಿ ಮಾರಿ ಕಟ್ಟಾಣಿ ಮಾಡಿಸಿದ್ದೆ
ಕಟ್ಟಾಣ್ಯೊಂದರ ಫಳಿಗೆ ಇಕ್ಕಲಿಲ್ಲವೋ । ಜವರಾಯ
ಬಿಟ್ಹೋಡಿ ಹೋಗೋ ಸಡಗರದೆ

ಹರಳು ಹತ್ತಿ ಮಾರಿ ವಾಲೆಯ ಮಾಡಿಸಿದ್ದೆ
ವಾಲ್ಯೊಂದರ ಫಳಿಗೆ ಇಕ್ಕಲಿಲ್ಲವೋ । ಜವರಾಯ
ವಾಲಾಡಿ ಹೋಗೋ ಸಡಗರದೇ

ಉಪ್ಪು ಸೊಪ್ಪು ಮಾರಿ ಉಪ್ಪರಿಗೆ ಕಟ್ಟಿಸಿದ್ದೆ
ಉಪ್ಪರಿಗೆ ಭೋಗ ಕಾಣಲಿಲ್ಲವೋ । ಜವರಾಯ
ಉತ್ತರಿಸಿ ಹೋಗೋ ಸಡಗರವೇ

ಅಟ್ಟು ಉಂಡೇನೆಂದು ಚಟ್ಟೀ ಕುಡಿಕೆ ತಂದೆ
ಹಟ್ಟಾಗೆ ಇದ್ದೆಲ್ಲೋ ಜವರಾಯ । ಮಾಡಿ ಉಂಡೇನೆಂದು
ಮಡಕೆ ಕುಡಿಕೇ ತಂದೆ ಮಾಡಾಗೆ ಇದ್ದೆಲ್ಲೋ ಜವರಾಯ

ಆಚೇ ಕೇರಿಲಿರೋ ರುಂಡೇರು ಮಿಂಡೇರು
ಅವರ್ನಾರು ಕರಕೊಂಡು ಹೋಗಬಾರದೆ । ರಂಡೇರು ಮಿಂಡೇರು
ಎಂದಿದ್ರು ನಮ್ಮೋರು ಗಂಡನ ಮಡದಿ ನಡಿ ಮುಂದೆ[೨೩]

ಸಂಭಾಷಣೆಯ ರೂಪದಲ್ಲಿ ಸಾಗುವ ಈ ಸಾವಿನ ಗೀತೆಯು ಸಾವು ಸಮೀಪಿಸಿರುವ ಹೆಣ್ಣಿನ ಮನದಲ್ಲಿನ ತಳಮಳ ಹಾಗೂ ಅವಳ ಬದುಕಿನ ಪ್ರೀತಿಯನ್ನು ತಿಳಿಸುತ್ತದೆ. ಸಾವಿಗೆ ಹತ್ತಿರದಲ್ಲಿರುವ ಹೆಣ್ಣೊಬ್ಬಳನ್ನು ಕರೆದುಕೊಂಡು ಹೋಗಲು ಬಂದ ಜವರಾಯ ಮತ್ತು ಆಕೆಯ ನಡುವೆ ನಡೆಯುವ ಮಾತುಕತೆಗಳ ವಿವರಗಳು ಇಲ್ಲಿವೆ. ಈ ಸಾವಿನ ಪದವು ಜೀವನ ತತ್ವದ ಬಹುದೊಡ್ಡ ಫಿಲಾಸಫಿ ಅಡಗಿರುವುದನ್ನು ತಿಳಿಸುತ್ತದೆ. ಏಕೆಂದರೆ ಆಕೆ ತಾನು ಏನೇನೆಲ್ಲಾ ತಂದು ಇಟ್ಟುಕೊಂಡಿದ್ದೇನೆ, ಅದನ್ನೆಲ್ಲಾ ಒಮ್ಮೆ ತೊಟ್ಟು, ಅವುಗಳ ಸುಖವನ್ನು ಅನುಭವಿಸಿ ಬರುವುದಾಗಿ ಹೇಳುವ ಹೆಣ್ಣಿನ ಮನಸ್ಥಿತಿ ಹಾಗೂ ಅದಕ್ಕೆ ಜವರಾಯ ಕೊಡುವ ಉತ್ತರಗಳು ಅತ್ಯಂತ ಮಾರ್ಮಿಕವಾಗಿದ್ದು, ಸಾವೆಂಬುದನ್ನು ತಪ್ಪಿಸಲು ಸಾಧ್ಯವಿಲ್ಲ ಎಂಬ ಸತ್ಯವವನ್ನು ಮನಗಾಣಿಸುತ್ತದೆ. ಅಲ್ಲದೆ 'ಜವರಾಯ ಬಂದರೆ ಬರಿಕೈಲಿ ಬರಲಿಲ್ಲ' ಎಂಬ ಸಾಲು ಇದಕ್ಕೆ ಪೂರಕವಾಗಿದೆ. ಏಕೆಂದರೆ ಜವರಾಯನ ಕಾಯಕವೇ ಜೀವಿಯನ್ನು ಕರೆದೊಯ್ಯುವುದು. ಅದಕ್ಕಾಗಿ ಆತ ಕುಡುಗೋಲನ್ನು ಕೈಯಲ್ಲಿ ಹಿಡಿದು ಬರುತ್ತಾನೆ. ಅವನ ಕೈ ಎಂದಿಗೂ ಬರಿದಾದುದಲ್ಲ ಎಂಬ ಮಾತುಗಳು ಸಾವಿನ ಒಡೆಯನಾದ ಜವರಾಯನ ಕಾಯಕವನ್ನು ಮನಗಾಣಿಸುತ್ತದೆ.

ಪ್ರಮುಖವಾಗಿ ಈ ಸಾವಿನ ಗೀತೆಯಲ್ಲಿ ಆ ಮನೆಯ ಸದ್ಗೃಹಿಣಿ ಹಬ್ಬದ ಸಡಗರದಲ್ಲಿ ಮನೆ ಮಂದಿಯೊಡನೆ ನಲಿಯುತ್ತಿದ್ದಾಳೆ. ಅಂತಹ ಸಡಗರದ ಸಮಯದಲ್ಲಿ ಯಮನೊಂದಿಗೆ ಹೋಗಬೇಕೆಂದಾಗ ಆಕೆ ಮಾನಸಿಕವಾಗಿ ವಿಚಲಿತಳಾಗುವುದು ಸಹಜ. ಸಾಯಲು ಯಾರು ತಾನೆ ಇಷ್ಟಪಡುತ್ತಾರೆ. ಇಂತಹ ಸಡಗರವನ್ನು ಬಿಟ್ಟು ಹೇಗೆ ಬರಲೆಂದು ಕೇಳುವ ಆಕೆಯ ಮನಸ್ಸು ಸಾವಿಗಾಗಿ ಅಳುಕಿರುವುದನ್ನು ತಿಳಿಸುತ್ತದೆ. ಅಲ್ಲದೆ ಗಂಡನನ್ನು ಬಿಟ್ಟು, ಮಗುವನ್ನು ಬಿಟ್ಟು, ಕಾಳು ಕಡ್ಡಿ ಮಾರಿ ಮಾಡಿಸಿಕೊಂಡ ಕಟ್ಟಾಣಿ, ಹರಳು ಹತ್ತಿ ಮಾರಿ ಮಾಡಿಸಿಕೊಂಡ ವಾಲೆ, ಉಪ್ಪರಿಗೆ ಇವೆಲ್ಲವನ್ನು ಬಿಟ್ಟು ಹೇಗೆ ಬರಲಿ ಎಂದು ಕೇಳುವ ಮನಸ್ಥಿತಿಗಳ ಹಿಂದೆ ಆಕೆಯ ಜೀವನ ಪ್ರೀತಿಯ ಭಾವನೆಗಳು ನಮಗೆ ಅರಿವಾಗುತ್ತವೆ. ಆದರೆ ಸಾವಿನ ಮುಂದೆ ಇವ್ಯಾವು ಮುಖ್ಯವಾಗುವುದಿಲ್ಲ. ಸಾವೆಂಬುದೇ ಸತ್ಯ ಎಂಬ ಅಂಶ ಜವರಾಯನ ಮಾತುಗಳ ಮೂಲಕ ನಮಗೆ ವೇದ್ಯವಾಗುತ್ತದೆ.

ಈ ರೀತಿಯಾಗಿ ಜವರಾಯನಿಂದ ಸಾವಿನ ದರ್ಶನವಾದ ವ್ಯಕ್ತಿಯನ್ನು ಕುರಿತು ಹೊಗಳು ಹಾಕುವುದನ್ನು ಮುಂದಿನ ಸಾವಿನ ಪದದಲ್ಲಿ ಕಾಣಬಹುದು.

"ಓ ದೊರೆ ಕೂತಂಗಾಯಿತಲ್ಲೊ ಜಗದೀಶಗೌಡ್ರು
ದೊರೆ ಬಂದಂಗಾಯಿತಲ್ಲೊ ಜಗದೀಶಗೌಡ್ರು
ದೊರೆ ಬಂದಂಗಾಯಿತಲ್ಲೊ
ಉದ್ದು ಉದ್ದನೆ ಕಟ್ಟೆ ಉದ್ದನೆ ಕಲ್ಲು ಕಟ್ಟೆ
ಬಗ್ಗಿ ಕಾಗದವ ಬರೀತಾರೆ
ಬಗ್ಗೀಯೆ ಕಾಗದವ ಬರಿಯೋ ಜಗದೀಶಗೌಡ್ರ

ಹುಬ್ಬಿನ ಭಾವ ಬಲುಚೆಂದ
ಹುಬ್ಬಿನ ಭಾವ ಬಲು ಚೆಂದ ಜಗದೀಶಗೌಡ್ರ
ಹುಬ್ಬು ತಿದ್ದಾಳೆ ಈ ಸಿರಿಗೌರಿ ॥ ಓ ದೊರೆ ಕೂತಂಗಾಯಿತಲ್ಲೊ
ಹುಬ್ಬನು ತಿದ್ದಾಳೆ ಈ ಸಿರಿಗೌರಿ ನೋಡಯ್ಯ
ಅವ್ರ ಹುಬ್ಬಿನ ಮೇಲೈತಿ ಈ ದೊರೆತನ
ಓ ದೊರೆ ಬಂದಂಗಾಯಿತಲ್ಲೊ ಕರ್ನಾಟಕದ
ದೊರೆ ಕೂತಂಗಾಯಿತಲ್ಲೊ
ಅವ್ರು ಮಾಡಿಯ ಮನೆಯಲ್ಲಿ ಮಗನ ತೊಟ್ಟಿಲ ಕಟ್ಟಿ
ಮುಂದೇನೆ ಕಟ್ಟಿಸ್ಯಾರು ಈ ಮಡಿಕೇರಿ
ಮುಂದೇನೆ ಕಟ್ಟಿಸ್ಯಾರು ಮಡಿಕೇರಿ ಜಗದೀಶಗೌಡ್ರು
ದಂಡು ಬಿಟ್ಟರು ಈ ದಳವಾಯಿ
ದಂಡು ಬಿಟ್ಟರು ದಳವಾಯಿ ಜಗದೀಶಗೌಡ್ರು
ಇವ್ರಿಗೆ ಮಧ್ಯಾಹ್ನದ್ ಊಟ ಮಡಿಕೇರಿಲಿ ॥ ಓ ದೊರೆ ಕೂತಂಗಾಯಿತಲ್ಲೊ
ದೊರೆ ಕೊಟ್ಟ ವೀಳ್ಯವ ಹಿಡಿತುಂಬ ಹಿಡ್ಕಂಡು
ಶಿವ ಕೊಟ್ಟ ಮಕ್ಕಳ ನಡಸುತ ಜಗದೀಶಗೌಡ್ರು
ನಗುತ ಚಾವಡಿಯ ಇಳಿದಾರು ॥ ಓ ದೊರೆ
ಕೂತಂಗಾಯಿತಲ್ಲೊ."[೫೮]

ದಳವಾಯಿಯಾದ ಜಗದೀಶಗೌಡ್ರು ನೆನಪಿನಲ್ಲಿ ಹೊಗಳು ಹಾಕುವ ಪದವಿದಾಗಿದೆ. ಆತ ಬದುಕಿದ್ದಾಗ ಕುಳಿತುಕೊಳ್ಳುತ್ತಿದ್ದ ಶೈಲಿ, ನಡೆದುಬರುತ್ತಿದ್ದ ರೀತಿ, ಚಾವಡಿ ಇಳಿಯುತ್ತಿದ್ದ ವಿವರಗಳನ್ನು ನೆನಪಿನ ಸ್ಮೃತಿ ಪಟಲದಿಂದ ತಂದು ಆತನ ವ್ಯಕ್ತಿತ್ವವನ್ನು ಕುರಿತು ಹೊಗಳುತ್ತಾರೆ. ಆತ ಬಗ್ಗಿ ಕಾಗದವನ್ನು ಬರೆಯುತ್ತಿದ್ದ ಚೆಂದ, ಆತನ ಹುಬ್ಬು, ಆ ಹುಬ್ಬಿನ ಮೇಲಿನ ಚೆಲುವು, ಮಡಿಕೇರಿಯಲ್ಲಿ ಕಟ್ಟಿಸಿದ ಮನೆ ಹಾಗೂ ಆ ಮನೆಯ ಚಾವಡಿಯಿಂದ ಮಕ್ಕಳ ನಡೆಸುತ್ತ ಇಳಿಯುವ ಜಗದೀಶಗೌಡರ ವಿವರಗಳು ಇಲ್ಲಿ ಕಂಡುಬರುತ್ತವೆ.

ಸಾವಿನ ಸಂದರ್ಭದ ಮತ್ತೊಂದು ಹೊಗಳಿಕೆಯ ಪದವನ್ನು ಗಮನಿಸಬಹುದು.

"ದಾಟಿ ೧ : ತಾರನಂದನಾನೋ।
ಆಹಾ ತಾರನಂದನಾನೋ।
ನೋಡೋ ತಣ್ಣನೆ ಹೊತ್ತಿನಲ್ಲಿ
ನೋಡೋ ತಣ್ಣನೆ ಹೊತ್ತಿನಲ್ಲಿ

ನೋಡೋ ಮರ ಮರ ವೊಂದಿಗೆ
ನೋಡೋ ಮಾತಾಡೋ ಹೊತ್ತಿನಲ್ಲಿ
ಹಾ ಮರಕೆ ಸೇರೋ ವೊತ್ತಿನಲ್ಲಿ
ನೋಡೋ ಹಕ್ಕಿ ಪಕ್ಷಿಗಳೆಲ್ಲ
ನೋಡು ಗೂಡು ಸೇರೋ ಹೊತ್ತಿನಲ್ಲಿ
ನೋಡೋ ತಣ್ಣನೆ ಹೊತ್ತಿನಲ್ಲಿ
ಅವರ ಹೊಟ್ಟೆಲಿ ಹುಟ್ಟಿದ
ನೋಡು ಮುದ್ದಿನ ಮಗನಪ್ಪ
ಮುದ್ದಿ ಮಗ್ನೆ ರಾಜೇಗೌಡ್ರು
ನೋಡೋ ತಂದೇ ರಂಗೇಗೌಡ್ರ
ಅಯ್ಯಾ ಅವ್ರೆ ಸ್ವಾಮೇ ಗೌಡ್ರ
ನೋಡೋ ತಾಯಿ ಪುಟ್ಟವ್ವನ
ನೋಡೋ ಆಕೆ ದೇವಮ್ಮನ
ನೋಡು ಸಿರಿಪಾದವ ನೆನಸ್ಯಾರು
ನೋಡು ಮಟ್ಟ ಮಂಗಳವಾರ
ನೋಡು ಮಗ್ಗಲ ಕೊಟ್ಟವರಂತೆ
ನೋಡು ಸಗ್ಗಕೆ ಕನಪ್ಪ
ನೋಡು ಬಾಳ ಮೆಚ್ಚಾದರಂತೆ
ನೋಡು ಬಾಳ ಒಪ್ಪಾದರಂತೆ
ಅವ್ರ ಮನ್ಗ ಮಂಚಕೆ ಕಣೋ
ನೋಡು ಕಣ್ಣಿಟ್ಟ ಯಮದೊರೆ
ನೋಡು ಬಲ್ಲಿರಪ್ಪ ಯಮದೂತ್ರ
ನೀವು ನರಲೋಕಕೆ ಹೋಗಿರಪ್ಪ
ಅಯ್ಯಾ ಅವ್ರ ತಂದೆ ರಂಗೇಗೌಡ್ರ
ಅವ್ರನೆ ಸ್ವಾಮೇಗೌಡ್ರ
ನೋಡು ತಾಯಿ ಪುಟ್ಟವ್ವನ
ನೋಡು ಆಕೆ ದ್ಯಾವಮ್ಮನ
ನೀವು ಗುದ್ದಿಗೆ ಮರಿಗೆಲಿ

ನೀವು ಕುತ್ತಿಗೆ ಮುರಿಬೇಕು
ನೀವು ಸೆಣಕಂಡು ಬರಬೇಕು
ನೋಡು ನರಲೋಕದ ವಾಲೆಪ್ಪ
ನೋಡು ಇಲ್ಲಿಗೆ ಪೂರ್ತಾಯ್ತಂತ.
ನೀವು ನರಲೋಕದೊಳಗೆಲ್ಲ
ನೀವು ಬಿಡಬ್ಯಾಡ್ರಿ ರಂಗೇಗೌಡ್ರ
ನೀವು ಬಿಡಬ್ಯಾಡ್ರಿ ಸ್ವಾಮೇಗೌಡ್ರ
ಆಹಾ ಬಿಡಬ್ಯಾಡ್ರಿ ಪುಟ್ಟವ್ವನ
ಆಹಾ ಬಿಡಬ್ಯಾಡ್ರಿ ದ್ಯಾವಮ್ಮನ
ನೀವು ಕರಕಂದು ಬರಬೇಕು
ಅಂತ ಯಮದೂತರಾಯನೆ
ನೋಡು ಧೂತರಿಗೆ ಹೇಳುತಾನೆ.
ಆಹಾ ಏಳೇಳು ಯಮದೂತರು
ಆಹಾ ಆನೆಯ ಮಕದೋನೆ
ನೋಡೋ ಒಂಟೆಯ ಮಕದೋನೆ
ಅಯ್ಯ ಕುದುರೆಯ ಮಕದೋನೆ
ನೋಡು ಯಮಪಾಶ ಹಿಡಕಂಡು
ನೋಡು ಎಚ್ಚರನೆ ವಾಲೆಗಳ
ಅಯ್ಯ ಕೈಲಿ ಹಿಡಕಂಡು
ಆಹಾ ನರಲೋಕಕೆ ಕಣಪ
ಅಯ್ಯಾ ಬಂದನೆ ಬರಸಿಗೆ
ಆಹಾ ಕೊಟ್ಟಿಗೆಯ ಗೋವುಗಳು
ಆಲ್ಲನೆ ಬೆದರ್ಯಾವು
ನೋಡು ಹತ್ತೀರೋ ಗೌಳಪ್ಪ
ನೋಡು ಪಳಪಳನೆ ಇಳಿದಾನು
ನೋಡು ಶಕುನವ ಹೇಳುತಾದೆ.
ಅಯ್ಯ ಹಟ್ಟಿಗಳ ನಾಯೆಲ್ಲಾ
ಹಾ ಗಳಗಳನೆ ಬೊಗಳುತಾವೆ
ನೋಡು ಆತು ರಂಗೇಗೌಡರಿಗೆ
ನೋಡು ತಿಳಿನಿಲ್ಲ ಭಗವಂತ

ನೋಡು ಅದನೆ ಸ್ವಾಮೇಗೌಡರಿಗೆ
ನೋಡು ತಿಳಿನಿಲ್ಲ ಕಣಯ್ಯಾ
ಅವ್ವಾ ತಾಯಿ ದ್ಯಾವಮ್ಮಗೆ
ಅವ್ವಾ, ತಾಯಿ ಪುಟ್ಟಮ್ಮಗೆ
ನೋಡು ತಿಳಿನಿಲ್ಲ ಗುರುದೇವಾ
ಆಗ ಎಲ್ಲೆಲ್ಲೊ ಗ್ಯಾನಾದು
ನೋಡು ಎಲ್ಲೆಲ್ಲೊ ಚಿಂತ್ಯಾದು
ನೋಡು ಮನೆಮಾರು ತಿರುಗುತಾವೆ
ನೋಡು ಅಕಮಕ ಗ್ಯಾನಾದು
ಅಯ್ಯೋ ಹೊಟ್ಟೆಲಿ ಹುಟ್ಟಿದ
ಅಯ್ಯ ಮುದ್ದಿನ ಮಕ್ಕಳ
ನೋಡು ಹತ್ತಿರಕೆ ಕರೆದಾರೆ
ನೋಡು ಹಿರಿಯ ಮಗನಕರೆದು
ಅಯ್ಯ ಕಿರಿಯ ಮಗನ ಕರೆದು
ನೋಡು ಹೆಣ್ಣು ಮಕ್ಕಳ ಕರೆದಾರೆ
ಅಯ್ಯ ಬಾರಪ್ಪ ಬಾರಪ್ಪ ನನ್ನ ಮಗನೆ
ಅಯ್ಯ ನನ್ನಾಸೆ ನಿನಗ್ಯಾಕೆ
ನೋಡು ನಿಮ್ಮಾಸೆ ನನಿಗ್ಯಾಕೆ
ನನ್ಗ ಹೆಂಗಂಗೆ ಆತೀದೆ
ನನ್ಗೆ ಎಲ್ಲೆಲ್ಲೋ ಗ್ಯಾನಾವೆ
ನೋಡೋ ಮನೆಮಾರು ತಿರುಗುತಾದೆ
ಅಯ್ಯೋ ಬಾರಪ್ಪ ನನಮಗ್ನೆ
ನೀನು ಬಾಳ ಹಂಗೆ ಬಾಳಪ್ಪ
ನೀನು ಬದುಕ ಹಂಗೆ ಬದುಕಪ್ಪ
ನೀನು ಒಬ್ಬರ ಒಂದು ಮಾತ
ನೀನು ಬಾಯೆತ್ತಿ ಬಯ್ಯ ಬ್ಯಾಡ
ನೀನು ಕೈಯೆತ್ತಿ ಉಯ್ಯಾ ಬ್ಯಾಡ
ಅಯ್ಯ ಹಸಿವೆ ಅಂದರಿಗೆಲ್ಲ
ನೀನು ತುತ್ತನ್ನ ಇಕ್ಕಬೇಕು
ನೀನು ಮಗುಗಾರ ಕೊಡಬೇಕು

ನೀನು ಹಸ್ದು ಬಂದರಿಗಪ್ಪ
ನೀನು ಮುದ್ದೆ ಅನ್ನ ಇಕ್ಕಯ್ಯ
ಅಯ್ಯ ಹೊಡಿಯೋರ ಹಿಂದಕ್ಕೆಲ್ಲ
ಅಯ್ಯ ಹೋಗಬ್ಯಾಡಿ ನನ್ನ ಮಕ್ಕಳೆ
ನೀನು ಹಾಯಾರ ಮುಂದಕೆಲ್ಲ
ನೀವು ಹೋಗಬ್ಯಾಡಿ ನನ್ನ ಮಕ್ಕಳೆ
ನೋಡು ಸುತ್ತೇಳು ನಾಲಿಗೆ ಗಂಜಿ
ನೀವು ಸುಳ್ಳು ಸಾಕ್ಷಿ ಹೇಳಿ ಬ್ಯಾಡಿರಿ
ನೋಡು ಕೋರ್ಟು ಕಛೇರಿ ವೊಳ್ಗೆ
ನೀವು ಸುಳ್ಳನೆ ಹೇಳಬ್ಯಾಡಿ
ನೀವು ಬಾಳಿದಂಗೆ ಬಾಳರಯ್ಯ
ನಿನ್ನ ಹೊಟ್ಟೆಲಿ ಹುಟ್ಟಿದ
ಅಯ್ಯ ಮುದ್ದಿನ ಮಕ್ಕಳಿಗೆ
ಅಯ್ಯ ವಿದ್ಯೆ ಬುದ್ಧಿ ಹೇಳುತಾರೆ
ಅಯ್ಯ ಕೂಡಿದ ಮಡದಿಯ
ನೋಡು ಹತ್ತಿರಕೆ ಕರೆದಾರೆ
ಅವ್ವಾ ಬಾರವ್ವ ನನ್ನ ಮಡದಿ
ನೋಡು ನನ್ನಾಸೆ ನಿನಗ್ಯಾಕೆ
ನೋಡು ನಿನ್ನಾಸೆ ನನಗ್ಯಾಕೆ
ನೋಡು ನನ್ನ ಗ್ಯಾನ ಮರಿಯವ್ವ
ನೋಡು ನಾನು ಬಾಳಿದಂಗೆ ಬಾಳವ್ವ
ನಾನು ಬದುಕಿದಂಗೆ ಬದುಕವ್ವ
ನೋಡು ಕಂಡರ ಬಾಗಿಲಿಗೆ
ನೀನು ಹೋಗಬ್ಯಾಡ ನನ್ನ ಮಡದಿ
ನನ್ನ ಆಳಗೊಳನೆಲ್ಲ
ನನ್ನ ಗಂಡು ಮಕ್ಕಳನೆಲ್ಲ
ನನ್ನ ಗಂಡು ಮಕ್ಕಳಬಿಟ್ಟೇನು
ನನ್ನ ಹೆಣ್ಣು ಮಕ್ಕಳ ಬಿಟ್ಟೆನು
ನಾನು ಕಟ್ಟಿದ ಮನೆಗಳ
ನಾನು ಕೈಬಿಟ್ಟು ಹೋಗುತೀನಿ

ನಾನು ಮಾಡಿರೋ ಹೊಲಗಳ
ನಾನು ಕೈಬಿಟ್ಟು ಹೊಗುತೀನಿ
ಅಯ್ಯ ಅವ್ರನೆ ರಂಗೇಗೌಡ್ರು
ಅಯ್ಯ ಅವ್ರನೆ ಸ್ವಾಮೇಗೌಡ್ರು
ನೋಡೋ ತಾಯಿ ಪುಟ್ಟಮ್ಮನ
ನೋಡೆ ಆಕೆ ದ್ಯಾವಮ್ಮನೆ
ನೋಡು ವಿದ್ಯೆ ಬುದ್ಧಿ ಹೇಳುವಾಗ
ನೋಡು ಹಾಳಾದ ಯಮದೋನು
ನೋಡು ಕಾಲೊಬ್ಬ ಸಿಗುತಾನೆ
ನೋಡು ಕೈಕಾಲ ನಾಟಿಗಳು
ನೋಡು ನಾಟಿ ನಿಂತೋಗುತಾವೆ
ನೋಡು ಇನ್ನೊಬ್ಬ ಯಮದೋನು
ನೋಡು ಬಾಯಿಬಿಟ್ಟಾಗ ಮ್ಯಾಳೆಯ
ನೋಡು ಜಗ್ಗಿಸಿ ಮುರಿಯುತಾನೆ
ನೋಡು ಜಗ್ಗಿಸಿ ಮುರಿಯುತಾನೆ
ನೋಡು ದೊಡ್ಡ ಜೀವ ಹೋಗುತಾದೆ.
ನೋಡು ಮೆಟ್ರೆಗಣ್ಣು ಬೀಳುತಾವೆ
ನೋಡು ಹಕ್ಕಿ ಬಾಯಿಬಿಟ್ಟಂಗೆ
ಆಹಾ ಬಿಟ್ವಾರೆ ರಂಗೇಗೌಡ್ರು
ನೋಡು ಬಿಟ್ವಾರೆ ಸ್ವಾಮೇಗೌಡ್ರು
ನೋಡು ಬಿಟ್ವಾರೆ ದ್ಯಾವಮ್ಮನು
ನೋಡು ಬಿಟ್ವರೆ ಪುಟ್ಟಮ್ಮನು
ಆಹಾ ಪುಟ್ಟಮ್ಮನ ಬಳಗೆಲ್ಲಾ
ಆಹಾ ದ್ಯಾನಮ್ಮನ ಬಳಗೆಲ್ಲಾ
ಅಯ್ಯ ರಂಗೇಗೌಡ್ರ ಬಳಗೆಲ್ಲಾ
ಅಯ್ಯ ಸ್ವಾಮೇಗೌಡ್ರ ಬಳಗೆಲ್ಲಾ
ನೋಡು ಸುತ್ತಮುತ್ತಲು ಕುತಕಂದು
ನೋಡು ಬಾಯಿಗ್ವಾಲ ಬಿಡುತಾರೆ
ಬಿಟ್ವಾಲು ಬಿಟ್ಟಂಗೆ
ನೋಡು ತಾಯಿನೆ ಎದಿಹಾಲು

ನೋಡು ಮೂಗಲ್ಲಿ ಒರಸಿದಂಗೆ
ಅಯ್ಯ ಹಟ್ಟಿಗೆ ಹಿಡಿರಪ್ಪ
ಅಯ್ಯ ಅವ್ರ ಆಸೆ ನಮಗ್ಯಾಕೆ
ಅಯ್ಯ ನಮ್ಮಾಸೆ ಅವ್ರಿಗ್ಯಾಕೆ
ತೋಳುಕೈ ಕೊಡುತಾರೆ
ನೋಡು ಹಟ್ಟಿಗೆ ಹಿಡುದಾರೆ
ನೋಡು ಹಾಸಿದ್ದ ಮಂದಲಿಕೆ
ಅಯ್ಯ ಕೊಡವಿನ ಹಾಸುತಾರೆ
ನೋಡು ಕಾಲಿಯ ಹರಿವಾಣ
ನೋಡು ಎದಿಮ್ಯಾಲೆ ಇಡುತಾರೆ
ನೋಡು ಸೇರಕ್ಕಿ ಹಿಡಿಜೋಳ
ನೋಡು ಸೆರಗಿಗೆ ಕಟ್ಟುತ್ತಾರೆ
ನೋಡು ಅಂಬಲ ಇಡಕೊಂಡು
ಅಯ್ಯ ಬಾಯಿಗೆ ವರೆದಾರೆ
ಅಯ್ಯ ಚಿನ್ನನೆಂಬುದು
ನೋಡು ಬಾಯಲ್ಲಿ ಕೊಡುತಾರೆ
ನೋಡು ಕಾಲ ಹಿಂದಕೆ ತೆಗೆದು
ನೋಡು ಪೆಟ್ಟಿಯ ಹಾಕ್ಯಾರು
ನೋಡು ಕೂಳಿನ ಮಡಕೆಗಳ
ನೋಡು ತಲೆದಿಸಿಗೆ ಇಡುತ್ತಾರೆ
ನೋಡು ಅಗ್ಗಣಿಯನೆ ಕಾದು
ನೋಡು ಬಿದಿರನೆ ಕಡಿಸ್ಯಾರು
ಅಯ್ಯ ನೀರುಗಳ ತೌಬೆಚ್ಚಗೆ
ಆಹಾ ನೀರಾನೆ ಕಾಸ್ಯಾರು
ಆಹಾ ತಂದೆ ರಂಗೇಗೌಡರಿಗೆ
ನೋಡೆ ಆಕೆ ಪುಟ್ಟವ್ವಗೆ
ನೋಡು ತಾಯೆ ದ್ಯಾವಮ್ಮಗೆ
ನೋಡು ಅವ್ರೆ ಸ್ವಾಮೇಗೌಡರಿಗೆ
ಅಯ್ಯ ನೀರಾನೆ ಎರೆದಾರೆ
ನೋಡು ಮೈಯಾನೆ ತೊಳೆದಾರು

ನೋಡು ಹೊಸಬಟ್ಟೆ ತೊಡಿಸಾರು
ನೋಡು ಮೈಮ್ಯಾಲೆ ಧರಿಸ್ಯಾರು
ನೋಡು ಪೇಟ ಸುತ್ತಲುತಾರೆ
ನೋಡು ಪೂಜೆಯ ಮಾಡಲುತಾರೆ
ನೋಡು ಹಣ್ಣುಕಾಯ ಮಾಡುತಾರೆ
ನೋಡು ಉಳಿದೆಬ್ಬೆ ಹೊಡಿಸ್ಯಾರು
ನೋಡು ಒಟ್ಟಿಗೆ ಇಟ್ಗೆಂದು
ನೋಡು ಅವ್ರ ರಂಗೇಗೌಡ್ರು
ನೋಡು ಅವ್ರ ಸ್ವಾಮೇಗೌಡ್ರ
ನೋಡು ತಾಯೆ ಪುಟ್ಟವ್ವನ
ಅಯ್ಯ ಆಕೆ ದ್ಯಾವಮ್ಮನ
ನೋಡು ಹಟ್ಟಿಯ ಕೆಳಗೆಲ್ಲ
ನೋಡೆ ಕರಕೊಂಡು ಹೋಗುವಾಗ
ಅಯ್ಯ ಹಡೆದ ಮಕ್ಕಳ ನೋಡು
ನೋಡು ಜೀವಗಾಲ ಆಯ್ತಂತೆ
ಅಯ್ಯೊ ಅಯ್ಯಯ್ಯೋ ನಮ್ಮಪ್ಪ
ಅಯ್ಯ ಕೇಳವ್ವ ನನ್ನ ತಾಯಿ
ನೋಡೋ ನಮ್ಮ ಕೈಯ್ಯ ಬಿಟ್ಟು ಹೊಯ್ತಂತೆ
ನಮ್ಮ ಸಾಕಾರು ಯಾರವ್ವ
ಅಂತ ಮಕ್ಕಳ ನೋಡಕೆ ಬಂದೆ
ನೋಡೋ ಜೀವಗಾಲ ಆಯಿತಂತೆ
ನೋಡೋ ಅವ್ರಾನೆ ಕರಕಂಡು
ನೋಡೋ ಕಡೆಓಣಿ ಮುಟ್ಟವ
ನೋಡೋ ಕಳಿಸ್ಯಾರೆ ಬರುವಾಗ
ಆಹಾ ಎಡಕೆ ನರಕದ ಗುಂಡಿ
ಆಹಾ ಬಲಕೆ ಸಿಗ್ಗದ ಗುಂಡಿ
ಆಹಾ ನಡುವೆ ನೂಲನೆ ಮ್ಯಾಲಪ್ಪ
ನೋಡೋ ನಡೆಸುವಾಗ ರಂಗೇಗೌಡ್ರ
ಆಹಾ ನಡೆಸುವಾಗ ಸ್ವಾಮೇಗೌಡ್ರ

ಆಹಾ ನಡೆಸುವಾಗ ಪುಟ್ಟವ್ವನ
ಆ ನಡೆಸುವಾಗ ದ್ಯಾವಮ್ಮನ
ನೋಡು ಹಾಳಾದ ಕೊತ್ತಿ ಹೋಗಿ
ನೋಡು ನೂಲನೆ ಹರಿದೀತೆ
ನೋಡು ನರಕದ ಗುಂಡಿಗೆ
ನೋಡು ಮುಗ್ಗರಿಸಿ ಬೀಳಲುತಾರೆ
ನೋಡು ಅವ್ರು ಸಾಕಿದ ನಾಯಿನೆ
ನೋಡು ಗಳಗಳನೆ ಬಗಳುತಾವೆ
ನೋಡು ತುದಿಗಾಲ ಕೊಡುವುತಾದೆ
ನೋಡು ಮ್ಯಾಲಕೆ ಎತ್ತುತಾದೆ
ನೋಡು ಕಟಕಟ್ಟೆ ಮ್ಯಾಲಪ್ಪ
ನೋಡು ತಡಿಕೆಯ ಮಾಡುತಾರೆ
ನೋಡು ಕಬ್ಬಿಣದ ಕಾಗೆಗಳ
ನೋಡು ಕೀಳಕೆ ಬಿಡುತಾರೆ
ನೋಡು ಉಕ್ಕಿನ ಗರಗಸ
ನೋಡು ನೆತ್ತಿಯ ಸೀಳುತಾರೆ
ನೋಡು ಕೊಂಡಿಯ ಚೇಳುಗಳು
ನೋಡು ಕಡಿಯಾಕೆ ಬಿಡುತಾರೆ
ನೋಡು ಕಾರೆಯ ಮುಳ್ಳುಗಳ
ನೋಡು ಪಾದಕೆ ಹರವ್ಯಾರು
ನೋಡು ಹಿಂಚೆ ಕೊಡುತಾರೆ
ನೋಡು ಬಂಧನ ಕೊಡುತಾರೆ
ಅಯ್ಯ ತಡಿಯಪ್ಪ ಯಮದೋರೆ
ನೀನು ತಾಳಪ್ಪ ಯಮದೋರೆ
ನನ್ಗೆ ಹಿವ್ಷೆ ಕೊಡಬ್ಯಾಡ
ನನ್ಗೆ ನರಕ ಕೊಡಬ್ಯಾಡ
ನಾನು ಮಾಡಿದ ಕರ್ಮವ
ನಾನು ಹೇಳೀನೆ ಕೊಡುತೀನಿ
ನಾನು ಹತ್ತನೆ ಸುಳ್ಳು ಹೇಳಿ

ನಾನು ಕಲ್ಯಾಣ ಕಟ್ಟಿಸಿದೆನು
ನಾನು ಕೆರೆಯ ಕಟ್ಸ್ಯೇನು
ನಾನು ತೋಪ ಹಾಕಿಸ್ಯೇನು
ನಾನು ಮದುವೆ ಇಲ್ಲದರಿಗಪ್ಪ
ನಾನು ಮದುವೆ ಮಾಡಿಸಿದ್ದೆ
ದೇವತಾನು ವಂತರು ನೀವು
ಅಯ್ಯ ಧರ್ಮವಂತರು ನೀವು

ಅಯ್ಯ ಕೇಳಿರಿ ರಂಗೇಗೌಡ್ರೆ
ಅಯ್ಯ ಕೇಳಿರಿ ಸ್ವಾಮೇಗೌಡ್ರೆ
ಅಯ್ಯ ಕೇಳಿರಿ ದ್ಯಾವಮ್ಮರೆ
ಅಯ್ಯ ಕೇಳಿರಿ ಪುಟ್ಟವ್ವರೆ
ನೀವು ಇಲ್ಲಿನೆ ಇರಬ್ಯಾಡಿ
ಆಹಾ ದೇವೇಂದ್ರ ರಾಜನ
ನೀವು ಸುರಗಿಯ ವನದಲ್ಲಿ
ನೀವು ಮಗನ ಮದುವೆಲ್ಲಿ
ನೀವು ತಣ್ಣನೆ ಇಟುಕಂದು
ನೀವು ತಣ್ಣನೆ ಇರಿರಂತೆ
ನೋಡು ತಣ್ಣನೆ ಕಳಿಸಿದರು

ನೋಡೊ ಹೊಟ್ಟೆಲಿ ಹುಟ್ಟಿದ
ನೀವು ಮುತ್ತಿನ ಮಕ್ಕಳವ್ವ
ಅಯ್ಯ ಅವುನೆ ರಂಗೇಗೌಡ್ರು
ಅಯ್ಯ ತಾಯಿ ದ್ಯಾವಮ್ಮನ
ನೋಡೆ ಅವುನೆ ಪುಟ್ಟವ್ವನ
ನೋಡು ತಂದೆ ಸ್ವಾಮೇಗೌಡ್ರ
ನೋಡು ಪಾದವೆ ನೆನಕಂದು

ದಾಟಿ – ೨

ತಟ್ಟಿದು ದೊಡ್ಡಲು ಬೆಟ್ಟದು ಬೆಟ್ಟಲಾ (?)
ಘಟ್ಟದಿಂದಿಳಿದು ಬರುವಾರೆ। ತಾನತಂದನ ತಾನಂದನೋ

ಘಟ್ಟದಿಂದ ಇಳಿದು ಬರುವಾಗ ರಂಗೇಗೌಡ್ರನ, ಮೇಗೌಡ್ರ
ಇಟ್ಟಾಡಿ ಬಂದಾವು ಎಳೆನೀರು

ಮಾರಾಯ ಸ್ವಾಮೇಗೌಡ್ರ ಮನೆಯಲ್ಲ ಆದಾವು
ಮಾವನೂರಿಂದ ಗಳ ಬಂದಾವು। ಸ್ವಾಮೇಗೌಡ್ರು ರಂಗೇಗೌಡ್ರಗೆ
ಬಾರೆ ಮ್ಯಾಲಾದು ದೊಡ್ಡ ಅರಮನೆ

ಸತ್ತ ದ್ಯಾವಮ್ಮನ ಸತ್ಯವ ನೋಡಿ
ಇಟ್ಟು ಮೂರು ಮಗ್ಯೊ ಜಲದಲ್ಲಿ। ಇಟ್ಟಾಡೋ
ಹುಟ್ಟಾಳೆ ಹೊನ್ನೆಮರವಾಗಿ

ಬಣ್ಣದ ಕೆಂಚಿ ಬಲಗೈಲಿ ಇಡಕಂಡು
ಬಂದಾರು ಬೀದಿವೊಳಗೆಲ್ಲ। ಪುಟ್ಟಮ್ಮ ದ್ಯಾವಮ್ಮರು
ತರುತಾರೆ ಮಕ್ಕಳಿಗೆ ಒಣ ಹಿಟ್ಟ

ಮಕ್ಕಳು ಬಂದರೇನು ವಾಲೇಯ ತಂದರೇನು
ಆಯಾ ವೊಳೆ ಶಿವಾ ಅಡವಿಲಿ। ಸೇರಿದ ಮ್ಯಾಲೆ
ಮಕ್ಕಳ ತಂಟೆ ನಮಗ್ಯಾಕೆ

ಮಾಡಿದ ಮನೆ ಬಿಟ್ಟು ಹೂಡಿದ ಒಲೆ ಬಿಟ್ಟು
ಆಡುಕ್ಯಾಣುಳ್ಳ ಹಸುಳೆಯ। ಮಕ್ಕಳ ಬಿಟ್ಟು
ತುಡುಕುತಾರೆ ಸುಡುಗಾಡ

ನೆಲ್ಲಿಯ ಮರ ಚೆಂದ ನೆಲ್ಲಿಯಕಾಯಿ ಚೆಂದ
ವಲ್ಲಕೆ ಬರುವ ಹೊಳಿ ಚೆಂದ। ರಂಗೇಗೌಡ ಸ್ವಾಮೇಗೌಡ್ರ
ಹಲ್ಲಿನ ಬಾವ ಬಹು ಚೆಂದ

ಉತ್ತಿರೋ ಹೊಲ ಚೆಂದ ಉತ್ತರಿ ಕಾಯ ಚೆಂದ
ಉಬ್ಬಿಸಿ ಬರುವ ಹೊಳಿ ಚೆಂದ। ದ್ಯಾವಮ್ಮ ಪುಟ್ಟಮ್ಮನ
ಹುಟ್ಟಿನ ದಂಡೆ ಬಹುಚೆಂದ
ಯಮದೋರು ಬರುವಾಗ ಬರಿಕೈಲಿ ಬರಲಿಲ್ಲ
ಕೈಯಲ್ಲಿ ಕತ್ತಿ ಮಿಣಿ ಬಿಲ್ಲು। ಹಿಡಕಂಡು
ನ್ಯಾರಾದ ಕೊನೆಯ ಕಡಕೊಂಡು

ಸತ್ತೋದರಂತ ಚಿಂತೆ ಮಾಡಲು ಬ್ಯಾಡಿ
ಹೆಚ್ಚಳವಿರಲಿ ಮನದಲ್ಲಿ। ರಾಜೇಗೌಡ್ರೆ
ಹೆಚ್ಚೊಕ್ಕಲಾಗಿ ಸುಖಬಾಳಿ

ನಿಮ್ಮನೆ ಅನ್ನ ಹೆಚ್ಚಲಿ ಹೊನ್ನು ತಲೆಬಾಗಲಿ
ಸಣ್ಣ ಮಾದೇವನ ವರದಿಂದ। ನಿಮಗೆ
ಅನ್ನ ಹೆಚ್ಚಲಿ ಮನೆ ತುಂಬಾ

ನೀವ್ಕೊಟ್ಟ ದಾನ ನಿಮ್ಮ ಹಿರಿಯರಿಗಿರಲಿ
ಹಿರಿಯರ ಕರುಣ ನಿಮಗಿರಲಿ
ಸಗ್ಗದ ಬಾಗಿಲ ಬಗ್ಗನೆ ಹಾರೊಡೆದು
ನುಗ್ಗಿ ಹೋದಾರು ವೈಕುಂಟಕೆ

ಲಿಂಗವೆ ಲಿಂಗವೇ ಏಸೊಂದು ಲಿಂಗವೇ
ನೂರೊಂದು ಲಿಂಗವೇ ವನಗೂಡಿ। ನಾಕಾಳೂವೆ
ಸೇರಲಿ ದೊಡ್ಡಬಳಗಕೆ

ಏನಾಪ್ಪಾ ನೀವು ನೀಡಿದ ಕೈಗೆ ನಿಧಾನಕ್ಕೆ ಕೊಟ್ಟು ಬೇಡಿದ ಕೈಗೆ ಬಲ ಬಾಗಿ
ಕೊಟ್ಟು ಎಡಕೋದರೆ ಎಡಗೈಲಿ ಕೊಟ್ಟು ಬಲಕೋದರೆ ಭಾಗ್ಯಕೊಟ್ಟು
ಕಾಪಾಡಲಯ್ಯ ಶ್ರೀರಾಮಾ ರಾಮಾ ರಾಮಾ.... ಆ.......

ಸತ್ತವರೆಲ್ಲ ಸತ್ಯವಂತರು; ಅವರನ್ನು ನೆನೆಯುವುದೇ ಪುಣ್ಯದ ಕೆಲಸ
ಸತ್ಯವಂತರ ಪಾದ ಹೊತ್ತಾರೆ ನೆನೆದೇನು
ಸತ್ಯವಂತರು ಹಿರಿಯರು ಪಾದಗಳ
ಹೊತ್ತಿನಂತೆ ಎದ್ದು ನೆನೆದೇನು

ಈಗಿದ್ದ ನಂಜೇಗೌಡ ಈಗೆಲ್ಲಿ ಹೋದರಯ್ಯ
ನಾಲ್ವರು ಬಿತ್ತಿದ ನವಣೆಯ। ತಾಳಡಿಯ
ಕಾಳಿಂಗನಾಗ ಹರುಕೊಂಡ॥
ಕಾಳಿಂಗನಾಗ ಕಪಿಲೆ ಬಣ್ಣದನಾಗ
ಗೋದುವೆನಾಗ ಎಳೆನಾಗ। ನಂಜೇಗೌಡ್ರ
ನೇರುಳ್ಳ ಕೊನೆಯ ಕಡಿದಾನು॥

ತಬ್ಬಲಿ ಕುಂಬಳ ಹಬ್ಬಿತು ಮನೆ ಮುಂದೆ
ಇಬ್ಬಂದಿಗಾರ ಯಮದೋನು। ನಂಜೇಗೌಡ್ರ
ಹಬ್ಹೋಗೋ ಕುಡಿಯ ಹರಿದಾನೆ॥

ಪಟ್ಟನಕ್ಹೋಯ್ತಿನಂತ ದಟ್ಟಿಯ ಸುತ್ತಿದರು
ಅಟ್ಟಿಯ ಕಲ್ಲು ಎಡವಿದರು। ರಂಗೇಗೌಡ
ಮತ್ತೆ ಮಗುಚಿ ಮನೆಗೆ ಬರಲಿಲ್ಲ॥

ಸೆರೆಯ ಹೋಯ್ತಿನಂತ ಸೆರಗಿಗಕ್ಕಯ ಕಟ್ಟಿ
ಕಡೆ ಓಣಿತಕ್ಕೂ ಕಳುಹೀದೋ। ರಂಗೇಗೌಡ
ಮತ್ತೆ ಮಗುಚಿ ಮನೆಗೆ ಬರಲಿಲ್ಲ॥

ಮುದ್ದು ಮುಖದ ಮೇಲೆ ಎದ್ದೊ ಬೆಪರು ಸಾಲೆ
ಮದ್ದಿಗ್ಹೋದೋರು ಬರಲಿಲ್ಲ। ರಂಗೇಗೌಡ
ಮುದ್ದಿನಂಥ ಮುಖವ ಕಾಣ್ಣಿಲ್ಲ॥

ಮಕ್ಕಳಬಿಟ್ಟು ಒಕ್ಕಲು ಹೋಯ್ತಾರೆ
ಸಿಕ್ಕಿ ಸಿಕ್ಕಿದವರು ಕರೆತನ್ನಿ। ನಂಜೇಗೌಡ
ಮಕ್ಕಳ ಗೋಳು ನಿಲುಗೋಳು॥

ಹೆಣ್ಣು ಮಕ್ಕಳ ಕರೆಸಿ ಸಣ್ಣ ಸೀರೆಯನುಡಿಸಿ
ಕಣ್ಣಿಂದ ನೋಡಿ ಮರುಗೇನು। ಅನ್ನೊ ಹೊತ್ಗೆ
ಕಣ್ಣೀಗೆ ಮಂಜು ಕವಿದಾವೆ॥

ಬಾಳೇನು ಬದುಕೇನಂತ ಬಾಳೆಯ ಹಾಕಿದರು
ಬಾಳೆಯ ಒತ್ತಿಗೆ ಬದನೇಯ। ಬೆಳೆಯಲು
ಬಾಳುಗೊಡದೆ ಹೋದ ಯಮದೋನು॥

ಅಡಿಗೆ ಆಗಾದೆ ಉಣ್ಣೇಳು ನಂಜೇಗೌಡ
ಇನ್ನೇಳು ಮಂದಿ ಯಮದೋರು। ಬಂದವರೆ
ಇನ್ಯಾಕೆ ಮಗನೆ ಹಗಲೂಟ॥

ಹಾಲು ಕಾದಾವೆ ಹರಿವಾಣ ಬೆಳಗಾವೆ
ಸಾಲುಕಲ್ಲ ಕೊಡಗಿ ಹೊಲದಲ್ಲಿ। ನಂಜೇಗೌಡ
ಕಾಲು ಮುರಿದು ತೆಂಗ ಒರಗವರೆ॥

ತುಪ್ಪ ಕಾದಾವೆ ಬಟ್ಟಲು ಬೆಳಗಾವೆ
ಚಿಟ್ಟಿಕಲ್ಲು ಕೊಡಗಿ ಹೊಲದಲ್ಲಿ। ನಂಜೇಗೌಡ।
ರಟ್ಟೆ ಮುರಿದು ತೆಂಗ ಒರಗವರೆ॥

ಕಟ್ಟೆ ಕಟ್ಟಿಸೋರು ಈಡು ಹಾಕಸೋರು
ಒಕ್ಕಲು ಹೋಗೋರ ತಡೆಯೋರು। ರಂಗೇಗೌಡ್ರಂಥ
ಸತ್ಯವಂತರುಂಟೆ ಸಭೆಯಲ್ಲಿ॥

ಕೆರೆಯ ಕಟ್ಟಿಸೋರು ಸುರಹೊನ್ನೆ ಹಾಕಿಸೋರು
ಸೆರೆಯ ಹೋಗೋರ ಬಿಡಿಸೋರು। ರಂಗೆಗೌಡ್ರಂಥ
ಸಾಹಸವಂತರುಂಟೆ ಸಭೆಯಲ್ಲಿ॥

ಆದ ಅಡುಗೆಯ ಬಿಟ್ಟು ತೇದ ಗಂಧವ ಬಿಟ್ಟು
ಮಕ್ಕಳ ಬಿಟ್ಟು ಮನೆಯಲ್ಲಿ। ರಂಗೇಗೌಡ್ರು
ಹೊಕ್ಕಲು ಹೋಯ್ತಾರೆ ಶಿವನೆ ಗತಿಯೆಂದು॥

ಕಟ್ಟಿದ ಮನೆಬಿಟ್ಟು ಹೂಡಿದ ಆರು ಬಿಟ್ಟು
ಗುಂಪು ಮಕ್ಕಳ ಬಿಟ್ಟು ಮನೆಯಲ್ಲಿ। ರಂಗೇಗೌಡ್ರು
ದಂಡು ಹೋಯ್ತಾರೆ ಶಿವನ ಗತಿಯೆಂದು॥

ಆರು ಬೆರಳಿಗಾರು ಸೇರಿದ ಉಂಗುರು
ಹೋರಿಗೆ ಹಲ್ಲು ಕುಯ್ಯೋರು। ನಂಜೇಗೌಡ್ರು
ಹೋರಿ ಸಾವಿರಕೆ ಬೆಲೆಯಾದೊ॥

ಪಾಗಿನ ಮೇಲೆ ಏನೇನು ಬರೆದಾವೆ
ಪಾಲಿವಾಣ ಹಕ್ಕಿ ಗಿಳಿ ಹಿಂಡು। ನಂಜೇಗೌಡ್ರ
ಪಾಗಿನ ಮೇಲೆ ಬರೆದಾವೆ

ಸತ್ತ ನಂಜೇಗೌಡ್ರ ಹೊತ್ತರೆಷ್ಟು ಮಂದಿ
ಮುತ್ತುಗದ ಹೂವು ಮರೆಮಾಡಿ। ಹೊಲದಲ್ಲಿ
ಬಚ್ಚಿಟ್ಟು ಬಂದೊ ಬರಿಕೈಲಿ॥

ಸಗ್ಗದ ಬಾಗಿಲಲಿ ಕಿಗ್ಗಣ್ಣು ಕೋಗಿಲೆ
ಸುದ್ದಿಯ ಹೇಳು ನವುಗೊಂಡ। ನಂಜೇಗೌಡ್ರು
ಇದ್ದಾರೆ ಜವರಾಯ್ನ ಹದುಳಲ್ಲಿ॥

ಸತ್ತ ನಂಜೇಗೌಡ ಸತ್ತರೆನ್ನಲು ಬೇಡ
ಸತ್ತರೀ ಮಾನ ಉಳಿವುದೇ?। ನಂಜೇಗೌಡ
ಬಿಟ್ಟು ಹೋಗವರೆ ಕೊನೆಗಳ॥[೨೫]

ಪ್ರಸ್ತುತ ಹೊಗಳಿಕೆ ಪದವು ಪುಟ್ಟವ್ವ ಹಾಗೂ ರಂಗೇಗೌಡ್ರ ಮುದ್ದಿನ ಮಗನಾದ ರಾಜೇಗೌಡ್ರ ವಿವರಗಳನ್ನು ತಿಳಿಸುತ್ತದೆ. ಇದರ ಜೊತೆಗೆ ಮಟ್ಟ ಮಂಗಳವಾರ ಯಮದೊರೆ ಬರುವ ವಿವರಗಳಿವೆ. ತಾಯಿ ಪುಟ್ಟವ್ವ, ದ್ಯಾವಮ್ಮ, ರಂಗೇಗೌಡ್ರು, ಸ್ವಾಮೇಗೌಡ್ರನ್ನ ಕರೆದುಕೊಂಡು ಬರಬೇಕೆಂದು ಯಮದೂತರಾಯ ತನ್ನ ದೂತರಿಗೆ ಹೇಳಿ ಕಳುಹಿಸುವ ಸಂಗತಿಗಳಿದ್ದು, ಅವರು ಆ ಗ್ರಾಮಕ್ಕೆ

ಬಂದಾಗಿನ ಸನ್ನಿವೇಶದ ಚಿತ್ರಣಗಳಿವೆ. ಯಮದೂತರು ಬಂದಾಗ ಕೊಟ್ಟಿಗೆಯ ಗೋವುಗಳು ಬೆದರುವ ದೃಶ್ಯ, ಹಟ್ಟಿಗಳ ನಾಯೆಲ್ಲಾ ಬೊಗಳುವ ರೀತಿಗಳು ಆ ಸಮಯದ ನೈಜ ಚಿತ್ರಣವನ್ನು ಒದಗಿಸುತ್ತವೆ. ಆದರೆ ಈ ರೀತಿ ಯಮದೂತರು ಬಂದಿರುವ ವಿವರ ಇವರಾರಿಗೂ ತಿಳಿದಿಲ್ಲ. ಆವರು ತಮ್ಮ ಮುದ್ದಿನ ಮಕ್ಕಳನ್ನು ಹತ್ತಿರಕ್ಕೆ ಕರೆದಿದ್ದಾರೆ. ಹಿರಿಯ ಮಗ, ಕಿರಿಯ ಮಗ, ಹೆಣ್ಣು ಮಕ್ಕಳನ್ನೆಲ್ಲ ಕರೆದು ಬುದ್ಧಿ ಮಾತುಗಳನ್ನು ಹೇಳುತ್ತಾರೆ. ಒಬ್ಬರ ಒಂದು ಮಾತೂ ಆಡಬಾರದು, ಬಾಯೆತ್ತಿ ಬಯ್ಯಬಾರದು, ಕೈಯೆತ್ತಿ ಉಯ್ಯಬಾರದು, ಹಸಿವೆ ಅಂದವರಿಗೆ ತುತ್ತನ್ನು ನೀಡಬೇಕು ಎಂದು ಜೀವನದ ನೈತಿಕ ಮೌಲ್ಯಗಳನ್ನು ಕುರಿತು ವಿವೇಕವನ್ನು ಹೇಳುತ್ತಾರೆ.

ಹಸಿದು ಬಂದವರಿಗೆ ಮುದ್ದೆ ಅನ್ನ ಇಕ್ಕಬೇಕು. ಹೊಡೆಯುವವರ ಹಿಂದೆ, ಹಾಯುವವರ ಮುಂದೆ ಹೋಗಬೇಡಿ ಎಂದು ಬುದ್ಧಿ ಹೇಳುತ್ತಾರೆ. ಸುತ್ತೇಳು ನಾಲಿಗೆಗಂಜಿ ಸುಳ್ಳು ಸಾಕ್ಷಿ ಹೇಳಬೇಡಿ. ಕೋರ್ಟು ಕಛೇರಿವೊಳಗೆ ನೀವು ಸುಳ್ಳು ಹೇಳಬೇಡಿ ಎಂದು ವಿದ್ಯೆ ಬುದ್ಧಿಯನ್ನು ಹೇಳುತ್ತಾರೆ. ನಂತರ ಮಡದಿಯನ್ನು ಹತ್ತಿರಕ್ಕೆ ಕರೆದು ಆಕೆಗೆ ಬುದ್ಧಿ ಹೇಳುತ್ತಾರೆ. ಈ ರೀತಿ ಬುದ್ಧಿ ಹೇಳುವಾಗ ಯಮದೋರು ಅವರ ಪ್ರಾಣಗಳನ್ನು ಕೊಂಡುಹೋದರೆಂಬ ವಿವರಗಳಿವೆ. ಇದನ್ನು ಕಂಡ ಬಳಗವೆಲ್ಲಾ ಬಾಯಿ ಬಾಯಿ ಬಡಿದುಕೊಂಡು ದುಃಖಿಸುತ್ತಾರೆ. ನಂತರ ಅವರ ಶವ ಸಂಸ್ಕಾರಕ್ಕಾಗಿ ಸಿದ್ಧಪಡಿಸಿಕೊಂಡು ಪೆಟ್ಟಿಯ ಹಾಕಿದ್ದಾರೆ. ಕೂಳಿನ ಮಡಕೆಗಳನ್ನು ತಲೆದಿಸಿಗೆ ಇಟ್ಟಿದ್ದಾರೆ. ಅಗ್ಗಣಿಯನೆ ಕಾದು ಬಿದಿರನ್ನ ಕಡಿಸಿದ್ದಾರೆ. ರಂಗೇಗೌಡರಿಗೆ, ಪುಟ್ಟವ್ವಗೆ, ಸ್ವಾಮೇಗೌಡರಿಗೆ ನೀರನ್ನು ಎರೆದು, ಮೈಯನ್ನು ತೊಳೆದಿದ್ದಾರೆ. ಎಲ್ಲರಿಗೂ ಸಿಂಗರಿಸಿ, ಪೂಜೆಯ ಮಾಡಿ ಹಟ್ಟಿಯ ಕೆಳಗೆಲ್ಲ ಕರೆದುಕೊಂಡು ಹೋಗುವ ಚಿತ್ರಣ ನಮ್ಮ ಜನಪದರ ಬದುಕಿನ ವಿವರಗಳನ್ನು ತಿಳಿಸಿಕೊಡುತ್ತದೆ.

ಜೊತೆಗೆ ನರಕದ ಗುಂಡಿ, ಸಗ್ಗದ ಗುಂಡಿಗಳನ್ನು ಪರಿಚಯಿಸಲಾಗಿದೆ. ಅಲ್ಲದೆ ಅವರು ಸಾಕಿದ ಬೆಕ್ಕು, ನಾಯಿಗಳ ವಿವರ, ನರಕದಲ್ಲಿ ಕೊಡುವ ಶಿಕ್ಷೆಗಳ ಚಿತ್ರಣವಿದೆ. ಕಬ್ಬಿಣದ ಕಾಗೆಗಳ, ಉಕ್ಕಿನ ಗರಗಸ, ನೆತ್ತಿಯನ್ನು ಸೀಳುವುದು, ಕೊಂಡಿಯ ಚೇಳುಗಳ ಕಡಿತ, ಕಾರೆಯ ಮುಳ್ಳು ಮೊದಲಾದ ಚಿತ್ರ ಹಿಂಸೆಯ ವಿವರಗಳನ್ನು ಸಹ ಈ ಸಾವಿನ ಪದ ನಿರೂಪಿಸುತ್ತದೆ. ಇವುಗಳ ಮುಖ್ಯ ಉದ್ದೇಶ ವ್ಯಕ್ತಿ ತಾನು ಬದುಕಿರುವಾಗ ಒಳ್ಳೆಯವನಾಗಿ ಬಾಳಿ ಬದುಕಲೆಂಬುದೇ ಆಗಿದೆ.

ಪ್ರಮುಖವಾಗಿ ಈ ಸಾವಿನ ಪದಗಳಲ್ಲಿ ನಮ್ಮ ಜನಪದರ ಜೀವನ ವಿಧಾನ, ಅವರ ಬದುಕಿನ ರೀತಿ ನೀತಿಗಳು, ಅವರು ಬಾಳಿ ಬದುಕಿದ ವಿವರಗಳು ಮಡುಗಟ್ಟಿವೆ. ಅವರ ಕಷ್ಟ-ಸುಖ, ನೋವು-ನಲಿವು ಅವರ ಜೀವನ ಪ್ರೀತಿಯ ಮಧುರ ಕ್ಷಣಗಳ ನೈಜ ಚಿತ್ರಣ ನಮ್ಮ ಗಮನವನ್ನು ಸೆಳೆಯುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನೋವು, ನಲಿವು, ಸುಖ, ದುಃಖಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿದಂತೆಯೆ ಸಾವನ್ನು ಸಹ ಸ್ವೀಕರಿಸುವ ಮನಸ್ಥಿತಿ ಹಾಗೂ ಆಲೋಚನಾ ಕ್ರಮಗಳು ವಿಚಾರಾರ್ಹವಾಗಿವೆ. ಈ ರೀತಿಯಾಗಿ ನಿಧನರಾದ ರಂಗೇಗೌಡ, ಸ್ವಾಮೇಗೌಡ, ಪುಟ್ಟಮ್ಮ, ದ್ಯಾವಮ್ಮ, ನಂಜೇಗೌಡ ಮೊದಲಾದವರ ಗುಣಗಳನ್ನು ಕುರಿತು ಹೊಗಳುವ ಸಾವಿನ ಪದಗಳನ್ನು ಗಮನಿಸಬಹುದಾಗಿದೆ.

"ತಾನು ತಂದೆನಾನು ತಂದನು ತಂದೆನಾನ
ತಾನೆಂದೆನಾನ ತಂದನು ತಂದೆನಾನ ।ಸೊಲ್ಲು।

ಸತ್ತ ತಿಮ್ಮೇಗೌಡ್ನ ಹೊತ್ತಾರೇಸು ಮಂದಿ
ಮುತ್ತಿನುಂಗುರದ ಚಲುವನ ತಂದೆನಾನ ।ತಾ।

ಮುತ್ತಿನುಂಗುರದ ಚಲುವ ತಿಮ್ಮೇಗೌಡ್ನ
ಮುತ್ತುಗದೆಲೆಯ ಮರೆ ಮಾಡಿ ತಂದೆನಾನ ।ತಾ।

ಕಲ್ಲಾಗೆ ಮುಳ್ಳಾಗೆ ಮುಳುಜಾಜಿ ವನದಲ್ಲಿ
ಅಲ್ಲಿ ಕಾರಂಜಿ ಮರಳು ತಂದೆನಾನಾ ।ತಾ।

ಅಲ್ಲಿ ಕಾರಂಜಿ ಮರಳಾಗೆ ತಿಮ್ಮೇಗೌಡ್ನ
ಮುಚ್ಚಿಕೊಂಡನೊ ಜವದನು ತಂದೆನಾನ ।ತಾ।

ಸಾವೆನಾಕಲಿಲ್ಲ ಸಾಲ ತುಂಬಲಿಲ್ಲ
ಸಾಲುಕಲ್ಲ ಕೊಡಗಿಯ ಹೊಲದಲಿ ತಂದೆನಾನ ।ತಾ।

ಸಾಲುಕಲ್ಲ ಕೊಡಗಿಯ ಹೊಲದಲ್ಲಿ ತಿಮ್ಮೇಗೌಡ್ನ
ಸಾಗಿಸಿ ಬಂದವರೆ ಸಭೆಯಲ್ಲಿ ತಂದೆನಾನ ।ತಾ।

ಬಾಳೇನು ಬದುಕೇನೆಂದು ಬಾಳೆಯನಾಕಿಸಿದ
ಬಾಳಗೊಡದೋದ ಜವದನು ತಂದೆನಾನ ।ತಾ।

ಬದುಕೇನು ಎಂದು ನಿಸ್ತ್ರೇಯ ತಂದಾನು
ಬದುಕೊಡದೋದ ಜವದನು ತಂದೆನಾನು ।ತಾ।

ಹೆಂಡಿರ ಬಿಟ್ಟು ಹಿಂಡಗಲಿ ಹೋದಾರು
ಹೆಂಡರು ಗೋಳು ಬಲುಗೋಳು ತಂದೆನಾನ ।ತಾ।

ಹೆಂಡರ ಗೋಳು ಬಲುಗೋಳು ತಿಮ್ಮೇಗೌಡ್ನ
ಕಂಡು ಕಂಡರೆ ಕರುತಲ್ಲಿ ತಂದೆನಾನ ।ತಾ।

ಮಕ್ಕಳ ಬಿಟ್ಟು ಹೊಲಕ್ಕಲ ಹೋದಾರು
ಮಕ್ಕಳ ಗೋಳು ಬಲುಗೋಳು ತಂದೆನಾನ ।ತಾ।

ಮಕ್ಕಳ ಗೋಳು ಬಲುಗೋಳು ತಿಮ್ಮೇಗೌಡ್ನ
ಸಿಕ್ಕಿ ಸಿಕ್ಕಿದವರೆ ಕರುತಲ್ಲಿ ತಂದೆನಾನ ।ತಾ।

ತಾಯಿ ತಂದೆ ಬಿಟ್ಟು ಮಾಯವಾಗಿ ಹೋದಾರು
ತಾಯಿ ತಂದೆ ಗೋಳು ಬಲುಗೋಳು ತಂದೆನಾನ ।ತಾ।

ತಾಯಿ ತಂದೆ ಗೋಳು ಬಲುಗೋಳು ತಿಮ್ಮೇಗೌಡ್ನ
ಮಧ್ಯ ಹೋದರೆ ಕರುತಲ್ಲಿ ತಂದೆನಾನ ।ತಾ।

ಹಟ್ಟಿಲಿ ತಿಮ್ಮೇಗೌಡ ಗಟ್ಟಿಸಿ ನಡೆದರೆ
ಕೆಟ್ಟೆ ಕೆಟ್ಟೆಂದ ಜವದನು ತಂದೆನಾನ ।ತಾ।

ಕೆಟ್ಟೆ ಕೆಟ್ಟೆಂದ ಜವದನು ಬಾಗಿಲಿಗೆ
ತೊಟ್ಟಿಯ ಮುಳ್ಳ ಎಳೆಗೊಂಡು ತಂದೆನಾನ ।ತಾ।

ಯೇರಿಯ ಮಣ್ಣೇ ಯಾರ‍್ಯಾರ ವಳಗೊಂಡೆ
ಗೀರು ಗಂಧದ ಚಲುವನ ತಂದೆನಾನ ।ತಾ।

ಗೀರು ಗಂಧಾದ ಚಲುವ ತಿಮ್ಮೇಗೌಡ್ನ
ಯೇರಿಯ ಮಣ್ಣೇವಳಗೊಂಡು ತಂದೆನಾನ ।ತಾ।

ಕಟ್ಟೆಯ ಮಣ್ಣೇ ಯಾರ‍್ಯಾರ ವಳಗೊಂಡೆ
ಬಟ್ಟು ಗಂಧಾದ ಚಲುವನ ತಂದೆನಾನ ।ತಾ।

ಬಟ್ಟು ಗಂಧಾದ ಚಲುವ ತಿಮ್ಮೇಗೌಡ್ನ
ಕಟ್ಟೇಯ ಮಣ್ಣೇ ವಳಗೊಂಡು ತಂದೆನಾನ ।ತಾ।

ಆರು ಹೇಳಿದರೇನು ಮೂರ ಕೇಳಿದರೇನು
ನೂರೆಂಟನೇಳಿ ಫಲವೇನು ತಂದೆನಾನ ।ತಾ।

ನೂರೆಂಟನೇಳಿ ಫಲವೇನು ಹುಚ್ಚೇಗೌಡ
ತ್ಯಾಗವ ಕೊಟ್ಟು ಕಳುಹಿಸು ತಂದೆನಾನ ।ತಾ।"[೬೦]

ಪ್ರಸ್ತುತ ಗೀತೆಯು ಸತ್ತವರನ್ನು ಹೊಗಳುವ ಕೋಲಾಟದ ಪದವಾಗಿದೆ. ನಿಧನರಾದ ತಿಮ್ಮೇಗೌಡ ಎಂಬ ವ್ಯಕ್ತಿಯ ಗುಣಗಳನ್ನು ಹೊಗಳುತ್ತ, ಅವರ ಬದುಕಿನ ವಿವರಗಳನ್ನು ಈ ಗೀತೆಯು ತಿಳಿಸಿಕೊಡುತ್ತದೆ. ಮುತ್ತಿನುಂಗುರದ ಚೆಲುವನಾದ ತಿಮ್ಮೇಗೌಡನನ್ನು ಸಾಲುಕಲ್ಲ ಕೊಡಗಿಯ ಹೊಲದಲ್ಲಿ ಹೂಳಲು ತರುತ್ತ, ಆತನನ್ನು ನೆನೆದುಕೊಂಡು ಅಳುತ್ತ ಗೋಳಾಡುವ ಹೆಂಡತಿ, ಮಕ್ಕಳು, ತಾಯಿ, ತಂದೆಯರ ವಿವರಗಳನ್ನು ಈ ಗೀತೆಯು ತಿಳಿಸಿಕೊಡುತ್ತದೆ. ಈ ರೀತಿಯ ಸತ್ತವರನ್ನು ಹೊಗಳುವ ಪದಗಳು ವಿಶೇಷವಾಗಿ ಚನ್ನರಾಯಪಟ್ಟಣ ತಾಲ್ಲೂಕು ಹಾಗೂ ಹಾಸನ ಜಿಲ್ಲೆಯಲ್ಲಿ ಕಂಡುಬರುತ್ತವೆ.

೪.೭. ಹಾಸ್ಯ ಅಥವಾ ವಿಡಂಬನಾ ಜನಪದ ಗೀತೆಗಳು

ಹಾಸ್ಯ ಅಥವಾ ವಿಡಂಬನಾ ಜನಪದ ಗೀತೆಗಳನ್ನು ಮದುವೆಯ ಸಮಯದಲ್ಲಿ ಕಾಣಬಹುದಾಗಿದೆ. ಈ ಸಂದರ್ಭದಲ್ಲಿ ಬೀಗರು ಒಬ್ಬರನ್ನೊಬ್ಬರು ಜರಿಯುವ, ವಿನೋದ ಮಾಡುವ ಹಾಗೂ ಹಾಸ್ಯದಿಂದ ನಕ್ಕು ನಲಿಯುವ ಸನ್ನಿವೇಶಗಳು ಕಂಡುಬರುತ್ತವೆ. ಇಲ್ಲಿ ಹಾಸ್ಯ ಮತ್ತು ವಿನೋದಗಳು ಪ್ರಧಾನವಾಗಿದ್ದು, ಯಾರ ಮನಸ್ಸನ್ನು ನೋಯಿಸುವ ಅಥವಾ ಗಾಸಿಗೊಳಿಸುವ ಉದ್ದೇಶ ಇರುವುದಿಲ್ಲ. ವ್ಯಕ್ತಿಗಳ ಬಣ್ಣ, ರೂಪು, ಎತ್ತರ ಅವರ ನಡಿಗೆ ಮೊದಲಾದವುಗಳ ಆಧಾರದ ಮೇಲೆ ಅವರನ್ನು ಹಾಸ್ಯ ಮಾಡಿ ನಕ್ಕು ನಲಿಯುತ್ತಾರೆ. ಇದರ ಆಚೆಗೆ ಬೇರೆ ಉದ್ದೇಶಗಳಿರುವುದಿಲ್ಲ.

"ಹತ್ತೀಕಾಯ್ಹಂಗೆ ಹತ್ತಾಳು ಬಂದವ್ರೆ
ಹತ್ತಾಳೂ ಬರಿ ಮುದುಕರು । ನಮ್ ಬೀಗರು
ಏರೀ ಹತುನಾರ್ದೆ ಕೆಳಗವ್ರೆ । ನೀವ್ ಹೋಗಿ
ಏರೀಯ ಕಡಿದು ಎಳತನ್ನಿ"[೬೧]

ಮದುವೆಗೆ ಬಂದಿರುವ ಬೀಗರು ಹಾಗೂ ಅವರ ಕಡೆಯವರನ್ನು ಹಾಸ್ಯ ಮಾಡುತ್ತ ಹೇಳುವ ಗೀತೆ ಇದು. ಮದುವೆಗೆ ಬಂದಿರುವ ಹತ್ತಾಳುಗಳು ಹತ್ತೀಕಾಯಂತೆ ಇದ್ದಾರೆ. ಆ ಹತ್ತಾಳುಗಳೂ ಸಹ ಅದೂ ಬರೀ ಮುದುಕರು. ಏರಿ ಹತ್ತಲಾಗದೆ ಕೆಳಗೆ ಇದ್ದಾರೆ. ದಯಮಾಡಿ ಯಾರಾದರೂ ಹೋಗಿ ಏರಿಯನ್ನು ಕಡಿದು ಅವರನ್ನು ಎಳೆದು ತನ್ನಿ ಎಂದು ಗೇಲಿ ಮಾಡುತ್ತಾರೆ. ಈ ರೀತಿಯ ಗೇಲಿ ಹಾಗೂ ಹಾಸ್ಯಗಳು ಗಂಭೀರವಾಗಿರದೆ ಆ ಸಮಯದಲ್ಲಿ ನಕ್ಕು ನಲಿಯಲಿಕ್ಕಾಗಿ ಮಾತ್ರವೇ ರಚಿತವಾಗಿರುವಂತಹವು. ಯಾರೂ ಕೂಡ ಈ ಗೀತೆಗಳನ್ನು ವೈಯಕ್ತಿಕವಾಗಿಯಾಗಲೀ, ಪ್ರತಿಷ್ಠೆಯ ವಿಚಾರವಾಗಿಯಾಗಲಿ ತೆಗೆದುಕೊಳ್ಳದೆ, ಆರೋಗ್ಯಕರವಾದ ಹಾಸ್ಯದ ಹಿನ್ನೆಲೆಯಲ್ಲಿಯೇ ಗ್ರಹಿಸುತ್ತಾರೆ.

ಬೀಗರನ್ನು ಜರಿಯುವ ಮತ್ತೊಂದು ಗೀತೆ ಹೀಗಿದೆ.

"ಆ ನಾರಾ ಎಡತನ್ನೀ ಈ ನಾರಾ ಎಡತನ್ನಿ
ಬಾಳೇಯಾ ನಾರಾ ಎಡತನ್ನೀ
ಬಾಳೇಯಾ ನಾರಾ ಎಡತನ್ನೆಣ್ಣೋರನ್ನ
ಬಾನ್ನೊಟ್ಟಿ ಮೇಲೇ ಬಿಗಿಸೇನು

ರಾಗೀಯಾ ಕಲ್ಲಾ ಕಿವಿಗಿಕ್ಕೇನ್ಹೆಣ್ಣನವ್ನ
ರಾಜ್ಯಾ ನೋಡಾಕೇ ಬರಹೇಳೀ

ಸಾಸಾಲಾ ತೆಗೆದು ಸೂಳೇಯಾ ಕರಕೊಂಡು
ಸಾಲ್ದೋರು ಬಂದೂ ಒದೆವಾಗ

ಸಾಲ್ಡೋರು ಬಂದೂ ಒದೆವಾಗ ನಮ್ಮುಂದೆ
ಸೂಳೆಗೆ ದಮ್ಮೈಯ್ಯಾ ಹೊಣೆಯಾಗೇ

ಅಡ್ಡಬಡ್ಡೀ ತೆಗೆದು ಒಡ್ಯಾಣ ಮಾಡ್ಸಿಟ್ಟು
ದೊಡ್ಡೋರ ಮಗಳೆಂದು ಕರ್ಯಾಲೆಂದು

ಬಡ್ಡೀ ಕೊಡೆಂದೂ ಗಂಡೈಯ್ಯ ಒದೆವಾಗ
ಒಡ್ಯಾಣಗಿತ್ತೀ ನೀ ಹೊಣೆಯಾಗು

ಅಕ್ಕೀಕೊಮ್ಮೇಗೇ ಬೆಟ್ಟಿಟ್ಟಿ ನೋಡೋಳೆ
ಹಟ್ಟೀಗೆ ಮನೆಗೇ ತಿರುಗೋಳೆ
ಹಟ್ಟೀಗೆ ಮನೆಗೇ ತಿರುಗೂವ ಬೀಗಿತ್ತಿ
ನಾವ್ಹತೇ ಜನಕಾಣೇ ಅಳಬೇಡ

ಸುಂಡಾನ ಮೇಲೆ ಖಂಡುಗದಕ್ಕೀ ಹೇರಿ
ಸುಂಡಾನಿ ಮುಂದೇ ನಡೆಯೆಂದೇ–ಬೀಗೂತಿ
ಹುಂಡಿಗೇ ಮಾಡ್ಯಾಳೇ ಮದುವೇಯ

ಚೂಜೀ ತೋರಾಕೇ ಚೂಜಿಯಾ ಉದ್ದಾಕೆ
ಬಗ್ಗಿ ಬಗ್ಗೀ ತುಪ್ಪಾ ಬಿಡುವೋಳೆ
ಬಗ್ಗಿ ಬಗ್ಗೀ ತುಪ್ಪಾ ಬಿಡುವಾ ಬೀಗಿತ್ತೀ
ನಿನ್ನಾಣೆ ನಾವೂ ಉಣಲಿಲ್ಲ

ಬಗ್ಗಿ ಬಗ್ಗಿ ಎಣ್ಣೇ ಬಿಡುವಾ ಬೀಗಿತ್ತೀ
ನಿನ್ನಾಣೆ ನಾವೂ ಉಣಲಿಲ್ಲ

ನಮ್ಮ ಬೀಗೂತಿ ಒಳ್ಳೇಳೂ ಅನುತಿದ್ದೆ
ಕಳ್ಳಿದೊಣ್ಯವಳಾ ಹೆಗಲಲ್ಲಿ–ಮಡಗೀಕೊಂಡು
ಕಳ್ಳರ್ಮಾಡವ್ರೇ ಮದುವೇಯ

ನಮ್ಮಾ ಬೀಗೂತಿ ಒಳ್ಳೇಳೂ ಅನ್ನುತಿದ್ದೆ
ಒಡ್ಡಿನ್ಕೋಲವ್ರಾ ಹೆಗಲಾಲ್ಲಿ–ಇಟ್ಕೊಂಡು
ಒಡ್ಡರ್ಬರ್ತಾರೆ ಮದುವೇಗೆ

ಬೀಗತಿ ಬೀಗುತ್ತಿ ವಾಣ್ಯೆಲ್ಲಾಸೈಕಾಣೇ
ಕೋಣೇಲಿ ಗುಂಡಿ ಮೊಳದುದ್ದ–ಬೀಗೂತೀ
ಮಣ್ಣಾ ಕೊಟ್ಟೇನೂ ಮೆರಕೊಳ್ಳೆ

ಬೀಗತಿ ಬೀಗೂತೀ ವಾಣ್ಯೆಲ್ಲಾಸೈಕಾಣೇ
ಕೋಣೇಲಿ ಗುಂಡಿ ಮೊಳದುದ್ದ-ಬೀಗೂತಿ
ಸಗಣಿ ಕೊಟ್ಟೇನೂ ಸಾರಿಸಿಕೊಳ್ಳೇ

ಬೀಗಿತ್ತಿ ಬೀಗೆತ್ತಿ ವಾಣ್ಯೆಲ್ಲಾ ಸರಿಕಾಣೆ
ಮಾಡಾಕೆ ಒಂದೂ ಮಡಕೀಲ್ಲಾ-ಬೀಗೂತಿ
ಕುಂಬಾರ್ಗೆ ನಿನಗೇ ಮೊಕಮುನ್ಸೇ ಬೀಗೂತಿ
ಕುಂಬಾರ್‍ಗೊಂದೆಲ್ಲೂ ನಡಕೊಳ್ಳೇ"[೮]

ಈ ಗೀತೆಯಲ್ಲಿ ಬೀಗರನ್ನು ಹಾಸ್ಯ ಮಾಡಲಾಗಿದೆ. ಹೆಣ್ಣಿನ ಕಡೆಯವರನ್ನು ಬಾಳೆಯ ನಾರಿನಿಂದ ಬಾನ್ಸೊಟ್ಟಿ ಮೇಲೆ ಕಟ್ಟಿ ಹಾಕೋಣ ಎಂಬ ವಿಚಾರದ ಮೂಲಕ ಪ್ರಾರಂಭವಾಗುತ್ತದೆ. ರಾಗೀಯ ಕಲ್ಲಿನಂತ ಕಿವಿಯುಳ್ಳ ಹೆಣ್ಣಿನ ಕಡೆಯವನನ್ನು ತಮ್ಮ ರಾಜ್ಯಾವನ್ನು ನೋಡಲು ಬರಹೇಳಿ ಎಂದು ಹಾಸ್ಯ ಮಾಡುತ್ತಾರೆ. ಸಾಲ ತೆಗೆದುಕೊಂಡು, ಸಾಲ್ದೋರು ಬಂದು ಒದೆವಾಗ ಸೂಳೆಗೆ ದಮ್ಮೈಯ್ಯಾ ಎಂದು ಅಂಗಲಾಚುವ ಸ್ಥಿತಿಯನ್ನು ಕುರಿತು ಹಾಸ್ಯ ಮಾಡಿದ್ದಾರೆ. ಅಕ್ಕೇಕ್ಕೊಮ್ಮೇಗೆ ಬೆಟ್ಟಿಟ್ಟಿ ನೋಡುವ ಬೀಗಿತಿಯನ್ನು ಜರಿಯುತ್ತ ಸುಂಡನ ಮೇಲೆ ಖಂಡುಗದಕ್ಕೀ ಹೇರಿಕೊಂಡು ಬರುವವರೆಂದು ಹಾಸ್ಯ ಮಾಡಿ ನಗುತ್ತಾರೆ. ಮುಂದುವರೆದು ಸೂಜಿಯಷ್ಟು ಉದ್ದವಿರುವ ಬೀಗತಿಯು ತುಪ್ಪವನ್ನು ಬಿಡುವ ಶೈಲಿಯನ್ನು ಇಲ್ಲಿ ಅಣಕಿಸಿದ್ದಾರೆ.

ನಂತರ ಬೀಗತಿಯ ಮನೆಯನ್ನು ಕುರಿತು ಹಾಸ್ಯ ಮಾಡುತ್ತ ಗುಂಡಿ ಬಿದ್ದಿರುವ ಕೋಣೆಗೆ ಮೆರಕೊಳ್ಳಲು ಮಣ್ಣನ್ನು ಕೊಡುವುದಾಗಿ, ಸಾರಿಸಲು ಸಗಣಿಯನ್ನು ಕೊಡುವುದಾಗಿ ಹಾಗೂ ಮಾಡಿಕೊಂಡು ಉಣ್ಣಲು ಮಡಕೆಯನ್ನು ಕೊಡಿಸುವುದಾಗಿ ಹಾಸ್ಯ ಮಾಡಿ ನಲಿಯುತ್ತಾರೆ. ಇಲ್ಲಿನ ಪ್ರತಿಯೊಂದು ಮಾತುಗಳೂ ಸಹ ಮನರಂಜನೆಗಷ್ಟೇ ಸೀಮಿತವಾಗಿರುತ್ತವೆ. ಯಾರನ್ನೂ ನೋಯಿಸುವ ಅಥವಾ ಕಡೆಗಣಿಸುವ ಉದ್ದೇಶ ಇರುವುದಿಲ್ಲ.

ಮುಂದುವರೆದು ಕಳಸವನ್ನು ಹಿಡಿದಿರುವ ಅಕ್ಕನನ್ನು ಈ ರೀತಿಯಾಗಿ ಹಾಸ್ಯ ಮಾಡುತ್ತಾರೆ.

"ಉದ್ದಕುದ್ದಲ್ಲ ಗಿಡ್ಡಿಗೆ ಗಿಡ್ಡಲ್ಲ
ಗಿಡ್ಡಿ ಅಕ್ಕಯ್ಯ ಕಳಸವ । ಹಿಡಿದರೆ
ಉಜ್ಜೇಣಿ ತೇರು ಹರಿದ್ಹಂಗೆ"[೬೩]

ಕಳಸವನ್ನು ಹಿಡಿದ ಕುಳ್ಳನೆಯ ಅಕ್ಕನ ದೇಹ ರಚನೆಯನ್ನು ಕುರಿತು ಇಲ್ಲಿ ಹಾಸ್ಯ ಮಾಡುತ್ತಾರೆ. ಕಳಸವನ್ನು ಹಿಡಿದಿರುವ ಅಕ್ಕಯ್ಯ ಸ್ವಲ್ಪ ಗಿಡ್ಡಕಿರುವ ಕಾರಣವಾಗಿ ಆಕೆ ಕಳಸವನ್ನು ಹಿಡಿದು ನಡೆಯುತ್ತಿರುವ ದೃಶ್ಯವನ್ನು ಉಜ್ಜೇನಿಯ ತೇರು ಹರಿಯುವಿಕೆಗೆ ಹೋಲಿಸಿ ವಿನೋದದಿಂದ ನಲಿಯುತ್ತಾರೆ. ಇಲ್ಲಿಯೂ ಕೂಡ ಹಾಸ್ಯ ಅಥವಾ ವಿಡಂಬನೆ ಎಂಬುದು ಮನರಂಜನೆಯ

ಆರೋಗ್ಯಕರ ಚೌಕಟ್ಟನ್ನು ಮೀರುವುದಿಲ್ಲ. ಎಲ್ಲರನ್ನು ಸಂತೋಷಪಡಿಸುವುದಷ್ಟೇ ಆ ಸಂದರ್ಭದ ಮುಖ್ಯ ಉದ್ದೇಶವಾಗಿರುತ್ತದೆ.

"ಆರ್ ಸೇರೆಳ್ಳು ಮೂರ್ ಸೇರ್ ಜಳ್ಳು
.....ಗೌಡರ ಮಾತೆಲ್ಲ ಬರಿ ಸುಳ್ಳು
ಬೆಳದಿಂಗ್ಳ ಬೆಳಕು ಕಲ್ಸಕೆ ಹಳುಕು
.......ಅರಸರ ಮುಖ ಹುಳುಕು"[೬೪]

ಗೌಡರ ಪೊಳ್ಳು ಮಾತುಗಳನ್ನು ವಿಡಂಬಿಸುವ ಸಲುವಾಗಿ ಹುಟ್ಟಿದ ಗೀತೆ ಇದು. ಆರ್ ಸೇರು ಎಳ್ಳಿನಲ್ಲಿ ಮೂರು ಸೇರು ಜಳ್ಳೆ ಇರುವಂತೆ ಗೌಡರ ಮಾತಿನಲ್ಲಿ ಎಲ್ಲವು ಬರಿ ಸುಳ್ಳು ಎನ್ನುತ್ತಾರೆ. ಈ ರೀತಿಯ ಹಾಸ್ಯ ಹಾಗೂ ವಿಡಂಬನಾ ಗೀತೆಗಳು ಹಳ್ಳಿಗರಲ್ಲಿ ಸಂದರ್ಭಕ್ಕೆ ತಕ್ಕಂತೆ ಅಲ್ಲಲ್ಲಿಯೇ ಕಟ್ಟಿ ಹಾಡುವ ಆಶು ಗೀತೆಗಳಾಗಿವೆ. ಈ ಗೀತೆಗಳಲ್ಲಿನ ಹಾಸ್ಯ, ಉತ್ಸಾಹ, ಅದರಲ್ಲಿನ ಬದುಕಿನ ಚಿಲುಮೆಗಳು ಜನಪದರಲ್ಲಿ ಜೀವನೋತ್ಸಾಹವನ್ನು ಉಂಟು ಮಾಡಿ ಬದುಕನ್ನು ಮುನ್ನಡೆಸುವಂತೆ ಪ್ರೇರೇಪಿಸುತ್ತವೆ.

೪.೮. ಕೌಟುಂಬಿಕ ಅಥವಾ ದಾಂಪತ್ಯ ಜೀವನ ಗೀತೆಗಳು

'ಕುಟುಂಬ' ಅಥವಾ 'ದಾಂಪತ್ಯ' ಜೀವನ ಎಂಬುದು ನಮ್ಮ ಜನಪದರು ಕಟ್ಟಿಕೊಂಡಿರುವ ಮೌಲ್ಯಯುತವಾದ ಚಿಂತನೆ. ಇದು ಪರಸ್ಪರ ನಂಬಿಕೆ, ಗೌರವ, ವಿಶ್ವಾಸಗಳು ತುಂಬಿರುವ ಸಾಮಾಜಿಕ ವ್ಯವಸ್ಥೆಯಾಗಿದೆ. ಪ್ರಕೃತಿ ಸಹಜವಾದ ಪರಸ್ಪರರೊಂದಿಗಿನ ಆಕರ್ಷಣೆಯನ್ನು ಕುಟುಂಬ ಅಥವಾ ದಾಂಪತ್ಯವೆಂಬ ಸಮಾಜ ಒಪ್ಪಿತ ಸಂಸ್ಥೆಯ ಮೂಲಕ ಈಡೇರಿಸಿಕೊಳ್ಳುವುದು ಅರ್ಥಗರ್ಭಿತವಾದ ಆಲೋಚನಾ ಕ್ರಮವಾಗಿದೆ. ಇದು ಆರೋಗ್ಯಪೂರ್ಣ ಸಮಾಜದ ದ್ಯೋತಕವೂ ಆಗಿದೆ. ಇಲ್ಲಿ ಒಲಿದ ಮನಸ್ಸುಗಳು ಒಂದಾಗಿ ತಮ್ಮ ಮುಂದಿನ ಬದುಕನ್ನು ಸಾಗಿಸುವುದು ಕಂಡುಬರುತ್ತದೆ. ಇದು ನಮ್ಮ ಸಂಸ್ಕೃತಿಯ ಪ್ರತೀಕವೂ ಆಗಿದೆ.

ಜೀವನ ಸಂಗಾತಿಗಳು ತಮ್ಮನ್ನು ತಾವು ಅರ್ಥೈಸಿಕೊಂಡು ಬದುಕಲು ಇಲ್ಲಿ ಅವಕಾಶಗಳಿವೆ. ಜೊತೆಗೆ ತಮ್ಮ ಮನದ ಆಸೆ ಆಕಾಂಕ್ಷೆಗಳನ್ನು ಒಪ್ಪಿತ ನೆಲೆಯಲ್ಲಿ ಈಡೇರಿಸಿಕೊಳ್ಳುವ ಪ್ರಧಾನ ಆಶಯ ಕೂಡ ದಾಂಪತ್ಯ ಅಥವಾ ಕುಟುಂಬವೆಂಬ ಸಾಮಾಜಿಕ ಸಂಸ್ಥೆಯಲ್ಲಿ ಕಂಡುಬರುತ್ತದೆ. ಸುಖವಿರಲಿ, ದುಃಖವಿರಲಿ ಇಬ್ಬರೂ ಕೂಡ ಹೊಂದಿಕೊಂಡು ಹೋಗುವ ಗುಣ ಇಲ್ಲಿದೆ. ಅಲ್ಲದೆ ತನ್ನ ತಂದೆ, ತಾಯಿ, ಅಣ್ಣ, ತಮ್ಮ, ತಾನು ಜನಿಸಿದ ಹುಟ್ಟೂರು ಎಲ್ಲವನ್ನೂ ತೊರೆದು ಬರುವ ಹೆಣ್ಣು ಅತ್ತೆಯ ಮನೆಯನ್ನೆ ತನ್ನ ತವರೆಂದು ಭಾವಿಸಿ ಬದುಕುವ ಸಂಗತಿಯೂ ಈ ಗೀತೆಗಳಲ್ಲಿ ಅಡಗಿದೆ. ಹಾಗಾಗಿಯೇ ತನ್ನ ಗಂಡನಲ್ಲಿ ಆಕೆ ಈ ರೀತಿಯಾಗಿ ಕೇಳಿಕೊಳ್ಳುತ್ತಾಳೆ.

"ತಂದೀ ತಾಯಿಯ ಬಿಟ್ಟು ಬಂಧು ಬಳಗವ ಬಿಟ್ಟು
ಬಂದೀನಿ ರಾಯ ನಿಮಗೂಡ – ಕೈಯಾನ
ಲಿಂಗವ ಮಾಡಿ ಸಲಹರಿ"[೬೫]

ಇಲ್ಲಿನ ಹೆಣ್ಣು ಕೇಳಿಕೊಳ್ಳುವ ಪ್ರತಿಯೊಂದು ಮಾತುಗಳೂ ಕೂಡ ಚರ್ಚಿಸುವಂತಹವು. ತಂದೆ ತಾಯಿಯನ್ನು ಬಿಟ್ಟು, ಬಂಧು ಬಳಗವನ್ನು ಬಿಟ್ಟು ನಿಮ್ಮ ಜೊತೆ ಬಂದಿದ್ದೇನೆ. ಹಾಗಾಗಿ ನೀವು ನನ್ನನ್ನು ನಿಮ್ಮ ಕೈಯಲ್ಲಿನ ಲಿಂಗದ ರೀತಿ ಜೋಪಾನ ಮಾಡಿ ಸಲಹಬೇಕು, ಕಾಪಾಡಬೇಕು ಎಂದು ಕೇಳಿಕೊಳ್ಳುತ್ತಾಳೆ. ಒಂದು ಅರ್ಥಪೂರ್ಣವಾದ ಕೋರಿಕೆ ಇಲ್ಲಿ ಆ ಹೆಣ್ಣಿನ ಮನದಲ್ಲಿ ಪ್ರಕಟವಾಗುತ್ತಿರುವುದು ಬಹುಮುಖ್ಯವಾದ ಅಂಶವಾಗಿ ಕಂಡುಬರುತ್ತದೆ. ಇದಕ್ಕೆ ಗಂಡ ಕೊಡುವ ಉತ್ತರವನ್ನು ಗಮನಿಸಿದರೆ ಅವರ ಕೌಟುಂಬಿಕ ಬದುಕಿನ ಅರ್ಥಪೂರ್ಣತೆ ನಮಗೆ ತಿಳಿಯುತ್ತದೆ.

"ಹಾಸೀಗಿ ಹಾಸೆಂದ ಮಲ್ಲೀಗಿ ಮುಡಿಯೆಂದ
ಬ್ಯಾಸರತ್ತರ ಮಡದಿ ಮಲಗೆಂದ – ನನರಾಯ
ತನ ನೋಡಿ ತವರ ಮರೆಯೆಂದ"[೬೬]

ತನ್ನ ತವರು, ಬಂಧು, ಬಳಗವನ್ನು ಬಿಟ್ಟು ಬಂದಿರುವ ನನ್ನನ್ನು ಕೈಯಲ್ಲಿರುವ ಲಿಂಗದ ರೀತಿ ಸಲಹಬೇಕು ಎಂದು ಕೇಳಿಕೊಂಡ ಮಡದಿಗೆ ಪತಿ ಹೇಳುತ್ತಾನೆ. ಹಾಸಿಗೆ ಹಾಸು, ಮಲ್ಲಿಗೆ ಮುಡಿ, ಬೇಸರವಾದರೆ ಮಲಗು. ನನ್ನನ್ನು ನೋಡುತ್ತ ನಿನ್ನ ತವರನ್ನು ಮರೆ. ನಿನ್ನನ್ನು ನಿನ್ನ ತವರಿನಲ್ಲಿದ್ದಂತೆಯೆ ನೋಡಿಕೊಳ್ಳುತ್ತೇನೆ ಎಂದು ಪತಿ ಆಕೆಗೆ ಅಭಯವನ್ನು ನೀಡುತ್ತಾನೆ. ಇದು ಆದರ್ಶ ದಾಂಪತ್ಯದ ಪ್ರತೀಕವೇ ಆಗಿದೆ. ಅಲ್ಲದೆ ಈ ಗೀತೆಯು ಗಂಡ ಹೆಂಡತಿಯರ ಅವಿನಾಭಾವವಾದ ಸಂಬಂಧವನ್ನು ಕುರಿತು ಚರ್ಚಿಸುತ್ತದೆ. ಇಲ್ಲಿ ನಿನ್ನ ತವರಿನಷ್ಟೇ ಸುಖ, ಸಂತೋಷದಿಂದ ನಾನು ನಿನ್ನನ್ನು ನೋಡಿಕೊಳ್ಳುವುದಾಗಿ ಪತಿಯಾದವನು ತನ್ನ ಪತ್ನಿಗೆ ಹೇಳುವ ಈ ಮಾತುಗಳು ಮೌಲ್ಯಯುತವಾದವು. ಏಕೆಂದರೆ ಹೆಣ್ಣಿಗೆ ತವರು ಪ್ರಾಣಕ್ಕೆ ಸರಿಸಮನಾದುದು. ತವರನ್ನು ಹಾಗೂ ಅದರಲ್ಲಿನ ತಂದೆ, ತಾಯಿ, ಅಣ್ಣ, ತಂಗಿಯರನ್ನು ಎಂದಿಗೂ ಹೆಣ್ಣು ಮರೆಯುವುದಿಲ್ಲ.

ಜನಪದ ಹೆಣ್ಣು ಅನುಭವಿಸಿರುವ ಕೌಟುಂಬಿಕ ಅಥವಾ ದಾಂಪತ್ಯ ಜೀವನ ಕೆಲವು ಮಿತಿಗಳ ನಡುವೆಯೂ ಸುಂದರವಾದುದು. ತವರು ಮನೆಯಲ್ಲಿನ ತಾಯಿ, ತಂದೆ, ಅಣ್ಣ, ತಮ್ಮ, ಅಕ್ಕ, ತಂಗಿ, ಗಂಡನ ಮನೆಯಲ್ಲಿನ ಅತ್ತೆ, ಮಾವ, ಗಂಡ, ಮೈದುನ, ವಾರಗಿತ್ತಿಯರು ಮೊದಲಾದ ಕುಟುಂಬದ ಸದಸ್ಯರೊಂದಿಗೆ ಆಕೆ ಹೊಂದಿದ್ದ ಸಂಬಂಧವು ಬಹಳ ಜವಾಬ್ದಾರಿಯಾದುದು. ಈ ಕಾರಣವಾಗಿಯೆ ಆ ಹೆಣ್ಣು ಮಗಳು ತನ್ನ ಜವಾಬ್ದಾರಿಯ ಚೌಕಟ್ಟಿನಲ್ಲಿಯೆ ನಡೆಯುತ್ತ ತನ್ನ ಬದುಕನ್ನು ಸಾರ್ಥಕ್ಯಗೊಳಿಸಿಕೊಂಡಿರುವುದು ಕಂಡುಬರುತ್ತದೆ.

"ಕೂಲಿ ಮಾಡಿದರೇನ ಕೋರಿ ಹೊತ್ತರೇನ
ನಮಗೆ ನಮರಾಯ ಬಡವೇನ । ಬಂಗಾರ
ಮಾಲು ಇದ್ದಾಂಗ ಮನೆಯಾಗ"[೬೭]

ಶ್ರಮಜೀವಿ ಹಾಗೂ ವಿಶಾಲ ಮನಸ್ಸಿನ ಬಹಳಷ್ಟು ಹೆಣ್ಣುಗಳ ಮನಸ್ಸು ಇಲ್ಲಿ ನಮಗೆ ಮನಗಾಣುತ್ತದೆ. ಏಕೆಂದರೆ ತನ್ನ ಪತಿ ಕೂಲಿ ಮಾಡಲಿ, ಕೋರಿಯನ್ನು ಹೊತ್ತರೂ ಕೂಡ ತೊಂದರೆ ಇಲ್ಲ. ಇದರಿಂದ ನಾವೇನು ಬಡವರಲ್ಲ. ಆತ ನನಗೆ ಮನೆಯಲ್ಲಿನ ಬಂಗಾರದ ಮಾಲು ಇದ್ದಂತೆ ಎಂದು ಹೇಳಿಕೊಳ್ಳುತ್ತಾಳೆ. ಇದು ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ.

ಜನಪದ ಮಹಿಳೆ ದಟ್ಟವಾದ ಜೀವನಾನುಭವವನ್ನು ಹೊಂದಿರುವವಳು. ಅವಳಲ್ಲಿನ ಪ್ರತಿಭೆ, ಅಡಗಿರುವ ಸೃಜನಶೀಲ ಶಕ್ತಿ, ಅನುಭವದ ಗಾಢತೆ, ಬದುಕನ್ನು ಸಹೃದಯತೆಯಿಂದ ನೋಡುವ ಗುಣ, ಜೀವನದ ಪರಿಪೂರ್ಣತೆಯ ಬಯಕೆ, ಸುಖ, ದುಃಖಗಳ ಏರುಪೇರಿನ ಸಂದರ್ಭದಲ್ಲಿನ ಸಮಚಿತ್ತದ ನಿರ್ವಹಣೆ, ದುಡಿಮೆ, ಆತ್ಮಸ್ಥೈರ್ಯ ಮೊದಲಾದ ಗುಣಗಳನ್ನು ಆಕೆ ಹೊಂದಿದ್ದಾಳೆ. ಈ ಕಾರಣವಾಗಿಯೆ ಜನಪದ ಸಾಹಿತ್ಯದಲ್ಲಿ ಹೆಣ್ಣು ಸಿಂಹಪಾಲನ್ನು ಹೊಂದಿದ್ದಾಳೆ. ಅಲ್ಲದೆ ತನ್ನ ಹಾಗೂ ತನ್ನ ಪತಿಯ ಕೆಲಸ ಕಾರ್ಯಗಳನ್ನು ಎಲ್ಲಿಯೂ ತುಚ್ಛವಾಗಿ ಕಂಡಿಲ್ಲ. ಗೌರವಯುತವಾಗಿ ಕಾಣುವ ಮನಸ್ಥಿತಿ ಆಕೆಯ ಮಾತುಗಳಿಂದ ತಿಳಿಯುತ್ತದೆ.

ಈ ರೀತಿಯಾಗಿ ಬದುಕನ್ನು ಸಾಗಿಸುವ ದಂಪತಿಗಳ ನಡುವೆ ಜಗಳ, ಮುನಿಸುಗಳು ಬಾರದೆ ಇರುವುದಿಲ್ಲ. ಏಕೆಂದರೆ ಬದುಕು ಎಂಬುದು ಅಷ್ಟು ಸರಳವೂ ಅಲ್ಲ ಹಾಗೂ ಸುಲಭವೂ ಅಲ್ಲ. ಒಂದು ವೇಳೆ ಈ ರೀತಿಯ ಮುನಿಸು ಅಥವಾ ಜಗಳಗಳು ನಡೆದರೂ ಕೂಡ ಅವರಿಬ್ಬರ ನಡುವೆ ಅದು ಹೆಚ್ಚು ಸಮಯ ನಿಲ್ಲುವುದಿಲ್ಲವೆಂಬುದನ್ನು ಸಹ ನಮ್ಮ ಜನಪದ ಗೀತೆಗಳು ತಿಳಿಸಿಕೊಡುತ್ತವೆ. ಅದಕ್ಕಾಗಿಯೇ ಜನಪದ ಕವಿ ಅದನ್ನು ಈ ರೀತಿಯಾಗಿ ಹೇಳಿಕೊಂಡಿದ್ದಾನೆ.

"ಮಡದೀಯ ಬಡಿದಾನ ಮನದಾಗ ಮರುಗ್ಯಾನ
ಒಳಗ್ಹೋಗಿ ಸೆರಗ ಹಿಡಿಯೂತ – ಕೇಳ್ಯಾನ
ನಾ ಹೆಚ್ಚೋ ನಿನ್ನ ತವರೆಚ್ಚೋ?"[೬೮]

ತವರಿನ ವಿಚಾರವಾಗಿ ಗಂಡ – ಹೆಂಡತಿಯರಲ್ಲಿ ಉದ್ಭವವಾದ ಘರ್ಷಣೆಯ ಕಾರಣವಾಗಿ ಮಡದಿಯನ್ನು ಹೊಡೆದ ಪತಿ ಮನಸ್ಸಿನಲ್ಲೆ ಕೊರಗುತ್ತಿದ್ದಾನೆ. ಕೊರಗುತ್ತ ಮನೆಯೊಳಗೆ ಹೋಗಿ ಹೆಂಡತಿಯ ಸೆರಗನ್ನು ಹಿಡಿದು ನಿನಗೆ ನಾ ಹೆಚ್ಚೋ ಅಥವಾ ನಿನ್ನ ತವರು ಮನೆ ಹೆಚ್ಚೋ ಎಂದು ಕೇಳುವ ಗುಣ ನಿಜಕ್ಕೂ ಚರ್ಚಾರ್ಹವಾದುದು. ಇವರಿಬ್ಬರ ಜಗಳದ ವೈಖರಿಯನ್ನು ಕವಿ ಹೀಗೆ ವರ್ಣಿಸುತ್ತಾನೆ.

"ಗಂಡ ಹೆಂಡಿರ ಜಗಳ ಗಂಧ ತೀಡೀಧಾಂಗ ।
ಲಿಂಗಕ ನೀರು ಎರೆಧಾಂಗ । ಹಿರಿ ಹೊಳೆಯ ।
ಗಂಗವ್ವ ಸಾಗಿ ಹರಿಧಾಂಗ"[೧೯]

ಇವರಿಬ್ಬರ ಮುನಿಸು, ಜಗಳ ಗಂಧವನ್ನು ತೀಡಿದ ರೀತಿಯಾಗಿರುತ್ತದೆ. ಇವರ ಜಗಳವನ್ನು ಗಂಧದ ಮರಕ್ಕೆ ಹೋಲಿಸಿರುವ ಕಲ್ಪನೆ ರಮ್ಯವಾದುದು. ಹಾಗೆಯೇ ಲಿಂಗಕ್ಕೆ ನೀರನ್ನು ಎರೆದಂತೆ ಹಾಗೂ ಹಿರಿಹೊಳೆ ಗಂಗವ್ವನ ಜೊತೆ ಸೇರಿ ನಲಿಯುವ ರೀತಿ ಇರುತ್ತದೆ ಎಂದು ಜನಪದ ಕವಿ ಅವರಿಬ್ಬರ ಜಗಳವನ್ನು ವರ್ಣಿಸಿದ್ದಾರೆ.

ದೊಡ್ಡಸ್ಥಿಕೆ ಎಂಬ ಮನಸ್ಥಿತಿಯಲ್ಲಿ ಬೇರೆ ಹೆಣ್ಣುಗಳ ಮೇಲೆ ಹರಿದ ತನ್ನ ಗಂಡನ ಮನಸ್ಸಿನ ಕ್ರಮವನ್ನು ಕುರಿತು ಪತ್ನಿ ಪ್ರಶ್ನಿಸುತ್ತಾಳೆ. ತನ್ನ ತಪ್ಪಿಲ್ಲದಿದ್ದರೂ ತಾನೇ ಆತನೊಡನೆ ರಾಜಿ ಮಾಡಿಕೊಂಡು ಅವನನ್ನು ತಿದ್ದುವ ಪ್ರಯತ್ನವನ್ನು ಮಾಡುತ್ತಾಳೆ.

"ರಾಯ ಬರತಾರಂತ ರಾತ್ರೀಲಿ ನೀರಿಟ್ಟ
ರನ್ನ ಬಚ್ಚಲ ಮಣಿ ಹಾಕಿ – ಕೇಳೇನ
ಸಣ್ಣವಳ ಮ್ಯಾಲ ಸಂವತ್ಯಾಕ"[೨೦]

ಇಲ್ಲಿ ಆಕೆ ಕೇಳುವ 'ಸಣ್ಣವಳ ಮ್ಯಾಲ ಸಂವತ್ಯಾಕ' ಎಂಬ ಮಾತು ಬಹಳ ಗಂಭೀರವಾಗಿ ಚರ್ಚಿಸಬೇಕಾದುದು. ಏಕೆಂದರೆ ತಾನಿನ್ನು ಸಣ್ಣವಳು. ಆದರೂ ಏನೇ ತಪ್ಪುಗಳಿದ್ದರೂ ಮುಂದೆ ತಿದ್ದಿಕೊಳ್ಳುತ್ತೇನೆ. ಈ ಒಂದು ಕಾರಣಕ್ಕಾಗಿ ನನ್ನ ಮೇಲೆ ಮತ್ತೊಬ್ಬಳು ಸವತಿಯನ್ನು ತರುವುದು ಎಷ್ಟರ ಮಟ್ಟಿಗೆ ಸರಿ ಎಂದು ಕೇಳಿಕೊಳ್ಳುತ್ತಾಳೆ. ಅಲ್ಲದೆ ಇಲ್ಲಿ ಆಕೆ ದಾಂಪತ್ಯದ ಸಂದರ್ಭದಲ್ಲಿನ ತಪ್ಪುಗಳನ್ನು ತಾನು ತಿದ್ದಿಕೊಂಡು ಮುಂದೆ ನಡೆಯುತ್ತೇನೆ ಎಂದು ಹೇಳುವ ಮಾತುಗಳು ಅರ್ಥಪೂರ್ಣವಾದವು. ಏಕೆಂದರೆ ನಾನಿನ್ನೂ ಚಿಕ್ಕವಳು, ಬದುಕಿನ ಅನುಭವ, ತಿಳುವಳಿಕೆಗಳು ಕಡಿಮೆ ಇವೆ. ಹೀಗಿದ್ದರೂ ನನ್ನ ಮೇಲೆ ಬೇರೆ ಹೆಣ್ಣನ್ನು ತರುವುದು ಬೇಡವೆನ್ನುತ್ತಾಳೆ. ಮುಂದುವರೆದು

"ಅಂಗೀಯ ಮ್ಯಾಲಂಗಿ ಛಂದೇನೋ ನನರಾಯ
ರಂಬಿ ಮ್ಯಾಲ ರಂಬಿ ಪ್ರತಿರಂಬಿ – ಬಂದರ
ಛಂದೇನೋ ರಾಯ ಮನಿಯಾಗ"[೨೧]

ಈಗಾಗಲೇ ಒಬ್ಬಳು ಹೆಂಡತಿ ಇದ್ದರೂ ಅವಳ ಮೇಲೆ ಮತ್ತೊಬ್ಬಳನ್ನು ತರುವುದು ಸರಿಯಲ್ಲ. ಅದು ನಿನಗೆ ಶೋಭಿಸುವುದಿಲ್ಲ ಎಂದು ಬುದ್ಧಿ ಹೇಳುವ ಪ್ರಯತ್ನವನ್ನೂ ಮಾಡುತ್ತಾಳೆ. ಇಂತಹ ಸಂದರ್ಭಗಳಲ್ಲಿ ಆಕೆ ಅಸಹಾಯಕಳಾಗುತ್ತಾಳೆ. ಮೌನವಾಗಿ ಎಲ್ಲವನ್ನು ಎದುರಿಸುವ ಹಾಗೂ ತನ್ನ ದುಃಖವನ್ನು ನುಂಗಿಕೊಳ್ಳುವ ಮನಸ್ಥಿತಿ ಕೂಡ ಆಕೆಯದಾಗಿರುವುದು ತಿಳಿಯುತ್ತದೆ.

ಇದು ಒಬ್ಬಳು ಹೆಣ್ಣಿನ ನೋವು ಅಥವಾ ಪರಿಸ್ಥಿತಿಯಲ್ಲ. ನಮ್ಮ ಸಮಾಜದ ಬಹುಪಾಲು ಹೆಣ್ಣುಗಳ ಮನಸ್ಥಿತಿಯ ಪ್ರತೀಕವೇ ಆಗಿದೆ.

ಜನಪದ ಸಾಹಿತ್ಯದಿಂದ ಹೆಣ್ಣನ್ನು ಬೇರ್ಪಡಿಸಲಾಗದು. ಅದರಂತೆಯೇ ಜನಪದ ಸಾಹಿತ್ಯದ ಯಾವುದೇ ಪ್ರಕಾರದ ಅಧ್ಯಯನವೆಂದರೆ ಅದು ಜನಪದ ಹೆಣ್ಣಿನ ಬಗೆಗಿನ ಅಧ್ಯಯನ ಹಾಗೂ ವಿಶ್ಲೇಷಣೆಗಳೇ ಆಗಿರುತ್ತವೆ. ಹತ್ತು ಹಲವು ಉದಾತ್ತ ಗುಣಗಳ ಆಗರವಾಗಿದ್ದಾಳೆ. ಅತಿಯಾಸೆಗಳಿಗೆ, ಪ್ರಲೋಭನೆಗಳಿಗೆ ಒಳಗಾಗದೆ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಶ್ರಮಿಸುತ್ತಾಳೆ. ಆಕೆಯ ದೃಷ್ಟಿಯಲ್ಲಿ ಬದುಕು ತುಂಬಾ ದೊಡ್ಡದು. ಎಷ್ಟೇ ಕಷ್ಟ, ನಿಷ್ಠೂರಗಳ ನಡುವೆಯೂ ಜೀವನದಿಂದ ವಿಮುಖವಾಗುವಂತಹ ಯೋಚನೆಗಳನ್ನು ಆಕೆ ಮಾಡುವುದಿಲ್ಲ. ಜೀವನವನ್ನು ಎದುರಿಸಿ ಮೆಟ್ಟಿ ನಿಂತು ಬದುಕನ್ನು ಮುನ್ನಡೆಸುವ ಗುಣ ಆಕೆಯ ವ್ಯಕ್ತಿತ್ವದ ವಿಶಿಷ್ಟ ಹಿರಿಮೆಯಾಗಿದೆ.

ಜನಪದ ಹೆಣ್ಣು ಮಗಳು ಬದುಕಿನ ವಿವಿಧ ಕಷ್ಟನಷ್ಟಗಳ ಕುಲುಮೆಯಲ್ಲಿ ಬೆಂದು ಗಟ್ಟಿಯಾದವಳು. ಬಂಜೆ ಎಂಬ ಕಾರಣದಿಂದಾಗಿ ಮನೆ ಮಂದಿ, ಸಮಾಜದ ಅನಾದರ, ಕಿರುಕುಳ, ಬಹಿಷ್ಕಾರಗಳಂತಹ ಅಪಮಾನಗಳಿಗೆ ಒಳಗಾದರೂ, ಬದುಕಿನ ಬಗೆಗೆ ಜೀವನ ಪ್ರೀತಿ, ತಾಳ್ಮೆ, ಸಂಯಮಗಳನ್ನು ರೂಢಿಸಿಕೊಂಡವಳು. ದುಷ್ಟ ವ್ಯಕ್ತಿಗಳ ಕುತಂತ್ರದ ಕಾರಣವಾಗಿ ಗಂಡನಿಂದ ಬೇರ್ಪಟ್ಟು, ಕಾಮುಕರಿಂದ ಪೀಡನೆಗಳಿಗೆ ಒಳಗಾದರೂ ತನ್ನ ನೈತಿಕ ಚೌಕಟ್ಟಿನ ಬದುಕನ್ನು ಮೀರದ ದೃಢ ಮನಸ್ಥಿತಿಯವಳು.

ಹಾಗೆಯೆ ಅತ್ತಿಗೆ, ನಾದಿನಿ, ಸವತಿ ಮೊದಲಾದವರ ಕಿರುಕುಳದ ನೋವನ್ನು ಅನುಭವಿಸಿದರೂ ಸಹ ಕುಟುಂಬದ ಮರ್ಯಾದೆ, ಸಂಸ್ಕೃತಿಗಳ ಉಳಿವಿಗಾಗಿ ಆ ಎಲ್ಲ ಕಷ್ಟಗಳನ್ನು ತಾನೇ ಅನುಭವಿಸುವಂತಹ ದಿಟ್ಟ ನಿರ್ಧಾರದ ಮೂಲಕ ಬದುಕನ್ನು ಮುಂದುವರೆಸಿರುವಂತಹಳು. ಬದುಕನ್ನು ಕಟ್ಟಿಕೊಳ್ಳಲು ಸದಾ ಹೋರಾಟವನ್ನು ನಡೆಸುತ್ತಲೇ ಇರುವಂತಹ ಈಕೆ ಸಂಸ್ಕೃತಿಯ ಪ್ರತಿನಿಧಿಯೂ ಆಗಿದ್ದಾಳೆ. ತನ್ನ ಪಾತಿವ್ರತ್ಯಕ್ಕೆ ಎದುರಾದ ಸವಾಲು, ಪರೀಕ್ಷೆ, ಸಂಕಷ್ಟಗಳನ್ನು ಎದುರಿಸುವ ಮೂಲಕ ತನ್ನ ಗೌರವಕ್ಕೆ ಚ್ಯುತಿ ಬಾರದ ರೀತಿಯ ಬದುಕಿನ ಕ್ರಮ ಈಕೆಯದ್ದು.

೪.೯. ಆರತಿ ಹಾಡುಗಳು.

'ಆರತಿ ಹಾಡುಗಳು' ಸಾಮಾನ್ಯವಾಗಿ ದೇವರ ಪೂಜೆಯ ಸಮಯದಲ್ಲಿ ಹಾಗೂ ಉತ್ಸವದ ಸಂದರ್ಭಗಳಲ್ಲಿ ಹಾಡಲ್ಪಡುತ್ತವೆ. ಈ ಸಮಯಗಳಲ್ಲಿ ಭಕ್ತರು ತಮ್ಮ ಇಷ್ಟ ದೈವಗಳನ್ನು ಕುರಿತು ಆ ದೈವಗಳ ಪವಾಡ, ಮಹಿಮೆ, ಗುಣ ವಿಶೇಷಗಳನ್ನು ಹಾಡಿ ಹೊಗಳುವುದು ಕಂಡುಬರುತ್ತದೆ.

'ಎಲ್ಲಿಗೆ ಕಾಳವ್ವ ಮೆಲ್ಲಗೆ ನಿನ್ನ ಪಯಣ
ಕಲ್ಲಾಗೆ ಬಂಡಿ ಹೊಡಕೊಂಡು ಹೂವೆ ಚಲ್ಲಾಡಿದವು.

ಕಲ್ಲಾಗೆ ಬಂಡಿ ಹೊಡಕೊಂಡು । ಕಾಳವ್ವ
ನಲ್ಲಿಯ ಮರದ ನೆರಳಲ್ಲಿ ಹೂವೆ ಚೆಲ್ಲಾಡಿದವು.

ನಲ್ಲಿಯ ಮರವೆಲ್ಲೆ ನೇರಳೆ ತೋಪೆಲ್ಲೆ
ಜಾವುಗಲೆಲ್ಲೆ ಜಪವೆಲ್ಲೆ ಹೂವೆ ಚೆಲ್ಲಾಡಿದವು

ಜಾವುಗಲೆಲ್ಲೆ ಜಪವೆಲ್ಲೆ ಕಾಳವ್ವ
ನೀ ಸ್ನಾನ ಮಾಡಿ ಮಂಡೆ ವದರವಳೆ ಹೂವೆ ಚೆಲ್ಲಾಡಿದವು

ಗಂಧ ಹಿಡಿದಾಳೆ ಹೊಳೆಯಲಿ ಬಿಟ್ಟವಳೆ
ಬಲೆಯ ಬೀಸಾಳೆ ಬಯಲಿಗೆ ಹೂವೆ ಚೆಲ್ಲಾಡಿದವು

ಬಲೆಯ ಬೀಸಾಳೆ ಬಯಲಿಗೆ ಕಾಳವ್ವ
ಗುರಗಂಜಿ ಬೆಳೆಯೊ ಬಯಲಲ್ಲಿ ಹೂವೆ ಚೆಲ್ಲಾಡಿದವು.

ಪ್ರಸ್ತುತ ಗೀತೆಯು ದಿಂಡಗೂರಿನ 'ಸಂತೆ ಕಾಳಿ' ಎಂದೆ ಪ್ರಸಿದ್ಧಳಾದ ಸಂತ್ಯಮ್ಮ ದೇವಿಯನ್ನು ಕುರಿತಾದ ಆರತಿ ಪದವಾಗಿದೆ. ಇದರಲ್ಲಿ ಕಲ್ಲಾಗೆ ಬಂಡಿ ಹೊಡಕೊಂಡು ಹೊರಟಿರುವ ಕಾಳವ್ವನನ್ನು ಕುರಿತ ವಿವರಗಳಿವೆ. ನಲ್ಲಿಯ ಮರದ ನೆರಳಲ್ಲಿ ಹೂವ ಚೆಲ್ಲುತ್ತ, ಜಾವುಗಲ್ಲಲ್ಲೆ ಜಪವನ್ನು ಮಾಡುತ್ತ ಹೊರಟಿರುವ ಕಾಳವ್ವನ ವರ್ಣನಾತ್ಮಕ ವಿವರಗಳು ಇಲ್ಲಿವೆ.

'ಆಡ್ಯಾಳೊಂದಡಿಕೆ ಜೂಜ
ಸಿರಿಬಾಲೆ ದೇವವ್ವ ಶಿವರಾಯನ ಮಗಳಲ್ಲವೆ
ಬೇಡ್ಯಾಳೆ ಬೆನ್ನ ಸಿಡಿಯ

ಕೆರಿಯ ಕೊಡಿಲಿ ಕೆಂದುಳು ಏನಮ್ಮ
ಮಡಿವಾಳರೆಣ್ಣೆ ಮಡಿಯೆತ್ತೆ । ನಿನೀಗ
ಮರಿಗುದುರೆ ನೀರ ಕುಡುದಾವೆ । ದ್ಯಾವವ್ವ
ಕೇರಿಯೇರಿ ಮ್ಯಾಲ ಬರುವಾಗ । ದ್ಯಾವವ್ವ ॥ಆಡ್ಯಾ॥

ತುಂಬಿದ ಕೆರಿಯಲ್ಲಿ ತೂಬೆತ್ತೋನು ಇವನ್ಯಾರೊ
ಗಂಗಮ್ಮ ತಾಯಿ ನಿನ್ನ ಮಗ । ವೀರಣ್ಣ
ಹೊಂಬಾಳೆಗೆ ನೀರ ಬಿಡುತಾನೆ. ॥ಆಡ್ಯಾ॥

ಹಾಲಿಗಕ್ಕಿನಾಗಿ ನೀರಿಗೆ ಶಿವುಡನು ಮಾಡಿ
ಸಾಲಳ್ಳಿ ಮರದ ನೆರಳಲ್ಲಿ । ದ್ಯಾವವ್ವ
ನೀಲದ ಬಳೆಯ ತೊಡುತಾಳೆ. ॥ಆಡ್ಯಾ॥

ಗದ್ದಿಗೆ ಮೇಲಿಂದ ಎದ್ದು ಬಾರೆ ದ್ಯಾವವ್ವ
ಇದ್ದಾರೆ ನಿನಗೆ ಶಿವನಾಣೆ । ಶಿವರಾತ್ರಿ
ಮೊಗ್ಗು ಬಂದಾವೆ ಮುಡಿಬಾರೆ ॥ಆಡ್ಯಾ॥

ಬೇಸಿಗೆ ಬಿಸಲಲ್ಲಿ ಯಾಕೊಂಟೆ ದ್ಯಾವವ್ವ
ನೀ ಬಾಡಿ ನಿನ್ನ ಮುಖಬಾಡಿ । ದ್ಯಾವವ್ವ
ಬಿಳಿ ಎಲೆ ಬಾಡಿ ತರಗೋದು. ॥ಆಡ್ಯಾ॥

ದ್ಯಾವಮ್ಮನನ್ನು ಕುರಿತ ಗೀತೆಯಿದು. ಶಿವರಾಯನ ಮಗಳಾದ ದ್ಯಾವವ್ವ ಬೆನ್ನು ಸಿಡಿಯನ್ನು ಬೇಡಿರುವ ವಿವರಗಳು ಇಲ್ಲಿ ಕಂಡುಬರುತ್ತವೆ. ಕೆರೆಯ ಕೋಡಿಯಲ್ಲಿ ಕೆಂಧೂಳಿನ ಬಟ್ಟೆಗಳನ್ನು ಒಗೆಯುತ್ತಿರುವ ಮಡಿವಾಳ ಹೆಣ್ಣು, ಅಲ್ಲಿಗೆ ನೀರು ಕುಡಿಯಲು ಬರುವ ಮರಿಕುದುರೆ, ಆ ಕೆರೆಯ ತೂಬನ್ನು ಎತ್ತುವ ಗಂಗಮ್ಮ ತಾಯಿಯ ಮಗ ವೀರಣ್ಣ, ಈತ ಹೊಂಬಾಳೆಗೆ ನೀರು ಬಿಡುವ ಕ್ರಮ, ಹಾಲಗಕ್ಕಿ ಮೊದಲಾದ ವಿವರಗಳು ತಿಳಿಯುತ್ತವೆ. ಜೊತೆಗೆ ದ್ಯಾವವ್ವ ಸಾಲಳ್ಳಿ ಮರದ ನೆರಳಲ್ಲಿ ಕೂತು ನೀಲದ ಬಳೆಗಳನ್ನು ತೊಟ್ಟುಕೊಳ್ಳುವ ರೀತಿ ಇಲ್ಲಿ ವರ್ಣಿತವಾಗಿದೆ. ಅಲ್ಲದೆ ಇಲ್ಲಿ ಉಲ್ಲೇಖವಾಗುವ ಮಡಿವಾಳರ ಹೆಣ್ಣು, ಕೆರೆ ಏರಿ, ಹೊಂಬಾಳೆ ಇವೆಲ್ಲವು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳೇ ಆಗಿವೆ.

'ರಾಜೇಶ್ರೀ ವನದಲ್ಲಿ ನಾಜೂಕಿನ ಬೀದೀಲಿ
ಸೊಗಸಾಗಿ ಹೊರಟವನೆ ನಮ್ಮ ಸ್ವಾಮಿ ।ಪಲ್ಲವಿ।

ಎಂಟೆಂಟು ದಿವಸಕ್ಕೂ ಬಂತಮ್ಮ ಶನಿವಾರ
ಎಂಟೆಮ್ಮೆ ಕರೆದ ನೊರೆಹಾಲು । ಭೈರವಗೆ
ಹುಟ್ಟಿದ ಹಬ್ಬಕೆ ಎಡೆಯಾಯ್ತು ॥ಪ॥

ತೊಂಭತ್ತು ಕಂಬಕ್ಕು ತೊಂಭತ್ತು ದೀವಿಗೆ
ಕಂಬಾವನ್ಯಾರೋ ಕಡೆದರು । ಭೈರವ
ಸ್ವಾಮಿ ನಿನ್ಯಾರೊ ಹಡೆದೋರು ॥ಪ॥

ಬೆಟ್ಟವ ಹತ್ತುತು ಮುತ್ತಿನ ಚೆಂಡಾಡುತ
ಅಪರಂಜಿ ಮಂಡೆ ಕೆದರುತ್ತ । ಭೈರವ
ತಿರುಗಿ ನೋಡ್ಯವನೆ ಪರುಸೆಯ ॥ಪ॥'

ಈ ಗೀತೆಯು ಶ್ರೀ ಆದಿಚುಂಚನಗಿರಿಯ ಭೈರವನ ಮಹಿಮೆ ಹಾಗೂ ಪರಿಸೆಯನ್ನು ಕೊಂಡಾಡುವಂತಹ ಗೀತೆಯಾಗಿದೆ. ರಾಜೇಶ್ರೀ ಎಂಬ ವನದಲ್ಲಿ ನಾಜೂಕಿನ ಬೀದಿಯಲ್ಲಿ ಸೊಗಸಾಗಿ ಹೊರಟಿರುವ ಭೈರವನನ್ನು ಕುರಿತು ಹಾಡುತ್ತಾರೆ. ಶನಿವಾರದಂದು ಬರುವ ಭೈರವನ

ಹುಟ್ಟಿದ ಹಬ್ಬಕ್ಕೆ ಎಡೆಯಾಗಿ ಎಂಟೆಮ್ಮೆಯಿಂದ ಕರೆದ ನೊರೆ ಹಾಲನ್ನು ನೀಡುವುದಾಗಿ ಭಕ್ತರು ಆತನಲ್ಲಿ ಹೇಳಿಕೊಳ್ಳುತ್ತಾರೆ. ಆತನ ದೇವಾಲಯದಲ್ಲಿನ ತೊಂಭತ್ತು ಕಂಬ, ಆ ತೊಂಭತ್ತು ಕಂಬಕ್ಕೂ ಇಟ್ಟಿರುವ ತೊಂಭತ್ತು ದೀವಿಗೆಗಳ ಚಂದ. ಇಂತಹ ಚಂದದ ಮಧ್ಯೆ ನಲಿಯುತ್ತಿರುವ ಭೈರವ ಸ್ವಾಮಿಯನ್ನು ಹೊಗಳುತ್ತ ನಿನ್ನನ್ನು ಹಡೆದವರು ಯಾರೆಂದು ಕೇಳುತ್ತ ತಮ್ಮ ಭಕ್ತಿಯನ್ನು ಸಮರ್ಪಿಸುವ ಗುಣ ಅದ್ಭುತವಾದುದು.

'ಹೂವ ಚೆಲ್ಲಿರೋ ಮಾದೇವ್ಗೆ ಹೂ ಚೆಲ್ಲಿರೋ
ಆ.......... ಆಆ......... ಆಆ............ ಆಆಹಾ

ಆನೆಮಲೆಯ ಹಾಸಿಕೊಂಡವರೆ ಮಾದೇವ
ಜೇನುಮಲೆಯ ಹೊದ್ದುಕೊಂಡವರೆ
ಎಪ್ಪತ್ತೇಳು ಮಲೆಯ ಸುರುಳಿಸುತ್ತಿ ನನ್ನೊಡೆಯ
ಏಳು ಬಾಯಿ ಏಳು ಹುತ್ತದ ಒಳಗೆ ಯೋಗಿಯಾಗಿ ವರಗವರೆ ॥ಆನೆ॥

ಕೊರಳಲಿ ನಾಗಸರ್ಪವ ಹಿಡಿದು ಸುತ್ತಿಕೊಂಡವರೆ
ಹದಿನಾರಂಗಳ ಗುಡಿಯ ಒಳಗೆ ನಗುತಾ ಕುಂತವರೆ
ಮುತ್ತಿನ ಜೋಳಿಗೆ ಮುಂಗೈಯಲ್ಲಿ ಧರಿಸಿಕೊಂಡವರೆ
ಹೆಬ್ಬುಲಿ ಹೇರಿ ಹೆಜ್ಜೇನು ಮಲೆಗೆ ದಿಬ್ಬಣ ಹೊರಟವರೆ
ಸತ್ಯವಂತರ ಸತ್ಯವ ನೋಡುತಾ
ಸಾಲೂರು ಮಠದಲಿ ಕುಳಿತವರೆ. ॥ಆನೆ॥

ಉತ್ರಾಜಮ್ಮನ ಮಡಿಲಲ್ಲಿ ಸ್ವಾಮಿ ಮಾದೇವನಾಗವರೆ
ಕಲ್ಯಾಣ ಮಠದ ಬಸವಣ್ಣನವರಿಗೆ ಗುರುಗಳೆ ಆಗವರೆ
ಸುತ್ತೂರು ಮಠದಲಿ ರಾಗಿಯ ಬೀಸಿ ಶಾಪವ ಕೊಟ್ಟವರೆ
ಕುಂತೂರು ಮಠದ ಪ್ರಭುಲಿಂಗ ಸ್ವಾಮಿಗೆ ಶಿಷ್ಯರೆ ಆಗವರೆ
ಕೊಳ್ಳೆಗಾಲದ ಮರಳು ಗುಡ್ಡೆಯಲ್ಲಿ
ಮಂಡಿಯೂರಿ ಕುಳಿತವರೆ ॥ಆನೆ॥

ಮಾದೇಶ್ವರನನ್ನು ಕುರಿತ ಆರತಿ ಹಾಡು ಇದಾಗಿದೆ. ಆನುಮಲೆಯನ್ನು ಹಾಸಿಕೊಂಡು, ಜೇನುಮಲೆಯನ್ನು ಹೊದ್ದು, ಎಪ್ಪತ್ತೇಳು ಮಲೆಯ ಒಡೆಯನಾದ ಮಾದಪ್ಪನನ್ನು ಕುರಿತು ಸ್ಮರಿಸಲಾಗಿದೆ. ಕೊರಳಲಿ ನಾಗ ಸರ್ಪ ಸುತ್ತಿಕೊಂಡು, ಮುತ್ತಿನ ಜೋಳಿಗೆಯನ್ನು ಮುಂಗೈಯಲ್ಲಿ ಹಿಡಿದು, ಹೆಬ್ಬುಲಿ ಏರಿ ಹೆಜ್ಜೇನು ಮಲೆಗೆ ದಿಬ್ಬಣ ಹೊರಟವರೆ ಎಂದು ಹಾಡಿ ಹೊಗಳುತ್ತಾರೆ. ಉತ್ರಾಜಮ್ಮನ ಮಡಿಲಲ್ಲಿ ಹುಟ್ಟಿ, ಬಸವಣ್ಣರಿಗೆ ಗುರುವಾಗಿ, ಸುತ್ತೂರು ಮಠದಲ್ಲಿ ರಾಗಿ ಬೀಸಿ

ಶಾಪವನ್ನು ಕೊಟ್ಟ ಹಾಗೂ ಕುಂತೂರು ಮಠದ ಪ್ರಭುಲಿಂಗ ಸ್ವಾಮಿಗೆ ಶಿಷ್ಯರಾದ ವಿವರಗಳನ್ನು ಈ ಗೀತೆಯು ತಿಳಿಸುತ್ತದೆ.

'ತಿಂಗ ತಿಂಗಳಿಗೆ ತಿಂಗಳ ಮಾವನ ಪೂಜೆ
ಗರುಡಾನ ಪೂಜೆ ಘನಪೂಜೆ । ತಿಂಗಳು ಮಾವ
ಹನುಮಯ್ಯನ ಪೂಜೆ ಅನುಗಾಲ

ಕರಿಯ ಹನುಮಯ್ಯನ ಸಿರಿಯ ನೋಡನು ಬನ್ನಿ
ಸುರೆಹೊನ್ನೆ ಮರವ ಹೊರಗ್ಯಾನೆ । ಬಾಣವ ಬಿಟ್ಟು
ಶ್ರೀಲಂಕೆಗೆ ಮಂಜು ಗವಿದಾವೆ.'

ಈ ಗೀತೆಯು ಹನುಮನನ್ನು ಪೂಜಿಸುವಾಗ ಹಾಡುವ ಆರತಿಯ ಹಾಡಾಗಿದೆ. ಇಲ್ಲಿ ಅನುಗಾಲವು ಈತ ಪೂಜೆಗೆ ಒಳಗಾಗುವ ವಿವರಗಳಿವೆ. ಜೊತೆಗೆ ಬಾಣವ ಬಿಟ್ಟು ಶ್ರೀಲಂಕೆಗೆ ಮಂಜು ಕವಿಯುವಂತೆ ಮಾಡಿದ ಈತನ ಶಕ್ತಿ ಸಾಮರ್ಥ್ಯಗಳನ್ನು ಹೊಗಳುತ್ತ ಆತನನ್ನು ಸ್ಮರಿಸಲಾಗಿದೆ. ಜೊತೆಗೆ ಈ ಗೀತೆಯು ರಾಮನ ಪತ್ನಿಯಾದ ಸೀತೆಯನ್ನು ರಾವಣನು ಅಪಹರಿಸಿದ ವಿವರಗಳನ್ನು ಹಾಗೂ ಸೀತಾನ್ವೇಷಣೆಗಾಗಿ ಲಂಕೆಗೆ ಹೋದ ಹನುಮಂತನಿಂದ ಲಂಕೆಗೆ ಒದಗಿದ ದುರ್ಗತಿಯ ವಿವರಗಳನ್ನು ಸಹ ಈ ಆರತಿ ಹಾಡು ತಿಳಿಸಿಕೊಡುತ್ತದೆ.

೪.೧೦ ಕೋಲಾಟದ ಹಾಡುಗಳು.

ಕೋಲಾಟದ ಹಾಡುಗಳನ್ನು 'ಕೋಲಾಟದ ಪದಗಳು' ಎಂತಲೂ ಕರೆಯುವರು. ಕೋಲಾಟದ ಹಾಡುಗಳು ಪ್ರಾಚೀನ ಕಾಲದಿಂದಲೂ ಮನರಂಜನೆಯ ಮುಖ್ಯ ಆಕರಗಳಾಗಿ ನಮ್ಮ ನಡುವೆ ಉಳಿದು ಬಂದಿವೆ. ಜನಪದರ ಉತ್ಸಾಹ ಹಾಗೂ ಲವಲವಿಕೆಗಳ ಮುಖ್ಯ ಚೇತನವಾಗಿರುವ ಈ ಪದಗಳು ಜಾನಪದ ಜೀವನದಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿವೆ. ಯಾವುದೇ ರೀತಿಯ ವೇಷಭೂಷಣ, ವಾದ್ಯ, ರಂಗ ಸಜ್ಜಿಕೆಗಳ ಅಗತ್ಯತೆಗಳು ಇಲ್ಲದೆ, ಎಲ್ಲಿ ಬೇಕಾದರೆ ಅಲ್ಲಿ ಯಾವಾಗ ಬೇಕಾದರೆ ಆವಾಗ ಹಳ್ಳಿಗರನ್ನು ರಂಜಿಸುವ ಉತ್ತಮ ಕಲಾ ಸಾಧನಗಳಾಗಿವೆ.

ಕೋಲಾಟದ ಪದಗಳು ಜನ ಸಾಮಾನ್ಯರಿಂದ ರಚಿತವಾದವುಗಳಾಗಿದ್ದು, ಜನಪದರ ದಿನನಿತ್ಯದ ಜೀವನಾನುಭವದ ಸರಳತೆಯನ್ನು ಹೊಂದಿವೆ. ಹಳ್ಳಿಗರು ಬಳಸುವ ಸಾಮಾನ್ಯರ ಭಾಷೆಯಲ್ಲಿರುವ ಇವು ಸಹಜ ಹಾಗೂ ಸರಳವಾಗಿರುವಂತಹವು. ಜನಪದದ ಇತರ ಪ್ರಕಾರಗಳ ಅಭ್ಯಾಸದಂತೆ ಇವುಗಳಿಗೆ ದೀರ್ಘವಾದ ಯಾವುದೇ ಅಭ್ಯಾಸಗಳ ಅವಶ್ಯಕತೆ ಇಲ್ಲ. ಜನರ ನಡುವೆಯೆ ಬೆಳೆದವಾದ್ದರಿಂದ ಕೋಲಾಟದ ಪದಗಳು ಜನತೆಗೆ ಹೆಚ್ಚು ಹತ್ತಿರವಾಗಿವೆ.

ಯಕ್ಷಗಾನ ಬಯಲಾಟ ಮೊದಲಾದ ಇತರ ಪ್ರಕಾರಗಳಿಗೆ ಬೇಕಾದ ವಿಶೇಷ ರಂಗ ವ್ಯವಸ್ಥೆಗಳು ಕೋಲಾಟದ ಪದಗಳಿಗೆ ಅಗತ್ಯವಿಲ್ಲ. ಇವುಗಳಿಗೆ ವಿಶಾಲವಾದ ಬಯಲು ಸಿಕ್ಕರೂ

ಸಾಕು. ಕೋಲಾಟದ ಕಟ್ಟಾಳುಗಳು ತಿರುಗಾಡುವಷ್ಟು ಸ್ಥಳವಿದ್ದರೂ ಸಾಕು, ಕೋಲಾಟದ ಪ್ರದರ್ಶನಗಳು ಜರುಗುತ್ತವೆ. ಯಾವುದೇ ರೀತಿಯ ಹಣದ ವೆಚ್ಚ ಕೂಡ ಇವುಗಳಿಗೆ ಬೇಕಿಲ್ಲ. ಸಾಮಾನ್ಯವಾಗಿ ಜಾತ್ರೆ, ಹಬ್ಬ, ಹರಿದಿನ, ಉತ್ಸವ, ಸುಗ್ಗಿ, ಇತ್ತೀಚೆಗೆ ಗಣೇಶೋತ್ಸವದಂತಹ ಸಮಾರಂಭಗಳಲ್ಲಿಯೂ ಕೋಲಾಟದ ಪ್ರದರ್ಶನಗಳು ನಡೆಯುವುದು ಕಂಡುಬರುತ್ತದೆ. ಅಲ್ಲದೆ ಕೋಲಾಟದ ಪ್ರದರ್ಶನಗಳು ಇಂತಹದ್ದೇ ಸಮಯ, ಸ್ಥಳದಲ್ಲಿ ನಡೆಯಬೇಕು ಎಂಬ ಪೂರ್ವ ನಿರ್ಧಾರಿತವಾದ ಯಾವುದೇ ನಿಯಮಗಳೂ ಇಲ್ಲ. ಆದರೂ ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಇವುಗಳ ಪ್ರಸ್ತುತತೆ ಹೆಚ್ಚಿನ ಮೆರುಗನ್ನು ಪಡೆಯುತ್ತದೆ.

ಕೋಲಾಟದ ಗುಂಪಿನಲ್ಲಿರುವ ಎಲ್ಲರಿಗೂ ಕೋಲಾಟದ ಪದಗಳು ಬರಲೇಬೇಕು ಎಂದೇನೂ ಇಲ್ಲ. ತಾಳ ತಪ್ಪದಂತೆ ಪಲ್ಲವಿಯನ್ನು ಹಾಡಿ ಉಳಿದವರ ಜೊತೆ ತಮ್ಮ ಸೊಲ್ಲನ್ನು ಸೇರಿಸಿದರೆ ಸಾಕು ಆ ಪ್ರದರ್ಶನಗಳು ಯಶಸ್ವಿಯಾಗುತ್ತವೆ. ಕೋಲಾಟದ ಪದಗಳ ಪ್ರದರ್ಶನದ ಮುಂದಾಳತ್ವವನ್ನು ವಹಿಸಿಕೊಂಡ ವ್ಯಕ್ತಿ ಪ್ರತಿಯೊಂದು ಆಟಕ್ಕೂ ಕೂಡ ಹೊಸ ಹೊಸ ಹಾಡನ್ನು ಸೇರಿಸುತ್ತ ನೋಡುಗರನ್ನು ಬೆರಗುಗೊಳಿಸುತ್ತಾನೆ. ಈ ಕೋಲಾಟದ ತಂಡದಲ್ಲಿರುವ ವ್ಯಕ್ತಿಗಳ ಕೋಲಿನ ಶಬ್ದ, ಹೆಜ್ಜೆ ಹಾಕುವ ವೈಕರಿ, ಕೋಲಿಗೆ ಕೋಲು ಕೊಡುವ ಚಾಕ ಚಕ್ಯತೆ, ಅವರ ಬಾಗು, ಬಳುಕು, ಕುಣಿತ ಎಲ್ಲವೂ ಆ ಪ್ರದರ್ಶನದ ರೋಮಾಂಚಕಾರಕತನವನ್ನು ಗಮನಕ್ಕೆ ತಂದು ಕೊಡುತ್ತವೆ. ಸಾಮಾನ್ಯವಾಗಿ ಪ್ರತಿಯೊಂದು ಆಟ ಹಾಗೂ ಹಾಡು ಮುಗಿದ ತಕ್ಷಣ 'ಧಿಧೈ ವೀಧೈ ವೀಧತ್ತ' ಎಂದು ಹೇಳಿ ಕೋಲು ಬಿಡುವ ಪರಿಪಾಠವಿದೆ. ಇದರಿಂದ ಕೈ ಕಾಲುಗಳಿಗೆ ಒಂದೆರಡು ಗಳಿಗೆಯಷ್ಟು ಸಮಯ ಸಿಗುವುದು.

ಕೋಲು ಪದಗಳ ಧ್ವನಿ ಕೇಳುಗರನ್ನು ಹೊಸ ರಸಲೋಕಕ್ಕೆ ಕೊಂಡೊಯ್ಯುತ್ತದೆ, ಕೋಲುಗಳಿಗೆ ಕಟ್ಟಿದ ಗೆಜ್ಜೆಗಳ ಇಂಪಾದ ದನಿ, ಅವುಗಳ ಕಣಿ ಕಣಿ ನಾದ ಕೇಳುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ಕೋಲು ಪದಗಳಲ್ಲಿ ಶೃಂಗಾರ, ಹಾಸ್ಯ, ಭಕ್ತಿ, ವೀರ ಹೀಗೆ ಎಲ್ಲ ಭಾವಗಳ ಅಂಶಗಳೂ ಬೆರೆತಿರುತ್ತವೆ. ಈ ಹಿನ್ನೆಲೆಯಲ್ಲಿ ಕೋಲಾಟದವರು ಹಾಡದ ವಿಷಯವಿಲ್ಲ. ಎಲ್ಲ ವಸ್ತು ವಿಷಯಗಳೂ ಕೂಡ ಅವುಗಳಲ್ಲಿ ಸೇರಿರುತ್ತವೆ. ಈ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಕೋಲಾಟದ ಪದಗಳು ಸಹ ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಹೊಂದಿದ್ದು, ವೈವಿಧ್ಯಮಯವಾಗಿವೆ.

ಈ ತಾಲ್ಲೂಕಿನ ಕೋಲಾಟದ ಪದಗಳಲ್ಲಿ ಗಣಪತಿ, ಹನುಮ, ನಂಜನಗೂಡು ನಂಜುಂಡ, ಚುಂಚನಗಿರಿಯ ಭೈರವ, ಬಿಳಿಗಿರಿ ರಂಗಯ್ಯ, ಕೃಷ್ಣ ಮೊದಲಾದ ದೇವತೆಗಳು ಹಾಗೂ ಕರಿಯಮ್ಮ, ಲಕ್ಕವ್ವ, ಕಾಳಮ್ಮ, ಮೆಳಿಯಮ್ಮ ಮುಂತಾದ ಗ್ರಾಮೀಣ ದೈವಗಳನ್ನು ಕುರಿತ ಕೋಲಾಟದ ಪದಗಳೂ ಇವೆ. ಇಲ್ಲಿನ ಕೋಲು ಪದಗಳು ವಿಶಿಷ್ಟವಾಗಿವೆ. ಪುರುಷ ದೈವಗಳನ್ನು ಕುರಿತು ಹಾಡುವ ಸೋಬಾನೆ ಪದಗಳನ್ನೆ ಕೋಲಾಟದ ಪದಗಳಿಗೆ ಒಗ್ಗಿಸಿಕೊಳ್ಳಲಾಗಿದೆ. ಹಾಗೆಯೇ ಹಬ್ಬ ಹರಿದಿನಗಳಲ್ಲಿ ವಾದ್ಯದವರು ಹಾಡುವ ಹೊಗಳುವ ಪದಗಳೂ ಕೂಡ ಕೋಲಾಟದ ಪದಗಳಾಗಿ

ಮಾರ್ಪಟ್ಟಿವೆ. ಅಲ್ಲದೆ ಇಲ್ಲಿ ಹೆಂಗಸರನ್ನು, ಗಂಡಸರನ್ನು ಮತ್ತು ಸತ್ತವರನ್ನು ಕುರಿತು ಹೊಗಳುವ ಪದಗಳು ವಿಶಿಷ್ಟವೆನಿಸುತ್ತವೆ.

ಕೋಲಾಟದ ಪದಗಳಲ್ಲಿ ಜನಪದರ ಜೀವನ, ಅವರ ಅನುಭವ, ಅಂದಿನ ಸಮಾಜದ ನಂಬಿಕೆ, ನಡವಳಿಕೆಗಳು, ಅವರ ಭಾವನೆ, ಆದರ್ಶ, ಸಂಪ್ರದಾಯಗಳು, ರಸಿಕತೆ, ಅವರ ಜೀವನ ಕನಸುಗಳೆಲ್ಲವು ಮೂರ್ತ ಸ್ವರೂಪವಾಗಿ ದಾಖಲುಗೊಂಡಿವೆ. ಜೊತೆಗೆ ನಂಜನಗೂಡಿನ ನಂಜುಂಡನಿಗೆ ಸಂಬಂಧಿಸಿದ ಕೋಲು ಪದಗಳಲ್ಲಿ ದೇವದಾಸಿಯರ ಬಗೆಗಿನ ಮಾಹಿತಿಗಳು ಲಭಿಸುತ್ತವೆ.

"ಕೋಲಾಟದ ಪದ ಪ್ರಾರಂಭವಾಗುವುದೇ ದೇವರ ಸ್ತುತಿಯೊಂದಿಗೆ, ಅದೂ ಕೂಡ ಗಣಪತಿ ಪದದೊಂದಿಗೆ. ಹಾಗೆ ಪ್ರಾರಂಭವಾದ ಕೋಲಾಟ ಕೊನೆಗೊಳ್ಳುವುದು ಕಟ್ಟಿಗೆಬಿದ್ದ ಪದ ಹಾಡಿದ ನಂತರ. ಕೋಲಾಟಗಾರರು ಹಾಡುವ ಮಟ್ಟು, ಬೀಳುವ ಕಟ್ಟಿಗೆ, ಕುಣಿತದ ಮಟ್ಟು ಮತ್ತು ತಿಪರಿ ಅನುಸರಿಸಿ ಕೋಲಾಟದ ಪದಗಳನ್ನು ತಾಳಗಟಿಕೆ, ಚದುರಂಗ, ಅಗ್ನಿಗೋಪು, ದಾವಣಿಕೋಲು, ಸೋಬಾನೆ ಕೋಲು, ತೇರುಗೋಲು, ಒಂದಾಳಿನ ತಿಪರಿ, ಮೂರಾಳಿನ ತಿಪಿರಿ ಎಂಬ ಒಳ ಭಾಗಗಳಿವೆ"[೨] ಎಂಬ ಮಾತುಗಳು ಕೋಲಾಟದ ಪದಗಳ ಸ್ವರೂಪ ಹಾಗೂ ಅವುಗಳು ಹೊಂದಿರುವ ವಿಧಗಳನ್ನು ನಮ್ಮ ಗಮನಕ್ಕೆ ತಂದುಕೊಡುತ್ತವೆ.

ಇಲ್ಲಿನ ಕೋಲಾಟದ ಒಳ ವಿಭಾಗಗಳು ಸಮೃದ್ಧವಾದ ಕೋಲಾಟದ ಕಲೆಗೆ ಜೀವಂತಿಕೆ ಹಾಗೂ ವಿಶಿಷ್ಟವಾದ ಮೆರುಗನ್ನು ತಂದುಕೊಟ್ಟಿದ್ದು, ನೋಡುಗರನ್ನು ತನ್ನ ಕಲಾವಂತಿಕೆಯಿಂದ ಬೆರಗುಗೊಳಿಸುತ್ತದೆ. ಅಲ್ಲದೆ ಚನ್ನರಾಯಪಟ್ಟಣ ತಾಲ್ಲೂಕಿನ ಹುಲಿಕೆರೆ ಗ್ರಾಮದ, ಒಕ್ಕಲಿಗ ಜನಾಂಗದ ರಾಜೇಗೌಡರು 'ಕೋಲಾಟದ ಲಲ್ಲ' ಎಂದೇ ಪ್ರಸಿದ್ಧರಾದವರು. ಇವರು ಮೂವತ್ತಕ್ಕೂ ಹೆಚ್ಚಿನ ಗ್ರಾಮಗಳಲ್ಲಿ ಈ ಕಲೆಯನ್ನು ಕಲಿಸುವ ಮೂಲಕ ತಮ್ಮ ಕಲಾರಾಧನೆಯ ಬದುಕನ್ನು ಇಂಥಹ ಅದ್ಭುತವಾದ ಕಲೆಗೆ ಮುಡುಪಾಗಿಟ್ಟಿದ್ದಾರೆ. ಇದೇ ರೀತಿ ಬೆಸ್ತ ಜನಾಂಗಕ್ಕೆ ಸೇರಿದ ಶ್ರವಣೇರಿಯ ನಿಂಗಪ್ಪನವರು ಸಹ ಕೋಲಾಟದ ಪದಗಳನ್ನು ಹಾಡುವವರಾಗಿದ್ದು, ಮೌಲ್ಯಯುತವಾದ ಕೋಲಾಟದ ಪದಗಳನ್ನು ಉಳಿಸಿ ಮುಂದುವರೆಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ.

ಚನ್ನರಾಯಪಟ್ಟಣ ತಾಲ್ಲೂಕಿನ ಕೋಲಾಟದ ಪದಗಳಲ್ಲಿ ಮೈಸೂರು ಭಾಗದ ಬಿಳಿಗಿರಿ ರಂಗ, ಚಾಮುಂಡಿ, ತುಮಕೂರು ಭಾಗದ ಜುಂಜಪ್ಪ, ಕಾಟಯ್ಯ, ಎತ್ತಯ್ಯ, ಚಿತ್ರದುರ್ಗದ ಮದಕರಿ ನಾಯಕ, ಹಾಸನದ ಗ್ರಾಮ ದೇವತೆಗಳು, ಶಿವಮೊಗ್ಗದ ಬಿದನೂರು ಪಾಳೇಗಾರರು ಮೊದಲಾದವರನ್ನು ಕುರಿತ ಕೋಲಾಟದ ಪದಗಳಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣ ಹಾಸನ ಜಿಲ್ಲೆಯು ತುಮಕೂರು, ಶಿವಮೊಗ್ಗ, ಮೈಸೂರು ಹಾಗೂ ಚಿತ್ರದುರ್ಗ ಜಿಲ್ಲೆಗಳೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿರುವುದು. ಅಲ್ಲದೆ ಈ ಜಿಲ್ಲೆಗಳ ನಡುವೆ ನಡೆಯುವ ವೈವಾಹಿಕ ಸಂಬಂಧಗಳು ಹಾಗೂ ಇಲ್ಲಿನ ಸಾಂಸ್ಕೃತಿಕ ಕೊಡು ಕೊಳ್ಳುವಿಕೆಗಳ ಕಾರಣವಾಗಿ ಈ ಪ್ರದೇಶಗಳ ದೈವಗಳು, ಐತಿಹಾಸಿಕ ವ್ಯಕ್ತಿಗಳು, ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಕೋಲಾಟದ ಪದಗಳು ಇಲ್ಲಿ ಪ್ರಚಲಿತದಲ್ಲಿರುವುದು ಕಂಡುಬರುತ್ತದೆ.

ಜನಪದರ ಯಾವುದೇ ಕೆಲಸ ಕಾರ್ಯಗಳು ಗಣಪತಿಯ ಆರಾಧನೆಯೊಂದಿಗೆ ಪ್ರಾರಂಭವಾಗುತ್ತವೆ. ಅದು ಕೃಷಿ ಚಟುವಟಿಕೆಯಾಗಿರಲಿ, ಸುಗ್ಗಿ, ಜಾತ್ರೆ, ಉತ್ಸವಗಳಾಗಲಿ ಮೊದಲು ಗಣಪತಿಯ ಸ್ಮರಣೆಯ ಮೂಲಕ ಆ ಎಲ್ಲ ಕೆಲಸ ಕಾರ್ಯಗಳು ಮೊದಲಾಗುತ್ತವೆ. ಹಾಗೆಯೆ ಕೋಲಾಟದ ಕಲಾವಿದರು ಸಹ ತಮ್ಮ ಪ್ರದರ್ಶನಗಳನ್ನಾಗಲಿ, ಕೋಲಾಟದ ಪದಗಳನ್ನಾಗಲಿ ಗಣಪತಿಯ ಪ್ರಾರ್ಥನೆಯೊಂದಿಗೆ ಪ್ರಾರಂಭಿಸುತ್ತಾರೆ.

"ಶರಣು ಶರಣುವಯ್ಯ ಗಣನಾಯಕ
ನಮ್ಮ ಕರುಣದಿಂದಲಿ ಕಾಯೊ ವಿನಾಯಕ ।ಪಲ್ಲವಿ।

ಶರಣು ಶರಣುವಯ್ಯ ಗಣನಾಯಕ
ನಮ್ಮ ಕರುಣದಿಂದಲಿ ಕಾಯೊ ವಿನಾಯಕ ।ಪ।

ಎಳ್ಳುಂಡೆ ಜೇನುತುಪ್ಪ ಗಣನಾಯಕ
ನಿನ್ಗೆ ನಿತ್ಯ ತಂದೊಪ್ಪಿಸುವೆ ಗಣನಾಯಕ ।ಪ।

ಮರುಗ ಮಲ್ಲಿಗೆ ಜಾಜಿ ಗಣನಾಯಕ
ನಿನಗೆ ಮಾಲೇಯ ಕಟ್ಟಿಸುವೆ ವಿನಾಯಕ ।ಪ।

ಬಿಲ್ಲು ಪತ್ರೆ ವನದಲ್ಲಿ ಗಣನಾಯಕ
ನಿನ್ನ ಬಿದ್ದು ಬೇಡುವೆವು ವಿನಾಯಕ ।ಪ।

ಕಡ್ಲೆ ಉಸ್ಲಿ ಕಾಯಿ ಕಡುಬು ಗಣನಾಯಕ
ನಿನ್ನ ನಿತ್ಯ ನೈವೇದ್ಯಕೆ ವಿನಾಯಕ ।ಪ।

ನಿನಗೆ ಸಂಪಿಗೆ ವನದಲ್ಲಿ ಗಣನಾಯಕ
ನಿನ್ನ ನಿತ್ಯಾಲು ಮೆರೆಸುವೆ ವಿನಾಯಕ ।ಪ।

ಕರ್ಪೂರ ಸಾಂಬ್ರಾಣಿ ಗಣನಾಯಕ
ನಿಂಗೆ ನಿತ್ಯ ತಂದೊಪ್ಪಿಸುವೆ ವಿನಾಯಕ ।ಪ।

ಈಡುಗಾಯಿ ಓಡುಗಾಯಿ ಗಣನಾಯಕ
ನಿನಗೆ ನಿತ್ಯಾಲು ಒಡೆಸುವೆ ವಿನಾಯಕ ।ಪ।

ಶಿವನ ಕುಮಾರನಯ್ಯ ಗಣನಾಯಕ
ನಮಗೆ ಶಿಸ್ತು ಬುದ್ಧಿ ಕಲಿಸಯ್ಯ ವಿನಾಯಕ ।ಪ।

ಪಾರ್ವತಿ ಪುತ್ರನೆ ಗಣನಾಯಕ
ನಮಗೆ ವಿದ್ಯೆ ಬುದ್ಧಿ ಕಲಿಸಯ್ಯ ವಿನಾಯಕ ।ಪ।

ನಿನಗೆ ಹೆಂಡರಿಲ್ಲ ಮಕ್ಕಳಿಲ್ಲ ಗಣನಾಯಕ
ನಿನಗೆ ಮಕ್ಕಳು ನಾವಯ್ಯ ವಿನಾಯಕ ।ಪ।

ನಿನ್ನ ಬಿದ್ದು ಬಿದ್ದು ಬೇಡುವೆವು ಗಣನಾಯಕ
ನಮ್ಗೆ ಕೋಲು ಮೇಲೆ ಪದ ಕೊಡೊ ವಿನಾಯಕ ।ಪ।"[೬]

ತಮ್ಮನ್ನೆಲ್ಲ ಕರುಣೆಯಿಂದ ಕಾಪಾಡುವಂತೆ ಬೇಡಿಕೊಳ್ಳುತ್ತ ವಿನಾಯಕನನ್ನು ಸ್ತುತಿಸುತ್ತಾರೆ. ತಾವು ಎಳ್ಳುಂಡೆ, ಜೇನು ತುಪ್ಪ, ಮರುಗ, ಮಲ್ಲಿಗೆ, ಜಾಜಿ ಮಾಲೆಯ ಹಾರವನ್ನು ಹಾಕುವೆವು. ಬಿಲ್ವ ಪತ್ರೆ, ಕಡ್ಲೆ ಉಸ್ಲಿ, ಕಾಯಿ ಕಡುಬು, ಸಂಪಿಗೆ, ಕರ್ಪೂರ ಸಾಂಬ್ರಾಣಿ, ಈಡುಗಾಯಿ ಮೊದಲಾದವುಗಳನ್ನು ಅರ್ಪಿಸಿ ತಮ್ಮನ್ನು ಕಾಪಾಡುವಂತೆ ಬೇಡಿಕೊಳ್ಳುತ್ತಾರೆ. ಮುಖ್ಯವಾಗಿ ತಮಗೆ ಶಿಸ್ತು, ಬುದ್ಧಿ, ವಿದ್ಯೆಯನ್ನು ನೀಡುವ ಮೂಲಕ ನಮ್ಮ ಕೋಲುಗಳಿಗೆ ಪದವನ್ನು ನೀಡುವಂತೆ ಪ್ರಾರ್ಥಿಸುತ್ತಾರೆ.

'ತಂದನ್ನೆ ತಾನಾನೊ ತಂದನಾನೆ ತಾನಾನೋ
ತಂದನ್ನ ತಾನೋ ತಂದೇ ನಾನೋ ತಂದನ್ನೊ
ತಂದೇ ನಾನೋ ತಂದನ್ನೋ ॥ಪ॥

ಕಕ್ಕೇ ಹೂವಿಗೆ ಒಲಿದ ಕವಲು ನಾಮಕ್ಕೆ ಒಲಿದ
ಸೋಲಿಗರ ಬಾಲೆಗೆ ಒಲಿದ ರಂಗನಾಥ ತಂದನ್ನೋ
ತಂದೆ ನಾನೋ ತಂದನ್ನೋ ॥ಪ॥

ಯಾಲಕ್ಕಿ ಎಲೆ ಸಣ್ಣ ಜೀರಿಗೆ ಮೊನೆ ಸಣ್ಣ
ಸೋಲಿಗರ ಹೆಣ್ಣು ಮಕ್ಕಳ ನಡು ಸಣ್ಣ ತಂದನ್ನೊ
ತಂದೆ ನಾನೋ ತಂದನ್ನೊ ॥ಪ॥

ಆಧಾರವಾಗೋ ದೊರೆಯೇ ಆದಿನಾರಾಯಣನೇ
ವೇದದ ಗಿರಿಯ ವೆಂಕಟರಮಣನೆ ತಂದೆನ್ನೋ
ತಂದೆನಾನೋ ತಂದನ್ನೋ ॥ಪ॥

ಎಡಗಡೆ ಜೋಳಜಮ್ಮ ಬಲಗಡೆ ಲಕ್ಷ್ಮೀದೇವಿ
ಇಬ್ಬರ ನಡುವೇಲಿ ರಂಗನಾಟ ತಂದನ್ನೋ
ತಂದೆನಾನೋ ತಂದನ್ನೋ ॥ಪ॥

ಕಾಡೆಂಬ ಕತ್ತಲೆಯೊಳಗೆ ಸುರಿಯೊ ಮಳೆಯ ಒಳಗೆ
ಹೊರಟನೊ ಸ್ವಾಮಿ ಸೂಳೆರಂಗಿ ಮನೆಗೆ ತಂದನ್ನೊ
ತಂದೆನಾನೋ ತಂದನ್ನೋ ॥ಪ॥

ರಂಗಿಯ ಮನೆಯ ಮುಂದೆ ಬಂದು ನಿಂತ ರಂಗನಾಥ
ಜಾಗಟೆಯ ನಾದದ ಮಾಡವನೆ ತಂದನ್ನೋ
ತಂದೆನಾನೋ ತಂದನ್ನೋ ॥ಪ॥

ಹೊತ್ತು ಅನ್ನೊಂಗಿಲ್ಲ ಗೊತ್ತು ಅನ್ನೊಂಗಿಲ್ಲ
ಹದಗೆಟ್ಟೋನ್ ಎಷ್ಟೋತ್ತಲ್ಲೋ ಬರುತಾನೆ ತಂದನ್ನೊ
ತಂದೆನಾನೋ ತಂದನ್ನೋ ॥ಪ॥

ಜಾಗಟೆಯ ನಾದಕ್ಕೆ ಬೇಗನೆ ಎದ್ದಳು ರಂಗಿ
ಮೆಲ್ಲನೆ ಬಂದು ಕದವ ತೆರೆದವಳೆ ತಂದನ್ನೊ
ತಂದೆನಾನೋ ತಂದನ್ನೋ ॥ಪ॥

ಹೊಟ್ಟೆಯು ಬಹಳವಾಗಿ ಹಸಿತೈತೆ ಕಾಣೆ ರಂಗಿ
ಅನ್ನವ ಮಾಡಿ ಬಡಿಸೇಳೆ ತಂದನ್ನೊ
ತಂದೆನಾನೋ ತಂದನ್ನೋ ॥ಪ॥

ಆರ್‌ಕೊಳಗ ಅಕ್ಕಿ ಹಾಕಿ ಅನ್ನಾವ ಮಾಡಿದವಳಂತೆ
ಮೂರು ಕಂಡ್ಗ ಬೇಳೆಸಾರ ಕಾಯಿಸವಳೆ
ತಂದೆನಾನೋ ತಂದನ್ನೋ ॥ಪ॥

ಒಂದು ಗುಡಾಣ ತುಂಬ ತುಪ್ಪಾವ ಕಾಯಿಸವಳೆ
ರಂಗನಿಗೆ ತುತ್ತು ಮಾಡಿ ಉಣಿಸವಳೆ ತಂದನ್ನೋ
ತಂದೆನಾನೋ ತಂದನ್ನೋ ॥ಪ॥

ಆರ್ಕೊಳಗ ಅಕ್ಕಿಯನ್ನು ಅರಗಳಿಗೆ ಸಾಲಲಿಲ್ಲ
ಹೊಟ್ಟೆಯೊ ಪೆಟ್ಟೆಯೋ ನಿಂದು ಮಹರಾಯ
ತಂದೆನಾನೋ ತಂದನ್ನೋ ॥ಪ॥

ಇಕ್ಕುವಾಗ ಇಕ್ಕಿಬಿಟ್ಟು ಹಿಂಗೆಲ್ಲಾ ಅಂತಿಯಲ್ಲೆ
ಬಡ್ಗಿ ನಿನ್ ಮನೆಲ್ ಉಣ್ಣೋರಿಗೆ ಬುದ್ಧಿಯಿಲ್ಲ
ತಂದೆನಾನೋ ತಂದನ್ನೋ ॥ಪ॥

ವಿಳ್ಳೆಯನ್ನಿಟ್ಟಿದ್ದರಂತೆ ಪಗಡೆಯನ್ನಾಡಿದರಂತೆ
ಇಬ್ಬರು ಸೋಲಲಿಲ್ಲ ಗೆಲಲಿಲ್ಲ ತಂದನ್ನೋ
ತಂದೆನಾನೋ ತಂದನ್ನೋ ॥ಪ॥'

ಪ್ರಸ್ತುತ ಗೀತೆಯು ಶ್ರೀರಂಗಪಟ್ಟಣದ ರಂಗನಾಥನ ಪ್ರಣಯದಾಟವನ್ನು ಕುರಿತಾದ ಕೋಲಾಟದ ಪದವಾಗಿದೆ. ಇದರಲ್ಲಿ ರಂಗನಾಥನು ಸೋಲಿಗರ ಬಾಲೆಗೆ ಒಲಿದ ಪರಿಯನ್ನು ಕುರಿತು ವಿವರಿಸಲಾಗಿದೆ. ಜೊತೆಗೆ ಸೋಲಿಗ ಹೆಣ್ಣು ಮಕ್ಕಳ ಸೌಂದರ್ಯ, ಜೋಳಜಮ್ಮ ಹಾಗೂ ಲಕ್ಷ್ಮೀದೇವಿಯರ ಜೊತೆಗಿನ ರಂಗನಾಥನ ಪ್ರಣಯದಾಟಗಳ ವಿವರಗಳೂ ಸಹ ಇಲ್ಲಿ ದೊರಕುತ್ತವೆ. ರಂಗನಾಥ ಹಾಗೂ ಸೂಳೆರಂಗಿಯ ಅನ್ಯೋನ್ಯ ಬಾಂಧವ್ಯದ ಸಂಬಂಧಗಳನ್ನು ಕುರಿತು ಸಹ ಈ ಗೀತೆಯು ಚರ್ಚಿಸುತ್ತದೆ. ಹಸಿದು ಬಂದ ರಂಗಯ್ಯನಿಗೆ ಅಕ್ಕಿ ಹಾಕಿ ಅನ್ನ ಮಾಡಿ ಬೇಳೆ ಸಾರು ಮಾಡಿ, ತುಪ್ಪವ ಹಾಕಿ ತುತ್ತು ಮಾಡಿ ಸೂಳೆ ರಂಗಿ ರಂಗನಾಥನಿಗೆ ಉಣಿಸುವ ಕಲ್ಪನಾ ದೃಶ್ಯ ಅದ್ಭುತವಾದುದು. ಅವರಿಬ್ಬರ ಮುನಿಸು, ಜಗಳ ನಂತರ ವೀಳ್ಯೆಯನ್ನಿಟ್ಟು ಪಗಡೆಯಾಡುವ ರೀತಿ ಕೋಲಾಟದ ಪದದಲ್ಲಿ ಅದ್ಭುತವಾಗಿ ನಿರೂಪಿತಗೊಂಡಿದೆ.

ತಮ್ಮ ಆರಾಧ್ಯ ದೈವಗಳನ್ನು ಸಹ ತಮ್ಮಂತೆಯೇ ಸಾಮಾನ್ಯ ಮನುಷ್ಯರು ಎಂದು ಭಾವಿಸಿ ಅವರಿಗೂ ಹಸಿವು, ನೀರಡಿಕೆ, ಪ್ರೀತಿ, ಪ್ರೇಮ, ಸಿಟ್ಟು, ಜಗಳಗಳಂತಹ ಗುಣಗಳನ್ನು ಆರೋಪಿಸಿರುವ ಜನಪದರ ಕಲ್ಪನಾ ಸಾಮರ್ಥ್ಯ ಚರ್ಚಾರ್ಹವಾದುದು. ಎಲ್ಲಕ್ಕಿಂತ ಮುಖ್ಯವಾಗಿ ತಾನು ಭಕ್ತ, ಆತ ದೈವ ಎಂಬ ಭೇದವನ್ನು ಮಾಡದೆ ತಾವಿಬ್ಬರೂ ಒಂದೇ ಎಂಬ ಸಾಮಾನ್ಯ ಭಾವನೆ ಜನಪದರಲ್ಲಿರುವುದು ಇಲ್ಲಿ ಗಮನಿಸತಕ್ಕ ಪ್ರಮುಖ ಅಂಶವಾಗಿದೆ. ಜೊತೆಗೆ ಒಬ್ಬಳು ಪತ್ನಿಯಿದ್ದಾಗಲೂ ಇತರ ಹೆಣ್ಣುಗಳನ್ನು ಉಪ ಪತ್ನಿಯರಾಗಿ ಹೊಂದುವುದು, ಪ್ರೇಯಸಿಯರನ್ನು ಇಟ್ಟುಕೊಳ್ಳುವ ಪರಿಪಾಠ ಸಾಮಾನ್ಯ ಮನುಷ್ಯರಲ್ಲಷ್ಟೇ ಅಲ್ಲದೆ ದೇವತೆಗಳಲ್ಲಿಯೂ ರೂಢಿಯಲ್ಲಿದೆ ಎಂಬುದು ಇದರಿಂದ ತಿಳಿಯುತ್ತದೆ. ಅಲ್ಲದೆ ಇವೆಲ್ಲವು ನಮ್ಮ ಸಾಂಸ್ಕೃತಿಕ ಜಗತ್ತಿನ ಸತ್ವಯುತವಾದ ಅಂಶಗಳೇ ಆಗಿವೆ.

‘ಅಣ್ಣ ಮಾದಯ್ಯ ಗಿಡುಗಣ್ಣ ಮಾದಯ್ಯ
ನಿಮ್ಮಗೆಣ್ಣೆ ಮಜ್ಜಿಗಣಿಯಾದೊ ಬನ್ನಿ ಮಾದಯ್ಯ

ಆಲಂಬಾಡಿಯಿಂದ ಬಂದ ಹಾಲು ಮಜ್ಜನ
ಜೇನುಮಲೆಯಿಂದ ಬಂದ ಜೇನು ಮಜ್ಜನ

ಎಳಂದೂರಿನಿಂದ ಬಂದ ಎಣ್ಣೆ ಮಜ್ಜನ
ನಿಮ್ಮ ಸರಗೂರಿನಿಂದ ಬಂದ ಎಳ್ನೀರ್ ಮಜ್ಜನ

ತಾರ ತಾರ ತಟಿಕಿಟ ತಾರ ತಾರ ತಟಿಕಿಟ
ತಾರ ತಾರ ತಟಿಕಟಿ ತಾರರಾರಿರೋ
ತಾರಾರಿರಾರಿರೋ ತಾರಾರಿರಾರಿರೋ ಹೇ ಹೇ ಹೇ ಹಾ...

ಸಟ್ಟೆ ಸರಗೂರ ಮೂಕಪ್ಪ ಕಾಣಯ್ಯ
ಸಣ್ಣ ಸಣ್ಣ ನಾಮಗಳ ಸರಣಿ ಕಾಣಯ್ಯ
ಮೂಕಪ್ನ ಮಡದಿರ ಮೂಲಕಾಣಯ್ಯ
ಇಂಥ ಭಕ್ತಾರ ದುಡುಮಾನ ನೋಡುಬಾರಯ್ಯ

ಉಯ್ಯಲ್ ಬಂಬು ಉಯ್ಯಲ್ ತಮಟೆ ಮೊಳಗಿ ಮಲ್ಲಯ್ಯ
ಕನಕ ತಮಟೆ ಕಾಳ ತಮಟೆ ಧನಿ ಕೇಳಯ್ಯ
ನಗಾರಿ ನೈ ತಪ್ಪನೈ ಬೋಗ ಕಾಣಯ್ಯ
ಇಂಥ ಭಕ್ತಾರ ದುಡುಮಾನ ನೋಡುಬಾರಯ್ಯ.

ತಾರ ತಾರ ತಟಿಕಿಟ ....'

ಮುದ್ದು ಮಾದಯ್ಯನಿಗೆ ಎಣ್ಣೆ, ಮಜ್ಜನಗಳು ಅಣಿಯಾಗಿ ಬಂದ ಕಾರಣವಾಗಿ ಅವುಗಳನ್ನು ಸ್ವೀಕರಿಸುವಂತೆ ಕೇಳಿಕೊಳ್ಳುತ್ತಾರೆ. ಅಲ್ಲದೆ ಮಾದಪ್ಪನಿಗಾಗಿ ಬಂದ ಎಣ್ಣೆ ಮತ್ತು ಮಜ್ಜನದ ವಸ್ತುಗಳು ಯಾವ ಯಾವ ಸ್ಥಳಗಳಿಂದ ಬಂದಿವೆ ಎಂಬ ಮಾಹಿತಿಯನ್ನು ಸಹ ಈ ಕೋಲಾಟದ ಪದವು ತಿಳಿಸುತ್ತದೆ. ಅಲ್ಲದೆ ಇಲ್ಲಿ ಉಲ್ಲೇಖಿತವಾಗುವ ಆಲಂಬಾಡಿ, ಜೇನುಮಲೆ, ಎಳಂದೂರು, ಸರಗೂರು ಮೊದಲಾದ ಸ್ಥಳಗಳು ಸಾಂಸ್ಕೃತಿಕವಾಗಿ ಮಾದಪ್ಪನೊಂದಿಗೆ ಸಂಬಂಧವನ್ನು ಹೊಂದಿವೆ. ಹಾಗೆಯೇ ಮಾದಪ್ಪನ ಪವಾಡ ಹಾಗೂ ಅವನ ಕಾರ್ಯಕ್ಷೇತ್ರಗಳೊಂದಿಗೆ ಇವು ನೇರವಾದ ಸಂಬಂಧವನ್ನು ಹೊಂದಿದ್ದು, ಮಾದಪ್ಪನ ಚರಿತ್ರೆ ಹಾಗೂ ಆತನ ವಿವರಗಳೊಂದಿಗೆ ಇವು ನೇರವಾದ ಕಾರ್ಯ ಕಾರಣ ಸಂಬಂಧವನ್ನು ತಮ್ಮದಾಗಿಸಿಕೊಂಡಿವೆ.

'ತಂದೆನಾನೋ ತಂದನ್ನ ತಾನೋ
ತಂದೇನಾನೋ ತಂದೆನಾನೋ ತಂದನ್ನ ತಾನೊ

ರಾಗಿಕೊಟ್ಟೊಂದ್ ರಾಜ್ಯವ ಪಡೆದವಳೆ
ನಿಂಗರಾಜಮ್ಮ ರಾಜ್ಯವಾಳುವ ಕಂದನ ಪಡೆದಿಲ್ಲ
ವಿಳ್ಯಾ ಕೊಟ್ಟೊಂದು ಹಳ್ಳಿ ಪಡೆದವಳೆ
ನಿಂಗರಾಜಮ್ಮ ಹಳ್ಳಿಲಾಡೊ ಮಕ್ಕಳ ಪಡೆದಿಲ್ಲ.

ಹುಟ್ಟಿ ಮೂವತ್ತು ವರ್ಷವಾದರೂ ಮಾದೇವ ನನಗೆ
ಹೊಟ್ಟೆಯ ಒಳಗೆ ಮಕ್ಕಳ ಫಲವಿಲ್ಲ
ಮಕ್ಕಳ ಫಲವ ನನಗೆ ಕೊಟ್ಟರೆ ಮಾದೇವ ನಿನಗೆ
ಹುಲಿಯ ವಾಹನ ಮಾಡಿಸಿ ಕೊಡುತೀನಿ.

ಹುಲಿಯ ವಾಹನ ಮಾಡಿಸಿ ಕೊಡುವಂತ ಪರಿಸೆಯ
ಕೊಯಮೊತ್ತೂರಲಿ ಪಡೆದು ಮಡಗಿದಿನಿ.

ಮಕ್ಕಳ ಫಲವ ನನಗೆ ಕೊಟ್ಟರೆ ಮಾದೇವ ನಿನಗೆ
ಹಾಲಿನ ಕೊಳವೆ ತೋಡಿಸಿ ಕೊಡುತೀನಿ
ಹಾಲಿನ ಕೊಳವೆ ತೋಡಿಸಿ ಕೊಡುವಂತ ಪರುಸೆಯ
ಹಾಲೂರಲ್ಲಿ ಪಡೆದು ಮಡಗಿದಿನಿ.

ಮಕ್ಕಳ ಫಲವ ನನಗೆ ಕೊಟ್ಟರೆ ಮಾದೇವ ನಿನಗೆ
ಹೂವಿನ ತೇರು ಮಾಡಿಸಿ ಕೊಡುತೀನಿ
ಹೂವಿನ ತೇರು ಮಾಡಿಸಿ ಕೊಡುವಂತ ಪರುಸೆಯ ನಾನು
ತಿಪ್ಪೂರಲ್ಲಿ ತಂದು ಮಡಗಿದಿನಿ'.

ಈ ಕೋಲಾಟದ ಗೀತೆಯು ಮಾದೇಶ್ವರನ ಪವಾಡವನ್ನು ಹಾಗೂ ಆತನಿಗೆ ಭಕ್ತರು ಸಲ್ಲಿಸುವ ಹರಕೆಗಳನ್ನು ಕುರಿತು ತಿಳಿಸಿಕೊಡುತ್ತದೆ. ರಾಗಿಯನ್ನು ಕೊಟ್ಟು ಒಂದು ರಾಜ್ಯವನ್ನೆ ಪಡೆದ ನಿಂಗರಾಜಮ್ಮನಿಗೆ ರಾಜ್ಯವಾಳುವಂತಹ ಒಬ್ಬ ಕಂದನಿಲ್ಲದ ಕೊರಗಿದೆ. ಹುಟ್ಟಿ ಮೂವತ್ತು ವರ್ಷವಾದರೂ ಸಹ ಆಕೆಯ ಹೊಟ್ಟೆಯ ಒಳಗೆ ಮಕ್ಕಳ ಫಲವಿಲ್ಲದ ಕಾರಣ ಮಾದಪ್ಪನಲ್ಲಿ ಮಕ್ಕಳ ಫಲವನ್ನು ಕರುಣಿಸುವಂತೆ ಬೇಡಿಕೊಳ್ಳುತ್ತಾರೆ. ಜೊತೆಗೆ ತನಗೆ ಮಕ್ಕಳ ಫಲವನ್ನು ಕರುಣಿಸಿದರೆ ಆತನಿಗೆ ಹುಲಿಯ ವಾಹನವನ್ನು ಮಾಡಿಸಿ ಕೊಡುತ್ತೀನಿ. ಅದಕ್ಕಾಗಿ ಕೊಯಮುತ್ತೂರಲ್ಲಿ ಪರಿಸೆಯ ಪಡೆದು ಮಡಗಿದ್ದೇನೆಂದು ಆತನಲ್ಲಿ ಭಿನ್ನವಿಸಿಕೊಳ್ಳುತ್ತಾಳೆ.

ಮುಂದುವರೆದು ಹಾಲಿನ ಕೊಳವೆ ತೋಡಿಸಿ ಕೊಡುತೀನಿ, ಹಾಲಿನ ಕೊಳವೆಗಾಗಿ ಹಾಲೂರಲ್ಲಿ ಪರುಸೆಯ ಪಡೆದು ಮಡಗಿದ್ದೇನೆ. ಜೊತೆಗೆ ತಿಪಟೂರಲ್ಲಿ ತಂದ ಹೂವಿನಿಂದ ಹೂವಿನ ತೇರು ಮಾಡಿಸಿಕೊಡುತ್ತೇನೆ ಎಂದು ಮಾದಪ್ಪನಲ್ಲಿ ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಇಲ್ಲಿ ಉಲ್ಲೇಖವಾಗುವ ನಿಂಗರಾಜಮ್ಮ, ಹುಲಿವಾಹನ, ಕೊಯಮುತ್ತೂರು, ಹಾಲೂರು, ತಿಪ್ಪೂರು ಮೊದಲಾದವು ಮಾದೇಶ್ವರನೊಂದಿಗೆ ಹೊಂದಿರುವ ಸಹ ಸಂಬಂಧವನ್ನು ನಮಗೆ ತಿಳಿಸಿಕೊಡುತ್ತವೆ.

"ಚಲವಯ್ಯ ಚಲುವೊ ತಾನಿ ತಂದನ್ನ
ಚಿನ್ಮಾಯ ರೂಪೆ ಕೋಲಣ್ಣ ಕೋಲೆ ।ಸೊಲ್ಲು।

ಬೆಟ್ಟದ ಮೇಗಲ ಜಲ್ಲೆ ಬಿದುರು ಬೇಲಿ ಮೇಗಳ ಸೋರೆ ಬುರುಡೆ
ಲೋಲು ಕಿನ್ನುಡಿ ನುಡಿಸೊನಿವನ್ಯಾರೊ ।ಸೊ।

ಅಂದವುಳ್ಳ ಆಟಗಾರ, ಚಂದವುಳ್ಳ ಹಾಡುಗಾರ
ನಮ್ಮ ಕೇರಿಗೆ ಬಂದು ಹೋಗಯ್ಯ ।ಸೊ।

ನಮ್ಮ ಕೇರಿಗೆ ಬಂದರೆ ನಿನಗೆ, ಕರಿಯ ಕಂಬಳಿ ಗದ್ದಿಗೆ ಹಾಸಿ
ತಂದು ಕೊಡುವೆ ಗಂಧವೀಳ್ಯವ ।ಸೊ।

ಗಂಧನಾದ್ರು ಹೊರೆದುಕೊಳ್ಳೋ ವೀಳ್ಯನಾದ್ರು ತಿದ್ದಿಕೊಳ್ಳೊ
ಕುಂತು ನಿಂತು ಮಾತನಾಡನಾ ।ಸೊ।

ಊರಿಗಂತ ನೀನು ಬಾರೋ ನೀರಿಗಂತ ನಾನು ಬತ್ತೀನಿ
ಕುಂತು ನಿಂತು ಮಾತನಾಡನಾ ।ಸೊ।

ಸೊಪ್ಪಿಗಂತ ನಾನು ಬತ್ತೀನಿ ಸುತ್ತಿಕೊಂಡು ನೀನು ಬಾರೊ
ಸಂತೋಷದಿ ಕಾಲ ಕಳೆಯೋಣ ।ಸೊ।"[೭೪]

ಕೇರಿಗಳಲ್ಲಿ ಸೋರೆ ಬುರುಡೆಯಿಂದ ಮಾಡಿದ ಕಿನ್ನರಿಯನ್ನು ಹಿಡಿದು ನುಡಿಸುತ್ತ ಸುತ್ತುತ್ತಿರುವ ಜೋಗಿಯನ್ನು ಕುರಿತು ಹೆಣ್ಣೊಬ್ಬಳ ಮನದಲ್ಲಿ ಮೂಡುವ ಸುಮಧುರ ಭಾವನೆಗಳನ್ನು ಪ್ರಸ್ತುತ ಕೋಲಾಟದ ಪದವು ಚರ್ಚಿಸುತ್ತದೆ. ಆ ಜೋಗಿಯು ಅಂದವುಳ್ಳ ಆಟಗಾರ, ಚಂದವುಳ್ಳ ಹಾಡುಗಾರ. ಇಂತಹ ಗುಣಗಳುಳ್ಳ ಜೋಗಿಯನ್ನು ತನ್ನ ಕೇರಿಗೆ ಬರುವಂತೆ ಆಹ್ವಾನಿಸುತ್ತಾಳೆ. ಈ ರೀತಿ ಆಹ್ವಾನಿಸುತ್ತ ತನ್ನ ಕೇರಿಗೆ ಬಂದರೆ ಕರಿಯ ಕಂಬಳಿ ಗದ್ದಿಗೆಯನ್ನು ಹಾಕಿ, ತಿನ್ನಲು ಗಂಧವೀಳ್ಯವನ್ನು ನೀಡುತ್ತೇನೆ. ಹಾಗೆಯೇ ನಾವು ಕುಂತು ನಿಂತು ಮಾತನಾಡೋಣ. ಸೊಪ್ಪಿಗಂತ ನಾನು ಬತ್ತೀನಿ, ಊರು ಸುತ್ತಿಕೊಂಡು ನೀನು ಬಾರೊ ಸಂತೋಷದಿ ಕಾಲ ಕಳೆಯೋಣ ಎಂದು ತನ್ನ ಮನದ ಪ್ರೇಮ ನಿವೇದನೆಯನ್ನು ಹೇಳಿಕೊಳ್ಳುತ್ತಾಳೆ.

'ತಂದೆನ್ನ ತಾನು ತಂದೆನಾನ ತಾ
ನಂದನ್ನೆ ತಾನು ತಂದೆನಾನ ।ಸೊಲ್ಲು।

ಯೇಳ್ಳೆಯ್ಯ ಯೇಳೊ ಯೇಳು ಚಿನ್ನದಗಿರಿಯೆ
ಯೇಳ್ಳೆಯ್ಯ ಯೇಳೋ ಬೆಳಗಾಯ್ತು ।ತಂ।

ಯೇಳ್ಳೆಯ್ಯ ಯೇಳೋ ಬೆಳಗಾಯ್ತು ಮೂಡಲಿಂದ
ಸ್ವಾಮಿ ರಥವೇರಿ ಬರುತಾನೆ ।ತಂ।

ಬಿಳಿಗಿರಿ ರಂಗಯ್ಯ ಬೆಳಿಗೆದ್ದು ಬರುವಾಗ
ಹಾಕಮ್ಮ ಮಜ್ಜನದ ಹಲಿಗೇಯ ।ತಂ।

ಹಾಕಮ್ಮ ಮಜ್ಜನದ ಹಲಿಗೇಯ ತೊಳಿಚಮ್ಮ
ಬೀಸಮ್ಮ ಬೆಳ್ಳಿ ಚವಲಾವ ।ತಂ।

ಬೀಸಮ್ಮ ಬೆಳ್ಳಿ ಚವಲಾವ ತೊಳಿಚಮ್ಮ
ಹಾಕಮ್ಮ ವಜ್ಜುರದ ಅಗುಣೀಯ ।ತಂ।

ಬಿಳಿಗಿರಿ ಬೆಟ್ಟದ ಮೇಲೆ ಬಿಳಿಯೆಮ್ಮೆ ಕಾಯಾನ
ಬೆಳ್ಳಿ ಕೋಲಿನ ಬಿಳುಗಿರಿ ।ತಂ।

ಬೆಳ್ಳಿ ಕೋಲಿನ ಬಿಳುಗಿರಿ ನಿನ್ನೆಮ್ಮೆ
ಅಲ್ಲೆ ಮೇದಲ್ಲೆ ತಳಿಗಾವೋ ।ತಂ।

ಅಲ್ಲೆ ಮೇದಲ್ಲಿ ತಳಿಗಾವೆ ನಿನ್ನೆಮ್ಮೆ
ಸಾಕೆಂಬ ಹಾಲ ಕರೆದಾವು ।ತಂ।

ಸಾಕೆಂಬ ಹಾಲಿಗೆ ಸರ ಮುತ್ತಿನ ಕಡೆಗೋಲು
ವಜ್ರ ಮಾಣಿಕದ ಗುದಿಗಣ್ಣೆ ।ತಂ।

ವಜ್ರ ಮಾಣಿಕದ ಗುದಿಗಣ್ಣೆ ತಕ್ಕೊಂಡು
ಭದ್ರೆ ತೊಳಿಚಮ್ಮ ಕಡಿಬಾರೆ ।ತಂ।

ಭದ್ರೆ ತೊಳಿಚಮ್ಮ ಕಡಿಬಾರೆ ವಳಗಿರುವ
ಮಾರಕ್ಕ ಬೆಣ್ಣೆ ತೆಗಿಬಾರೆ ।ತಂ।

ಮಾರಕ್ಕ ಬೆಣ್ಣೆ ತೆಗಿಬಾರೆ ವಳಗಿರುವ
ರಂಗೈಗೆ ಬೆಣ್ಣೆ ಸಲಿಸೋಣ ।ತಂ।'

ಬಿಳಿಗಿರಿ ರಂಗನನ್ನು ಕುರಿತ ಕೋಲಾಟದ ಪದವಿದು. ಮೂಡಣದ ಸ್ವಾಮಿ ರಥವೇರಿ ಬರುತ್ತಿದ್ದಾರೆ. ಏಳಯ್ಯಾ ಬೆಳಗಾಯ್ತು ಎಂದು ರಂಗನನ್ನು ಎಚ್ಚರಗೊಳಿಸುವ ಆತ್ಮೀಯತೆಯ ಸನ್ನಿವೇಶ ಇಲ್ಲಿದೆ. ನಂತರ ಆತ ಎದ್ದು ಬರುತ್ತಿದ್ದಾನೆ ಆತನಿಗೆ ಭದ್ರೆ ತೊಳಿಚಮ್ಮ ಹಾಲನ್ನು ಕರೆದು, ಬೆಣ್ಣೆಯನ್ನು ತೆಗೆದು ತಾರೆ ಎಂದು ಹೇಳುವ ಮೂಲಕ ತಮ್ಮ ಆರಾಧ್ಯ ದೈವಕ್ಕೆ ತಮ್ಮ ಮನದ ಭಕ್ತಿಯ ಭಾವ ಸಿಂಚನವನ್ನು ಸಿಂಪಡಿಸುತ್ತಾರೆ. ರಂಗನಿಗೆ 'ಬೆಣ್ಣೆ' ಬಹುಪ್ರಿಯವಾದ ವಸ್ತು. ಆ ಕಾರಣವಾಗಿ ಆತನಿಗೆ ಅದನ್ನು ನೀಡುವಂತೆ ಜನಪದರು ಮಾರಕ್ಕ, ತೊಳಿಚಮ್ಮರನ್ನು ಕೇಳಿಕೊಳ್ಳುತ್ತಾರೆ.

"ಕೋಲು ರನ್ನದಿ ಕೋಲು ಚಿನ್ನದಿ ಕೋಲು ಕೋಲಿನ
ರನ್ನದಿ ಕೋಲು ಕೋಲಿನ
ಇಂತ ಕೋಲು ಮೇಲೆ ಮಮಲ ಚಂದ್ರ
ಮೇಲು ಕೋಲಿನ ।ಪಲ್ಲವಿ।

ವಕುಳ ಗಂಟೆ ಹುಲಿಯ ಚರ್ಮ ಸೊಗಸುಗಾರನೊ
ಅಯ್ಯಾ ದಿರುಸುಗಾರನೊ
ಇಂತ ಹೆಚ್ಚಿದರ ಹಲ್ಲ ಮುರಿವಸ್ವಾಮಿ ದಟ್ಟಿ ಧರಿಸಿದ
ಪಟ್ಟೆ ದಟ್ಟಿ ಧರಿಸಿದ ।ಕೋ।

ಪಟ್ಟೆ ದಟ್ಟಿ ಮುತ್ತಿನ ಬಿಲ್ಲ ಅಪ್ಪ ಧರಿಸಿದ
ಜುಂಜಪ್ಪ ಧರಿಸಿದ

ಇಂತನ ಗೆಜ್ಜೆ ಕಾಲು ನೀಲನಾಮ ಮೈಗೆ ಧರಿಸಿದ
ಸ್ವಾಮಿ ಮೈಗೆ ಧರಿಸಿದ ।ಕೋ।

ಕುದುರಿಗೆ ಹಾಕೈತೆ ನೋಡು ಜೀಕು ಮುಂಗಡಿಯ
ಧೀರ ಸೊಗಸು ಮುಂಗಡಿಯ
ಇಂತ ಬಾಕು ಬಲ್ಲ ಕಳ್ಳಾರಳ್ಳಿ ಭೂಪನೆಬ್ಬಿಸೊ
ಧೀರ ಭೂಪನೆಬ್ಬಿಸೊ ।ಕೋ।

ಬಾಕುಬಲ್ಲ ಕಳ್ಳರಳ್ಳಿ ಭೂಪನೆಬ್ಬಿಸೊ
ಧೀರ ಭೂಪನೆಬ್ಬಿಸೊ
ಜಗಳಕಂಚಿದ ಇಂತ ಸುಂಡನೂರ ಗೊಂದಿಯೊಳಗೆ
ದಂಡ ನಿಲ್ಲಿಸಿದ ಧೀರ ದಂಡು ನಿಲ್ಲಿಸಿದ ।ಕೋ।

ಹಗಲ ಚಿಕ್ಕಿ ನಿಗಿಲ ಎಳಕು ಜಗಳಕಂಚಿದ
ಧೀರ ಜಗಳ ಕಂಚಿದ
ಇಂತ ಸುಂಡನೂರ ಗೊಂದಿಯೊಳಗೆ ದಂಡ ನಿಲಿಸಿದ
ಧೀರ ದಂಡ ನಿಲಿಸಿದ ।ಕೋ।

ಹಾವಿನಲ್ಲಿ ವೀರಯ್ಯ ಜುಂಜ ಲೋಲನಾಡಿದ
ಧೀರ ಪಗಡೆನಾಡಿದ
ಇಂತ ತಾಯಿ ಮಕ್ಕಳೆಂಬ ಸಲ್ಲ ತೋರಿ ಮೆರೆಸಿದ
ಧೀರ ತೋರಿ ಮೆರೆಸಿದ ।ಕೋ।

ಎತ್ತಿನಲ್ಲಿಲೆತ್ತಯ್ಯ ಜುಂಜಲೆತ್ತನಾಡಿದ
ಧೀರ ಪಗುಡೆನಾಡಿದ
ಇಂತ ಅಪ್ಪ ಮಕ್ಕಳೆಂಬ ಸಲ್ಲ ಎತ್ತಿ ಮೆರೆಸಿದ
ಎತ್ತಿ ಮೆರೆಸಿದ ।ಕೋ।"೨೫

ಈ ಕೋಲಾಟದ ಪದವು ಜುಂಜಪ್ಪನ ಮಹಿಮೆಯನ್ನು ಕುರಿತು ವರ್ಣಿಸುತ್ತದೆ. ಪಟ್ಟೆ ದಟ್ಟಿ, ಮುತ್ತಿನ ಬಿಲ್ಲು, ವಕುಳ ಗಂಟೆ ಹಾಗೂ ಹುಲಿಯ ಚರ್ಮವನ್ನು ಧರಿಸಿದ ಸೊಗಸುಗಾರ ಜುಂಜಪ್ಪ. ಧೀರನಾದ ಈತ ಜಗಳಗಂಟರೆನಿಸಿದವರನ್ನು ಸುಂಡನೂರ ಗೊಂದಿಯೊಳಗೆ ದಂಡ ನಿಲ್ಲಿಸಿದಂತಹ ಧೀರತನದ ವ್ಯಕ್ತಿ.

"ಮತ್ತೆ ಒಂದವತಾರ ಎತ್ತಿದನು ದೇವ
ಇನ್ನು ವಂದವತಾರ ತಾಳಿದನು ಸ್ವಾಮಿ

ಮಾಯದೊಂದವತಾರ ಹೊಂದಿದನು ದೇವ
ಮಧುರಪುರಿ ಪಟ್ಟಣಕ್ಕೆ ಬಂದರು ನಾರದರು
ಬಂದ ನಾರದರಿಗೆ ವಂದನೆಯ ಮಾಡಿ
ರುಕ್ಮಿಣಿ ಅರಮನೆಗೆ ಕರೆದೊಯ್ದಳಾಗ
ಕರೆದೊಯ್ದು ರುಕ್ಮಿಣಿಯು ಬಂದ ಕಾರಣ ಕೇಳಿ
ಹಾಗೆಂದ ಮಾತಿಗೆ ನಾರದನು ತಾನು
ಕೇಳಮ್ಮ ರುಕ್ಮಿಣಿ ಕೇಳೆ ನೀನಿನ್ನು
ನಾನೊಂದ ಸುದ್ದಿಯ ಕೇಳಿ ಬಂದಿರುವೆ
ಅದನೀಗ ನಿನ್ನೊಡನೆ ಹೇಳುವನೆ ಕೇಳು
ನಂದಗೋಕುಲದೊಳಗೆ ಗೋವಿಂದನಿರುವ
ಚಿನುಮಾಯಾ ರೂಪನು ಅತಿ ಚಲುವ ಕಾಣೆ
ಅಮ್ಮ ಕೂಡಿದರೆ ಕೂಡಬೇಕು ಅಂತ ಸುಂದರನ
ಕೂಡದಿದ್ದರೆ ಜನ್ಮ ಇರಬಾರದಮ್ಮ
ಎಂದು ನಾರದರು ಹೇಳುವ ಸಮಯದಲ್ಲಿ
ರುಕ್ಮಿಣಿಯು ತನ್ನ ಮನದಲ್ಲಿ ಯೋಚಿಸಿ
ಅಂಥ ಸುಂದರನೆ ದೇವಕಿಯ ಮಗನು
ಅವುದು ಕಾಣೆ ದೇವಿ ಅಹುದು ಕಾಣಮ್ಮ
ಎಂದೇಳಿ ನಾರದರು ಹೊರಟೆ ಹೋದರು
ಹೋದಂತ ನಾರದರು ಮತ್ತೆಲ್ಲಿ ಪೋದ
ನಂದಗೋಕುಲಕ್ಕಿನ್ನು ಬಂದನೆ ದೇವ
ಕೃಷ್ಣನರಮನೆಗೆ ಹೋದರು ಬೇಗ
ಬಂದ ನಾರದರಿಗೆ ವಂದನೆಯ ಮಾಡಿ
ಮೂರು ಲೋಕದಲ್ಲಿ ವಾರ್ತೆ ಕೇಳಿದಾನೆ ಸ್ವಾಮಿ
ಆಗ ನಾರದರು ಇದು ಸಮಯವೆಂದು
ರುಕ್ಮಿಣಿ ವಾರ್ತೆಯ ಹೇಳುತಾನಿನ್ನು
ಕೇಳಯ್ಯ ಗೋವಿಂದ ಕೇಳು ನೀನಿನ್ನು
ಮಧುರಪುರಿ ಪಟ್ಟಣದೊಳು ನಾರಿಯವಳೆ
ರುಕ್ಮಿಣಿ ಎಂಬ ಸುಂದರಿ ತಾನು
ಅತಿ ಚಲುವೆಯಾಗಿ ಇರುತಾಳೆ ಕಾಣೊ

ಕೂಡಿದರೆ ಕೂಡಬೇಕು ಅಂತ ಸುಂದರಿಯ
ಕೂಡದಿದ್ದರೆ ಜನ್ಮ ಇರಬಾರದಯ್ಯ
ಎಂದೇಳಿ ನಾರದರು ಹೊರಟೇ ಹೊದರು

ಆಗ ಸ್ವಾಮಿ ಮನದಲ್ಲಿಯೆ ಯೋಚಿಸಿ
ಅಂತ ಸುಂದರಿಯನ್ನು ತರಲೇಬೇಕೆಂದು
ಬೇರೊಂದು ರೂಪಾನು ತಾಳುತಾನೆ ಕೃಷ್ಣ
ಹೆಣ್ಣು ಜನ್ಮವನ್ನು ಎತ್ತುತಾನೆ ಸ್ವಾಮಿ
ಬಾಚಿ ಬಕುತಲೆಯನ್ನು ಭಾವದಿಂದ ತೆಗೆದು
ದುಂಡು ಮಲ್ಲಿಗೆಯನ್ನು ಮುಡಿದು ತಾನಿನ್ನು
ಕಸ್ತೂರಿ ತಿಲಕವ ಪಣೆಯಲ್ಲಿ ಇಟ್ಟು
ಬೇಕಾದ ಆಭರಣ ಮೈಯೊಳಗೆ ಧರಿಸಿ
ಗೇಣು ಅಂಚಿನ ಸೀರೆ ನಡುವಿನೊಳುಟ್ಟು
ರನ್ನದ ಕುಪ್ಪಸವ ಎದೆಗಿನ್ನು ತೊಟ್ಟು
ಮುತ್ತಿನ ಸಿಂಬೆಯ ನೆತ್ತಿ ಮೇಲಿಟ್ಟು
ಬಂಗಾರದ ಗೂಡೆಯ ತಲಿಮೇಲೆ ಇಟ್ಟು
ಬಿದಿರು ದಬ್ಬೆಯ ಕೋಲು ಗೂಡೆಲ್ಲಿ ಮಡಗಿ
ನಾಗ ಬೆತ್ತದ ಕೋಲು ಬಲಗೈಲಿ ಪಿಡಿದು
ರನ್ನದ ಗಗ್ಗುರವ ಕೈಯಲ್ಲಿ ಹಿಡಿದು
ತನ್ನ ರೂಪು ತಾನು ನೋಡುತಾನೆ ಸ್ವಾಮಿ
ಸ್ತ್ರೀಯರವೊಳಗೆಲ್ಲ ಅತಿ ಚಲುವೆಯಾಗಿ
ಕಾಣುವೆನು ತಾನೆಂದು ಹೊಗಳಿ ಕೊಳ್ಳುತ್ತ
ರುಕ್ಮಿಣಿಯ ಅರಮನೆಯ ದಾರಿಯ ಹಿಡಿದು
ಕೊರವಂಜಿ ರೂಪಿನಲ್ಲಿ ಸ್ವಾಮಿಯು ತಾನು
ಕಣಿ ಎಂದು ಕಣಿ ಎಂದು ಸಾರುತ ಬಂದು
ಕೇರಿ ಕೇರಿಯಲಿ ತಿರುಗುತಾಳೆ ಕೊರಚಿ

ಕೇರಿ ಕೇರಿ ತಿರುಗುತಾಳೆ ಕೊರಚಿ
ಕಣಿ ಎಂದ ಶಬ್ದವನ್ನು ರುಕ್ಮಿಣಿಯು ಕೇಳಿ
ಅರಮನೆಯ ಗೌಡಿಯರೆ ಓಡೋಡಿ ಬನ್ನಿ
ದಾವ ದೇಶದಿಂದ ಕೊರಮಿ ಬಂದವಳೆ

ನಮ್ಮ ಅರಮನೆಗೀಗ ಕರೆತನ್ನಿ ಬೇಗ
ನಾನೊಂದು ಸಲ್ಲ ಕಣಿ ಕೇಳಬೇಕು
ಆಗಲಾ ಗೌಡಿಯರು ಓಡೋಡಿ ಹೋಗಿ
ಬಾರಮ್ಮ ಕೊರವಂಜಿ ಬಾರೆ ನಮ್ಮನೆಗೆ
ನಮ್ಮ ರಾಣಿ ಆಜ್ಞೆಯು ಆಗಿದೆ ಬಾರೆ
ಗಂಡಸರಿಲ್ಲದ ಮನೆಗೆ ಬರುವ ಗರತಲ್ಲ
ಪುರುಷರಿಲ್ಲದ ಮನೆಗೆ ಹೋಗುವ ನಾರೆಲ್ಲ

ಅಂಜು ಬೇಡಮ್ಮ ಅಳುಕಬೇಡಮ್ಮ
ನಮ್ಮ ರಾಣಿ ಇದ್ದಂಗೆ ನಿನಗೇನು ಭಯವೆ
ಬಾರಮ್ಮ ಕೊರವಂಜಿ ಬಾರೆ ನೀನಿನ್ನು
ಅದಕೆತಾ ಕೊರವಂಜಿ ಒಪ್ಪಿ ತಾನು
ರುಕ್ಮಿಣಿ ಅರಮನೆಗೆ ಹೊರಟಾಳು ತಾನು
ರಾಜ ಬೀದಿಯ ದಾಟಿ ರಾಜದಂಗಳ ದಾಟಿ
ಮುಂದಕ್ಕೆ ಮೂರೆಜ್ಜೆ ಹಿಂದಕ್ಕೆ ಆರೆಜ್ಜೆ
ಹಿಂದಕ್ಕಾರೆಜ್ಜೆ ಮುಂದಕ್ಕೆ ಮೂರೆಜ್ಜೆ
ಏಳನೆ ಬಾಗಿಲಿಗೆ ಬಂದು ನಿಂತಾಳು
ಕೊರಮಿ ಬರುವುದನು ರುಕ್ಮಿಣಿ ಕಂಡು
ಬಾರಮ್ಮ ಕೊರವಂಜಿ ಬಾರೆ ನೀನಿನ್ನು
ಮುತ್ತನೆ ಕೊಡುತೀನಿ ಕಣಿ ಏಳಮ್ಮ
ಮುತ್ತು ನಮ್ಮನೆ ಮುಗ್ಗಲು ಜೋಳ
ಮಾಣಿಕ್ಯವ ಕೊಡುತೀನಿ ಕಣಿ ಹೇಳೆ ಕೊರಮಿ"[೬೬]

ಕೃಷ್ಣ ಕೊರವಂಜಿಯ ಕೋಲು ಪದಗಳು ಕೋಲಾಟದ ಹಾಡುಗಳಲ್ಲೆಲ್ಲ ಅತಿ ಹೆಚ್ಚು ಪ್ರಸಿದ್ಧವಾಗಿರುವ ಹಾಡುಗಳಾಗಿವೆ. ಜನಪದರಲ್ಲಿ ಈ ಪದಗಳು 'ಕೃಷ್ಣ – ಕೊರವಂಜಿಯರ ಆಟ' ಎಂದೇ ಪ್ರಸಿದ್ಧವಾಗಿವೆ. ಈ ರೀತಿಯ ಕೋಲಾಟದ ಪದಗಳು ದೀರ್ಘವಾಗಿದ್ದು, ಅನೇಕ ಜನರು ಪರಸ್ಪರ ಎದುರು ಬದುರಾಗಿ ಎರಡು ಸಾಲುಗಳಲ್ಲಿ ನಿಂತು ಕೋಲು ಹುಯ್ಯುತ್ತ ಕೊರವಂಜಿ ಆಟವನ್ನು ಆಡುತ್ತಾರೆ. ಹೀಗೆ ಆಡುವಾಗ ಇರುವ ಕಲಾವಿದರಲ್ಲಿಯೆ ಒಬ್ಬರನ್ನು ಕೃಷ್ಣನನ್ನಾಗಿ, ಇನ್ನೊಬ್ಬರನ್ನು ರುಕ್ಮಿಣಿಯನ್ನಾಗಿ ಹಾಗೂ ಮತ್ತೊಬ್ಬರನ್ನು ಕೊರವಂಜಿಯನ್ನಾಗಿಸಿಕೊಂಡು ಪ್ರದರ್ಶನ ನೀಡಲಾಗುತ್ತದೆ.

ಈ ಸಮಯದಲ್ಲಿ ಶೃಂಗಾರ ಹಾಗೂ ಹಾಸ್ಯದ ಗುಣಗಳಿಗೆ ಹೆಚ್ಚಿನ ಸ್ಥಾನವಿದೆ. ಮಧುರ ಪುರಿ ಪಟ್ಟಣದಲ್ಲಿನ ರುಕ್ಮಿಣಿ ಹಾಗೂ ನಂದ ಗೋಕುಲದಲ್ಲಿನ ಕೃಷ್ಣ ಇವರಿಬ್ಬರ ನಡುವೆ ಮಧ್ಯವರ್ತಿಯಾಗಿ ಬಂದ ನಾರದರು ಇವರಿಬ್ಬರಲ್ಲಿಯೂ ಪರಸ್ಪರ ಪ್ರೇಮ, ಅನುರಾಗದ ಭಾವನೆಗಳು ಮೂಡುವಂತೆ ಮಾಡಿದ ಕಾರಣವಾಗಿ ಇಬ್ಬರಲ್ಲೂ ವಿವಾಹವಾಗುವ ಮನಸ್ಸಾಗುತ್ತದೆ. ಕೃಷ್ಣನು ಕೊರವಂಜಿಯ ವೇಷವನ್ನು ಧರಿಸಿ ಕಣಿ ಹೇಳುವವಳಾಗಿ ರುಕ್ಮಿಣಿಯ ಅರಮನೆಗೆ ಬಂದು ಕಣಿ ಹೇಳುವ ವಿವರಗಳು ಈ ಕೋಲಾಟದ ಪದದಲ್ಲಿ ಕಂಡುಬರುತ್ತವೆ.

ಕೊನೆ ಟಿಪ್ಪಣಿಗಳು

೧. ನಾಡಪದಗಳು, ಪು.ಸಂ-೧೧೮ ರಿಂದ ೧೨೧.

೨. ನಾಡಪದಗಳು, ಪು.ಸಂ-೧೨೧ ರಿಂದ ೧೨೨.

೩. ನಾಡಪದಗಳು, ಪು.ಸಂ-೧೧೭ ರಿಂದ ೧೧೮.

೪. ಸುವರ್ಣ ಜಾನಪದ ಲೇಖನಗಳು, ಪು.ಸಂ-೨೮೬.

೫. ಜೀವನಾವರ್ತನ ಗೀತೆಗಳು, ಪು.ಸಂ-೮೧.

೬. ಜೀವನಾವರ್ತನ ಗೀತೆಗಳು, ಪು.ಸಂ-೮೩.

೭. ಜೀವನಾವರ್ತನ ಗೀತೆಗಳು, ಪು.ಸಂ-೮೫ ರಿಂದ ೮೭.

೮. ಜೀವನಾವರ್ತನ ಗೀತೆಗಳು, ಪು.ಸಂ-೧೦೩ ರಿಂದ ೧೦೪.

೯. ಜನಪದ ಸಾಹಿತ್ಯ, ಪು.ಸಂ-೦೭.

೧೦. ಗರತಿಯ ಹಾಡು, ಪು.ಸಂ-೮೭.

೧೧. ಜನಪದ ಸಾಹಿತ್ಯ, ಪು.ಸಂ-೦೭.

೧೨. ಜನಪದ ಸಾಹಿತ್ಯ, ಪು.ಸಂ-೦೭.

೧೩. ಜನಪದ ಸಾಹಿತ್ಯ, ಪು.ಸಂ-೦೯.

೧೪. ಜನಪದ ಸಾಹಿತ್ಯ, ಪು.ಸಂ-೦೯.

೧೫. ಜನಪದ ಸಾಹಿತ್ಯ, ಪು.ಸಂ-೧೦.

೧೬. ಜನಪದ ಸಾಹಿತ್ಯ, ಪು.ಸಂ-೧೦.

೧೭. ನಾಡಪದಗಳು, ಪು.ಸಂ-೪೧.

೧೮. ನಾಡಪದಗಳು, ಪು.ಸಂ-೧೧೪ ರಿಂದ ೧೧೭.

೧೯. ನಾಡಪದಗಳು, ಪು.ಸಂ-೧೨೨ ರಿಂದ ೧೨೪.

೨೦. ಚಿಲಿಪಿಲಿ, ಪು.ಸಂ-೩೯ ರಿಂದ ೪೦.

೨೧. ಚಿಲಿಪಿಲಿ, ಪು.ಸಂ-೪೧.

೨೨. ಚಿಲಿಪಿಲಿ, ಪು.ಸಂ-೪೨.

೨೩. ಚಿಲಿಪಿಲಿ, ಪು.ಸಂ-೫೬.

೨೪. ಚಿಲಿಪಿಲಿ, ಪು.ಸಂ-೬೦.

೨೫. ಚಿಲಿಪಿಲಿ, ಪು.ಸಂ-೯೪ ರಿಂದ ೯೫.

೨೬. ಚಿಲಿಪಿಲಿ, ಪು.ಸಂ-೯೭ ರಿಂದ ೯೮.

೨೭. ಚಿಲಿಪಿಲಿ, ಪು.ಸಂ-೧೩೬.

೨೮. ಚಿಲಿಪಿಲಿ, ಪು.ಸಂ-೬೨ ರಿಂದ ೬೩.

೨೯. ಚಿಲಿಪಿಲಿ, ಪು.ಸಂ-೭೭ ರಿಂದ ೭೮.

೩೦. ಚಿಲಿಪಿಲಿ, ಪು.ಸಂ–೮೦.

೩೧. ಚಿಲಿಪಿಲಿ, ಪು.ಸಂ–೯೯ ರಿಂದ ೧೦೦.

೩೨. ಚಿಲಿಪಿಲಿ, ಪು.ಸಂ–೧೧೩.

೩೩. ಚಿಲಿಪಿಲಿ, ಪು.ಸಂ–೧೧೫.

೩೪. ಚಿಲಿಪಿಲಿ, ಪು.ಸಂ–೧೨೧.

೩೫. ಚಿಲಿಪಿಲಿ, ಪು.ಸಂ–೧೪೧.

೩೬. ಚಿಲಿಪಿಲಿ, ಪು.ಸಂ–೬೧.

೩೭. ಚಿಲಿಪಿಲಿ, ಪು.ಸಂ–೬೭.

೩೮. ಚಿಲಿಪಿಲಿ, ಪು.ಸಂ–೮೩.

೩೯. ಚಿಲಿಪಿಲಿ, ಪು.ಸಂ–೬೩.

೪೦. ಚಿಲಿಪಿಲಿ, ಪು.ಸಂ–೬೬.

೪೧. ಚಿಲಿಪಿಲಿ, ಪು.ಸಂ–೧೪೫.

೪೨. ಚಿಲಿಪಿಲಿ, ಪು.ಸಂ–೩೭.

೪೩. ಚಿಲಿಪಿಲಿ, ಪು.ಸಂ–೫೯.

೪೪. ಚಿಲಿಪಿಲಿ, ಪು.ಸಂ–೭೬.

೪೫. ಚಿಲಿಪಿಲಿ, ಪು.ಸಂ–೮೭.

೪೬. ಚಿಲಿಪಿಲಿ, ಪು.ಸಂ–೯೧.

೪೭ ಚಿಲಿಪಿಲಿ, ಪು.ಸಂ–೧೦೪.

೪೮. ಚಿಲಿಪಿಲಿ, ಪು.ಸಂ–೧೨೩.

೪೯. ಚಿಲಿಪಿಲಿ, ಪು.ಸಂ–೧೩೯.

೫೦. ಚಿಲಿಪಿಲಿ, ಪು.ಸಂ–೬೮.

೫೧. ಚಿಲಿಪಿಲಿ, ಪು.ಸಂ–೧೨೯.

೫೨. ಚಿಲಿಪಿಲಿ, ಪು.ಸಂ–೩೬.

೫೩. ಚಿಲಿಪಿಲಿ, ಪು.ಸಂ–೮೬.

೫೪. ಚಿಲಿಪಿಲಿ, ಪು.ಸಂ–೧೧೪.

೫೫. ಚಿಲಿಪಿಲಿ, ಪು.ಸಂ–೧೪೦.

೫೬ ಚಿಲಿಪಿಲಿ, ಪು.ಸಂ–೧೪೬.

೫೭ ಜೀವನಾವರ್ತನ ಗೀತೆಗಳು, ಪು.ಸಂ–೪೫೭.

೫೮. ಜೀವನಾವರ್ತನ ಗೀತೆಗಳು, ಪು.ಸಂ–೪೫೮.

೫೯. ಜೀವನಾವರ್ತನ ಗೀತೆಗಳು, ಪು.ಸಂ–೪೫೮ ರಿಂದ ೪೫೯.

೬೦. ಹೊಯ್ಸಳ ನಾಡಿನ ಕೋಲಾಟದ ಪದಗಳು, ಪು.ಸಂ–೧೦೦ ರಿಂದ ೧೦೨.

೬೧. ನಾಡಪದಗಳು, ಪು.ಸಂ–೮೭.

೬೨. ಜೀವನಾವರ್ತನ ಗೀತೆಗಳು, ಪು.ಸಂ–೩೯೯ ರಿಂದ ೪೦೦.

೬೩. ನಾಡಪದಗಳು, ಪು.ಸಂ–೮೭.

೬೪. ನಾಡಪದಗಳು, ಪು.ಸಂ–೮೮.

೬೫. ನಾಡಪದಗಳು, ಪು.ಸಂ–೮೮.

೬೬. ಜನಪದ ಸಾಹಿತ್ಯ, ಪು.ಸಂ–೫೧.

೬೭. ಸುವರ್ಣ ಜಾನಪದ ಲೇಖನಗಳು, ಪು.ಸಂ–೨೮೮.

೬೮. ಗರತಿಯ ಹಾಡು, ಪು.ಸಂ–೭೯.

೬೯. ಸುವರ್ಣ ಜನಪದ ಕಾವ್ಯ, ಪು.ಸಂ–೨೯೭.

೭೦. ಗರತಿಯ ಹಾಡು, ಪು.ಸಂ–೨೩.

೭೧. ಗರತಿಯ ಹಾಡು, ಪು.ಸಂ–೨೩.

೭೨. ಹೊಯ್ಸಳ ನಾಡಿನ ಕೋಲಾಟದ ಪದಗಳು, ಪು.ಸಂ–xii.

೭೩. ಹೊಯ್ಸಳ ನಾಡಿನ ಕೋಲಾಟದ ಪದಗಳು, ಪು.ಸಂ–೧೦೮ ರಿಂದ ೧೦೯.

೭೪. ಹೊಯ್ಸಳ ನಾಡಿನ ಕೋಲಾಟದ ಪದಗಳು, ಪು.ಸಂ–೧೪೪ ರಿಂದ ೧೪೫.

೭೫. ಹೊಯ್ಸಳ ನಾಡಿನ ಕೋಲಾಟದ ಪದಗಳು, ಪು.ಸಂ–೬೮ ರಿಂದ ೬೯.

೭೬. ಹೊಯ್ಸಳ ನಾಡಿನ ಕೋಲಾಟದ ಪದಗಳು, ಪು.ಸಂ–೧೦೪ ರಿಂದ ೧೦೭.

ಅಧ್ಯಾಯ : ಐದು

ಕ್ರಿಯಾವರ್ತನ ಜನಪದ ಗೀತೆಗಳ ಸಾಂಸ್ಕೃತಿಕ ಅನನ್ಯತೆ

೫.೧ ಒಕ್ಕಲುತನದ ಹಾಡುಗಳು

೫.೨ ಬೀಸುವ ಹಾಡುಗಳು

೫.೩ ಕುಟ್ಟುವ ಹಾಡುಗಳು

೫.೪ ಒಗಟಿನ ಹಾಡುಗಳು

೫.೫ ಪೌರಾಣಿಕ ಹಾಡುಗಳು

ಅಧ್ಯಾಯ : ಐದು

ಕ್ರಿಯಾವರ್ತನ ಜನಪದ ಗೀತೆಗಳ ಸಾಂಸ್ಕೃತಿಕ ಅನನ್ಯತೆ

'ಜನಪದ ಗೀತೆಗಳು' ನಿರ್ದಿಷ್ಟ ಸಾಂಸ್ಕೃತಿಕ ಸನ್ನಿವೇಶದಲ್ಲಿ ಸೃಷ್ಟಿಯಾದ ಅಪೂರ್ವವಾದ ರಚನೆಗಳಾಗಿವೆ. ಆಧುನಿಕತೆಯ ಪ್ರಭಾವದಿಂದಾಗಿ ಉಂಟಾದ ಸಾಂಸ್ಕೃತಿಕ ಬದಲಾವಣೆಗಳಿಂದಾಗಿ ಇಂದು ಜನಪದ ಗೀತೆಗಳನ್ನು ಹಾಡುವವರೂ ಹಾಗೂ ಅವರು ಹಾಡುವ ಹಾಡುಗಳೂ ಕೂಡ ಕಣ್ಮರೆಯಾಗುತ್ತಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಆವಿಷ್ಕಾರಗೊಂಡಿರುವ ಹಿಟ್ಟಿನ ಗಿರಣಿಗಳ ಕಾರಣವಾಗಿ ಬೀಸುವ ಕಲ್ಲುಗಳು ಕಣ್ಮರೆಯಾಗಿವೆ. ಜೊತೆಗೆ ಈ ಕಲ್ಲುಗಳನ್ನು ಅನುಸರಿಸಿ ಬರುತ್ತಿದ್ದ ಬೀಸುವ ಕಲ್ಲಿನ ಪದಗಳು, ಕುಟ್ಟುವ ಪದಗಳು ತಮ್ಮ ಪ್ರಾಮುಖ್ಯತೆ, ಅಸ್ಥಿತ್ವ ಹಾಗೂ ಸಾಂದರ್ಭಿಕತೆಯನ್ನು ಕಳೆದುಕೊಂಡಿವೆ. ಅಲ್ಲದೆ ಬೀಸುವ ಹಾಡುಗಳಲ್ಲಿ ಹೊಸ ಸೃಷ್ಟಿ ಸಾಧ್ಯವಿಲ್ಲದಿರುವುದರಿಂದಾಗಿ ಅವುಗಳನ್ನು ಸಂಗ್ರಹಿಸಿ ಕಾಪಾಡುವುದು ಹಲವಾರು ಕಾರಣಗಳಿಂದಾಗಿ ಇಂದು ಮಹತ್ವದ ಕಾರ್ಯವಾಗಿದೆ. ಜನಪದಕಾರನ ಈ ಗೀತೆಗಳ ಅಪೂರ್ವ ಚೆಲುವು ಹಾಗೂ ವೈವಿಧ್ಯ, ಸೊಗಸು ಒಮ್ಮೆ ನಾಶವಾದರೆ ಅವುಗಳ ಮರುಸೃಷ್ಟಿ ಸಾಧ್ಯವಿಲ್ಲ. ಜೊತೆಗೆ ಇವು ಸಾಂಸ್ಕೃತಿಕವಾಗಿ ಮಹತ್ವವಾದವು.

ಇವು ಒಂದು ನಿರ್ದಿಷ್ಟ ಜನ ಸಮುದಾಯಗಳ ಸಾಂಸ್ಕೃತಿಕ ಇತಿಹಾಸ ಹಾಗೂ ಅವರ ಬದುಕಿನ ವಿವರಗಳನ್ನು ತಿಳಿಸುತ್ತವೆ. ಜೊತೆಗೆ ವಿವಿಧ ಬಗೆಯ, ವಿಶಿಷ್ಟ ರೀತಿಯ ಮಾಹಿತಿಗಳನ್ನು ನೀಡುತ್ತ ಅವುಗಳ ಪರಂಪರೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ. ಆ ಕಾರಣವಾಗಿ ಅವುಗಳ ಸಾಂಸ್ಕೃತಿಕ ಅನನ್ಯತೆ ಮಸುಕಾಗದಂತೆ ಅವುಗಳನ್ನು ರಕ್ಷಿಸಿ, ಅಧ್ಯಯನಕ್ಕೊಳಪಡಿಸುವುದು ಎಲ್ಲರ ಗುರುತರ ಜವಾಬ್ದಾರಿಯಾಗಿದೆ. ಇವುಗಳ ಧಾಟಿಯಲ್ಲಿರುವ ವೈವಿಧ್ಯ ಜನಪದ ಗೀತೆಗಳ ಜೀವಾಳವಾಗಿದೆ. ಇವುಗಳಲ್ಲಿ ಎಂದಿಗೂ ಮಾಸದ ಜೀವಂತಿಕೆ, ಲವಲವಿಕೆ ಇದೆ. ಇವು ಸಾಂಸ್ಕೃತಿಕ ರಾಯಭಾರಿಯಾಗಿ ಜನರನ್ನು ಒಂದುಗೂಡಿಸುವಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿರುವುದು ಇವುಗಳ ಸಾಂಸ್ಕೃತಿಕ ಅಧ್ಯಯನದ ಸಂದರ್ಭಗಳಲ್ಲಿ ಮಹತ್ವದ ವಿಚಾರವಾಗಿದೆ.

ಭಾರತವು ಕೃಷಿ ಪ್ರಧಾನವಾದ ಹಳ್ಳಿಗಳಿಂದ ಕೂಡಿದ ದೇಶ. ಕೃಷಿಯೇ ಹಳ್ಳಿಗಳ ಆರ್ಥಿಕ ಬೆನ್ನೆಲುಬು. ಈ ಕೃಷಿ ಚಟುವಟಿಕೆಗಳಿಗೆ ಆಧಾರವಾಗಿರುವ ಭೂದೇವಿ ಹಾಗೂ ಎತ್ತುಗಳು ನಮ್ಮ ರೈತರ ಜೀವನಾಡಿಯಾಗಿವೆ. ಆ ಕಾರಣವಾಗಿಯೆ ತಮ್ಮ ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸುವ

ಮುನ್ನ ಭೂಮಿ ತಾಯಿಯನ್ನು ಹಾಗೂ ಎತ್ತುಗಳನ್ನು ಪೂಜಿಸಿ ಕೃಷಿ ಕಾರ್ಯಗಳಿಗೆ ಅಡಿಯಿಡುತ್ತಾರೆ. ಈ ಸಂದರ್ಭದಲ್ಲಿ ಹಲವು ಹಾಡುಗಳನ್ನು ಹಾಡಲಾಗುತ್ತದೆ. ಈ ರೀತಿಯಾಗಿ ಕೃಷಿ ಸಂಸ್ಕೃತಿಯ ಅಂಗವಾಗಿ ಹಾಡಲ್ಪಡುವ ಜನಪದ ಗೀತೆಗಳು ಸಂಸ್ಕೃತಿಯ ಪ್ರತಿನಿಧಿಯಾಗಿ ನಮ್ಮ ನಡುವೆ ಉಳಿದು ಬಂದಿವೆ.

ಈ ಹಾಡುಗಳಲ್ಲಿ ಜನಪದರ ಎಲ್ಲ ಬಗೆಯ ಚಟುವಟಿಕೆಗಳ ವಿವರಗಳಿದ್ದು, ಇವು ಸಹಜವಾಗಿಯೇ ಸೃಷ್ಟಿಯಾಗಿರುವಂತಹವು. ಅಂತೆಯೇ ಹಲವು ಜನಪದ ಗೀತೆಗಳು ಮನರಂಜನೆಯ ಉದ್ದೇಶದಿಂದಲೂ ಕೂಡ ರೂಪು ತಾಳಿವೆ. ಈ ಕ್ರಿಯಾವರ್ತನ ಜನಪದ ಗೀತೆಗಳಲ್ಲಿ ಜನಪದರ ಭಾವನೆ, ಆಲೋಚನೆ, ಸೃಜನಶೀಲ ಮನಸ್ಸುಗಳೊಂದಿಗೆ ಸಂಸ್ಕೃತಿಯ ಮೌಲ್ಯಗಳು ಸಹ ಅಭಿವ್ಯಕ್ತಗೊಳ್ಳುವುದನ್ನು ಗಮನಿಸಬಹುದಾಗಿದೆ. ಈ ಕಾರಣವಾಗಿ ಜನಪದ ಗೀತೆಗಳ ಸಂಗ್ರಹ, ಸಂಪಾದನೆ ಹಾಗೂ ಅವುಗಳ ಕ್ರಮಬದ್ಧವಾದ ಅಧ್ಯಯನಗಳು ಮಹತ್ವಪೂರ್ಣವಾಗಿವೆ.

ಜನಪದ ಗೀತೆಗಳು ಜನಪದರ ಬದುಕಿನ ರೀತಿ, ನೀತಿ, ನಂಬಿಕೆ, ಆದರ್ಶ, ಆಲೋಚನೆ, ಕಲ್ಪನೆ ಮುಂತಾದ ಅಂಶಗಳಿಗೆ ಕನ್ನಡಿ ಹಿಡಿಯುತ್ತವೆ. ಜೊತೆಗೆ ಇವು ಆ ಪ್ರದೇಶದ ಜನಪದ ಸಂಸ್ಕೃತಿಯ ಸಾಮಾಜಿಕ, ಧಾರ್ಮಿಕ ಹಾಗೂ ಪೌರಾಣಿಕ ಪ್ರಜ್ಞೆಯ ಚಿತ್ರಣವನ್ನು ನೀಡುತ್ತವೆ. ಅಲ್ಲದೆ ಇತಿಹಾಸದ ಪುನರ್ ರಚನೆ ಹಾಗೂ ಕಟ್ಟುವಿಕೆಯ ಸಂದರ್ಭದಲ್ಲಿ ಇವು ಮಹತ್ವದ ಆಕರಗಳನ್ನು ಒದಗಿಸುವ ಕಾರಣವಾಗಿ ಪ್ರಮುಖವಾದ ಸ್ಥಾನವನ್ನು ಹೊಂದಿವೆ.

'ಕೃಷಿ'ಯು ಮಾನವನ ಸಂಸ್ಕೃತಿಯ ವಿಕಾಸದ ವಿವಿಧ ಹಂತಗಳಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸಿದೆ. ಅಲೆಮಾರಿಯಾಗಿದ್ದ ಮಾನವ ಬೇಟೆಯ ಮೂಲಕ ಆಹಾರವನ್ನು ಪೂರೈಸಿಕೊಳ್ಳುತ್ತಿದ್ದ. ಕಾಲಾನಂತರದಲ್ಲಿ ಒಂದು ಕಡೆ ನೆಲೆ ನಿಂತು ಸಾಂಘಿಕ ಜೀವನವನ್ನು ಪ್ರಾರಂಭಿಸಿದ ಮೇಲೆ ಪಶುಪಾಲನೆಯನ್ನು ಪ್ರಾರಂಭಿಸಿದರು. ಇದರ ಮುಂದುವರೆದ ಭಾಗವಾಗಿ ಕೃಷಿ ಪದ್ಧತಿಯನ್ನು ಕಂಡುಕೊಂಡ ಮಾನವ ಪ್ರಾಣಿಗಳನ್ನು ಬಳಸಿಕೊಂಡು ಕೃಷಿ ಚಟುವಟಿಕೆಗಳಿಗೆ ತನ್ನನ್ನು ತಾನು ಒಗ್ಗಿಸಿಕೊಂಡನು. ಇದರ ಫಲವಾಗಿ ಕೃಷಿ ಸಂಬಂಧಿತ ದೈವಗಳು, ಹಾಡುಗಳು, ಜೀವನ ವಿಧಾನಗಳು ರೂಪುಗೊಂಡು, ಕೃಷಿಗೆ ಬಳಸುವ ಪ್ರತಿಯೊಂದು ಕೂಡ ದೈವ ಸ್ವರೂಪವಾಗಿ ಕಂಡವು. ಇವುಗಳ ಆರಾಧನೆಯ ಮೂಲಕ ಹೊರಟ ಸ್ತುತಿಪದಗಳು ಅವರ ಬದುಕಿನ ಬಹುಮುಖ್ಯ ಭಾಗಗಳಾದವು. ಈ ಕಾರಣವಾಗಿಯೆ ಕೃಷಿಯನ್ನು ಹೊರತುಪಡಿಸಿದ ಗೀತೆಗಳಾಗಲಿ, ಗೀತೆಗಳನ್ನು ಹೊರತುಪಡಿಸಿದ ಕೃಷಿ ಕೆಲಸ ಕಾರ್ಯಗಳನ್ನಾಗಲಿ ನೋಡಲು ಸಾಧ್ಯವಿಲ್ಲ.

ಕೃಷಿ ಸಂಬಂಧವಾಗಿ ರೂಢಿಸಿಕೊಂಡ ಆಚರಣೆಗಳು ಅವರ ಕೃತಜ್ಞತಾ ಭಾವಗಳನ್ನು ವ್ಯಕ್ತಪಡಿಸಲು ಹೊರಬಂದವಾಗಿವೆ. ಇದಕ್ಕೆ ಮೌಖಿಕ ರೂಪವನ್ನು ಬಳಸಿಕೊಂಡ ಜನಪದರು ತಮ್ಮ ದೈಹಿಕ ಶ್ರಮವನ್ನು ಮರೆಯಲೋಸುಗ ಹಾಡಿಕೊಳ್ಳಲು ಪ್ರಾರಂಭಿಸಿದರು. ಮುಂದೆ ಇವು ವ್ಯಕ್ತಿಯಿಂದ ವ್ಯಕ್ತಿಗೆ ತಲುಪುತ್ತ, ಈ ನಡುವೆ ಅಲ್ಪ ಸ್ವಲ್ಪ ಬದಲಾವಣೆಗಳಿಗೆ ಒಳಗಾದರೂ ಜನಪದರ ನಡುವೆ

ಬಳಕೆಯಾಗುತ್ತ ಮುಂದುವರೆದಿವೆ. ಈ ಮಧ್ಯೆ ಕೆಲವು ವಿಚಾರಗಳು ಹೊಸದಾಗಿ ಸೇರಿಕೊಂಡಿವೆ. ಕೆಲವು ಕೈಬಿಟ್ಟು ಹೋಗುತ್ತ ಪ್ರಾದೇಶಿಕ ಭಿನ್ನತೆಯನ್ನು ಪಡೆದುಕೊಳ್ಳುತ್ತ ಸಾಗಿವೆ.

ಕ್ರಿಯಾವರ್ತನದ ಹಾಡುಗಳನ್ನು ಪ್ರಮುಖವಾಗಿ ಕೃಷಿಕರು ತಮ್ಮ ಕೆಲಸ ಕಾರ್ಯಗಳ ಸಂದರ್ಭದಲ್ಲಿನ ಏಕತಾನತೆಯನ್ನು ಹೋಗಲಾಡಿಸಿಕೊಳ್ಳಲು ಸೃಷ್ಟಿ ಮಾಡಿಕೊಂಡಿರುವ ಮನರಂಜನೆಯ ಸಲಕರಣೆಗಳಾಗಿವೆ. ಇವುಗಳು ಬೇಸರವನ್ನು ದೂರವಿಡುವ ಕಾರಣವಾಗಿ ರಚಿತವಾದರೂ, ಮುಂದೆ ಅವು ಸಂಸ್ಕೃತಿಯ ವಾರಸುದಾರರಾಗಿ ತಮ್ಮ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಂಡಿವೆ. ಒಕ್ಕಲುತನ, ನಾಟಿ ಹಾಕುವ ಸಂದರ್ಭ, ಕಳೆ ಕೀಳುವ ಸಂದರ್ಭ, ಬೀಸುವ ಸಮಯ, ಕುಟ್ಟುವ ಸಂದರ್ಭಗಳಲ್ಲಿ ಇವು ಬಳಕೆಯಾಗುತ್ತವೆ. ಅಲ್ಲದೆ ಇವುಗಳ ಹಾಡುವಿಕೆಯ ಸಂದರ್ಭದಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುವ ಪ್ರಕ್ರಿಯೆ ಸಹ ಕಂಡುಬರುತ್ತದೆ. ಆ ಮೂಲಕ ಸಹಕಾರ ತತ್ವ ಬಿಂಬಿತವಾಗುವ ಮೂಲಕ ಅವಿನಾಭಾವವಾದ ಬಾಂಧವ್ಯದ ಬೆಸುಗೆ ಈ ಹಾಡುಗಳ ಮೂಲಕ ಧ್ವನಿತವಾಗುತ್ತದೆ. ಇವುಗಳಲ್ಲಿ ಬುದ್ಧಿವಂತಿಕೆಗಿಂತ ಭಾವನಾತ್ಮಕತೆಯ ಅಂಶಗಳು ಹೆಚ್ಚಿದ್ದು, ಇವು ಅಕ್ಷರ ವಂಚಿತ ಜನ ಸಮುದಾಯದ ಅನುಭವದ ಬರಹಗಳಾಗಿವೆ.

ಕ್ರಿಯಾವರ್ತನ ಜನಪದ ಗೀತೆಗಳಲ್ಲಿ ಶ್ರಮ ವಿಭಜನೆಯ ಅಂಶಗಳನ್ನು ಗುರುತಿಸಬಹುದು. ಏಕೆಂದರೆ ಜನಪದರು ನಿರ್ವಹಿಸುವ ಕಾಯಕಗಳಿಗೆ ಅನುಗುಣವಾಗಿ ಧ್ವನಿಯ ಏರಿಳಿತಗಳಲ್ಲಿ ಆಗುವ ಬದಲಾವಣೆ ಹಾಗೂ ಆ ಸಂದರ್ಭದಲ್ಲಿ ಅವರ ಮನಸ್ಸಿನಲ್ಲಿ ತೋರುವ ಪ್ರತಿಕ್ರಿಯೆಗಳು ಈ ಅಂಶಗಳಿಗೆ ಕಾರಣವಾಗಿವೆ. ಗಂಡಸರ ಹಾಡುಗಳು ಹಾಗೂ ಹೆಂಗಸರ ಹಾಡುಗಳೆಂದು ಇವುಗಳನ್ನು ವಿಂಗಡಿಸಿಕೊಂಡರೆ ಕಪಿಲೆ ಹೊಡೆಯುವುದು, ಗಾಡಿ ಹೊಡೆಯುವುದು, ಹುಣಸೆ ಕಾಯಿ ಕೀಳುವುದು ಮೊದಲಾದ ಸಂದರ್ಭಗಳಲ್ಲಿ ಕೇಳಿ ಬರುವ ಹಾಡುಗಳು ಗಂಡಿನ ಧ್ವನಿಯಿಂದ ಹೊರಬರುತ್ತವೆ. ಬೀಸುವ ಸಮಯದಲ್ಲಿ, ಕುಟ್ಟುವ ಸಮಯದಲ್ಲಿ, ಕಳೆ ಕೀಳುವಂತಹ ಸಮಯದಲ್ಲಿ ಬರುವ ಹಾಡುಗಳು ಮಹಿಳೆಯರ ಕಂಠದಿಂದ ಹೊರ ಬಂದವುಗಳಾಗಿವೆ. ಅಲ್ಲದೆ ಆಯಾಯ ಕಾಯಕದ ಜೊತೆಯಲ್ಲಿಯೆ ಪದಗಳು ಹುಟ್ಟುವುದು ಕಂಡುಬರುತ್ತದೆ.

'ವಿಲ್‌ಡ್ಯೂರೆಂಟ್' ಎಂಬ ವಿದ್ವಾಂಸ ಹೇಳುವ "ವಿಜ್ಞಾನದ ಮೂಲವೇ ಕೃಷಿ. ಅದು ಕಲೆಯೂ ಹೌದು. ಭೂಮಿಯನ್ನು ಕೃಷಿಕ ಉತ್ಪಾದನಾ ಮೂಲವಾದುದಷ್ಟೇ ಅಲ್ಲ ಅದು ಸುಂದರವಾಗಿರುವಂತೆಯೂ ನೋಡಿಕೊಂಡಿದ್ದಾನೆ. ಉಳುಮೆ, ಬಿತ್ತನೆ, ಕಳೆ ಕೀಳುವುದು ಮುಂತಾದ ಹಲವು ಹಂತಗಳಲ್ಲಿ ಅದರ ಸೌಂದರ್ಯವನ್ನು ಕಾಪಾಡಿಕೊಂಡೇ ಬಂದಿದ್ದಾನೆ. ಅದರ ಭಾಗವಾಗಿ ಹಾಡಿ, ಕುಣಿದು ಕುಪ್ಪಳಿಸಿದ್ದಾನೆ"[೧] ಎಂಬ ಮಾತುಗಳು ಅಧ್ಯಯನ ಯೋಗ್ಯವಾಗಿವೆ.

ಏಕೆಂದರೆ ಕೃಷಿ ಕಾರ್ಯಗಳಿಲ್ಲದೆ ಬೇರೆ ಯಾವುದೇ ಚಟುವಟಿಕೆಗಳನ್ನು ನಡೆಸಲು ಸಾಧ್ಯವಿಲ್ಲ. ಎಲ್ಲ ಕೆಲಸ ಕಾರ್ಯಗಳಿಗೆ ಇದುವೇ ಆಧಾರಸ್ತಂಭ. ಇದು ಎಲ್ಲ ಸಂಸ್ಕೃತಿಗಳಿಗೆ ಮೂಲ. ನೆಲ ಸಂಸ್ಕೃತಿ ಅದರ ಮೂಲ ಸೆಲೆ. ಈ ಕಾರಣವಾಗಿ ಕ್ರಿಯಾವರ್ತನ ಜನಪದ

ಗೀತೆಗಳಲ್ಲಿ ರಾಗಿಕಲ್ಲು, ಭೂಮಿ, ಮಳೆ, ಗಾಳಿ, ದನ, ಕರು, ಗೊಬ್ಬರ, ಬಿತ್ತನೆ, ಬೆಳೆ, ಕೊಯ್ಲು, ಹಂತಿ ಹೊಡೆಯುವುದು, ಸುಗ್ಗಿ ಮೊದಲಾದ ಆಶಯಗಳನ್ನು ಹೊಂದಿರುವ ಹಾಡುಗಳು ಹೇರಳವಾಗಿ ಕಂಡುಬರುತ್ತವೆ. ಕೃಷಿಯ ಭಾಗವಾಗಿ ಜರುಗಲ್ಪಡುವ ಹಬ್ಬ, ಹರಿದಿನ, ಆಚರಣೆಗಳು, ಹಾಡುಗಳು ನಮ್ಮ ನೆಲದ ಸಂಸ್ಕೃತಿಯ ಪ್ರತಿಬಿಂಬಗಳಾಗಿವೆ.

೫.೧. ಒಕ್ಕಲುತನದ ಹಾಡುಗಳು

ಆದಿ ಮಾನವನು ಹಲವು ವರ್ಷಗಳ ನಂತರ ಅಲೆಮಾರಿ ಬದುಕನ್ನು ಕೊನೆಗೊಳಿಸಿ ಒಂದು ಕಡೆ ಸ್ಥಿರವಾಗಿ ನೆಲೆ ನಿಲ್ಲುತ್ತಾನೆ. ಈ ರೀತಿ ನೆಲೆ ನಿಂತು ಬದುಕನ್ನು ಪ್ರಾರಂಭಿಸಿದ ಆತ ಜೀವನೋಪಾಯಕ್ಕಾಗಿ ಕೃಷಿಯನ್ನು ಕಂಡುಕೊಂಡದ್ದು, ಆತನ ಬದುಕಿನ ಸ್ಥಿತ್ಯಂತರದ ಮತ್ತೊಂದು ಮಜಲಾಗಿದೆ. ಹೀಗೆ ವ್ಯವಸಾಯವನ್ನು ರೂಢಿಸಿಕೊಂಡ ನಂತರ ಅದರ ಜೊತೆಗೆ ಪಶುಪಾಲನೆ, ಬೇಟೆ, ಲೋಹದ ಬಳಕೆ, ನಂಬಿಕೆ, ಆರಾಧನೆ, ಹಾಡು, ಕುಣಿತಗಳಂತಹ ಸೃಜನಶೀಲ ಪ್ರಕ್ರಿಯೆಗಳತ್ತ ಗಮನಹರಿಸುವ ಮೂಲಕ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣಕರ್ತನಾದನು. ಈ ರೀತಿಯ ಆತನ ಸೃಜನಶೀಲ ವ್ಯಕ್ತಿತ್ವ ಕೃಷಿ ಸಂಬಂಧಿ ಕೆಲಸ ಕಾರ್ಯಗಳಲ್ಲಿ ಹೊರ ಹೊಮ್ಮಿ ನಂತರದಲ್ಲಿ ಅದು ಬಾಯಿಂದ ಬಾಯಿಗೆ ಪರಂಪರಾನುಗತವಾಗಿ ಹರಡುತ್ತ ಸಾಗಿದೆ.

ಈ ಹಿನ್ನೆಲೆಯಲ್ಲಿ ಒಕ್ಕಲುತನದ ಸಂದರ್ಭದಲ್ಲಿನ ಹಾಡುಗಳು ಜನಪದರ ಜೀವನ ಕ್ರಮ, ಅವರ ಆಲೋಚನೆಗಳು, ನಂಬಿಕೆ, ಸಂಪ್ರದಾಯ, ಆಚರಣೆ, ಉಡುಗೆ – ತೊಡುಗೆ, ಆಹಾರ, ಹಬ್ಬಗಳು, ದುಡಿಮೆ ಮೊದಲಾದ ಸಾಂಸ್ಕೃತಿಕ ಆಯಾಮಗಳನ್ನು ನಮಗೆ ದರ್ಶಿಸುತ್ತವೆ. ಬಿತ್ತುವಾಗಿನ ಸಂದರ್ಭದ ಹಾಡು ಈ ರೀತಿಯಾಗಿದೆ.

"ಮೂಡು ಮುಂದಾಗಿ ಹೂಡ್ಯಾವೆ ಹೊನ್ನಾರು
ಹೂಡುತಲೆ ಕಂಡೆವಿದ ನಾವು
ಬಡಗು ಮುಂದಾಗಿ ನಡೆದಾವೆ ಹೊನ್ನಾರು
ನಡಿಯುತಲೆ ಕಂಡೆವಿದ ನಾವು

ದ್ಯಾವಮ್ಮನ ಬಡಗಿನ ಮಲ್ಲಿಗೆ ರವಿಕೆಯ
ಅಕ್ಕಿ ಕುರುಗಾಡ ಬತ್ತ ಕುರುಗಾಡ
ಹೊಕ್ಕೋಳು ಹೊನ್ನಿನ ಕುರುಗಾಡ ದ್ಯಾವಮ್ನ
ಚೊಚ್ಚಲ ಮಗನ ಮದವಿಗೆ

ಬೇಳೆ ಕುರುಗಾಡ ಬೆಲ್ಲ ಕುರುಗಾಡ
ನಾಗೋಳು ಹೊನ್ನಿನ ಕುರುಗಾಡ ದ್ಯಾವಮ್ನ
ಮಹದಾ ಮಗನ ಮದುವಿಗೆ

ಪಾರ್ವತಿ ದ್ಯಾವಮ್ನ ಧಾರೆಗಡಗವನಿಕ್ಕಿ
ಹೋಗಿ ಕೂರಿಗೆ ಹೊಡೆದಾರೆ ಈ ಊರು
ಎಪ್ಪತ್ತು ಬೆಳೆವ ಬಯಲಾಗೆ

ಪಾರ್ವತಿ ದ್ಯಾವಮ್ನ ಓಲೆಯ ಕಿವಿ ಮೇಲೆ
ಗಾಲಿಯ ಹೂಡಿದಾನೆ ಎಳೆವಾಗ ದ್ಯಾವಮ್ನ
ಓಲೆಯ ಕಿವಿಗೆ ಬಿಸಲೊಂದು

ನೀರೆ ದ್ಯಾವಮ್ನ ಕೊಪ್ಪಿನ ಕಿವಿ ಮೇಲೆ
ತೆಕ್ಕೆಯ ಹೂಡಿದಾನೆ ಎಳೆನಾಗ ದ್ಯಾವಮ್ನ
ಕೊಪ್ಪಿನ ಕಿವಿಗೆ ಬಿಸಲೊಂದು

ಪಾರ್ವತಿ ದ್ಯಾವಮ್ನ ಪಟ್ಟೆಯ ಒಗೆವರೆ
ನೀರಿಲ್ಲವೆಂದ ಮಡಿವಾಳ ಈ ಊರು
ಕಟ್ಟೆಯ ಕೆಳಗೆ ಶಿವಗಂಗೆ

ನೀರೆ ದ್ಯಾವಮ್ನ ಪಟ್ಟೆಯ ಒಗೆವರೆ
ತುಪ್ಪಿಲ್ಲವೆಂದ ಮಡಿವಾಳ ಈ ಊರ
ಕಟ್ಟೆಯ ಕೆಳಗೆ ಶಿವಗಂಗೆ

ಬಾವೀಲಿ ಒಂದು ಬಟ್ಟನೆ ಕಲ್ಲಲ್ಲಿ
ಚುಟ್ಟನು ಕೂವರೆ ಬಿಸಿಲಲ್ಲಿ ದ್ಯಾವಮ್ನ
ಜಲ್ಲಿ ದ್ಯಾವಂಗ ಒಗೆವರೆ

ಹಳ್ಳದಲ್ಲೊಂದು ತೆಳ್ಳನೆ ಕಲ್ಲಲ್ಲಿ
ಚುಳ್ಳನು ಕಾವರೆ ಬಿಸಿಲಲ್ಲಿ ದ್ಯಾವಮ್ನ
ಜಲ್ಲಿ ದ್ಯಾವಂಗ ಒಗೆವರೆ

ಬೆಟ್ಟೆ ಮೇಲೊಂದು ಇಟ್ಟಂಗಿ ಗಿಡ ಹುಟ್ಟಿ
ಹುಟ್ಟು ತಲೆ ಕಾಯಿ ಫಲವಾದ್ವು ಈ ಊರ
ಹುಟ್ಟಿದ ಮಕ್ಕಿಗೆ ಕಲಿಕಾಲ

ಕಲ್ಲರೆ ಮೇಲೊಂದು ಮರನಲ್ಲಿ ಗಿಡಹುಟ್ಟಿ
ಹುಟ್ಟುತಲೆ ಕಾಯಿ ಫಲವಾದ್ವು ಈ ಊರ
ಹುಟ್ಟಿದ ಮಕ್ಕಿಗೆ ಕಲಿಕಾಲ

ಹೆತ್ತೂರು ದ್ಯಾವಮ್ಮ ಸತ್ಯವಂತೆ ಕಾಣೆ
ಸತ್ತಿಗೆ ಬಂದಲ್ಲದೆ ಹೊರಡಳು ಬೇಲೂರ
ವೀಳ್ಯ ಬಂದಲ್ಲದೆ ಎಲೆ ಮೆಲ್ಲರು

ಸತ್ತಿಗೆ ಸಾವಿರ ಮುತ್ತಿನ ಕೊಡೆ ಮುನ್ನೂರು
ಮತ್ತು ದ್ಯಾವಮ್ಮಗೆ ಬಿಸಲೆಂದು
ಮುತ್ತು ಚೆಲ್ವರೆ ಮುಗಿಲಿಗೆ”[೨]

ಮೂಡು ಮುಂದಾಗಿ ಹೂಡಿದ ಹೊನ್ನಾರಿನ ಮೂಲಕ ಬಿತ್ತುವ ಕಾರ್ಯವನ್ನು ತಿಳಿಸುವ ಈ ಗೀತೆಯು ಬಡಗು ಮುಂದಾಗಿ ಆ ಬಿತ್ತನೆಯ ಕೆಲಸ ಮುಂದುವರೆದ ವಿವರಗಳನ್ನು ತಿಳಿಸುತ್ತದೆ. ದ್ಯಾವಮ್ಮನನ್ನು ಸ್ಮರಿಸುತ್ತ ಕೂರಿಗೆ ಹೊಡೆಯುವ, ಗಾಲಿಯ ಹೂಡುವ, ತೆಕ್ಕೆಯನ್ನು ಹೂಡುವ ವಿವರಗಳು ಈ ಗೀತೆಯಲ್ಲಿವೆ. ಸತ್ಯವಂತೆಯಾದ ಹೆತ್ತೂರು ದ್ಯಾವಮ್ಮ ಸತ್ತಿಗೆ ಬಂದಲ್ಲದೆ ಹೊರಡುವುದಿಲ್ಲ. ಹಾಗೆಯೇ ಬೇಲೂರ ವೀಳ್ಯ ಬರದೆ ಎಲೆಯನ್ನು ಮೆಲ್ಲುವುದಿಲ್ಲ ಎಂಬ ವಿವರಗಳು ಸಹ ಈ ಗೀತೆಯಲ್ಲಿ ದೊರಕುತ್ತವೆ. ನಾಟಿ ಹಾಕುವಾಗಿನ ಸಮಯದಲ್ಲಿ ಹಾಡುವ ಗೀತೆಯು ಈ ರೀತಿಯಾಗಿದೆ.

“ಓಹೋ ವಯ್ಯ ನಾಟಿಕಾರನೆ
ಹೊನ್ನ ಮಿಥುನ ಮಾಸದಲಿ ಹೂಮಳೆಯ ಹೊಡೆಯೆ
ಗುಟ್ಟೆನೇಗಿಲೊಳು ದೊಡ್ಡ ಗದ್ದೆಗೆ ಉದ್ದ ಉಳುಮೆ
ನೀರುಂಡ ಒಣಗಿ ಗಡ್ಡೆ ಕಟ್ಟಿದ ನೆಲನ
ಕುಂಟೆಯೊಡೆದು ಸಾಲಿಟ್ಟು ಸಮಮಾಡೆ
ಮತ್ತೆ ಗದ್ದೆ ಹದನಾಯ್ತು ಒಟ್ಟಲಿಗೆ
ಒಟ್ಟಲಲಿ ಬಿತ್ತಿ ಬೆಳೆದ ಪುಡಿಪೈರಿಗೆ
ಆಕೈಕೆಯನಿಟ್ಟು ತಂದರು ಹೆಣ್ಣುಗಳು
ಎಂಟಾನೆಂಟು ದಿನ ಸಸಿಯ ಒಟ್ಟಲಿನಿಂದ
ಮೃದುಕೈಯ ಚಾಚಿ ಸೆಳೆದುಕೊಂಡರು ಸಸಿಗಳ
ಹೆಣ್ಣುಗಳು ಕೊಟ್ಟ ಪುಡಿ ಸಸಿಯ ನೆಡಲು
ದೊಡ್ಡಗದ್ದೆಗೆ ದೊಡ್ಡ ಹುರುಪಲಿ ಇರಲು
ನಾಟಿ ಮೊದಲಿಡುವ ಮುಹೂರ್ತಕೆ
ಹಲಸು ಹಣ್ಣು–ಬೀಜಗಳಿಟ್ಟು ತೆಂಗು ಒಡೆಯೆ
ನಾಟಿ ನೆಡಲು ಮುಹೂರ್ತದಿ ಮುಂದಾದೆವು
ನಾಟಿ ನೆಡಲು ಮುಹೂರ್ತದಿ ಮುಂದಾದೆವು

ಸೋದರತ್ತೆಯೆ ಮಾವನನ್ನು ಮೆಲ್ಲ ನಲುಗಿಸಿ ಎಬ್ಬಿಸು ಸಮಯವಾಯಿತು
ಹಂಡೆಕೊಳಗದಿ ಸಾರು ಚಾಪೆಯ ಗಲದಿ ಅನ್ನ
ಹನ್ನೆರಡು ಆಳುಗಳ ಎತ್ತಿ ಕೊಂಡಿಹರು
ದೊಡ್ಡ ಗದ್ದೆಯ ನಾಟಿ ಕಾರರಿಗಿಡಲು
ಅವರೆ ಕಾಳಿನ ಸಾರು ಹಂಡೆಯೊಳಿಹುದು
ಕೆಂಪಕ್ಕಿ ಅನ್ನ ರುಚಿ ಕೆಸವೆದಮಟಿನ ಪಲ್ಯಕೆ
ಓ ನಾಟಿಕಾರರೆ ದೊಡ್ಡ ಗದ್ದೆಯ ನಾಟಿ ಇದು
ಉಂಡು ತಿನ್ನುತ ವೀಳ್ಯೆ ಮೆಲ್ಲುತ
ದೊಡ್ಡ ಗದ್ದೆಯ ನಾಟಿ ಮುಗಿಸಲಿ ಹಾಡಿರೆಲ್ಲರು ಒಯ್ಯವ"[೩]

ಈ ಗೀತೆಯು ದೊಡ್ಡ ಗದ್ದೆಗೆ ನಾಟಿ ಮಾಡಿ ಮುಗಿಸಿದ ವಿವರಗಳನ್ನು ತಿಳಿಸಿಕೊಡುತ್ತದೆ. ಹೊನ್ನ ಮಿಥುನ ಮಾಸದಲ್ಲಿ ಹೊಡೆದ ಹೂ ಮಳೆಗೆ ದೊಡ್ಡ ಗದ್ದೆಯನ್ನು ಉಳುಮೆ ಮಾಡಿ ಹದ ಮಾಡಿದ್ದಾರೆ. ಎಂಟಾನೆಂಟು ಸಸಿಯ ಒಟ್ಟಲಿನಿಂದ ಕಿತ್ತು ತಂದ ಸಸಿಗಳನ್ನು ಹೆಣ್ಣುಗಳು ಹೆಚ್ಚಿನ ಹುರುಪಿನಿಂದ ದೊಡ್ಡ ಗದ್ದೆಗೆ ನಾಟಿ ಮಾಡಿದ್ದಾರೆ. ಅದೂ ಒಳ್ಳೆಯ ಮುಹೂರ್ತವನ್ನು ನೋಡಿ. ಹಲಸು ಹಣ್ಣು – ಬೀಜಗಳಿಟ್ಟು ತೆಂಗಿನಕಾಯಿ ಒಡೆದು ನಾಟಿ ನೆಡಲು ಮುಂದಾಗುತ್ತಾರೆ.

ಸೋದರತ್ತೆ ಮಾವನನ್ನು ಮೆಲ್ಲನೆ ಎಬ್ಬಿಸಿ ಹಂಡೆ ಕೊಳಗದಿ ಸಾರು, ಚಾಪೆಯಗಲದಿ ಅನ್ನವನ್ನು ಹನ್ನೆರಡು ಆಳುಗಳ ಮೇಲೆ ಹೊರಿಸಿಕೊಂಡು ದೊಡ್ಡ ಗದ್ದೆಯ ನಾಟಿಯ ಬಳಿ ಬಂದಿದ್ದಾರೆ. ಅವರೆ ಕಾಳಿನ ಸಾರು, ಕೆಂಪಕ್ಕಿ ಅನ್ನ, ಕೆಸವೆದಂಟಿನ ಪಲ್ಯ ಎಲ್ಲವನ್ನು ಉಂಡು ವೀಳ್ಯೆ ಮೆಲ್ಲುತ್ತ ದೊಡ್ಡ ಗದ್ದೆಯ ನಾಟಿ ಮುಗಿಸಿ ಬರುವ ಚಿತ್ರಣ ಅದ್ಭುತವಾಗಿದೆ. ಇಲ್ಲಿ ಉಲ್ಲೇಖಿತವಾಗಿರುವ ಹೂಮಳೆ, ಗುಟ್ಟೇ ನೇಗಿಲು, ಕುಂಟೆ, ಒಟ್ಟಲು, ಹಲಸು, ಹಣ್ಣು, ಬೀಜ, ತೆಂಗು, ಸೋದರತ್ತೆ, ಮಾವ, ಹನ್ನೆರಡು ಆಳುಗಳು, ಹಂಡೆ, ಕೊಳಗ, ಅವರೆ ಕಾಳು, ಕೆಂಪಕ್ಕಿ, ವೀಳ್ಯ ಇವೆಲ್ಲವು ನಮ್ಮ ಸಂಸ್ಕೃತಿಯ ಪ್ರತಿನಿಧಿಗಳಾಗಿವೆ. ಇವುಗಳಿಲ್ಲದೆ ಜನಪದರ ಯಾವುದೇ ಕಾರ್ಯಗಳು ಸಾಗುವುದಿಲ್ಲ.

"ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣಿ ಮಲ್ಲಿಗೆದೇವಿ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣಿ ಮಾದಯ್ಯನಿಗೆ ಸುವ್ವಲಾಲಿ

ಮಾದೇವ ಮಾದೇವಗೆ ಸುವ್ವಲಾಲಿ
ನಾನು ಬೆಟ್ಟಕ್ಕೆ ಹೊರಟೇನು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವರು ಮಧುರೇರು ಮಧುರೇರು ಸುವ್ವಲಾಲಿ
ಅವರು ಹಂಗಂತ ಹೇಳಿದರು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವರು ಹಂಗಂದ ಮಾತು ಕೇಳಿ ಸುವ್ವಲಾಲಿ
ಅವಳು ಓಡುತ್ತ ಬಂದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ
ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಲ್ಲಿಗೂದೇವಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವಳು ಓಡುತ್ತ ಬಂದಳು ಸುವ್ವಲಾಲಿ
ಅವಳು ಏನಂತ ಕೇಳ್ಯಾಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಮಧುರೇರು ಮಧುರೇರು ಸುವ್ವಲಾಲಿ
ನೀವು ಬೆಟ್ಟಕ್ಕೆ ಹೋದರೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ನೀವು ಬೆಟ್ಟಕ್ಕೆ ಹೋದರೆ ಸುವ್ವಲಾಲಿ
ಎನ್ನ ಪಟ್ಟೇಯ ಸೀರೆಯು ಸುವ್ವಲಾಲಿ

ಪಟ್ಟೆ ಸೀರೆಯು ಸುವ್ವಲಾಲಿ
ಎನ್ನ ಕುಟ್ನಿಯ ರವಿಕೆಯು ಸುವ್ವಲಾಲಿ
ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಎನ್ನ ಕುಟ್ನಿಯ ರವಿಕೆಯು ಸುವ್ವಲಾಲಿ
ನೀವು ಮರಿಬ್ಯಾಡಿ ಮಧುರೇರೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಲ್ಲಿಗೂದೇವಿ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವಳು ಮಾದೇವಿ ಮಾದೇವಿ ಸುವ್ವಲಾಲಿ
ಅವಳು ಹಂಗಂತ ಕೇಳಿದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವರು ಮಧುರೇರು ಮಧುರೇರು ಸುವ್ವಲಾಲಿ
ನೀನು ಏನಂತ ಹೇಳಿದರು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಮಾದೇವಿ ಹೆಣ್ಣೇನು ಸುವ್ವಲಾಲಿ
ನೀನು ಹರಿವಾಣ ಹಿಡಿಬಾರೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ
ಹರಿವಾಣ ಬಿಡು ಬಿಡು ಸುವ್ವಲಾಲಿ
ನೀನು ಮಂಗಳಾರ್ತಿ ಬೆಳಗುಬಾರೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವಳು ಹಂಗಂದ ಮಾತು ಕೇಳಿ ಸುವ್ವಲಾಲಿ
ಅವಳು ಹರಿವಾಣ ಹಿಡಿದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವಳು ಹರಿವಾಣ ಹಿಡುತಿಹಳು ಸುವ್ವಲಾಲಿ
ಅವಳು ಮಂಗಳಾರ್ತಿ ಬೆಳಗಿದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಲ್ಲಿಗೆದೇವಿ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ನಮ್ಮ ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವರು ಮಧುರೇರು ಮಧುರೇರು ಸುವ್ವಲಾಲಿ
ಅವರು ಏನಂತ ಹೇಳುತಾರೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಮಾದೇವಿ ಮಾದೇವಿ ಸುವ್ವಲಾಲಿ
ನಿನ್ನ ಅರಮನೆ ಜ್ವಾಕೆ ಕಣೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ನಾನು ಬೆಟ್ಟಕ್ಕೆ ಹೊರಟೇನು ಸುವ್ವಲಾಲಿ
ನಿನ್ನ ಅರಮನೆ ಜ್ವಾಕೆ ಕಣೆ ಸುವ್ವಲಾಲಿ
ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಮಧುರೇರು ಮಧುರೇರು ಸುವ್ವಲಾಲಿ
ಅವರು ಹಂಗಂತ ಹೇಳಿದರು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಲ್ಲಿಗುದೇವಿ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವರು ನಡಕಾರ ಬಳಿಗಾರ ಸುವ್ವಲಾಲಿ
ಅವನು ನಡುಮೇಲೆ ಬಂದನ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ
ಅವನ ನಡುಮೇಲೆ ಬಂದಾನ ಸುವ್ವಲಾಲಿ
ಅವನ ಜಗುಲಲ್ಲಿ ಕುಂತನು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವನ ಜಗುಲಲ್ಲಿ ಕುಂತಿದ್ದ ಸುವ್ವಲಾಲಿ
ಅವನ ಏನಂತ ಕರೆದಾನು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಮಾದೇವಿ ಮಾದೇವಿ ಸುವ್ವಲಾಲಿ
ನೀನು ಬಳೆಯನ್ನು ತೊಡುಬಾರೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವನು ಹಂಗಂದ ಮಾತು ಕೇಳಿ ಸುವ್ವಲಾಲಿ
ಅವಳು ಓಡುತ್ತ ಬಂದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಲ್ಲಿಗೂ ದೇವಿ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವಳು ಓಡುತ ಬಂದಳು ಸುವ್ವಲಾಲಿ
ಅವಳು ಏನಂತ ಹೇಳುತಾನೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ನಡೆಕಾರ ಬಳೆಗಾರ ಸುವ್ವಲಾಲಿ
ಎನ್ನ ಮಧುರೇರು ಮನೇಲಿಲ್ಲ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಎನ್ನ ಮಧುರೇರು ಮನೇಲಿಲ್ಲ ಸುವ್ವಲಾಲಿ
ಎನ್ನ ಕೈಯಲ್ಲಿ ದುಡ್ಡಿಲ್ಲ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವಳು ಮಾದೇವಿ ಮಾದೇವಿ ಸುವ್ವಲಾಲಿ
ಅವಳು ಹಂಗಂತ ಹೇಳಿದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಮಾದೇವಿ ಮಾದೇವಿ ಸುವ್ವಲಾಲಿ
ನೀನು ಕಡವನ್ನು ತೊಡುಬಾರೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವರು ಹಂಗಂದ ಮಾತು ಕೇಳಿ ಸುವ್ವಲಾಲಿ
ಅವಳು ಕೈನಾದ್ರು ನೀಡಿದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಅವಳು ಕೈನಾದ್ರು ನೀಡಿದಳು ಸುವ್ವಲಾಲಿ
ಅವಳು ಮಾದೇವಿ ಎಂದಳು ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಒಂದು ಕೈಗೆ ಐದು ಬಳೆ ಸುವ್ವಲಾಲಿ
ಒಂದು ಕೈಗೆ ಹತ್ತು ಬಳೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಒಂದು ಕೈಗೆ ಹತ್ತು ಬಳೆ ಸುವ್ವಲಾಲಿ
ಅವನು ತೊಡಿಸ್ಯಾನು ಬಳಿಗಾರ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ

ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಎನ್ನ ಜಾಣೆ ಮಲ್ಲಿಗೂದೇವಿ ಸುವ್ವಲಾಲಿ
ಸುವ್ವಿ ಸುವ್ವಮ್ಮಲಾಲಿ ಸುವ್ವಲಾಲಿ
ಜಾಣೆ ಮಾದಯ್ಯನಿಗೆ ಸುವ್ವಲಾಲಿ"[೪]

ಪ್ರಸ್ತುತ ನಾಟಿ ಪದವು ಒಕ್ಕಲುತನದ ಸಂದರ್ಭದಲ್ಲಿ ಹೇಳುವ ಹಾಡಾಗಿದೆ. ವಿಶೇಷವಾಗಿ ಈ ಗೀತೆಯು ಹೆಂಗಸರ ಕೆಲಸದ ಹಾಡಾಗಿದ್ದು, ಮಹಿಳೆಯರೆಲ್ಲರು ಹೊಲಗದ್ದೆಗಳಲ್ಲಿ ನಾಟಿ ಹಾಕುವ ಸಮಯದಲ್ಲಿ ಈ ಗೀತೆಯನ್ನು ಹಾಡಿಕೊಳ್ಳುತ್ತ ನಾಟಿಯನ್ನು ಮಾಡುವುದು ಕಂಡುಬರುತ್ತದೆ. ಈ ಗೀತೆಯಲ್ಲಿ ಮಧುರೇರು ಜಾಣೆಯರಾದ ಮಲ್ಲಿಗೆದೇವಿ ಮತ್ತು ಮಾದಯ್ಯನ ದರ್ಶನಕ್ಕೆಂದು ಮಾದೇವನ ಬೆಟ್ಟಕ್ಕೆ ಹೊರಟ ಸಂಗತಿಯು ತಿಳಿಯುತ್ತದೆ. ಇಲ್ಲಿ ಪಟ್ಟೆಯ ಸೀರೆಯನ್ನು ಉಟ್ಟು ಕುಟ್ನಿಯ ರವಿಕೆಯನ್ನು ತೊಟ್ಟುಕೊಂಡು, ಹರಿವಾಣ ಹಿಡಿದು ಮಾದಯ್ಯನಿಗೆ ಮಂಗಳಾರತಿ ಬೆಳಗುವ ವಿವರಗಳಿವೆ.

ಮುಂದುವರೆದು ಮಾದೇವಿ, ನಡಕಾರ, ಬಳಿಗಾರ, ಕಡವನ್ನು ತೊಡುವುದು, ಬಳೆ ತೊಡಿಸಿಕೊಳ್ಳುವ ವಿವರಗಳು ಈ ನಾಟಿ ಪದದಲ್ಲಿ ಕಂಡುಬರುತ್ತವೆ. ಇಲ್ಲಿನ ಜನಪದರ ಕಲ್ಪನಾ ರಮ್ಯತೆ ಅದ್ಭುತವಾದುದು. ಶ್ರಮದ ಬದುಕಿನ ನಡುವೆಯೂ ಆರೋಗ್ಯಕರವಾದ ಹಾಗೂ ಅದ್ಭುತ ಆಲೋಚನಾಪರ ವಿಚಾರಗಳನ್ನು ಇವರ ಹಾಡುಗಳಲ್ಲಿ ಕಾಣಬಹುದಾಗಿದೆ. ಮಾದಯ್ಯನ ದರ್ಶನಕ್ಕೆ ಹೊರಟ ಅವರ ಸಡಗರ, ಸಂಭ್ರಮಗಳು, ಅದಕ್ಕಾಗಿ ಸಿದ್ಧರಾಗುವ ಪರಿ ಕೇಳುಗರ ಮನಸ್ಸನ್ನು

ಸೆಳೆಯುತ್ತವೆ. ಕಷ್ಟಕರ ಕೆಲಸಗಳ ನಡುವೆಯೂ ಹೊರಹೊಮ್ಮುವ ಈ ರೀತಿಯ ಪದಗಳು ಅವರ ಜೀವನಾನುಭವಕ್ಕೆ ಹಿಡಿದ ಕೈಗನ್ನಡಿಯಾಗಿವೆ.

೫.೨. ಬೀಸುವ ಹಾಡುಗಳು

ಧಾನ್ಯಗಳನ್ನು ಬೀಸುವ ಸಂದರ್ಭದಲ್ಲಿ ಹಾಡುವ ಹಾಡುಗಳಿವು. ಬೀಸುವ ಹಾಡುಗಳು ತನ್ನಲ್ಲಿ ಇಟ್ಟುಕೊಂಡಿರುವ ಕಾವ್ಯ ಸೌಂದರ್ಯ ಹಾಗೂ ಕಲ್ಪನಾ ರಮ್ಯತೆಯ ದೃಷ್ಟಿಯಿಂದ ಓದುಗರ ಹಾಗೂ ಕೇಳುಗರ ಗಮನವನ್ನು ಸೆಳೆಯುತ್ತವೆ. ಹಳ್ಳಿಗಳಲ್ಲಿ ಬೆಳಗಿನ ಜಾವದ ಸಮಯದಲ್ಲಿ ಧಾನ್ಯವನ್ನು ಬೀಸುತ್ತಾ, ಕೆಲಸದ ಶ್ರಮ ಹಾಗೂ ಅದರ ಏಕತಾನತೆಗಳನ್ನು ಕಳೆಯಲೆಂದು ನಮ್ಮ ಹೆಣ್ಣು ಮಕ್ಕಳು ಇಂಥ ಹಾಡುಗಳನ್ನು ಸೃಷ್ಟಿಸಿಕೊಂಡು ತಮ್ಮಷ್ಟಕ್ಕೆ ತಾವೇ ಹಾಡಿಕೊಳ್ಳುತ್ತಿದ್ದರು. ಗರಗರನೆ ಬೀಸುವ ಕಲ್ಲಿನ ಸದ್ದೇ ಜನಪದ ಹೆಣ್ಣುಮಕ್ಕಳು ಹಾಡುವ ಹಾಡಿಗೆ ಶ್ರುತಿ. ಸ್ತ್ರೀಯರ ನಿಸರ್ಗ ಪ್ರಿಯತೆ, ಅವರ ದೈವ ಭಕ್ತಿ, ಆದರ್ಶ, ನೀತಿ ಪ್ರಜ್ಞೆ, ಸಂತೋಷ, ಜೀವನ ಮೌಲ್ಯಗಳನ್ನು ಈ ಗೀತೆಗಳು ಪ್ರತಿನಿಧಿಸುತ್ತವೆ.

ಬೀಸುವ ಹಾಡುಗಳಲ್ಲಿನ ಕೆಲವು ಗೀತೆಗಳು ತಾಯಿ, ತವರು, ಅಣ್ಣ, ತಮ್ಮ, ಬಂಧು, ಬಳಗ, ಅತ್ತೆ, ಮಾವ, ಗಂಡ, ಮಕ್ಕಳು ಮೊದಲಾದ ಸಂಬಂಧಗಳನ್ನು ಹಾಗೂ ಅವುಗಳಲ್ಲಿರುವ ಸೊಗಸು ಮತ್ತು ಸಂಕೀರ್ಣತೆಯನ್ನು ನಮಗೆ ದರ್ಶಿಸುತ್ತವೆ, ನಮ್ಮ ಜನಪದ ಹೆಣ್ಣುಗಳ ಬದುಕಿನಲ್ಲಿ ತಾಯಿ ಹಾಗೂ ತವರು ಪಡೆದ ಸ್ಥಾನವನ್ನು ಬೇರೆ ಯಾವುವು ಪಡೆದಿಲ್ಲ. ಹಾಗಾಗಿ ಇವುಗಳ ಬಗ್ಗೆ ನಮ್ಮ ಹೆಣ್ಣು ಮಕ್ಕಳಲ್ಲಿ ಎಂತಹ ಅದ್ಭುತವಾದ ಮನೋಭಾವ, ಗ್ರಹಿಕೆಗಳಿವೆ ಎಂಬುದನ್ನು ಗಮನಿಸಬಹುದಾಗಿದೆ.

ಪ್ರಶಾಂತ ಸಮಯದಲ್ಲಿ ಮಧುರ ಧ್ವನಿಯ ಮೂಲಕ ಇಂಪಾದ ತಂಗಾಳಿಯಂತೆ ಬೀಸುವ ಪದಗಳು ಜನಪದ ಹೆಣ್ಣುಗಳ ಕೊರಳಿನ ಮೂಲಕ ಹೊರಬರುತ್ತವೆ. ಸಹಜ ಸೊಬಗಿನಿಂದ ಹಾಡಲ್ಪಡುವ ಇವು ಸರಳತೆಯ ಮೂಲಕ ಗಾಢವಾದ ಬದುಕಿನ ಅನುಭವವನ್ನು ದರ್ಶಿಸುತ್ತವೆ. ಭಾವಜೀವಿಗಳಾದ ಜನಪದ ಹೆಣ್ಣು ಮಕ್ಕಳಿಗೆ ರಾಗಿಯ ಕಲ್ಲು ಕೇವಲ ಧಾನ್ಯಗಳನ್ನು ಬೀಸಲಷ್ಟೆ ಬಳಕೆಗೊಳ್ಳುವುದಿಲ್ಲ. ಅದರೊಟ್ಟಿಗೆ ಗೃಹಿಣಿಯರು ಆತ್ಮೀಯತೆಯ ಒಡನಾಟವನ್ನು ಬೆಳೆಸಿಕೊಂಡಿದ್ದಾರೆ. ಆ ಕಾರಣವಾಗಿಯೆ ಜನಪದರು ರಾಗಿಯ ಕಲ್ಲಿನ ಮಹತ್ವವನ್ನು ಈ ರೀತಿಯಾಗಿ ತಿಳಿಸುತ್ತಾರೆ.

"ರಾಗಿಯ ಕಲ್ಲಿಗೆ ರಾಜ್ಯವ ತಿರುಗ್ಯಾರೆ
ರಾಯ ಸಂಪನರ ಮಗಳಿಗೆ
ರಾಯ ಸಂಪನರ ಮಗಳು ನೀಲಮ್ಮಗೆ
ರಾಜ್ಯ ತಿರುಗ್ಯಾರೆ ಬಸವಯ್ಯ

ಬೀಸೋ ಕಲ್ಲಿಗೆ ದೇಶವ ತಿರುಗ್ಯಾರೆ
ಸಕಲ ಸಂಪನರ ಮಗಳಿಗೆ

ರಾಯ ಸಂಪನರ ಮಗಳು ನೀಲಮ್ಮಗೆ
ರಾಜ್ಯ ತಿರುಗ್ಯಾರೆ ಬಸವಯ್ಯ
ಅಟ್ಟದ ಮ್ಯಾಗಳ ಪುಟ್ಟಂಚಿನ ಗೆರಸಿಯ
ಅಕ್ಕಯ್ತಂದಿಡೆ ನಡುಮನೆಗೆ
ಅಕ್ಕಯ್ಯ ತಂದಿಡೆ ನಡುಮನೆಗೆ ನಾವಿಬ್ಬರೂ
ಮುಕ್ಕಣ್ಣೇಶ್ವರನ ನೆನೆದೆವು

ಮಾಳಿಗೆ ಮ್ಯಾಗಳ ಸಾಲಂಚಿನ ಗೆರಸಿಯ
ತಾಯವ್ವೆಗೆದಿಡೆ ನಡುಮನೆಗೆ ನಾವಿಬ್ಬರೂ
ಮುಕ್ಕಣ್ಣೇಶ್ವರನ ನೆನೆದೆವು

ಬಿದಿರೆ ಬೆಟ್ಟದ ಮೇಲೆ ಚದುರ ರಾಗಿಕಲ್ಲು
ಮದನಾರಿನೆಂಬೊ ಹಿಡಿಗೂಟ ಹಿಡುಕೊಂಡು
ಶಿವನ ಪಾಡ್ಯಾಳೆ ಸಿರಿಗೌರಿ"[೫]

ಪ್ರಸ್ತುತ ಗೀತೆಯಲ್ಲಿ ರಾಗಿಕಲ್ಲಿನ ಮಹತ್ವವನ್ನು ಹೇಳುತ್ತ, ರಾಗಿಯ ಕಲ್ಲಿಗೆ ರಾಜ್ಯವನ್ನು ತಿರುಗಿದ ವಿಚಾರವನ್ನು ತಿಳಿಸುತ್ತಾರೆ. ಇದರಂತೆಯೆ ರಾಯ ಸಂಪನ್ನರ ಮಗಳಾದ ನೀಲಮ್ಮರಿಗಾಗಿಯೂ ಬಸವಯ್ಯನು ರಾಜ್ಯವನ್ನು ತಿರುಗಿದ್ದಾರೆ. ಮುಕ್ಕಣ್ಣೇಶ್ವರನನ್ನು ನೆನೆಯುತ್ತ, ಬಿದಿರೆ ಬೆಟ್ಟದ ಮೇಲಿನ ಚದುರ ರಾಗಿಕಲ್ಲಿನ ಹಿಡಿಗೂಟವನ್ನು ಹಿಡಿದು ಶಿವನ ಹಾಡನ್ನು ಹಾಡುತ್ತ ಸಿರಿಗೌರಿ ರಾಗಿಯನ್ನು ಬೀಸುತ್ತಿರುವುದು ಇಲ್ಲಿ ತಿಳಿಯುತ್ತದೆ. ಜನಪದರಿಗೆ ರಾಗಿ ಕಲ್ಲನ್ನು ಬಿಟ್ಟರೆ ಬೇರೆ ಬದುಕಿಲ್ಲ. ಇವತ್ತಿನ ಆಧುನಿಕ ಹಿಟ್ಟಿನ ಗಿರಣಿಗಳಿಲ್ಲದಿರುವಂತಹ ಕಾಲದಲ್ಲಿ ಜನಪದರ ಹಸಿವನ್ನು ನೀಗಿಸುವ ಬಹುದೊಡ್ಡ ಜವಾಬ್ದಾರಿ ಈ ರಾಗಿಕಲ್ಲುಗಳ ಮೇಲೆ ಇದ್ದದ್ದು ತಿಳಿಯುತ್ತದೆ.

ಜನಪದ ಹೆಣ್ಣು ಮಕ್ಕಳು ರಾಗಿಕಲ್ಲನ್ನು ಹಿಡಿದು ಬೀಸಲು ಪ್ರಾರಂಭಿಸುವ ಮುನ್ನ ರಾಗಿಯ ಕಲ್ಲಿನ ಜೊತೆ ತಮ್ಮ ಆರಾಧ್ಯ ದೈವವನ್ನು ಪ್ರಾರ್ಥಿಸಿ ರಾಗಿಯ ಕಲ್ಲನ್ನು ಹಿಡಿಯುತ್ತಾರೆ.

"ಶಿವನೇ ಗುರುವೆಂದು ಹಿಡಿದೆನು ರಾಗಿಕಲ್ಲ
ಶಿವನೇ ಕೊಡು ನಮಗೆ ಮತಿಗಳ । ಸಂಗನ ಬಸವ
ಗುರುವೇ ಕೊಡು ನಮಗೆ ಸುಖಗಳ"[೬]

ಶಿವನನ್ನು ಗುರುವೆಂದು ಭಾವಿಸಿ ಬೀಸಲು ಪ್ರಾರಂಭಿಸುತ್ತಾರೆ. ಹಾಗೆಯೆ ನಮಗೆ ಒಳ್ಳೆಯ ಬುದ್ಧಿಯನ್ನು ಕೊಡು ಎಂದು ಪ್ರಾರ್ಥಿಸುತ್ತ ಸುಖಗಳನ್ನು ನೀಡುವಂತೆ ಬೇಡಿಕೊಳ್ಳುತ್ತಾರೆ. ಇಲ್ಲಿನ ಅವರ ವಿನಮ್ರತೆ, ಶಿವನನ್ನೆ ಗುರುವೆಂದು ಸ್ವೀಕರಿಸುವ ಮನಸ್ಸಿನ ಆಪ್ತತೆಯ ಸಂಗತಿಗಳು ಮುಖ್ಯವಾದವು.

"ಎದ್ದೂನೆ ನಿಮಗ್ಯಾನ ಏಳುತಲೆ ನಿಮ ಗ್ಯಾನ
ಸಿದ್ದರ ಗ್ಯಾನ ಶಿವಗ್ಯಾನ । ಮಾ ಶಿವನೆ
ನಿದ್ದೆ ಗಣ್ಣಾಗೆ ನಿಮಗ್ಯಾನ"[೭]

ಬೆಳಿಗ್ಗೆ ಏಳುತಲೆ ನಿಮ್ಮಗ್ಯಾನವನ್ನು ಮಾಡುತ್ತ, ಸಿದ್ದರು ಹಾಗೂ ಶಿವನ ಗ್ಯಾನವನ್ನು ಮಾಡುವುದಾಗಿ ಹೇಳಿಕೊಳ್ಳುತ್ತ ನಿದ್ದೆಗಣ್ಣಲ್ಲಿಯೂ ಸಹ ಶಿವಧ್ಯಾನವನ್ನು ಮಾಡುವುದಾಗಿ ವಿನಮ್ರವಾಗಿ ನುಡಿಯುತ್ತಾರೆ. ಈ ನುಡಿಗಳಲ್ಲಿ ಯಾವುದೇ ರೀತಿಯ ತೋರಿಕೆಯ ಮನಸ್ಸಿನ ಆಡಂಬರತೆಗಳಿಲ್ಲ. ಜನಪದ ಹೆಣ್ಣಿನ ಮುಗ್ಧ ಮನಸ್ಸಿನ ಭಕ್ತಿ, ಗೌರವಾದರಗಳು ಇಲ್ಲಿ ತಿಳಿಯುತ್ತವೆ. ಹೀಗೆಯೇ ಸರಸತಿಯನ್ನು ಬೇಡಿಕೊಳ್ಳುತ್ತಾರೆ.

"ಆರೆಲೆ ಮಾವಿನ ಬೇರಾಗೆ ಇರುವೋಳೆ
ವಾಲ್ಗದ ಸದ್ದಿಗೆ ಒದಗೋಳೆ । ಸರಸತಿಯೆ
(ನಮ್ಮ) ನಾಲಿಗೆ ತೊಡರ ಬಿಡಿಸಮ್ಮ"[೮]

ಎಂದು ಬೇಡಿಕೊಳ್ಳುತ್ತಾರೆ. ಆರೆಲೆ ಮಾವಿನ ಬೇರಾಗೆ ಇರುವವಳು, ವಾಲಗದ ಸದ್ದಿಗೆ ಒದಗುವ ಸರಸ್ವತಿಯನ್ನು ತಮ್ಮ ನಾಲಿಗೆಯ ತೊಡರನ್ನು ಬಿಡಿಸೆಂದು ವಿನಂತಿಸಿಕೊಳ್ಳುತ್ತಾರೆ. ಮುಂದುವರೆದು

"ಎಂಟೆಲೆ ಮಾವಿನ ದಂಟಾಗಿ ಇರುವೋಳೆ
ಗಂಟೇ ಸದ್ದಿಗೆ ಒದಗೋಳೆ । ಸರಸತಿಯೆ
(ನಮ್ಮ) ಗಂಟಲ ತೊಡರ ಬಿಡಿಸಮ್ಮ"[೯]

ಎಂದು ಕೇಳಿಕೊಳ್ಳುವ ಜನಪದರ ವಿನಯವಂತಿಕೆ ಎಂತಹವರನ್ನೂ ಮಂತ್ರ ಮುಗ್ಧರನ್ನಾಗಿಸುತ್ತದೆ. ವಿದ್ಯೆಯ ಅಧಿದೇವತೆಯಾದ ಸರಸ್ವತಿಯನ್ನು ಅತ್ಯಂತ ವಿನಮ್ರವಾಗಿ ಬೇಡಿಕೊಳ್ಳುವ ಜನಪದ ಹೆಣ್ಣು ಮಕ್ಕಳ ನಿಷ್ಕಲ್ಮಶ ಹೃದಯ ಅವರ ಪದಗಳಷ್ಟೆ ಸುಂದರವಾದುದು.

"ಶರಣೆಂದೆ ಶಿವನಿಗೆ ಶರಣೆಂದೆ ಗುರುವಿಗೆ
ಶರಣೆಂದೆ ಶಿವನ ಮಡದಿ(ಗೆ) । ಗೌರಮ್ಮಗೆ
(ನಾ) ಶರಣೆಂದು ಕಲ್ಲ ಹಿಡಿದೆನು.

ಈಗನೆ ಕಲ್ ಹೂಡಿ ಈಗ್ಯಾರ ನೆನೆದೆವು
ಈ ಊರು ಗ್ರಾಮದೊಡೆಯ(ನ) । ಮಲ್ಲಯ್ಯನ
ಈಗ ಕಲ್ ಹೂಡಿ ನೆನೆದೆವು

ದೊಡ್ಮನೇ ಕಲ್ ಹೂಡಿ ದೊಡ್ಡೋರ ನೆನೆದೆವು
ದೊಡ್ಡ ಗ್ರಾಮದ ಗರತಿ(ಯ) । ಲಕ್ಕಮ್ಮನ
ದೊಡ್ಡ ಕಲ್ ಹೂಡಿ ನೆನೆದೆವು"[೧೦]

ಶಿವನಿಗೆ, ಗುರುವಿಗೆ, ಶಿವನ ಮಡದಿಯಾದ ಗೌರಮ್ಮನಿಗೆ ಹಾಗೂ ಗ್ರಾಮದೊಡೆಯನಾದ ಮಲ್ಲಯ್ಯನಿಗೆ ಶರಣೆಂದು ತಾನು ಬೀಸಲು ಕಲ್ಲನ್ನು ಹಿಡಿಯುವುದಾಗಿ ಹೇಳಿಕೊಳ್ಳುತ್ತಾರೆ. ಯಾವುದೇ ಕೆಲಸ ಕಾರ್ಯಗಳಾದರೂ ಗುರು, ಶಿವ ಹಾಗೂ ಗೌರಮ್ಮನ ಆಶೀರ್ವಾದಗಳು ನಮ್ಮ ಮೇಲಿರಲಿ ಎಂಬ ವಿನಯವಂತಿಕೆಯ ಗುಣ ಜನಪದರ ಬದುಕನ್ನು ಹಸನಾಗಿಸಿದೆ.

ನಂತರ ರಾಗಿಯ ಕಲ್ಲನ್ನು ಕುರಿತು
"ಅಂದೊಳ್ಳೆ ಅಡಿಗಲ್ಲೆ ಚೆಂದೊಳ್ಳೆ ಮೇಗಲ್ಲೆ
ಚಂದ್ರಮತಿಯೆಂಬೊ ಗೆರಸಿ(ಯ) । ರಾಗಿಕಲ್ಲೆ
ಒಂದ್ ಹೂಡನ ಬಾರೆ ಹಿರಿಯಕ್ಕ । ನಾ ನಿನ್ನ
ಹಾಡಿಗೆ ದನಿಯ ಕೊಡುತೀನಿ

ಅಕ್ಕಿ ಬೀಸೋ ಕಲ್ಲೆ ಸಕ್ಕರೆ ಒಡೆಗಲ್ಲೆ
ಸಟ್ಟಿ ತಮ್ಮಯ್ನ ಅರಮನೆ । ರಾಗಿಕಲ್ಲೆ
ಹಟ್ಟಿ ಬಾಗಿಲಿಗೆ ದನಿದೋರೆ

ರಾಗಿ ಬೀಸೋ ಕಲ್ಲೆ ರಾಜಾನ ಒಡೆಗಲ್ಲೆ
ರಾಯ ಅಣ್ಣಯ್ನ ಅರಮನೆ । ರಾಗೀಕಲ್ಲೆ
ರಾಜಬೀದಿಗೆ ದನಿದೋರೆ

ಕಲ್ಲಮ್ಮ ಮಾತಾಯಿ ಮೆಲ್ಲಮ್ಮ ರಾಗಿಯ
(ನೀ) ಜಲ್ಲ ಜಲ್ಲನೆ ಉದುರಮ್ಮ । ನಾ ನಿನಗೆ
ನೆಲ್ಲಕ್ಕಿ ಪಡಿಯ ನಡಸೇನು

ಅಕ್ಕಿ ಒರಳೀಗ್ ಹುಯ್ದು ಅಪ್ಪ ನಿಮ್ಮ ನೆನೆದೆನು
ಅಕ್ಕಮಾದೇವಿ ಗಿರಿಜೆ(ಯ) । ಕಂಚಮ್ಮನ
ಮಕ್ಕಳೈವರ ನೆನೆದೆನು"[೧೧]

ಎಂದು ಪ್ರಾರ್ಥಿಸುತ್ತಾರೆ. ಇಲ್ಲಿ ಜನಪದ ಹೆಣ್ಣು ಮಕ್ಕಳು ಬಳಸಿರುವ ಭಾಷೆ, ಆ ಭಾಷೆಯೊಳಗಿನ ಭಾವಗಳು ಓದುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತವೆ. ರಾಗಿಯ ಕಲ್ಲನ್ನು ನೆಲ್ಲಕ್ಕಿ ಪಡಿಯ ನಡೆಸುವೆ, ಬೆಲ್ಲದಾರತಿಯನ್ನು ಬೆಳಗುವೆನು, ಜಲ್ಲ ಜಲ್ಲನೆ ಉದುರವ್ವ ಎಂದು ಬೇಡಿಕೊಳ್ಳುವಲ್ಲಿನ ಭಾಷೆಯ ಪ್ರಬುದ್ಧತೆ, ಭಾವ ಬಂಧುರಗಳು ಜನಪದರ ತುಂಬು ಬಾಳಿನ ಪ್ರತೀಕಗಳಾಗಿವೆ.

"ರಾಗಿಯ ಕಲ್ಲಿಗೆ ನಾ ಮುಂದೊ ನೀ ಮುಂದೊ
ರಾಮಣ್ಣನೆಂಬೊ ಕೈ ಮುಂದೊ । ತಂಗ್ಯಮ್ಮ
ನಾ ಮುಂದು ಅಣ್ಣಯ್ನ ಮದುವೆಗೆ"[೧೨]

ತಂಗಿಯರು ರಾಮಣ್ಣನೆಂಬ ತನ್ನ ಅಣ್ಣಯ್ನ ಮದುವೆಗೆ ನಾ ಮುಂದು ತಾ ಮುಂದು ಎಂದು ಹೊರಟಿರುವ ಸಂಗತಿಯನ್ನು ರಾಗಿಯ ಕಲ್ಲಿನ ರೂಪಕದ ಮೂಲಕ ಕವಿ ತಿಳಿಸುತ್ತಾನೆ. ರಾಗಿಯ ಕಲ್ಲಿಗೆ ನಾ ಮುಂದೊ ನೀ ಮುಂದೊ ಎಂದರೂ ಅಲ್ಲಿ ಯಾರೂ ಮುಂದಲ್ಲ. ಏಕೆಂದರೆ ಇಲ್ಲಿ ಬದುಕಿನ ಏರಿಳಿತದ ಚಕ್ರವನ್ನು ಕವಿ ಅತ್ಯಂತ ಮಾರ್ಮಿಕವಾಗಿ ತಿಳಿಸಲು ಪ್ರಯತ್ನಿಸಿದ್ದಾನೆ. ಚಕ್ರದಲ್ಲಿ ಮೇಲಿರುವವ ಕೆಳಗೆ ಬರಲೇಬೇಕು. ಕೆಳಗಿರುವವ ಮೇಲೆ ಹೋಗಲೇಬೇಕು. ಅದರಂತೆಯೇ ರಾಗಿಯ ಕಲ್ಲನ್ನು ಹಿಡಿದು ಬೀಸುವ ಹೆಣ್ಣು ಮಕ್ಕಳಲ್ಲಿ ಒಬ್ಬಳ ಕೈ ಹಿಂದಾದರೆ ಒಬ್ಬಳ ಕೈ ಮುಂದಾಗುತ್ತದೆ. ಹಾಗೆಂದು ಅದೇ ಸ್ಥಿರವಾಗಿ ನಿಲ್ಲುವುದಿಲ್ಲ. ಅದು ಸುತ್ತುವಿಕೆಯ ಕ್ರಿಯೆ. ಹಿಂದಾದವಳು ಮುಂದಾಗುತ್ತಾಳೆ. ಮುಂದಾದವಳು ಹಿಂದಾಗುತ್ತಾಳೆ. ಇದು ಜೀವನದ ಗುಟ್ಟು, ಇಂತಹ ಅದ್ಭುತವಾದ ಜೀವನ ತತ್ವವನ್ನು ಕವಿ ಅತ್ಯಂತ ಸರಳವಾಗಿ ನಮಗೆ ತಿಳಿಸಿಕೊಡುತ್ತಲೆ ಜೀವನದಲ್ಲಿ ಯಾವುದಕ್ಕೂ ಹಿಗ್ಗದೆ, ಕುಗ್ಗದೆ ಮುನ್ನಡೆಯಬೇಕೆಂದು ಹುರಿದುಂಬಿಸುತ್ತಾರೆ.

"ಯಾರ ಇದ್ದರು ನನ್ನ ತಾಯವ್ವನೋಲಾರ
ಸಾವಿರ ಕೊಳ್ಳಿ ಒಲಿಯಾಗ ಇದ್ದರ
ಜ್ಯೋತಿ ನಿನ್ನ್ಯಾರು ಹೋಲರ"[೧೩]

"ಹಾಲುಂಡ ತವರಿಗೆ ಏನೆಂದು ಹಾಡಲೆ
ಹೊಳೆದಂಡೆಲಿರುವ ಕರಕೀಯ ಕುಡಿಹಂಗೆ
ಹಬ್ಬಲಿ ಅವರ ರಸಬಳ್ಳಿ"[೧೪]

ಬೀಸುವ ಪದಗಳು ಹೆಣ್ಣಿನ ಸ್ಥಾನಮಾನ ಹಾಗೂ ಆಕೆಯ ನಿಲುವು, ಧೋರಣೆಗಳನ್ನು ಅರ್ಥ ಮಾಡಿಕೊಳ್ಳಲು ಒಳ್ಳೆಯ ಸಾಮಗ್ರಿಗಳಾಗಿವೆ.

ಗಂಡು ಆರ್ಥಿಕ ಚಟುವಟಿಕೆಗಳ ಹಿಡಿತದ ಹಿನ್ನೆಲೆಯಲ್ಲಿ ಮನೆಯ ಹೊರಗಿನ ಕೆಲಸ ಕಾರ್ಯಗಳಲ್ಲಿ ಸದಾ ಕಾರ್ಯ ಪ್ರವೃತ್ತನಾಗಿರುವವನು. ಆದರೆ ಜನಪದ ಹೆಣ್ಣು ಮಗಳು ಗೃಹಿಣಿಯಾಗಿ, ಮನೆ ಹಾಗೂ ಮನೆಯ ಹಿರಿಯರು, ದನ, ಕರು, ಕೂಸುಗಳ ಆರೈಕೆ ಹಾಗೂ ನಿರ್ವಹಣೆಯಲ್ಲಿ ತನ್ನನ್ನು ಮಗ್ನಗೊಳಿಸಿಕೊಂಡವಳು. ಹೊರ ಪ್ರಪಂಚದ ಮನರಂಜನೆಗಳಾಗಲಿ, ಅದರ ಪರಿಚಯವಾಗಲಿ ಈಕೆಗೆ ಅಪ್ಪಕ್ಕಷ್ಟೇ. ಬೆಳಗಿನಿಂದ ಸಂಜೆಯವರೆಗೂ ಒಂದಲ್ಲಾ ಒಂದು ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡಿರುವವಳು. ಹೀಗಾಗಿ ತನ್ನ ಮನದ ಭಾರವನ್ನು ಇಳಿಸಿಕೊಳ್ಳಲು ಆಕೆಗಿರುವ ಅವಕಾಶ ಬೀಸುವ ಸಮಯದಲ್ಲಿನ ಪದಗಳ ಹಾಡುವಿಕೆ.

ಹುಟ್ಟಿದ ಮನೆಯನ್ನು ತೊರೆದು, ಕೈ ಹಿಡಿದ ಗಂಡನ ಮನೆಯನ್ನು ಸೇರುವ ಹೆಣ್ಣು ಮಗಳು ಕೋಳಿ ಕೂಗುವ ಮುನ್ನವೇ ಬೆಳಗಿನ ಜಾವದ ಸಮಯದಲ್ಲಿ ಎದ್ದು, ಆ ದಿನದ ಗಂಜಿಗಾಗಿ ಧಾನ್ಯಗಳನ್ನು ಬೀಸಲು ಬೀಸುವ ಕಲ್ಲಿನ ಮುಂದೆ ಕುಳಿತುಕೊಳ್ಳುತ್ತಾಳೆ. ಬೀಸುವ ಕಲ್ಲು ಆಕೆಗೆ

ಬರಿಯ ಕಲ್ಲಲ್ಲ. ನಮ್ಮೆಲ್ಲರಿಗೂ ಅನ್ನವನ್ನು ನೀಡುವ ಮಹಾತಾಯಿ. ಹಾಗಾಗಿಯೇ ಆಕೆಗೆ ಕೈ ಮುಗಿದು ತಾನು ಕಾಳು ಕಡ್ಡಿಗಳನ್ನು ಪುಡಿ ಮಾಡಲು ಬೀಸಲು ಪ್ರಾರಂಭಿಸುತ್ತಾಳೆ. ಈ ರೀತಿ ಬೀಸುತ್ತ ತನ್ನ ಕಷ್ಟ ನಷ್ಟಗಳನ್ನು ಹಾಡುಗಳ ಮೂಲಕ ತೋಡಿಕೊಳ್ಳುತ್ತ ಮನದ ದುಗುಡವನ್ನು ಕಳೆದುಕೊಂಡು ಹಗುರಾಗುತ್ತಾಳೆ. ತನ್ನ ಕಷ್ಟಗಳನ್ನು ಬೀಸುವ ಪದಗಳ ಹಾಡುವಿಕೆಯ ಮೂಲಕ ಮರೆಯುತ್ತ ಹೊಸ ಹುರುಪಿನಿಂದ ಅಂದಿನ ದೈನಂದಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾಳೆ.

ಬಾಳಿನ ಸಂಸಾರ ನೌಕೆಗೆ ಹೆಣ್ಣೇ ಚುಕ್ಕಾಣಿ. ಅದರ ನಾವಿಕಳೂ ಅವಳೇ ಆಗಿದ್ದಾಳೆ. ಬದುಕಿನ ಯಾವುದೇ ಸಮಸ್ಯೆಗಳಿಗೆ ಎದೆಗೊಟ್ಟು ನಿಂತು ಅವುಗಳನ್ನು ಪರಿಹರಿಸಿಕೊಳ್ಳುವ ಎದೆಗಾರಿಕೆ ಇರುವವಳು. ಎಡರು ತೊಡರುಗಳನ್ನು ಎದುರಿಸಿ ಮುಂದೆ ಸಾಗುತ್ತಾಳೆ. ಗಂಡನ ವ್ಯಕ್ತಿತ್ವಗಳು ಒಮ್ಮೊಮ್ಮೆ ಬಿರುಸಾದರೂ ಆ ಕಷ್ಟಗಳನ್ನು ಒಳನುಂಗಿ ಆ ನೋವುಗಳನ್ನು ಪದಗಳ ಮೂಲಕ ಬೀಸುವಾಗ, ಕುಟ್ಟುವಾಗ ಹಾಗೂ ಮನೆಗೆಲಸಗಳ ಸಮಯದಲ್ಲಿ ಕಳೆದುಕೊಳ್ಳುತ್ತಾಳೆ. ಇದರಲ್ಲಿ ತನ್ನ ತವರು ಮನೆ, ಗೆಳತಿಯರು, ಪತಿಯೊಂದಿಗೆ ಕಳೆದ ರಸ ನಿಮಿಷಗಳು, ಮಕ್ಕಳ ಲಾಲನೆ ಪಾಲನೆ, ಸಂಭ್ರಮದಂತಹ ಜೀವನದ ಅದ್ಭುತ ಸನ್ನಿವೇಶಗಳು ಮುಪ್ಪುರಿಗೊಂಡಿವೆ. ಬೀಸುತ್ತ ಬೀಸುತ್ತ ತನ್ನನ್ನು ತಾನೇ ಮೈಮರೆಯುವಷ್ಟು ಅದರಲ್ಲಿ ತಲ್ಲೀನಳಾಗುತ್ತಾಳೆ. ಈ ಪದಗಳು ನಮ್ಮ ಸಂಸ್ಕೃತಿಯ ಪ್ರತಿನಿಧೀಕರಣವೇ ಆಗಿವೆ.

ಮುಂಜಾನೆ ಎದ್ದು ಧಾನ್ಯಗಳನ್ನು ಬೀಸಲು ಕಾರ್ಯ ಪ್ರವೃತ್ತಳಾಗುವ ಜನಪದ ಹೆಣ್ಣುಮಗಳು ಭೂಮಿ ತಾಯಿಯನ್ನು ಸ್ಮರಿಸುತ್ತ ತನ್ನ ಅಂದಿನ ಕಾರ್ಯಗಳನ್ನು ಪ್ರಾರಂಭಿಸುತ್ತಾಳೆ.

"ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ?
ಎಳ್ಳು ಜೀರಿಗೆ ಬೆಳೆಯೋಳ – ಭೂತಾಯ
ಎದ್ದೊಂದು ಗಳಿಗೆ ನೆನೆದೇನು"[೧೫]

ಬೆಳಗಾಗಲು ಎದ್ದ ಹೆಣ್ಣು ಮಗಳಿಗೆ ತಾನು ಯಾರ್‍ಯಾರನ್ನು ಸ್ಮರಿಸಲಿ ಎಂಬ ವಿಚಾರದಲ್ಲಿ ಗೊಂದಲ ಉಂಟಾದರೂ ಆಕೆಯ ಮನಸ್ಸು ಸ್ಪಷ್ಟವಾಗಿ ಭೂಮಿ ತಾಯಿಯನ್ನು ನೆನಪಿಸಿಕೊಳ್ಳುವುದನ್ನು ತಿಳಿಸುತ್ತದೆ. ಏಕೆಂದರೆ ಭೂಮಿತಾಯಿ ಎಳ್ಳು ಜೀರಿಗೆ ಬೆಳೆಯುವವಳು. ಜಗದ ಜನರ ಹಸಿವನ್ನು ನೀಗಿಸುವ ಭೂಮಿತಾಯಿಯನ್ನು ಸ್ಮರಿಸಿಕೊಳ್ಳುತ್ತ ಅಂದಿನ ದಿನವನ್ನು ಪ್ರಾರಂಭಿಸುತ್ತಾಳೆ.

"ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ
ಅಲ್ಲ ಜಲ್ಲಾನೆ ಉದುರಮ್ಮ । ನಮ್ಮನೆ
ಬೆಲ್ಲದಾರುತಿಯ ಬೆಳಗೇವು"[೧೬]

ರಾಗಿಯ.ನ್ನು ಮೆಲ್ಲುವ ಕಲ್ಲು ಬರಿಯ ಕಲ್ಲಲ್ಲ. ಆ ಹೆಣ್ಣು ಮಗಳಿಗೆ ಅದು ಮಹಾತಾಯಿ. ಅದಕ್ಕಾಗಿಯೆ ಆಕೆ ಆ ರಾಗಿಯ ಕಲ್ಲನ್ನು ಕೇಳಿಕೊಳ್ಳುತ್ತಾಳೆ. ಕಲ್ಲಮ್ಮ ಮಹಾತಾಯಿ ರಾಗಿಯನ್ನು

ಮೆಲ್ಲುತ್ತ ಜಲ್ಲಾ ಜಲ್ಲಾನೆ ಉದುರಮ್ಮ. ಇದಕ್ಕಾಗಿ ನಾನು ನಿನಗೆ ನಮ್ಮನೆಯ ಬೆಲ್ಲದ ಆರತಿಯನ್ನು ಬೆಳಗುತ್ತೇನೆ ಎಂದು ವಿನಂತಿಸಿಕೊಳ್ಳುತ್ತಾಳೆ.

ಧಾನ್ಯಗಳನ್ನು ಬೀಸುತ್ತ ಕೊನೆಯಲ್ಲಿ ಕಲ್ಲನ್ನು ಬಿಡುವಾಗ ಆಕೆಯು

"ಆದಾವ ನಮಜೋಳ, ಉಳಿದಾವ ನಮಹಾಡ
ಈಗ ಸಾಕವ್ವ ನಿನಕಲ್ಲ । ಕೈಯಾನ
ಹಾಕಿದುಂಗುರ ಸವಿದಾವ ॥"[೧೭]

ಬೀಸುವ ಜೋಳ ಮುಗಿದವು. ಆದರೆ ನಮ್ಮ ಹಾಡು ಇನ್ನೂ ಉಳಿದಿದ್ದಾವೆ. ಹಾಗಾಗಿ ಈಗ ನಿನ್ನ ಕಲ್ಲು ಸಾಕು. ಕೈಯಾಗಿನ ಹಾಕಿದುಂಗುರ ಸವೆದಿದೆ ಎಂದು ಹೇಳಿಕೊಳ್ಳುತ್ತಾಳೆ. ಮುಂದುವರೆದು

"ಆದ ಮುಕ್ಕಿಗೆ ಶರಣು, ಗೋದಿ ಕಲ್ಲಿಗೆ ಶರಣು
ಓಂನಾಮ ಶಿವಗ ಶಿವಶರಣು । ಮಲ್ಲಯ್ಯ
ನಿಮ್ಮ ಪಾದಕ ನಮ ಶರಣು ॥"[೧೮]

ಹೆಣ್ಣು ಮಕ್ಕಳು ಧಾನ್ಯವನ್ನು ಬೀಸಿದ ಕಲ್ಲಿಗೆ ಕೃತಜ್ಞತೆಯಿಂದ ನಮಸ್ಕರಿಸುತ್ತಾಳೆ. ಜೊತೆಗೆ ಓಂ ನಾಮವನ್ನು ತಿಳಿಸುವ ಶಿವನಿಗೆ, ಶಿವನ ಶರಣರಿಗೆ ಹಾಗೂ ಮಲ್ಲಯ್ಯನ ಪಾದಕ್ಕೂ ಕೂಡ ಶರಣು ಬಯಸುತ್ತಾಳೆ.

"ಕಲ್ಲ ಕೊಟ್ಟಮ್ಮಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ । ಆ ಮನೆಗೆ
ಮಲ್ಲಿಗೆ ಮುಡಿಯೊ ಸೊಸೆ ಬರಲಿ ॥"[೧೯]

ಜನಪದ ಹೆಣ್ಣಿನ ಮನಸ್ಸು ನಿರ್ಮಲವಾದುದು. ರಾಗಿಯ ಕಲ್ಲನ್ನು ಕೊಟ್ಟ ಗೃಹಿಣಿಗೆ ಎಲ್ಲ ಭಾಗ್ಯಗಳು ಬರಲಿ ಎಂದು ಹರಸಿದ್ದಾಳೆ. ಪಲ್ಲಕ್ಕಿ ಮೇಲೆ ಆ ಮನೆಯ ಮಗ ಬರಲಿ. ಅಂತಹ ಸಿರಿತನ, ಗೌರವಾದರಗಳು ಅವನಿಗೆ ಲಭಿಸಲಿ. ಹಾಗೆಯೆ ಆ ಮನೆಗೆ ಮಲ್ಲಿಗೆಯನ್ನು ಮುಡಿಯುವ ಸೊಸೆ ಬಂದು ಮನೆಯನ್ನು ಬೆಳಗಲಿ ಎಂದು ಹಾರೈಸುತ್ತಾಳೆ. ಈ ಹಾರೈಕೆಯ ಒಳ್ಳೆಯ ಮನಸ್ಥಿತಿಯೇ ಜನಪದ ಹೆಣ್ಣಿಗೆ ಬಹು ಎತ್ತರದ ಸ್ಥಾನವನ್ನು ತಂದುಕೊಟ್ಟಿದೆ.

"ಕಲ್ಲು ಬಿಡ್ತೀನಂತ ಸಿಟ್ಯಾಕೆ ಸರಸತಿಯೆ
ಕುಕ್ಕೇಲಿ ರಾಗೀ ಬೆಳೆಯಾಲಿ । ತಕ್ಕೊಂಡು
ಮತ್ತೆ ರಾತ್ರೀಗೆ ಬರುತೀನಿ"[೨೦]

ಬೀಸುವುದನ್ನು ನಿಲ್ಲಿಸಿ ಕಲ್ಲನ್ನು ಬಿಡುತ್ತಿರುವೆನೆಂದು ಸಿಟ್ಟು ಮಾಡಿಕೊಳ್ಳಬೇಡ ಸರಸತಿಯೆ. ಕುಕ್ಕೇಲಿ ರಾಗಿ ಬೆಳೆಯಲಿ. ಅವುಗಳನ್ನು ತೆಗೆದುಕೊಂಡು ಮತ್ತೆ ರಾತ್ರಿಗೆ ಬರುತ್ತೇನೆ ಎಂದು ಆಕೆಗೆ ನಂಬಿಕೆಯ ಅಭಯವನ್ನಿತ್ತು ತಾನು ತನ್ನ ಉಳಿದ ಕೆಲಸಗಳಿಗೆ ತೊಡಗಿಕೊಳ್ಳುತ್ತಾಳೆ. ಇಲ್ಲಿನ ಆಕೆಯ

ಮಾತುಗಳು ರಾಗಿ ಕಲ್ಲಿನೊಂದಿಗಿನ ಆಕೆಯ ಆಪ್ತತೆಯ ಭಾವ ಬಂಧುರಗಳನ್ನು ನಮಗೆ ನೆನಪು ಮಾಡಿಕೊಡುತ್ತವೆ. ರಾಗಿಯ ಕಲ್ಲು ಬರಿ ಬೀಸುವ ಕಲ್ಲಲ್ಲ. ಆ ಗೃಹಿಣಿಯ ಮನದ ಇಂಗಿತಗಳಿಗೆ ದನಿ ಕೊಡುವ, ಅವರ ನೋವುಗಳಿಗೆ ಸ್ಪಂದಿಸುವ ಭಾವದ ಗೆಳತಿಯಂತೆ.

"ಗಂಜೀಯ ಕುಡಿದರೂ ಗಂಡನ ಮನಿಲೇಸ
ಅಂದಣದ ಮ್ಯಾಲ ಚವುರವ । ಸಾರಿದರ
ಹಂಗೀನ ತವರ ಮನಿಸಾಕ ॥"[೨೧]

ಬಡತನವಿದ್ದರೂ, ಗಂಜಿಯನ್ನು ಕುಡಿದರೂ ಕೂಡ ಹೆಣ್ಣು ಮಗಳಿಗೆ ಗಂಡನ ಮನೆಯಲ್ಲಿರುವುದೇ ಒಳಿತು. ಅದು ಗೌರವವೂ ಕೂಡ. ಎಷ್ಟೇ ವೈಭವ, ಸಂಪತ್ತುಗಳಿದ್ದರೂ ಹಂಗೀನ ತವರ ಮನೆಯು ಬೇಡವೆನ್ನುತ್ತಾಳೆ. ಅದು ಸ್ಥಿರವಲ್ಲವೆಂಬ ವಿವೇಕ ಕೂಡ ಆಕೆಗಿದೆ. ಆ ಕಾರಣವಾಗಿಯೆ ಎಷ್ಟೇ ಕಷ್ಟಗಳಿದ್ದರೂ ತನ್ನ ಗಂಡನ ಮನೆಯೇ ಒಳಿತು ಎಂಬ ಸತ್ಯದ ಅರಿವಿದೆ.

"ಬೆಳ್ಳಗ ಬೆಳಗಾಗಿ, ಬೆಳ್ಳಿ ಮೂಡಲವಾಗಿ
ಒಳ್ಳೊಳ್ಳೆ ಮೀನ ಗರಿತಗಿದು । ಆಡ್ಯಾವ
ಗರತಿ ಗಂಗಮ್ಮನ ಉಡಿಯಾಗ ॥"[೨೨]

ಬೆಳಿಗ್ಗೆಯೇ ಎದ್ದು ಧಾನ್ಯಗಳನ್ನು ಬೀಸುವ ಕೆಲಸ ಮುಕ್ತಾಯದ ಹಂತಕ್ಕೆ ಬಂದಿರುವ ಸಮಯದಲ್ಲಿ ಬೆಳಗಿನ ಬೆಳ್ಳಿಯ ಬೆಳಕು ಮೂಡಿ ಬರುವುದನ್ನು ಈ ರೀತಿಯಾಗಿ ವರ್ಣಿಸಿದ್ದಾಳೆ. ಇಡೀ ಮೂಡಣ ದಿಕ್ಕೆ ಶ್ವೇತ ವರ್ಣವಾಗಿ ಬೆಳ್ಳಿಯ ಹೊಂಬಣ್ಣವನ್ನು ಹೊದ್ದು ಬಂದಿದೆ. ಅದರ ಜೊತೆಗೆ ಒಳ್ಳೊಳ್ಳೆಯ ಮೀನುಗಳ ಗರಿಯನ್ನು ತೆಗೆದು ಮಾಡಿದಂತಿದೆ ಅಂದಿನ ಸೂರ್ಯೋದಯ. ಜೊತೆಗೆ ಆ ಬೆಳ್ಳಿಯ ಕಿರಣಗಳು ಗರತಿ ಗಂಗವ್ವನ ಮಡಿಲಲ್ಲಿ ಆಟವಾಡುತ್ತ ಹೊಳೆಯುತ್ತಿವೆ ಎಂಬ ಜನಪದ ಹೆಣ್ಣಿನ ಕವಿ ಕಲ್ಪನೆ ಅದ್ಭುತವಾದುದು.

"ಬಿದಿರನೆ ಜರಸಿಗೆ ಚದುರಂಗದ ಕಲ್ ಹೂಡಿ
ಮದಲಿಗೆ ಸರಸತಿಯ ನೆನೆದೇನು
ತಂಗಿ ರಾಗಿ ಬೀಸನ ಬಾರೆ

ಸರಸತಿ ಎಂಬಳು ಸಾವಿರಗೆ ದೊಡ್ಡಳು
ಎಲ್ಲಿ ಹೋದಮ್ಮ ಏ ಗಿರಿಜಾತೆ
ತಂಗಿ ಅಕ್ಕಿ ಬೀಸನ ಬಾರೆ

ನಾನು ಎಲ್ಲಿಗೆ ಹೋಗಿಲ್ಲ ಯಾತ್ರೆಗೆ ಹೋಗಿಲ್ಲ
ದೊಡ್ಡ ಬೇಲೂರ ಏಳ್‌ಮಾಳಿಗೆ ಒಳಗೆ
ತಂಗಿ ರಾಗಿ ಬೀಸನ ಬಾರೆ

ದೊಡ್ಡನೆ ಬೇಲೂರ ಮಾಳಿಗೇಲಿ ಸರಸತಿ
ನಾ ಲೆಕ್ಕ ಮಾಡ್ತಿದ್ದೆ ಏ ಪಾದಗಳನು
ತಂಗಿ ರಾಗಿ ಬೀಸನ ಬಾರೆ

ಕಲ್ಲ ಹೂಡಿದರ ಮನಿಗೆ ಎಲ್ಲ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಏ ಮಗ ಬರಲಿ
ತಂಗಿ ರಾಗಿ ಬೀಸನ ಬಾರೆ

ಯಾರು ಬಂದರೇನು ನಮ್ಮ ಚಾವಡಿ ಜನುಮಿಲ್ಲ
ಜೋಡಿ ಅಂದಲದ ಏ ಹಿರಿಮಗನು
ತಂಗಿ ರಾಗಿ ಬೀಸನ ಬಾರೆ

ಜೋಡಿ ಅಂದಲದ ಹಿರಿಮಗ ಮನಿಗೆ ಬಂದರೆ
ಚಾವಡಿ ಕಲಕಲನೆ ಏ ನಗುತಾವು
ತಂಗಿ ರಾಗಿ ಬೀಸನ ಬಾರೆ

ಯಾವ್ ಊರ್‍ಗು ಹೋಗಿಲ್ಲ ನಾನು ಯಾತ್ರೆಗು ಹೋಗಿಲ್ಲ
ಕಾಯ್ದು ನೀರ ಇಳುವೆ ಏ ಸತಿಯೆ
ತಂಗಿ ರಾಗಿ ಬೀಸನ ಬಾರೆ

ಕಾಸಿದ ನೀರಿಳಿವಿ ಕೈಯಲ್ಲಿ ಚೊಂಬು ಕೊಟ್ಟು
ಇದುವೇನು ನಂಜಯ್ಯ ನಿಮ್ಮ ಬೆನ್ನು ಗುರುತು
ತಂಗಿ ರಾಗಿ ಬೀಸನ ಬಾರೆ

ನನ್ನೂರಾ ಮುಂದೆ ಕುರಿ ಸಾರಂಗದ ಬೇಟೆ
ಸೀಗೆಮುಳ್ಳು ನನ್ನ ಬೆನ್ನು ತರೆದವು
ತಂಗಿ ಅಕ್ಕಿ ಬೀಸನ ಬಾರೆ"[೨೨]

ಈ ಬೀಸುವ ಪದದಲ್ಲಿ ಬಿದಿರನೆ ಜರಸಿಗೆ ಚದುರಂಗದ ಕಲ್ಲನ್ನು ಹೂಡಿ ರಾಗಿಯನ್ನು ಬೀಸಲು ತಂಗಿಯನ್ನು ಕರೆಯುವ ಚಿತ್ರಣವಿದೆ. ಮೊದಲು ಸಾವಿರಗೆ ದೊಡ್ಡವಳಾದ ಸರಸ್ವತಿಯನ್ನು ನೆನೆದು ಬೀಸಲು ತೊಡಗುವ ಚಿತ್ರಣ ನಮ್ಮ ಜನಪದ ಹೆಣ್ಣು ಮಕ್ಕಳ ಸುಸಂಸ್ಕೃತ ನಡೆಯನ್ನು ಪರಿಚಯಿಸುತ್ತದೆ. ಗಿರಿಜಾತೆ ಎಲ್ಲಿ ಹೋದೆಯಮ್ಮ ಎಂದು ಕೇಳಲಾಗಿ ಆಕೆ ತಾನು ದೊಡ್ಡ ಬೇಲೂರ ಏಳ್‌ಮಾಳಿಗೆಯೊಳಗೆ ಇರುವುದಾಗಿ ತಿಳಿಸುವ ಚಿತ್ರಣಗಳು ಜನಪದರಿಗೂ ದೈವಕ್ಕೂ ಇರುವ ಸಂಬಂಧವನ್ನು ಮನಗಾಣಿಸುತ್ತದೆ. ಕಲ್ಲನ್ನು ಹೂಡಿದವರ ಮನೆಗೆ ಎಲ್ಲ ಭಾಗ್ಯವು ಬರಲಿ, ಪಲ್ಲಕ್ಕಿ ಮೇಲೆ ಮಗ ಬರಲಿ ಎಂಬ ಆಶಯ ಜನಪದರ ಒಳ್ಳೆಯ ಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ.

ಯಾರಿಗೂ ಕೇಡನ್ನು ಬಯಸದ ಅವರ ಮನಸ್ಥಿತಿ, ಆರೋಗ್ಯ ಪೂರ್ಣ ಸಮಾಜದ ಬಹುಮುಖ್ಯ ಆಶಯವಾಗಿದೆ. ಎಲ್ಲರಲ್ಲೂ ಒಳಿತನ್ನು ಬಯಸುವ ಗುಣ ಇಂತಹ ಪದಗಳಿಗೆ ವಿಶೇಷವಾದ ಮೆರುಗನ್ನು ನೀಡಿವೆ. ಜೊತೆಗೆ ಹಿರಿಮಗನನ್ನು ಕುರಿತ ಜನಪದರ ನಂಬಿಕೆಗಳೂ ಸಹ ಅವರ ಆಲೋಚನಾ ಕ್ರಮಗಳನ್ನು ತಿಳಿಸುತ್ತವೆ. ಅಲ್ಲದೆ ಯಾರಲ್ಲಿಯೂ ಭೇದವೆಣಿಸದ ಅವರ ಸಮಾನತೆಯ ಮನಸ್ಥಿತಿ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿನ ಕುಟುಂಬ ಪರಿಕಲ್ಪನೆಗೆ ಬಹು ಮುಖ್ಯವಾದ ಸ್ಥಾನವನ್ನು ಒದಗಿಸಿದೆ. ಈ ಕಾರಣವಾಗಿ ಕ್ರಿಯಾವರ್ತನ ಜನಪದ ಗೀತೆಗಳು ಆಯಾ ಸಂದರ್ಭದ ವಿಚಾರಗಳನ್ನು ತಿಳಿಸುವಂತೆಯೆ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಸಹ ನಮಗೆ ದರ್ಶಿಸುತ್ತವೆ. ಈ ದೃಷ್ಟಿಯಿಂದ ಇವುಗಳ ಅಧ್ಯಯನ ಹಾಗೂ ಸಂಗ್ರಹಣೆ ಅತಿ ಜರೂರಿನ ಕಾರ್ಯಗಳಾಗಿವೆ.

"ದೊಡ್‌ದೊಡ್ಡ ರಾಗಿಕಲ್ಲೆ ದೊಡ್ಡ ಮುತ್ತಿನ ಕಲ್ಲೆ
ದೊಡ್ಡಣ್ಣ ನೇದ ಗೆರಸ್ ಹೂಡಿ
ಸಣ್ಣತ್ತಿಗೆಮ್ಮ ಕಲ್ಲು ತೆಗಿ ಬನ್ನಿ

ಸಣ್‌ಸಣ್ಣ ರಾಗಿಕಲ್ಲೆ ಸಣ್ಣ ಮುತ್ತಿನ ಕಲ್ಲೆ
ಸಣ್ಣಣ್ಣ ನೇದ ಗೆರಸ್ ಹೂಡಿ
ದೊಡ್ಡತ್ತಿಗೆಮ್ಮ ಕಲ್ಲು ತೆಗಿ ಬನ್ನಿ

ಅಣ್ಣನ ಮನಿಗೆ ಬಂದು ಸಣ್‌ರಾಗಿಕಲ್ ಹೂಡಿ
ಅತ್ಗೆ ಕೊಟ್ಟರು ಕೊಳಗ ರಾಗಿಯ ॥ ಗೆರಸ್ಹೂಡಿ ರಾಗಿ ಕಲ್ಲೆ
ಅತ್ಗೆ ಕೊಟ್ಟರು ಕೊಳಗ ರಾಗಿಯನೀಗ
ಬೀಸಿ ಬೆನಕ್ಹರೀತು ॥ ಗೆರಸ್ಹೂಡಿ ರಾಗಿಕಲ್ಲೆ

ಅಣ್ಣನ ಮನಿಗೆ ಬಂದು ತಂಗಿ ಕೂತಾಳಲ್ಲೊ
ಕೊಟ್ಟಳು ಕೊಳಗ ರಾಗಿ ಅತ್ತಿಗೆಮ್ಮ ॥ ತೆರಸ್ಹೂಡಿ ರಾಗಿಕಲ್ಲೆ
ಅತ್ಗೆಮ್ಮ ಕೊಟ್ಟ ರಾಗಿ ನಾದಿನಿ ಬೀಸಬೇಕು
ಕಣ್ಣಲ್ಲಿ ನೀರ ಸುರಿಸ್ತ ಬೀಸಳಲ್ಲೊ ॥ ಗೆರಸ್ಹೂಡಿ ರಾಗಿಕಲ್ಲೆ

ಅಣ್ಣನ ಮನಿಗೆ ಬಂದು ರಾಗಿಯ ನಾ ಬೀಸಿದೆ
ತಾಯಿ ನಮ್ಮವ್ವ ಇದ್ದರೀಗ ॥ ಗೆರಸ್ಹೂಡಿ ರಾಗಿಕಲ್ಲೆ
ತಾಯಿ ನಮ್ಮವ್ವ ಇದ್ದರೀಗ ಮನೆಯಲ್ಲಿ
ಕೋಣೆಮನೀಗೆ ಸಲುವಾಗೊ ಸಲುವಾಗೊ

ಕೋಣೆಮನೆ ನನಿಗೆ ಸಲುವಾಗ ನನ ತಾಯಿ

ನಮ್ಮತ್ತೀಗೆ ರಾಗೀಯ ಕೊಟ್ಟರಲ್ಲೊ
ನಮ್ಮತ್ತೀಗೆ ರಾಗೀಯ ಕೊಟ್ಟರೆ ಅಣ್ಣಯ್ಯ
ನಾ ರಾಗ ಎಳೆದು ಬೀಸತೀನಿ ನಾ ಬೀಸತೀನಿ

ತಾಯಿ ಇಲ್ಲದ ಮೇಲೆ ತೌರೀಗೆ ಬರಕಾದು
ನಾ ಬಂದು ಕೆಟ್ಟೆನಲ್ಲ ಬಂದು ಕೆಟ್ಟೆನು
ಅಣ್ಣ ಕರದಂತ ತೌರಮನೀಗೆ ಬಂದೆ
ಅತ್ತಿಗೆ ಕೊಟ್ಟಳಲ್ಲ ಕೊಳಗ ರಾಗಿಯ ನನಗೆ ಕೊಳಗ ರಾಗಿ

ತಾಯಿ ಇದ್ದರೆ ನನಗೆ ಕೊಳಗ ರಾಗಿಯ ಕೊಡೋಳ
ನನ ಕೂಟೆ ರಾಗಿಯ ಬೀಸುಸಾಳ ತಾಯಿ ಬೀಸುಸಾಳ
ಅಣ್ಣನ ಮನಿಗೀಗ ತಂಗಿ ಬಂದಾಳಲ್ಲ
ಅತ್ತಿಗೆ ಕೊಟ್ಟಳು ಕೊಳಗ ರಾಗಿ ನನಗೆ ಕೊಳಗ ರಾಗಿ
ಅಣ್ಣ ಕರದಾನಂತ ತೌರಮನೆಗೆ ಬಂದೆ
ಅತ್ತಿಗೆ ಕೊಟ್ಟಳು ಕೊಳಗ ರಾಗಿ ನನಗೆ ಕೊಳಗ ರಾಗಿ

ತಾಯಿ ಸತ್ತ ಮೇಲೆ ತೌರೂರು ನಮಗೆ ಬೇಡೊ
ತಂದೆ ಸತ್ತರೆ ನಮಗೆ ಬಳಗ ಬೇಡೊ ನಮಗೆ ಬಳಗ ಬೇಡೊ
ತಾಯಿ ಇದ್ದರೆ ನಮಗೆ ಅಡುಗೆಕೋಣೆ ನಮದು
ತಾಯ್ ಹೋದಮೇಲೆ ನಮಗೆ ತೌರು ಬೇಡೊ ನಮಗೆ ತೌರು ಬೇಡೊ
ತಂದೆ ಸತ್ತರೆ ಸಾಯಲಿ ತಂದೆ ಬಳಗ ಬರಲಿ
ಅದಕೆ ನಾವೀಗ ವರ ಕೊಡನ ವರ ಕೊಡನ

ಮಲ್ಲಿಗೆ ಹೂವೆ ಗೆರಸ್ಲೂಡಿದ ಅಕ್ಕಿಹಿಟ್ಟು
ಅಣ್ಣ ತಗದ್ಲೂಡಿ ನಾನು ಇಡುವ
ಕಲ್ಲಬೇರೆಯಲ್ಲ ನನನಗೆ ಬೇರೆಯಲ್ಲ
ದೊಡ್ಡಣ್ಣ ನೇಸೀದ ಗೆರಸ್ಲೂಡಿ ರಾಗಿಯ ಕಲ್ಲೆ
ದೊಡ್ಡತ್ತಿಗೆ ಬಂದು ತೆಗೆದ್ಲೂಡಿ ತೆಗದ್ಲೂಡಿ
ದೊಡ್ಡತ್ತಿಗೇ ನೀ ಬಂದು ತೆಗದ್ಲೂಡಿ ರಾಗಿಕಲ್ಲೆ
ಮಲ್ಲಿಗೆ ನೀ ಹೂವೆ ಉದಿರಿದಂಗೆ ಅತ್ತಿಗಮ್ಮ
ನೀ ಗೆರಸ್ಲೂಡಿ ರಾಗಿಕಲ್ಲವ್ವೆ ರಾಗಿಕಲ್ಲವ್ವೆ"[೨೪]

ಪ್ರಸ್ತುತ ಬೀಸುವ ಪದವು ತಾಯಿ ಇಲ್ಲದ ತೌರಿಗೆ ಬಂದ ತಂಗಿಯ ವಿವರಗಳನ್ನು ತಿಳಿಸಿಕೊಡುತ್ತದೆ. ಈ ರೀತಿ ಅಣ್ಣನ ಮನೆಗೆ ಬಂದ ತಂಗಿಯನ್ನು ಅತ್ತಿಗೆ ನಡೆಸಿಕೊಳ್ಳುವ

ಪರಿಯನ್ನು ಕವಿ ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಮನೆಗೆ ಬಂದ ತಂಗಿಗೆ ರಾಗಿಯನ್ನು ಬೀಸಲು ಹೇಳಿದ ಸಣ್ಣತ್ತಿಗೆಮ್ಮ ಹಾಗೂ ದೊಡ್ಡತ್ತಿಗೆಮ್ಮರ ವಿವರಗಳು ಹಾಗೂ ಕೊಳಗ ರಾಗಿಯನ್ನು ಕೊಟ್ಟು ಬೀಸಲು ತಿಳಿಸುವ ವಿಚಾರಗಳು ಇಲ್ಲಿ ವೇದ್ಯವಾಗುತ್ತವೆ. ಬೆಳಕು ಹರಿಯುವವರೆಗೂ ರಾಗಿ ಬೀಸಿದ ತಂಗಿಯ ದಾರುಣ ಚಿತ್ರಣದ ವಿವರಗಳಿದ್ದು, ಕಣ್ಣೀರನ್ನು ಸುರಿಸುತ್ತ ತಂಗಿಯು ತನ್ನ ತಾಯಿಯನ್ನು ನೆನೆಯುವ ಸನ್ನಿವೇಶಗಳು ಓದುಗರಲ್ಲಿ ಮರುಕ ಹುಟ್ಟಿಸುತ್ತವೆ.

ತನ್ನ ತಾಯಿ ಬದುಕಿದ್ದಾಗ ತನ್ನನ್ನು ಹೇಗೆ ಸಲಹುತ್ತಿದ್ದಳು ಎಂಬ ವಿಚಾರಗಳು ನೆನಪಾಗಿ ತಂಗಿಯು ತಾಯಿ ಇಲ್ಲದ ಮೇಲೆ ತೌರಿಗೆ ಬರಬಾರದು. ಆದರೂ ನಾನು ಬಂದು ಕೆಟ್ಟೆನು ಎಂದು ನೊಂದು ನುಡಿಯುವ ಆಕೆಯ ದುಃಖ ನಮ್ಮ ಸಮಾಜದಲ್ಲಿ ಕಂಡುಬರುವ ಅತ್ತಿಗೆ – ನಾದಿನಿಯರ ವಿರಸವನ್ನು ಮನಗಾಣಿಸುತ್ತದೆ.

ತಾಯಿ ಇದ್ದರೆ ನನಗೆ ಕೊಳಗ ರಾಗಿಯನ್ನು ಬೀಸಲು ಕೊಡುತ್ತಿರಲಿಲ್ಲ. ನನ್ನೊಟ್ಟಿಗೆ ಆಕೆಯೂ ಸೇರಿ ರಾಗಿಯನ್ನು ಬೀಸುತ್ತಿದ್ದಳು. ಆದರೆ ಇಂದು ಅಣ್ಣನ ಮನೆಗೆ ಬಂದ ತಂಗಿಗೆ ಬೀಸಲು ಅತ್ತಿಗೆ ಕೊಳಗ ರಾಗಿಯನ್ನು ಕೊಟ್ಟಿದ್ದಾಳೆ. ತಾಯಿ ಸತ್ತ ಮೇಲೆ ತೌರೂರು ನಮಗೆ ಬೇಡ. ತಂದೆ ಸತ್ತರೆ ನಮಗೆ ಬಳಗ ಬೇಡ, ತಾಯಿ ಇದ್ದರೆ ಮಾತ್ರ ಅಡುಗೆ ಕೋಣೆ ನಮ್ಮದು. ಅವರು ಹೋದ ಮೇಲೆ ತೌರು ಬೇಡ ಎಂದು ದುಃಖದಿಂದ ಹೇಳುವ ಹೆಣ್ಣು ಮಗಳು ಕೊನೆಗೆ ತಂದೆ ಸತ್ತರೆ ಸಾಯಲಿ ತಂದೆ ಬಳಗ ಬರಲಿ. ಅದಕೆ ನಾವೀಗ ವರ ಕೊಡುವ ಎಂದು ತನ್ನ ತವರನ್ನು ಹರಸಿ ಹಾರೈಸುವ ಗುಣ ನಮ್ಮ ಜನಪದ ಹೆಣ್ಣು ಮಕ್ಕಳ ಸಹನಾಶೀಲ ಗುಣ ಹಾಗೂ ತನ್ನ ತವರು ಸದಾ ಸುಖದಿಂದ ಇರಲಿ ಎಂದು ಹಾರೈಸುವ ಮನೋಭಾವ ಅತ್ಯುತ್ತಮವಾದುದು. ಇದು ನಮ್ಮ ಜನಪದ ಹೆಣ್ಣು ಮಕ್ಕಳ ಹೃದಯ ವೈಶಾಲ್ಯತೆಯನ್ನು ತಿಳಿಸಿಕೊಡುತ್ತದೆ.

"ರಾಗಿಕಲ್ಲಿಗೆ ರನ್ನದ ಹಿಡಿಗೂಟ
ರಾಯ ತಮ್ಮಯ್ನ ಕೊಡಗಿನ ಕಲ್ಲಿನ ಮೇಲೆ
ರಾಮಚಂದ್ರನ ಬರೆದಾರೆ

ರಾಗಿ ಬೀಸೋ ಕಲ್ಲೆ ರಾಜನ ಬೀಸೋ ಕಲ್ಲೆ
ರಾಯ ತಮ್ಮಯ್ನ ಕೊಡಗಿನ ಕಲ್ಲಿನ ಮೇಲೆ
ರಾಮಚಂದ್ರನ ಬರೆದಾರೆ

ಅಕ್ಕಿ ಬೀಸೋ ಕಲ್ಲೆ ನುಚ್ಚು ಬೀಸೋ ಕಲ್ಲೆ
ಶೆಟ್ಟರ ಮನೆ ಶೆಟ್‌ಗಳಲ್ಲಿನ ಮೇಲೆ
ಸೂರ್ಯ ಚಂದ್ರರ ಬರೆದಾರೆ"[೨೫]

ಈ ಗೀತೆಯಲ್ಲಿ ರಾಗಿಕಲ್ಲಿಗೆ ರನ್ನದ ಹಿಡಿಗೂಟವನ್ನು ಹಾಕಿ ರಾಯನಾದ ತಮ್ಮಯ್ಯನು ಕೊಡಗಿನ ಕಲ್ಲಿನ ಮೇಲೆ ರಾಮಚಂದ್ರನ ಚಿತ್ರವನ್ನು ಬರೆದ ವಿವರಗಳನ್ನು ತಿಳಿಸುತ್ತದೆ. ಜೊತೆಗೆ

ಶೆಟ್ಟರ ಮನೆ ಶೆಟ್‌ಗಳಲ್ಲಿನ ಮೇಲೆ ಸೂರ್ಯ ಚಂದ್ರರನ್ನು ಬರೆದ ವಿವರಗಳಿವೆ. ಇಲ್ಲಿ ಬಳಸಿರುವ ರಾಗಿಕಲ್ಲಿಗೆ ರನ್ನದ ಹಿಡಿಗೂಟ ಎಂಬ ವರ್ಣನೆ ಬಡವರಾದರೂ ನಮ್ಮ ಜನಪದರ ಜೀವನ ಶ್ರೀಮಂತಿಕೆ ಹಾಗೂ ಹೃದಯ ಶ್ರೀಮಂತಿಕೆಯನ್ನು ತಿಳಿಸಿಕೊಡುತ್ತದೆ.

೫.೩. ಕುಟ್ಟುವ ಹಾಡುಗಳು

ಜನಪದ ಗೀತೆಗಳಿಗೆ ಹಾಗೂ ಜನಪದರ ಕ್ರಿಯೆ, ಅವರ ಕಾರ್ಯ ಚಟುವಟಿಕೆಗಳಿಗೂ ಸಂರಚನಾತ್ಮಕವಾದ ಸಂಬಂಧವಿದೆ. ಜನಪದರು ಏನನ್ನೇ ಹಾಡಲಿ, ಏನನ್ನೇ ಮಾತನಾಡಲಿ ಅದರ ಹಿಂದೆ ರಚನಾತ್ಮಕವಾದ ಸೃಜನಶೀಲ ಚಟುವಟಿಕೆಗಳಿರುತ್ತವೆ. ಅವರು ಯಾವ ಕೆಲಸದ ಸಮಯದಲ್ಲಿಯೂ ಮೌನ ವಹಿಸಿದವರಲ್ಲ. ಜೀವನದ ಪ್ರತಿ ಹಂತದ ಸಂದರ್ಭಗಳಲ್ಲಿಯೂ ಅನೇಕ ಹಾಡುಗಳ ಮೂಲಕ ಅದನ್ನು ಸಂಪೂರ್ಣಗೊಳಿಸುವಂತಹ ಕಲಾ ರಸಿಕರು. ನಿತ್ಯದ ಜೀವನ ನಿರ್ವಹಣೆಗೆ ಸಂಬಂಧಿಸಿದಂತೆ ಧಾನ್ಯಗಳನ್ನು ಬೀಸುವ ಹಾಗೂ ಕುಟ್ಟುವ ಕೆಲಸಗಳು ಅವರಿಗೆ ಅನಿವಾರ್ಯ ಹಾಗೂ ಅವರ ಅವಿಭಾಜ್ಯ ಅಂಶಗಳು. ಬೀಸುವಿಕೆ ಹಾಗೂ ಕುಟ್ಟುವಿಕೆ ಇಲ್ಲದೆ ಅವರ ದೈನಂದಿನ ಹಸಿವು ಇಂಗಲಾರದು. ಈ ಹಿನ್ನೆಲೆಯಲ್ಲಿ ಬೀಸುವ ಪದಗಳಂತೆಯೆ, ಕುಟ್ಟುವ ಪದಗಳೂ ಸಹ ಪ್ರಮುಖವಾದ ಸ್ಥಾನವನ್ನು ಪಡೆದಿದ್ದು, ಜನಪದ ಹೆಣ್ಣು ಮಕ್ಕಳ ಮೂಲಕ ಹಾಡಲ್ಪಡುತ್ತವೆ.

ವಿಶೇಷವಾಗಿ ನಮ್ಮಲ್ಲಿ ಭತ್ತ, ರಾಗಿ, ಜೋಳ ಮೊದಲಾದ ಸಿಪ್ಪೆ ಇರುವ ಧವಸ ಧಾನ್ಯಗಳಲ್ಲಿ ಉಳಿದಿರಬಹುದಾದ 'ಹೊಟ್ಟು' ಅಥವಾ 'ಮುಸುಕ'ನ್ನು ಒಳಕಲ್ಲಿಗೆ ಹಾಕಿ ಒನಕೆಯಿಂದ ಕುಟ್ಟಿ ಕಾಳನ್ನು ಬೇರ್ಪಡಿಸಿ ಸ್ವಚ್ಛಗೊಳಿಸುವುದು ಈ ಕುಟ್ಟುವ ಪ್ರಕ್ರಿಯೆಯ ಪ್ರಮುಖವಾದ ಕಾರ್ಯ ವೈಖರಿಯಾಗಿದೆ. ವಿಶಾಲವಾದ ಹಾಸು ಬಂಡೆಗಳ ಮೇಲೋ, ಮನೆಯ ಒಂದು ಮೂಲೆಯಲ್ಲೋ, ಅಂಕಣ, ನಡು ಮನೆ ಅಥವಾ ಪಡಸಾಲೆಯ ಒಂದು ಮೂಲೆಯಲ್ಲಿ ಹಾಕಿರುವ ಕಲ್ಲಿನ ಒರಳಿನಲ್ಲಿ ಈ ಧಾನ್ಯಗಳನ್ನು ಹಾಕಿ ಕುಟ್ಟಿ ಸ್ವಚ್ಛಗೊಳಿಸುವ ಕ್ರಿಯೆ ಜರುಗುತ್ತದೆ. ಈ ಸಮಯದಲ್ಲಿ ಜನಪದ ಹೆಣ್ಣು ಮಕ್ಕಳು ದೇಸಿ ಮಟ್ಟಿನ ಹಾಡುಗಳನ್ನು ಹಾಡುತ್ತ ನಾದ, ಲಯಗಳಿಗೆ ಅನುಗುಣವಾಗಿ 'ಸುಯ್'ಗುಟ್ಟುತ್ತ ಕುಟ್ಟುವ ನೋಟ ಗ್ರಾಮೀಣ ಜನ ಜೀವನವನ್ನು ನಮಗೆ ಪರಿಚಯಿಸುತ್ತದೆ.

ದವಸ ಧಾನ್ಯಗಳನ್ನು ಸ್ವಚ್ಛಗೊಳಿಸಲು ಬಳಸುವ ಒನಕೆಯನ್ನು ಸಾಮಾನ್ಯವಾಗಿ ಬಗಿನಿ ಮರದ ತುಂಡಿನಿಂದ ಮಾಡಲಾಗುತ್ತದೆ. ಇದು ಸುಮಾರು ಮೂರ್ನಾಲ್ಕು ಅಡಿ ಉದ್ದದ ಕಟ್ಟಿಗೆಯ ತುಂಡಾಗಿರುತ್ತದೆ. ಇದನ್ನು ದುಂಡಾಗಿ ಕೆತ್ತಿ ನಯಗೊಳಿಸಿ ಅದರ ಎರಡೂ ತುದಿಗಳಿಗೆ ಬಳೆಯಂತಹ ರೀತಿಯ ಕಬ್ಬಿಣದ ಸಾಧನವನ್ನು ಹಾಕಿರುತ್ತಾರೆ. ಇದು ಧಾನ್ಯಗಳನ್ನು ಕುಟ್ಟಲು ತುಂಬಾ ಸಹಕಾರಿಯಾಗುತ್ತದೆ.

ಭತ್ತ ಕುಟ್ಟುವಾಗ ಹಾಡುವ ಹಾಡು ಈ ರೀತಿಯಾಗಿದೆ

"ಸುವ್ವಾ ಬಾ ಸುವ್ವಿ ಬಾ
ಸುವ್ವಾ ಬಾ ಸುವ್ವಿ ಬಾ ।ಪಲ್ಲವಿ।

ಅಕ್ಕಂದು ಆಲೂರು ತಂಗೀದು ಬೇಲೂರು
ಚಿಕ್ಕಕ್ಕನೂರು ಚಿಕ್ಕಬಿದಿರೆ"[೨೬]

ಕುಟ್ಟುವ ಪದಗಳು ಜನಪದರು ತಮ್ಮ ದೈಹಿಕ ಶ್ರಮವನ್ನು ಮರೆಯುವ ಸಲುವಾಗಿ ಕಟ್ಟಿಕೊಂಡ ಗೀತೆಗಳಾಗಿವೆ. ಇಲ್ಲಿ ಅವರ ಕಷ್ಟ-ಸುಖ, ನೋವು-ನಲಿವು, ಸಂಬಂಧ ಹಾಗೂ ಬಾಂಧವ್ಯಗಳ ಬೆಸುಗೆ, ನೆರೆಹೊರೆಯವರೊಂದಿಗಿನ ಒಡನಾಟಗಳು, ತಾಯಿ ಮಗುವಿನ ಅವಿನಾಭಾವ ಸಂಬಂಧ, ಸೋದರ ವಾತ್ಸಲ್ಯ, ಬದುಕಿನ ಏರಿಳಿತಗಳು ಮೊದಲಾದ ಬದುಕಿನ ಬಹು ಮುಖ್ಯ ಸಂಗತಿಯ ವಿವರಗಳು ಚರ್ಚಿತವಾಗುತ್ತವೆ. ಭತ್ತ ಕುಟ್ಟುವಾಗಿನ ಸಮಯದ ಮತ್ತೊಂದು ಹಾಡು ಈ ರೀತಿಯಾಗಿದೆ.

"ಸುವ್ವಿ ಬಾ ಸುವ್ವಿ ಸುವ್ವಿ ಬಾ ಸುವ್ವಿ
ಕಲ್ಲಿನ ಒರಳಲಿ ಬೀಟೆಯ ಒನಕೆಯು
ಬತ್ತವ ಕುಟ್ಟಿದರು ಬತ್ತವ ಕುಟ್ಟಿದರು
ಬೇಗಾನೆ ಅಕ್ಕಿ ಆಗಾದೋ

ಬತ್ತದ ತುದಿಯೊಳಗೆ ಉದ್ದನ ಮುಳ್ಳಿನ
ಬಾಲವು ಇದ್ದಿತೋ । ಬಾಲವು ಇದ್ದಿತೋ
ಬೇಗಾನೆ ಅಕ್ಕಿ ಆಗಾದೋ
ಹುರಿದು ಉರುಕಲು ಮಾಡುವ ಕಳಮೆಯ
ಒಂದು ಬಟ್ಟಿಯ ಕುಟ್ಟಿ ಒಂದು ಬಟ್ಟಿಯ ಕುಟ್ಟಿ
ಅಕ್ಕಿಯ ಮಡಿ ಮುಗಿದಾವೊ
ಕೇರಿಯ ಮನೆಗೆ ಹೊರಟೆವು ಅಬ್ಬೆ
ಅನ್ನವ ನೀಡಿರಿ ಅಬ್ಬೆ"[೨೭]

ಭತ್ತ ಕುಟ್ಟುವಾಗ ಹಾಡುವ ಈ ಗೀತೆಯು ಕಲ್ಲಿನ ಒರಳಲ್ಲಿ ಬೀಟೆಯ ಮರದಿಂದ ಮಾಡಿದ ಒನಕೆಯಿಂದ ಭತ್ತವನ್ನು ಕುಟ್ಟುವ ವಿವರಗಳನ್ನು ತಿಳಿಸಿಕೊಡುತ್ತದೆ. ಈ ರೀತಿ ಭತ್ತವನ್ನು ಕುಟ್ಟಲು ಬೇಗನೆ ಅಕ್ಕಿ ಆದವು. ಬತ್ತದ ತುದಿಯೊಳಗೆ ಇದ್ದ ಉದ್ದನೆ ಮುಳ್ಳಿನ ಬಾಲವನ್ನು ಕುಟ್ಟಲು ಬೇಗನೆ ಅಕ್ಕಿ ಆದ ವಿವರಗಳು ತಿಳಿಯುತ್ತವೆ. ನಂತರ ಅಕ್ಕಿಯ ಮಡಿ ಮುಗಿದ ನಂತರ ಅನ್ನವ ನೀಡಿರೆಂದು ಕೇರಿಯ ಮನೆಗೆ ಹೊರಟ ಸಂಗತಿಗಳು ತಿಳಿದುಬರುತ್ತವೆ.

"ಸುವ್ವಿ ಕುಟ್ಟೆಂದರೆ ಸುವ್ವಂಗನಾಡೋಳು
ನೋಡಣ್ಣಾ ನಿನ್ನ ಮಡದಿಯ – ಸುವ್ವಿ

ಒಂದಿಬ್ಬೆ ಕುಟ್ಟುವಾಗ । ಒಬ್ಬಣ್ಣನುಣಬಂದ
ಒಬ್ಬಿಗೆ ಒಬ್ಬೆ ನುರಿಯವು – ಸುವ್ವಿ

ಒಬ್ಬಿಗೇ(ನೇ) ಒಬ್ಬೆ । ನುರಿಯವು ಅಣ್ಣಯ್ಯ
ಎಬ್ಬಿಸೋ ನಿನ್ನ ಮಡದೀಯ – ಸುವ್ವಿ

ಮಡದಿಯ ಎಬ್ಬಿಸಿದ್ರೆ ಅರನಿದ್ದೆ ಆದಾವು
ಎರಡಿಬ್ಬೆ ಮಾಡಿ ಹಣಿ ತಂಗಿ – ಸುವ್ವಿ

ಎರಡಿಬ್ಬೆ ಮಾಡಿದರೆ ಕಡಿ ನುಚ್ಚು ಆದವು
ನೋಡಣ್ಣಾ ನಿನ್ನ ಮಡದಿಯ – ಸುವ್ವಿ
ಒಂದಿಬ್ಬೆ ಮಾಡಿದರೆ ಕುರುಡಕ್ಕಿಯಾದವು
ಸಾಕಣ್ಣಾ ನಿನ್ನ ಮನೆಗೆಲಸ – ಸುವ್ವಿ

ನನ್‌ಮನೆ ಕೆಲಸವ ನನ್‌ಮುಂದೆ ಹಳಿಬ್ಯಾಡ
ನನ್ನ ಮನೇಲಿ ಇರಬೇಡ – ಸುವ್ವಿ
ಕುದುರೇನೆ ತರಿಸಣ್ಣ ಜೀನವ ಬಿಗಿಸಣ್ಣ
ನನ್ನ ಊರಿಗೆ ಕಳುಹಣ್ಣ – ಸುವ್ವಿ

ಕುದುರೆ ನಮ್ಮಲ್ಲಿಲ್ಲ ಜೀನು ನಮ್ಮಲ್ಲಿಲ್ಲ
ನಿನ್ನ ಊರಿಗೆ ನಡಿ ತಂಗಿ – ಸುವ್ವಿ

ಕಕ್ಕೇ ಹಣ್ ತಿಂದು ಕೈತುಂಬ ನೀರ್ ಕುಡಿದು
ಕಾಕರುಗಲ್ಲಾಗೆ ನಡುವೊತ್ತಿ – ಸುವ್ವಿ
ಕಾಕರುಗಲ್ಲಾಗೆ ನಡುವೊತ್ತಿ ಆದರೆ
ಸಾಕಣ್ಣಾ ನಿನ್ನ ಮನೆಯಾರು – ಸುವ್ವಿ

ತಂಗ್ಹೋದ ಮರುದಿನ ಬಂದಿತು ಛಳಿ ಜ್ವರ
ಮನೆಯ ಮಡದಿಗೆ ತಲೆಶೂಲೆ – ಸುವ್ವಿ
ಮನೆಯ(ನ) ಮಡದಿಗೆ ತಲೆಶೂಲೆ ಆದರೆ
ದೇವರ್‍ನ ಕೇಳ ಹೊರಟನೆ – ಸುವ್ವಿ

ದೇವ್ರಲ್ಲ ದಿಂಡ್ರಲ್ಲ ದೈವಲ್ಲ ಭೂತಲ್ಲ
ಮನೆಯ ಹೆಣ್ಮಗಳುಸುರಣ್ಣಾ – ಸುವ್ವಿ
ಮನೆಯ(ನ) ಹೆಣ್ಮಗಳ ಉಸುರಣ್ಣ ಆದರೆ
ತಂಗಿಯ ಕರೆಯ ಹೊರಟನೆ – ಸುವ್ವಿ

ಕುದುರೇನೆ ತಂದಿದಿನಿ ಜೀನವ ಬಿಗಿಸಿದಿನಿ
ಬರಬೇಕೇ ತಂಗಿ ಮದುವೆಗೆ – ಸುವ್ವಿ

ಅಂಗ್ಳ ಗುಡಿಸೋರಿಲ್ಲ ಗಂಗ್ಳ ತೊಳೆಯೋರಿಲ್ಲ
ಹೇಗೆ ಬರಲಣ್ಣಾ ಮದುವೆಗೆ – ಸುವ್ವಿ

ಅಂಗ್ಳಕ್ಕೆ ಆಳಿಡುವೆ ಗಂಗ್ಳಕ್ಕೆ ತೊತ್ತಿಡುವೆ
ಬರಬೇಕೇ ತಂಗಿ ಮದುವೆಗೆ – ಸುವ್ವಿ

ಮಜ್ಗೆ ಕಡೆಯೋರಿಲ್ಲ ಬೆಣ್ಣೆ ತೆಗೆಯೋರಿಲ್ಲ
ಹೇಗೆ ಬರಲಣ್ಣಾ ಮದುವೆಗೆ – ಸುವ್ವಿ

ಮಜ್ಜಿಗ್ಗೆ ಆಳಿಡುವೆ ಬೆಣ್ಣೆಗೆ ತೊತ್ತಿಡುವೆ
ಬರಬೇಕೇ ತಂಗಿ ಮದುವೆಗೆ – ಸುವ್ವಿ

ಬೇಸಗೆ ಬಿಸಿಲಣ್ಣಾ ಕೂಸಿನ ತಾಯಣ್ಣಾ
ಹೇಗೆ ಬರಲಣ್ಣಾ ಮದುವೆಗೆ – ಸುವ್ವಿ

ಮಳೆಯಾರ ಬಂದೀತೋ ಹೊಳೆಯಾರ ತುಂಬೀತೋ
ಹೇಗೆ ಬರಲಣ್ಣಾ ಮದುವೆಗೆ – ಸುವ್ವಿ

ಚಿನ್ನದ ಹರಿಗೋಲ್ಗೆ ರನ್ನದ ಹುಟ್‌ಹಾಕಿ
ಜೋಕೇಲಿ ನಿನ್ನ ಕರೆದೊಯ್ವೆ – ಸುವ್ವಿ

ಅಪ್ಪ ಕಟ್ಟಿದ ಮನೆ ಅಮ್ಮ ಮಾಡಿದ ಬದುಕು
ಬರಬೇಕೇ ತಂಗಿ ಮದುವೆಗೆ – ಸುವ್ವಿ

ಅಪ್ಪ ಇದ್ದರೆ ಎನ್ನ ಒಪ್ಪದಿ ಕರೆದೊಯ್ವ
ಅಪ್ಪ ಇಲ್ಲದಾ ಮನೆಯೊಲ್ಲೆ – ಸುವ್ವಿ

ಅಮ್ಮ ಇದ್ದರೆ ಎನ್ನ ಸುಮ್ಮನೆ ಕಳುಹೋಳೆ
ಅಮ್ಮ ಇಲ್ಲದಾ ಮನೆಯೊಲ್ಲೆ – ಸುವ್ವಿ

ಬಂದರೆ ಬಂದೇನೋ ಅಂಗ್ಳದಾಗೆ ನಿಂದೇನೋ
ಕಂದಗೆ ಧಾರೆ ಎರೆದೇನೋ – ಸುವ್ವಿ

ಅಲ್ಲದ ಮಾತಾಡಿ ಶಾವಂತ್ಗೆ ಹೂ ಬೇಡಿ
ಊರ ಮುಂದಿನ ಪ್ರಾಣೇಶ ಗತಿ”[೨೮]

ಪ್ರಸ್ತುತ ಕುಟ್ಟುವ ಪದವು ಅಣ್ಣನ ಮನೆಗೆ ಬಂದ ತಂಗಿಯನ್ನು ಅಣ್ಣ ಹಾಗೂ ಆತನ ಹೆಂಡತಿ ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ನೈಜ ಚಿತ್ರಣವನ್ನು ಒಳಗೊಂಡಿದೆ. ತವರಿಗೆ ತಂಗಿ ಬಂದದ್ದನ್ನು ಕಂಡು ಅತ್ತಿಗೆ ಕಾಯಿಲೆ ಎಂದು ನಟಿಸುತ್ತ ಮಲಗುತ್ತಾಳೆ. ತಂಗಿ ಒಬ್ಬಳೇ ಎಲ್ಲ ಕೆಲಸ ಮಾಡುತ್ತಾಳೆ. ಆದರೆ ಅಣ್ಣ ಇದಾವುದಕ್ಕೂ ಸ್ಪಂದಿಸದಿದ್ದಾಗ ತಂಗಿ ದುಃಖದಿಂದ ತನ್ನ ತವರು ಮನೆಗೆ ಹಿಂದಿರುಗುತ್ತಾಳೆ. ಆದರೆ ನಿಜವಾಗಿಯೂ ಅಣ್ಣನ ಹೆಂಡತಿಗೆ ಕಾಯಿಲೆ ಬಂದಾಗ ಅಣ್ಣ

ದೇವರನ್ನು ಕೇಳಲಾಗಿ, ವಿನಾ ಕಾರಣ ಹೆಣ್ಣು ಮಗಳನ್ನು ನೋಯಿಸಿದ್ದರ ಫಲವಾಗಿ ಈ ಕಷ್ಟಗಳು ನಿಮಗೆ ಒದಗಿವೆ ಎಂದು ಹೇಳುತ್ತಾರೆ.

ಇದನ್ನರಿತ ಅಣ್ಣ ಮತ್ತೆ ತಂಗಿಯ ಮನೆಗೆ ಬಂದು ತಂಗಿಯನ್ನು ಉಪಚರಿಸಿ ಮಗನ ಮದುವೆಗೆ ಬರಬೇಕೆಂದು ಕರೆಯುತ್ತಾನೆ. ನೊಂದ ತಂಗಿ ಅದನ್ನು ತಿರಸ್ಕರಿಸುತ್ತ, ಮದುವೆಗೆ ಬಾರದೇ ಇರಲು ಹಲವು ಕಾರಣಗಳನ್ನು ನೀಡುತ್ತಾಳೆ. ಕೊನೆಗೆ ಮದುವೆಗೆ ಬಂದರೂ ಸಹ ಮನೆಯ ಅಂಗಳದಲ್ಲಿಯೇ ನಿಂತು ಕಂದನಿಗೆ ಧಾರೆಯೆರೆದು ವಾಪಸ್ಸಾಗುವೆನೆಂದು ಹೇಳುತ್ತಾಳೆ. ತಂಗಿ ಈ ರೀತಿಯಾಗಿ ಹೇಳಬೇಕಾದರೆ ಆಕೆಯ ಮನಸ್ಸು ಎಷ್ಟು ನೊಂದಿದೆ ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಅಲ್ಲದೆ ಸೂಕ್ಷ್ಮ ಮನಸ್ಸಿನ ಭಾವ ಜೀವಿಯಾದ ಆಕೆ ಎಂದಿಗೂ ತನ್ನ ತವರಿನಿಂದ ಈ ರೀತಿಯ ಅವಮಾನ ಹಾಗೂ ಅಸಡ್ಡೆಯ ನಡವಳಿಕೆಗಳನ್ನು ನಿರೀಕ್ಷಿಸುವುದಿಲ್ಲ. ಗುಡಿಸಲಾದರೂ ತನ್ನ ಮನೆಯೇ ಲೇಸು ಎನ್ನುವ ಸ್ವಾಭಿಮಾನಿ ಬದುಕು ಆಕೆಯದ್ದು.

"ಹಟ್ಟೀ ಕಲ್ಲೊಳ್ಳಿಗೆ ಬಟ್ಟು ಗಂಧವನಿಟ್ಟು
ಪುಟ್ಟಬಾಳೆ ಹಣ್ಣ ಸುಲಿದಿಟ್ಟು
ಸುವ್ವಾ ಬಾ ಸುವ್ವಿ ಸುವ್ವಾ ಬಾ
ಪುಟ್ಟಬಾಳೆ ಹಣ್ಣ ಸುಳಿದಿಟ್ಟು ಈ ಮನೆ
ನಾರೇರೊರಳಕ್ಕಿ ತೊಳಿಸ್ಯಾರೆ
ಸುವ್ವಾ ಬಾ ಸುವ್ವಿ ಸುವ್ವಾ ಬಾ

ಹಾದೀ ಕಲ್ಲೊಳ್ಳಿಗೆ ಗೀರು ಗಂಧವನಿಟ್ಟು
ಬೂದುಬಾಳೆ ಹಣ್ಣ ಸುಲಿದಿಟ್ಟು – ಸುವ್ವಾ ಬಾ
ಬೂದುಬಾಳೆ ಹಣ್ಣ ಸುಲಿದಿಟ್ಟು ಈ ಮನೆ
ಮಿತ್ರೇರೊರಳಕ್ಕಿ ತೊಳಿಸ್ಯಾರೆ – ಸುವ್ವಾ ಬಾ

ಹಟ್ಟೀಲಿ ಒಳಕಲ್ಲು ಕೊಟ್ಟಿಗೇಲಿ ಸೇದೋ ಬಾವಿ
ಹೊಕ್ಕು ಕುಟ್ಟಿದರೆ ಧಣಿರೆಂಬೋ । ಒನಕೆಯ
ಕೆತ್ತಿಸಿದಪ್ಪಾಜಿ ಸುಖಿ ಬಾಳೊ – ಸುವ್ವಿ

ಹಾದೀಲಿ ಒಳಕಲ್ಲು ಬೀದಿಲಿ ಸೇದೋ ಬಾಮಿ
ಹೋಗಿ ಕುಟ್ಟಿದರೆ ಧಣಿರೆಂಬೋ । ಒನಕೆಯ
ಮಾಡಿಸಿದಣ್ಣಯ್ಯ ಸುಖಿ ಬಾಳೊ – ಸುವ್ವಾ ಬಾ

ಅಣ್ಣನೂ ತಮ್ಮನೂ ಹಾಲು ಬಾನಾ ಉಂಡು
ಹೊನ್ನಿನುಳಿಬಾಚಿ ಹೆಗಲೇರಿ । ಗುಡ್ಡಕ್ ಹೋಗಿ

ಹೊನ್ನೆಯ ಮರವ ಕಡಿದರೆ । (ಕಡಿದು) ಒನಕೇ ಮಾಡಿ
ಕನ್ನೇರೊರಳಕ್ಕಿ ತೊಳಿಸ್ಯಾರೆ – ಸುವ್ವಾ ಬಾ

ಅಪ್ಪನೂ ಮಗನೂ ತುಪ್ಪ ಬಾನಾ ಉಂಡು
ಉಕ್ಕಿನುಳಿಬಾಚಿ ಹಿಡುಕೊಂಡು । ಗುಡ್ಡಕ್ ಹೋಗಿ
ಹಿಪ್ಪೆಯ ಮರವ ಕಡಿದರೆ । (ದು) ಒನಕೇ ಮಾಡಿ
ಮಿತ್ರೇರೊರಳಕ್ಕಿ ತೊಳಿಸ್ಯಾರೆ – ಸುವ್ವಾ ಬಾ

ಮರಕೆ ಮುತ್ತಿನ ಕಟ್ಟು ಒನಕೆಗೆ ಹುರಿಗೆಜ್ಜೆ
ಹೊನ್ನು ಮಾಣಿಕದ ಮರಜರಡಿ । ತಕ್ಕೊಂಡು
ಕನ್ನೇರು ಪಾಡಾರೆ ಶಿವಶರಣು – ಸುವ್ವಾ ಬಾ

ಅಂಗಯ್ಯ ಚೆಂದಕೆ ಮುಂಗಯ್ಯ ತಿರುವುತ
ಅಂಬರಕೊನಕೆನೆಸೆವುತ । ಗೌಡರ
ಮಕ್ಕಳು ಒರಳಕ್ಕಿ ತಿಳಿಸ್ಯಾರೆ – ಸುವ್ವಾ ಬಾ

ಆ ಕೈಯ ಚೆಂದಕೆ ಈ ಕೈಯ ತಿರುವುತ
ಆಕಾಶಕೊನಕೆನೆಸೆವುತ । ಗೌಡರ
ಸೊಸೆಯರೊರಳಕ್ಕಿ ತೊಳಿಸ್ಯಾರೆ – ಸುವ್ವಾ ಬಾ

ಅಕ್ಕಕ್ಕ ತಂಗೇರು ಕೊಪ್ಪ ಬಂಗಾರಿಟ್ಟು
ಸುತ್ತಿ ಬಂದ ಸೆರಗದ್ರೂವಿಗೆ । ಕಟ್ಟಿಕೊಂಡು
ಹಾಡುತ ಒರಳಕ್ಕಿ ತೊಳಿಸ್ಯಾರೆ – ಸುವ್ವಾ ಬಾ[೨೫]

ಪ್ರಸ್ತುತ ಕುಟ್ಟುವ ಪದವು ಹಟ್ಟಿಯ ಕಲ್ಲೊಳ್ಳಿಗೆ ಗಂಧದ ತಿಲಕವನ್ನಿಟ್ಟು, ಪುಟ್ಟ ಬಾಳೆ ಹಣ್ಣು ಹಾಗೂ ಬೂದು ಬಾಳೆಯ ಹಣ್ಣನ್ನು ಸುಲಿದಿಟ್ಟು ಧಾನ್ಯಗಳನ್ನು ಕುಟ್ಟಲು ಪ್ರಾರಂಭಿಸುವ ಚಿತ್ರಣವನ್ನು ವಿವರಿಸುತ್ತದೆ. ಜನಪದರು ಯಾವುದೇ ಕೆಲಸ ಪ್ರಾರಂಭಿಸುವ ಮೊದಲು ಅದಕ್ಕೆ ಶರಣೆಂದು ಕೆಲಸಕ್ಕೆ ಅಡಿಯಿಡುತ್ತಾರೆ. ಅಂತೆಯೆ ಇಲ್ಲಿ ಕಲ್ಲೊಳ್ಳಿಗೆ ನಮಸ್ಕರಿಸಿ ಕುಟ್ಟಲು ತೊಡಗುತ್ತಾರೆ.

ಮುಂದುವರೆದು ಅಣ್ಣ ಮತ್ತು ತಮ್ಮಂದಿರಿಬ್ಬರು ಹಾಲು ಬಾನಾವನ್ನು ಊಟಮಾಡಿ ಹೊನ್ನಿನ ಮರವನ್ನು ಕಡಿದು ಕುಟ್ಟಲು ಬೇಕಾದ ಒನಕೆಯನ್ನು ಮಾಡಿ ಕನ್ನೆಯರ ಕೈಗಿಡುವ ದೃಶ್ಯ ಅದ್ಭುತವಾದುದು. ಆ ಒನಕೆಗೆ ಮುತ್ತಿನಕಟ್ಟು, ಹುರಿಗೆಜ್ಜೆಯನ್ನು ಕಟ್ಟಿ ಶಿವಶರಣೆಂದು ಹಾಡುವ ದನಿಯ ಇಂಪು ಮಧುರವಾದುದು. ಅಕ್ಕ ತಂಗಿಯರು ಆ ಒನಕೆಯಿಂದ ಧಾನ್ಯವನ್ನು ಕುಟ್ಟುತ್ತ ಹಾಡುವ ದೃಶ್ಯ ಜನಪದರ ಬದುಕಿಗೆ ಹಿಡಿದ ಕನ್ನಡಿಯಾಗಿದೆ. ಜನಪದರ ಬದುಕೆ ಅಂತಹದ್ದು,

ಸದಾ ಅವರು ಶ್ರಮ ಜೀವಿಗಳು. ಆ ಶ್ರಮದಲ್ಲೆ ಜೀವನದ ಸುಖ ಹಾಗೂ ಸಾರ್ಥಕತೆಗಳನ್ನು ಹೊಂದುವಂತಹವರು.

೫.೪. ಒಗಟಿನ ಹಾಡುಗಳು

ಜನಪದ ಸಾಹಿತ್ಯ ಪ್ರಕಾರಗಳಲ್ಲೊಂದಾದ ಒಗಟು ಪ್ರಾಚೀನ ಕಾಲದಿಂದಲೂ ಕಂಡುಬರುವ ಸಾಹಿತ್ಯ ಪ್ರಕಾರವಾಗಿದೆ. ಇದು ವಿಶ್ವ ವ್ಯಾಪಕವಾದದ್ದಾಗಿದ್ದು, ಮೌಖಿಕ ಹಾಗೂ ಶಿಷ್ಟ ಸಾಹಿತ್ಯ ಪ್ರಕಾರಗಳೆರಡರಲ್ಲೂ ಬಳಕೆಯಲ್ಲಿರುವುದು ತಿಳಿಯುತ್ತದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕನ್ನಡ ಕಾವ್ಯಗಳಲ್ಲಿ ಹಾಗೂ ಶಿವಶರಣರ ಅನೇಕ ವಚನಗಳಲ್ಲಿ ಒಗಟಿನ ಲಕ್ಷಣಗಳನ್ನು ಗಮನಿಸಬಹುದಾಗಿದೆ. ಒಗಟುಗಳ ರಚನೆ ಬುದ್ಧಿವಂತಿಕೆಯದು. ಅದರಲ್ಲಿ ಜನಪದರ ಊಹಾಶಕ್ತಿಗೆ, ಅರ್ಥ ಗೌಪ್ಯತೆಯ ಕ್ರಿಯೆಗಳು ಕಂಡುಬರುತ್ತವೆ. ಒಗಟುಗಳಲ್ಲಿ ಬಳಕೆಯಾಗುವ ರೂಪಕಗಳು, ಆಕರ್ಷಣೆಯ ಶಕ್ತಿ ಜನಪದರ ಬುದ್ಧಿ ಸಾಮರ್ಥ್ಯಗಳಿಗೆ ಹಿಡಿದ ಕನ್ನಡಿಯಾಗಿದೆ. ಹಾಗಾಗಿ ಒಗಟಿನ ಹಾಡುಗಳು ಸಹ ಇದೇ ರೀತಿಯ ಬುದ್ಧಿವಂತಿಕೆಯನ್ನು ಬಯಸುತ್ತವೆ. ಇವು ಸಮಸ್ಯೆಯೊಂದನ್ನು ನೀಡುವ ಮೂಲಕ ಅದಕ್ಕೆ ಉತ್ತರವನ್ನು ಬಯಸುತ್ತವೆ.

"ಹಳ್ಳು ಬೆಳೆಯೋದ್ ಹಾರನ್ಹಳ್ಳಿ
ಎಳ್ಳು ಬೆಳೆಯೋದ್ ಲಿಂಗದ್ಹಳ್ಳಿ
ಕೊಳ್ಳೀಬೆಳಕಾಗುಣ್ಣುತಾರೆ
ಕೋಡೀಹಳ್ಳ್ಯೋರು"[೩೦]

"ಹೆಸರು ಕಳಸಾಪುರ (ವಂತೆ) ಎಸರಿಗೆ ನೀರಿಲ್ಲ (ವಂತೆ)
ಹಸುರು ಕುಪ್ಪಸದ ನಾರೀರ । ತಲೆಮೇಲೆ
ಎಸೆದಾಡುತಲಿದೆ ತಲೆಸಿಂಬಿ"[೩೧]

೫.೫. ಪೌರಾಣಿಕ ಹಾಡುಗಳು

ನಮ್ಮ ಜನಪದರಲ್ಲಿ ಪುರಾಣ ಪ್ರಜ್ಞೆ ಅಧಿಕವಾಗಿದ್ದು, ಪುರಾಣ, ಪುಣ್ಯ ಕಥೆಗಳಲ್ಲಿ ಹೆಚ್ಚಿನ ನಂಬಿಕೆ ಇದೆ. ಪೌರಾಣಿಕವಾಗಿ ಘಟಿಸಿದ ಘಟನೆಗಳು, ನಂಬಿಕೆಗಳು, ಕಥೆಗಳನ್ನು ನಿಜವಾಗಿ ನಡೆದ ಘಟನೆಗಳೇ ಎಂದು ಬಲವಾಗಿ ನಂಬಿದ್ದಾರೆ. ಆ ಕಾರಣವಾಗಿ ಪುರಾಣಗಳು ಜನಪದರ ಬದುಕಿನಲ್ಲಿ ಹಾಸು ಹೊಕ್ಕಾಗಿವೆ. ಪುರಾಣಗಳಿಗೆ ಸಂಬಂಧಿಸಿದ ಅನೇಕ ವಸ್ತು, ವಿಷಯ, ಘಟನಾವಳಿಗಳಿಗೆ ಜೀವ ತುಂಬಿರುವ ಜನಪದರು ಅವುಗಳನ್ನು ಅನುಸರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಏಕೆಂದರೆ ಪ್ರಮುಖವಾಗಿ ಪೌರಾಣಿಕ ಹಾಡುಗಳು ಶೋಷಣೆ, ಅಸಹಾಯಕತೆ, ತ್ಯಾಗ, ಸಹನೆ, ಧೈರ್ಯಗಳಂತಹ ವಿಚಾರಗಳನ್ನು ಪ್ರತಿನಿಧಿಸುತ್ತವೆ.

ಸತ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವ ಜನಪದರಿಗೆ ಸತ್ಯಕ್ಕೆ ಸತ್ಯವೇ ಸಾಟಿಯಾದುದು. ಅದಕ್ಕೆ ಪರ್ಯಾಯವಾದದ್ದು ಬೇರೊಂದಿಲ್ಲ ಎಂಬ ನಂಬಿಕೆ ಇದೆ. ದುಷ್ಟರಿಗೆ ಶಿಕ್ಷೆ ಇದ್ದು, ಶಿಷ್ಟರ ರಕ್ಷಣೆಯಾಗುತ್ತದೆ ಎಂಬ ನಂಬಿಕೆಯ ಭಾವಗಳನ್ನು ಈ ಗೀತೆಗಳಲ್ಲಿ ಕಂಡುಕೊಂಡಿದ್ದಾರೆ. ಈ ಕಾರಣವಾಗಿ ಎಂತಹ ಕಷ್ಟದ ಸಮಯದಲ್ಲಿಯೂ ಕುಗ್ಗದೆ ಜೀವನೋತ್ಸಾಹದಿಂದ ಅವುಗಳನ್ನು ಎದುರಿಸಿ ಮುನ್ನಡೆಯುವ ಮನಸ್ಸನ್ನು ತೋರುತ್ತಾರೆ. ಹೀಗಾಗಿ ಪೌರಾಣಿಕ ಹಾಡುಗಳಲ್ಲಿ ನಿಸ್ವಾರ್ಥ, ನಿಷ್ಠೆ, ಸಹಬಾಳ್ವೆ, ಬಲಿದಾನ, ತ್ಯಾಗ ಮೊದಲಾದ ಸಮಾಜಮುಖಿ ಚಿಂತನೆಗಳುಳ್ಳ ಆಶಯಗಳನ್ನು ಕಾಣಬಹುದಾಗಿದೆ. ಈ ಅಂಶಗಳು ಜನಪದರ ಜೀವನವನ್ನು ಸಾರ್ಥಕ್ಯಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

ಪೌರಾಣಿಕ ಹಾಡುಗಳಲ್ಲಿ ಗಿರಿಜೆ, ಎಲ್ಲಮ್ಮ, ರುಕ್ಮಿಣಿ, ದ್ರೌಪದಿ ಮೊದಲಾದ ಸ್ತ್ರೀರೂಪಗಳು ಪ್ರಮುಖವಾಗಿವೆ. ದುರ್ಯೋಧನನು ಧರ್ಮರಾಯನನ್ನು ಪಗಡೆಯಾಟದಲ್ಲಿ ಸೋಲಿಸಿ ದ್ರೌಪದಿಯನ್ನು ತನ್ನ ದಾಸಿಯನ್ನಾಗಿಸಿಕೊಳ್ಳುವ ವಿಚಾರಗಳು, ಆ ನಂತರದ ಆಕೆಯ ದುಃಖ, ನೋವು, ಅವಮಾನ, ತಳಮಳಗಳ ವಿವರಗಳು ಕಂಡುಬರುತ್ತವೆ. ಇದಕ್ಕೆ ಪ್ರತಿಯಾಗಿ ಆಕೆ ಮತ್ತೆ ಪಗಡೆಯಾಟವನ್ನು ಆಡಿ ಸಕಲ ಸಾಮ್ರಾಜ್ಯವನ್ನು ಮರಳಿ ಪಡೆಯುವ ಅಂಶಗಳು ದ್ರೌಪದಿಯಂತಹ ಹೆಣ್ಣುಮಕ್ಕಳಿಗೆ ಸಂಬಂಧಿಸಿದ ಹಾಡುಗಳಲ್ಲಿ ಕಾಣಬಹುದು. ಇದೇ ರೀತಿ ತಂದೆ ತಾಯಿಗಳ ಲಾಲನೆ, ಪಾಲನೆಗಳಲ್ಲಿ ಲೋಕವನ್ನೇ ಗೆದ್ದ ಶ್ರವಣ ಕುಮಾರ, ಸತ್ಯವನ್ನೆ ಉಸಿರಾಗಿಸಿಕೊಂಡ ಹರಿಶ್ಚಂದ್ರ, ಪತಿಯಿಂದ ಪರಿತ್ಯಕ್ತಳಾದರೂ ಜೀವನ ಪ್ರೀತಿಯ ಧ್ಯೋತಕಳಾದ ಸೀತೆ, ಭಕ್ತ ಪ್ರಹ್ಲಾದ, ಸತಿ ಅನುಸೂಯ, ವಾಲ್ಮೀಕಿ, ಅಭಿಮನ್ಯು, ಗಂಗೆ–ಗೌರಿ, ಸಾವಿತ್ರಿ ಮೊದಲಾದಂತಹ ಪೌರಾಣಿಕ ವ್ಯಕ್ತಿಗಳಿಗೆ ಸಂಬಂಧಿಸಿದ ಹಾಡುಗಳನ್ನು ಈ ಪೌರಾಣಿಕ ಹಾಡುಗಳಲ್ಲಿ ಗಮನಿಸಬಹುದಾಗಿದೆ.

ಇವರೆಲ್ಲರೂ ಅಸಾಮಾನ್ಯರಂತೆ ಕಂಡರೂ ಸಾಮಾನ್ಯರಂತೆ ಸುಖ–ದುಃಖ, ಸಾವು–ನೋವುಗಳನ್ನು ಉಂಡು ಅದರಿಂದ ಹೊರಬರುವ ಪ್ರಯತ್ನವನ್ನು ಮಾಡಿದವರು. ಇಂತಹವರ ಜೀವನ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುವ ಜನಪದರಿಗೆ ಇಂತಹ ವ್ಯಕ್ತಿಗಳ ಕಷ್ಟಗಳ ಮುಂದೆ ನಮ್ಮ ಕಷ್ಟಗಳು ದೊಡ್ಡವೇನಲ್ಲ ಎಂಬ ವಿಚಾರಗಳು ಮನವರಿಕೆಯಾಗಿ ಜೀವನವನ್ನು ಮುಂದುವರೆಸುವ ಗುಣಗಳು ಇಲ್ಲಿ ಪ್ರಮುಖವಾದವು. ಈ ಕಾರಣವಾಗಿ ಇಂತಹ ವ್ಯಕ್ತಿಗಳ ವಿಚಾರಗಳೇ ಜನಪದರಿಗೆ ಆದರ್ಶವನ್ನು ಬಿತ್ತುವ ಪ್ರಮುಖ ಆಶಯಗಳಾಗಿ ಕಂಡುಬರುತ್ತವೆ. ಅಲ್ಲದೆ ಇಂದಿನ ಆಧುನಿಕತೆಯ ಜೀವನ ಶೈಲಿಯ ಕಾರಣವಾಗಿ ಶಾಂತಿ ಹಾಗೂ ಮಾನಸಿಕ ನೆಮ್ಮದಿಗಳು ಕಡಿಮೆಯಾಗುತ್ತಿವೆ. ಇಂತಹ ಸಂದರ್ಭಗಳಲ್ಲಿ ಪೌರಾಣಿಕ ಹಾಡುಗಳು ಅವರಲ್ಲಿ ಮಾನಸಿಕ ದೃಢತೆಯನ್ನು ತಂದು ಕೊಡುವ ಬಹುಮುಖ್ಯವಾದ ಕೆಲಸವನ್ನು ಮಾಡುತ್ತಿರುವುದು ಸಹ ಕಂಡುಬರುತ್ತದೆ.

ಜನಪದ ಸಾಹಿತ್ಯದಲ್ಲಿ ನಮಗೆ ತಿಳಿದಿರುವಂತೆ ಪೌರಾಣಿಕ ವ್ಯಕ್ತಿಗಳಲ್ಲಿ ಹೆಚ್ಚು ಉಲ್ಲೇಖಿತವಾಗುವವರು ಶಿವ ಹಾಗೂ ಗೌರಿಯರು. ಜನಪದರ ಕಷ್ಟಗಳಿಗೆ ಬಹು ಬೇಗ ಸ್ಪಂದಿಸುವ

ದೈವಗಳೂ ಇವರೇ. ತಮ್ಮೆಲ್ಲ ಕಷ್ಟಗಳನ್ನು ಪರಿಹರಿಸುವಂತೆ ಜನಪದರು ಶಿವ ಹಾಗೂ ಪಾರ್ವತಿಯರನ್ನು ಬೇಡಿಕೊಳ್ಳುವುದು ಜನಪದ ಗೀತೆಗಳಲ್ಲಿ ಸರ್ವೇ ಸಾಮಾನ್ಯವಾಗಿ ಕಂಡುಬರುವ ಸಂಗತಿಯಾಗಿದೆ. ಅಲ್ಲದೆ ಈ ರೀತಿಯ ಪೌರಾಣಿಕ ಹಾಡುಗಳು ಶಿವ ಪಾರ್ವತಿಯರ ವಿವಾಹ, ಶಿವನನ್ನು ಕುರಿತ ವರ್ಣನೆ, ಗಂಗೆ-ಗೌರಿಯರ ಜಗಳ, ಸವತಿ ಮಾತ್ಸರ್ಯವನ್ನು ಕುರಿತ ಸಂಗತಿಗಳು ಹೆಚ್ಚು ಚರ್ಚಿತವಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಶಿವ ಪಾರ್ವತಿಯರ ವಿವಾಹ, ಗಂಗೆ ಹಾಗೂ ಗೌರಿಯರ ಜಗಳ ಕುರಿತಾದ ವಿವರಗಳುಳ್ಳ ಶಿವರಾಯನ ಹಾಡನ್ನು ಈ ರೀತಿಯಾಗಿ ಚರ್ಚಿಸಬಹುದಾಗಿದೆ.

"ಆಕೆಯ ತರ ಹೋಗಿ ಲೋಕವ ಹುಡುಕಿದ
ಆಕೆ ಗೌರಮ್ಮನ ತರಹೋಗಿ । ಶಿವರಾಯ
ಬಾಳೆಯ ಮರವ ಒರಗಿದ ॥

ಬಾಲೆಯ ತರ ಹೋಗಿ ಭೂಲೋಕ ಹುಡುಕಿದ ।
ಬಾಲೆಯ ಗಂಗಮ್ಮನ ತರ ಹೋಗಿ । ಶಿವರಾಯ
ದಾಳಿಂಬಿ ಮರವ ಒರಗಿದ ॥

ಯಾಕೊಲ್ಲೆನೆಂದಿ ನಾಲ್ಕೈದು ಜಡೆಯೋರ
ಲೋಕನೆಲ್ಲಾ ಸಲವೊ ಶಿವರಾಯ । ಸ್ವಾಮಿಯ
ಯಾಕೊಲ್ಲೆ ಮುದ್ದು ಗೌರಮ್ಮ ॥

ಹತ್ತು ವರುಷದಲ್ಲಿ ಚಿಕ್ಕ ಪ್ರಾಯದಲ್ಲಿ
ನಾನು ಸಿಕ್ಕಿದೆ ಶಿವರಾಯನ । ಬಲಗೈಲಿ

ಆರು ವರುಷದಲ್ಲಿ ಕೋರಿ ಪ್ರಾಯದಲ್ಲಿ
ನಾನು ಸೇರಿದೆ ಶಿವರಾಯನ । ಬಲಗೈಲಿ

ಒಬ್ಬಣ್ಣ ಮಲ್ಲಿಗೆ ಒಬ್ಬಣ್ಣ ಸಂಪಿಗೆ
ಒಬ್ಬಣ್ಣ ಚನ್ನಬಸವಯ್ಯ ಮೂರು ಮಂದಿ
ಕೊಟ್ಟರು ಗೌರಿಯ ಶಿವರಾಯಗೆ ॥

ಪನ್ನಂಗದರಸೆ ಮನಗೆಂದ ಮಂಚಕ್ಕೆ
ಇನ್ನೊಂದ ಹೆಣ್ಣ ತರುತೀನಿ । ನಾನೀಗ

ತಂದರು ತರು ಹೋಗಿ ಜೋತಿ ಮಲ್ಲಿಗೆ ಹೂವ
ನಾ ಮುಡಿದು ನನ್ನ ಶಿರ ಮುಡಿದು । ಮಿಕ್ಕಹೂವ
ಯಾವ ಬಾಲ್ಯಾರೂ ಮುಡಿಲೇಳಿ ॥

ಬಂದಾರ ಬರ ಹೇಳಿ ಎಂದಿನಂತಿರುವೋನ
ಮುಂದಲರಮನೆ ಎರಡು ಬಾಗಿಲ ಮಾಡಿ
ಬಂದಂತ ಬಾಲೆ ಮಡಗಾನ ॥

ಮನಗಿದ್ದ ಮಡಗೀಯ ಭುಜವ ತೊಟ್ಟೆಬ್ಬರಿಸಿ
ಕಂಡೇನೆ ಗೌರಿ ಸ್ವಪ್ನಾವ । ಮೂಗಂಡುಗ
ತಿಳಿದೇಳಿ ಶಿವನೆ ಸ್ವಪುನಾವ ॥

ಲಿಂಗ ಬರುವುದು ಕಂಡೆ ನಂದಿ ಏರೂದು ಕಂಡೆ
ನಂದಿಯ ಹಿಂದೆ ತೆರೆಯುಕ್ಕಿ । ಬರುವುದು
ಕಂಡೆಕನೆ ಗೌರಿ ಸ್ವಪುನಾವ ॥

ಲಿಂಗನೆಂಬುದು ಶಿವನು ಬಸವ ಎಂಬುದು ನಂದಿ
ನಂದಿಯ ಹಿಂದೆ ತೆರೆಯುಕ್ಕಿ । ಬರುವೋಳು
ಗಂಗ್ಯಮ್ಮನಲ್ವೆ ನಿಮ್ಮ ಮಡದಿ ॥

ಇಟ್ಟವರೆ ಈಬೂತಿ ತೊಟ್ಟವರೆ ರುದ್ರಾಕ್ಷಿ
ಹೊನ್ನ ಜೋಳಿಗೆ ಹೆಗಲೇರಿ । ಶಿವರಾಯ
ಮನೆ ಜೋಕೆ ಗೌರಿ ಮಠ ಜೋಕೆ ॥

ಮನಗಿದ ಮಗನ ಭುಜನ ತಟ್ಟೆಬ್ಬರಿಸಿ
ಕಂಡೆನೋ ಕಂದ ಸ್ವಪ್ನವ । ಮೂಗಂಡುಗ
ತಿಳಿದೇಳೆ ತಾಯಿ ಸ್ವಪ್ನವಾ ॥

ಲಿಂಗ ಬರುವುದಾ ಕಂಡೆ ನಂದಿ ಏರೊದು ಕಂಡೆ
ನಂದಿಯ ಹಿಂದೆ ತೆರೆಯುಕ್ಕಿ । ಬರುವುದ
ನಾ ಕಂಡೆನು ಕಂದ ಸ್ವಪನವಾ ॥

ಲಿಂಗವೆಂಬುದು ಶಿವನು ನಂದಿ ಎಂಬೋದು ಬಸವ
ನಂದಿಯ ಹಿಂದೆ ತೆರೆಯುಕ್ಕಿ । ಬರುವೋಳೆ
ಗಂಗ್ಯಮ್ಮನಲ್ವೆ ನಿನ್ನ ಸವತಿ ॥

ಗಂಗ್ಯಮ್ಮನಲ್ವೆ ನಿನ್ನ ಸವತಿ ತಾಯಮ್ಮ
ಹೋಗೆ ಗೆಣಕಾತಿ ಅರಮನೆಗೆ । ಅಮ್ಮಯ್ಯ
ಹೋಗೆ ಗೆಣೆಕಾತಿ ಅರಮನೆಗೆ ॥

ಎಂದೂ ಬರದ ಗೌರು ಯಾಕವ್ವ ಬಂದವಳೆ
ಕುಂಡ್ರುಕ್ಕೆ ಹಾಕ್ಯವಳೆ ಸಣ್ಣ ಮಂಚ ॥

ಕೂರೋರು ನಾವಲ್ಲ ನಿಲ್ಲೋರು ನಾವಲ್ಲ
ಕಂಡ್ಯ ಗೆಣಕಾತಿ ಸಪನಾವ ॥

ಲಿಂಗ ಬರೋದ ಕಂಡೆ ನಂದಿ ಏರೋದ ಕಂಡೆ
ನಂದಿಯ ಹಿಂದೆ ತೆರೆಯುಕ್ಕಿ । ಬರುವೂದ
ನಾ ಕಂಡೆ ಗೆಣಕಾತಿ ಸಪನವ ॥

ಪುಟ್ಟ ಜೋಳಿಗೆ ಹೆಗಲಿಗೆ ಹಾಕ್ಕೊಂಡು
ಜಂಗಮ ವೇಷವ ತಾಳ್ಯಾರೆ । ಶಿವರಾಯ
ಮುಂದು ಮುಂದಕೆ ನಡೆದಾರೆ ॥

ಹರಬಿ ಬಾಯಿಗೆ ಹಲ್ವಂಗದ ವಸ್ತುರ
ಬೆನ್ನಲ್ಲಿ ಬೆಳ್ಳಿ ಶಿವದಾರ । ಇಟುಕೊಂಡು
ಹೊಳೆಯಲ್ಲಿ ನೀರ ಮೊಗಿದಾಳೆ ॥

ಹೊಳೆಯಲ್ಲಿ ನೀರ ಮೊಗೆಯೊ ಬಾಲೆಯ ಕಂಡು
ಶಿವರಾಯ ಜಪವ ಮರೆತಾನು । ಜಂಗಮನು
ತನ್ನನೆ ತಾನು ಮರೆತಾನು ॥

ಜಪವನು ಮರೆತಾನೆ ಜಗ್ಗನೆ ಎದ್ದಾನೆ
ರುದ್ರಾಕ್ಷಿ ತೆಗೆದು ನೆಲಕಿಟ್ಟ । ಜಂಗಮಯ್ಯ
ನೀ ಬರಬೇಕು ನಮ್ಮ ಅರಮನೆಗೆ ॥
ಬಂದ ಜಂಗಮಯ್ಯಗೆ ಕೂರಕೆ ಮಂಚ ಹಾಕಿ

ನಮ್ಮ ಗಂಗೆ ಹುಟ್ಟಿದ ವಾರ ತಿಳಿದ್ಹೇಳಿ ಮಹಾಸ್ವಾಮಿ
ಮಟಮಟ ಮಧ್ಯಾಹ್ನ ಕಟ್ಟಿದ ॥ ಶನಿವಾರ
ನಿಮ್ಮ ಗಂಗೆ ಹುಟ್ಟಿದ್ದು ಇಸುವಾರ ॥

ಹುಟ್ಟಿದ ಗಂಗೆ ಮನೆಯೊಳಗೆ ಇದ್ದಾರೆ
ತಾಯಿ ತಂದೆಗೆ ಮರಣಾವು । ಗಂಗೆಯ
ಬಿಡಿರಯ್ಯ ಹರಿಯುವ ಜಲದಾಗೆ ॥

ಆಗೊಂದು ಹಡಿದೋ ರುದ್ರೀಶ್ವರಗೆ ಕೊಟ್ಟೆ
ಈಗೊಂದು ಇದ್ದರೆ ಜಲಧಿಗೆ । ಬಿಡಬೇಕೆ
ಹುಚ್ಚೇನೋ ಶಿವನೆ ಮರುಳೇನೋ ॥

ಹುಚ್ಚೇನೋ ಶಿವನೆ ಮರುಳೇನೋ ಶಿವರಾಯ
ನಮ್ಮ ಗಂಗುಟ್ಟಿದ ವಾರ ತಿಳಿದ್ದೇಲೋ । ಮಹಾಸ್ವಾಮಿ
ಗಂಗೆ ಹುಟ್ಟಿದ ವಾರ ತಿಳಿದೇಲೊ ॥

ಮಟಮಟ ಮಧ್ಯಾಹ್ನ ಕಟ್ಟಿದ ಮಂಗಳವಾರ
ನಿಮ ಗಂಗೆ ಹುಟ್ಟಿರೋದು ಇಸುವಾರ ॥

ಇಸವಾರ ಹುಟ್ಟಿದ ಗಂಗೆ ಮನೆಯಲ್ಲಿ ಇದ್ದರೆ
ಅಣ್ಣ ತಮ್ಮರಿಗೆ ಮರಣಾವು । ಗಂಗೆಯ
ಬಿಡಿರಯ್ಯ ಹರಿಯುವ ಜಲಧಿಗೆ ॥

ನೆನಯಕ್ಕಿ ನೆನೆಗಡಲೆ ಗೊನೆಯ ಬಾಳೆಯ ಹಣ್ಣು
ಚಿನ್ನದ ತೊಟ್ಟಿಲು ರನ್ನದ ನ್ಯಾಕೆ ಹಗ್ಗ
ಸಯ್ವಾಗಿ ಗಂಗೆಯ ಬಿಡಿರಯ್ಯ ॥

ಬಿಟ್ಟು ಬಂದ ಸುದ್ದಿಯ ಕೇಳ್ಯಾನೆ ಅಂಬಿಗರಣ್ಣ
ಉಕ್ಕಿನ ಬಲೆ ಹಾಕಿ ಎಳೆದಾನು ಅಂಬಿಗರಣ್ಣ
ಚಿನ್ನ ಸಿಕ್ಕಿತು ನಮಗೊಂದು ॥

ಬಂದಂಬಿಗಿತ್ತಿಗೆ ಏನೆಂದು ಹೇಳುತಾನೆ
ಹನ್ನೆರಡು ವರುಷ ಮಕ್ಕಳಿಲ್ದೆ ನಾವಿದ್ದೊ
ಈಗೊಂದು ಕೊಟ್ಟ ಶಿವರಾಯ ॥

ಈಗೊಂದು ಕೊಟ್ಟ ಅಂಬಿಗಿತ್ತಿ ಮಗಳಿನ್ನು
ಚಂದಾಗಿ ಸಾಕೆ ಹರದೆಯ । ಅಂಬಿಗಿತ್ತಿ
ಚಂದಾಗಿ ಸಾಕೆ ಹರದೆಯ ॥

ಚಟ್ನಿ ತುಪ್ಪ ಹಾಕೆ ಬಟ್ಟಲು ಹಾಲುಯ್ಯೆ
ಹೆತ್ತ ಮಗಳಂಗೆ ಸಲವಮ್ಮ । ಅಂಬಿಗಿತ್ತಿ
ಹೆತ್ತ ಮಗಳಂಗೆ ಸಲವಮ್ಮ ॥

ಹರಬಿಯ ಹಾಲುಯ್ದು ಗಿಂಡೀಲ್ ತುಪ್ಪ ಹಾಕೆ
ಹಡದ ಮಗಳಂಗೆ ಸಲವಮ್ಮ । ಅಂಬಿಗಿತ್ತಿ
ಹಡದ ಮಗಳಂಗೆ ಸಲವಮ್ಮ ॥

ಸಾಲೀ ಉಡಮ್ಮ ಸಣ್ಣ ಮುತ್ತ ಕಟ್ಟಮ್ಮ
ನೀ ಸಣ್ಣ ಮಳಲಲ್ಲಿ ಆಡಿ ಬಾರೆ । ಗಂಗಮ್ಮ
ಬಂದು ಕುಡಿಯೆ ನಮ್ಮ ಎದೆ ಹಾಲು ॥

ಸಾಲಿಯು ನನಗ್ಯಾಕೆ ಸಣ್ಣ ಮುತ್ತು ನನಗ್ಯಾಕೆ
ಸಣ್ಣ ಮಳಲಾಟ ನನಗ್ಯಾಕೆ । ಅಂಬಿಗವ್ವ
ನಿಮ್ಮ ಎದೆ ಹಾಲು ನನಗ್ಯಾಕೆ ॥

ಸಾಲಿ ಉಟ್ಟುಕೊಂಡು ಸಣ್ಣ ದನಿಚರವೋ ಬಾಲೆ
ಅಲ್ಲಿಗೆ ಶಿವರಾಯ ಕೊಡ ಹಿಡಿದು । ಕೇಳ್ಯಾನೆ
ಬಂದೆನ್ನ ಜಡಿಯೊಳಗೆ ಇರುಗಂಗೆ ॥

ನೀ ಹೆಂಡಿರುಳ್ಳೋನು ನೀ ಮಕ್ಕಳುಳ್ಳೋನು
ನೀ ಸಾವಿರ ಬಳಗದೋನು । ಶಿವ ಶಿವ
ನೀನು ಸಾವಿರ ಬಳಗದೋನು ॥

ಹೆಂಡಿರು ನನಗಿಲ್ಲ ಮಕ್ಕಳು ನನಗಿಲ್ಲ
ಸಾವಿರ ಬಳಗ ನನಗಿಲ್ಲ । ಎಲೆ ಗಂಗೆ
ಬಂದೇರು ನನ್ನ ಜಡೆಯೊಳಗೆ ॥

ಆಚೆ ಕೊಂಬಿಂದ ಈಚೆ ಕೊಂಬಿಗೆದಾಟಿ
ದೂಪರಾಕ್ಷಿ ಹಣ್ಣ ಕುಯ್ವಾಗ । ಎಲೆ ಗಂಗೆ
ಸೋಕಾಗಿ ಬಾರೆ ಜಡೆಯೊಳಗೆ ॥

ಕಗ್ಗಲಿಕಣಿವಿಂದ ಒಬ್ಬಾನೆ ಬಂದಿವಿನಿ
ತಟ್ಟಿ ಕರೆದರೆ ಕದವ ತೆಗಿ ಗೌರಿ ॥

ಕದವ ತೆಗೆಯೋಕೆ ಕಂದಯ್ಯ ತೊಡಿಮ್ಯಾಲೆ
ಹೊತ್ತುಟ್ಟಲಿ ಶಿವನೆ ಹೊರಗೀರಿ ॥

ಕಂದ್ನ ಕೊಂಡ್ಹೋಗಿ ತೂಗೋ ಮಂಚಕ್ಕೆ ಹಾಕು
ಬ್ಯಾಗನೆ ಕದವ ತೆಗಿ ಗೌರಿ ॥

ಕದವನ್ನ ತೆಗಿಯೋಕೆ ನಾ ಸೀರೇನ ಉಟ್ಟಿಲ್ಲ
ಹೊತ್ತುಟ್ಟಲಿ ದೇವರೆ ಹೊರಗೀರಿ ॥

ಪೆಟ್ಟಿಗೆಲಿರುವ ಪಟ್ಟೆ ಸೀರೆಯುಟ್ಟು
ಕಟ್ಟಾನೆ ಕದವ ತೆಗಿ ಗೌರಿ ॥

ಕದವನ್ನೆ ತೆಗೆದಾಳೆ ಕೈ ಹೂದುನಕ್ಕಾಳೆ
ತಂದಿಟ್ಟಳೆರಡು ಮಣೆಗಳ ॥

ಚಿನ್ನದ ಗಿಂಡಿಲಿ ಪನ್ನೀರ ತಕ್ಕೊಂಡು
ಅವಳೊಂದೆ ಪಾದವ ತೊಳೆದಾಳೆ ॥

ಎಂದಾರು ಬಂದಾರೆ ಎರಡು ಪಾದ ತೊಳಿತಿದ್ದೆ
ಇವತ್ತೊಂದು ಪಾದವ ತೊಳೆದಲ್ಲೆ । ಎಲೆ ಗೌರಿ
ನಿನಗಿಬ್ಬರುಂಟೇನೆ ಪುರುಷರು ॥

ಅಂಜಿದೆ ಶಿವನೆ ನಿಮ್ಮಣಕಾದ ಮಾತಿಗೆ
ಸುರಗಿನ ಕೆಂಜಾಡೆ ಮಗುಟಾದ । ಒಳಗಿರೆ
ಗಂಗಿಗೆ ಒಂದು ನನಗೊಂದು ॥

ಗಂಗೆ ಬಂದ ಸುದ್ದಿ ಗೌರಿಗ್ಯಾರು ಹೇಳಿದರೋ
ಅದೇಳ್ ಪುರದಿಂದ ಗಿಣಿರಾಮ । ಬಂದವನೆ
ಅವರಕ್ಕಗೊಂದು ಮಾತ ಉರುಬವನೆ ॥

ಹಕ್ಕಿಯ ಹಿಡಿಸುವೆ ರೆಕ್ಕೆಯ ತರಿಸುವೆ
ಬೆಕ್ಕಿನ ಮುಂದೆ ಮಡಗುವೆ । ಎಲೆಗೌರಿ
ಸೊಕ್ಕಿನ ಹಕ್ಕಿ ಮಡಗುವೆ ॥

ಚಿನ್ನದ ಬಾಚಣಿಗೆ ರನ್ನದ ಸೀರಣಿಗೆ
ರನ್ನ ಚಿನ್ನದ ಕೊಣದೆಣ್ಣೆ । ತಕ್ಕೊಂಡು
ಸುರಗಿಕೆಂಜಾಡೆ ಅಳದಾಳೆ ॥

ಅದರೊಳಗೆ ಗಂಗೆ ನಗು ನಗುತ ಕುಂತವಳೆ
ಮಂಚದ ಮೇಲೆ ಶಿವರಾಯ । ಕೂತುಕೊಂಡು
ಅಂಜಬೇಡ ಗಂಗೆ ಗೌರೀಗೇ ॥

ನಾ ಅಂಜುವೆನು ಅತ್ತೆಗೆ ನಾ ಅಂಜುವೆನು ಮಾವಗೆ
ನಾ ಅಂಜೆನು ಸರಿಯ ಸವತಿಗೆ । ಶಿವರಾಯ
ಅಂಜೇನು ಸರಿಯ ಸವತಿಗೆ ॥

ಗಂಗೆಗೂ ಗೌರಿಗೂ ಹತ್ತೀತೆ ಕಾಳಗ
ಗಂಗೆಯ ಕುಲವ ಗೌರಮ್ಮ । ಎತ್ತಿಕೊಂಡು
ಹಂಗಿಸ್ಯಾಡಾಳೆ ಸವತಿಯ ॥

ಹರಗೋಲ ಕಾಕೋರು ಹುಟ್ಟಿಯ ಬಗೆಯೋರು
ಹರುಗುಲಕ್ಕೆ ಹಿಟ್ಟು ಹೊರುವೋರು । ಬೆಸ್ತಾರ ಹುಡುಗಿಯ
ಎಲ್ಲೋಗಿ ತಂದ್ಯೋ ಶಿವರಾಯ ॥

ಕಾಟಿ ಕಾಯೋರು ರಾಟೆಯ ನೂಲೋರು
ಸತ್ತ ಮೀನ ಸಂತೇಲಿ ಮಾರೋರು । ಬೆಸ್ತರ ಹುಡುಗಿ
ಎಲ್ಲೋಗಿ ತಂದೋ ಶಿವರಾಯ ॥

ಆನೆಯ ಮೇಲೋಗೊ ನಿಮ್ಮ ಅಪ್ಪಂದಿರು
ದಾನಕ್ಕೆ ಕೈಯ ನೀಡುತಾರೆ । ಎಲೆಗೌರಿ
ನೀ ಅಚ್ಚ ಹಾರೋರ ಮಗಳಲ್ಲೆ ॥

ಒಂಟೆ ಮಾಲೋಗರ ನಿಮ್ಮ ಅಣ್ಣಂದಿರು
ವಸ್ತ್ರಕ್ಕೆ ಕೈಯ ನೀಡೋರು । ಎಲೆ ಗೌರಿ
ನೀ ಕೆಂಪು ಹಾರುವರ ಮಗಳಲ್ಲೆ ॥

ನೀ ಅಕ್ಕನಾಗು ಹೊತ್ತಿಗೆ ದಕ್ಕಿಸಿದೆ ಈ ಮಾತ
ನೀ ಅಕ್ಕಲ್ಲದೆ ಪರಬಳು । ಆಗಿದ್ದರೆ
ನುಗ್ಗಿಸುವೆ ಮೀನ ಮೊಸಳೆಯ ॥

(ಗೌರಿ ತನ್ನ ತವರು ಮನೆಗೆ ಹೊರಡುತ್ತಾಳೆ)

ಸಾಲಿನಾನೊಲ್ಲೆ ಸಣ್ಣ ಮುತ್ತ ನಾನೊಲ್ಲೆ
ಸಣ್ಣ ಮಾಳಿಗೆಲಿ ನಾ ಇರುಲೊಲ್ಲೆ । ಶಿವರಾಯ
ನಾ ಹೋಗಿ ಬತ್ತೀನಿ ತೌವರಿಗೆ ॥

ಹಿಪ್ಪೆ ಹೂವಿನಂಗೆ ಕೆಪ್ಪೆಲ್ಲ ನೆರೆ ಬರಲಿ
ನಮ್ಮಪ್ಪಂದಿರಿರಲಿ ಮುದುಕರು । ಶಿವರಾಯ
ನಾನೊಪ್ಪತ್ತು ಇದ್ದು ಬರುತನೆ ॥

ಹಣ್ಣೆ ಹೂವಿನಂಗೆ ಕೆನ್ನೆಲ್ಲ ನೆರೆ ಬಂದೋ
ನಿಮ್ಮಣ್ಣಂದಿರೆಲ್ಲ ಮುದುಕರು । ಎಲೆ ಗೌರಿ
ಅಲ್ಲೇನೆ ನಿನಗೆ ತೌರಾಸೆ ॥

ಹಣ್ಣೆ ಹೂವಿನಂಗೆ ಕೆನ್ನೆಲ್ಲಾ ನೆರೆ ಬರಲಿ
ನಮ್ಮಣ್ಣಂದಿರೆಲ್ಲ ಮುದುಕರು । ಶಿವರಾಯ
ನಾನೊಪ್ಪತ್ತು ಇದ್ದು ಬರುತ್ತೀನಿ ॥

ಅಂಬಲಿ ಕುಡಿಯೋರು ಕಂಬಳಿ ಹೊದಿಯೋರು
ಕಂಬದ ಸಾಲಲ್ಲಿ ಒರಗೋರು । ಎಲೆ ಗೌರಿ
ನಿನಗ್ಯಾಕೆ ಇನ್ನು ತವರಾಸೆ ॥

ಅಂಬಲಿ ಕುಡಿಯಾಲಿ ಕಂಬಳಿ ಹೊದಿಯಾಲಿ
ಅವರು ಕಂಬದ ಸಾಲಲ್ಲಿ ಒರಗಾಲಿ । ಶಿವರಾಯ
ನಾ ಅರಗಳಿಗೆ ಹೋಗಿ ಬರತೇನೆ ॥

ಗೌರಿ ಸುತುಗನಾಗಿ ಎರಡು ಮೂರು ದಿನವಾದೋ
ಹೋಗಿ ಗಂಗಮ್ಮ ಔತವಳೆ । ಶಿವರಾಯ
ಹೋಗಿ ಗಂಗಮ್ಮನ ಕರೆತನ್ನಿ ॥

ಹಾಲಿನಡ್ಡೆ ಕಳುಹುವೆ ಸೂತುಗ ಕಳಿ ಗೌರಿ
ಹಾಲಲ್ಲಿ ಸೂತುಗ ಕಳಿಲಿಲ್ಲ । ಶಿವರಾಯ
ಹೋಗಿ ಗಂಗಮ್ಮನ ಕರೆ ತನ್ನಿ ॥

ತುಪ್ಪದಡ್ಡೆ ಕಳುಹೆನು ಸೂತುಗ ಕಳಿ ಗೌರಿ
ತುಪ್ಪದಲ್ಲಿ ಸೂತುಗ ಕಳಿಲಿಲ್ಲ । ಶಿವರಾಯ
ಹೋಗಿ ಗಂಗಮ್ಮನ ಕರೆ ತನ್ನಿ ॥

ಎಳೆ ನೀರಿನಡ್ಡೆ ಕಳುಹೇನು ಎಲೆ ಗೌರಿ
ಎಳಿ ನೀರಿನಲ್ಲಿ ಸೂತುಗ ಕಳಿನಿಲ್ಲ । ಶಿವರಾಯ
ನೀವೋಗಿ ಗಂಗಮ್ಮನ ಕರೆ ತನ್ನಿ

ಗಂಗೆ ಕರಿಯಾಕೆ ಅವಳ್ನಾಡಿದ್ದಿ ಅಂದಿದ್ದಿ
ನಿನ್ನ ಮಗ ಈರಣ್ಣನ ಕಳುವೆಂದ ॥

ಮಗ ಈರಣ್ಣ ಬಾರಪ್ಪ ನೀನ್ ಇಲ್ಲಿ
ನೀ ಹೋಗಿ ಚಿಕ್ಕವ್ವನ ಕರೆ ತಾರೋ ॥

ಬಿಲ್ಲನ್ನು ಬಿಸುಟನು ಚಂದ್ರಾಯ ಹಿಡಿಕಂಡು
ಹೊಂಟ ಚಿಕ್ಕವ್ವನ ಕರೆಯಾಕೆ ॥

ಪೆಟ್ಟಿಗೆಲಿರುವ ಪಟ್ಟೆಯ ಸೀರೆ ತಕ್ಕೊ
ಚೂಚಿ ಮಲ್ಲಿಗೆ ಸರತಕ್ಕೊ । ಈರಣ್ಣ
ಹೋಗಿ ಚಿಕ್ಕವ್ವನ ಕರೆ ತಾರೊ ॥

ಇಂಬಿಹಣ್ಣಿನಂಗೆ ತುಂಬಿ ಬಾರೆ ಚಿಕ್ಕವ್ವ
ನಾ ಕಂದ ಬಂದೀವ್ನಿ ಕರೆಯೋಕೆ ॥

ಆಗಿನ ಕಾಲದಿ ನಮ್ಮವ್ವ ಅಂದವಳೆ ಆಡವಳೆ
ಬಾಲ ಬಂದೀವ್ನಿ ಕರೆಯೋಕೆ ॥

ಬಾಳೆ ಹಣ್ಣಿನಂಗೆ ಬಾಗಿ ಬಾರೆ ಚಿಕ್ಕವ್ವ
ನಾನು ಬಾಲ ಬಂದೀವ್ನಿ ಕರೆಯೋಕೆ ॥

ಇಂಬಿ ಹಣ್ಣಿನಂಗೆ ತುಂಬಿ ಬಂದಳು ಗಂಗೆ
ಇಂಬಾಗಿ ಬಿಡೌವಳ ಪೌಳಿಯ ॥[೬೨]

ಪ್ರಸ್ತುತ ಪೌರಾಣಿಕ ಗೀತೆಗಳು ಶಿವನು ಗೌರಿ ಹಾಗೂ ಗಂಗಮ್ಮನನ್ನು ವಿವಾಹವಾಗಲು ಪಟ್ಟ ಪರಿಶ್ರಮ, ಸುತ್ತಾಟಗಳನ್ನು ತಿಳಿಯಪಡಿಸುತ್ತದೆ. ಗೌರಮ್ಮನನ್ನು ತರ ಹೋಗಿ ಬಾಳೆಯ ಮರವನ್ನು ಒರಗಿದ ಹಾಗೂ ಗಂಗಮ್ಮನನ್ನು ತರ ಹೋಗಿ ದಾಳಿಂಬಿ ಮರವನ್ನು ಒರಗಿದ ಶಿವನ ಚಿತ್ರಣಗಳು ಇಲ್ಲಿ ಕಂಡುಬರುತ್ತವೆ. ಅಲ್ಲದೆ ಲೋಕವೆಲ್ಲವನ್ನು ಸಲಹುವ ಶಿವರಾಯನನ್ನು ಮದುವೆಯಾಗಲು ಯಾಕೆ ಒಲ್ಲೆ ಎನ್ನುತ್ತೀಯ ಎಂದು ಮುದ್ದು ಗೌರಮ್ಮನನ್ನು ಕೇಳುವ ವಿವರಗಳು ಹಾಗೂ ಹತ್ತು ವರ್ಷದ ಚಿಕ್ಕ ಪ್ರಾಯದಲ್ಲಿಯೆ ಶಿವನಿಗೆ ಸಿಕ್ಕಿದ ವಿವರಗಳು ಇಲ್ಲಿ ತಿಳಿದುಬರುತ್ತವೆ.

ಶಿವನಿಗೆ ಮದುವೆ ಮಾಡಿಕೊಟ್ಟ ಗೌರಿಯ ಮೂವರು ಅಣ್ಣಂದಿರಲ್ಲಿ ಒಬ್ಬರು ಮಲ್ಲಿಗೆ, ಇನ್ನೊಬ್ಬರು ಸಂಪಿಗೆ, ಮತ್ತೊಬ್ಬರು ಚನ್ನಬಸವಯ್ಯನನ್ನು ಕೊಟ್ಟ ಸಂಗತಿಗಳಿವೆ. ಜೊತೆಗೆ ಶಿವನು ಕಂಡ ಕನಸಿನ ವಿವರಗಳು, ಗಂಗೆಯನ್ನು ಸವತಿಯಾಗಿ ತರುವ ಸಂಗತಿಗಳು ಸಹ ತಿಳಿಯುತ್ತವೆ. ಹೊಳೆಯಲ್ಲಿ ನೀರ ಮೊಗೆಯುವ ಬಾಲೆಗೆ ಶಿವನು ಮನಸೋತು ಮರುಳಾಗುವ ಬಗೆ, 'ಬಂದೆನ್ನ ಜಡಿಯೊಳಗೆ ಇರುಗಂಗೆ' ಎಂದು ತನ್ನ ಪ್ರೇಮ ನಿವೇದನೆಯನ್ನು ತಿಳಿಸುವ ಪರಿ, ಇವುಗಳೆಲ್ಲವು ಜನಪದರ ಕಲ್ಪನಾ ರಮ್ಯತೆಗೆ ಹಿಡಿದ ಕನ್ನಡಿಯಾಗಿದೆ.

ಅಲ್ಲದೆ ಗಂಗೆಗೆ ತನ್ನನ್ನು ವಿವಾಹವಾಗುವಂತೆ ಕೇಳಿದಾಗ ಆಕೆ ನಿನಗೆ ಮದುವೆಯಾಗಿ ಹೆಂಡತಿ, ಮಕ್ಕಳಿದ್ದಾರೆ ಎಂದದ್ದಕ್ಕೆ ಶಿವನು ನನಗೆ ಹೆಂಡಿರು ಮಕ್ಕಳಿಲ್ಲ ಎಂದು ಸುಳ್ಳು ಹೇಳುವ ವಿಚಾರಗಳೆಲ್ಲವು ಜನಪದರ ಬದುಕಿನ ಕ್ರಮಗಳನ್ನು ಮನವರಿಕೆ ಮಾಡಿಕೊಡುತ್ತವೆ. ನಂತರ

ಗಂಗೆಯನ್ನು ವಿವಾಹ ಮಾಡಿಕೊಂಡು ಬಂದ ನಂತರ ಗಂಗೆ ಗೌರಿಯರ ನಡುವೆ ನಡೆಯುವ ಜಗಳ, ಗೌರಿಯು ತನ್ನ ತವರಿಗೆ ಹೋಗುವ ವಿವರಗಳೆಲ್ಲವು ಜನ ಸಾಮಾನ್ಯರ ಬದುಕನ್ನೇ ಸಾಕ್ಷೀಕರಿಸುತ್ತವೆ. ಮುಖ್ಯವಾಗಿ ಗಮನಿಸುವಂತಹ ಸಂಗತಿಯೆಂದರೆ ಇಲ್ಲಿ ಬಳಕೆಯಾಗಿರುವ ಈಬೂತಿ, ರುದ್ರಾಕ್ಷಿ, ಜೋಳಿಗೆ, ನೆನಯಕ್ಕಿ, ನೆನೆಗಡಲೆ, ಗೊನೆಯ ಬಾಳೆಯ ಹಣ್ಣು, ಚಿನ್ನದ ತೊಟ್ಟಿಲು, ಪಟ್ಟೆ ಸೀರೆ, ಹರಗೋಲು, ಬೆಸ್ತ, ಕಾಟಿ, ರಾಟೆ, ಸಂತೆ ಮೊದಲಾದ ಪರಿಕಲ್ಪನೆಗಳು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದಿರುವಂತಹವು. ಜನಪದರ ಬದುಕಿನ ಬಹುಮುಖ್ಯ ಭಾಗಗಳಾಗಿ ಜನಪದರೊಂದಿಗೆ ಇವುಗಳು ಬೆಸೆದುಕೊಂಡಿವೆ.

ಜನಪದರ ದೃಷ್ಟಿಯಲ್ಲಿ ಶಿವನು ಕೂಡ ಒಬ್ಬ ಸಾಮಾನ್ಯ ವ್ಯಕ್ತಿ. ಆತನಿಗೂ ಹಸಿವು, ಬಡತನಗಳಿವೆ. ಇಂತಹವನು ಭಿಕ್ಷಕ್ಕೆ ಬಂದ ವಿವರಗಳನ್ನು ಹೇಳಿಕೊಳ್ಳುತ್ತ ತಮ್ಮ ಬದುಕಿನ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ ಮುಂದುವರೆಯುವುದು ಕಂಡುಬರುತ್ತದೆ.

"ಶಿವನೂ ಭಿಕ್ಷಕ್ಕೆ ಬಂದ ನೋಡು ಬಾರೇ ತಂಗಿ
ನೀಡು ಬಾರೆ ತಂಗಿ ಯಿವರಂತ ಚಲ್ವರಿಲ್ಲಾ ನೋಡು ಬಾರೆ ।

ಒಂದೂ ಪಾದಕೆ ವಂಟಿ ಜಂಗ ಕಾಣೆ ತಂಗಿ
ಮತ್ತೊಂದು ಪಾದಕೆ ಕಿರುಗೆಜ್ಜೆ ಕಾಣೆ ।

ಕಟ್ಟಿ ತೋಳಿನಲ್ಲಿ ಲಿಂಗಾ ಕಾಣೆ ತಂಗಿ
ಲಿಂಗಕಾಣೇ ತಂಗಿ ಶಿವ ಮೆಟ್ಟೀದ ಹಾವಿಗೆ
ಹವಳಾ ಕಾಣೇ ।

ಕೆಮ್ಮುಗಲು ತಾನೆ ಕಾವಿವಲ್ಲಿ ಕಾಣೆ ತಂಗಿ
ವಲ್ಲಿಕಾಣೇ ಶಿವ ಘಲ್ಲು ಘಲ್ಲಂಬೊದೊಂದರ್ತ ಕಾಣೆ
ಹೆಲೀಗಲೀಗೆ ಮೃಗದ ಜಲ್ಲಿ ಕಾಣೆ ತಂಗಿ
ಜಲ್ಲಿ ಕಾಣೇ ತಂಗಿ ಜಗದೋಳು ಎಲ್ಲಾರಂತ
ಪುರುಷನೀತನಲ್ಲ ಕಾಣೆ ।

ನಗಿಮುಕಾ ಮುಖೆಲ್ಲಾ ಚಿನ್ನಕಾಣೇ ತಂಗಿ
ಚಿನ್ನ ಕಾಣೇ ಯೆದೆ ತಲಣಿಸಿ
ಪಂಚವಾಸಡಕ್ಕಿ ಕಾಣೆ

ವುಣ್ಣೀಮೆ ಚಂದ್ರಾಮನಂತ ಪಣೆಯು ಕಾಣೇ ತಂಗಿ
ಪಣೆಯು ಕಾಣೇ ಜಗದೊಳು ಯಲ್ಲರಂತ ಪುರುಷ
ಯೀತನಲ್ಲ ಕಾಣೇ

ಮಯ್ಯೆಲ್ಲ ಹೂವಿನ ಮತ್ತ ಕಾಣೇ ತಂಗಿ
ಮತ್ತ ಕಾಣೆ ಕೈಯ್ಯ ಪಿಡಿದ ನಾಗಬೆತ್ತ
ಆದಿಮಲ್ಲೇಶ ತಾನಂತೆ ಕಾಣೆ ತಂಗಿ
ತಾನಂತೆ ಕಾಣೆ

ನಡುಬೀದಿವಳಗೆ ನೋಟ ಚಂದ ಕಾಣೆ ತಂಗಿ
ಚಂದಕಾಣೆ ಮುಕ್ಕಣ್ಣ ಮೂರು ಲೋಕದ
ಕರ್ತಕಾಣೆ ತಂಗಿ ಕರ್ತಕಾಣೆ ।

......? ವೀರಭದ್ರಕಾಣೇ ತಂಗಿ
ಭದ್ರಕಾಣೇ ಮೂರು ದುರ್ಗಾದ ಗೆಲಿದ
ಮಹೇಶ ಕಾಣೆ

ಹೆಬ್ಬೂಲಿ ಚರ್ಮಾದ ಶಿದ್ಧಕಾಣೇ ತಂಗಿ
ಶಿದ್ಧಕಾಣೇ ನಾನೊಬ್ಬಾಳೆ ನೋಡಲಂಜುವೆ ಕಾಣೆ

ಶಿವನೂ ಭಿಕ್ಷಕೆ ಬಂದ ನೋಡು ಬಾರೇ ತಂಗಿ
ನೀಡು ಬಾರೆ ಯಿವರಂತ ಚಲ್ವರಿಲ್ಲ
ನೋಡು ಬಾರೇ ।[೨೩]

ಚೆಲುವನಾದ ಶಿವನು ಭಿಕ್ಷಕ್ಕೆ ಬಂದ ಸಂಗತಿಯನ್ನು ತಿಳಿಸುವ ಪ್ರಸ್ತುತ ಪೌರಾಣಿಕ ಗೀತೆಯು ಶಿವನಂತಹವನು ಸಹ ಸಾಮಾನ್ಯರಂತೆ ಜೀವಿಸುವ ಬದುಕಿನ ಕ್ರಮವನ್ನು ಸಹ ತಿಳಿಸುತ್ತದೆ. ಪಾದಗಳಿಗೆ ವಂಟಿ, ಜಂಗು, ಕಿರುಗೆಜ್ಜೆ ಕಟ್ಟಿಕೊಂಡು, ತೋಳಿನಲ್ಲಿ ಲಿಂಗವನ್ನು ಧರಿಸಿ ಹಾವಿಗೆಗಳನ್ನು ಮೆಟ್ಟು ಬಂದ ವಿವರಗಳನ್ನು ಜನಪದರು ಅದ್ಭುತವಾಗಿ ವರ್ಣಿಸಿದ್ದಾರೆ. ಈ ಗೀತೆಯಲ್ಲಿ ಭಿಕ್ಷಕ್ಕೆ ಬಂದ ಶಿವನು ಧರಿಸಿರುವ ವಸ್ತುಗಳು ಹಾಗೂ ಅವುಗಳ ವರ್ಣನೆ ಜನಪದರ ಕಲ್ಪನೆ ಹಾಗೂ ವರ್ಣನಾ ರಮ್ಯತೆಗಳಿಗೆ ನಿದರ್ಶನವಾಗಿದೆ.

ಕೊನೆ ಟಿಪ್ಪಣಿಗಳು

೧. ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಪು.ಸಂ–xxxvi.

೨. ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಪು.ಸಂ–೧೪೭ ರಿಂದ ೧೪೮.

೩. ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಪು.ಸಂ–೧೭೭ ರಿಂದ ೧೭೮.

೪. ಕಸುಬಿನ ಹಾಡುಗಳು, ಪು.ಸಂ–೧೩೨ ರಿಂದ ೧೩೮.

೫. ನಾಡಪದಗಳು, ಪು.ಸಂ–೬೧ ರಿಂದ ೬೨.

೬ ನಾಡಪದಗಳು, ಪು.ಸಂ–೬೩.

೭ ನಾಡಪದಗಳು, ಪು.ಸಂ–೬೩.

೮. ನಾಡಪದಗಳು, ಪು.ಸಂ–೬೩.

೯. ನಾಡಪದಗಳು, ಪು.ಸಂ–೬೩.

೧೦. ನಾಡಪದಗಳು, ಪು.ಸಂ–೬೫.

೧೧. ನಾಡಪದಗಳು, ಪು.ಸಂ–೬೪.

೧೨. ನಾಡಪದಗಳು, ಪು.ಸಂ–೬೬.

೧೩. ಗರತಿಯ ಹಾಡು, ಪು.ಸಂ–೫೪

೧೪. ಸುವರ್ಣ ಜನಪದ ಕಾವ್ಯ, ಪು.ಸಂ–೪೫೧.

೧೫. ಸುವರ್ಣ ಜನಪದ ಕಾವ್ಯ, ಪು.ಸಂ–೦೩.

೧೬. ಸುವರ್ಣ ಜನಪದ ಕಾವ್ಯ, ಪು.ಸಂ–೧೫.

೧೭. ಸುವರ್ಣ ಜಾನಪದ ಲೇಖನಗಳು, ಪು.ಸಂ–೨೯೦.

೧೮. ಸುವರ್ಣ ಜಾನಪದ ಲೇಖನಗಳು, ಪು.ಸಂ–೨೯೦.

೧೯. ಜನಪದ ಸಾಹಿತ್ಯ ಸಂವಾದ, ಪು.ಸಂ–೧೦.

೨೦. ಜನಪದ ಸಾಹಿತ್ಯ, ಪು.ಸಂ–೩೨.

೨೧. ಸುವರ್ಣ ಜಾನಪದ ಲೇಖನಗಳು, ಪು.ಸಂ–೨೮೪.

೨೨. ಸುವರ್ಣ ಜಾನಪದ ಲೇಖನಗಳು, ಪು.ಸಂ–೨೮೯.

೨೩. ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಪು.ಸಂ–೨೫೦ ರಿಂದ ೨೫೧.

೨೪. ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಪು.ಸಂ–೨೫೧ ರಿಂದ ೨೫೩.

೨೫. ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಪು.ಸಂ–೨೫೩.

೨೬. ಜನಪದ ಸಾಹಿತ್ಯ ಪ್ರಕಾರಗಳು, ಪು.ಸಂ–೧೫.

೨೭. ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ಪು.ಸಂ–೧೭೮ ರಿಂದ ೧೭೯.

೨೮. ನಾಡಪದಗಳು, ಪು.ಸಂ–೮೯ ರಿಂದ ೯೧.

೨೯. ನಾಡಪದಗಳು, ಪು.ಸಂ–೧೨೪ ರಿಂದ ೧೨೫.

೩೦. ನಾಡಪದಗಳು, ಪು.ಸಂ-೮೭.

೩೧. ನಾಡಪದಗಳು, ಪು.ಸಂ-೮೭.

೩೨. ಸುವರ್ಣ ಜನಪದ ಕಾವ್ಯ, ಪು.ಸಂ-೫೨೭ ರಿಂದ ೫೩೬.

೩೩. ಸುವರ್ಣ ಜನಪದ ಕಾವ್ಯ, ಪು.ಸಂ-೫೪೦ ರಿಂದ ೫೪೧.

ಅಧ್ಯಾಯ : ಆರು

ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಸಂವೇದನೆಗಳು

೬.೧ ಜನಪದ ಗೀತೆಗಳು ಮತ್ತು ರಾಷ್ಟ್ರೀಯ ಪ್ರಜ್ಞೆ

೬.೨ ಜನಪದ ಗೀತೆಗಳು ಮತ್ತು ನೀತಿ, ಮಾನವತೆಯ ಮೌಲ್ಯಗಳು ಹಾಗೂ ಸಂಬಂಧಗಳು

೬.೩ ಜನಪದ ಗೀತೆಗಳು, ಸಮಾನತೆ ಮತ್ತು ವೈಚಾರಿಕತೆಯ ವಿವೇಚನೆ

೬.೪ ಜನಪದ ಗೀತೆಗಳು ಮತ್ತು ಪಶು, ಪಕ್ಷಿ, ಪ್ರಾಣಿಗಳ ಜೀವನ ಪ್ರೀತಿ

೬.೫ ಜನಪದ ಗೀತೆಗಳು ಮತ್ತು ಜನಪದರ ಅವಿನಾಭಾವ ಸಂಬಂಧ

ಅಧ್ಯಾಯ : ಆರು

ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಸಂವೇದನೆಗಳು

ಜನಪದ ಗೀತೆಗಳು ಗ್ರಾಮೀಣ ಪ್ರದೇಶದ ಜನಪದರ ಜೀವನಾಡಿ. ಇವು ಹೆಣ್ಣಿನ ಮನಸ್ಸಿನ ಭಾವನೆಗಳಿಗೆ, ಆಕೆಯ ಸಂವೇದನೆಗಳಿಗೆ ಹೆಚ್ಚು ಒತ್ತು ಕೊಟ್ಟಿವೆ. ಇದರ ನಡುವೆಯೇ ಇವು ಸಂಸ್ಕೃತಿಯ ಭಾಗವಾಗಿಯೆ ಹುಟ್ಟಿ, ಜನಪದರ ಬದುಕಿನೊಟ್ಟಿಗೆ ಸಾಗಿವೆ. ಹೀಗೆ ಸಾಗುವಾಗ ಹಲವು ಸಾಂಸ್ಕೃತಿಕ ಸಂವೇದನೆಗಳನ್ನು ಇತರರಿಗೆ ಹಂಚುತ್ತ ತನ್ನ ಜೊತೆ ಕೊಂಡೊಯ್ಯುತ್ತಿರುವುದು ತಿಳಿದಿರುವ ಸಂಗತಿಯೆ. ಸಂಸ್ಕೃತಿಯನ್ನು ಬಿಟ್ಟು ಜನಪದ ಸಾಹಿತ್ಯವಾಗಲಿ, ಜನಪದರಾಗಲಿ ಇಲ್ಲ. ಜನಪದರು ತಮ್ಮ ಬದುಕಿನ ಪ್ರತಿ ಕ್ಷಣದಲ್ಲಿಯೂ ಸಾಂಸ್ಕೃತಿಕ ಮೌಲ್ಯಗಳನ್ನೆ ಅನುಸರಿಸುವರು. ರಾಷ್ಟ್ರೀಯ ಪ್ರಜ್ಞೆ, ಮಾನವೀಯ ಸಂಬಂಧಗಳು, ಜೀವನ ಮೌಲ್ಯಗಳು, ಸಮಾನತೆ, ವೈಚಾರಿಕತೆಯ ವಿವೇಚನೆ, ಪಶು, ಪಕ್ಷಿಗಳ ಮೇಲಿನ ಜೀವನ ಪ್ರೀತಿ, ಜನಪದರೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧ ಮೊದಲಾದ ಸಾಂಸ್ಕೃತಿಕ ಅನನ್ಯತೆಯ ವಿಚಾರಗಳನ್ನು ಜನಪದ ಗೀತೆಗಳು ಪ್ರತಿಪಾದಿಸುತ್ತಲೇ ಬಂದಿವೆ. ಜನಪದ ಗೀತೆಗಳು ಸಂಸ್ಕೃತಿಗೆ ಒಂದು ಅರ್ಥಪೂರ್ಣತೆಯನ್ನು ತಂದುಕೊಟ್ಟಿರುವಂತೆಯೆ ಸಂಸ್ಕೃತಿಯಿಂದ ತನ್ನ ಅನನ್ಯತೆಯನ್ನು ಜನಪದ ಗೀತೆಗಳು ಹೆಚ್ಚಿಸಿಕೊಂಡಿವೆ. ಈ ಹಿನ್ನೆಲೆಯಲ್ಲಿ ಜನಪದ ಗೀತೆಗಳಲ್ಲಿನ ಸಾಂಸ್ಕೃತಿಕ ಸಂವೇದನೆಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಅರ್ಥಪೂರ್ಣವಾದುದು.

೬.೧. ಜನಪದ ಗೀತೆಗಳು ಮತ್ತು ರಾಷ್ಟ್ರೀಯ ಪ್ರಜ್ಞೆ

'ಸರ್ವರೂ ಒಂದೇ' ಎಂಬ ಮನೋಭಾವನೆಯಿಂದ ಜೀವಿಸುವಂತೆ ಪ್ರೇರೇಪಿಸುವ ಪ್ರಜ್ಞೆಯೆ ರಾಷ್ಟ್ರೀಯ ಪ್ರಜ್ಞೆ, ನಡೆ, ನುಡಿ, ಮತ, ಧರ್ಮಗಳು ಬೇರೆ ಬೇರೆಯಾಗಿದ್ದರೂ ಒಂದೇ ಭೂ ಪ್ರದೇಶದಲ್ಲಿ ಶಾಂತಿಯುತ ಬದುಕನ್ನು ಸಾಗಿಸುವಂತಹ ಭಾವೈಕ್ಯತೆಯ ಭಾವನೆಗಳನ್ನು ಈ ರಾಷ್ಟ್ರೀಯ ಪ್ರಜ್ಞೆ ನಮ್ಮಲ್ಲಿ ಮೂಡಿಸಿದೆ. ಪ್ರಾದೇಶಿಕವಾಗಿ ಭಿನ್ನತೆ ಇದ್ದರೂ ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡಿದ್ದೇವೆ. ಭಾರತದಲ್ಲಿ ಅನೇಕ ಜನಾಂಗ, ಮತ, ಪಂಥಗಳಿದ್ದರೂ ನಾವೆಲ್ಲ ಭಾರತೀಯರು ಎಂಬ ರಾಷ್ಟ್ರೀಯ ಭಾವೈಕ್ಯತೆಯ ಬಂಧ ನಮ್ಮನ್ನೆಲ್ಲ ಒಂದುಗೂಡಿಸಿದೆ.

ಈ ದೃಷ್ಟಿಯಿಂದ ಕನ್ನಡ ಜಾನಪದ ಸಾಹಿತ್ಯದಲ್ಲಿಯೂ ಸಹ ರಾಷ್ಟ್ರೀಯ ಪ್ರಜ್ಞೆಯನ್ನು ಅಭಿವ್ಯಕ್ತಿಪಡಿಸಿರುವ ಅಂಶಗಳು ಕಂಡುಬರುತ್ತವೆ. ಗಾದೆಗಳು, ತ್ರಿಪದಿಗಳು, ಗೀತೆಗಳು, ಲಾವಣಿಗಳು,

ಗೀಗೀ ಹಾಡುಗಳು, ಕುಣಿತಗಳು, ಬಯಲಾಟಗಳು, ಕರ್ಬಲ್ ಹಾಡುಗಳು ಮೊದಲಾದ ಸಾಹಿತ್ಯ ಪ್ರಕಾರಗಳು ನಮಗೆ ರಾಷ್ಟ್ರೀಯ ಪ್ರಜ್ಞೆಯನ್ನು ಬಿಂಬಿಸಿರುವುದನ್ನು ಕಾಣಬಹುದು. 'ಗೆಳೆತನಕ ಜಾತಿಯಿಲ್ಲ, ಗಂಗೆಗೆ ಹೊಲೆಯಿಲ್ಲ' ಎಂಬ ಗಾದೆ ಮಾತು ಎಲ್ಲರೂ ಸಮಾನರು ಎಂಬ ಭಾವೈಕ್ಯತೆಯ ಸಾರವನ್ನು ಅಭಿವ್ಯಕ್ತಪಡಿಸುತ್ತಿದೆ.

"ಅಂತೂ ರಾಜಕೀಯವಾಗಿ ನಾಡು ಹರಿದು ಹಂಚಿ ಹೋಗಿದ್ದ ಕಾಲದಲ್ಲಿ, ಯಾವ ಸಂಪರ್ಕ ಸಾಧನಗಳೂ ಇಲ್ಲದಿದ್ದ ದಿನಗಳಲ್ಲಿ ಈ ಜನಪದ ಗೀತೆಗಳು ನಾಡನ್ನೆಲ್ಲ ಸಂಚರಿಸಿ, ಭಾವೈಕ್ಯವನ್ನು ಸಾಧಿಸಿ, ಸಂಸ್ಕೃತಿ ಕರ್ಣಾಟಕವನ್ನು ಕಟ್ಟುವ ಕೆಲಸ ಮಾಡಿದುವೆಂಬುದು ಮಹತ್ವದ ಸಂಗತಿಯಾಗಿದೆ"[೧] ಎಂಬ ಮಾತುಗಳು ಸ್ವಾತಂತ್ರ್ಯ ಚಳುವಳಿ ಹಾಗೂ ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಜನಪದ ಗೀತೆಗಳು ವಹಿಸಿದ ಜವಾಬ್ದಾರಿಯುತವಾದ ಪಾತ್ರವನ್ನು ತಿಳಿಸಿಕೊಡುತ್ತವೆ.

ಜನಪದ ಗೀತೆಗಳು ಶಾಂತಿಯನ್ನು ಬಯಸುವಂತಹವು. ಗದ್ದಲ, ಅಶಾಂತಿಯನ್ನು ಅವು ಎಂದಿಗೂ ಬಯಸುವುದಿಲ್ಲ. ರಾಷ್ಟ್ರೀಯ ಪ್ರಜ್ಞೆಯ ಮೂಲ ಭಾವವೇ ಶಾಂತಿ ಸ್ಥಾಪನೆಯಾಗಿದೆ. ಈ ಹಿನ್ನೆಲೆಯಲ್ಲಿ ಜನಪದ ಗೀತೆಗಳು ಸಹಬಾಳ್ವೆಯ ಆಶಯಗಳನ್ನು ಯಾವಾಗಲೂ ಅಭಿವ್ಯಕ್ತಿಸುತ್ತಿರುತ್ತವೆ.

"ಮನಕ ಶಾಂತಿ ಬೇಕ, ಮನಿಗೆ ಶಾಂತಿ ಬೇಕ
ಶಾಂತಿ ಬೇಕ ಮೊದಲು ದೇಶಕ । ಅಡವೀಶನ
ಶಾಂತೆಂಬ ಮಂತ್ರ ಹಿಡಿದೇನ ॥"[೨]

ಎಂದು ಗರತಿಯೊಬ್ಬಳು ಆಶಿಸುವ ಅಭಿಪ್ರಾಯ ಸಮಕಾಲೀನ ಸಮಾಜಕ್ಕೆ ಬಹು ಮುಖ್ಯವಾದವು. ಮನೆ ಮತ್ತು ಮನಸ್ಸುಗಳಿಗೆ ಶಾಂತಿ ಬೇಕು. ಅದರಂತೆಯೆ ಮೊದಲು ದೇಶಕ್ಕೆ ಶಾಂತಿ ಬೇಕು. ದೇಶವು ಶಾಂತವಾಗಿದ್ದರೆ ಮನ, ಮನೆಗಳು ಶಾಂತವಾಗಿರುತ್ತವೆ ಎಂಬ ಅಭಿಪ್ರಾಯ ಈ ಜನಪದ ಗೀತೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಜನಪದ ಗೀತೆಗಳ ಆಶಯ ಇಂದು ಹೆಚ್ಚು ಪ್ರಸ್ತುತವಾಗಿದೆ.

ಅಲ್ಲದೆ 'ತಾನು ತಾಳಿಕೊಂಡಿರುವ ಸಮಷ್ಟಿ ಪ್ರಜ್ಞೆಯಿಂದಾಗಿ ಜನಪದ ಸಾಹಿತ್ಯ ನಮ್ಮ ನಾಡಿನ ಐಕ್ಯದ ಸಂಕೇತವಾಗಿದೆ. ರಾಜಕೀಯ ನಮ್ಮನ್ನು ಒಡೆಯುತ್ತದೆ, ಜಾತೀಯತೆ ನಮ್ಮನ್ನು ಒಡೆಯುತ್ತದೆ, ನಾಗರಿಕ ಬುದ್ಧಿವಂತರ ಬರವಣಿಗೆ ನಮ್ಮನ್ನು ಒಡೆಯುತ್ತದೆ; ಈ ಪ್ರಾಕೃತ ಪಾಮರ ಸಾಹಿತ್ಯವಾದರೂ ನಮ್ಮನ್ನು ಕೂಡಿಸಲಿ' ಎಂಬ ಡಾ.ಸಿ.ಪಿ.ಕೆಯವರ ಅಭಿಪ್ರಾಯ ಅಕ್ಷರ ಸಹ ಸತ್ಯವಾದುದು.

ವಿವಿಧ ಜನಾಂಗಗಳು, ಸಂಸ್ಕೃತಿಗಳು, ಭಾಷೆಗಳು, ಧರ್ಮಗಳು ಇದ್ದರೂ ಜನಪದ ಗೀತೆಗಳು ಧರ್ಮ ಸಮನ್ವಯವನ್ನು ಬಯಸಿ, ಶಾಂತಿಯುತವಾದ ಸಹಬಾಳ್ವೆಯನ್ನು ಸಾಧಿಸಿವೆ.

"ಸರುವ ಗುರುಗಳಿಗೆ ಶರಣೆಂದು ಬಾಗಿನ
ಸರುವ ದರಮರು ಇರುವಲ್ಲಿ । ಬೆಳಗಿನ
ಸರುವ ದರಮೆಲ್ಲ ಸುಖಿಯಾಗಿರಲಿ"[೩]

ಈ ಜನಪದ ಗೀತೆಯಲ್ಲಿನ ಆಶಯ ಧರ್ಮ ಸಮನ್ವಯವನ್ನು ಬಯಸುವಂತಹದ್ದಾಗಿದೆ. ಎಲ್ಲ ಧರ್ಮದ ಗುರುಗಳಿಗೂ ಶರಣೆನ್ನುವ ಮನೋಭಾವ ರಾಷ್ಟ್ರೀಯ ಭಾವೈಕ್ಯದ ಸಂಕೇತವಾಗಿದೆ. ಹಾಗೆಯೇ ಸರ್ವ ಧರ್ಮದವರು ವಾಸಿಸುವ ಈ ನೆಲದಲ್ಲಿ ಎಲ್ಲ ಧರ್ಮದವರೂ ಸುಖಿಯಾಗಿ ಬಾಳಲಿ ಎಂಬ ಆಶಯವು ಜನಪದ ಗೀತೆಗಳಲ್ಲಿ ಅಡಗಿರುವ ರಾಷ್ಟ್ರೀಯ ಪ್ರಜ್ಞೆ ಹಾಗೂ ಭಾವೈಕ್ಯತೆಯ ಅಂಶಗಳನ್ನು ತಿಳಿಸಿಕೊಡುತ್ತದೆ.

ಇಲ್ಲಿ ಸೂಕ್ಷ್ಮವಾಗಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಲೋಕವೆಂಬ ಈ ಮನೆಯಲ್ಲಿ ಎಲ್ಲ ಧರ್ಮದವರು ಸುಖವಾಗಿ ಬಾಳಲಿ ಎಂದು ಹಾರೈಸುವ ಜನಪದ ಹೆಣ್ಣುಮಗಳೊಬ್ಬಳ ಮನಸ್ಥಿತಿ ನಿಜಕ್ಕೂ ಅನುಕರಣೀಯವಾದುದು. ವಿದ್ಯಾವಂತರೆನಿಸಿಕೊಂಡು ದೇಶ ವಿರೋಧಿ ಚಟುವಟಿಕೆಗಳಲ್ಲಿ ಭಾಗಿಯಾಗುತ್ತ ಅನೇಕ ಅಮಾಯಕರ ಸಾವು ನೋವುಗಳಿಗೆ ಕಾರಣವಾಗಿರುವಂತಹ ಈ ಹೊತ್ತಿನ ಸಮಾಜದಲ್ಲಿ ಬದುಕಿನ ಪಾಠಶಾಲೆಯ ವಿದ್ಯಾರ್ಥಿಯಾದ ಜನಪದ ಹೆಣ್ಣು ಮಗಳ ಈ ರೀತಿಯ ಭಾವೈಕ್ಯದ ಆಲೋಚನೆಗಳು ಇಂದಿನ ಸಮಾಜಕ್ಕೆ ಅತಿ ಅಗತ್ಯವಾದ ಯೋಚನಾ ಲಹರಿಗಳಾಗಿವೆ.

"ಜನ ಒಬ್ಬರಿಗೊಬ್ಬರು ಹತ್ತಿರವಾಗಿದ್ದಾಗ, ಸಮಾಜಕ್ಕೆ ಹತ್ತಿರವಾಗಿದ್ದಾಗ, ಒಂದು ಅವಿಭಾಜ್ಯ ವರ್ಗರಹಿತ ಗುಂಪಾಗಿದ್ದಾಗ ಅವರನ್ನು ಅಭಿವ್ಯಕ್ತಿಗೊಳಿಸಿರತಕ್ಕವು ಜನಪದ ಗೀತೆಗಳು. ಎಂತಲೇ ಅವು ಸಮಾಜದ ಐಕ್ಯದ ಅಭಿವ್ಯಕ್ತಿಯೂ ಹೌದು, ಐಕ್ಯವನ್ನು ರೂಪಿಸುವ ಶಕ್ತಿಯೂ ಹೌದು. ಹಾಗೆ ಅವುಗಳನ್ನು ಬಳಸಿಕೊಂಡಿರುವ ನಿದರ್ಶನಗಳಿವೆ. ಯಾವುದೇ ದೇಶ ವಿನಾಶದ ಅಪಾಯಕ್ಕೀಡಾದಾಗ ಜನಪದ ಗೀತೆ ರಾಷ್ಟ್ರೀಯತೆಯ ಅತ್ಯಂತ ಪ್ರಬಲ ಸಂಕೇತವಾಗಿ ನಿಲ್ಲುತ್ತದೆ. ಫಿನ್ಲೆಂಡಿನ ಉದಾಹರಣೆಯನ್ನು ಕೊಡಬಹುದು; ಅಲ್ಲಿನ ವೀರ ಕಾವ್ಯವಾದ 'ಕಲೇವಾಲ' ಜನತೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿ ನೀಡಿತು. ಯುಗೋಸ್ಲಾವಿಯದಲ್ಲಿ ಪರಂಪರೆಯನ್ನು ಲಾವಣಿ ಸಜೀವವಾಗಿ ಉಳಿಸಿರುವುದಲ್ಲದೆ, ಬಾಹ್ಯ ಶಕ್ತಿಗಳ ವಿರುದ್ಧ ಜನತೆಯ ಒಗ್ಗಟ್ಟನ್ನು ರೂಪಿಸಿದೆ. ಹಿಟ್ಲರ್ ಜನಪದ ಗೀತೆಗಳನ್ನು ಮತ್ತು ಹಬ್ಬಗಳನ್ನು ಐಕ್ಯಕಾರಕ ಶಕ್ತಿಯನ್ನಾಗಿ ಬಳಸಿಕೊಂಡು ಜರ್ಮನ್ನರಿಗೆ ತಮ್ಮ ರಾಷ್ಟ್ರೀಯ ಆಸ್ತಿಯ ಪ್ರಜ್ಞೆಯುಂಟು ಮಾಡಿದನೆಂದು ಹೇಳಲಾಗಿದೆ. ಇಂದು ರಷ್ಯಾ ಇದೇ ಕೆಲಸವನ್ನು ಮಾಡುತ್ತಿದೆ"[೪] ಎಂಬ ಮಾತುಗಳು ರಾಷ್ಟ್ರೀಯ ಪ್ರಜ್ಞೆ, ಭಾವೈಕ್ಯತೆ ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಜನಪದ ಗೀತೆಗಳು ವಹಿಸಿರುವ ಪಾತ್ರವನ್ನು ನಮಗೆ ಮನದಟ್ಟು ಮಾಡಿಕೊಡುತ್ತವೆ. ಅಲ್ಲದೆ ಸ್ವಾತಂತ್ರ್ಯಕ್ಕಾಗಿ ಜನಸಮುದಾಯವನ್ನು ಒಗ್ಗೂಡಿಸುವ ಹಾಗೂ ಅವರ ಮನದಲ್ಲಿ ಹೋರಾಟದ ತೀವ್ರತೆಯನ್ನು ಹೆಚ್ಚಿಸುವಲ್ಲಿ ಇವು ಗಮನಾರ್ಹವಾದ ಪಾತ್ರವನ್ನು ವಹಿಸಿವೆ.

೬.೨. ಜನಪದ ಗೀತೆಗಳು ಮತ್ತು ನೀತಿ, ಮಾನವೀಯ ಮೌಲ್ಯಗಳು ಹಾಗೂ ಸಂಬಂಧಗಳು

ಜನಪದ ಗೀತೆಗಳ ಬಹುಮುಖ್ಯ ಆಶಯವೇ ಮಾನವೀಯ ಮೌಲ್ಯ ಹಾಗೂ ಸಂಬಂಧಗಳ ಮಹತ್ವವನ್ನು ಅರ್ಥೈಸುವುದು. ಜೊತೆಗೆ ನೀತಿ ಹೇಳುವುದು ಜನಪದ ಗೀತೆಗಳ ಪ್ರಧಾನ ಗುಣ.

ನೀತಿಯನ್ನು ಹೇಳದೆ ಇರುವ ಜಾನಪದ ಗೀತೆಗಳೇ ಇಲ್ಲವೇನೋ ಎಂದು ಹೇಳಬಹುದು. ಏಕೆಂದರೆ ಜನಪದ ಗೀತೆಗಳು ಜನಪದರ ಬದುಕಿನ ಬವಣೆಯ ನಡುವೆ ಹುಟ್ಟಿಕೊಂಡವು. ಇಂತಹ ಬದುಕಿನ ಸಂದರ್ಭದಲ್ಲಿ ನ್ಯಾಯ, ಅನ್ಯಾಯ, ನೀತಿ, ಅನೀತಿ, ಧರ್ಮ, ಅಧರ್ಮ, ದುರಾಚಾರಗಳಂತಹ ಹಲವು ಸಾಮಾಜಿಕ ಏರುಪೇರುಗಳನ್ನು ಕಾಣುತ್ತೇವೆ. ಇದರಿಂದಾಗಿ ಹಲವರು ಸಾವು ನೋವುಗಳಿಗೆ ಒಳಗಾಗಿ ಕಷ್ಟಕರ ಜೀವನವನ್ನು ಅನುಭವಿಸುವುದನ್ನು ಕಂಡಿದ್ದೇವೆ. ಇಂತಹ ಸಂದರ್ಭಗಳನ್ನು ಕಣ್ಣಾರೆ ಕಂಡು ಅವುಗಳನ್ನು ತಮ್ಮ ಅನುಭವದ ಕುಲುಮೆಯಲ್ಲಿ ಬೇಯಿಸಿ ನೀತಿ ಪ್ರಧಾನವಾದ ಮೌಲ್ಯಗಳನ್ನಾಗಿಸಿ ನಮ್ಮ ಮುಂದೆ ಬಿಡುತ್ತಾರೆ.

ಕೆಟ್ಟತನ ಮಾಡಿದರೆ ಶಿಕ್ಷೆ ಕಟ್ಟಿಟ್ಟ ಬುತ್ತಿ, ಒಳಿತು ಮಾಡಿದರೆ ಸಮಾಜವು ಗೌರವಿಸುತ್ತದೆ ಎಂಬ ಸಾಮಾಜಿಕ ಆರೋಗ್ಯ ಪೂರ್ಣವಾದ ನೈತಿಕ ಪ್ರಜ್ಞೆಯ ನೀತಿ ನಿರೂಪಣೆ ಜನಪದ ಗೀತೆಗಳಲ್ಲಿ ಕಂಡುಬರುತ್ತದೆ. ಕೆಟ್ಟ ಕೆಲಸ ಮಾಡುವವರಿಗೆ ಶಿಕ್ಷೆ ಖಾಯಂ ಎಂಬ ಸಾರ್ವತ್ರಿಕವಾದ ಆಲೋಚನಾ ಕ್ರಮದಿಂದಾಗಿ ಹಲವು ತಪ್ಪುಗಳನ್ನು ತಡೆಯುವ ಉದ್ದೇಶ ಕೂಡ ಇದರ ಹಿಂದಿರುವುದು ಗಮನಿಸಬೇಕಾದ ವಿಚಾರ. ಈ ಹಿನ್ನೆಲೆಯಲ್ಲಿ ನಮ್ಮ ಜನಪದರು ತಮ್ಮ ಬದುಕಿನ ಪ್ರತಿ ಸಂದರ್ಭದಲ್ಲಿಯೂ ಈ ರೀತಿಯ ಆಶಯಗಳಿಗೆ ಒತ್ತು ಕೊಟ್ಟೇ ತಮ್ಮ ದೈನಂದಿನ ಬದುಕನ್ನು ಪ್ರಾರಂಭಿಸುತ್ತಾರೆ. ಇದಕ್ಕೆ ಅತ್ಯುತ್ತಮ ನಿದರ್ಶನ ಎಂದರೆ

"ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ । ಭೂಮಿತಾಯಿ
ಎದ್ದೊಂದು ಗಳಿಗಿ ನೆನದೇನ"[೫]

ಇದರಲ್ಲಿನ ಆಶಯ ಹಾಗೂ ನೀತಿಯನ್ನು ಗಮನಿಸಿದರೆ ಜನಪದರಲ್ಲಿನ ಮೌಲ್ಯಯುತವಾದ ಬದುಕಿನ ಕ್ರಮಗಳು ಅರಿವಾಗುತ್ತವೆ. ಇಂದು ನಮ್ಮ ಸಮಾಜವು ದೈವ ಹಾಗೂ ಧರ್ಮದ ವಿಚಾರವಾಗಿ ಗೊಂದಲಕ್ಕೆ ಸಿಲುಕಿದೆ. ಇಂತಹ ಸಮಯಕ್ಕಾಗಿಯೇ ಕಾದು ಕುಳಿತಿರುವ ಪಟ್ಟಭದ್ರ ಶಕ್ತಿಗಳು ಸಮಾಜವನ್ನು ಅಶಾಂತಿಯ ಗೂಡಾಗಿಸಿವೆ. ಮುಗ್ಧ ಜನರ ಪ್ರಾಣ ಹಾನಿಗಳಾಗುತ್ತಿವೆ. ಜೊತೆಗೆ ದೈವದ ಹೆಸರಿನಲ್ಲಿ ಮಾನ, ಪ್ರಾಣಗಳ ಜೊತೆಗೆ ಹಣದ ಸುಲಿಗೆಗಳು ನಡೆಯುತಿದ್ದು, ಅಮಾಯಕರು ಇದಕ್ಕೆ ಬಲಿಯಾಗುತ್ತಿದ್ದಾರೆ. ಆದರೆ ನಮ್ಮ ಜನಪದರು ಮಾತ್ರ ಈ ರೀತಿಯ ಯಾವುದೇ ಗೊಂದಲ ಹಾಗೂ ಅನ್ಯ ವಿಚಾರಗಳ ಪ್ರಚೋದನೆಗಳಿಗೆ ಒಳಗಾಗದೆ ಸ್ಪಷ್ಟವಾಗಿ ನುಡಿಯುತ್ತಾರೆ. ಬೆಳಿಗ್ಗೆ ಎದ್ದ ಕೂಡಲೆ ನಮಗೆಲ್ಲ ಅನ್ನದಾತೆಯಾದ ಭೂಮಿ ತಾಯಿಯನ್ನು ಸ್ಮರಿಸುತ್ತ ತಮ್ಮ ದಿನವನ್ನು ಪ್ರಾರಂಭಿಸುತ್ತಾರೆ ಎಂದು ಕವಿ ಹೇಳುತ್ತಾನೆ. ಇದು ಅತ್ಯುತ್ತಮವಾದ ನೀತಿ ಬೋಧನೆಯಾಗಿದೆ. ಏಕೆಂದರೆ ಭೂಮಿ ತಾಯಿ ಎಲ್ಲರಿಗೂ ಬೇಕಾದವಳು. ಅವಳಿಲ್ಲದೆ ಏನನ್ನು ಮಾಡಲು ಸಾಧ್ಯವಿಲ್ಲ. ಹಾಗಾಗಿ ಕ್ಷುಲ್ಲಕ ಮನಸ್ಥಿತಿಯ ಆಲೋಚನೆಗಳಿಂದ ಹೊರಬಂದು

ವಿಶಾಲವಾದ ಆತ್ಮ ಪ್ರಜ್ಞೆಯ ಮೂಲಕ ಬದುಕನ್ನು ಸಾಗಿಸಬೇಕೆಂಬ ಆಶಯವನ್ನು ಈ ಜನಪದ ಗೀತೆಯು ಇಲ್ಲಿ ವ್ಯಕ್ತಪಡಿಸುತ್ತದೆ.

"ಜನಪದ ಸಾಹಿತ್ಯದ ತಳಹದಿಯಾದ ವಾಸ್ತವಿಕತೆಯತ್ತ ಈ ಎಲ್ಲ ಅಂಶಗಳು ಬೆರಳು ಮಾಡುತ್ತವೆ. ತಾವು ಕಾಣದ್ದನ್ನು ಕುರಿತು ಜನಪದ ಕವಿಗಳು ಹಾಡಲಿಲ್ಲ; ಮಾತ್ರವಲ್ಲ, ತಮ್ಮ ಜೀವನದ ಯಾವ ಮುಖವನ್ನೂ ಅಭಿವ್ಯಕ್ತಿಸದೆ ಬಿಟ್ಟಿಲ್ಲ. ಕಾವ್ಯಪ್ರಜ್ಞೆ ಅವರಿಗಿರಲಿಲ್ಲವೆಂದೇ ಇದು ಸಾಧ್ಯವಾಯಿತ. ಅಂತೂ ಜೀವನದ ಒಳ್ಳೆಯದು, ಕೆಟ್ಟದ್ದು ಎಲ್ಲವನ್ನೂ ಜನಪದ ಸಾಹಿತ್ಯದಲ್ಲಿ ನೋಡುತ್ತೇವೆ; ಅಲ್ಲಿ ಅನೀತಿಯ ಚಿತ್ರಗಳಿಗೂ ಕೊರತೆಯಿಲ್ಲ. ಬದುಕಿನಲ್ಲಿರುವುದೆಲ್ಲ ಕಾವ್ಯದಲ್ಲಿ ಬಂದಿದೆ. ಆದರೆ ಅದು ಕಲೆಗಾಗಿ ಕಲೆ ಎಂಬ ನಿಲುವಿನಿಂದ ಬಂದದ್ದಲ್ಲ; ಆ ಮನೋಭಾವ ಜನಪದ ಸಾಹಿತ್ಯಕ್ಕೆ ಸಂಪೂರ್ಣ ಹೊರಗು. ಶಿಷ್ಟ ಸಾಹಿತ್ಯದಲ್ಲಿ ಎರಡು ಪ್ರವೃತ್ತಿಗಳನ್ನು ಕಾಣುತ್ತೇವೆ : ಬದುಕಿನ ನಗ್ನ ಸತ್ಯಕ್ಕೆ ಕಣ್ಣು ಮುಚ್ಚಿಕೊಂಡು ಒಳ್ಳೆಯದನ್ನು ಮಾತ್ರ ಚಿತ್ರಿಸುವುದೊಂದು; ವಾಸ್ತವಿಕತೆಯ ಹೆಸರಿನಲ್ಲಿ ಕೆಟ್ಟದ್ದನ್ನು ಅಥವಾ ಕೆಟ್ಟದ್ದನ್ನೆ ರೋಚಕವಾಗಿ, ಉದ್ರೇಕಕಾರಿಯಾಗಿ ಚಿತ್ರಿಸುವುದು ಮತ್ತೊಂದು. ಈ ಎರಡಕ್ಕೂ ಭಿನ್ನವಾದದ್ದು ಜನಪದ ಕಾವ್ಯ; ಅದು ಕೆಟ್ಟದ್ದನ್ನೂ ನಿರ್ಲಿಪ್ತವಾಗಿ ಹೇಳುತ್ತದೆ, ಆದರೆ ಜೀವನ ಮೌಲ್ಯಗಳಿಂದ ವಿಚ್ಛೇದನೆಗೊಳ್ಳುವುದಿಲ್ಲ. ನಮ್ಮಲ್ಲಿ ಬಂದ ಮೊತ್ತ ಮೊದಲನೆಯ ಜನಪದ ಗೀತ ಸಂಕಲನಕ್ಕೆ 'ಗರತಿಯ ಹಾಡು' ಎಂದು ನಾಮಕರಣ ಮಾಡಿದ್ದು ಸಾಂಕೇತಿಕವಾಗಿದೆ: ಜನಪದ ಕಾವ್ಯ 'ಗರತಿ ಸಂಮಿತ'ವೆ ವಿನಾ 'ರತಿ ಸಂಮಿತ'ವಲ್ಲ. ನೈತಿಕವಾದ ಒಂದು ನಿಲುವು ಸೂಕ್ಷ್ಮವಾಗಿ, ಧ್ವನಿಪೂರ್ಣವಾಗಿ, ಕಲೆಗೆ ಇನಿತೂ ಊನವಾಗದಂತೆ ಜನಪದ ಕವಿತೆಯನ್ನೆಲ್ಲ ಆವರಿಸಿರುವುದನ್ನು ನೋಡುತ್ತೇವೆ. ಇದನ್ನು ವ್ಯಾಪಕವಾದ ಅರ್ಥದಲ್ಲಿ ಶಿವ ಪ್ರಜ್ಞೆ ಎಂದು ಕರೆಯಬಹುದು. ಈ ಜೀವನ ಮೌಲ್ಯಗಳ ದೃಷ್ಟಿಯಿಂದ ಜನಪದ ಸಾಹಿತ್ಯವೆಲ್ಲ ಏಕ ಘಟಕವಾಗಿ ಅನುಭವಕ್ಕೆ ಬರುತ್ತದೆ; ಅದು ಸಮಷ್ಟಿನಿಷ್ಠವೆಂಬುದನ್ನು ಈ ದಿಶೆಯಲ್ಲಿ ಅರಿಯುತ್ತೇವೆ. ವೈವಿಧ್ಯದಲ್ಲಿ ಏಕತೆ ಅದರ ವೈಶಿಷ್ಟ್ಯ"[೬] ಎಂಬ ಅಭಿಪ್ರಾಯವು ಜನಪದ ಗೀತೆಗಳಲ್ಲಿನ ಪ್ರಧಾನವಾದ ಜೀವನ ಮೌಲ್ಯಗಳನ್ನು ಕುರಿತು ವಿವೇಚಿಸುತ್ತದೆ. ಮುಂದುವರೆದು

"ಹುಟ್ಟುವಾಗ ತರಲಿಲ್ಲ ಹೋಗುವಾಗ
ಒಯ್ಯಲಿಲ್ಲ ಸುಟ್ಟು ಸುಟ್ಟು
ಸುಣ್ಣದ್ಹರಳಾಯ್ತು । ದೇಹವು
ಕಷ್ಟವನು ಬಿಡಿಸೋ ಸೃಷ್ಟಿಗೊಡೆಯ॥"[೭]

ಎಂಬ ಗೀತೆಯು ಜೀವನ ಮೌಲ್ಯ ಹಾಗೂ ನೀತಿಯನ್ನು ಬಿತ್ತರಿಸುತ್ತದೆ. 'ಹುಟ್ಟುವಾಗ ತರಲಿಲ್ಲ ಹೋಗುವಾಗ ಒಯ್ಯಲಿಲ್ಲ' ಎಂಬ ಸಾಲು ಅದ್ಭುತವಾದ ಫಿಲಾಸಫಿಯನ್ನು ನಮಗೆ ತಿಳಿಸುತ್ತಿದೆ. ಈ ಜೀವನದಲ್ಲಿ ಇರುವವರೆಗೂ ಉತ್ತಮವಾದ ರೀತಿಯ ಬದುಕನ್ನು ನಡೆಸಬೇಕೆಂಬುದೆ ಇದರ ಪ್ರಮುಖ ಆಶಯ.

ಅಲ್ಲದೆ "ಮುಖ್ಯವಾಗಿ ಜೀವನ ಮೌಲ್ಯಗಳ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯವನ್ನು ಪರಿಶೀಲಿಸಬೇಕು. ಜನಪದ ಕಾವ್ಯ ನಾಗರಿಕ ಕಾವ್ಯದಿಂದ ಭಿನ್ನವಾಗಿರುವುದು ಬರಿಯ ಗ್ರಾಮ್ಯ ಭಾಷೆಯಿಂದಲ್ಲ; ಜೀವನ ಮೌಲ್ಯಗಳಲ್ಲಿ, ಮನೋಧರ್ಮದಲ್ಲಿ ಅಂತರವಿದೆ. ಉದಾಹರಣೆಗೆ, 'ಗೋವಿನ ಹಾಡು' ಪ್ರತಿಪಾದಿಸುವ ಅಹಿಂಸೆಯ ವಿಶಿಷ್ಟ ಮೌಲ್ಯ ಮತ್ತು ಪರಿಣಾಮ ನಮ್ಮ ಹಿಂದಿನ ಯಾವ ಕಾವ್ಯದಲ್ಲಿ ತಾನೆ ಸಿಕ್ಕೀತು? ಗಾಂಧೀಜಿ ಅಹಿಂಸಾ ತತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಎಷ್ಟೋ ಶತಮಾನಗಳ ಹಿಂದೆಯೆ ಈ 'ಗೋವಿನ ಹಾಡು' ರಚಿತವಾಯಿತು. ಕಾಯಕ ಪ್ರೀತಿ ಜನಪದ ಕಾವ್ಯದಲ್ಲಿ ಕಂಡುಬರುವ ಒಂದು ಮೂಲಭೂತ ಜೀವನ ಮೌಲ್ಯ; ಹಾಗೆ ನೋಡಿದರೆ ಜನಪದ ಕವಿತೆಯ ತಾಯಿ ಕಾಯಕ"[೧೮] ಎಂಬ ಮಾತುಗಳು ಜನಪದರ ಜೀವನ ಹಾಗೂ ಅವರು ಕಾಯಕಕ್ಕೆ ಕೊಟ್ಟ ಮಹತ್ವವನ್ನು ತಿಳಿಸುವ ಜೊತೆಗೆ ಅಲ್ಲಿನ ಮಾನವೀಯ ಮೌಲ್ಯಗಳನ್ನು ಸಹ ನಮ್ಮ ಗಮನಕ್ಕೆ ತಂದು ಕೊಡುತ್ತವೆ.

ಜನಪದ ಗೀತೆಗಳು ನೀತಿಯನ್ನು ಅಭಿವ್ಯಕ್ತಪಡಿಸುವಂತೆಯೆ ಮಾನವೀಯ ಮೌಲ್ಯ ಹಾಗೂ ಮನುಷ್ಯ ಸಂಬಂಧಗಳನ್ನು ಕುರಿತು ಸಹ ಚರ್ಚಿಸುತ್ತವೆ. ಇವು ಮಾನವನ ಭಾವುಕ ಲೋಕದ ಚಿತ್ರಣಗಳಾಗಿರುವ ಕಾರಣವಾಗಿ ತನ್ನೊಂದಿಗೆ ವಿವಿಧ ರೀತಿಯ ಸಂಬಂಧಗಳ ಮೌಲ್ಯಗಳನ್ನು ನಮಗೆ ತಿಳಿಸಿಕೊಡುತ್ತವೆ. ಗಂಡ – ಹೆಂಡತಿಯ ನಡುವಿನ ಸಂಬಂಧ, ತಾಯಿ – ಮಗುವಿನ ಸಂಬಂಧ, ಅಕ್ಕ – ತಮ್ಮನ ಸಂಬಂಧ, ಅಕ್ಕ – ತಂಗಿಯರ ಸಂಬಂಧ, ಗೆಳತಿಯರ ನಡುವಿನ ಸಂಬಂಧ, ಅತ್ತೆ – ಸೊಸೆಯರ ಸಂಬಂಧ, ತಂದೆ – ಮಗಳ ಸಂಬಂಧ, ಅಣ್ಣ – ತಂಗಿಯ ಸಂಬಂಧ ಹೀಗೆ ಜನಪದ ಗೀತೆಗಳಲ್ಲಿನ ಮನುಷ್ಯ ಸಂಬಂಧಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಜನಪದ ಗೀತೆಗಳಲ್ಲಿ ಹೆಣ್ಣು ಮಕ್ಕಳ ಗೀತೆಗಳೆ ಪ್ರಧಾನವಾಗಿರುವುದರಿಂದ ಅವುಗಳಲ್ಲಿ ಭಾವುಕತೆ, ಕೋಪ, ತಾಪ, ಕಾಮ, ಪ್ರೇಮ, ಪ್ರಣಯ, ನೀತಿ, ಹಾಸ್ಯ, ಸುಖ ಮುಂತಾದ ಭಾವಗಳು ಮೇಳೈಸಿಕೊಂಡಿವೆ. ಇವು ಮನುಷ್ಯ ಮನುಷ್ಯನ ನಡುವೆ ಸಂಬಂಧಗಳನ್ನು ಬೆಸೆಯುವ ಕಾರಣವಾಗಿ ಇಂದಿಗೂ ತನ್ನ ಮಹತ್ವವನ್ನು ಉಳಿಸಿಕೊಂಡಿವೆ.

ಶ್ರಮ ಜೀವಿಗಳಾದ ಜನಪದರು ತಮ್ಮ ಕೆಲಸ ಕಾರ್ಯಗಳ ಸಂದರ್ಭದಲ್ಲಿನ ದಣಿವನ್ನು ನಿವಾರಿಸಿಕೊಳ್ಳಲು ಹುಟ್ಟಿಕೊಂಡ ಜನಪದ ಗೀತೆಗಳು ಅರ್ಥ ವೈಶಾಲ್ಯದಲ್ಲಿ ಅಷ್ಟಕ್ಕೇ ನಿಲ್ಲದೆ ವಿಶಾಲವಾದ ಅರ್ಥ ಪರಂಪರೆಯನ್ನು ಹೊಂದಿರುವುದನ್ನು ಗಮನಿಸಬಹುದಾಗಿದೆ. ತವರನ್ನು ತೊರೆದು ಗಂಡನ ಮನೆಯನ್ನು ಸೇರುವ ಹೆಣ್ಣು, ತವರು ಮನೆ, ಗೆಳತಿಯರು, ಮನೆಗೆಲಸ, ಮಕ್ಕಳ ಪಾಲನೆ, ಕೃಷಿ ಕೆಲಸಗಳು, ಪತಿಯೊಂದಿಗಿನ ಒಡನಾಟ, ಸಂಭ್ರಮ ಮೊದಲಾದ ಜೀವನದ ಎಲ್ಲ ಸನ್ನಿವೇಶ ಹಾಗೂ ಸಂಗತಿಗಳಿಗೆ ತಾನು ಒಗ್ಗಿಕೊಂಡು ಬದುಕನ್ನು ಸಾಗಿಸಬೇಕಾಗಿದೆ.

ಅಂತಹ ಸನ್ನಿವೇಶಗಳಲ್ಲಿ ಜನಪದ ಗೀತೆಗಳ ಮೂಲಕ ತನ್ನ ಮನದ ಭಾವನೆಗಳನ್ನು ಅಭಿವ್ಯಕ್ತಿಸುತ್ತ ತನ್ನ ಮನದ ಬೇಸರಗಳನ್ನು ನೀಗಿಕೊಳ್ಳುವುದು ಹಾಗೂ ಬದುಕನ್ನು ಮುಂದುವರೆಸುವುದು

ಕಂಡುಬರುತ್ತದೆ. ಮದುವೆಯಾದ ಹೆಣ್ಣಿಗೆ ಪತಿಯೇ ದೈವ. ಎಷ್ಟೇ ಬಡತನಗಳಿರಲಿ, ಕಷ್ಟಗಳಿರಲಿ ಆತನೊಡನೆ ಬದುಕುತ್ತ ಅವುಗಳನ್ನೆಲ್ಲ ಮರೆತು ಬದುಕನ್ನು ಮುನ್ನಡೆಸುವುದು ನಮ್ಮ ಜನಪದ ಹೆಣ್ಣುಗಳ ಜೀವನ ಪ್ರೀತಿಗೆ ಹಿಡಿದ ಕೈಗನ್ನಡಿಯಾಗಿದೆ. ತಮ್ಮಿಬ್ಬರ ಬದುಕನ್ನು ಕುರಿತು ಆಕೆ ಹೀಗೆ ಹೇಳಿಕೊಳ್ಳುತ್ತಾಳೆ.

"ಗಂಡ – ಹೆಂಡಿರ ಜಗಳ ಗಂಧ ತೀಡಿದಾಂಗ
ನಿಂಗಕ ನೀರು ಎರೆದಾಂಗ । ಹಿರಿಹೊಳೆಯ
ಗಂಗವ್ವ ಸಾಗಿ ಹರಿದಾಂಗ ॥"[೯]

ಅಂದರೆ ಗಂಡ ಹೆಂಡಿರ ಬದುಕು ಎಂಬುದು ಜಗಳ, ಕೋಪ, ಪ್ರೀತಿ, ಮುನಿಸು ಮೊದಲಾದವುಗಳ ಮೂಲಕವೇ ಸಾಗುವಂತಹದ್ದು. ಹಾಗಾಗಿ ಜಗಳವೆಂಬುದು ಇಲ್ಲಿನ ಹೆಣ್ಣಿಗೆ ಗಂಧ ತೀಡಿದಂತೆ. ಅದು ಸಂಸಾರವನ್ನು ವಿಘಟಿಸುವ ಸಂಗತಿಯಾಗದೆ ತಮ್ಮಿಬ್ಬರ ಸಂಬಂಧವನ್ನು ಮತ್ತಷ್ಟು ಬೆಸೆಯುವ ಶಕ್ತಿ ಎಂಬಂತೆ ಪರಿಭಾವಿಸಿದ್ದಾರೆ. ಅಲ್ಲದೆ ಜಗಳಗಳಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂಬುದು ಜನಪದರಿಗೆ ಗೊತ್ತಿದೆ. ಹಾಗಾಗಿಯೆ 'ಗಂಡ ಹೆಂಡಿರ ಜಗಳ ಉಂಡು ಮಲಗುವವರೆಗೆ' ಎಂಬ ಅನುಭವ ಜನ್ಯ ಬದುಕು ಅವರದ್ದಾಗಿದೆ.

ಹೀಗೆಯೆ ತವರಿಗೆ ಹೋದ ಮಡದಿಯ ಕಾರಣವಾಗಿ ಒಬ್ಬಂಟಿಯಾದ ಪತಿಯ ಸಂದರ್ಭವನ್ನು ಕವಿ ಹೀಗೆ ವರ್ಣಿಸುತ್ತಾನೆ. ಮನುಷ್ಯ ಸಂಬಂಧಗಳ ಅದ್ಭುತ ಉಪಮೆಯಾಗಿ ಇದು ಕಂಡುಬರುತ್ತದೆ.

"ಅಡುಗಿಯ ಮನೆಯಾಗ ಮಡದಿಯ ಸುಳಿವಿಲ್ಲ
ಅಡುಗೆ ಬಾಯಿಗೆ ರುಚಿಯಿಲ್ಲ । ಹಡದವ್ವ
ಮಡದಿ ಹೋಗ್ಯಾಳ ತವರಿಗೆ ॥"[೧೦]

ಮಡದಿ ತವರಿಗೆ ಹೋಗಿರುವ ವಿವರಗಳನ್ನು ತಾಯಿಯಲ್ಲಿ ಕೇಳಿ ತಿಳಿದುಕೊಳ್ಳುತ್ತಾನೆ. ಏಕೆಂದರೆ ಅಡುಗಿಯ ಮನೆಯೊಳಗೆ ಹೆಂಡತಿಯ ಸುಳಿವಿಲ್ಲದ ಕಾರಣವಾಗಿ ಅಡುಗೆ ಬಾಯಿಗೆ ರುಚಿಸುತ್ತಿಲ್ಲ. ಅಂದರೆ ಬಡತನದ ಬವಣೆಯಲ್ಲೆ ಬದುಕಿದರೂ ಜೀವನ ಶ್ರೀಮಂತಿಕೆಯ ಗಂಡ ಹೆಂಡತಿಯರ ಸಂಬಂಧಗಳು ಅವೆಲ್ಲ ಕಷ್ಟಗಳನ್ನು ಮರೆಸುತ್ತಿದ್ದ ಅಂಶಗಳು ಇಲ್ಲಿ ತಿಳಿಯುತ್ತವೆ.

ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿಕೊಡುತ್ತಿರುವ ತನ್ನ ಮಗಳಿಗೆ ತಂದೆ ತಾಯಿಗಳು ಹೇಳುವ ನೀತಿಯ ಮಾತುಗಳು ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿವೆ.

"ಅತ್ತಿ ಮಾವಗಂಜಿ ಸುತ್ತೇಳು ನೆರೆಗಂಜಿ
ಮತ್ತ ನಲ್ಲ ಧನಿಗಂಜಿ । ನಡೆದರ
ಎಂಥ ಉತ್ತಮರ ಮಗಳಂದ"[೧೧]

ಸೊಸೆಯಾದವಳು ತನ್ನ ವೈಯಕ್ತಿಕ ಸುಖಕ್ಕಿಂತ ಕುಟುಂಬದ ಹಾಗೂ ಮನೆತನದ ಮರ್ಯಾದೆಗಳನ್ನು ಕಾಪಾಡಿಕೊಂಡು ಮುನ್ನಡೆಸಬೇಕು. ಹಾಗಾಗಿ ಮನೆಯಲ್ಲಿನ ಅತ್ತೆ ಮಾವರಿಗೆ

ಎದುರು ಮಾತನಾಡದೆ ಅವರ ಆಣತಿಯಂತೆ ಬದುಕಬೇಕು. ತನ್ನ ಸುತ್ತಲಿನ ನೆರೆ ಹೊರೆಗೂ ಕೂಡ ಅಂಜಿ, ತಾನೂ ಮದುವೆಯಾಗಿರುವ ಪತಿಗೂ ಕೂಡ ಅಂಜಿ ಆ ಮನೆಯಲ್ಲಿ ಬಾಳ್ವೆ ಮಾಡುವಂತೆ ಹರಸುತ್ತಾಳೆ. ಇಲ್ಲಿನ 'ಅಂಜಿ' ಪದ ಹೆದರಿ ಅಥವಾ ಅಳುಕುತ್ತ ಬದುಕುವುದಲ್ಲ. ಅದು ಆ ಹೆಣ್ಣು ಮಕ್ಕಳು ತಮಗೆ ತಾವೇ ಹಾಕಿಕೊಳ್ಳಬೇಕಾದ ನೈತಿಕ ನಿರ್ಬಂಧದ ವ್ಯಾಪ್ತಿಯಲ್ಲಿರುವಂತಹದ್ದು. ಎಲ್ಲರಲ್ಲು ತಗ್ಗಿ ಬಗ್ಗಿ ನಡೆಯಬೇಕೆಂಬ ನೀತಿ ಇದರಲ್ಲಿ ಅಡಗಿದೆ. ಗಂಡನ ಮನೆಯಲ್ಲಿ ಯಾವುದೇ ತೊಂದರೆ ಬಂದರೂ ಅವುಗಳನ್ನು ಅಲ್ಲಿಯೆ ಪರಿಹರಿಸಿಕೊಳ್ಳಬೇಕೆಂಬ ಕಿವಿ ಮಾತುಗಳೂ ಕೂಡ ಇಲ್ಲಿ ಅಡಗಿವೆ.

ತಾಯ್ತನ ಎಂಬುದು ನಮ್ಮ ಜನಪದ ಹೆಣ್ಣು ಮಕ್ಕಳು ಬಯಸುವ ಅರ್ಥ ಪೂರ್ಣವಾದ ಮೌಲ್ಯ. ಅದು ಅವರ ಪ್ರೇಮದ ಸಂಕೇತ, ಅಕ್ಕರೆಯ ಪ್ರತೀಕ. ಕೂಸು ಎಂತದ್ದೇ ಆಗಲಿ ತನಗೊಂದು ಮಗುವನ್ನು ಕೊಡು ಎಂಬುದು ಶಿವನಲ್ಲಿ ಆಕೆಯ ವಿನಮ್ರ ಬೇಡಿಕೆ.

"ಕಂದನ ಕೊಡು ಶಿವನೆ ಬಂಧನ ಪಡಲಾರೆ
ಹಂಗೀನ ಬಾನ ಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ"[೧೨]

ಹೆಣ್ಣಿನ ಜೀವನದ ಸಾರ್ಥಕ್ಯ ಆಕೆಯ ತಾಯ್ತನದಲ್ಲಿದೆ ಎಂಬುದು ನಮ್ಮ ಜನಪದರ ನಂಬಿಕೆ. ಆ ಕಾರಣವಾಗಿಯೆ ಬಂಜೆ ಎಂಬ ಶಬ್ದವನ್ನು ಹೊರಲಾಗುತ್ತಿಲ್ಲ. ದಯಮಾಡಿ ನನಗೆ ಕಂದನನ್ನು ಕೊಡು ಎಂದು ಶಿವನಲ್ಲಿ ಮೊರೆಯಿಡುತ್ತಾಳೆ. ಹಾಗೆಯೆ ಮಗುವನ್ನು ಪಡೆದ ನಂತರ ಅದರ ಆಟ, ಪಾಠ, ತುಂಟ ತನ, ನಲಿವುಗಳಲ್ಲಿಯೆ ತನ್ನ ಬದುಕಿನ ನೋವುಗಳನ್ನು ಮರೆಯುತ್ತಾಳೆ.

"ತೊಟ್ಟೀಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ । ಕಂದ್ಯೆಗ
ಮುತ್ತಿನಾ ದಿಟ್ಟಿ ತಗದೇನ॥"[೧೩]

ತನ್ನ ಮಗು ಮಲಗಿರುವ ಭಂಗಿ ಕೂಡ ಆಕೆಯ ಮನಸ್ಸಿಗೆ ಮುದ ನೀಡುತ್ತದೆ. ಅದಕ್ಕೆ ಮುತ್ತಿನ ದೃಷ್ಟಿಯನ್ನು ತೆಗೆಯುತ್ತೇನೆಂದು ಹೇಳಿಕೊಳ್ಳುತ್ತಾಳೆ. ಮಗುವೇ ಅವಳಿಗೆ ತನ್ನ ಪ್ರಪಂಚ. ಅದನ್ನು ನೋಡುತ್ತ ತನ್ನ ನೋವನ್ನು ಮರೆಯುತ್ತಾಳೆ. ಹೀಗೆಯೇ ತನ್ನ ತಮ್ಮನ ಮೇಲೆ ಅಕ್ಕರೆಯೂ ಅವಳಲ್ಲಿದೆ.

"ಸರದಾರ ಬರುವಾಗ ಸುರಿದಾವ ಮಲ್ಲೀಗಿ
ದೊರೆ ನನ್ನ ತಮ್ಮ ಬರುವಾಗ । ಯಾಲಕ್ಕಿ
ಗೊನೆ ಬಾಗಿ ಹಾಲ ಸುರಿದಾವ॥"[೧೪]

ತನ್ನ ತಮ್ಮ ಬರುವ ವೈಭವವನ್ನು ವರ್ಣಿಸುತ್ತಾಳೆ. ಅವನು ದೊರೆಗೆ ಸಮಾನನಾದವನು. ಅವನು ಬರುವಾಗ ಮಲ್ಲಿಗೆ ಹೂಗಳು ಸುರಿಯುತ್ತಿದ್ದಾವೆ. ಹಾಗೆಯೇ ಯಾಲಕ್ಕಿ ಗೊನೆ ಬಾಗಿ

ಹಾಲನ್ನು ಸುರಿಸುತ್ತಿವೆ. ಇಲ್ಲಿ ಅವನನ್ನು ಪ್ರಕೃತಿಯೆ ಸ್ವಾಗತಿಸುತ್ತಿರುವಂತಹ ಕಲ್ಪನೆಯ ಭಾವನೆಗಳು ಈಕೆಯಲ್ಲಿವೆ. ಜೊತೆಗೆ ಇಲ್ಲಿನ ವರ್ಣನೆಗಳಲ್ಲಿ ಸಮೃದ್ಧವಾದ ಪ್ರಾಕೃತಿಕ ಸಂಪತ್ತಿನ ಪರಿಚಯವೂ ಆಗುತ್ತದೆ.

ತವರಲ್ಲಿ ಚೊಚ್ಚಿಲ ಹೆರಿಗೆಯನ್ನು ಮುಗಿಸಿಕೊಂಡು ಗಂಡನ ಮನೆಗೆ ಹೊರಟಿರುವ ಹೆಣ್ಣಿನ ಚಿತ್ರಣ ಮನಮುಟ್ಟುವಂತಿದೆ.

"ತೊಟ್ಟಿಲ ಹೊತ್ಕೊಂಡು ತವರ್ಬಣ್ಣ ಉಟ್ಕೊಂಡು
ಅಪ್ಪಕೊಟ್ಟೆಮ್ಮ ಹೊಡ್ಕೊಂಡು । ತೌರೂರ
ತಿಟ್ಟತ್ತಿ ತಿರುಗಿ ನೋಡ್ಯಾಳೊ॥"[೧೫]

ಈ ಜನಪದ ಗೀತೆಯು ವಿಶಾಲ ಹಾಗೂ ಬಹಳಷ್ಟು ಚರ್ಚೆಯನ್ನು ಹುಟ್ಟು ಹಾಕುತ್ತದೆ. ಚೊಚ್ಚಲ ಹೆರಿಗೆಯನ್ನು ಮುಗಿಸಿಕೊಂಡು ತವರಿನಿಂದ ಮರಳಿ ಗಂಡನ ಮನೆಗೆ ಹೋಗುತ್ತಿರುವ ಹೆಣ್ಣು ಮಗಳ ಚಿತ್ರಣವಿದು. ತಾಯಿಯ ಹಾರೈಕೆಗಳನ್ನು ಮುಗಿಸಿಕೊಂಡು ತವರಿನವರು ಕೊಟ್ಟ ತೊಟ್ಟಿಲನ್ನು ಹೊತ್ಕೊಂಡು, ಅವರು ಕೊಡಿಸಿದ ಹೊಸ ಸೀರೆಯನ್ನು ಉಟ್ಟುಕೊಂಡು, ಅಪ್ಪ ಪ್ರೀತಿಯಿಂದ ಕೊಟ್ಟ ಎಮ್ಮೆಯನ್ನು ಹೊಡೆದುಕೊಂಡು ಹೋಗುತ್ತ, ತವರೂರಿನ ತಿಟ್ಟತ್ತಿ ಹಿಂದುರುಗಿ ನೋಡುವ ಹೆಣ್ಣಿನ ನೋಟದಲ್ಲಿ ಆಕೆಯ ಮನದ ದುಃಖ, ಪ್ರೀತಿಯ ಸಂಬಂಧಗಳು ನಮಗೆ ಇಲ್ಲಿ ಅರಿವಾಗುತ್ತವೆ.

ಮನೆಯ ಪತ್ನಿಯನ್ನು ಮರೆತು ಬೇರೊಂದು ಹೆಣ್ಣಿನ ಸಹವಾಸ ಮಾಡುವ ಗಂಡನ್ನು ಹಾಗೂ ಆತನ ದುಃಸ್ಥಿತಿಯನ್ನು ಕುರಿತು ಜನಪದರು ತಮ್ಮ ನೀತಿಯುತ ಮಾತುಗಳ ಮೂಲಕ ಎಚ್ಚರಿಸಿದ್ದಾರೆ.

"ಕಾಗೀಗಿ ಕಣ್ಣಿಟ್ಟ ಕರಿಯ ಹುಬ್ಬಿನ ಜಾಣ
ಮಾವಿನ ಹಣ್ಣು ಮನಿಯಾಗ । ಇಟ್ಟುಗೊಂಡು
ನೀರಲಗ್ಯಾಕ ಮನಸಿಟ್ಟಾ॥"[೧೬]

ಅಂದರೆ ಸದ್ಗುಣಿಯಾದ ಪತಿಯನ್ನು ಬಿಟ್ಟು ಬೇರೊಂದು ಹೆಣ್ಣನ್ನು ಬಯಸುವವರನ್ನು ಕುರಿತು ಈ ಗೀತೆಯು ಚರ್ಚಿಸುತ್ತದೆ. ಅಲ್ಲದೆ

"ಇಬ್ಬರೆಂಡಿರನಾದಾ ಏಡಿಯ ಮುಳ್ಳಾದಾ
ಕೋಡಗನಾದ ಕೊರವಾದ । ಬಾಲ್ಯಾರು ।
ಮಾಡಿಟ್ಟ ಸಿಂಬಿಯರಿವ್ಯಾದಾ॥"[೧೭]

ಅಂದರೆ ಇಬ್ಬರು ಹೆಣ್ಣನ್ನು ವಿವಾಹವಾದ ಗಂಡಿನ ಸ್ಥಿತಿಯನ್ನು ಕುರಿತು ಇಲ್ಲಿ ಬುದ್ಧಿ ಮಾತುಗಳನ್ನು ಹೇಳುತ್ತಾರೆ. ಇಬ್ಬರು ಹೆಂಡತಿಯರನ್ನು ವಿವಾಹವಾದ ಗಂಡು ಏಡಿಯ ಮುಳ್ಳಾದ, ಕೋಡಗನಾದ ಕೊರವಾದ. ಕೊನೆಗೆ ಆ ಹೆಂಡತಿಯರಿಗೆ ಅಡಿಯಾಳಾದ ಎಂಬುದನ್ನು ತಿಳಿಸುತ್ತಾರೆ.

ಸಾಮೂಹಿಕ ಚಿಂತನೆ ಹಾಗೂ ನೈತಿಕ ಹಿರಿಮೆಯನ್ನು ಪ್ರತಿನಿಧಿಸುವ ಮೌಲ್ಯಗಳು ಜನಪದರ ಬದುಕಿನಲ್ಲಿ ಬಹುಮುಖ್ಯ ಹಾಗೂ ಅನುಕರಣೀಯವಾದ ಪಾತ್ರವನ್ನು ವಹಿಸಿವೆ. ನಮ್ಮ ಜನಪದರು ಪ್ರಾಣಕ್ಕಿಂತ ಮಾನ ದೊಡ್ಡದು ಎಂಬ ಮೌಲ್ಯಕ್ಕೆ ಕಟ್ಟುಬಿದ್ದವರು. ಮುಂದುವರೆದು

"ಹೆರವರ್ಹೆಣ್ಣಿಗಾಗಿ ಹೊರಗ ಮಲಗುವ ಜಾಣ
ಗಿಡದಮ್ಯಾಲೆರಡು ಗಿಣಿ ಕೂತು । ನುಡಿದಾವ ।
ಎರವೆನ್ನೋ ರಾಯ ನಿನ ಜೀವ ॥"[೧೮]

ಎಂಬ ಗೀತೆಯು ಸಹ ಪರರ ಹೆಣ್ಣಿಗಾಗಿ ಆಸೆಪಟ್ಟು ಹೊರಗೆ ಮಲಗುವ ಗಂಡಿನ ಸ್ಥಿತಿಯನ್ನು ಕುರಿತು ಉತ್ತಮವಾದ ನೀತಿ ಮಾತುಗಳನ್ನು ತಿಳಿಸುತ್ತವೆ.

"ಹೆಣ್ಣು ಆಗುವುದಕಿಂತ ಮಣ್ಣು ಆಗುವುದು ಲೇಸು
ಮಣ್ಣೀನ ಮ್ಯಾಲೆ ಮರವಾಗಿ । ಬೆಳೆದಾರೆ
ಬಂದವರಿಗೆಲ್ಲ ನೆರಳವ್ವ॥"[೧೯]

ಇವು ಅರ್ಥಪೂರ್ಣವಾದ ನೀತಿ ಮಾತುಗಳಾಗಿವೆ. ಮಾನವ ಜನ್ಮಕ್ಕಿಂತ ಮರವಾದರೆ ಇರುವ ಪ್ರಯೋಜನಗಳನ್ನು ಜನಪದ ಹೆಣ್ಣು ಮಗಳು ತಿಳಿಸುತ್ತಾಳೆ. ಹೆಣ್ಣಿನ ಜನ್ಮಕ್ಕಿಂತ ಈ ಭೂಮಿಯ ಮೇಲೆ ಮರವಾಗಿ ಬೆಳೆದರೆ ಬಂದವರಿಗೆಲ್ಲ ನೆರಳನ್ನು ನೀಡಿ ಅವರ ದಣಿವನ್ನು ಕಳೆಯುವ ಮಹತ್ವದ ಕಾಯಕವನ್ನು ಮಾಡುವುದಾಗಿ ಆಶಿಸುತ್ತಾಳೆ. ಇದು ಉತ್ತಮವಾದ ಜೀವನ ನಿಷ್ಠೆಯ ನುಡಿಯೂ ಆಗಿದೆ.

"ಧರ್ಮ ಮತ್ತು ಕಾನೂನುಗಳಿಗೆ ನಿಕಟವರ್ತಿಯಾದ ಮನುಷ್ಯನ ಲೌಕಿಕ ಜೀವನವನ್ನು ತಿದ್ದಿ ಪಾರಮಾರ್ಥಿಕ ಬದುಕಿಗೆ ಅನುವು ಮಾಡಿಕೊಡುವ ಸಂಗತಿಯೇ ನೀತಿ. ಈ ನೀತಿಶಾಸ್ತ್ರದ ತಾಯಿ ಬೇರು ಜಾನಪದದಲ್ಲಿ ಭದ್ರವಾಗಿದೆ"[೨೦] ಎಂಬ ಮಾತುಗಳು ಜಾನಪದ ಹಾಗೂ ನೀತಿಗೆ ಇರುವ ಅವಿನಾಭಾವ ಸಂಬಂಧವನ್ನು ನಮಗೆ ಮನಗಾಣಿಸುತ್ತವೆ. ನೈತಿಕ ಮೌಲ್ಯಗಳಿಲ್ಲದಿದ್ದರೆ ಸಮಾಜದಲ್ಲಿ ಅಶಾಂತಿ ಉಂಟಾಗಿ ನಾಗರೀಕ ಬದುಕು ಪ್ರಕ್ಷುಬ್ಧವಾಗುತ್ತದೆ. ಹಾಗಾಗಿ ಸಮಾಜದಲ್ಲಿ ನೆಮ್ಮದಿ, ಶಾಂತಿ, ಸಾಮರಸ್ಯಗಳ ಕಾರಣವಾಗಿ ನೀತಿ ಪ್ರಜ್ಞೆ ಹಾಗೂ ನೀತಿ ಪಾಲನೆಯ ಜೀವನ ವಿಧಾನಗಳು ಬಹುಮುಖ್ಯವಾದವು.

ಇಂತಹ ನೀತಿ ಪ್ರಜ್ಞೆಯನ್ನು ಜನಪದ ಗೀತೆಗಳು ಮೂಡಿಸುತ್ತಿದ್ದು, ಜನತೆ ನೈತಿಕ ಅಧಃ ಪತನಕ್ಕಿಳಿಯದಂತೆ ಎಚ್ಚರಿಸುತ್ತಿವೆ. ಜನರನ್ನು ಸರಿ ದಾರಿಗೆ ತರಲು ನಮ್ಮಲ್ಲಿ ಕಾನೂನುಗಳು ಇದ್ದರೂ ಒಮ್ಮೊಮ್ಮೆ ಅವುಗಳು ಬಲವಂತದ ಮೂಲಕ ಕಾರ್ಯರೂಪಕ್ಕೆ ಬರುವುದನ್ನು ಕಾಣುತ್ತೇವೆ. ಆದರೆ ನೀತಿ ಪ್ರಜ್ಞೆ ಎಂಬುದು ಮನಸ್ಸಿನ ಜಾಗ್ರತ ಅವಸ್ಥೆಯಲ್ಲಿದ್ದು, ಸ್ವಯಂ ಪ್ರೇರಣೆಯಿಂದ ಜಾರಿಗೆ ಬರುತ್ತದೆ. ಈ ಹಿನ್ನೆಲೆಯಲ್ಲಿ ನೀತಿ ಶಾಸ್ತ್ರಕ್ಕೆ ಜನಪದ ಗೀತೆಗಳು ಅಪೂರ್ವ ಹಾಗೂ ಅಮೂಲ್ಯವಾದ ಕೊಡುಗೆಗಳನ್ನು ನೀಡಿವೆ.

ಸಿರಿ, ಐಶ್ವರ್ಯಗಳು ಬಂದಂತಹ ಸಂದರ್ಭಗಳಲ್ಲಿ ಹೇಗೆ ಬದುಕನ್ನು ಸಾಗಿಸಬೇಕೆಂಬ ಬುದ್ಧಿ ಮಾತನ್ನು ಜನಪದರು ಈ ರೀತಿ ಹೇಳುತ್ತಾರೆ.

"ಸಿರಿ ಬಂದ ಕಾಲಕ್ಕೆ ತಲೆ ಬಾಗಿ ನಡೆಯಮ್ಮ
ಮನೆಗೆ ಬಂದವರ ಕೂರೇಳು । ಮಕ್ಕಳ
ಒಡನೆ ಬಂದವರಿಗೆ ಉಣಬಡಿಸು"[೨೧]

ಹಣ, ಅಧಿಕಾರದ ಸಿರಿ ಬಂದಂತಹ ಸಂದರ್ಭದಲ್ಲಿ ಅಹಂಕಾರದಿಂದ ನಡೆದುಕೊಳ್ಳಬೇಡ. ಎಲ್ಲರಿಗೂ ವಿಧೇಯಳಾಗಿರು, ಮನೆಗೆ ಬಂದವರಲ್ಲಿ ದೊಡ್ಡಸ್ಥಿಕೆ ತೋರದೆ ಅವರನ್ನು ಆತ್ಮೀಯವಾಗಿ ಕಾಣು. ಹಾಗೆ ಮಕ್ಕಳ ಜೊತೆ ಅವರಿಗೂ ಕೂಡ ಊಟಕ್ಕೆ ನೀಡು ಎಂದು ಮಗಳಿಗೆ ಬುದ್ಧಿ ಹೇಳುತ್ತಾರೆ ತಂದೆ ತಾಯಿಗಳು. ಜನಪದರಿಗೆ ಹಣ, ಐಶ್ವರ್ಯಗಳು ಶಾಶ್ವತವಲ್ಲ ಎಂಬ ವಿಚಾರ ತಿಳಿದಿದೆ. ಆ ಕಾರಣವಾಗಿಯೆ ಸಿರಿತನ ಬಂದಾಗ ಅಹಂಕಾರದಿಂದ ವರ್ತಿಸದೆ ಎಲ್ಲರಿಗೂ ವಿಧೇಯಳಾಗಿರಬೇಕೆಂದು ಬುದ್ಧಿ ಹೇಳುತ್ತಾರೆ. ಹಾಗೆಯೆ

"ಕೊಟ್ಟು ಕುದಿಯಲು ಬ್ಯಾಡ ಇಟ್ಟು ಹಂಗಿಸಬ್ಯಾಡ
ಎಷ್ಟುಂಡರೆಂದು ಅನಬ್ಯಾಡ । ಈ ಮೂರು
ಮುಟ್ಯಾವ ಶಿವನ ಸದರೀಗೆ॥"[೨೨]

ಇನ್ನೊಬ್ಬರಿಗೆ ಕೊಟ್ಟ ಮೇಲೆ ಮನಸ್ಸಿನಲ್ಲಿ ಕೊಟ್ಟೆನೆಂದು ಕುದಿಯಬೇಡ. ಹಾಗೆಯೆ ಊಟಕ್ಕೆ ಇಟ್ಟು ಅವರನ್ನು ಹಂಗಿಸಬೇಡ, ಎಷ್ಟೊಂದು ತಿಂದರೆಂದು ನುಡಿಯಬೇಡ, ಈ ಮೂರೂ ಕೂಡ ಶಿವನಿಗೆ ಮುಟ್ಟುತ್ತವೆ. ಆದ್ದರಿಂದ ಹಣ ಅಧಿಕಾರಗಳಿದ್ದಾಗ ಇಲ್ಲದವರಿಗೆ ಕೊಟ್ಟು ಅವರಿಗೆ ಸಹಾಯ ಮಾಡಬೇಕು. ಹಾಗೆಯೇ ಮಾಡಿದ ಸಹಾಯವನ್ನು ಹೀಯಾಳಿಸದೆ, ಹಂಗಿಸದೆ ಬದುಕನ್ನು ಸಾಗಿಸಬೇಕೆಂಬ ನೀತಿಯನ್ನು ತಿಳಿ ಹೇಳುತ್ತಾರೆ.

ಜನಪದ ಗೀತೆಗಳು ಕುಡಿತ, ಜೂಜು, ಕಳ್ಳತನಗಳಿಂದ ದೂರವಿರುವಂತೆ ಎಚ್ಚರಿಸುತ್ತವೆ. ಈ ರೀತಿಯ ದುಶ್ಚಟಗಳಿಗೆ ಬಲಿಯಾದವರ ಬದುಕು ಏನಾಯಿತೆಂಬ ನೀತಿಯನ್ನು ಪುನಃ ಪುನಃ ನಮಗೆ ಮನವರಿಕೆ ಮಾಡಿಕೊಡುತ್ತಾರೆ.

"ಜೂಜಾಡಿ ಪಾಂಡವರು ರಾಜ್ಯವ ಸೋತರು
ಜೂಜಾಡಿ ನಳನು ಬಳಲಿದ ಕಂದಯ್ಯ
ಜೂಜಿಗೆ ಮನವ ಬಿಡದೀರು"[೨೩]

ಜೂಜಿನಂತಹ ದುಶ್ಚಟಕ್ಕೆ ಬಲಿಯಾದ ಪಾಂಡವರನ್ನು ನಿದರ್ಶನವಾಗಿ ಕೊಡುತ್ತಾರೆ. ಜೂಜಿನ ಚಟಕ್ಕೆ ಬಿದ್ದ ಕಾರಣವಾಗಿ ಪಾಂಡವರು ಇಡೀ ರಾಜ್ಯವನ್ನೇ ಸೋತರು. ಜೂಜಾಡಿ ನಳ ಮಹಾರಾಜನು ಪಡಬಾರದ ಕಷ್ಟಗಳನ್ನು ಅನುಭವಿಸಿದ. ಹಾಗಾಗಿ ನನ್ನ ಕಂದ ಜೂಜಿನ ಮೇಲೆ ನಿನ್ನ ಮನಸ್ಸನ್ನು ಹರಿಯಬಿಡದಿರು ಎಂದು ತಾಯಿ ತನ್ನ ಮಗನಿಗೆ ಎಚ್ಚರಿಸುತ್ತ ಬುದ್ಧಿ ಮಾತುಗಳನ್ನು

ಹೇಳುತ್ತಾಳೆ. ಏಕೆಂದರೆ ಜೂಜು ಎಂಬುದು ಬಹಳ ಕೆಟ್ಟದ್ದು. ರಾಜ್ಯ, ಕೋಶ, ಕೊನೆಗೆ ಹೆಂಡತಿಯನ್ನೆ ಅಡವಿಡುವ ಮಟ್ಟಿಗೆ ಪಾಂಡವರನ್ನು ತಂದು ನಿಲ್ಲಿಸುತ್ತದೆ. ಆ ಕಾರಣವಾಗಿ ಇಂತಹ ದುಶ್ಚಟಗಳಿಗೆ ಬಲಿಯಾಗಬೇಡಿ ಎಂದು ಜನಪದ ಗೀತೆಗಳು ಎಚ್ಚರಿಸುತ್ತವೆ.

ಜನಪದರು ವಿಶಾಲವಾದ ಮನೋ ಹೃದಯದವರು. ಅವರಲ್ಲಿ ಪ್ರೀತಿ, ವಿಶ್ವಾಸ, ಉಪಕಾರ, ಸಹಕಾರ, ಆತ್ಮೀಯತೆಗಳಂತಹ ಮಾನವೀಯ ಸಂಬಂಧಗಳು ಹಾಗೂ ಮೌಲ್ಯಗಳು ತುಂಬಿವೆ. ಯಾರಿಗೂ ಕೇಡು ಬಯಸುವವರಲ್ಲ. ಸಹಾಯ ಬೇಡಿ ಮನೆ ಬಾಗಿಲಿಗೆ ಬಂದವರನ್ನು ಬರಿಗೈಲಿ ವಾಪಸ್ಸು ಕಳಿಸುವವರಲ್ಲ. ತನ್ನಲ್ಲಿರುವುದರಲ್ಲಿಯೇ ಹಂಚಿ ತಿನ್ನುವ ಹೃದಯ ವೈಶಾಲ್ಯತೆ ಜನಪದರದು. ಈ ಕಾರಣವಾಗಿಯೆ ಹಳ್ಳಿಯ ಪ್ರತಿಯೊಬ್ಬ ವ್ಯಕ್ತಿಯೊಡನೆ ಅಣ್ಣ – ತಮ್ಮ, ಅಕ್ಕ – ತಂಗಿ, ತಾಯಿ, ಭಾವ, ಮೈದುನ ಮೊದಲಾದ ಸಹೋದರತ್ವದ ಬಾಂಧವ್ಯಗಳನ್ನು ಬೆಳೆಸಿಕೊಂಡಿದ್ದಾನೆ.

ಹಳ್ಳಿಯ ಜನರೆಲ್ಲರೂ ಇವನ ಬಂಧು ಬಳಗದವರೆ. ಊರಿನ ಯಾವುದೇ ಒಬ್ಬ ಹೆಣ್ಣು ಮಗಳು ಕೇವಲ ಆ ಗ್ರಾಮದ ಹೆಣ್ಣಲ್ಲ. ಬದಲಿಗೆ ಇವರ ಒಡಹುಟ್ಟಿದವಳು. ತಮ್ಮ ಸೋದರಿಯೇ ಎಂದು ಭಾವಿಸಿ ಬದುಕನ್ನು ಸಾಗಿಸುವವರು. ಹಳ್ಳಿಯಲ್ಲಿ ಜರುಗುವ ಮದುವೆ, ಸಾವು, ಹಬ್ಬ, ಹರಿದಿನಗಳಲ್ಲಿ ಎಲ್ಲರೂ ಪಾಲ್ಗೊಳ್ಳುತ್ತಾರೆ. ಉಳಿದವರ ಕಷ್ಟ ಸುಖಗಳನ್ನು ತಮ್ಮವೆಂದು ಭಾವಿಸಿ ಅವರೊಂದಿಗೆ ಸೇರಿ ಅವರನ್ನು ಸಮಾಧಾನ ಪಡಿಸುತ್ತಾರೆ. ಇದು ಜನಪದರಲ್ಲಿರುವ ಮಾನವೀಯತೆಯ ಮಿಡಿತಕ್ಕೆ ಒಂದು ಅರ್ಥಪೂರ್ಣವಾದ ಉದಾಹರಣೆಯಾಗಿದೆ. ಇದೇ ರೀತಿ ತನ್ನ ಕುಟುಂಬದ ಜೀವಾಳವಾಗಿರುವ ಪ್ರಾಣಿಗಳ ಬಗ್ಗೆ ಇರಿಸಿಕೊಂಡಿರುವ ಸಂಬಂಧ ಕೂಡ ವರ್ಣನೆಗೆ ನಿಲುಕದ್ದು.

ಹೆಣ್ಣಿನ ತವರಿನ ಬಗೆಗಿನ ಸಂಬಂಧ ಬಿಡಿಸಲಾರದಂತಹದು.

"ಅತ್ತಿಗೆ ಹಡೆಯಲಿ ಹತ್ತೆಮ್ಮೆ ಕರೆಯಲಿ
ಹಿತ್ತಲಿನ ಬಾಳೆ ಚಿಗುರಲಿ । ಅತ್ತಿಗೆ ಮಗಳು
ಅತ್ತೆ ಅಂತ ನನ್ನ ಕರೆಯಲಿ"೨೪

ಹೆಣ್ಣು ಮದುವೆಯಾಗಿ ತವರನ್ನು ತೊರೆದು ಗಂಡನ ಮನೆ ಸೇರಿದ ಮೇಲೂ ತವರನ್ನು ಮರೆಯುವುದಿಲ್ಲ. ತವರಿನ ಅಣ್ಣ ತಮ್ಮಂದಿರು ಮರೆತರು ತವರಿನ ಮೇಲಿನ ಪ್ರೀತಿ ಈಕೆಗೆ ಕಡಿಮೆಯಾಗುವುದಿಲ್ಲ. ಅಣ್ಣನ ಹೆಂಡತಿ ತನ್ನನ್ನು ನಿರ್ಲಕ್ಷಿಸಿದರೂ ಅದಕ್ಕೆ ಕೋಪಗೊಳ್ಳದೆ, ದುಃಖಿಸದೆ ತನ್ನ ತವರಿನ ಕುಡಿ ಬೆಳೆಯಲೆಂದೇ ಮನದುಂಬಿ ಹಾರೈಸುತ್ತಾಳೆ. ಇದು ನಮ್ಮ ಸಂಸ್ಕೃತಿ ಜನಪದ ಹೆಣ್ಣಿಗೆ ಕಲಿಸಿಕೊಟ್ಟಿರುವ ಅರ್ಥಪೂರ್ಣವಾದ ಸಂಸ್ಕಾರ ಹಾಗೂ ಜೀವನ ಪ್ರೀತಿಯ ದ್ಯೋತಕವಾದ ಆಶಯವಾಗಿದೆ.

ಬಡತನಕ್ಕೆ ಜನಪದರು ಎಂದಿಗೂ ಎದೆಗುಂದಿದವರಲ್ಲ. ಅದು ತಂದೊಡ್ಡುವ ಕಷ್ಟ ಕ್ಲೇಶಗಳಿಗೆ, ಸಮಸ್ಯೆ, ನೋವು ಸಂಕಟಗಳಿಗೆ ತಲೆ ಕೆಡಿಸಿಕೊಂಡವರಲ್ಲ. ಮದುವೆಯಾಗಿ ಗಂಡನ ಮನೆಗೆ

ಹೋದ ಮಗಳು ಅತ್ತೆ ಮನೆಯಲ್ಲಿ ಪಡುವ ಕಷ್ಟಗಳನ್ನು ಕಂಡು ತಂದೆ ತನ್ನ ಮಗಳಿಗೆ ಬುದ್ಧಿ ಹೇಳುತ್ತಾನೆ.

"ಬಂದದ್ದು ಬರಲವ್ವ ಎದೆಗೊಟ್ಟು ನಿಲಬೇಕು
ಹೆದರಿದರೆ ಬೆನ್ನ ಬಿಡದವ್ವ । ನನ ಮಗಳ
ಒದಗಿದರೆ ದುಃಖ ಒಳನುಂಗ"[೨೫]

ಜೀವನದಲ್ಲಿ ಏನೆ ಬಂದರೂ ಎದೆಗೊಟ್ಟು ನಿಲ್ಲಬೇಕು. ಹೆದರಿದರೆ ಅದು ನಮ್ಮ ಬೆನ್ನು ಬಿಡುವುದಿಲ್ಲ. ಎಷ್ಟೇ ದುಃಖಗಳಿದ್ದರೂ ನುಂಗಿಕೊಂಡು ಜೀವನವನ್ನು ಸಾಗಿಸಬೇಕೆಂದು ಬುದ್ಧಿ ಹೇಳುತ್ತಾರೆ.

೬.೩. ಜನಪದ ಗೀತೆಗಳು, ಸಮಾನತೆ ಮತ್ತು ವೈಚಾರಿಕತೆಯ ವಿವೇಚನೆ

ವ್ಯಕ್ತಿಗಿಂತ ಗುಂಪಿಗೆ ಪ್ರಾಧಾನ್ಯತೆಯನ್ನು ನೀಡುವ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಬಯಸುವ ಜನಪದ ಗೀತೆಗಳು ಸಮಾಜದಲ್ಲಿ ಸಮಾನತೆ ಹಾಗೂ ವೈಚಾರಿಕತೆಯ ಅಂಶಗಳನ್ನು ಬಯಸುತ್ತವೆ. ವ್ಯಕ್ತಿಯು ತಾನು ಸ್ವತಂತ್ರನಾಗಿದ್ದರೂ ಸಮಾಜಕ್ಕೆ ತನ್ನನ್ನು ತಾನು ಸಮರ್ಪಿಸಿಕೊಂಡಿರುತ್ತಾನೆ. ಇದರಲ್ಲಿ ಬಲವಂತ ಅಥವಾ ಒತ್ತಡದ ಕ್ರಿಯೆಗಳಿಲ್ಲ. ಜನಪದರ ದೃಷ್ಟಿಯಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಹೀಗಾಗಿ ಒಂದು ಸಮಾಜದ ಸಂಸ್ಕೃತಿಯನ್ನು ಅರಿಯುವಲ್ಲಿ ಜನಪದ ಗೀತೆಗಳ ಪಾತ್ರ ಬಹಳ ದೊಡ್ಡದು. ಇವುಗಳಲ್ಲಿ ಜನಪದರ ಮನೋಧರ್ಮ, ಮೌಲ್ಯಗಳಿಗೆ ನೀಡುವ ಒತ್ತು ಹಾಗೂ ಜನಪದರ ಜೀವನದ ವಾಸ್ತವಿಕ ಬದುಕಿನ ಚಿತ್ರಣ ಇವುಗಳಲ್ಲಿ ದೊರೆಯುತ್ತದೆ. ಜೊತೆಗೆ ಇವುಗಳಲ್ಲಿ ಸುಪ್ತವಾಗಿ ಸಾಮಾಜಿಕ ಪ್ರಜ್ಞೆ, ಸಮಾನತೆಯ ಆಶಯಗಳು ಇದ್ದೇ ಇರುತ್ತವೆ.

ನಮ್ಮ ಸಾಮಾಜಿಕ ಜೀವನ ಏಕ ಸಂಸ್ಕೃತಿಯದ್ದಲ್ಲ. ಅದು ಬಹು ಸಂಸ್ಕೃತಿಯ ಆಯಾಮಗಳನ್ನು ಒಳಗೊಂಡಿರುವಂತಹದ್ದು. ಇಲ್ಲಿ ವಿವಿಧ ಜನಾಂಗಗಳು, ಭಾಷೆ, ಧರ್ಮ, ಸಂಸ್ಕೃತಿಗಳು ಸಹಬಾಳ್ವೆಯುತವಾದ ಬದುಕನ್ನು ಸಾಗಿಸುತ್ತಿವೆ. ಹೀಗಾಗಿ ಸಮಾನತೆಯ ಆಶಯವನ್ನು ವ್ಯಕ್ತಪಡಿಸುವ ಇವು ಧರ್ಮ ಸಮನ್ವಯವನ್ನು ಸಹ ಸಾರುತ್ತವೆ.

"ಲೋಕದ ಮನಿಯಾಗ ಸಿರಿದೇವಿ ನೀನಾಗು
ಯಾರಿಗೂ ಭೇದ ಬಗಿಬ್ಯಾಡ । ಎಲೆ ಮನವೆ
ದರಮಕ ಹಾನಿ ಮಾಡಬೇಡ॥"[೨೬]

ಈ ಗೀತೆಯು ತಾಯಿಯಾದವಳು ತನ್ನ ಮಗಳಿಗೆ ಹೇಳುವ ಅರ್ಥಪೂರ್ಣವಾದ ಸಮಾನತೆಯ ನೀತಿ ಪಾಠವಾಗಿದೆ. ಲೋಕವನ್ನೆ ಮನೆ ಎಂದು ಭಾವಿಸಿರುವ ಇಲ್ಲಿನ ಕ್ರಮ ಔಚಿತ್ಯಪೂರ್ಣವಾದುದು. ಈ ಲೋಕವೆಂಬ ಮನೆಗೆ ಸಿರಿದೇವಿ ನೀನಾಗು ಎಂಬುದು ಮನೆಗೆ ಸುಖ, ಶಾಂತಿ, ಸಮೃದ್ಧತೆಗಳನ್ನು ತಂದುಕೊಡುವಂತೆಯೇ, ದೇಶವೆಂಬ ಮನೆಗೂ ಕೂಡ ಶಾಂತಿ, ನೆಮ್ಮದಿ, ಸೌಹಾರ್ದತೆಗಳೆಂಬ ಸಿರಿದೇವಿಯಾಗಿ ಬಾಳು ಎಂದು ಹರಸುತ್ತಾಳೆ. ಹಾಗೆಯೆ, ಯಾರಲ್ಲಿಯೂ ಕೂಡ ಭೇದವನ್ನು

ಮಾಡಬಾರದು, ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಅಂತೆಯೇ ಯಾವುದೇ ಧರ್ಮಕ್ಕೂ ಕೂಡ ಹಾನಿ ಮಾಡಬೇಡ ಎಂದು ವಿವೇಕವನ್ನು ಹೇಳುತ್ತಾಳೆ. ಇದು ಸಮಾನತೆಯ ಬಹು ಮುಖ್ಯವಾದ ಆಶಯವನ್ನು ಅಭಿವ್ಯಕ್ತಿಪಡಿಸುತ್ತದೆ. ಹೀಗೆಯೆ

"ಸರುವ ಗುರುಗಳಿಗೆ ಶರಣೆಂದು ಬಾಗಿನ
ಸರುವ ದರುಮರು ಇರುವಲ್ಲಿ । ಬೆಳಗಿನ
ಸರುವ ದರಮೆಲ್ಲ ಸುಖಿಯಾಗಿರಲಿ॥"[೨೭]

ಎಲ್ಲ ಧರ್ಮದ ಗುರುಗಳಿಗೆ ಶರಣೆಂದು ಬಾಗುವ, ಸರ್ವ ಧರ್ಮದವರೂ ಇರುವಲ್ಲಿ, ಎಲ್ಲ ಧರ್ಮದವರು ಕೂಡ ಸುಖಿಯಾಗಿರಲಿ ಎಂದು ಹಾರೈಸುತ್ತಾಳೆ. ಈ ಆಶಯವು ಪ್ರಸ್ತುತ ಸಂದರ್ಭದ ಸಮಾಜಕ್ಕೆ ಬಹಳ ಮುಖ್ಯವಾದುದು. ಏಕೆಂದರೆ ಇಂದಿನ ಸಮಾಜ ಹಾಗೂ ಸಮಾಜದಲ್ಲಿನ ಜನ ಸಂಕುಚಿತತೆಯ ಮನಸ್ಸಿನವರಾಗಿರುವ ಕಾರಣವಾಗಿ ಕೋಮು ಗಲಭೆ, ಜಾತಿ ಗಲಭೆಗಳು ಉಂಟಾಗಿ ಸಮಾಜದ ಶಾಂತಿ ಹಾಗೂ ಸ್ವಾಸ್ಥ್ಯಗಳು ಹದಗೆಟ್ಟಿವೆ. ಇಂತಹ ಸಮಯದಲ್ಲಿ ಶಾಂತಿ ಪಾಲನೆ ಹಾಗೂ ಸಮಾಜ ಆರೋಗ್ಯ ಪೂರ್ಣವಾದ ರೀತಿಯಲ್ಲಿ ಸಾಗಲು ಇಂತಹ ಜನಪದ ಗೀತೆಗಳ ಪ್ರಸ್ತುತತೆ ಇಂದು ಅಗತ್ಯವಾಗಿದೆ. ಇದರಲ್ಲಿ ಮಾನವೀಯತೆಯ ತತ್ವಗಳು ಕೂಡ ಅಡಕವಾಗಿವೆ.

ಇತರ ಧರ್ಮಗಳ ಜನರೂ ಕೂಡ ಶಾಂತಿಯಿಂದ ಬದುಕಬೇಕೆಂಬುದು ಇವುಗಳ ಬಹುಮುಖ್ಯ ಆಶಯವಾಗಿದೆ. ಏಕೆಂದರೆ ಎಲ್ಲ ಧರ್ಮಗಳ ಸಾರವೂ ಕೂಡ ಒಂದೇ. ನೆಮ್ಮದಿಯುತ ಬದುಕನ್ನು ಸಾಗಿಸುವಂತೆ ಪ್ರೇರೇಪಿಸುವುದು. ಜಾತಿ, ಮತ, ಪಂಥಗಳಿಗಿಂತ ಜೀವನ ದೊಡ್ಡದು ಎಂಬ ನಂಬಿಕೆ ಎಲ್ಲ ಧರ್ಮಗಳ ಮೂಲ ಆಶಯವಾಗಿದೆ. ಹಾಗಾಗಿಯೇ ಜನಪದ ಗೀತೆಗಳು ಸರ್ವ ಧರ್ಮದವರೆಲ್ಲರೂ ಸುಖವಾಗಿರಲೆಂದು ಹಾರೈಸುವ ಗುಣ ಅದ್ಭುತವಾದ ಸಮಾನತೆಯ ಬಾಂಧವ್ಯಗಳಿಗೆ ಹಿಡಿದ ಕನ್ನಡಿಯಾಗಿದೆ. ಯಾವ ಕಾಲದ ಧರ್ಮವಾದರೂ ಕೂಡ ಹೇಳುವುದು ಇದನ್ನೇ. ಸಮಾಜದಲ್ಲಿ ಬದುಕುವ ಜನರಲ್ಲಿ ನೆಮ್ಮದಿ ಹಾಗೂ ಶಾಂತಿಯುತ ಸಹಬಾಳ್ವೆ ಮುಖ್ಯವೆಂದು ಸಾರುತ್ತವೆ.

"ಜನಪದ ಕಾವ್ಯ ಹುಟ್ಟಿದ್ದು ಸಾವಯವ ಸಮಾಜದಲ್ಲಿ. ಸಮಷ್ಟಿ ಪ್ರಜ್ಞೆ ಇನ್ನೂ ಜಾಗೃತವಾಗಿದ್ದ ಸಂದರ್ಭದಲ್ಲಿ. ಮತ್ತು ಈ ಸಮಾಜವು ಅಂತಃಕರಣ, ಆತ್ಮೀಯತೆ ಮುಂತಾದ ಮೌಲ್ಯಗಳ ಮೇಲೆ ನಿಂತಿರುವಂಥದು. ಇಡಿಯ ಹಳ್ಳಿಯೇ ಪರಸ್ಪರ ತಿಳುವಳಿಕೆಯಲ್ಲಿ ಒಂದು ಕುಟುಂಬವಾಗಿ ಬಾಳುತ್ತದೆ. ಆರ್ಥಿಕ, ಸಾಮಾಜಿಕ ಅಥವಾ ಧಾರ್ಮಿಕ ಸಂಬಂಧಗಳನ್ನು ಮೀರಿದ ಒಂದು ಬಂಧನ ಈ ಸಮಾಜವನ್ನು ನಿಯಂತ್ರಿಸುತ್ತದೆ. ಇಡಿಯ ಹಳ್ಳಿಯಿಂದ ಅದರ ಘಟಕಗಳಾದ ಜಾತಿ, ಕುಟುಂಬ, ವ್ಯಕ್ತಿಗಳವರೆಗೂ ಈ ಸಂಬಂಧ ಇಳಿದು ಬರುತ್ತದೆ. ಅಂತೆಯೇ ಒಂದು ಮನೆತನಕ್ಕೆ ಸಂಬಂಧಿಸಿದ ವೈಯಕ್ತಿಕ ದುಃಖ ನೋವುಗಳು ಬಹುತೇಕ ಉಳಿದವರನ್ನೂ ತಾಕುತ್ತವೆ. ಅಷ್ಟೇ ಅಲ್ಲ, ದೂರಗಾಮಿಯಾದ ಪರಿಣಾಮಗಳನ್ನು ಹುಟ್ಟಿಸುತ್ತವೆ. ಬಿತ್ತನೆ, ಸುಗ್ಗಿ, ಜಾತ್ರೆ, ಮದುವೆ, ಹಬ್ಬ, ದುರಂತ ಮೊದಲಾದ

ಘಟನೆಗಳು ಸಾರ್ವತ್ರಿಕ ವ್ಯಾಪ್ತಿ ಪಡೆದುಕೊಂಡು ಇಡಿಯ ಸಮಾಜವೇ ಭಾಗಿಯಾಗುತ್ತದೆ. ಈ ಜನ ಹೆಚ್ಚಾಗಿ ಪ್ರವೃತ್ತಿಗಳ ಮಟ್ಟದಲ್ಲಿ ಜೀವಿಸುವವರಾದ್ದರಿಂದ ಭಾವನೆಗಳ ಮೇಲೆ ಹೆಚ್ಚಿನ ಒತ್ತು ಬೀಳುತ್ತದೆ. ಇವರ ಪ್ರತಿಕ್ರಿಯೆಗಳೂ ಭಾವನೆಯ ಮಟ್ಟದಲ್ಲೇ ವ್ಯಕ್ತವಾಗುತ್ತವೆ"[೨೮] ಎಂಬ ಅಭಿಪ್ರಾಯವು ಜನಪದ ಗೀತೆಗಳು ಅಭಿವ್ಯಕ್ತಿಪಡಿಸುವ ವಿಶಾಲವಾದ ಸಮಾನತೆಯ ಅಂಶಗಳನ್ನು ಸ್ಪಷ್ಟಪಡಿಸುತ್ತವೆ.

ಜನಪದ ಗೀತೆಗಳು ಸಮಾನತೆಯ ಅಂಶಗಳನ್ನು ಅಭಿವ್ಯಕ್ತಪಡಿಸುವಂತೆಯೇ ವೈಚಾರಿಕತೆಯ ವಿವೇಚನೆಯನ್ನು ಸಹ ತಿಳಿಸಿಕೊಡುತ್ತವೆ. ಅಲ್ಲದೆ ಜನಪದ ಗೀತೆಗಳು ಮನೋರಂಜನೆ, ಭಾವಾಭಿವ್ಯಕ್ತಿಗಳನ್ನು ವ್ಯಕ್ತಪಡಿಸುವಂತೆಯೇ ವೈಜ್ಞಾನಿಕ ಅಂಶಗಳನ್ನು ಸಹ ಅವುಗಳಲ್ಲಿ ಕಾಣಬಹುದಾಗಿದೆ. "ವೈಚಾರಿಕತೆ ಎಂದರೆ ಯಾವುದೇ ಬುದ್ಧಿ ಪೂರ್ವಕ ತತ್ವ ಅಥವಾ ಭಾವನೆ ಅಥವಾ ವಾದವೇ ಆಗಬೇಕೆಂದಿಲ್ಲ. ಭಾವ ಕಲ್ಪನೆಗಳನ್ನು ಔಚಿತ್ಯದ ಗೆರೆ ದಾಟದಂತೆ ಬುದ್ಧಿಯ ಹತೋಟಿಯಲ್ಲಿಟ್ಟುಕೊಂಡು ನಿರೂಪಿಸುವುದೂ ವೈಚಾರಿಕತೆಯೇ. ಯಾವ ಒಳ್ಳೆಯ ಕಾವ್ಯಕ್ಕೂ ಇದು ಬೇಕೇ ಬೇಕು. ಈ ವೈಚಾರಿಕತೆಯನ್ನು ಜನಪದ ಕಾವ್ಯದಲ್ಲಿ ಬಹಳಷ್ಟು ನೋಡುತ್ತೇವೆ"[೨೯] ಎಂಬ ಮಾತುಗಳು ಜನಪದ ಗೀತೆಗಳು ವ್ಯಕ್ತಪಡಿಸುವ ವೈಚಾರಿಕತೆಯ ನಿಲುವುಗಳನ್ನು ಹಾಗೂ ವೈಚಾರಿಕತೆಯ ಅರ್ಥ ಪರಂಪರೆಗಳನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ.

"ಬ್ಯಾಸಿಗಿ ದಿವಸಕ ಬೇವಿನ ಮರ ತಂಪ
ಭೀಮರತಿಯೆಂಬ ಹೊಳೆತಂಪ । ಹಡೆದಮ್ಮ
ನೀ ತಂಪ ನನ್ನ ತವರೀಗೆ॥"[೩೦]

ಈ ಜನಪದ ಗೀತೆಯು ಔಷಧೀಯ ಗುಣಗಳನ್ನು ಉಳ್ಳ ಬೇವಿನ ಮರವನ್ನು ಕುರಿತು ವಿವರಿಸುತ್ತ, ಬೇವಿನ ಮರದಲ್ಲಿನ ಗುಣಗಳನ್ನು ವೈಜ್ಞಾನಿಕವಾಗಿ ವಿವರಿಸುತ್ತಾರೆ. ಬೇವಿನ ಮರ ತಂಪು ಮಾತ್ರವೇ ಅಲ್ಲ. ಅದು ಆರೋಗ್ಯದಾಯಕವಾದುದು. ಬೇಸಿಗೆ ದಿನಗಳಲ್ಲಿ ಬೇವಿನ ಮರದ ನೆರಳು ತಂಪಾಗಿರುತ್ತದೆ. ಇದರಂತೆ ಭೀಮರತಿ ಎಂಬ ಹೊಳೆಯು ಕೂಡ ತಂಪು ಎಂದು ಹೇಳುತ್ತ, ಹಡೆದವ್ವನಿಂದಾಗಿ ತವರು ತಂಪಾಗಿರುತ್ತದೆ ಎನ್ನುತ್ತಾಳೆ ಜನಪದ ಹೆಣ್ಣು ಮಗಳು.

"ನಿದ್ದಿಗೆ ಮದ್ದುಂಟೆ ಬುದ್ಧಿಗೆ ಕೇಡುಂಟೆ
ಇದ್ಯ ಬಲ್ಲವಗೆ ಭಯವುಂಟೆ । ದೇವರೆ
ಮದ್ದುಂಟೆ ಜನನ ಮರಣಕ್ಕೆ"[೩೧]

ಈ ಗೀತೆಯು ಜನಪದರ ಲೋಕಾನುಭವವನ್ನು ತಿಳಿಸಿಕೊಡುವಂತೆಯೇ ಅದರೊಳಗಿನ ವೈಚಾರಿಕ ವಿವೇಚನೆಯನ್ನು ಸಹ ತೋರಿಸಿಕೊಡುತ್ತದೆ. 'ನಿದ್ದಿಗೆ ಮದ್ದುಂಟೆ' ಎಂಬ ಮಾತು ಇಂದಿನ ಆಧುನಿಕತೆಯ ಸಂದರ್ಭಗಳಲ್ಲಿ ತಮ್ಮ ಅರ್ಥ ಪರಂಪರೆಯನ್ನು ಕಳೆದುಕೊಂಡಿದ್ದು, ವಿವರಣಾತ್ಮಕವಾದ ವಿವೇಚನೆಗೆ ದಾರಿ ಮಾಡಿಕೊಡುತ್ತದೆ. ಆದರೆ 'ಬುದ್ಧಿಗೆ ಕೇಡುಂಟೆ' ಎಂಬ ಮಾತು, 'ಇದ್ಯ ಬಲ್ಲವಗೆ ಭಯವುಂಟೆ' ಎಂಬುದು ಹಾಗೂ 'ಮದ್ದುಂಟೆ ಜನನ ಮರಣಗಳಿಗೆ'

ಎಂಬ ಮಾತುಗಳು ವೈಜ್ಞಾನಿಕ ವಿವೇಚನೆಯ ನೆಲೆಯಲ್ಲಿ ನಿಂತು ನಾವು ಆಲೋಚಿಸುವಂತೆ ಪ್ರಚೋದಿಸುತ್ತವೆ.

ಬುದ್ಧಿ ಇರುವವರಿಗೆ ಯಾವುದೇ ಕೇಡು, ಹಾನಿಗಳು ಉಂಟಾಗವು. ಹಾಗೆಯೇ ವಿದ್ಯೆಯನ್ನು ಕಲಿತವನಿಗೆ ಯಾವ ಭಯ, ಆತಂಕ, ಹೆದರಿಕೆಗಳೂ ಇರುವುದಿಲ್ಲ ಎಂದು ತಿಳಿಸುವ ಜನಪದ ಗೀತೆಯು ಸಾರ್ವಕಾಲಿಕವಾದ ಸತ್ಯವೊಂದನ್ನು ನಮಗೆ ತಿಳಿಸಿಕೊಡುತ್ತದೆ. ಅದೆ 'ಮದ್ದುಂಟೆ ಜನನ ಮರಣಕ್ಕೆ' ಎಂಬುದು. ಈ ಮಾತು ವೈಚಾರಿಕ ಆಲೋಚನೆಗೆ ಹಾಗೂ ವೈಜ್ಞಾನಿಕ ಚಿಂತನೆಗೆ ಅರ್ಥಪೂರ್ಣವಾದ ಉದಾಹರಣೆಯಾಗಿದೆ. ಏಕೆಂದರೆ ಹುಟ್ಟು ಹಾಗೂ ಸಾವಿಗೆ ಯಾವುದೇ ರೀತಿಯ ಮದ್ದಿಲ್ಲ. ಅವೆರಡೂ ಕೂಡ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಒಂದನ್ನು ಬಿಟ್ಟು ಇನ್ನೊಂದಿಲ್ಲ. ಸಮಾಜ ಜೀವಿಗಳಾದ ನಾವುಗಳು ಇವುಗಳಲ್ಲಿನ ವಿಶಾಲ ಮನಸ್ಥಿತಿಗಳನ್ನು ವೈಚಾರಿಕತೆಯ ಆಶಯಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಇವುಗಳ ಬಹುಮುಖ್ಯ ಉದ್ದೇಶಗಳು ಅರಿವಾಗುತ್ತವೆ.

೬.೪. ಜನಪದ ಗೀತೆಗಳು ಮತ್ತು ಪಶು, ಪಕ್ಷಿಗಳ ಜೀವನ ಪ್ರೀತಿ

ಜನಪದರು ಕೃಷಿಯನ್ನು ಅವಲಂಬಿಸಿ ಬದುಕುವವರಾದ್ದರಿಂದ, ತನ್ನ ಸುತ್ತಮುತ್ತಲಿನ ಪ್ರಾಣಿ, ಪಕ್ಷಿಗಳೊಂದಿಗೆ ಅವಿನಾಭಾವವಾದ ಸಂಬಂಧವನ್ನು ಹೊಂದಿದ್ದಾನೆ. ಮಾನವನು ಕೂಡ ಒಂದು ಜೈವಿಕ ಪ್ರಾಣಿ ಎಂಬುದು ನಮಗೆ ತಿಳಿದಿರುವ ಸಂಗತಿಯೆ. ಕೃಷಿಯಾಧಾರಿತವಾದ ಬದುಕು ಜನಪದರದ್ದಾಗಿರುವುದರಿಂದ ಪ್ರಾಣಿ ಪಕ್ಷಿಗಳೆ ಆತನಿಗೆ ಜೀವನಾಧಾರ. ಅವುಗಳನ್ನು ಬಿಟ್ಟು ಜನಪದರ ಯಾವುದೇ ಚಟುವಟಿಕೆಗಳು ಸಾಗುವುದಿಲ್ಲ. ಹಾಗಾಗಿಯೇ ಆತನಿಗೆ ಹಣ, ಐಶ್ವರ್ಯಕ್ಕಿಂತ ಪ್ರಾಣಿಗಳು ಮಹತ್ವದ ಸ್ಥಾನವನ್ನು ಹೊಂದಿವೆ.

ಜನಪದರ ಜೀವನದಲ್ಲಿ ಪ್ರಾಣಿ ಪಕ್ಷಿಗಳ ಒಡನಾಟ ಒಂದು ನೆಲೆಯದ್ದಲ್ಲ. ಅವು ಜನಪದರಿಗೆ ಸ್ನೇಹಿತನಾಗಿ, ದುಡಿಮೆಗಾರನಾಗಿ, ಸೇವಕನಾಗಿ, ಆಹಾರವಾಗಿ, ಬದುಕಿನ ದಿಕ್ಸೂಚಿಯಾಗಿ ಮೊದಲಾದ ಅನೇಕ ಕ್ರಿಯೆಗಳಾಗಿ ಆತನ ಜೀವನದಲ್ಲಿ ಬಿಡಿಸಲಾರದಂತೆ ಬೆಸೆದುಕೊಂಡಿವೆ. ಹಾಗಾಗಿಯೆ ಮಾನವ ಕೃಷಿ ಚಟುವಟಿಕೆಗಳಿಗಾಗಿ, ಆಹಾರಕ್ಕಾಗಿ, ಆರ್ಥಿಕ ಸಂಪನ್ಮೂಲಗಳ ಕಾರಣವಾಗಿ ಪ್ರಾಣಿ ಪಕ್ಷಿಗಳನ್ನು ತನ್ನೊಂದಿಗೆ ಸಾಕುತ್ತ ಬದುಕನ್ನು ಮುಂದುವರೆಸಿದ್ದಾನೆ. ಆದರೆ ಜನಪದರು ಮತ್ತು ಪ್ರಾಣಿಗಳ ಸಂಬಂಧದ ವ್ಯಾಪ್ತಿ, ಹರಹು ಇಷ್ಟಕ್ಕೆ ಮಾತ್ರವೇ ಸೀಮಿತವಾಗಿ ಉಳಿದಿಲ್ಲ. ಕ್ರೂರ ಪ್ರಾಣಿಗಳಿಗಿಂತ ಸಾಕು ಪ್ರಾಣಿಗಳ ನಡುವೆ ಜನಪದರ ಒಡನಾಟ ಹೆಚ್ಚಿದೆ.

ಪ್ರಾಣಿ ಪಕ್ಷಿಗಳಿಗೂ ಮನುಷ್ಯನ ಮಾತು ಅರ್ಥವಾಗುತ್ತದೆ ಎಂಬುದಕ್ಕೆ ಅವುಗಳು ನೀಡುವ ಪ್ರತಿಕ್ರಿಯೆಗಳೇ ನಿದರ್ಶನಗಳಾಗಿವೆ. ತನ್ನ ಒಡೆಯನನ್ನು ಕಂಡಾಕ್ಷಣ 'ಅಂಬಾ' ಎನ್ನುವ ಹಸು, ನೋಡಿದ ಕೂಡಲೆ ಓಡಿ ಬಂದು ಬಾಲ ಅಲ್ಲಾಡಿಸುತ್ತ ಸರಸಾಟವಾಡುವ ನಾಯಿ, ತನ್ನ ಒಡೆಯನ ಕಾಲಿಗೆ ತನ್ನ ಮೈಯನ್ನು ತಿಕ್ಕುವ ಬೆಕ್ಕು ಇವೆಲ್ಲಕ್ಕು ಸೂಕ್ಷ್ಮ ಸಂವೇದನೆಗಳಿದ್ದು, ಒಡೆಯನ ಮನಸ್ಸಿನ

ಭಾವನೆಗಳನ್ನು ಅರ್ಥೈಸಿಕೊಳ್ಳುವ ಶಕ್ತಿ ಇರುವುದು ತಿಳಿಯುತ್ತದೆ. ನಿಸರ್ಗದಲ್ಲಿನ ಹಸು, ಕುರಿ, ಕೋಳಿ, ಮೇಕೆ, ನಾಯಿ, ಬೆಕ್ಕು, ಹಾವು, ಗಿಳಿ ಮೊದಲಾದ ಪ್ರಾಣಿ ಪಕ್ಷಿಗಳೆಲ್ಲವು ಜನಪದರೊಂದಿಗೆ ಸಂವಹನವನ್ನು ನಡೆಸುತ್ತವೆ. ಇದಕ್ಕೆ ಅವುಗಳದೇ ಆದ ಸಂವಹನ ವ್ಯವಸ್ಥೆ ಜಾರಿಯಲ್ಲಿದ್ದು ಇವೆಲ್ಲವು ಮಾನವನೊಂದಿಗೆ ದಿನ ನಿತ್ಯದ ಬದುಕಿನಲ್ಲಿ ಪ್ರಮುಖ ಸ್ಥಾನವನ್ನು ಹೊಂದಿವೆ.

ಜನಪದರು ನೋವಿನಲ್ಲಿದ್ದರೆ ಆ ದುಃಖವನ್ನು ಗ್ರಹಿಸುವ ಶಕ್ತಿ ಇವುಗಳಲ್ಲಿದೆ. ಸಂತೋಷದಿಂದ ನಲಿಯುವಾಗಿನ ಕ್ಷಣದ ಖುಷಿಯನ್ನು ಅನುಭವಿಸುವ ಮನಸ್ಸು ಇದೆ. ಹೀಗೆ ಮಾನವ ಹಾಗೂ ಪ್ರಾಣಿ ಪಕ್ಷಿಗಳ ಸಂಬಂಧ ಬಿಡಿಸಲಾರದ್ದು. ಇದಕ್ಕೆ ಮುಖ್ಯ ಕಾರಣ ಇವುಗಳ ನಡುವೆ ಬೆಸೆದುಕೊಂಡಿರುವ ಜೀವನ ಪ್ರೀತಿ, ಮಾನವೀಯ ಮೌಲ್ಯಗಳು ಎಂಬುದು ಗಮನಿಸತಕ್ಕ ಸಂಗತಿಗಳು. ಜೀವನ ಪ್ರೀತಿ ಇಲ್ಲದೆ ಏನನ್ನೂ ಮಾಡಲು ಸಾಧ್ಯವಿಲ್ಲ. ಮಾನವೀಯ ಮೌಲ್ಯಗಳು, ಸ್ನೇಹ ಸಂಬಂಧಗಳಿಲ್ಲದೆ ಈ ಸೃಷ್ಟಿಯ ಯಾವುದೇ ಜೀವಿಗಳು ಉಳಿಯಲು ಸಾಧ್ಯವೂ ಇಲ್ಲ.

ಜನಪದರು ಹಸು, ಎತ್ತು, ಹಾವು, ನಾಯಿ, ಕೋತಿ, ಆಮೆ, ನವಿಲು, ಗರುಡ, ಆನೆ ಮೊದಲಾದ ಪ್ರಾಣಿ ಪಕ್ಷಿಗಳನ್ನು ತಮ್ಮ ಕುಲ ದೈವ, ಮನೆ ದೈವಗಳೆಂದು ಪೂಜಿಸುವ ಕ್ರಮಗಳಿವೆ. ಅಲ್ಲದೆ ತಮ್ಮ ಕೃಷಿ ಚಟುವಟಿಕೆಗಳಿಂದ ಹಿಡಿದು, ಯಾವುದೇ ಶುಭ ಸಮಾರಂಭವಾದರೂ ಕೂಡ ಈ ಪ್ರಾಣಿ ಪಕ್ಷಿಗಳ ಸಹಭಾಗಿತ್ವ ಈತನೊಟ್ಟಿಗಿರುವುದು ಕಾಣಬರುತ್ತದೆ. ಏಕೆಂದರೆ ಹಸು, ಹಾವು, ಕೋತಿ ಇವರ ಆರಾಧ್ಯ ದೈವಗಳಾಗಿದ್ದು, ಇವುಗಳಿಲ್ಲದೆ ಯಾವ ಕೆಲಸಗಳೂ ಸಾಗುವುದಿಲ್ಲ.

ತಮ್ಮ ಜೀವನಾಧಾರದ ಸಂಕೇತಗಳಾದ ಎತ್ತುಗಳೊಂದಿಗಿನ ಜನಪದರ ಬಾಂಧವ್ಯ. ಅವುಗಳೊಂದಿಗಿನ ಒಡನಾಟ ಬಿಡಿಸಲಾರದ್ದು. ಅವುಗಳೊಂದಿಗೆ ಪ್ರೀತಿಯಿಂದ ಸಂಭಾಷಣೆ ನಡೆಸುತ್ತಾರೆ. ಮೈಸವರುವುದು, ಮೈ ತೊಳೆಯುವುದು, ಉಣ್ಣೆ, ಚಿಗಟ ಮೊದಲಾದ ಕೀಟಗಳನ್ನು ಕಿತ್ತು ಹಾಕುತ್ತ ಅವುಗಳೊಂದಿಗೆ ತನ್ನದೇ ಆದ ಮಾನವೀಯ ಬಾಂಧವ್ಯವನ್ನು ಬೆಸೆದುಕೊಳ್ಳುತ್ತಾರೆ. ಇವರಲ್ಲಿ ಪ್ರೀತಿ, ವಿಶ್ವಾಸ, ಆತ್ಮೀಯತೆ, ಅನುಕಂಪ, ಕರುಣೆ, ಔದಾರ್ಯ, ಜೀವ ದಯೆಗಳನ್ನು ಕಾಣಬಹುದಾಗಿದ್ದು, ಇವು ತನ್ನ ಸುತ್ತಲಿನ ಸಮಾಜದೊಂದಿಗೆ ತಾನು ರೂಪಿಸಿಕೊಂಡಿರುವ ಆತ್ಮೀಯ ಒಡನಾಟದ ಮಾನವೀಯ ಮೌಲ್ಯ ಹಾಗೂ ಸಂಬಂಧಗಳಾಗಿವೆ.

> "ಕರಿಯೆತ್ತು ಕಾಳಿಂಗ ಬಿಳಿಯೆತ್ತು ಮಾಲಿಂಗ
> ಸರದರ ನನ್ನೆತ್ತು ಸಾರಂಗ । ಬರುವಾಗ
> ಮನೆಯ ಮಾಳಿಗ್ಯೆಲ್ಲ ನಡುಗ್ಯಾವು॥"[೨]

ತನ್ನ ಬದುಕಿನ ಜೀವನಾಧಾರವಾದ ಕೃಷಿಗೆ ಪ್ರಮುಖ ಆಧಾರ ಸ್ಥಂಭಗಳಾದ ತಾನು ಸಾಕಿ ಬೆಳೆಸಿದ ಎತ್ತುಗಳು ಬರುವುದನ್ನು ವರ್ಣಿಸುವ ಪರಿ ಇದಾಗಿದೆ. ಈತನಿಗೆ ಎತ್ತುಗಳು ಬರಿ ದುಡಿಯುವ ಪ್ರಾಣಿಗಳಲ್ಲ. ಅವನೊಂದಿಗೆ ಬಿಡಿಸಲಾರದಂತಹ ಬಾಂಧವ್ಯವನ್ನು ಪಡೆದಿವೆ. ಅದಕ್ಕಾಗಿಯೆ ಆತ 'ಸರದಾರ ನನ್ನೆತ್ತು' ಎಂದು ಅವುಗಳನ್ನು ಸಂಭೋದಿಸುತ್ತಾನೆ. ಇಲ್ಲಿನ ಆತ್ಮೀಯತೆ ಹಾಗೂ

ಅವಿನಾಭಾವ ಬಾಂಧವ್ಯಗಳು ಪ್ರಾಣಿಗಳೊಂದಿಗೆ ಜನಪದರು ಹೊಂದಿರುವ ಬಿಡಿಸಲಾರದ ನಂಟನ್ನು ತಿಳಿಸಿಕೊಡುತ್ತವೆ.

ಪ್ರಾಣಿ, ಪಕ್ಷಿಗಳನ್ನು ಜನಪದರು ಕೇವಲ ದುಡಿಮೆಗಾಗಿ ಅಥವಾ ಆರ್ಥಿಕ ಸಂಪತ್ತಿಗಾಗಿ ಸಾಕಿದವರಲ್ಲ. ಹಾಗೆಯೆ ಜನಪದ ಗೀತೆಗಳಲ್ಲಿಯು ಸಹ ಅವು ಶ್ರಮ ಜೀವಿಗಳಾಗಿ ಮಾತ್ರವೇ ಉಲ್ಲೇಖಿತವಾಗಿಲ್ಲ. ನೀತಿ ಹಾಗೂ ಬುದ್ಧಿ ಮಾತುಗಳನ್ನು ಹೇಳುವ ಸಂದರ್ಭದಲ್ಲಿ ಪ್ರಾಣಿ ಪಕ್ಷಿಗಳು ಬಳಕೆಯಾಗಿರುವುದನ್ನು ಸಹ ಜನಪದ ಗೀತೆಗಳಲ್ಲಿ ಕಾಣಬಹುದಾಗಿದೆ.

"ಕಾಗೀಗಿ ಕಣ್ಣಿಟ್ಟ ಕರಿಯ ಹುಬ್ಬಿನ ಜಾಣ
ಮಾವಿನ ಹಣ್ಣ ಮನಿಯಾಗ । ಇಟ್ಟುಗೊಂಡು ।
ನೀರಲಗ್ಯಾಕ ಮನಸಿಟ್ಟಾ॥"[೩೩]

ಈ ಜನಪದ ಗೀತೆಯು ಪುರುಷನೊಬ್ಬ ತನ್ನ ಪತ್ನಿಯನ್ನು ಬಿಟ್ಟು ಬೇರೊಂದು ಹೆಣ್ಣನ್ನು ಬಯಸುತ್ತಿರುವ ಅಂಶವನ್ನು ತಿಳಿಸುತ್ತಿದೆಯಾದರೂ ಕೂಡ ಆ ವಿಚಾರವನ್ನು ಕವಿ ಪ್ರಾಣಿ, ಪಕ್ಷಿಗಳು ಹಾಗೂ ಹಣ್ಣಿನ ಸಂಕೇತದ ಮೂಲಕ ತಿಳಿಯಪಡಿಸುವುದು ಕಂಡುಬರುತ್ತದೆ. ಹಾಗೆಯೆ ಹೆಂಡತಿಯ ಬಣ್ಣದಿಂದ ಅವಳ ಗುಣವನ್ನು ಅಳೆಯಲು ಸಾಧ್ಯವಿಲ್ಲ ಎಂಬುದನ್ನು ಹೀಗೆ ತಿಳಿಸುತ್ತಾನೆ.

"ಕೆಂಪು ಹೆಂಡತಿಯೆಂದು ಸಂತೋಷಪಡಬೇಡ
ಅತ್ತಿಯ ಹಣ್ಣು ಅತಿ ಕೆಂಪು । ಇದ್ದರು ।
ಒಡೆದು ನೋಡಿದರ ಹುಳ ಭಾಳ ॥"[೩೪]

ಇಲ್ಲಿಯು ಸಹ ಅತ್ತಿಯ ಹಣ್ಣಿನ ಮೂಲಕ ಜೀವನದ ನೀತಿ ಪಾಠವನ್ನು ಹೇಳುತ್ತಿರುವುದು ಕಂಡುಬರುತ್ತದೆ. ಜೊತೆಗೆ ಪರಸ್ತ್ರೀಗೆ ಆಸೆ ಪಟ್ಟವನ ಸ್ಥಿತಿ ಏನಾಗುತ್ತದೆಂಬುದನ್ನು ಸಹ ಪ್ರಾಣಿ, ಪಕ್ಷಿಗಳ ರೂಪಕದ ಮೂಲಕ ಜನಪದ ಗೀತೆಗಳು ತಿಳಿಯಪಡಿಸುತ್ತವೆ. ಜನಪದರು ಬಣ್ಣಕ್ಕಿಂತ ಗುಣಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟವರು. ಹಾಗಾಗಿಯೇ ಕಪ್ಪು, ಕೆಂಪು ಬಣ್ಣಗಳಲ್ಲಿ ಅವರಿಗೆ ಆಸಕ್ತಿ ಇಲ್ಲ. ನೆಮ್ಮದಿಯುತವಾದ ಹಾಗೂ ಸಹಬಾಳ್ವೆಯುತವಾದ ಬದುಕು ಅವರಿಗೆ ಮುಖ್ಯವಾದುದು.

"ಇಬ್ಬರ್ಹೆಂಡಿರನಾದಾ ಏಡಿಯ ಮುಳ್ಳಾದಾ
ಕೋಡಗನಾದ ಕೊರವಾದ । ಬಾಲ್ಯಾರು ।
ಮಾಡಿಟ್ಟ ಸಿಂಬಿಯರಿವ್ಯಾದಾ॥"[೩೫]

ಪರಸ್ತ್ರೀಯರನ್ನು ಬಯಸುವಂತಹ ವ್ಯಕ್ತಿಯ ಸ್ಥಿತಿಯನ್ನು ತಿಳಿಸಲು ಜನಪದರು ಪ್ರಾಣಿ ಪಕ್ಷಿಗಳನ್ನು ರೂಪಕವಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಸಮಾಜ ಬಾಹಿರವಾದ ಕೆಟ್ಟಕೆಲಸಗಳನ್ನು ಖಂಡಿಸುವ ಹಾಗೂ ಅದಕ್ಕೆ ಒದಗುವ ಶಿಕ್ಷೆಯನ್ನು ಸಹ ಗೀತೆಗಳು ಈ ಮುಖೇನ ತಿಳಿಸುತ್ತವೆ. ಇಬ್ಬರು ಹೆಂಡತಿಯರನ್ನು ಮದುವೆಯಾದವನು ಹಾಗೂ ಮತ್ತೊಂದು ಹೆಣ್ಣನ್ನು ಬಯಸುವವನು ಏಡಿಯ ಮುಳ್ಳಾದ, ಕೋಡಗನಾದ, ಕೊರವಾದ. ಹಾಗೆಯೆ ಬಾಲೆಯರು ಮಾಡಿಟ್ಟ ಸಿಂಬೆಯ

ಬಟ್ಟೆಯಾದ ಎನ್ನುತ್ತವೆ ಜನಪದ ಗೀತೆಗಳು. ಅಂದರೆ ಮಾನವನ ಬದುಕಿನೊಟ್ಟಿಗೆ ಪ್ರಾಣಿ, ಪಕ್ಷಿಗಳು ಸಾಗುವುದನ್ನು ಗೀತೆಗಳು ತಿಳಿಯಪಡಿಸುತ್ತವೆ. ಅಲ್ಲದೆ ಇವು ನಮ್ಮ ಸಂಸ್ಕೃತಿಯ ಭಾಗವೇ ಆಗಿವೆ.

"ಸಾರಿಸಿದ ಮನಿಯಾಗ ನೀರ್‍ಯಾರು ಚಲ್ಯಾರ
ಪಾರಿವಾಳಾಡಿ ಗಿಣಿಯಾಡಿ । ಹಡೆದವ್ವ ।
ಮೊಮ್ಮಕ್ಕಳಾಡಿ ಮನಿಗ್ಯಾರ॥"[೩೬]

ಮಗುವಿನ ತುಂಟತನದ ಕೆಲಸಗಳೂ ತಾಯಿಗೆ ಸಂತೋಷ ಹಾಗೂ ಸುಖವನ್ನು ಕೊಡುವಂತಹವು. ಅದಕ್ಕಾಗಿ ಆಕೆ ಸಿಟ್ಟಾಗುವುದಿಲ್ಲ, ಖುಷಿಪಡುತ್ತಾಳೆ. ಇದು ಮಗುವಿನ ಕೀಟಲೆಯ ವಿವರಗಳನ್ನು ಹೇಳುತ್ತಿದೆಯಾದರೂ ಕೂಡ ಇಲ್ಲಿನ ಪಾರಿವಾಳ, ಗಿಣಿಗಳು ಜನಪದರೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧವನ್ನು ಹಾಗೂ ಅವುಗಳ ಮೇಲಿನ ಜೀವನ ಪ್ರೀತಿಯನ್ನು ನಮಗೆ ಮನಗಾಣಿಸುತ್ತದೆ. ಅಲ್ಲದೆ ಜನಪದರು ಪ್ರಾಣಿ, ಪಕ್ಷಿಗಳನ್ನು ತಮ್ಮ ಮನೆಯ ಮಕ್ಕಳಂತೆ ಸಾಕಿ ಸಲಹುತ್ತಿದ್ದ ವಿವರಗಳು ಸಹ ನಮಗೆ ಈ ಗೀತೆಗಳಿಂದ ತಿಳಿಯುತ್ತದೆ. ಇದರಂತೆಯೆ

"ಕೂಸ ನನ್ನ ಕಂದಯ್ಯ ಕೇಸ ಬಿಟ್ಟಾಡಾಗ
ದೇಶದಿಂವೆರಡು ಗಿಣಿ ಬಂದು । ಕೇಳ್ಯಾವ ।
ಕೂಸ ನೀರಾರ ಮಗನೆಂದು॥"[೩೭]

ಈ ಜನಪದ ಗೀತೆಯು ಕಂದನು ಆಟ ಆಡುವ ವಿವರಗಳನ್ನು ತಿಳಿಸುವ ಜೊತೆಗೆ ಆ ಮಗುವಿನ ಆಟವನ್ನು ನೋಡಲು ಬಂದು ಆ ಮಗುವಿನ ವಿವರಗಳನ್ನು ಕೇಳುವ ಗಿಣಿಯ ವಿಚಾರಗಳನ್ನು ತಿಳಿಯಪಡಿಸುತ್ತದೆ.

"ಬಣ್ಣದ ಸರದ ಮೇಲೆ ಕಣ್ ಯಾಕೊ ಗಿಣಿರಾಮು
ಹಣ್ಣಿಲ್ಲವೇನೊ ಮೆಲುವೋಕೆ । ನಿಮ ಕುಲದ
ಹೆಣ್ಣಿಲ್ಲವೇನೊ ತರುವೋಕೆ?"[೩೮]

ನೀರಿಗೆ ಹೊರಟಿದ್ದ ಹೆಣ್ಣೊಬ್ಬಳನ್ನು ತಡೆದು ನಿಲ್ಲಿಸಿದ ಗಂಡನ್ನು ಕೀಟಲೆ ಮಾಡುವಂತಿದೆ ಈ ಜನಪದ ಗೀತೆ. ಈ ಗೀತೆಯು ಗಂಡು ಹೆಣ್ಣುಗಳ ಪ್ರೇಮದ ನಿವೇದನೆಯನ್ನು ತಿಳಿಸುತ್ತದೆಯಾದರೂ ಪ್ರೇಮಿಗೆ ಸಂಕೇತವಾಗಿ ಬಳಸಿರುವ 'ಗಿಣಿ'ಯು ಜನಪದರಲ್ಲಿ ಹೊಂದಿರುವ ಅವಿನಾಭಾವ ಸಂಬಂಧವನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ.

"ಗಿಳಿ–ಪ್ರೇಮಿಗೆ, ಕೋಗಿಲೆ–ಪ್ರೇಯಸಿಗೆ, ತುಂಬೆ ಹೂ–ಚೆಲುವೆಗೆ, ಬಾವಿ ನೀರು–ನಡತೆ ಕೆಟ್ಟವಳಿಗೆ, ಕೆರೆಯ ನೀರು–ವಿವಾಹಿತಳಿಗೆ, ಹರಿಯುವ ನೀರು–ವೇಶ್ಯೆಗೆ, ಕಳ್ಳಡಿಕೆ–ಹೆಂಡತಿಗೆ, ಕದರಡಕೆ–ವೇಶ್ಯೆಗೆ, ದಾಳಿಂಬೆ–ಹೆಣ್ಣಿಗೆ ಸಂಕೇತವಾಗಿ ಬಳಸಿರುವುದನ್ನು ಅಲ್ಲಲ್ಲಿ ಕಾಣಬಹುದು"[೩೯] ಎಂಬ ಮಾತುಗಳಲ್ಲಿ ಉಲ್ಲೇಖಿತವಾಗಿರುವ ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಮಾನವರ ಬದುಕಿನ ಒಂದೊಂದು ಮಧುರ ಸಂಗತಿಗಳನ್ನು ಹೇಳುವ ಸಂಕೇತಗಳಾಗಿ ಬಳಕೆಯಾಗುತ್ತಿದ್ದರೂ

ಸಹ, ಈ ಪಕ್ಷಿಗಳು ಮಾನವರ ಬದುಕಿನೊಂದಿಗೆ ಬೆಸೆದುಕೊಂಡಿರುವ ಬಿಡಿಸಲಾಗದಂತಹ ಒಡನಾಟದ ಗುಣಗಳನ್ನು ಕಾಣಬಹುದಾಗಿದೆ.

"ಆ ಬೆಕ್ಕಿನ ಪದವ ಸೇರಿದೋ ನಮ್ಮಯ್ನ
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು

ಅವರೇ ಹೊಲಕೆ ಹೋಯ್ತಿತ್ತು ಅವರೆಕಾಯಿ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಆ ಬೆಕ್ಕಿನ ಪದವ ಸೇರಿದೋ ನಮ್ಮಯ್ನ
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು

ಅವರು ಗುಡ್ಸಿಗಿಡ್ಸಿ ಎಲ್ಲೋಯ್ತೋ ಹಾಸುಲೋ ಬಡ್ವೆವ್ವ
ಹಾಸುಲಾರ ತಮ್ಮಯ್ಯ ಜ್ವರಬಂಧೈತೆ
ನನ್ನ ಬೆಕ್ಕಿನ ಪದವ ಸೇರಿಯೋ ತಮ್ಮಯ್ನ
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಕಳ್ಳೆಹೊಲಕ್ಕೆ ಹೋಯ್ತಿತ್ತು ಕಳ್ಳೆಕಾಯಿ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಅವರೆ ಹೊಲಕೆ ಹೋಯ್ತಿತ್ತು ಅವರೆಕಾಯಿ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಹತ್ತಿ ಹೊಲಕೆ ಹೋಯ್ತಿತ್ತು ಹತ್ತಿಕಾಯಿ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಆಚೇಗೀಚೆ ನೋಡ್ತಿತ್ತು ಉತ್ತಿನಕ್ವಾವೆ ನೋಡ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಬೆಕ್ಕಿನ ಪದವ ಸೇರಿದೋ ತಮ್ಮಯ್ನ
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಉದ್ದುಹೊಲಕೆ ಹೋಯ್ತಿತ್ತು ಉದ್ದುಕಾಯಿ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಉಳ್ಳಿಹೊಲಕೆ ಹೋಯ್ತಿತ್ತು ಹುಳ್ಳಿಕಾಯಿ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಬೆಕ್ಕಿನ ಪದವ ಸೇರಿದೋ ತಮ್ಮಯ್ನ
ಭತ್ತದ ಹೊಲಕೆ ಹೋಯ್ತಿತ್ತು ಭತ್ತಗೊನೆ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು

ಬೆಕ್ಕಿನ ಪದವ ಸೇರಿದೋ ತಮ್ಮಯ್ನ
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಬೆಕ್ಕಿನ ಪದವ ಸೇರಿದೋ ಬೆಕ್ಕು
ಬೆಕ್ಕಿನ ಪದವ ಸೇರಿದೋ ತಮ್ಮಯ್ನ
ಆಚೆ ಗೀಚೆ ನೋಡಿತ್ತು ಉತಿವಕ್ವಾವೆ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು
ಹಸುರು ಹೊಲಕೆ ಹೋಯ್ತಿತ್ತು ಹಸುರುಕಾಯಿ ತತ್ತಿತ್ತು
ತಮ್ಮ ಬೆಕ್ಕು ಸತ್ತೋಯ್ತಲ್ಲ ಬೆಕ್ಕು.........”[೮೦]

ಪ್ರಸ್ತುತ ಪದವು ಸಾಕಿದ್ದ ಬೆಕ್ಕು ಸತ್ತ ವಿಚಾರವನ್ನು ಕುರಿತು ವಿವರಿಸುತ್ತದೆ. ಆ ಬೆಕ್ಕು ಬದುಕಿರುವಾಗ ಮಾಡುತ್ತಿದ್ದ ಕೆಲಸಗಳನ್ನು ನೆನಪಿಸಿಕೊಂಡು ದುಃಖಿಸುವ ವಿವರಗಳಿವೆ. ಆ ಬೆಕ್ಕು ಅವರೆ ಹೊಲಕೆ ಹೋಗಿ ಅವರೆ ಕಾಯಿ ತರುತ್ತಿದ್ದ ಸಂಗತಿ, ಕಳ್ಳೆ ಹೊಲಕ್ಕೆ ಹೋಗಿ ಕಳ್ಳೆಕಾಯಿ ತರುತ್ತಿದ್ದುದು, ಹತ್ತಿ ಹೊಲಕ್ಕೆ ಹೋಗಿ ಹತ್ತಿಕಾಯಿ ತರುತ್ತಿದ್ದ ವಿವರ, ಉದ್ದಿನ ಹೊಲಕ್ಕೆ ಹೋಗಿ ಉದ್ದುಕಾಯಿ ತರುತ್ತಿದ್ದ ವಿವರ, ಉಳ್ಳಿ ಹೊಲದಿಂದ ಹುಳ್ಳಿಕಾಯಿ, ಭತ್ತದ ಹೊಲದಿಂದ ಭತ್ತದ ಗೊನೆ, ಹಸುರು ಹೊಲದಿಂದ ಹಸುರುಕಾಯಿ ತರುತ್ತಿದ್ದ ವಿವರಗಳನ್ನು ನೆನಪಿಸಿಕೊಂಡು ದುಃಖಿಸುವ ಸಂಗತಿಗಳು ಇಲ್ಲಿ ತಿಳಿಯುತ್ತವೆ. ಇವೆಲ್ಲವೂ ಕೂಡ ಪ್ರಾಣಿ ಪಕ್ಷಿಗಳು ಜನಪದರೊಂದಿಗೆ ಹೊಂದಿರುವ ಅವಿನಾಭಾವ ಸಂಬಂಧವನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ.

೬.೫. ಜನಪದ ಗೀತೆಗಳು ಮತ್ತು ಜನಪದರ ಅವಿನಾಭಾವ ಸಂಬಂಧ

ಜಾನಪದವು ಬದುಕಿನ ಎಲ್ಲ ಮುಖಗಳನ್ನೊಳಗೊಂಡ ಸಮಷ್ಟಿ ಪ್ರಜ್ಞೆಯಾಗಿದೆ. ಇದರಲ್ಲಿ ಜನಪದರು ತಮ್ಮ ಬಾಳಿನ ಹಾದಿಯಲ್ಲಿ ಅನುಭವಿಸಿದ ನೋವು, ನಲಿವುಗಳು, ಬದುಕಿನ ಏರು – ಪೇರು, ಸೋಲು – ಗೆಲುವು, ಎತ್ತರ – ಬಿತ್ತರಗಳ ಮಿಡಿತವಿದೆ. ಜನಪದರ ಭಾಷೆ ಅವರ ಭಾವನೆಗಳ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಜನಪದ ಸಾಹಿತ್ಯವು ಹಳ್ಳಿಗಾಡಿನ ಸಾಮಾನ್ಯ ಜನತೆಯ ಸಂಸ್ಕೃತಿಯ ಪ್ರತಿಬಿಂಬ. ಇದರಲ್ಲಿ ಜನರ ಆಚಾರ, ವಿಚಾರ, ಜೀವನದ ರೀತಿ, ನೀತಿಗಳ ವಿವರಗಳು ಕಂಡುಬರುತ್ತವೆ. ಜನಪದ ಗೀತೆಗಳು ಜನಪದರೊಂದಿಗೆ ಬಿಡಿಸಲಾರದಂತಹ ಅವಿನಾಭಾವ ಸಂಬಂಧವನ್ನು ಹೊಂದಿವೆ. ಇವುಗಳಲ್ಲಿ ಜನಪದರ ಸುಖ, ದುಃಖ, ಆಸೆ, ಆಕಾಂಕ್ಷೆ, ಸಂಶಯ, ಭಯ, ಬಂಜೆತನದ ಕಷ್ಟಗಳು, ದೇವರಲ್ಲಿನ ಭಕ್ತಿ, ಮಾತೃಪ್ರೇಮ, ಪ್ರಕೃತಿಯ ಜೊತೆಗಿನ ನಂಟು, ಬದುಕಿನ ನಡುವಿನ ಹಾಸ್ಯ, ವಿನೋದ ಮೊದಲಾದ ವಿವರಗಳು ಒಡಮೂಡಿರುವುದು ಕಂಡುಬರುತ್ತದೆ.

ಭೂಮಿ ಪೂಜೆ, ಬಿತ್ತುವುದು, ಹೊಲ ಗದ್ದೆಗಳ ಕೆಲಸ, ಆಟಗಳು, ಹಬ್ಬಗಳ ಸಂದರ್ಭದಲ್ಲಿ ಜನಪದರು ಗೀತೆಗಳನ್ನು ಹಾಡುವ ಮೂಲಕ ಅವುಗಳೊಂದಿಗೆ ತಮ್ಮ ಅವಿನಾಭಾವವಾದ ಒಡನಾಟವನ್ನು ಬೆಳೆಸಿಕೊಂಡಿದ್ದಾರೆ. ಜನಪದ ಗೀತೆಗಳ ಹಾಡುವಿಕೆ ಇಲ್ಲದೆ ಜನಪದರ ಯಾವುದೇ

ಕೆಲಸ ಕಾರ್ಯಗಳು ನಡೆಯುವುದಿಲ್ಲ. ಇಲ್ಲಿನ ಜನಪದ ಗೀತೆಗಳನ್ನು ಕೆಲಸದ ಹಾಡುಗಳು, ಮಕ್ಕಳ ಹಾಡುಗಳು, ಹೆಂಗಸರ ಹಾಡುಗಳು, ಗಂಡಸರ ಹಾಡುಗಳು ಎಂದು ವರ್ಗೀಕರಿಸಬಹುದು. ಈ ರೀತಿಯ ವರ್ಗೀಕರಣಗಳು ಸಹ ಜನಪದ ಗೀತೆಗಳೊಂದಿಗಿನ ಜನಪದರ ಸಂಬಂಧವನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ. ಸಮಾಜ, ಸಂಪ್ರದಾಯಗಳ ಮಹತ್ವದ ಅಂಶಗಳನ್ನು ಇಲ್ಲಿ ಕಾಣುತ್ತೇವೆ. ಜೊತೆಗೆ ಪ್ರಕೃತಿಯೊಂದಿಗಿನ ಜನಪದರ ಒಡನಾಟ ಕೂಡ ಬಿಡಿಸಲಾರದಂತಹದ್ದು. ವಾಕ್ ಸಂಪ್ರದಾಯದಲ್ಲಿ ಉಳಿದು ಬಂದ ಜನಪದ ಗೀತೆಗಳ ಮುಖ್ಯ ವಸ್ತು ವಿಷಯ ಜನಪದರ ಬದುಕಿನ ವಿವಿಧ ಆಯಾಮಗಳಾಗಿವೆ.

ಜನಪದರ ಜೀವನದ ಹಲವು ಘಟ್ಟಗಳಾದ ಬಾಲ್ಯ, ಯೌವ್ವನ, ಮದುವೆ, ಮುಂಜಿ, ಮೈನೆರೆಯುವಿಕೆ, ಮುಪ್ಪುಗಳಿಗೆ ಸಂಬಂಧಿಸಿದಂತೆ ಗೀತೆಗಳ ವ್ಯಾಪ್ತಿ ಇದೆ. ಇದರ ರಚನಾಕಾರರು ಯಾರೆಂಬುದು ತಿಳಿದಿಲ್ಲವಾದರೂ ಸಾಮಾಜಿಕ ಸಂದರ್ಭದಲ್ಲಿ ಈ ಗೀತೆಗಳು ಮಹತ್ತರವಾದ ಪಾತ್ರವನ್ನು ವಹಿಸಿವೆ. ಜನಪದರ ಜೀವನ ಹಾಗೂ ಸಂಸ್ಕೃತಿಯನ್ನು ರೂಪಿಸುವಲ್ಲಿ ಜನಪದ ಗೀತೆಗಳಿಗೆ ವಿಶೇಷವಾದ ಸ್ಥಾನವಿದೆ. ಇವು ಜನಪದರ ಅವಿಭಾಜ್ಯ ಅಂಗವಾಗಿದ್ದು, ಆರೋಗ್ಯಪೂರ್ಣ ಸಮಾಜ ನಿರ್ಮಾಣದ ಶಕ್ತಿ ಕೇಂದ್ರಗಳಾಗಿವೆ. ಹುಟ್ಟು, ಸಾವು, ಮಳೆ, ಗಾಳಿಗಳಿಗೆ ಸಂಬಂಧಿಸಿದಂತಹ ಗೀತೆಗಳು ಅವುಗಳೊಂದಿಗಿನ ಜನಪದರ ಬಾಂಧವ್ಯಗಳು ವರ್ಣನಾತೀತ. ಮಳೆರಾಯನನ್ನು ಧರೆಗೆ ಬರುವಂತೆ ವಿನಮ್ರವಾಗಿ ಆಹ್ವಾನಿಸುತ್ತಾರೆ.

'ಹುಯ್ಯೋ ಹುಯ್ಯೋ ಮಳೆರಾಯ
ಹೂವಿನ ತೋಟಕೆ ನೀರಿಲ್ಲ
ಬಾರೋ ಬಾರೋ ಮಳೆರಾಯ
ಬಾಳೆಯ ತೋಟಕೆ ನೀರಿಲ್ಲ'

ಎಂದು ಮಳೆರಾಯನನ್ನು ಕರೆಯುತ್ತಾರೆ. ನೀನು ಬರದೇ ಹೋದರೆ ನಮ್ಮ ಜೀವನ ದುಸ್ತರವಾಗುತ್ತದೆ. ಜೊತೆಗೆ ನಮ್ಮ ಬದುಕಿಗಾಗಿ ನಂಬಿಕೊಂಡಿರುವ ಹೊಲ, ಗದ್ದೆ, ತೋಟಗಳೆಲ್ಲವು ಒಣಗಿ ನಾಶವಾಗುತ್ತವೆ ಎಂದು ಬೇಡಿಕೊಳ್ಳುತ್ತಾರೆ. ಜನಪದರಿಗೆ ಮಳೆ ಅತೀ ಅಗತ್ಯವಾದುದು. ಮಳೆ ಬಿದ್ದರೆ ಧರೆಯ ಜೀವಿಗಳಿಗೆಲ್ಲ ಉಳಿಗಾಲ. ಇಲ್ಲದಿದ್ದರೆ ಇಡೀ ಜೀವಿಗಳೆಲ್ಲ ಆಹಾರವಿಲ್ಲದೆ ನಾಶ ಹೊಂದುವುದು ತಿಳಿಯುತ್ತದೆ. ಈ ರೀತಿಯ ಅನಾಹುತಗಳು ಸಂಭವಿಸದಿರಲೆಂದು ಮಳೆರಾಯನನ್ನು ಆಹ್ವಾನಿಸುತ್ತಾರೆ.

ಹೀಗೆಯೇ ಭೂಮಿಯೊಂದಿಗಿನ ಸಂಬಂಧವೂ ಕೂಡ ಬಿಡಿಸಲಾರದ್ದು. ಭೂಮಿಯನ್ನು ತಾಯಿಯೆಂದು ಪರಿಗಣಿಸುವ ಜನಪದರ ಮನಸ್ಸು ಧರಣಿಯಂತೆಯೇ ತಾಳ್ಮೆಯ ಪ್ರತೀಕವಾದುದು. ಅದರಂತೆಯೇ ಆಕಾಶವನ್ನು ನಿಗೂಢ ಶಕ್ತಿಯ ಪ್ರತೀಕವಾಗಿ ನೋಡುವ ಕ್ರಮ ಜನಪದರ ಜೀವನ ವಿಧಾನವನ್ನು ತಿಳಿಸಿಕೊಡುತ್ತದೆ. ಅದಕ್ಕಾಗಿಯೇ ಅವರು

"ಬೆಳಗಾಗಿ ನಾನೆದ್ದು ಯಾರ್‍ಯಾರ ನೆನಯಲಿ
ಎಳ್ಳು ಜೀರಿಗೆ ಬೆಳೆಯೋಳ – ಭೂತಾಯ
ಎದ್ದೊಂದು ಗಳಿಗೆ ನೆನೆದೇನು"[೪೧]

ಎಂದು ಹಾಡುವ ಮೂಲಕ ತನ್ನ ಮನದ ಧನ್ಯತಾ ಭಾವವನ್ನು ಹೊರಹಾಕಿದ್ದಾರೆ. ಇದು ಕೃಷಿ ಸಂಸ್ಕೃತಿಯನ್ನು ತಿಳಿಸುವ ಜೊತೆ ಜೊತೆಗೆ ಜನಪದರ ಲೋಕ ದೃಷ್ಟಿಯನ್ನು ನಮಗೆ ಪರಿಚಯಿಸುತ್ತದೆ. ಏಕೆಂದರೆ ಜಗತ್ತಿಗೆ ಅನ್ನದಾತೆಯಾದ ಭೂತಾಯಿಯೇ ಎಲ್ಲ ದೈವಗಳಿಗೂ ಮಿಗಿಲಾದ ದೇವರು. ಈ ಭಾವನೆ ಜನಪದರ ವಿಶಾಲ ಮನಸ್ಸಿನ ಪ್ರತೀಕವೂ ಆಗಿದೆ.

ಜನಪದ ಗೀತೆಗಳ ಮೂಲಕ ತಮ್ಮ ಆಲೋಚನೆ, ಭಾವನೆ, ಸಿಟ್ಟು, ಹಾಡು, ಹಸೆ, ಹುಟ್ಟು, ಸಾವು, ದುಡಿಮೆ, ಶೋಷಣೆ, ಕುಟುಂಬ, ದಾಂಪತ್ಯ ಜೀವನ ಇಂತಹ ಅನೇಕ ಸಂಗತಿಗಳನ್ನು ಕುರಿತ ತಮ್ಮ ಧೋರಣೆಗಳನ್ನು ಜನಪದ ಗೀತೆಗಳ ಮೂಲಕ ಹೊರ ಹಾಕಿದ್ದಾರೆ. ಬಡತನ, ಹಸಿವು, ಗಂಡು ಹೆಣ್ಣುಗಳ ನಡುವಿನ ಸಂಬಂಧ, ಅವರ ಜೀವನ ವಿಧಾನಗಳು ಮೊದಲಾದ ಹತ್ತು ಹಲವು ವಿಚಾರಗಳು ಜನಪದ ಗೀತೆಗಳಲ್ಲಿ ಸ್ಥಾನವನ್ನು ಪಡೆದಿವೆ. ಜನಪದ ಗೀತೆಗಳಲ್ಲಿನ ಮಾನವೀಯ ಗುಣ, ಲೋಕ ದೃಷ್ಟಿಗಳು ಜನಪದರ ಬದುಕನ್ನು ಹಸನಾಗಿಸುವ ಜೊತೆಗೆ ತನ್ನತ್ತ ಅವರು ಆಕರ್ಷಿತರಾಗಲು ಕಾರಣವಾಗಿದೆ.

"ಕುಟ್ಟುವಾಗ, ಬೀಸುವಾಗ, ನಾಟಿ ಹಾಕುವಾಗ, ಕಳೆ ಕೀಳುವಾಗ ಮುಂತಾದ ಅನೇಕ ದುಡಿಯುವ ಸಂದರ್ಭಗಳಲ್ಲಿ ಹೆಂಗಸರು ನಾನಾ ಬಗೆಯ ಪದಗಳನ್ನು ಹಾಡುತ್ತಾರೆ. ಈ ಹಾಡುವವರು ಮತ್ತು ಕೇಳುವವರಿಗೆ ತಾವು ಮಾಡುತ್ತಿರುವ ಶ್ರಮದ ಕೆಲಸ ಅರಿವಾಗುವುದೇ ಇಲ್ಲ. ಹಾಡುಗಳು ಕೂಡ ಮುಗಿಯುವುದಿಲ್ಲ. ದೇವರು, ಭಕ್ತಿ, ಪ್ರಕೃತಿ, ತವರಿನವರು, ರಕ್ತ ಸಂಬಂಧ, ಗೆಳೆತನ, ನೋವು, ನಲಿವುಗಳು, ಪ್ರೇಮ, ದುರಂತಮಯ ಬದುಕು ಇವೇ ಮೊದಲಾದ ಹಲವು ಹನ್ನೊಂದು ಸಂಗತಿಗಳನ್ನೂ ಈ ಹಾಡುಗಳು ಒಳಗೊಂಡಿವೆ"[೪೨] ಎಂಬ ಮಾತುಗಳು ಜನಪದ ಗೀತೆಗಳೊಂದಿಗಿನ ಜನಪದರ ಅವಿನಾಭಾವ ಸಂಬಂಧಗಳನ್ನು ತಿಳಿಸಿಕೊಡುತ್ತವೆ.

ಕೊನೆ ಟಿಪ್ಪಣಿಗಳು

೦೧. ಜಾನಪದ ತತ್ವ ಮತ್ತು ಸತ್ವ, ಪು.ಸಂ–೩೪.

೦೨. ಜಾನಪದ ಜಯಂತಿ, ಪು.ಸಂ–೧೬೦.

೦೩. ಜಾನಪದ ಪ್ರಚಾರ, ಪು.ಸಂ–೯೫.

೦೪. ಜಾನಪದ ತತ್ವ ಮತ್ತು ಸತ್ವ, ಪು.ಸಂ–೬೧.

೦೫. ಸುವರ್ಣ ಜನಪದ ಕಾವ್ಯ, ಪು.ಸಂ–೦೩.

೦೬. ಜಾನಪದ ತತ್ವ ಮತ್ತು ಸತ್ವ, ಪು.ಸಂ–೩೧.

೦೭. ಜಾನಪದ ತತ್ವ ಮತ್ತು ಸತ್ವ, ಪು.ಸಂ–೩೧.

೦೮. ಜಾನಪದ ತತ್ವ ಮತ್ತು ಸತ್ವ, ಪು.ಸಂ–೩೧.

೦೯. ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂಪುಟ–೮, ಜನಪದ, ಪು.ಸಂ–೧೬.

೧೦. ಕನ್ನಡ ಜಾನಪದ ಗೀತಗಳು, ಪು.ಸಂ–೧೨೫.

೧೧. ಗರತಿಯ ಹಾಡು, ಪು.ಸಂ–೧೩೨.

೧೨. ಜನಪದ ಸಾಹಿತ್ಯ ಸಂವಾದ, ಪು.ಸಂ–೩೧.

೧೩. ಸುವರ್ಣ ಜಾನಪದ ಲೇಖನಗಳು, ಪು.ಸಂ–೨೮೯.

೧೪. ಸುವರ್ಣ ಜಾನಪದ ಲೇಖನಗಳು, ಪು.ಸಂ–೨೮೫.

೧೫. ಗರತಿಯ ಹಾಡು, ಪು.ಸಂ–೫೬.

೧೬. ಜನಾಂಗದ ಜೀವಾಳ, ಪು.ಸಂ–೬೦.

೧೭. ಜನಾಂಗದ ಜೀವಾಳ, ಪು.ಸಂ–೬೦.

೧೮. ಗರತಿಯ ಹಾಡು, ಪು.ಸಂ–೨೪ ಮತ್ತು ೨೫.

೧೯. ಜನಾಂಗದ ಜೀವಾಳ, ಪು.ಸಂ–೦೬.

೨೦. ಜಾನಪದ ದರ್ಶನ, ಪು.ಸಂ–೨೮.

೨೧. ಜಾನಪದ ದರ್ಶನ, ಪು.ಸಂ–೨೯.

೨೨. ಜಾನಪದ ಅಧ್ಯಯನ, ಪು.ಸಂ–೮೩.

೨೩. ಜಾನಪದ ಅಧ್ಯಯನ, ಪು.ಸಂ–೮೩.

೨೪. ಜಾನಪದ ದರ್ಶನ, ಪು.ಸಂ–೫೭.

೨೫. ಜಾನಪದ ಅಧ್ಯಯನ, ಪು.ಸಂ–೬೦.

೨೬. ಜಾನಪದ ಪ್ರಚಾರ, ಪು.ಸಂ–೯೪.

೨೭. ಜಾನಪದ ಪ್ರಚಾರ, ಪು.ಸಂ–೯೫.

೨೮. ಕರ್ನಾಟಕ ಸಂಶೋಧನಾ ಜಾನಪದ, ಪು.ಸಂ–೧೯೩ ರಿಂದ ೧೯೪.

೨೯. ಜಾನಪದ ತತ್ವ ಮತ್ತು ಸತ್ವ, ಪು.ಸಂ–೬೩.

೩೦. ಜನಾಂಗದ ಜೀವಾಳ, ಪು.ಸಂ-೪೦.

೩೧. ಮದ್ದುಂಟೆ ಜನನ ಮರಣಕ್ಕೆ, ಪು.ಸಂ-vii.

೩೨. ಜನಪದ ಸಾಹಿತ್ಯ ಸಮೀಕ್ಷೆ, ಪು.ಸಂ-೫೫.

೩೩. ಜನಾಂಗದ ಜೀವಾಳ, ಪು.ಸಂ-೬೦.

೩೪. ಜನಾಂಗದ ಜೀವಾಳ, ಪು.ಸಂ-೬೦.

೩೫. ಜನಾಂಗದ ಜೀವಾಳ, ಪು.ಸಂ-೬೦.

೩೬. ಜನಾಂಗದ ಜೀವಾಳ, ಪು.ಸಂ-೯೭.

೩೭. ಜನಾಂಗದ ಜೀವಾಳ, ಪು.ಸಂ-೯೭.

೩೮. ಜನಪದ ಸಾಹಿತ್ಯ ಸಂವಾದ, ಪು.ಸಂ-೧೩.

೩೯. ಜನಪದ ಸಾಹಿತ್ಯ ಸಂವಾದ, ಪು.ಸಂ-೧೫.

೪೦. ಕಸುಬಿನ ಹಾಡುಗಳು, ಪು.ಸಂ-೪೯೬ ರಿಂದ ೪೯೭.

೪೧. ಸುವರ್ಣ ಜನಪದ ಕಾವ್ಯ, ಪು.ಸಂ-೦೩.

೪೨. ಕರ್ನಾಟಕ ಸಂಶೋಧನಾ ಜಾನಪದ, ಪು.ಸಂ-೨೨೫.

ಅಧ್ಯಾಯ : ಏಳು

ಜನಪದ ಗೀತೆಗಳಲ್ಲಿ ಮಹಿಳಾ ಪ್ರತಿನಿಧೀಕರಣ

ಅಧ್ಯಾಯ : ಏಳು

ಜನಪದ ಗೀತೆಗಳಲ್ಲಿ ಮಹಿಳಾ ಪ್ರತಿನಿಧೀಕರಣ

'ಜನಪದ ಗೀತೆಗಳ' ಅಧ್ಯಯನವೆಂದರೆ ಅದು ಜನಪದ ಮಹಿಳೆಯ ಅಧ್ಯಯನವೇ ಆಗಿರುತ್ತದೆ. ಅಂದರೆ ಜನಪದ ಸಾಹಿತ್ಯ ಹಾಗೂ ಮಹಿಳೆ ಒಂದಕ್ಕೊಂದು ಬಿಡಿಸಲಾರದಂತೆ ಬೆಸೆದುಕೊಂಡಿರುವರು. ಜನಪದ ಗೀತೆಗಳನ್ನು ಬಿಟ್ಟು ಮಹಿಳೆಯರಿಲ್ಲ. ಮಹಿಳೆಯರನ್ನು ಬಿಟ್ಟು ಜನಪದ ಗೀತೆಗಳಿಲ್ಲ. ಏಕೆಂದರೆ ಬಹುಪಾಲು ಜನಪದ ಗೀತೆಗಳು ಹಾಡಲ್ಪಡುವುದು ಹಾಗೂ ಪರಂಪರೆಯಿಂದ ಹರಿದು ಬಂದಿರುವುದು ಮಹಿಳೆಯರಿಂದ ಎಂಬುದು ಗಮನಿಸಬೇಕಾದ ಸಂಗತಿ. ಇದು ಪ್ರಶಂಸನೀಯ ಮತ್ತು ವಾಸ್ತವ ಸತ್ಯ ಕೂಡ ಹೌದು.

ಪ್ರಾಚೀನವಾದ ಜನಪದ ಸಾಹಿತ್ಯದ ಉಗಮದ ಬಗೆಗೆ ನಿಖರವಾದ ಕಾಲವನ್ನು ಹೇಳುವುದು ಕಷ್ಟ. ಏಕೆಂದರೆ ಅವಿನಾಶಿಯಾದ ಜಾನಪದ ಯಾವತ್ತು ಹುಟ್ಟಿತು? ಎಲ್ಲಿ ಹುಟ್ಟಿತು? ಹೇಗೆ ಹುಟ್ಟಿತು? ಮೊದಲಾದ ಪ್ರಶ್ನೆಗಳಿಗೆ ಉತ್ತರ ಅಷ್ಟು ಸುಲಭದ್ದಾಗಿಲ್ಲ. ಅದು ಮನುಷ್ಯನ ಅಭಿವ್ಯಕ್ತಿಯ ಶಕ್ತ ಮಾಧ್ಯಮವಾಗಿ ಮೌಖಿಕವಾಗಿ ಹರಿದು ಬಂದಿರುವಂತಹದ್ದು. ಜನಪದ ಗೀತೆಗಳು ಬದುಕಿನ ಎಲ್ಲ ಆಯಾಮಗಳನ್ನು ಅಭಿವ್ಯಕ್ತಿಸುತ್ತವೆ. ಹಾಗೆಯೆ ಸಾರ್ವತ್ರಿಕವಾದ ಮತ್ತು ಸಾರ್ವಕಾಲಿಕವಾದ ಅನುಭವ ಮೌಲ್ಯಗಳನ್ನು ಹೊಂದಿರುವುದರಿಂದ ಇವುಗಳು ಸರ್ವ ಜನಾದರಣೀಯವಾಗಿವೆ. ಶಿಷ್ಟ ಕವಿಗಳ, ಬರಹಗಾರರ ತಿರಸ್ಕಾರ, ಅನಾದರಣೆಗಳ ನಡುವೆಯೂ ಗಟ್ಟಿಯಾಗಿ ನಮ್ಮೆದುರಿಗೆ ಬೇರೂರಿ ನಿಂತಿವೆ.

ಜನಪದ ಗೀತೆಗಳ ಕರ್ತೃತ್ವದ ವಿಚಾರಕ್ಕೆ ಬಂದರೆ ಇವು ಪ್ರಾಚೀನ ಕಾಲದಲ್ಲಿಯೇ ಜನಪದ ಸ್ತ್ರೀ ಹಾಗೂ ಪುರುಷರಿಬ್ಬರಿಂದಲು ಸೃಷ್ಟಿಯಾಗಿರುವುದು ಕಂಡುಬರುತ್ತದೆ. ಜನಪದ ಸಾಹಿತ್ಯವನ್ನು ಮೊದಲು ಅಭಿವ್ಯಕ್ತಿಸಿದವರು ಯಾರು? ಸ್ತ್ರೀಯರೋ? ಅಥವಾ ಪುರುಷರೋ? ಎಂಬ ಸಮಸ್ಯೆ ಕೂಡ ಬಿಡಿಸಲಾರದ್ದು. ಇಬ್ಬರ ಪಾಲೂ ಸಮನಾಗಿಯೇ ಇದೆ. ಆದರೂ ಸೂಕ್ಷ್ಮವಾಗಿ ಈ ಸಾಹಿತ್ಯವನ್ನು ಅವಲೋಕಿಸಿದರೆ ಜನಪದ ಸಾಹಿತ್ಯದ ಬಹುತೇಕ ಪ್ರಕಾರಗಳಲ್ಲಿ ಸ್ತ್ರೀಯ ಪಾತ್ರವಿದೆ. ಜನಪದ ಗೀತೆಗಳ ವಿಚಾರಕ್ಕೆ ಬಂದರೆ ಅವಳೇ ಸರ್ವಾಧಿಕಾರಿಣಿಯಾಗಿ ಮೆರೆದಿದ್ದಾಳೆ. ಇದಕ್ಕೆ ಮುಖ್ಯ ಕಾರಣ ಜನಪದ ಮಹಿಳೆ ಬದುಕನ್ನು ಅರ್ಥ ಮಾಡಿಕೊಂಡವಳು. ತಾನು ವಾಸಿಸುತ್ತಿರುವ ಕುಟುಂಬದಲ್ಲಿನ ಬದುಕಿನ ಆನಂದವನ್ನು ಅನುಭವಿಸಿದವಳು.

ಎಲ್ಲಕ್ಕಿಂತ ಮುಖ್ಯವಾಗಿ ಬದುಕಿನಲ್ಲಿ ಆಶಾ ಭಾವನೆಯನ್ನು ಹಾಗೂ ನಂಬಿಕೆಯನ್ನು ಇಟ್ಟುಕೊಂಡಿರುವವಳು. ಎಷ್ಟೇ ಕಷ್ಟಗಳಿದ್ದರೂ ಸರಳವಾದ ಜೀವನ ಕ್ರಮದಲ್ಲಿಯೇ ಭಾವನೆಗಳಿಗೆ ಇಂಬು ಕೊಟ್ಟವಳು. ಶಿಷ್ಟ ಮಹಿಳೆಯರಿಗೆ ಇದ್ದಂತಹ ಯಾವುದೇ ಸೌಲಭ್ಯಗಳು, ಸೌಕರ್ಯಗಳು ಈಕೆಗಿರಲಿಲ್ಲವಾದರೂ ಕೂಡ ಬದುಕಿನ ಏರಿಳಿತಗಳನ್ನು ಸಮಚಿತ್ತದಿಂದ ಸ್ವೀಕರಿಸಿದವಳು. ಪ್ರಮುಖವಾಗಿ ಪ್ರಕೃತಿಯ ರಹಸ್ಯವನ್ನು ಅರಿತಿದ್ದಳು. ಇದರಿಂದಾಗಿ ಆಕೆ ಕೃತಕತೆಯ ಆಡಂಬರಗಳಿಗೆ, ಅನ್ಯ ಪ್ರಭಾವಗಳಿಗೆ ಮನಸೋಲದೆ, ಅವುಗಳಿಂದ ವಿಚಲಿತಳಾಗದೆ ತನ್ನ ಬದುಕನ್ನು ಮುನ್ನಡೆಸಿದವಳು. ಬದುಕಿನ ನೋವುಗಳನ್ನು, ಹತಾಶೆಗಳನ್ನು ಗೀತೆಗಳ ಮೂಲಕ, ಕಥೆಗಳ ಮೂಲಕ ಹೊರ ಹಾಕುತ್ತ ಬದುಕನ್ನು ಕಾವ್ಯವಾಗಿಸಿಕೊಂಡವಳು. ಮುಂದೆ ಅದು ಅವಳ ಬದುಕಿಗೆ ರಸಾತ್ಮಕವಾದ ದಾರಿ ದೀಪವಾಯಿತು. ಜೊತೆಗೆ ಆಕೆಯ ಬದುಕಿನೊಡನೆ ಅವಿನಾಭಾವ ಸಂಬಂಧವನ್ನು ಬೆಸೆದುಕೊಂಡಿವೆ. ಇದು ಅವಳ ನಿಜವಾದ ಪ್ರತಿಭೆ. ಈ ಪ್ರತಿಭೆಯೆ ಜನಪದ ಮಹಿಳೆಯ ಸಾಹಿತ್ಯವನ್ನು ಅಭ್ಯಸಿಸುವಾಗ ಉದ್ಭವವಾಗುವ ಪ್ರಶ್ನೆಗಳಿಗೆ ಉತ್ತರವನ್ನು ನೀಡುತ್ತದೆ.

ಜನಪದರದ್ದು ಕೃಷಿಯಾಧಾರಿತ ಜೀವನ ಕ್ರಮವಾಗಿರುವುದರಿಂದ ಜನಪದ ಮಹಿಳೆಯೂ ಕೂಡ ಶ್ರಮ ಜೀವಿ. ಕಾಯಕಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದವಳು. ಸಂಬಳ, ಸಾರಿಗೆ ಮೊದಲಾದ ಪ್ರತಿಫಲಾಪೇಕ್ಷೆಗಳಿಗೆ ದುಡಿದವಳಲ್ಲ. ಕಾಯಕವೆಂಬುದು ಅವಳ ಬದುಕಿನ ಸಹಜ ಕ್ರಿಯೆ ಮತ್ತು ಅನಿವಾರ್ಯ ಮಾಧ್ಯಮ. ಈ ಕಾಯಕದೊಟ್ಟಿಗೆಯೆ ಹುಟ್ಟಿದವು ಜನಪದ ಗೀತೆಗಳು. ತನ್ನ ಬದುಕಿನ ಪಾಡನ್ನು ಹಾಡಾಗಿಸಿ ಜನಪದ ಗೀತೆಗಳಲ್ಲಿ ಒಡಮೂಡಿಸಿದಳು. ಇವುಗಳಲ್ಲಿ ಕೃತಕತೆಯಿಲ್ಲ. ಸಹಜವಾಗಿ ಅವಳ ಮನದ ತಲ್ಲಣಗಳು, ಆಸೆ, ಆಕಾಂಕ್ಷೆಗಳು, ಜೀವನ ಕ್ರಮಗಳು ಇವುಗಳಲ್ಲಿ ಅಭಿವ್ಯಕ್ತವಾಗಿವೆ.

ಜನಪದ ಗೀತ ಸಾಹಿತ್ಯಕ್ಕೆ ಮಹಿಳೆಯ ಕೊಡುಗೆ ಅಪಾರವಾದುದು. ಗೀತೆಗಳಿಂದ ಮಹಿಳೆಯರನ್ನು ಬೇರ್ಪಡಿಸುವುದು ದೇಹದಿಂದ ಉಸಿರನ್ನು ಬೇರ್ಪಡಿಸಿದಂತೆ. ಬೆಳಿಗ್ಗೆ ಎದ್ದಾಗಿನಿಂದ ಪ್ರಾರಂಭವಾದ ಆಕೆಯ ಕಾಯಕ, ರಾತ್ರಿ ಉಂಡು ಮಲಗುವವರೆಗೆ ಹಲವು ಹಂತಗಳಲ್ಲಿ ಸಾಗುತ್ತದೆ. ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ, ಸೊಸೆಯಾಗಿ ಹೀಗೆ ಜೀವನದ ವಿವಿಧ ಪಾತ್ರಗಳನ್ನು ಪ್ರತಿನಿಧಿಸುತ್ತ, ಅವುಗಳನ್ನು ನಿಭಾಯಿಸುವ ಈಕೆ ಪ್ರತಿ ಹಂತಕ್ಕು ತನ್ನದೇ ಆದ ಗೀತೆಗಳನ್ನು ಸೃಷ್ಟಿಸಿಕೊಂಡಿದ್ದಾಳೆ. ಬೀಸುವ ಪದಗಳಿಂದ ಹಿಡಿದು, ನಾಟಿಯ ಪದಗಳು, ಮದುವೆಯ ಹಾಡುಗಳು, ಸೋಬನದ ಪದಗಳು, ಮಕ್ಕಳ ಪದಗಳು, ಕೊಂತಿ ಪದಗಳು, ಮಾಸ್ತಿ ಪದಗಳು, ತಿಂಗಳು ಮಾವನ ಪದಗಳು ಹೀಗೆ ಹಲವು ಪ್ರಕಾರದ ಗೀತೆಗಳನ್ನು ಈಕೆ ಸೃಷ್ಟಿಸಿ ಹಾಡುವವಳು. ಹಾಗಾಗಿ ಇವೆಲ್ಲವು ಸಂಪೂರ್ಣವಾಗಿ ಇವಳ ಸ್ವತ್ತಾಗಿವೆ.

ಇವುಗಳ ಜೊತೆಗೆ ಗಾದೆ, ಒಗಟು, ಲಾವಣಿಗಳೂ ಸಹ ಈಕೆಯ ಪ್ರತಿನಿಧೀಕರಣವನ್ನು ಕುರಿತು ಹೇಳುತ್ತವೆ. ಹೀಗಾಗಿ ಮಹಿಳೆ ಪ್ರತಿನಿಧಿಸದ ಪ್ರಕಾರವೇ ಇಲ್ಲಿ ಇಲ್ಲ ಎನ್ನಬೇಕು. ಈ

ಕಾರಣವಾಗಿ ಜನಪದ ಮಹಿಳೆಯ ಪ್ರತಿನಿಧೀಕರಣ ಜನಪದ ಗೀತೆಗಳಲ್ಲಿ ಹಾಸುಹೊಕ್ಕಾಗಿದ್ದು, ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ, ಸೊಸೆಯಾಗಿ, ಅತ್ತೆಯಾಗಿ ಹೀಗೆ ಬದುಕಿನ ಹಲವು ಹಂತಗಳಲ್ಲಿನ ತನ್ನ ಜೀವನ ಗಾಥೆಯನ್ನು ಇವುಗಳಲ್ಲಿ ಬಿಚ್ಚಿಟ್ಟಿದ್ದಾಳೆ. ಸವತಿ ಮತ್ಸರದ ಸಮಯ, ಬಂಜೆಯ ನೋವು, ತವರಿನ ಅಗಲಿಕೆ, ವೈಧವ್ಯ, ಗಂಡಿನ ಚಂಚಲತೆಗಳು, ಹಾಸ್ಯ ಸನ್ನಿವೇಶ, ಕಟಕಿ ಮಾತುಗಳ ಕಿರುಕುಳ, ಅಣ್ಣ-ತಮ್ಮರ ಬಾಂಧವ್ಯ ಮೊದಲಾದ ಹಲವು ಬಗೆಯ ಸಂಗತಿಗಳಲ್ಲಿ ಈಕೆಯ ಸಂಪೂರ್ಣ ಪಾಲ್ಗೊಳ್ಳುವಿಕೆ ಇದೆ. ಇವುಗಳ ಮೂಲಕ ತನ್ನ ನೋವು, ಹತಾಶೆಗಳನ್ನು ಮರೆಯುವ ಪ್ರಯತ್ನವನ್ನು ಸಹ ಈಕೆ ಮಾಡಿದ್ದಾಳೆ.

ಜನಪದ ಗೀತೆಗಳಲ್ಲಿ ಈಕೆಯ ಪ್ರತಿನಿಧೀಕರಣ ಹಲವು ನೆಲೆಯದ್ದಾಗಿದೆ. ಪ್ರಕೃತಿಯಿಂದ ಹಿಡಿದು, ದೇವರು, ಪತಿ, ಮಗು, ಸಾಂಸಾರಿಕ ಜೀವನದಾದಿಯಾಗಿ ಎಲ್ಲ ಕ್ರಿಯೆಗಳಿಗೆ ಪ್ರತಿಕ್ರಿಯೆಯನ್ನು ಕೊಡುವ ಹಾಗೂ ಸಹ ಸ್ಪಂದಿಸುವ ಚೈತನ್ಯ ಈಕೆಯದು. ಪ್ರಕೃತಿಯನ್ನು ಕಂಡು ವಿಸ್ಮಯದಿಂದ ನಲಿಯುವ ಈಕೆ, ದೈವದ ವಿಚಾರವಾಗಿ ಅಷ್ಟೆ ಭಕ್ತಿಯಿಂದ ಭಾವ ಪರವಶಳಾಗುತ್ತಾಳೆ. ಗಂಡನ ಜೊತೆ ಅನ್ಯೋನ್ಯ ದಾಂಪತ್ಯದ ಸವಿಯನ್ನು ಉಂಡ ಈಕೆ, ಸವತಿ ಮಾತ್ಸರ್ಯದ ಸಮಯದಲ್ಲಿ ಅದನ್ನು ಸಹಿಸಿಕೊಳ್ಳುವ ಕರುಣಾಮಯಿ. ತವರನ್ನು ತೊರೆದು ಬಂದು ಅತ್ತೆಯ ಮನೆಯ ಕಷ್ಟಗಳಿಗೆ ನಲುಗಿದರೂ ತನ್ನ ಮಗುವಿನ ಮೂಲಕ ಅವನ್ನೆಲ್ಲ ಮರೆಯುವವಳು. ಹೀಗೆ ಅವಳ ಬದುಕು ಕಷ್ಟದ ನಡುವೆಯೂ ಸಾರ್ಥಕತೆಯ ಕಡೆಗೆ ಸಾಗುವುದು ತಿಳಿಯುತ್ತದೆ.

ಜನಪದ ಗೀತೆಗಳಲ್ಲಿ ಒಂದು ಗುಂಪಿನ ಗೀತೆಗಳ ಹೆಣ್ಣುಗಳು ಆದರ್ಶ ಗುಣಗಳ ಪ್ರತೀಕವಾಗಿದ್ದರೆ, ಮತ್ತೊಂದು ಗುಂಪಿನ ಗೀತೆಗಳಲ್ಲಿ ಅದಕ್ಕೆ ವಿರುದ್ಧವಾದ ಗುಣಗಳ ಸಂಕೇತವಾಗಿರುತ್ತಾಳೆ. ಜನಪದ ಗೀತೆಗಳ ಸಂದರ್ಭದಲ್ಲಿ ಪ್ರಮುಖವಾಗಿ ಹೆಣ್ಣನ್ನು ಆದರ್ಶ ಗುಣಗಳ ಪ್ರತೀಕವಾಗಿ, ದುಷ್ಟ ಗುಣಗಳ ಪ್ರತೀಕವಾಗಿ ಹಾಗೂ ಈ ಎರಡೂ ಭಾವಗಳ ಸಂಮಿಶ್ರ ಸ್ವಭಾವದ ಪ್ರತೀಕವಾಗಿ ಚಿತ್ರಣಗೊಂಡಿರುವುದು ಕಂಡುಬರುತ್ತದೆ. ಇವುಗಳಲ್ಲಿ ಪಾತಿವ್ರತ್ಯ, ತಾಯ್ತನ, ಬಲಿದಾನ, ಆದರ್ಶಗಳನ್ನು ಮೆರೆದ ಸ್ತ್ರೀಯರ ಗೀತೆಗಳಿವೆ. ಜೊತೆಗೆ ಜಿಪುಣತನ, ಸವತಿ ಮಾತ್ಸರ್ಯದ ವಿಭಿನ್ನ ಗುಣಗಳನ್ನೂ ಕಾಣಬಹುದಾಗಿದೆ.

> "ನಕ್ಕರೆ ನಗಲೆವ್ವ ನಾಮುಚ್ಚಿ ಮುಡಿದ
> ಪರಿಮಳದಾ ಹೂವ ಅವಳೊಂದು
> ಗಳಿಗೆ ಮುಡಿಯಲಿ"[1]

ಎನ್ನುತ್ತಾಳೆ. ಬೇರೊಬ್ಬಳು ಹೆಣ್ಣಿನ ಜೊತೆ ನಗುತ್ತಿದ್ದ ಗಂಡನ ವಿವರಗಳನ್ನು ಕೇಳಿದಾಗಿನ ಸಂದರ್ಭದ ಪ್ರತಿಕ್ರಿಯೆ ಇದು. ಇಲ್ಲಿ ಆಕೆ ಕೋಪ ಮಾಡಿಕೊಳ್ಳುವುದಿಲ್ಲ. ಸಿಟ್ಟಿನಿಂದ ಗಂಡನನ್ನಾಗಲಿ, ಗಂಡನ ಜೊತೆ ಸೇರಿದ ಹೆಣ್ಣನ್ನಾಗಲಿ ಶಪಿಸುವುದಿಲ್ಲ. ನಾನು ನನ್ನ ಪತಿಯಿಂದ ಉಂಡ ಸಂತೋಷ, ನೋವು, ನಲಿವಿನ ಸವಿಯನ್ನು ಒಂದು ಗಳಿಗೆ ಆಕೆ ಕೂಡ ಸವಿಯಲಿ ಎನ್ನುವ ಮೂಲಕ ತನ್ನ ಮನದ ಅಭಿಪ್ರಾಯಗಳನ್ನು ಹೊರಹಾಕುತ್ತಾಳೆ.

ಜನಪದ ಗೀತೆಗಳು ಸಹ ಹೆಣ್ಣನ್ನು ಸಂಸ್ಕೃತಿ ನಿರ್ಮಿತವಾದ ಚೌಕಟ್ಟಿನಲ್ಲಿಯೇ ನೋಡಲು ಬಯಸುತ್ತವೆ. ಅಲ್ಲದೆ ಭಾರತೀಯ ಸಂಸ್ಕೃತಿ ಕೂಡ ಹೆಣ್ಣಿನ ವಿಷಯದಲ್ಲಿ ನಿರೂಪಿಸಿರುವ ಕಟ್ಟುಪಾಡುಗಳು, ಮೌಲ್ಯಗಳು, ಆದರ್ಶಗಳು ಹೆಣ್ಣನ್ನು ಹಾಗೂ ಅವಳ ವ್ಯಕ್ತಿತ್ವವನ್ನು ಚೌಕಟ್ಟಿನಲ್ಲಿಟ್ಟೆ ನೋಡುತ್ತದೆ.

ಜನಪದ ಮಹಿಳೆಗೂ ಬೀಸುವ ಕಲ್ಲಿಗೂ ಬಿಡಿಸಲಾರದ ನಂಟು. ಹಾಗೆಯೇ ಮಣ್ಣಿಗೂ ಅಂತಹದ್ದೇ ಅವಿನಾಭಾವ ಬಾಂಧವ್ಯ. ಏಕೆಂದರೆ ಜನಪದರ ಸ್ಫೂರ್ತಿಯೆ ಮಣ್ಣು. ಆ ಮಣ್ಣಿನಲ್ಲಿನ ತಮ್ಮ ಬದುಕು, ತಮ್ಮ ಬದುಕಿನಲ್ಲಿನ ಹುಟ್ಟು, ಸಾವು, ನೋವು, ಸುಖ, ದುಃಖ ಎಲ್ಲವುಗಳನ್ನು ಮಣ್ಣಿನಲ್ಲಿಯೆ ಕಂಡು ಉಣ್ಣುವವರು. ಮಣ್ಣು ಜನಪದರ ಚೈತನ್ಯದ ಚಿಲುಮೆ. ಉತ್ತು, ಬಿತ್ತು ತಮ್ಮ ಬದುಕನ್ನು ಹಸನಾಗಿಸು ಎಂದು ಭೂಮಾತೆಯನ್ನು ಬೇಡಿಕೊಳ್ಳುತ್ತಾರೆ. ಅದರಂತೆಯೆ ಜನಪದ ಮಹಿಳೆಯು ಕೂಡ ಬೆಳಿಗ್ಗೆ ಎದ್ದ ತಕ್ಷಣ ಬಿಸುವ ಕಲ್ಲಿನ ಮುಂದೆ ಕುಳಿತು ಭೂ ತಾಯಿಯನ್ನು ನೆನೆಯುತ್ತಾಳೆ.

> "ಬೆಳಗಾಗ ನಾನೆದ್ದು ಯಾರ್‍ಯಾರ ನೆನೆಯಾಲಿ
> ಎಳ್ಳು ಜೀರಿಗೆ ಬೆಳೆವಂತ ಭೂಮಿತಾಯ್ನ
> ಎದ್ದೊಂದು ಗಳಿಗೆ ನೆನೆದೇನು"[೨]

ಎಂದು ಭಕ್ತಿಯಿಂದ ಬೇಡುತ್ತ ಅಂದಿನ ದಿನವನ್ನು ಪ್ರಾರಂಭಿಸುತ್ತಾಳೆ. ಪ್ರಕೃತಿಯ ಪ್ರತಿಯೊಂದು ಚಲನೆಗೂ ಒಂದು ಅದ್ಭುತವಾದ ಶಕ್ತಿಯ ಕಾರಣವಿದೆ ಎಂದು ನಂಬುವ ಜನಪದ ಮಹಿಳೆ ಅದಕ್ಕಿರುವ ಅವ್ಯಕ್ತ ಶಕ್ತಿಯನ್ನು ನಂಬಿದ್ದಾಳೆ. ತಾನಿರುವಲ್ಲಿಯೆ ದೈವವನ್ನು ಕಾಣುವ ಆಕೆ, ದೈವಕ್ಕಾಗಿ ಅಲೆಯುವವಳಲ್ಲ. ದೇಶ-ಕೋಶಗಳನ್ನು ಸುತ್ತುವವಳಲ್ಲ. ಪುಣ್ಯಕ್ಷೇತ್ರಗಳಿಗೆ ಎಡತಾಕುವುದಿಲ್ಲ. ತಾನಿರುವಲ್ಲಿಯೇ ದೈವವನ್ನು ಕಂಡುಕೊಳ್ಳುತ್ತಾಳೆ. ಅಲ್ಲದೆ ನೆಲದ ನಂಟನ್ನು ಉಳ್ಳ ಈಕೆ ಬೆಳಗಾದ ಕೂಡಲೆ ಎಲ್ಲರಿಗೂ ಅನ್ನದಾತೆಯಾದ ಭೂದೇವಿಯನ್ನು ನೆನೆಯುವುದಾಗಿ ಹೇಳಿಕೊಳ್ಳುತ್ತಾಳೆ. ಇದು ಆಕೆಯ ವಿಶಾಲ ಮನಸ್ಥಿತಿ ಹಾಗೂ ನಿರ್ಮಲ ವಿಚಾರಗಳ ಕಡೆ ನಮ್ಮ ಗಮನವನ್ನು ಸೆಳೆಯುವುದನ್ನು ಕಾಣಬಹುದಾಗಿದೆ.

> "ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
> ಮೊಗ್ಯಾಗೆ ಕಣ್ಣು ತೆರೆದಾನ । ಲಿಂಗಯ್ಯ
> ನೋಡೋಕೆ ನಿದ್ದೆ ಬಯಲಾದೋ"[೩]

ಪ್ರಕೃತಿಯಲ್ಲಿನ ಹೂವು, ಮೊಗ್ಗು ಹಾಗೂ ಪ್ರಕೃತಿಯ ಪ್ರತಿಯೊಂದರಲ್ಲು ದೈವದ ಇರುವಿಕೆಯನ್ನು ತನ್ನ ನಂಬಿಕೆಯ ಮುಖೇನ ಜನಪದ ಮಹಿಳೆ ನಂಬಿದ್ದಾಳೆ. ಹಾಗಾಗಿಯೆ ಆಕೆ ಪ್ರಕೃತಿಯನ್ನೆ ದೈವವೆಂದು ಆರಾಧಿಸಿ ಪೂಜಿಸುತ್ತಾಳೆ. ಗಿಡ, ಮರ, ಸೂರ್ಯ, ಚಂದ್ರ, ಸಿಡಿಲು, ಗುಡುಗು, ಮಳೆ,

ಬೆಂಕಿ ಎಲ್ಲದರಲ್ಲಿಯೂ ದೈವವನ್ನು ಕಾಣುತ್ತಾರೆ. ಜನಪದರ ದೃಷ್ಟಿಯಲ್ಲಿ ಇವೆಲ್ಲವು ಚೈತನ್ಯದಾಯಕವಾದವು.

"ಮುಂಗೋಳಿ ಕೂಗ್ಯಾವು ಮೂಡು ಕೆಂಪೇರ್ಯಾವು
ನಾರಾಯಣ ಸ್ವಾಮಿ ರಥವೇರಿ । ಬರುವಾಗ
ನಾವೆದ್ದು ಕೈಯ ಮುಗುದೇವು"[೪]

ಪ್ರಕೃತಿ ಆರಾಧಕರಾದ ಜನಪದರು ಪ್ರಕೃತಿಯ ಪ್ರತಿಯೊಂದನ್ನು ದೈವವೆಂದೇ ಪೂಜಿಸಿದವರು. ಹಾಗಾಗಿ ಮುಂಗೋಳಿ ಕೂಗಿದ ಹೊತ್ತಿಗೆ ಮೂಡಣವು ಕೆಂಪೇರಿ ರಥವೇರಿ ಬರುವ ನಾರಾಯಣಸ್ವಾಮಿಗೆ ಕೈಮುಗಿಯುತ್ತೇನೆ ಎನ್ನುತ್ತಾರೆ. ಇಲ್ಲಿ ಮುಂಗೋಳಿ ಕೂಗಿದ ಹೊತ್ತಿಗೆ ಮೂಡುವ ಸೂರ್ಯನನ್ನು ದೇವರೆಂದು ನಮಿಸಿ ಪೂಜಿಸುತ್ತಾರೆ. ತಾನು ಹಿಡಿದು ಬೀಸುವ ರಾಗಿಯ ಕಲ್ಲು ಕೂಡ ಆಕೆಗೆ ದೈವವೇ. ಅದನ್ನು ಭಕ್ತಿಯಿಂದ ಕಾಣುತ್ತಾಳೆ.

"ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ
ಜಲ್ಲಜಲ್ಲಾನೆ ಉದರಮ್ಮ । ನಮ್ಮನೆ
ಬೆಲ್ಲದಾರುತಿಯ ಬೆಳಗೇವು"[೫]

ಜನಪದ ಹೆಣ್ಣಿಗೆ ಬೀಸುವ ಕಲ್ಲು ಬರೀ ಕಲ್ಲಲ್ಲ. ಜಡ ವಸ್ತು ಮೊದಲೇ ಅಲ್ಲ. ತಮ್ಮ ಇಡೀ ಬದುಕಿಗೆ ಆಧಾರ ಸ್ತಂಭವಾಗಿರುವ ಚೈತನ್ಯವಾಗಿದೆ. ಏಕೆಂದರೆ ಬೆಳಗಿನ ಜಾವವೆ ಎದ್ದು ಬೀಸುವ ಕಲ್ಲಿನಿಂದ ರಾಗಿಯನ್ನು ಬೀಸಿದರಷ್ಟೆ ಎಲ್ಲರ ಹೊಟ್ಟೆಗೆ ಊಟ ಸಿಗುತ್ತಿದ್ದುದು. ಅವರ ಹಸಿವನ್ನು ನೀಗಿಸುತ್ತಿದ್ದದು ಈ ರಾಗಿಯ ಕಲ್ಲೆ. ಆ ಕಾರಣವಾಗಿ ಕಲ್ಲಮ್ಮ ತಾಯಿಯನ್ನು ವಿನಮ್ರವಾಗಿ ಬೇಡಿಕೊಳ್ಳುತ್ತಾಳೆ. ರಾಗಿಯನ್ನು ಮೆಲ್ಲುತ್ತ ಜಲ್ಲ ಜಲ್ಲನೆ ಉದುರಿದರೆ ನಮ್ಮ ಮನೆಯ ಬೆಲ್ಲದ ಆರತಿಯನ್ನು ಬೆಳಗಿ ನಿನಗೆ ಪೂಜಿಸುವುದಾಗಿ ಕೇಳಿಕೊಳ್ಳುತ್ತಾಳೆ. ಇಲ್ಲಿನ ಬೆಲ್ಲದ ಆರತಿ ನಮ್ಮ ಸಂಸ್ಕೃತಿಯಲ್ಲಿ ಹೆಚ್ಚು ಉಲ್ಲೇಖವಾಗುವ ಪೂಜಾ ಸಾಮಗ್ರಿ. ಬೆಲ್ಲದ ಆರತಿಗೆ ನಮ್ಮಲ್ಲಿ ವಿಶೇಷವಾದ ಪ್ರಾಧಾನ್ಯತೆ ಇದೆ.

ಜನಪದ ಗೀತೆಗಳಲ್ಲಿ ಕಂಡುಬರುವ ಮಹಿಳೆ ಮತ್ತು ದೇವರೊಂದಿಗಿನ ಸಂಬಂಧ ಭಯದಿಂದ ಕೂಡಿದ್ದಲ್ಲ, ಭಕ್ತಿಯಿಂದ ಕೂಡಿದ್ದು. ಜನಪದ ಸ್ತ್ರೀಯರಿಗೆ ದೇವರು ತುಂಬಾ ಆತ್ಮೀಯ ವ್ಯಕ್ತಿ. ತಮ್ಮ ನೋವು, ನಲಿವು, ತಮ್ಮ ಮನದ ಭಾವನೆಗಳಿಗೆ ಕಿವಿ ಕೊಡುವ ಆತ್ಮೀಯ ಗೆಳೆಯನಂತೆ.

ಜನಪದರ ಕಾಯಕದ ಜೊತೆಯಲ್ಲಿಯೇ ಜನಪದ ಗೀತೆಗಳೂ ಹುಟ್ಟಿಕೊಳ್ಳುತ್ತವೆ. ಅನಕ್ಷರಸ್ಥರಾದ ಸ್ತ್ರೀಯರು ಹಳ್ಳಿಯ ಹೊಲ ಗದ್ದೆಗಳ ಕೆಲಸಗಳ ಸಮಯದಲ್ಲಿ ತಾವು ಹಾಡಿಕೊಳ್ಳುವ ಈ ಗೀತೆಗಳಿಗೆ ಅದರದೇ ಆದ ಸ್ವರೂಪಗಳುಂಟು. ಅವು ಆಯಾಯ ಕಾಯಕದ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತ, ಆಯಾಯ ಕಾಯಕದ ಹೆಸರೇ ರೂಢಿಯಲ್ಲಿರುವುದು ತಿಳಿಯುತ್ತದೆ.

ಜನಪದ ಗೀತೆಗಳನ್ನು ಹಾಡುವ ಮಹಿಳೆಯರು ಶಾಲಾ ಕಾಲೇಜುಗಳಲ್ಲಿ ಔಪಚಾರಿಕವಾಗಿ ಓದಿ ಅಕ್ಷರ ಕಲಿತವರಲ್ಲ. ಆದರೆ ಅವರಿಗೆ ಜೀವಂತ ಬಾಳಿನ ಅನುಭವದ ಬೆಳಕಿದೆ. ಬದುಕಿನ ನೋವು, ನಲಿವು, ಸುಖ, ದುಃಖ, ಆಸೆ, ಆಮಿಷ, ಸರಸ, ವಿರಸ, ಕಾಮ, ಕ್ರೋಧ ಮೊದಲಾದ ಹತ್ತು ಹಲವಾರು ಭಾವಗಳಿವೆ. ಮದುವೆ, ಮುಂಜಿ, ಹಬ್ಬ ಹರಿದಿನ, ರಾಗಿ ಬೀಸುವಾಗ ಮೊದಲಾದ ಸಂದರ್ಭಗಳಲ್ಲಿ ಹಾಗೆಯೆ ದೈಹಿಕ ಶ್ರಮವನ್ನು ಬೇಡುವ ಕೃಷಿ ಚಟುವಟಿಕೆಗಳಲ್ಲಿ ಅಲ್ಲಿನ ಶ್ರಮವನ್ನು ಮರೆಯಲಿಕ್ಕಾಗಿಯೂ ಇವುಗಳನ್ನು ಹಾಡುವುದು ಕಂಡುಬರುತ್ತದೆ. ಜನಪದ ಗೀತೆಗಳಲ್ಲಿ ಬದುಕಿನ ರಸಿಕತೆ, ಸಂಸಾರದ ಬಗೆಗಿನ ವಿಶೇಷ ಕಳಕಳಿ, ಬದುಕಿನ ಬಗೆಗಿನ ಜೀವನ ಪ್ರೀತಿ ಮೊದಲಾದ ಎಲ್ಲ ಅಂಶಗಳು ಕಾಣಬರುತ್ತವೆ. ಇವುಗಳಲ್ಲಿ ವ್ಯಂಗ್ಯ ಹಾಸ್ಯ ಮನರಂಜನೆಗಳೂ ಇವೆ.

ಜನಪದ ಗೀತೆಗಳಲ್ಲಿನ ಮಹಿಳಾ ಪ್ರತಿನಿಧೀಕರಣವು ಹಲವು ನೆಲೆಗಳದ್ದು. ಆಕೆಯು ಮಗಳಾಗಿ, ಹೆಂಡತಿಯಾಗಿ, ಸೊಸೆಯಾಗಿ, ಬಂಜೆಯಾಗಿ, ತಾಯಿಯಾಗಿ, ಸಹೋದರಿಯಾಗಿ, ವಿಧವೆಯಾಗಿ ವಿವಿಧ ರೀತಿಯ ಪಾತ್ರಗಳನ್ನು ನಿರ್ವಹಿಸುವಳು.

ಜನಪದ ಹೆಣ್ಣು ಮಗಳಾಗಿ ತಾನು ಹುಟ್ಟಿದ ಮನೆಗೆ ಹಾಗೂ ಕೊಟ್ಟ ಮನೆಗೆ ಕೀರ್ತಿಯನ್ನು ತರುವವಳು. ತಂದೆ ತಾಯಿಗಳಿಗೆ ತಾನು ಎಂತಹ ಮಗಳಾಗಿದ್ದೇನೆ ಎಂಬುದನ್ನು ಆಕೆ ಈ ರೀತಿಯಾಗಿ ಹೇಳಿಕೊಂಡಿದ್ದಾಳೆ.

"ಹಚ್ಚಿಕೊಂಡವ್ವಗ ಚೊಚ್ಚಿಲ ಮಗಳಾದೆ
ಬಿಟ್ಟಾಡಿಕೊಳ್ಳುವ ವೈರೀಯ । ಮನಿಮುಂದ
ಬಿಚ್ಚುಗತ್ಯಾಗಿ ಹೊಳದೇನ"[೬]

ತನಗೆ ಜನ್ಮ ನೀಡಿ, ಬಡತನದಲ್ಲಿಯೇ ಬದುಕಿದರೂ ಇದ್ದದ್ದನ್ನು ಹಂಚಿ ತಿನ್ನುವ ತಾಯಿಗೆ ತಾನು ಚೊಚ್ಚಿಲ ಮಗಳಾಗಿದ್ದೇನೆ. ತನ್ನ ಬಗ್ಗೆ ಕೆಟ್ಟದಾಗಿ ಮಾತನಾಡುವ, ತನ್ನನ್ನು ಜರಿಯುವ ವೈರಿಗೆ ತಾನು ಮೃತ್ಯು ಸ್ವರೂಪಳಾದ ಬಿಚ್ಚುಗತ್ತಿಯಾಗಿ ಹೊಳೆಯುತ್ತೇನೆ ಎನ್ನುತ್ತಾಳೆ. ಅಂದರೆ ಕೆಟ್ಟ ನೋಟ, ನುಡಿಗಳನ್ನು ತಾನು ಸಹಿಸುವುದಿಲ್ಲವೆಂದು ಹೇಳಿಕೊಳ್ಳುತ್ತಾಳೆ. ಮುಖ್ಯವಾಗಿ ಹೆಣ್ಣು ಇಲ್ಲಿ ತಾನು ತಂದೆ ತಾಯಿಗಳ ಗೌರವವನ್ನು ಕಾಪಾಡುವ ಹೆಣ್ಣಾಗಿರುವುದಾಗಿ ತಿಳಿಸುತ್ತಾಳೆ. ಕೆಟ್ಟ ದಾರಿ ತುಳಿಯುವವಳಲ್ಲ ನಾನು ಎಂಬ ಸೂಚನೆಯನ್ನೂ ಈ ಮೂಲಕ ನೀಡುತ್ತಾಳೆ.

"ಹೆಣ್ಣಿದ್ದ ಮನೆಗೆ ಕನ್ನಡಿ ಯಾತಕ್ಕೆ
ಹೆಣ್ಣು ಸಣ್ಣವಳು ಒಳಗಿರಲು । ನನ ಮಗಳು
ಕನ್ನಡಿಯಂಗ ಹೊಳೆಯುವಳು"[೭]

ಹೆಣ್ಣು ಮನೆಗೆ ಕನ್ನಡಿ ಇದ್ದಂತೆ. ಆ ಮನೆಯ ಹೆಣ್ಣನ್ನು ಗಮನಿಸಿದರೆ ಆ ಇಡೀ ಮನೆಯ ಚಿತ್ರಣ ನಮಗಾಗುತ್ತದೆ ಎಂಬ ಭಾವ ಇಲ್ಲಿದೆ. ಆಕೆ ಸಣ್ಣವಳಾಗಿದ್ದರೂ ಆ ಮನೆಯ ಕನ್ನಡಿಯಂತೆ ಹೊಳೆಯುವಳು ಎನ್ನುತ್ತಾರೆ ಜನಪದರು.

“ಸಾಹಿತ್ಯವು ಜೀವನದ ಪ್ರತಿಭಾಜಾತವಾಗಿ, ಜೀವನವು ಸಾಹಿತ್ಯದ ಪ್ರತಿಬಿಂಬ ದರ್ಪಣವಾಗಿ ಏಕರೂಪವಾಗಿ ನಿಲ್ಲುವ ಪ್ರಯೋಜನವು ಅಷ್ಟಿಷ್ಟಲ್ಲ. ದುಡಿದು, ಸೋತು ಮನೆಗೆ ಹೊರಟ ಕೋಮಲೆಯನ್ನೂ ಆಕೆಯ ತೃಪ್ತ ಜೀವನವನ್ನೂ ಬಿಂಬಿಸುವ ಕಳೆ ಮುಖವನ್ನೂ ಕಂಡು ಸಹೃದಯನಾದ ಕವಿಯಲ್ಲಿ ಸಹಜವಾಗಿ

ಬಂದಾಳ ಬಾಲೀ ಬಂದಾಳ ।
ಹೊಲದಿಂದ ಬಂದಾಳ ।೧।
ತಲಿಮ್ಯಾಲ ಹೊರಿ ಒಂದ
ಬಗಲಾಗ ಕೂಸೊಂದ
ಆಡೊಂದು ಮುಂದ ಮುಂದ
ಮರಿಯೊಂದು ಹಿಂದ ಹಿಂದ ॥೨॥

ಈ ಬಗೆಯ ಹಾಡು ಉಕ್ಕಿ ಬರುವುದರ ಮೇಲಿಂದ ಜನಪದ ಸಾಹಿತ್ಯದ ಪ್ರಯೋಜನವನ್ನು ಅಳೆಯಬಹುದು”[೮] ಎಂಬ ಮಾತುಗಳನ್ನು ಗಮನಿಸಬಹುದು. ಇಲ್ಲಿ ಬಾಲಕನನ್ನು ಕರೆದುಕೊಂಡು ಬೆಳಗಿನಿಂದ ಸಂಜೆಯವರೆಗೂ ದುಡಿದು ಬರುತ್ತಿರುವ ಹೆಣ್ಣಿನ ಚಿತ್ರಣ ಆಕೆಯ ಇಡೀ ಬದುಕಿನ ವಿವರಗಳನ್ನು ತಿಳಿಸಿಕೊಡುತ್ತದೆ.

ಸೊಸೆಯಾಗಿ ಬಂದ ಹೆಣ್ಣಿನ ಜೀವನ ಕ್ರಮವನ್ನು ಜನಪದರು ಈ ರೀತಿಯಾಗಿ ತಿಳಿಸುತ್ತಾರೆ.

“ಬಾಗಿಲ ತೊಳದಾಳು । ಇನ್ನೇನ ಬರದಾಳು
ಮುತ್ತಿನ ರಂಗೋಲಿ । ಬರೆದಾಳು
ಬರದಾಳು ತಂಗ್ಯಮ್ಮ । ಮುತ್ತೈದಿತನ ತನಗೆಂದು”[೯]

ಬೆಳಿಗ್ಗೆ ಎದ್ದ ಕೂಡಲೆ ಜನಪದ ಹೆಣ್ಣು ಮಗಳು ಬಾಗಿಲು ತೊಳೆದು, ರಂಗೋಲಿ ಇಡುವ ಮೂಲಕ ತನ್ನ ಇಡೀ ದಿನದ ಬದುಕನ್ನು ಪ್ರಾರಂಭಿಸುತ್ತಾಳೆ. ಇಲ್ಲಿನ ಬಾಗಿಲು ತೊಳೆಯುವಿಕೆ, ರಂಗೋಲಿ ಇಡುವುದು ಇವೆಲ್ಲವು ನಮ್ಮ ಸಂಸ್ಕೃತಿಯ ಭಾಗವೇ ಆಗಿವೆ. ಅಲ್ಲದೆ ಕವಿ ಜನಪದ ಹೆಣ್ಣು ಮಗಳು ಬರೆದಿರುವ ರಂಗೋಲಿ ಯಾವುದು? ಎಂಬುದನ್ನೂ ಸಹ ತಿಳಿಸುತ್ತಾರೆ. ಆಕೆ ನಿತ್ಯವೂ ತಾನು ಮುತ್ತೈದೆಯಾಗಿರುವ ಮುತ್ತೈದೆತನ ಎಂಬ ರಂಗೋಲಿಯನ್ನು ಬರೆದಳು ಎನ್ನುತ್ತಾರೆ ಜನಪದರು. ಇದು ಆಕೆಯ ತುಂಬು ಬಾಳಿನ ಸಂಕೇತವೂ ಆಗಿದೆ. ಮುಂದುವರೆದು

“ಅತ್ತೆ ಮಾವಂದಿರ ಪೂಜೆ ಮತ್ತೆ ಗುರುವಿನ ಪೂಜೆ
ತಾನು ಕೂಡಿದ ಪತಿಯ ಪಾದ ಪೂಜೆ – ಸೋಬಾನವೇ
ತಾನು ಕೂಡಿದ ಪತಿಯ ಪಾದ ಪೂಜೆ ಮಾಡಿದರೆ
ಮುಕುತಿ ಉಂಟಪ್ಪ ಜಗದಾಗೆ – ಸೋಬಾನವೆ”[೧೦]

ಎನ್ನುತ್ತಾಳೆ. ತಾನು ಅತ್ತೆ ಮಾವಂದಿರನ್ನು, ಗುರುವನ್ನು, ತಾನು ಕೂಡಿದ ಪತಿಯ ಪಾದ ಪೂಜೆಯನ್ನು ಮಾಡಿದರೆ ತನಗೆ ಮುಕುತಿ ಉಂಟು ಎಂದು ತಿಳಿಸುತ್ತಾಳೆ. ಅಂದರೆ ತಾನು ಅತ್ತೆ ಮಾವರಿಗೆ, ಗುರುವಿಗೆ, ತಾನು ಕೈ ಹಿಡಿದ ಪತಿಗೆ ವಿಧೇಯಳಾಗಿ ತಾನು ಬದುಕನ್ನು ಸಾಗಿಸುತ್ತೇನೆಂದು ತಿಳಿಸುತ್ತಾಳೆ.

ಬಾಲಕರಿಲ್ಲದ ತನ್ನ ಬದುಕನ್ನು ಕುರಿತು ಜನಪದ ಹೆಣ್ಣು ಮಗಳು ಉಂಡು ಎಸೆಯುವ ಬಾಳೆಯ ಎಲೆಗೆ ತನ್ನನ್ನು ಹೋಲಿಸಿಕೊಂಡಿದ್ದಾಳೆ. ಏಕೆಂದರೆ ನಮ್ಮ ಸಂಸ್ಕೃತಿ ತಾಯ್ತನಕ್ಕೆ ಅರ್ಥಪೂರ್ಣವಾದ ಗೌರವ ಹಾಗೂ ಪ್ರಾಶಸ್ತ್ಯವನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಬಂಜೆಯಾದ ಹೆಣ್ಣು ಮಗಳು ತನ್ನ ನೋವನ್ನು ಹೀಗೆ ಅಭಿವ್ಯಕ್ತಪಡಿಸುತ್ತಾಳೆ.

"ಬಾಲಕರಿಲ್ಲದ ಬಾಲಿದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ । ಬಾಳೆಲೆಯ
ಹಾಸುಂಡು ಬೀಸಿ ಒಗೆದಂಗ"[೧೧]

ಮಕ್ಕಳಿಲ್ಲದ ಹೆಣ್ಣಿನ ಜನ್ಮ ಬಾಡಿಗೆ ಎತ್ತು ದುಡಿದಂತೆ. ಅದರಿಂದ ಏನೂ ಪ್ರಯೋಜನವಿಲ್ಲ. ಹಾಗೆಯೇ ಬಾಳೆಯ ಎಲೆಯನ್ನು ಊಟಕ್ಕೆ ಬಳಸಿ, ಊಟವಾದ ನಂತರ ಅದನ್ನು ಬೀಸಿ ಎಸೆಯುವಂತೆ ಮಕ್ಕಳಿಲ್ಲದ ಹೆಣ್ಣಿನ ಬದುಕು ಸಾಗುತ್ತದೆ ಎನ್ನುತ್ತಾರೆ. ಮುಂದುವರೆದು

"ಕಂದನ ಕುಡು ಶಿವನೆ ಬಂಧನ ಬಡಲಾರೆ
ಹಂಗೀನ ಬಾನ ಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ"[೧೨]

ಶಿವನಲ್ಲಿ ತನಗೊಂದು ಶಿಶುವನ್ನು ನೀಡುವಂತೆ ಬೇಡಿಕೊಳ್ಳುತ್ತಾಳೆ. ಕಾರಣ ತಾನು ಮಕ್ಕಳಿಲ್ಲದೆ ಬಂಧನವನ್ನು ಪಡಲಾರೆ. ಹಾಗೆಯೇ ಹಂಗೀನ ಬಾನವನ್ನು ಉಣಲಾರೆ, ಈ ಭೂಮಿಯ ಮೇಲೆ 'ಬಂಜೆ' ಎಂಬ ಶಬ್ದವನ್ನು ಹೊರಲಾರೆ. ಹಾಗಾಗಿ ತನಗೊಂದು ಕಂದನನ್ನು ಕೊಟ್ಟು ತನ್ನ ಬದುಕನ್ನು ಅರ್ಥ ಪೂರ್ಣಗೊಳಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಇದು ಎಲ್ಲ ಹೆಣ್ಣು ಮಕ್ಕಳ ಬೇಡಿಕೆಯೂ ಆಗಿದೆ. ಇಲ್ಲಿನ ಮಾತುಗಳೆಲ್ಲವೂ ಆಕೆಯ ಮನದ ವೇದನೆಗಳನ್ನು ನಮಗೆ ತಿಳಿಸುತ್ತವೆ. ಮಕ್ಕಳಿಲ್ಲದ ಕಾರಣವಾಗಿ ಆಕೆ ನೆರೆ ಹೊರೆಯ ಹೆಣ್ಣುಮಕ್ಕಳು ಹಾಗೂ ಸಮಾಜದಿಂದ ಅನುಭವಿಸಿರುವ ಮಾನಸಿಕ ಯಾತನೆಯ ನೋವಿನ ವಿವರಗಳು ನಮಗೆ ಇದರಿಂದ ತಿಳಿದು ಬರುತ್ತವೆ.

ಮಗುವು ಜನಿಸಿದ ನಂತರ ಆ ಮಗು ಹೆಣ್ಣು ಮಗುವಾಗಿದ್ದರಷ್ಟೇ ಹೆಣ್ಣಿನ ಬಂಜೆತನ ಎಂಬ ಶಬ್ದ ಹೋಗಲು ಸಾಧ್ಯ ಎಂಬ ಮನೋಭಾವ ನಮ್ಮ ಜನಪದರಲ್ಲಿದೆ. ಅದಕ್ಕಾಗಿಯೇ ಆಕೆ

"ಹತ್ತು ಗಂಡ್ಹಡೆದರ ಮತ್ತ ಬಂಜೆನ್ನೂರ
ದಟ್ಟೀಯ ಉಡುವ ಧರಣೀಯ । ಹಡೆದರ
ಮಕ್ಕಳ ತಾಯೆಂದು ಕರದಾರ"[೧೩]

ಹತ್ತು ಗಂಡೆತ್ತರೂ ಕೂಡ ಆಕೆಗೆ ಬಂಜೆ ಎಂಬುದು ಹೋಗುವುದಿಲ್ಲ. ದಟ್ಟಿಯನ್ನು ಉಡುವ ಧರಣಿಯನ್ನು ಹಡೆದರೆ ಮಾತ್ರ ಆಕೆಯನ್ನು ಮಕ್ಕಳ ತಾಯಿ ಎಂದು ಕರೆಯುತ್ತಾರೆ. ಹೆಣ್ಣು ಹಡೆದರೆ ಮಾತ್ರ ಆಕೆಯ ಜೀವನ ಪರಿಪೂರ್ಣ ಎಂಬ ಭಾವನೆ ಜನಪದರಲ್ಲಿದೆ. ಆದರೆ ತಾನು ಹೆತ್ತ ಮಗು ಹೆಣ್ಣೆಂದು ಹೇಳಿಕೊಳ್ಳುವಷ್ಟು ಧೈರ್ಯವಂತಳಲ್ಲ. ಏಕೆಂದರೆ ಪುರುಷ ಪ್ರಧಾನ ಸಮಾಜ ಹೆಣ್ಣು ಮಗುವನ್ನು ಸ್ವೀಕರಿಸುವ ರೀತಿಯೇ ಬೇರೆ ಸ್ವರೂಪದಲ್ಲಿರುತ್ತದೆ.

"ಹೆಣ್ಣು ಹುಟ್ಯಾದಂತ ಹೇಳಿ ಕಳುವಳಿ ಬ್ಯಾಡ
ಹೆಣ್ಣೆಂದರವರು ಹೆದರ್ಯಾರು । ಕಂದವ್ವ
ಹೆಣ್ಣಲ್ಲ ನಮಗ ರವಿಚಿನ್ನ"[೧೪]

ಪುರುಷ ಪ್ರಧಾನ ಸಮಾಜ ಗಂಡು ಮಗುವಿಗೆ ಮಹತ್ವ ಕೊಟ್ಟಿರುವ ಕಾರಣವಾಗಿ ಹೆಣ್ಣನ್ನು ಹಡೆದ ಹೆಣ್ಣುಮಗಳು ತಾನು ಹಡೆದ ಮಗು ಹೆಣ್ಣು ಎಂಬ ವಿಚಾರವನ್ನು ತನ್ನ ಗಂಡನಿಗೆ ಹೇಳಲೂ ಹೆದರುವ ಸಂಗತಿ ನಮಗೆ ಇಲ್ಲಿ ತಿಳಿಯುತ್ತದೆ. ಆದರೆ ನಮ್ಮ ಜನಪದರ ಆಶಯ ಇದಕ್ಕೆ ವಿರುದ್ಧವಾಗಿದೆ. ಆಕೆಗೆ ಗಂಡು ಮಗು ಜನಿಸಿದರೂ ಅವಳಿಗೆ 'ಬಂಜೆ' ಎಂಬ ಪಟ್ಟದಿಂದ ಮುಕ್ತಿಯಿಲ್ಲ. ಅವಳು ಅದನ್ನು ಹೋಗಲಾಡಿಸಿಕೊಳ್ಳಬೇಕೆಂದರೆ ಹೆಣ್ಣನ್ನು ಹಡೆಯಬೇಕು. ಇದು ಹೆಣ್ಣಿಗೆ ಜನಪದ ಸಾಹಿತ್ಯ ಕೊಟ್ಟ ದೊಡ್ಡ ಗೌರವವಾಗಿದೆ.

ಮನೆಗೆ ಸೊಸೆ ಬರುವಳು ಎಂಬ ಖುಷಿಯಲ್ಲಿರುವ ಅತ್ತೆಯ ಚಿತ್ರಣವನ್ನು ಜನಪದರು ಈ ರೀತಿಯಾಗಿ ಕಟ್ಟಿಕೊಟ್ಟಿದ್ದಾರೆ.

"ಸೊಸೆಯು ಬರುತಾಳಂತ ಖುಷಿಭಾಳ ಮನದಾಗ
ಸೊಸಿ ಬಂದು ಮಗನ ಕಸಗೊಂಡ । ಬಾಳ್ವಾಗ
ಮುಗಿಲೀಗಿ ಬಾಯ ಬಿಡತಾಳ॥"[೧೫]

ಸೊಸೆ ಬರುವಳು ಎಂದು ಸಂತೋಷದಿಂದ ಇದ್ದ ಅತ್ತೆಯು ಸೊಸೆ ಬಂದು ತನ್ನ ಮಗನನ್ನು ಕಸಿದುಕೊಂಡ ಮೇಲೆ ರಕ್ಷಣೆಗಾಗಿ ಮುಗಿಲತ್ತ ನೋಡುತ್ತ ಮೊರೆಯಿಡುತ್ತಾಳೆ ಎನ್ನುತ್ತಾರೆ ಜನಪದರು. ಇಲ್ಲಿ ಆಕೆಯಲ್ಲಿನ ಅಭದ್ರತೆಯ ಆತಂಕಗಳು ಹಾಗೂ ಅನಾಥತೆಯ ಭಾವಗಳು ನಮ್ಮ ಗಮನವನ್ನು ಸೆಳೆಯುತ್ತವೆ. ತನ್ನ ಬಾಳಿಗೆ ಆಸರೆಯಾದ ಮಗನನ್ನು ಸೊಸೆ ಕಸಿದುಕೊಂಡರೆ ಸಹಜವಾಗಿಯೇ ಆ ಹಿರಿಯ ಜೀವದಲ್ಲಿ ಭಯ, ಆತಂಕಗಳು ಮೂಡುತ್ತವೆ.

ತವರು ಹಾಗೂ ಅಣ್ಣ ತಮ್ಮಂದಿರನ್ನು ಕುರಿತ ಆಕೆಯ ಮನಸ್ಥಿತಿಯನ್ನು ಜನಪದ ಗೀತೆಗಳು ಹೀಗೆ ತಿಳಿಯಪಡಿಸಿವೆ.

"ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ
ನನಗವ್ವ ಇರಬೇಕ ಮನಿಯಾಗ । ಬೆನ್ನಲಿ ಬಿದ್ದ ।
ಅಣ್ಣಗೋಳಿರಲಿ ಅನುಗಾಲ"[೧೬]

ಇಲ್ಲಿ ಜನಪದ ಹೆಣ್ಣು ಮಗಳು ಕೇಳಿಕೊಳ್ಳುವುದು ಕಣ್ಣು ಕಾಣುವ ತನಕ ಬೆನ್ನು ಬಾಗುವ ತನಕ ತನಗೆ ತಾಯಿ ಇರಬೇಕು ಮನೆಯಲ್ಲಿ ಎಂದು ಆಸೆ ಪಡುತ್ತಾಳೆ. ಈಕೆಗೆ ತಾಯಿಯನ್ನು ಬಿಟ್ಟು ಬೇರೇನೂ ಬೇಡ. ತನ್ನ ಒಡಲ ಕಷ್ಟ ಸುಖಗಳನ್ನು ವಿಚಾರಿಸಿಕೊಂಡು ಸಮಾಧಾನ ಪಡಿಸುವವಳು ತಾಯಿಯೊಬ್ಬಳೇ ಎಂಬುದು ಈಕೆಗೆ ತಿಳಿದಿದೆ. ಆದ್ದರಿಂದ ತನಗೆ ವಯಸ್ಸಾಗಿ, ಮುದುಕಿಯಾಗುವವರೆಗೂ ತಾಯಿ ಇರಬೇಕೆಂದು ಕೇಳಿಕೊಳ್ಳುತ್ತಾಳೆ. ಅದರಂತೆ ಅನುಗಾಲದವರೆಗೂ ತನ್ನ ಅಣ್ಣಗಳು ಜೊತೆಗಿರಲಿ ಎಂದು ಆಸೆಪಡುತ್ತಾಳೆ.

ಜನಪದ ಮಹಿಳೆಯು ಎಲ್ಲ ಸಮಯಗಳಲ್ಲಿಯೂ ಸುಖದಿಂದ ಇರುವಳು ಎಂದು ಹೇಳಲು ಬರುವುದಿಲ್ಲ. ಅವಳು ತನ್ನ ಬದುಕಿನ ವಿವಿಧ ಸ್ತರಗಳಲ್ಲಿ ದುಃಖಕ್ಕೆ ಒಳಗಾಗುತ್ತಾಳೆ. ಅಂತಹ ಸಂದರ್ಭಗಳಲ್ಲಿ ತನ್ನೆದೆಯ ನೋವನ್ನು ನುಂಗಿ ತನ್ನ ಪಾಡಿಗೆ ಕಾವ್ಯತ್ವದ ಮೆರುಗನ್ನು ನೀಡಿ ಹಾಡಾಗಿಸುತ್ತಾಳೆ. ತನ್ನ ಜೀವನದ ಕಷ್ಟ ಪರಂಪರೆಗೆ ನೊಂದುಕೊಳ್ಳದೆ, ಸಿಟ್ಟಾಗದೆ, ಅವನ್ನು ಸಮರ್ಥವಾಗಿ ಎದುರಿಸುವ ಮನಸ್ಸನ್ನು ಮಾಡಿ ಬದುಕನ್ನು ಮುನ್ನಡೆಸಿದ್ದಾಳೆ. ಜನಪದ ಗೀತೆಗಳಲ್ಲಿ ಅತ್ತೆ ಸೊಸೆಯರ ಜಗಳದಂತೆ, ಅತ್ತಿಗೆ ನಾದಿನಿಯರ ವೈರತ್ವದ ಸನ್ನಿವೇಶಗಳೂ ಇವೆ.

"ತನ್ನರು ಬಂದರೆ ತುಪ್ಪನ್ನ ಬಡಶೂಲು
ಗಂಡನ ದೆಸಿಯಾ ಕಿರಿತಂಗಿ । ಬಂದರೆ
ಉರ್ ಜರಯೆಂದಿ ಮನಗೀಲು॥"[೧೭]

ತನ್ನವರು ಬಂದಾಗ ತುಪ್ಪ ಅನ್ನವನ್ನು ಬಡಿಸುವ ಅತ್ತಿಗೆಯು, ಗಂಡನ ಕಿರಿಯ ತಂಗಿ ಅಣ್ಣನ ಮನೆಗೆ ಬಂದರೆ ಅಂದು ತನಗೆ ಉರಿಜ್ವರವೆಂದು ಮಲಗುತ್ತಾಳೆ. ಇವು ಅತ್ತಿಗೆ ನಾದಿನಿಯರ ಸಂಬಂಧವನ್ನು ಕುರಿತು ಚರ್ಚಿಸುವಂತೆ ಮಾಡುತ್ತವೆ. ಈ ರೀತಿಯ ಅತ್ತಿಗೆ ನಾದಿನಿಯರಿಗೆ ಸಂಬಂಧಿಸಿದ ಅನೇಕ ಜನಪದ ಗೀತೆಗಳು ನಮ್ಮ ಜನಪದ ಸಾಹಿತ್ಯದಲ್ಲಿ ಕಾಣಸಿಗುತ್ತವೆ.

ಹೀಗೆ ಜನಪದ ಗೀತೆಗಳಲ್ಲಿ ಮಹಿಳಾ ಪ್ರತಿನಿಧೀಕರಣದ ನೆಲೆಗಳನ್ನು ಹಲವು ಸ್ತರಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಬಹುದಾಗಿದೆ.

ಕೊನೆ ಟಿಪ್ಪಣಿಗಳು

೦೧. ಜನಪದ ಸಾಹಿತ್ಯದಲ್ಲಿ ಮಹಿಳೆ, ಪು.ಸಂ–೩೫.

೦೨. ಜನಪದ ಸಾಹಿತ್ಯ ಸಂವಾದ, ಪು.ಸಂ–೦೬.

೦೩. ಸುವರ್ಣ ಜನಪದ ಕಾವ್ಯ, ಪು.ಸಂ–೦೫.

೦೪. ಸುವರ್ಣ ಜನಪದ ಕಾವ್ಯ, ಪು.ಸಂ–೦೩.

೦೫. ಸುವರ್ಣ ಜನಪದ ಕಾವ್ಯ, ಪು.ಸಂ–೧೫.

೦೬. ಕನ್ನಡ ಜಾನಪದ ಗೀತಗಳು, ಪು.ಸಂ–೧೦೭.

೦೭. ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು, ಪು.ಸಂ–೩೫.

೦೮. ಸಮಗ್ರ ಜನಪದ ಸಂಪುಟ, ಪು.ಸಂ–೧೨೪.

೦೯. ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು, ಪು.ಸಂ–೪೦.

೧೦. ಸುವರ್ಣ ಜನಪದ ಕಾವ್ಯ, ಪು.ಸಂ–೬೦.

೧೧. ಜನಪದ ಸಾಹಿತ್ಯ ಸಂವಾದ, ಪು.ಸಂ–೨೧.

೧೨. ಜನಪದ ಸಾಹಿತ್ಯ ಸಂವಾದ, ಪು.ಸಂ–೨೧.

೧೩. ಜನಾಂಗದ ಜೀವಾಳ, ಪು.ಸಂ–೩೪.

೧೪. ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು, ಪು.ಸಂ–೩೪.

೧೫. ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು, ಪು.ಸಂ–೫೪.

೧೬. ಜನಾಂಗದ ಜೀವಾಳ, ಪು.ಸಂ–೩೩.

೧೭. ಜಾನಪದ ಮೆಲುಕು, ಪು.ಸಂ–೨೦.

ಅಧ್ಯಾಯ : ಎಂಟು

ಜನಪದ ಗೀತೆಗಳು ಮತ್ತು ಆಧುನಿಕ ಮುಖಾಮುಖಿ

ಅಧ್ಯಾಯ : ಎಂಟು

ಜನಪದ ಗೀತೆಗಳು ಮತ್ತು ಆಧುನಿಕ ಮುಖಾಮುಖಿ

ಆಧುನಿಕತೆಯು ಜನಪದ ಗೀತೆಗಳ ಮೂಲ ಸಂಸ್ಕೃತಿಯನ್ನು ವಿನಾಶದಂಚಿಗೆ ಕೊಂಡೊಯ್ದಿದೆ. ಜಾಗತೀಕರಣದ ಪ್ರಭಾವದಿಂದ ಉಂಟಾದ ಸಾಂಸ್ಕೃತಿಕ ಪಲ್ಲಟಗಳ ಕಾರಣವಾಗಿ ಇಂದು ಜನಪದ ಗೀತೆಗಳನ್ನು ಹಾಡುವವರು ಕಣ್ಮರೆಯಾಗುತ್ತಿದ್ದಾರೆ. ಅಂತೆಯೇ ಜನಪದ ಹಾಡುಗಳು ಸಹ ಹಿನ್ನೆಲೆಗೆ ಸರಿಯುತ್ತಿವೆ. ಅಳಿದುಳಿದಿರುವ ಜನಪದ ಗೀತೆಗಳು ಆಧುನಿಕ ಸಂಗೀತದ ಅಬ್ಬರದಲ್ಲಿ ತನ್ನ ಮೂಲ ಸೊಗಡನ್ನು ಕಳೆದುಕೊಂಡಿವೆ. ತಂತ್ರಜ್ಞಾನದ ಕೊಡುಗೆಯಾಗಿ ಆವಿಷ್ಕಾರ ಹೊಂದಿದ ಹಿಟ್ಟಿನ ಗಿರಣಿಗಳು ಬೀಸುವ ಕಲ್ಲುಗಳನ್ನು ಕಣ್ಮರೆಯಾಗಿಸಿವೆ. ಜೊತೆಗೆ ಬೀಸುವ ಕಲ್ಲುಗಳನ್ನು ಅನುಸರಿಸಿ ಬರುತ್ತಿದ್ದ ಬೀಸುವ ಪದಗಳು ಸಹ ಇಂದು ಉಳಿದಿಲ್ಲ. ಕುಟ್ಟುವ ಪದಗಳು ತಮ್ಮ ಅಸ್ತಿತ್ವ ಹಾಗೂ ಸಾಂದರ್ಭಿಕತೆಯನ್ನು ಕಳೆದುಕೊಂಡಿರುವಂತೆಯೇ ತನ್ನ ಮೌಲ್ಯ ಮತ್ತು ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ.

ಹಾಗೆಂದು ಆಧುನಿಕತೆಯ ಕಾರಣವಾಗಿ ಜನಪದ ಗೀತೆಗಳು ಸಂಪೂರ್ಣವಾಗಿ ನಾಶವಾಗಿಯೇ ಬಿಟ್ಟಿವೆ ಎಂದು ಹೇಳಲು ಬರುವುದಿಲ್ಲ. ಆದರೆ ಜನಪದ ಗೀತೆಗಳ ಅಳಿವಿನಲ್ಲಿ ಆಧುನಿಕತೆಯ ಪಾತ್ರ ಹೆಚ್ಚಿನದಾಗಿದೆ. ಆಧುನಿಕ ಕ್ಯಾಸೆಟ್‌ಗಳಾಗಿ ಹೊಸ ಹೊಸ ಸ್ವರೂಪಗಳಲ್ಲಿ ಜನಪದ ಗೀತೆಗಳು ಹೊರಬರುತ್ತಿವೆ. ಮೂಲ ಸಂಸ್ಕೃತಿಯಲ್ಲಿ ಬದಲಾವಣೆಗೆ ಒಳಗಾಗಿದ್ದರೂ ಕೂಡ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡಿಲ್ಲ. ಆದರೆ ಸಮಷ್ಟಿ ರೂಪದಲ್ಲಿ ಜನರ ನಾಲಿಗೆಯ ಮೇಲೆ ನಲಿಯುತ್ತಿದ್ದ ಜನಪದ ಗೀತೆಗಳು ಆಧುನಿಕತೆಯ ಮುಖಾಮುಖಿಯ ಸಂದರ್ಭದಲ್ಲಿ ಕ್ಯಾಸೆಟ್, ಸಿ.ಡಿ ಮೊದಲಾದ ಆಧುನಿಕ ಸಮೂಹ ಮಾಧ್ಯಮಗಳಲ್ಲಿ ಬಂಧಿಯಾಗಿವೆ.

ಆಧುನಿಕತೆಯ ಕಾರಣವಾಗಿ ಗ್ರಾಮೀಣ ಪ್ರದೇಶಗಳನ್ನು ತೊರೆದು ಹಳ್ಳಿಗಾಡಿನ ಜನ ನಗರಗಳತ್ತ ಮುಖ ಮಾಡಿದ್ದಾರೆ. ಇದಕ್ಕೆ ಹಣ ಹಾಗೂ ಉದ್ಯೋಗದ ಸಮಸ್ಯೆಗಳಂತೆಯೇ ಆಹಾರದ ಸಮಸ್ಯೆಗಳೂ ಕೂಡ ಪ್ರಮುಖ ಕಾರಣಗಳಾಗಿವೆ. ಈ ರೀತಿ ಹೊಸ ಸಂಸ್ಕೃತಿಯ ಪ್ರದೇಶವಾದ ನಗರಗಳಿಗೆ ಕಾಲಿಟ್ಟ ವ್ಯಕ್ತಿಗಳು ತಮ್ಮ ಬದುಕಿನ ತಾಕಲಾಟಗಳ ಕಾರಣವಾಗಿಯೋ ಅಥವಾ ನಗರ ಪ್ರದೇಶಗಳ ತಳುಕಿನ ಸೌಲಭ್ಯಗಳಿಗೆ ಮರುಳಾಗಿ ತಮ್ಮ ಮೂಲ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ.

ಈ ರೀತಿಯ ಮರೆಯುವಿಕೆಯಲ್ಲಿ ಅವರಲ್ಲಿದ್ದ ಅಪಾರವಾದ ಜಾನಪದ ಸಾಹಿತ್ಯ ಭಂಡಾರವೂ ಸೇರಿದೆ. ಅವರ ನಾಲಿಗೆಯ ಮೇಲಿದ್ದ ಗಾದೆ, ಒಗಟು, ಕಥೆ, ಲಾವಣಿಗಳಂತೆ ಗೀತೆಗಳೂ ಸಹ ವಿಸ್ಮೃತಿಯ ಪರದೆಯ ಹಿಂದೆ ಸರಿಯುತ್ತಿವೆ. ಈ ಕಾರಣವಾಗಿ ನಿರ್ದಿಷ್ಟ ಜನ ಸಮುದಾಯಗಳ ಸಾಂಸ್ಕೃತಿಕ ಇತಿಹಾಸ ಹಾಗೂ ಬದುಕಿನ ವಿವರಗಳನ್ನು ತಿಳಿಸುತ್ತಿದ್ದ ಜನಪದ ಗೀತೆಗಳ ಕಣ್ಮರೆಯಿಂದಾಗಿ ಆ ಸಮುದಾಯಗಳ ಬದುಕು ಹಾಗೂ ಸಾಂಸ್ಕೃತಿಕ ಇತಿಹಾಸ ಕೂಡ ಕಣ್ಮರೆಯಾಗುತ್ತಿದೆ. ಅಲ್ಲದೆ ಎಷ್ಟೋ ಸಮಯದಲ್ಲಿ ಆಧುನಿಕತೆಯೊಂದಿಗೆ ಮುಖಾಮುಖಿಯಾಗುವಾಗ ಅದರೊಂದಿಗೆ ಸರಿಸಮನಾದ ಪ್ರತಿಸ್ಪರ್ಧೆ ತೋರಲಾರದೆ ಕಾಲನ ವಶವಾಗುತ್ತಿರುವುದು ಸಹ ಆಧುನಿಕತೆಯೊಂದಿಗಿನ ಮುಖಾಮುಖಿಯ ಸಂಕಟಗಳೇ ಆಗಿವೆ.

"ಜನಪದ ಜೀವನದ ಮೇಲೆ ನಗರೀಕರಣದ ಪ್ರಭಾವ ಬಿದ್ದಷ್ಟೂ ಆಧುನಿಕ ವಿದ್ಯಾಭ್ಯಾಸದ ಪರಿಚಯ ಹೆಚ್ಚಿದಷ್ಟೂ ಜಾನಪದದ ಮೂಲ ಸೊಗಡು, ದೇಸೀ ಸೊಗಡು ಕಡಿಮೆಯಾಗುತ್ತಾ ಹೋಗುತ್ತದೆ. ಹೊಸ ಜನಪದ ಪರಂಪರೆ ಆರಂಭವಾಗುವ ಮೊದಲು ಪ್ರಾಚೀನ ಪರಂಪರೆಯನ್ನು ಉಳಿಸಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ"[7] ಎಂಬ ಮಾತುಗಳು ಮಹತ್ವವಾದವು. ಏಕೆಂದರೆ ಆಧುನಿಕತೆಯ ಕಾರಣವಾಗಿ ಜನಪದ ಗೀತೆಗಳು ತಮ್ಮ ಮೂಲ ಅಸ್ತಿತ್ವವನ್ನು ಕಳೆದುಕೊಂಡು ಕಣ್ಮರೆಯತ್ತ ಸಾಗಿವೆ.

ಆಧುನಿಕ ಮೊಬೈಲ್‌ಗಳ ಬಳಕೆಯ ಕಾರಣವಾಗಿ ಮಕ್ಕಳಲ್ಲಿನ ಶಿಶು ಗೀತೆಗಳು, ಒಗಟುಗಳು, ತಾಯಿಯರಲ್ಲಿನ ಜೋಗುಳದ ಪದಗಳು ಕಣ್ಮರೆಯಾಗಿವೆ. ಅವುಗಳ ಜಾಗದಲ್ಲಿ ಸಿನಿಮಾ ಹಾಡುಗಳು, ನಗೆ ಹನಿಗಳು ಕಾಲಿಟ್ಟಿವೆ. ಬದುಕಿನ ಪೂರ್ಣ ಚಿತ್ರಣವನ್ನು ನೀಡುವ ಜೊತೆಗೆ ಸಾರ್ವಕಾಲಿಕ ಸತ್ಯಗಳನ್ನು ಹುದುಗಿಸಿಕೊಂಡಿದ್ದ ಶಿಶುಗೀತೆಗಳು ಮತ್ತು ಜೋಗುಳದ ಹಾಡುಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು ಮೂಲೆಗುಂಪಾಗಿವೆ. ತೊಡೆ, ಮಂಡಿ ಅಥವಾ ಹೆಗಲ ಮೇಲೆ ಮಕ್ಕಳನ್ನು ಹಾಕಿಕೊಂಡು ಹಾಡುತ್ತಿದ್ದ 'ದೂರಿ ಪದ'ಗಳು ಕಿವಿಪಟಲಗಳಿಂದ ದೂರವಾಗಿವೆ. ಇದಕ್ಕೆ ನಮ್ಮ ಬದುಕಿನ ಶೈಲಿಯಲ್ಲಾದ ಬದಲಾವಣೆಗಳು ಸಹ ಕಾರಣವಾಗಿವೆ. ದೇವರು, ಭಕ್ತಿ, ಪ್ರಕೃತಿ, ಗೆಳೆತನ, ಪ್ರೇಮ, ತವರು, ರಕ್ತ ಸಂಬಂಧ, ಬದುಕಿನ ದುರಂತಮಯತೆ ಮೊದಲಾದ ಅನೇಕ ವಿಚಾರಗಳು ಜನಪದ ಗೀತೆಗಳಲ್ಲಿ ಮಿಳಿತಗೊಂಡಿದ್ದವು. ವೇಗದ ಇಂದಿನ ಬದುಕು ಇಂತಹ ಯಾವುದೇ ಅಂಶಗಳಿಗೆ ಬೆಲೆ ನೀಡಿಲ್ಲ. ಒಂದು ರೀತಿಯ ಯಾಂತ್ರಿಕತೆಯತ್ತ ಸಾಗುತ್ತಿದೆ.

ಮಾರುಕಟ್ಟೆಯ ಸಂಸ್ಕೃತಿಯನ್ನು ಒಪ್ಪಿಕೊಂಡವರಾದ ನಾವು ಅದರ ಬಳಕೆದಾರರಾಗಿದ್ದು, ನಮ್ಮ ಜನಪದ ಗೀತೆಗಳು ಮಾರುಕಟ್ಟೆಯ ಸರಕುಗಳಾಗಿರುವುದನ್ನು ಪ್ರಶ್ನಿಸಲಿಕ್ಕಾಗುತ್ತಿಲ್ಲ. ಅವುಗಳು ಮಾರುಕಟ್ಟೆಗೆ ಬಿದ್ದ ಪರಿಣಾಮವಾಗಿ, ತಮ್ಮ ನೈಜತೆಯಿಂದ ದೂರ ಸರಿಯುತ್ತಿವೆ. ಕೃಷಿಯೇ ಜೀವನಾಧಾರವಾಗಿದ್ದ ಜನಪದರ ಬದುಕು ಇಂದು ಸಂಪೂರ್ಣವಾಗಿ ಪಲ್ಲಟದ ಹಾದಿಯನ್ನು ಹಿಡಿದಿದೆ. ಆಧುನಿಕ ಯಂತ್ರೋಪಕರಣಗಳ ಬಳಕೆಯ ಕಾರಣವಾಗಿ ಎತ್ತು, ನೊಗ, ಕೂರಿಗೆ,

ಕುಂಟೆ, ಹಲುಬೆ ಮೊದಲಾದ ಸಲಕರಣೆಗಳು ಮೂಲೆ ಸೇರಿವೆ. ಈ ಸಲಕರಣೆಗಳನ್ನು ಹಿಂಬಾಲಿಸಿಕೊಂಡು ಹೊರಬರುತ್ತಿದ್ದ ಜನಪದ ಗೀತೆಗಳು ಮರೆಯಾಗಿವೆ. ಆಧುನಿಕತೆಯ ಮುಖಾಮುಖಿಯ ಕಾರಣವಾಗಿ ಜನಪದ ಗೀತೆಗಳು ಬಹಳಷ್ಟು ಪ್ರಮಾಣದಲ್ಲಿ ನಶಿಸಿ ಹೋಗುತ್ತಿವೆ ಎಂದರೆ ತಪ್ಪಾಗಲಾರದು.

ಕುಟ್ಟುವಾಗ, ಬೀಸುವಾಗಿನ ಸಂದರ್ಭದಲ್ಲಿ ಹಾಡುತ್ತಿದ್ದ ಪದಗಳು ಆಧುನಿಕ ಹಿಟ್ಟಿನ ಗಿರಣಿಗಳ ಶಬ್ದಕ್ಕೆ ತಮ್ಮ ದನಿಯನ್ನು ಕಳೆದುಕೊಂಡಿವೆ. ನಾಟಿ ಹಾಕುವಾಗ, ಕಳೆ ಕೀಳುವಾಗ ಮುಂತಾದ ದುಡಿಯುವ ಸಂದರ್ಭಗಳಲ್ಲಿ ಹೆಂಗಸರು ಹಾಡುತ್ತಿದ್ದ ಪದಗಳು ಇಂದಿನ ಗಾರ್ಮೆಂಟ್ಸ್ ಸಂಸ್ಕೃತಿಯ ಒಡೆತಕ್ಕೆ ಕೊಚ್ಚಿ ಹೋಗಿವೆ. ದೇವರು, ಭಕ್ತಿ, ತವರು, ಪ್ರಕೃತಿ, ರಕ್ತ ಸಂಬಂಧ, ನೋವು, ನಲಿವುಗಳು, ಗೆಳೆತನ ಮೊದಲಾದ ಆಪ್ತ ಭಾವನೆಯ ವಿಚಾರಗಳು ನಶಿಸುತ್ತಿವೆ. ಸಾಮಾಜಿಕ ಬದುಕಿನಲ್ಲಿ ತನ್ನದೇ ಆದ ಪ್ರಭಾವ ಹಾಗೂ ಪಾತ್ರವನ್ನು ಹೊಂದಿದ್ದ ಜನಪದ ಗೀತೆಗಳು ಆಧುನಿಕತೆಯ ಮುಖಾಮುಖಿಯಿಂದಾಗಿ ಈ ಎಲ್ಲ ಕಾರ್ಯಕ್ಷೇತ್ರಗಳಿಂದ ಹಿಂದೆ ಸರಿಯುತ್ತಿವೆ. ನಿತ್ಯ ಬದುಕಿನಲ್ಲಿದ್ದ ಕೃತಜ್ಞತಾ ಭಾವಗಳು ಕಣ್ಮರೆಯಾಗುತ್ತಿವೆ.

ಜನಪದ ಗೀತೆಗಳ ಕಾರಣವಾಗಿ ತನ್ನ ನಡೆ – ನುಡಿಗಳಿಂದ ಸುತ್ತಲಿನ ನೆರೆಹೊರೆಯ ಜನರೊಂದಿಗೆ ಉತ್ತಮ ಸಂಬಂಧವನ್ನು ಬೆಳೆಸಿಕೊಂಡಿದ್ದ ಮಾನವ ಇಂದು ಆಧುನಿಕತೆಯ ಪ್ರಭಾವದಿಂದಾಗಿ ಸಂಕುಚಿತ ಮನಸ್ಥಿತಿಯವನಾಗಿದ್ದಾನೆ. ಕುಟುಂಬದಲ್ಲಿ ಕಾಣಬರುತ್ತಿದ್ದ ತಾಯಿ, ತಂದೆ, ಮಗ, ಅಣ್ಣ, ತಂಗಿ, ಅತ್ತೆ, ಸೊಸೆ, ಅತ್ತಿಗೆ, ನಾದಿನಿ, ಬಂಧು, ಬಳಗಗಳೆಂಬ ಸಂಬಂಧಗಳು ಇಂದು ತಮ್ಮ ಮೌಲ್ಯವನ್ನು ಕಳೆದುಕೊಂಡಿವೆ. ಇವೆಲ್ಲವು ವ್ಯಾವಹಾರಿಕ ಸ್ಥಿತಿಯನ್ನು ತಲುಪಿದ್ದು, ಮೊದಲಿನ ಬಂಧವನ್ನು ಉಳಿಸಿಕೊಂಡಿಲ್ಲ. ಇವೆಲ್ಲಕ್ಕು ಮುಖ್ಯ ಕಾರಣ ಜನಪದ ಗೀತೆಗಳು ಆಧುನಿಕತೆಯೊಂದಿಗೆ ಸ್ಪರ್ಧಿಸಲಾರದೆ ಸೋಲುತ್ತಿರುವುದೇ ಮುಖ್ಯ ಕಾರಣ ಎನ್ನಬಹುದು.

ಆಧುನಿಕತೆಯ ತೀವ್ರ ಪೈಪೋಟಿಯ ನಡುವೆ ಜನಪದರ ಬದುಕಿನ ಭಾಗವಾಗಿದ್ದ ಜನಪದ ಗೀತೆಗಳು ಶಕ್ತಿ ಹೀನವಾಗುತ್ತಿವೆ. ಸಮೃದ್ಧ ಜೀವನಾನುಭವವನ್ನು ಅಭಿವ್ಯಕ್ತಿಸುತ್ತಿದ್ದ ಗೀತೆಗಳು ಜನಮಾನಸದಿಂದ ದೂರ ಸರಿಯುತ್ತಿವೆ. ಇದಕ್ಕೆ ಜನರ ಆಲೋಚನಾ ಕ್ರಮಗಳಲ್ಲಾದ ಬದಲಾವಣೆಗಳು ಸಹ ಕಾರಣವಾಗಿವೆ. ವಸಾಹತುಶಾಹಿಯ ಕೊಡುಗೆಯೆಂಬಂತೆ ಬಂದ ಆಧುನಿಕತೆ ಹಾಗೂ ಅದರ ರಾಷ್ಟ್ರೀಯ ಪರಿಕಲ್ಪನೆಗಳಿಗೆ ಪ್ರತಿಸ್ಪರ್ಧಿಯಾಗಿ ನಿಂತಿದ್ದು, ಸ್ಥಳೀಯ ಎಂಬ ಗುರುತಿನ ಜನಪದ ಗೀತೆಗಳು. ಇವು ಆಧುನಿಕತೆಯ ಒಡೆತಕ್ಕೆ ಸಿಕ್ಕಿ ನುಚ್ಚು ನೂರಾಗಿವೆ. ಆಧುನಿಕತೆಯು ರೂಪಿಸುತ್ತಿರುವ ಆಕರ್ಷಕ ಬೌದ್ಧಿಕ ಚಿಂತನೆಗಳ ಕಾರಣವಾಗಿ ಸ್ಥಳೀಯ ಚರಿತ್ರೆಯನ್ನು ನೆನಪಿಸುತ್ತಿದ್ದ ಜನಪದ ಗೀತೆಗಳು ತಮ್ಮ ಮೌಲ್ಯವನ್ನು ಕಳೆದುಕೊಳ್ಳುತ್ತಿರುವ ಜೊತೆಗೆ ಕಣ್ಮರೆಯಾಗುತ್ತಿವೆ.

ಕೊನೆ ಟಿಪ್ಪಣಿಗಳು

೧. ಕರ್ನಾಟಕ ಸಂಶೋಧನಾ ಜಾನಪದ, ಪು.ಸಂ-೧೪೫.

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಯನದ ಹೊಸ ಸಾಧ್ಯತೆಗಳು

ಸಮಾರೋಪ

ಜಾನಪದವು ನಮ್ಮ ಮೂಲ ಸಂಸ್ಕೃತಿ. ಇದು ಎಲ್ಲ ಸಂಸ್ಕೃತಿಗಳ ತಾಯಿ ಬೇರು. ನಮ್ಮೆಲ್ಲಾ ಆಚಾರ, ವಿಚಾರಗಳ ಮೇಲೆ ಇದರ ಪ್ರಭಾವವಿದೆ. ಇದರಲ್ಲಿ ಜನಪದರ ಬದುಕಿನ ವಿವಿಧ ಮುಖಗಳು ಕಾಣಿಸಿಗುತ್ತವೆ. ಮನುಷ್ಯನ ಹುಟ್ಟಿನಿಂದ ಸಾವಿನವರೆಗಿನ ಎಲ್ಲ ವಿಚಾರಗಳನ್ನು ಜನಪದ ಸಾಹಿತ್ಯವು ನಮಗೆ ದರ್ಶಿಸುತ್ತದೆ. ಹಾಗಾಗಿ ಇದು ಅತ್ಯಂತ ಶ್ರೀಮಂತ ಹಾಗೂ ವ್ಯಾಪಕವಾದುದು. ಜಾಗತೀಕರಣ ಹಾಗೂ ಆಧುನೀಕರಣಗಳಂತಹ ದಾಳಿಗಳಿಗೆ ಸಿಲುಕಿ ಇಂದು ಜನಪದ ಸಾಹಿತ್ಯ ಹಾಗೂ ಸಂಸ್ಕೃತಿಗಳು ಅವನತಿಯ ಹಾದಿಯನ್ನು ಹಿಡಿದಿವೆ. ಇಂತಹ ಅಪಾಯದಿಂದ ಜನಪದವನ್ನು ರಕ್ಷಿಸಿ, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆ ಮತ್ತು ಅದರ ಸೃಜನಶೀಲತೆಗಳನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಹಾಗೂ ತುರ್ತು ಎಲ್ಲರ ಬಹು ಮುಖ್ಯ ಜವಾಬ್ದಾರಿಯಾಗಿದೆ. ಅಲ್ಲದೆ ಮುಂದಿನ ಸಮುದಾಯಕ್ಕೆ ಜನಪದ ಸಾಹಿತ್ಯವನ್ನು, ಅದರಲ್ಲಿನ ಸ್ಥಳೀಯ ಜ್ಞಾನ ಪರಂಪರೆಗಳನ್ನು ಮನವರಿಕೆ ಮಾಡಿಕೊಡುವ ಗುರುತರವಾದ ಜವಾಬ್ದಾರಿಯೂ ಕೂಡ ನಮ್ಮದೇ ಆಗಿದೆ.

ಜನಪದ ಸಾಹಿತ್ಯಕ್ಕೆ ಕೊನೆ ಎಂಬುದೇ ಇಲ್ಲ. ಅದು ಜನರ ಜೀವನದ ಜೊತೆ ಜೊತೆಯಾಗಿ ಬೆಳೆಯುತ್ತ ಮುಂದುವರೆಯುತ್ತಿರುತ್ತದೆ. ಇದರಲ್ಲಿ ಕಷ್ಟ ಸಹಿಷ್ಣುತೆ, ಛಲ, ದ್ವೇಷ, ತ್ಯಾಗ, ಪ್ರೇಮ, ಸಾಹಸ, ನೋವು, ನಲಿವು ಎಲ್ಲವೂ ಮೇಳೈಸಿಕೊಂಡಿರುವುದನ್ನು ಕಾಣಬಹುದು. ಇಂತಹ ಗುಣಗಳ ಕಾರಣವಾಗಿಯೇ ಜನಪದ ಸಾಹಿತ್ಯವು ಭವಿಷ್ಯದ ದಾರಿ ದೀಪವಾಗಿದ್ದು, ಆರೋಗ್ಯಪೂರ್ಣ ಸಮಾಜ ರಚನೆಯ ಮಹತ್ವದ ಜವಾಬ್ದಾರಿಯನ್ನು ಹೊತ್ತು ನಿಂತಿದೆ.

ಇಂತಹ ಮಹತ್ತರವಾದ ಆಶಯವನ್ನು ಹೊಂದಿರುವ ಕಾರಣವಾಗಿ ಜನಪದ ಸಾಹಿತ್ಯವನ್ನಾಗಲಿ, ಗೀತೆಗಳನ್ನಾಗಿ ನಿರ್ಲಕ್ಷಿಸಲು ಆಗುವುದಿಲ್ಲ. ಹಾಗಾಗಿಯೇ 'ಜನಪದ ಹಾಡುಗಳು ಒಂದು ನಾಡಿನ ಸಂಸ್ಕೃತಿಯ ವಾಹಕಗಳು. ಜನಪದರ ಬದುಕಿನ ರೀತಿ, ನೀತಿ, ನಂಬಿಕೆ, ಆದರ್ಶ, ಆಲೋಚನೆ, ಕಲ್ಪನೆ, ಶೌರ್ಯ, ಸಾಹಸ ಮುಂತಾದ ಅಂಶಗಳು ಹಾಡಿನ ರೂಪದಲ್ಲಿ ಪ್ರಕಟವಾಗಿವೆ' ಎಂಬ ಎಚ್.ಕಾಶೀನಾಥ ರೆಡ್ಡಿಯವರ ಮಾತುಗಳು ಗಮನಾರ್ಹವಾದವು. ಜನಪದ ಗೀತೆಗಳು ಪ್ರೀತಿ, ತ್ಯಾಗ, ಧೈರ್ಯ, ಶೀಲ, ತಾಳ್ಮೆ, ದಯೆ ಮೊದಲಾದ ಮೌಲ್ಯಗಳ ಆಗರವಾಗಿವೆ. ಜನಪದರ ಶ್ರದ್ಧೆ, ಭಕ್ತಿ, ವಿಶ್ವಾಸ, ನಂಬಿಕೆಗಳು ಸಹ ಜನಪದ ಗೀತೆಗಳಲ್ಲಿ ಕಂಡುಬರುವ ಪ್ರಧಾನ ಧಾರೆಗಳಾಗಿವೆ.

ವ್ಯಷ್ಟಿಯಲ್ಲಿ ಜನಿಸಿ ಸಮಷ್ಟಿಯಲ್ಲಿ ಬಳಕೆಯಾಗುತ್ತಿರುವ ಜನಪದ ಸಾಹಿತ್ಯವು ಅವಿನಾಶಿಯಾದುದು. ಶ್ರೀಮಂತ ಸಂಸ್ಕೃತಿಯ ಮಿಡಿತವಿರುವ ಇದು ಅಜ್ಞಾತನಿಂದ ರಚಿತವಾಗಿ ಸುಶಿಕ್ಷಿತರನ್ನೂ ಕುತೂಹಲದಿಂದ ತನ್ನತ್ತ ತಿರುಗುವಂತೆ ಮಾಡುವ ಗುಣವನ್ನು ಹೊಂದಿದೆ. ಜನಪದ ಗೀತೆಗಳಿಗೆ ಜನಪದರ ಬದುಕೇ ಮೂಲ ಸೆಲೆ. ಇವುಗಳಲ್ಲಿ ಅವರ ಬದುಕಿನ ಸ್ಥಿತ್ಯಂತರಗಳ ವಿವರಗಳನ್ನು ಕಾಣಬಹುದು.

ಹೀಗಾಗಿ ಜನಪದ ಗೀತೆಗಳ ಅಧ್ಯಯನವೆಂದರೆ ಮಾನವ ಸಂಸ್ಕೃತಿಯ ಅಧ್ಯಯನವೇ ಆಗಿದೆ. ಈ ಕಾರಣವಾಗಿ ಕಾಲ, ಸಂದರ್ಭ, ಪರಿಸರಗಳು ಜನಪದ ಗೀತೆಗಳ ರಚನೆಯ ಹಿನ್ನೆಲೆಗೆ ಬಹುಮುಖ್ಯವಾದ ಪ್ರಭಾವವನ್ನು ಬೀರುತ್ತವೆ. ಸಣ್ಣ ಗ್ರಾಮವೊಂದರಲ್ಲಿ ಅಗಾಧವಾದ ಜನಪದ ಸಾಹಿತ್ಯವಿದೆಯೆಂದರೆ ಅದಕ್ಕೆ ಮುಖ್ಯ ಕಾರಣ ಆ ಗ್ರಾಮದ ಪರಿಸರ, ಅಲ್ಲಿನ ಸಂಸ್ಕೃತಿ, ಅದರ ಬೆಳವಣಿಗೆಗೆ ಕೊಟ್ಟ ಪ್ರೋತ್ಸಾಹ, ಒತ್ತಾಸೆಗಳೇ ಆಗಿರುತ್ತವೆ. ಜೊತೆಗೆ ಅಲ್ಲಿನ ಪ್ರತಿಯೊಬ್ಬ ವ್ಯಕ್ತಿಯೂ ಸಹ ಕಾರಣಕರ್ತರಾಗಿರುವುದನ್ನು ಗಮನಿಸಬಹುದು.

ಜನಪದರಂತೆಯೇ ಜನಪದ ಗೀತೆಗಳೂ ಕೂಡ ಎಂದಿಗೂ ಪ್ರಚಾರವನ್ನು ಬಯಸಿದವುಗಳಲ್ಲ. ಅಲ್ಲದೆ ಉಪದೇಶ ಮಾಡುವಂತಹ ಉದ್ದೇಶವಳ್ಳವೂ ಅಲ್ಲ. ಇವೆಲ್ಲದಕ್ಕಿಂತ ಮುಖ್ಯವಾಗಿ ಸಮಸ್ತ ಜನ ಜೀವನದ ನಾಡಿ ಮಿಡಿತಕ್ಕಾಗಿ ತುಡಿಯುವಂತಹವು. ಜೀವನಾನುಭವದ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ತಲೆಮಾರಿನಿಂದ ತಲೆಮಾರುಗಳಿಗೆ ಸಾಗಿಸುವಂತಹವು.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆ ಮೂಲಕ ಜನಪದ ಗೀತೆಗಳಲ್ಲಿ ಅಡಗಿರುವ ವಿಭಿನ್ನ ಆಯಾಮಗಳನ್ನು ಸಂಶೋಧನೆಗೆ ಒಳಗು ಮಾಡಲಾಗಿದೆ. ಸಾಂಸ್ಕೃತಿಕವಾಗಿ ಚನ್ನರಾಯಪಟ್ಟಣ ತಾಲ್ಲೂಕು ಕರ್ನಾಟಕದ ಇತರ ತಾಲ್ಲೂಕುಗಳಿಗಿಂತ ಭಿನ್ನವಾಗಿರುವಂತಹದ್ದು. ಇದಕ್ಕೆ ಅಲ್ಲಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಐತಿಹಾಸಿಕ ಅಂಶಗಳು ಕಾರಣವಾಗಿವೆ. ಶಿಷ್ಟ ಸಾಹಿತ್ಯದ ಅಬ್ಬರದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಇಲ್ಲಿನ ಜನಪದ ಗೀತೆಗಳನ್ನು ಅಧ್ಯಯನಕ್ಕೆ ಒಳಗು ಮಾಡುವ ಮೂಲಕ ಈ ಪರಿಸರದ ಸಾಂಸ್ಕೃತಿಕ ಚರಿತ್ರೆಯನ್ನು ಹುಡುಕುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿಯನ್ನು ಚನ್ನರಾಯಪಟ್ಟಣ ತಾಲ್ಲೂಕೆಂದು ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳನ್ನು ಕೇಂದ್ರವಾಗಿರಿಸಿಕೊಂಡು ಸಾಂಸ್ಕೃತಿಕ ಅಧ್ಯಯನಕ್ಕೆ ತೊಡಗಲಾಗಿದೆ. ಇಲ್ಲಿನ ಜನಪದ ಗೀತೆಗಳು ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಾದೇಶಿಕತೆಯನ್ನು ಹಾಗೂ ಸಾಂಸ್ಕೃತಿಕ ಅನನ್ಯತೆಯನ್ನು ಅರಿಯುವಲ್ಲಿ ಅತ್ಯಂತ ಮಹತ್ವದ ದಾಖಲೆಯಾಗಿವೆ. ಜೊತೆಗೆ ಇವುಗಳು ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನಕ್ಕೆ ಬಹುಮುಖ್ಯ ಆಕರಗಳಾಗಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದಾಗಿ ಇಲ್ಲಿನ

ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನವನ್ನು ವಾರ್ಷಿಕಾವರ್ತನದ ಜನಪದ ಗೀತೆಗಳು, ಕ್ರಿಯಾವರ್ತನದ ಜನಪದ ಗೀತೆಗಳು ಎಂದು ಗುರುತಿಸಿಕೊಳ್ಳಲಾಗಿದೆ.

ಪ್ರಮುಖ ಪ್ರವಾಸಿ ಕೇಂದ್ರವೆನಿಸಿರುವ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ವಿವಿಧ ಧರ್ಮ, ಜಾತಿ, ಜನಾಂಗ, ಭಾಷೆ, ಜೀವನ ಕ್ರಮ ಹಾಗೂ ಸಂಸ್ಕೃತಿಯ ಸಂಮ್ಮಿಲನವನ್ನು ಕಾಣಬಹುದಾಗಿದೆ. ಈ ಎಲ್ಲ ಅಂಶಗಳು ಇಲ್ಲಿನ ಸಾಂಸ್ಕೃತಿಕ ಪರಿಸರದ ಮೇಲೆ ಬೀರಿರುವ ಪ್ರಭಾವಗಳು ಹಾಗೂ ಧೋರಣೆಗಳನ್ನು ಗುರುತಿಸುವ ಪ್ರಯತ್ನವನ್ನು ಸಹ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಹಲವು ಭಾಷೆ, ಮತ, ಪಂಥಗಳಿದ್ದರೂ ಕೂಡ ಧಾರ್ಮಿಕ ಸಾಮರಸ್ಯ, ಸಹಬಾಳ್ವೆಯುತವಾದ ಬದುಕು ಇಲ್ಲಿನ ಜನರದ್ದಾಗಿರುವುದನ್ನು ಇಲ್ಲಿ ಕಾಣಬಹುದಾಗಿದೆ. ಈ ಗೀತೆಗಳ ಮುಖೇನ ಇಲ್ಲಿನ ಜನರ ನೋವು, ನಲಿವು, ಸುಖ, ದುಃಖ, ದೇವರು, ಕುಟುಂಬ, ನಿಸರ್ಗ, ಬದುಕು, ಜೀವನ ಪ್ರೀತಿ, ಸಮಾಜ, ಆಚಾರ ವಿಚಾರ ಮೊದಲಾದವುಗಳನ್ನು ತಿಳಿಯಬಹುದಾಗಿದೆ.

'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' (ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದ್ದು, ಇದರ ಸ್ವರೂಪವನ್ನು ಎಂಟು ಅಧ್ಯಾಯಗಳಲ್ಲಿ ನಿಗದಿಪಡಿಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಅಧ್ಯಯನದ ವಿಧಿ ವಿಧಾನಗಳು ಹಾಗೂ ಇದುವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಕುರಿತು ವಿವರಿಸಲಾಗಿದೆ. ಜೊತೆಗೆ ಇದರ ವ್ಯಾಪ್ತಿಯನ್ನು ಸಹ ನಿರ್ದಿಷ್ಟವಾಗಿ ಗುರುತಿಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯವಾದ 'ಚನ್ನರಾಯಪಟ್ಟಣ ತಾಲ್ಲೂಕಿನ ಭೌಗೋಳಿಕ ಇತಿಹಾಸದ ಅವಲೋಕನ' ಎಂಬ ಅಧ್ಯಾಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಾದೇಶಿಕತೆಯನ್ನು ಪರಿಚಯಿಸಲಾಗಿದೆ. ಇದರಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಭೌಗೋಳಿಕ ನೆಲೆ, ಚಾರಿತ್ರಿಕ ಚಹರೆ, ಸಾಮಾಜಿಕ ಬದುಕು, ಸಾಂಸ್ಕೃತಿಕ ಅನನ್ಯತೆ, ಧಾರ್ಮಿಕತೆ ಮೊದಲಾದವು ಸೇರ್ಪಡೆಗೊಂಡಿವೆ.

ಮೂರನೆಯ ಅಧ್ಯಾಯವಾದ 'ಜನಪದ ಗೀತೆಗಳ ಮೌಖಿಕ ಪರಂಪರೆ' ಎಂಬ ಅಧ್ಯಾಯದ ಅಡಿಯಲ್ಲಿ ಮೌಖಿಕ ಪರಂಪರೆಯಲ್ಲಿ ಜನಪದ ಗೀತೆಗಳು ಬೆಳೆದು ಬಂದಿರುವ ಬಗೆಯನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಜನಪದ ಗೀತೆಗಳ ರಚನೆ, ಶೈಲಿ, ಅವುಗಳ ಮೌಲ್ಯ, ಸ್ವರೂಪ ಹಾಗೂ ರಮ್ಯತೆಯ ವಿಚಾರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯವಾದ 'ವಾರ್ಷಿಕಾವರ್ತನದ ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಲೋಕಾನುಸಂಧಾನ' ಎಂಬ ಅಧ್ಯಾಯದಲ್ಲಿ ೧. ಮದುವೆ ಹಾಡುಗಳು, ೨. ಮೈನೆರೆದ ಹಾಡುಗಳು, ೩. ಜೋಗುಳ ಹಾಡುಗಳು, ೪. ಸೋಬಾನ ಹಾಡುಗಳು, ೫. ಶಿಶು ಗೀತೆಗಳು, ೬. ಸಾವಿನ ಹಾಡುಗಳು, ೭. ಹಾಸ್ಯ ಮತ್ತು ವಿಡಂಬನಾ ಜನಪದ ಗೀತೆಗಳು, ೮. ಕೌಟುಂಬಿಕ ಜೀವನದ ಗೀತೆಗಳು, ೯. ಆರತಿ ಹಾಡುಗಳು, ೧೦. ಕೋಲಾಟದ ಹಾಡುಗಳು ಎಂದು ವಿಂಗಡಿಸಿಕೊಳ್ಳಲಾಗಿದೆ.

ಐದನೆಯ ಅಧ್ಯಾಯವಾದ 'ಕ್ರಿಯಾವರ್ತನ ಜನಪದ ಗೀತೆಗಳ ಸಾಂಸ್ಕೃತಿಕ ಅನನ್ಯತೆ' ಎಂಬ ಅಧ್ಯಾಯದಲ್ಲಿ ಕ್ರಿಯಾವರ್ತನದ ಜನಪದ ಹಾಡುಗಳಾದ ೧.ಒಕ್ಕಲುತನದ ಹಾಡುಗಳು, ೨.ಬೀಸುವ ಹಾಡುಗಳು, ೩.ಕುಟ್ಟುವ ಹಾಡುಗಳು, ೪.ಒಗಟಿನ ಹಾಡುಗಳು, ೫.ಪೌರಾಣಿಕ ಹಾಡುಗಳು ಎಂಬುದಾಗಿ ವರ್ಗೀಕರಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಆರನೆಯ ಅಧ್ಯಾಯವಾದ 'ಜನಪದ ಗೀತೆಗಳಲ್ಲಿ ಸಾಂಸ್ಕೃತಿಕ ಸಂವೇದನೆಗಳು' ಎಂಬುದರಲ್ಲಿ ೧.ಜನಪದ ಗೀತೆಗಳು ಮತ್ತು ರಾಷ್ಟ್ರೀಯತೆಯ ಪ್ರಜ್ಞೆ ೨.ನೀತಿ, ಮಾನವತೆಯ ಮೌಲ್ಯಗಳು ಹಾಗೂ ಸಂಬಂಧಗಳು, ೩.ಸಮಾನತೆ ಮತ್ತು ವೈಚಾರಿಕತೆಯ ವಿವೇಚನೆ, ೪.ಪಶು, ಪಕ್ಷಿ, ಪ್ರಾಣಿಗಳ ಜೀವನ ಪ್ರೀತಿ, ೫.ಜನಪದ ಗೀತೆಗಳು ಮತ್ತು ಜನಪದರ ಅವಿನಾಭಾವ ಸಂಬಂಧ ಎಂಬವುಗಳನ್ನು ಚರ್ಚೆಗೆ ಒಳಪಡಿಸಲಾಗಿದೆ.

ಏಳನೆಯ ಅಧ್ಯಾಯವಾದ 'ಜನಪದ ಗೀತೆಗಳಲ್ಲಿ ಮಹಿಳಾ ಪ್ರತಿನಿಧೀಕರಣ' ಎಂಬುದರಲ್ಲಿ ಜನಪದ ಗೀತೆಗಳಲ್ಲಿ ವ್ಯಕ್ತವಾಗಿರುವ ಮಹಿಳೆಯರ ವಿವಿಧ ರೀತಿಯ ಪ್ರತಿಭಟನಾತ್ಮಕ ಅಂಶಗಳನ್ನು, ಮಹಿಳೆಯರ ಪಾಲ್ಗೊಳ್ಳುವಿಕೆ, ಕೃಷಿ ಹಾಗೂ ಸಾಂಸಾರಿಕ ಬದುಕು ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯ ಪ್ರತಿನಿಧೀಕರಣಗಳನ್ನು ವಿಶ್ಲೇಷಣೆಗೆ ಒಳಗು ಮಾಡಲಾಗಿದೆ.

ಎಂಟನೆಯ ಅಧ್ಯಾಯವಾದ 'ಜನಪದ ಗೀತೆಗಳು ಮತ್ತು ಆಧುನಿಕತೆಯ ಮುಖಾಮುಖಿ' ಎಂಬ ಅಧ್ಯಾಯದಲ್ಲಿ ಆಧುನಿಕತೆಯೊಂದಿಗೆ ಜನಪದ ಗೀತೆಗಳು ಯಾವ ರೀತಿಯಾಗಿ ಅನುಸಂಧಾನ ಕ್ರಿಯೆಗೆ ಒಳಗಾಗಿವೆ ಹಾಗೂ ಮುಖಾಮುಖಿಯಾಗುತ್ತಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಜೊತೆಗೆ ಆಧುನಿಕತೆಗೆ ಸಿಲುಕಿ ನಾಶವಾಗುತ್ತ ಯಾವ ರೀತಿಯ ಪಲ್ಲಟಗಳನ್ನು ಅನುಭವಿಸುತ್ತಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ.

'ಸಮಾರೋಪ'ದಲ್ಲಿ ಅಧ್ಯಯನದ ಫಲಿತಗಳು, ಪರಾಮರ್ಶನ ಗ್ರಂಥಗಳು, ವಕ್ತೃವಿವರ, ಛಾಯಾಚಿತ್ರಗಳು, ಭೂಪಟ ಹಾಗೂ ಇತರ ವಿಷಯಗಳನ್ನು ನೀಡಲಾಗಿದೆ. ಇದಿಷ್ಟು ಪ್ರಸ್ತುತ ಅಧ್ಯಯನದ ಸ್ವರೂಪವಾಗಿದೆ. ಇದರ ಅಡಿಯಲ್ಲಿ ಸಂಶೋಧನಾ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನದ ಫಲಿತಗಳು

ಜನಪದ ಸಾಹಿತ್ಯವು ಜನಪದರು ಪರಂಪರಾಗತವಾಗಿ ಗಳಿಸಿಕೊಂಡು ಬಂದ ಜ್ಞಾನ ಪರಂಪರೆಯಾಗಿದೆ. ಸದಾ ಚೈತನ್ಯದಿಂದ ಕೂಡಿರುವ ಜನಪದ ಸಾಹಿತ್ಯ ಎಂದಿಗೂ ಜೀವಂತವಾಗಿ ಇರುವಂತಹದ್ದು. ಇದು ಜನಸಾಮಾನ್ಯರ ಬದುಕಿನ ಅನುಭವದ ಸಾರ. ಇದಕ್ಕೆ ಸಾವೆಂಬುದಿಲ್ಲ. ಈ ಹಿನ್ನೆಲೆಯಲ್ಲಿ 'ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ' (ಚನ್ನರಾಯಪಟ್ಟಣ ತಾಲ್ಲೂಕನ್ನು ಅನುಲಕ್ಷಿಸಿ) ಎಂಬ ವಿಷಯವನ್ನು ಕುರಿತು ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಸಂಶೋಧನೆಯ ಫಲಿತಗಳು ಕೆಳಕಂಡಂತಿವೆ.

೧. ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳಲ್ಲಿ ಇಲ್ಲಿನ ಪ್ರಾದೇಶಿಕ ಭಾಷೆ ಒಡಮೂಡಿ ಬಂದಿರುವುದು ಕಂಡುಬರುತ್ತದೆ.

೨. ಕರ್ನಾಟಕದ ಆಯಕಟ್ಟಿನ ಸ್ಥಳದಲ್ಲಿರುವ ಚನ್ನರಾಯಪಟ್ಟಣ ತಾಲ್ಲೂಕು ತನ್ನದೇ ಆದ ವಿಶೇಷತೆಗಳನ್ನು ಹೊಂದಿರುವಂತಹದ್ದು. ಇಲ್ಲಿನ ಸಂಸ್ಕೃತಿ, ಜನ ಜೀವನದ ಮೇಲೆ ಹಲವು ಧರ್ಮ, ರಾಜಮನೆತನ, ಭಾಷೆ, ಸಾಂಸ್ಕೃತಿಕ ಕೊಡುಕೊಳ್ಳುವಿಕೆಗಳ ಪ್ರಭಾವವಿದೆ. ಈ ಅಂಶಗಳ ಹಿನ್ನೆಲೆಯಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನ ಸಾಂಸ್ಕೃತಿಕ ವಾತಾವರಣವನ್ನು ಇಲ್ಲಿನ ಜನಪದ ಗೀತೆಗಳಲ್ಲಿ ಗುರುತಿಸಬಹುದಾಗಿದೆ.

೩. ಯಾವುದೇ ಜನಪದ ಗೀತೆ ಇದ್ದಕ್ಕಿದ್ದಂತೆ ರಚಿತವಾದದ್ದಲ್ಲ. ಅದು ಸಮಾಜದಲ್ಲಿ ರೂಢಿ ಅಥವಾ ಚಾಲ್ತಿಯಲ್ಲಿದ್ದ ಹಲವು ರೀತಿಯ ಆಚಾರ, ವಿಚಾರ, ಶೋಷಣೆ, ಪರಂಪರೆಯ ಬಿಕ್ಕಟ್ಟುಗಳು ಇವುಗಳ ಮೇಲೆ ಪ್ರಭಾವ ಬೀರಿರುತ್ತವೆ. ಅಲ್ಲದೆ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಕೊಡುಕೊಳ್ಳುವಿಕೆಯನ್ನು ಮುನ್ನಡೆಸುವ ವಾರಸುದಾರರಾಗಿ ಜನಪದ ಗೀತೆಗಳು ಪ್ರತಿ ಕಾಲಘಟ್ಟದಲ್ಲಿಯೂ ಕೆಲಸ ಮಾಡುತ್ತಿರುತ್ತವೆ. ಈ ಅಂಶಗಳನ್ನು ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳಲ್ಲಿ ಗುರುತಿಸಬಹುದಾಗಿದೆ.

೪. ಜನಪದ ಸಾಹಿತ್ಯದ ಸೃಷ್ಟಿಕರ್ತರು ಮಹಿಳೆಯರೇ ಆಗಿದ್ದು, ಇಲ್ಲಿನ ಜನಪದ ಗೀತೆಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಕಂಡುಬರುತ್ತವೆ. ಅವರ ನೋವು, ನಲಿವು, ಬದುಕಿನ ಕ್ರಮ, ಪುರುಷ ಪ್ರಧಾನ ಸಮಾಜವು ನಿರ್ಮಿಸಿದ ಚೌಕಟ್ಟನ್ನು ಒಡೆದು ತನ್ನ ಅಸ್ತಿತ್ವ ಹಾಗೂ ಅಸ್ಮಿತೆಯನ್ನು ತೋರ್ಪಡಿಸಿರುವ ವಿಚಾರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

೫. ಮನರಂಜನೆ ಅಥವಾ ಹಾಸ್ಯವನ್ನು ಹೊರಸೂಸುವ ಮುಖ್ಯ ಉದ್ದೇಶವನ್ನು ಒಳಗೊಂಡಿದ್ದರೂ ಸಹ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳು ಸಮಕಾಲೀನ ಸಮಾಜ ಹಾಗೂ ಸಂಸ್ಕೃತಿಯ ಪರಿಚಯವನ್ನು ನಮಗೆ ಮಾಡಿಕೊಡುತ್ತವೆ. ಬಣ್ಣ ಅಥವಾ ವರ್ಣದ ಕಾರಣವಾಗಿ ಸಮಾಜದಲ್ಲಿ ಉಂಟಾಗಿದ್ದ ಮೇಲ್ವರ್ಗ, ಕೆಳವರ್ಗಗಳೆಂಬ ಶ್ರೇಣೀಕರಣದ ಸಂಗತಿಗಳು ನಮಗೆ ತಿಳಿಯುವ ಜೊತೆಗೆ ಅವರ ಬದುಕಿನ ಕ್ರಮದ ಪರಿಚಯವೂ ನಮಗಾಗುತ್ತದೆ.

೬. ಪರಸ್ಪರ ಅಪನಂಬಿಕೆ, ದೊಂಬಿ, ಗದ್ದಲ, ರಕ್ತಪಾತದಂತಹ ಕ್ರೌರ್ಯಗಳ ನಡುವೆ ಕೂಡಿ ಬಾಳುವ, ಒಬ್ಬರನ್ನೊಬ್ಬರು ಪ್ರೀತಿಯಿಂದ ಕಾಣುವ, ಸಹಬಾಳ್ವೆಯುತವಾದ ಮಾನವೀಯ ಮೌಲ್ಯಗಳನ್ನು ಅಭಿವ್ಯಕ್ತಿಪಡಿಸುವುದನ್ನು ಇಲ್ಲಿನ ಜನಪದ ಗೀತೆಗಳಲ್ಲಿ ಕಾಣಬಹುದಾಗಿದೆ.

೭. ಶಾಂತಿ, ಸಹಕಾರ, ಸಹಬಾಳ್ವೆಯಂತಹ ಜೀವಪರವಾದ ಆಶಯಗಳನ್ನು ವ್ಯಕ್ತಪಡಿಸುತ್ತ, ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿನಿಧಿಸುವುದನ್ನು ಇಲ್ಲಿನ ಜನಪದ ಗೀತೆಗಳಲ್ಲಿ ಗುರುತಿಸಲಾಗಿದೆ.

೮. ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳಲ್ಲಿ ಸ್ಥಳೀಯ ಸಂಸ್ಕೃತಿಗೆ ಸೇರಿದ ಸಾಂಸ್ಕೃತಿಕ ಅನನ್ಯತೆ ಹೊಂದಿರುವ ಜಾನಪದ ಪರಿಭಾಷೆ, ಪರಿಕಲ್ಪನೆಗಳು ಬಳಕೆಯಾಗಿವೆ. ಇದರಿಂದ

ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳಲ್ಲಿ ಭಾಷೆ, ಸ್ಥಳೀಯ ನುಡಿಗಟ್ಟು, ರೂಪಕ, ಪ್ರತಿಮೆ, ಸಂಕೇತ, ನಂಬಿಕೆ, ಐತಿಹ್ಯ ಮೊದಲಾದ ವಿಶಿಷ್ಟ ಅಂಶಗಳು ಕಂಡುಬರುವುದನ್ನು ಗುರುತಿಸಲಾಗಿದೆ.

೯. ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳು ಏಕಕಾಲಕ್ಕೆ ವಿಶ್ವಾತ್ಮಕ (ಯೂನಿವರ್ಸಲ್) ಜನಪದೀಯ ಲೋಕದ ಜೊತೆಗೆ ತಮ್ಮ ತಾತ್ವಿಕ ಸಂಬಂಧ ಬೆಳೆಸುತ್ತವೆ. ಜೊತೆಗೆ ಚನ್ನರಾಯಪಟ್ಟಣ ತಾಲ್ಲೂಕಿನ ದೇಶೀಯತೆಯ ಅಸ್ಮಿತೆಯನ್ನು ಸಹ ಕಾಪಾಡಿರುವ ಸಂಗತಿಗಳು ಇಲ್ಲಿನ ಜನಪದ ಗೀತೆಗಳಲ್ಲಿ ಕಂಡುಬರುತ್ತವೆ.

೧೦. ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳು ತಮ್ಮ ಮೂಲಕ ಚನ್ನರಾಯಪಟ್ಟಣದ ಸಾಂಸ್ಕೃತಿಕ ಕಥನವನ್ನು ಅಧಿಕೃತವಾಗಿ ಹೇಳುವ ಆಕರ ಧ್ವನಿಗಳಾಗಿವೆ. ಇದರಲ್ಲಿ ಶಿಷ್ಟ ಹಾಗೂ ನಾಗರಿಕತೆಯ ಜೀವನ ಚಿತ್ರಗಳು ಸಹ ಸೇರಿವೆ. ಹಾಗೆಯೆ ಯಾವುದೇ ರೀತಿಯ ಗುರುತು, ಅಸ್ಮಿತೆಯ ಚಹರೆ ಇಲ್ಲದ ಜನರ ಬದುಕಿನ ಸೃಜನಶೀಲವಾದ ಚೈತನ್ಯದ ಬೆಳಕಿನ ಬಿಂಬಗಳನ್ನು ಈ ಗೀತೆಗಳು ದಾಖಲಿಸುತ್ತವೆ. ಅಷ್ಟರ ಮಟ್ಟಿಗೆ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳು ವಿಶಿಷ್ಟವಾಗಿವೆ.

೧೧. ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳು ತಮ್ಮ ಸುತ್ತ ಮುತ್ತಲಿನ ಜಾನಪದೀಯ ಲೋಕಗಳ ಜೊತೆಗೆ ಅಮೂರ್ತವಾಗಿ, ಕಾಲಾತೀತವಾಗಿ ಸಂಬಂಧಗಳನ್ನು ಸ್ಥಾಪಿಸುವ ಬಗೆಯನ್ನು ಈ ಪ್ರದೇಶದ ಗೀತೆಗಳಲ್ಲಿನ ಲಯ, ತಾಳ, ನಾದ, ಧ್ವನಿಯ ಮೂಲಕ ಗುರುತಿಸಬಹುದಾಗಿದೆ.

ಅಧ್ಯಯನದ ಹೊಸ ಸಾಧ್ಯತೆಗಳು

೧. ಚನ್ನರಾಯಪಟ್ಟಣ ತಾಲ್ಲೂಕಿನ ಶಿಶುಗೀತೆಗಳ ಭಾಷಿಕ ಹಾಗೂ ಸಾಂಸ್ಕೃತಿಕ ಅಧ್ಯಯನ.

೨. ಚನ್ನರಾಯಪ್ಟಣ ತಾಲ್ಲೂಕಿನ ಜನಪದ ಗೀತೆಗಳನ್ನು ಇತರ ತಾಲ್ಲೂಕಿನ ಜನಪದ ಗೀತೆಗಳೊಂದಿಗೆ ತೌಲನಿಕ ಅಧ್ಯಯನಕ್ಕೆ ಒಳಪಡಿಸುವುದು.

೩. ಚನ್ನರಾಯಪಟ್ಟಣ ತಾಲ್ಲೂಕಿನ ಪ್ರಣಯ – ಪ್ರೇಮ ಗೀತೆಗಳ ಸಾಂಸ್ಕೃತಿಕ ಅಧ್ಯಯನ.

೪. ಶಿಷ್ಟ ಸಾಹಿತ್ಯದ ಮೇಲೆ ಚನ್ನರಾಯಪಟ್ಟಣ ತಾಲ್ಲೂಕಿನ ಜನಪದ ಗೀತೆಗಳ ಪ್ರಭಾವ ಹಾಗೂ ಪ್ರೇರಣೆಗಳ ಅಧ್ಯಯನ.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ವಕ್ತೃಗಳ ವಿವರ

ಛಾಯಾ ಚಿತ್ರಗಳು

ಭೂಪಟ

ಪರಾಮರ್ಶನ ಗ್ರಂಥಗಳು

೦೧. ಅನಿತಾ ಭಂಡಾರೆ, ಜನಪದ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು, ೨೦೧೨, ಶ್ರೀ ಅನ್ನಪೂರ್ಣ ಪ್ರಕಾಶನ, # ೧೭೬, ೧೨ನೇ ಕ್ರಾಸ್, ಮಾಗಡಿ ಮುಖ್ಯ ರಸ್ತೆ, ಅಗ್ರಹಾರ ದಾಸರಹಳ್ಳಿ, ಬೆಂಗಳೂರು-೫೬೦೦೭೯.

೦೨. ಅಂಬಳಿಕೆ ಹಿರಿಯಣ್ಣ (ಪ್ರ.ಸಂ), ಎ.ವಿ.ನಾವಡ (ಸಂ), ಕರ್ನಾಟಕ ಸಂಶೋಧನಾ ಜಾನಪದ, ೨೦೧೪, ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಡಗೋಡಿ-೫೮೧೨೦೫.

೦೩. ಆರ್ಶ್ವಿಯಸ್ ಸುಂದರಂ, ತಾರಾನಾಥ ಎನ್.ಎಸ್ (ಸಂ), ಜಾನಪದ ತತ್ತ್ವಗಳು, ೧೯೯೯, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೦೪. ಉದಯ ರವಿ, ಹಾಸನ ಜಿಲ್ಲಾ ವೈಶಿಷ್ಟ್ಯ, ೨೦೧೦, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಾಲಗಾಮೆ ರಸ್ತೆ, ಹಾಸನ-೫೭೩೨೦೧.

೦೫. ಕಾಶೀನಾಥ ರೆಡ್ಡಿ. ಎಚ್ (ಸಂ), ಆಚರಣೆಯ ಹಾಡುಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೦೬. ಕಾಳೇಗೌಡ ನಾಗವಾರ, ಜನಪದ ಸಾಹಿತ್ಯ, ೧೯೯೬, ಯುಗಾದಿ ಪ್ರಕಾಶನ, ಬೆಂಗಳೂರು.

೦೭. ಕ್ಯಾತನಹಳ್ಳಿ ರಾಮಣ್ಣ (ಸಂ), ಬೀದರ್ ಜಿಲ್ಲೆಯ ಜಾನಪದ ಗೀತೆಗಳು, ೧೯೭೬, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೦೮. ಕೃಷ್ಣಮೂರ್ತಿ ಹನೂರು, ಮೈಲಹಳ್ಳಿ ರೇವಣ್ಣ, ತಾರಾನಾಥ ಎನ್.ಎಸ್ (ಸಂ), ಸೀಮಾತೀತ ಕನ್ನಡ ಸಾಹಿತ್ಯ ಚರಿತ್ರೆ-ಸಂಪುಟ-೩, ೨೦೧೪, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೦೯. ಗದ್ದಗಿಮಠ ಬಿ.ಎಸ್, ಕನ್ನಡ ಜಾನಪದ ಗೀತಗಳು, ೧೯೬೯, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಗಾಯಿತ್ರಿ ನಾವಡ, ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ೧೯೯೯, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ, ಸಿರಿ ಪ್ರಕಾಶನ, ಹೊಸಪೇಟೆ.

೧೧. ಗಾಯತ್ರಿ ನಾವಡ, ಜನಪದ ಸಾಹಿತ್ಯ ಸಂಚಯ, ೨೦೧೮, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮.

೧೨. ಗುಂಡಪ್ಪ. ಎಲ್ (ಸಂಪಾದಕರು), ಮತಿಘಟ್ಟ ಕೃಷ್ಣಮೂರ್ತಿ, ಮುತ್ತು ರಾಮಸ್ವಾಮಿ (ಸಂಗ್ರಾಹಕರು), ನಾಡಪದಗಳು, ೧೯೪೭.

೧೩. ಗುಂಡ್ಮಿ ಚಂದ್ರಶೇಖರ ಐತಾಳ (ಸಂಗ್ರಹ ಮತ್ತು ಸಂಪಾದನೆ), ಮದ್ದಂಟೆ ಜನನ ಮರಣಕ್ಕೆ, ೧೯೭೩, ಆನಂದ ಪ್ರಕಾಶನ, ಮಂಗಳೂರು.

೧೪. ಗೊರೂರು ರಾಮಸ್ವಾಮಿ ಅಯ್ಯಂಗಾರ್, ಹಾಸನ ಜಿಲ್ಲೆ : ದರ್ಶನ, ೧೯೭೭, ಐಬಿಎಚ್ ಪ್ರಕಾಶನ, ಗಾಂಧಿ ನಗರ, ಬೆಂಗಳೂರು-೫೬೦೦೦೯.

೧೫. ಗೋಪಾಲ್. ಆರ್ (ಸಂ), ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ೨೦೧೦, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೧೬. ಚಂದ್ರಶೇಖರ ಕಂಬಾರ, ಮತ್ತಿಘಟ್ಟ ಕೃಷ್ಣಮೂರ್ತಿ, ಎಲ್.ಆರ್.ಹೆಗಡೆ(ಸಂ), ಜನಪದ ಸಾಹಿತ್ಯ, ೧೯೭೮, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು-೫೬೦೦೦೯.

೧೭. ಚನ್ನಬಸಪ್ಪ ಗೊ.ರು, ಬೈರಮಂಗಲ ರಾಮೇಗೌಡ, ಚಕ್ಕರೆ ಶಿವಶಂಕರ್ (ಲೇ), ಜಾನಪದ ದರ್ಶನ, ೧೯೯೧, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

೧೮. ಜವರೇಗೌಡ.ದಿ, ಸುವರ್ಣ ಸಂಚಯ, ೧೯೬೭, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೯. ಜವರೇಗೌಡ. ದೇ, ಜಾನಪದ ಅಧ್ಯಯನ, ೧೯೯೧, ಚೇತನ ಬುಕ್ ಹೌಸ್, ನಾರಾಯಣಶಾಸ್ತ್ರೀ ರಸ್ತೆ, ಮೈಸೂರು-೫೭೦೦೧೪.

೨೦. ತಪಸ್ವೀಕುಮಾರ್.ಸಂ, ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ, ೧೯೮೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೧. ತಿಪ್ಪೇಸ್ವಾಮಿ.ಜಿ.ಆರ್. (ಸಂ), ದಕ್ಷಿಣ ಕರ್ನಾಟಕದ ಬೇಸಾಯದ ಹಾಡುಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೫೬೦೦೦೨.

೨೨. ನಾಗನಾಯ್ಕ ರಾಮೇನಹಳ್ಳಿ (ಸಂ), ಹೆಚ್.ಡಿ.ಕೋಟೆ ತಾಲ್ಲೂಕಿನ ಜನಪದ ಗೀತೆಗಳು, ೨೦೦೯, # ೩೬೦, ಲಿಖಿತ ನಿಲಯ, ೫ನೇ ಮೇನ್, ೪ನೇ ಹಂತ, ಟಿ.ಕೆ.ಲೇಔಟ್, ಮೈಸೂರು.

೨೩. ನಾಯಕ.ಎನ್.ಆರ್, ಕಾರವಾರ ಜಿಲ್ಲೆಯ ಜನಪದ ಗೀತೆಗಳು, ೧೯೮೨, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೪. ನಾಯಕ.ಎನ್.ಆರ್, ಜಾನಪದ ಮೆಲುಕು, ೧೯೮೭, ಜಾನಪದ ಪ್ರಕಾಶನ, ಹೊನ್ನಾವರ, ಉತ್ತರ ಕನ್ನಡ.

೨೫. ನಾವಡ.ಎ.ವಿ, ಜಾನಪದ ಸ್ವರೂಪ ಮತ್ತು ವ್ಯಾಖ್ಯೆ, ೨೦೧೧, ಪ್ರಸಾರಾಂಗ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ, ಮೈಸೂರು.

೨೬. ನಿಂಗಣ್ಣ ಸಣ್ಣಕ್ಕಿ, ಜಾನಪದ ಪ್ರಚಾರ, ೨೦೦೩, ವಿದ್ಯಾನಿಧಿ ಪ್ರಕಾಶನ, ಗದಗ.

೨೭. ಪರಮಶಿವಯ್ಯ.ಜೀ.ಶಂ, ಜನಪದ ಸಾಹಿತ್ಯ ಸಮೀಕ್ಷೆ, ೨೦೧೫, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮.

೨೮. ಬಸವರಾಜ ಕಲ್ಗುಡಿ (ಸಂ), ಸುವರ್ಣ ವಿಚಾರ ಸಾಹಿತ್ಯ, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೨೯. ಬಸವಾರಾಧ್ಯ.ಎನ್ (ಸಂ), ಸಂಕ್ಷಿಪ್ತ ನ್ನಡ ನಿಘಂಟು, ೨೦೧೬, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮.

೩೦. ಭಾಸ್ಕರ್.ಟಿ.ಎಂ (ಸಂ), ಕಸುಬಿನ ಹಾಡುಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೩೧. ಮಂಜುನಾಥ ಬೇವಿನಕಟ್ಟಿ (ಸಂ), ಜಾನಪದ ಕರ್ನಾಟಕ, ಸಂಪುಟ-೧, ಸಂಚಿಕೆ-೨, ಜೂನ್ ೨೦೦೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨. ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕರ್ನಾಟಕದ ಜನಪದ ಸಾಹಿತ್ಯ, ೨೦೦೪, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್, 'ಮಾಸ್ತಿ ಮನೆ', ೪೯, ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್ ರಸ್ತೆ, ಗವಿಪುರದ ವಿಸ್ತರಣ, ಬೆಂಗಳೂರು-೫೬೦೦೧೯.

೩೩. ಮೇಟಿಕೆರೆ ಹಿರಿಯಣ್ಣ (ಸಂ), ಚಿಲಿಪಿಲಿ, ೨೦೦೦, ಹಾಸನ ಜಿಲ್ಲಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರ ಸಂಘ (ರಿ), ಹಾಸನ.

೩೪. ಮೇಟಿಕೆರೆ ಹಿರಿಯಣ್ಣ (ಸಂ), ಹೊಯ್ಸಳ ನಾಡಿನ ಕೋಲಾಟದ ಪದಗಳು, ೨೦೧೫, ಸ್ವಾಗತ ಸಮಿತಿ, ೮೧ ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಶ್ರವಣಬೆಳಗೊಳ, ಹಾಸನ ಜಿಲ್ಲೆ, ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು-೫೭೩೨೦೧.

೩೫. ಯಶೋಧರಾ ಶಾಸ್ತ್ರೀ, ಗುಲ್ಬರ್ಗಾ ಜಿಲ್ಲೆಯ ಸಂಪ್ರದಾಯದ ಹಾಡುಗಳು, ೧೯೯೯, ಜ್ಯೋತಿರ್ಮಯಿ ಪ್ರಕಾಶನ, ಗುಲಬರ್ಗಾ.

೩೬. ರಾಜಪ್ಪ ಟಿ.ಎಸ್, ರಾಯಚೂರು ಜಿಲ್ಲೆಯ ಜನಪದ ಗೀತೆಗಳು, ೧೯೭೬, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೭. ರಾಜಪ್ಪ ಟಿ.ಎಸ್ (ಸಂ), ಬಳ್ಳಾರಿ ಜಿಲ್ಲೆಯ ಜನಪದ ಗೀತೆಗಳು, ೧೯೮೬, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩೮. ಲಕ್ಕಪ್ಪಗೌಡ.ಹೆಚ್.ಜೆ, ಸುವರ್ಣ ಜಾನಪದ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

೩೯. ಲಕ್ಷ್ಮಣನ್ ಚೆಟ್ಟಿಯಾರ್ ಎಸ್.ಎಂ.ಎಲ್, ಜೀ.ಶಂ.ಪರಮಶಿವಯ್ಯ (ಅನುವಾದ), ತಮಿಳುನಾಡಿನ ಜಾನಪದ, ೧೯೯೪, ನ್ಯಾಷನಲ್ ಬುಕ್‌ಟ್ರಸ್ಟ್, ಇಂಡಿಯಾ.

೪೦. ಲಿಂಗಯ್ಯ.ಡಿ, ಜನಪದ ಸಾಹಿತ್ಯ ಸಂವಾದ, ೧೯೮೨, ದಿನಕರ ಪ್ರಕಾಶನ, ೬೯೦, ೧ನೇ ಬಿ ಮುಖ್ಯರಸ್ತೆ, ೭ನೇ ಬ್ಲಾಕ್, ಬನಶಂಕರಿ, ೩ನೇ ಘಟ್ಟ, ಬೆಂಗಳೂರು-೫೬೦೦೮೫.

೪೧. ಲಿಂಗಯ್ಯ.ಡಿ, ಕೆ.ಆರ್.ಸಂಧ್ಯಾರೆಡ್ಡಿ, ಜಾನಪದ : ಸ್ವರೂಪ ಮತ್ತು ಸಾಹಿತ್ಯ, ೨೦೦೬, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

೪೨. ವಸಂತಮಾಲಾ ರಾ. ಅರಗಂಜಿ, ಜನಪದ ಪದ್ಯ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ೨೦೦೯, ರೈಟ್ ವೆಲ್ ಇಂಟರ್ ನ್ಯಾಷನಲ್, ನಂ, ೨೨/೨೩, ೧೬ನೇ ಮುಖ್ಯ ರಸ್ತೆ, ಕರೀಂ ಸಾಬ್ ಬಡಾವಣೆ, ಶ್ರೀಗಂಧ ನಗರ, ಪೀಣ್ಯ, ಎರಡನೇ ಹಂತ, ಬೆಂಗಳೂರ-೫೬೦೦೯೧.

೪೩. ವೀರಣ್ಣ ದಂಡೆ, ಶ್ರೀಪಾದ ಶೆಟ್ಟಿ (ಸಂ), ಸುವರ್ಣ ಜಾನಪದ ಲೇಖನಗಳು, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೪೪. ವೀರೇಂದ್ರ ಸಿಂಪಿ (ಸಂ), ಸಮಗ್ರ ಜನಪದ ಸಂಪುಟ, ೨೦೦೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ-೫೮೩೨೭೬.

೪೫. ಶಂಕರ ನಾರಾಯಣ ತೀ.ನಂ, ವೆಂಕಟೇಶ್ ಎಂ.ಎನ್ (ಸಂ), ೨೦೦೪, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

೪೬. ಶಿವರಾಮ ಕಾರಂತ, ಜಾನಪದ ಗೀತೆಗಳು, ೧೯೭೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೭. ಸಂಧ್ಯಾರೆಡ್ಡಿ.ಕೆ.ಆರ್, ಜನಪದ ಸಾಹಿತ್ಯದಲ್ಲಿ ಮಹಿಳೆ, ೧೯೯೫, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮.

೪೮. ಸಿದ್ದರಾಮಯ್ಯ ಎಸ್.ಜಿ, ಸಂಧ್ಯಾರೆಡ್ಡಿ ಕೆ.ಆರ್ (ಸಂ), ಸುವರ್ಣ ಜನಪದ ಕಾವ್ಯ, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೪೯. ಸಿಂಪಿ ಲಿಂಗಣ್ಣ, ಜನಾಂಗದ ಜೀವಾಳ, ೧೯೬೦, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ.

೫೦. ಸಿದ್ದಗಂಗಪ್ಪ ಎಚ್.ಎಸ್, ಬೀದರ್ ಜಿಲ್ಲೆಯ ಜಾನಪದ ಗೀತೆಗಳು, ೨೦೧೪, ಕಲಾ ಪ್ರಕಾಶನ ನಂ. ೨, ೨ನೇ ಅಡ್ಡರಸ್ತೆ, ಮುನೇಶ್ವರ ಬ್ಲಾಕ್, ರಾಜಮಹಲ್ ಗುಟ್ಟಹಳ್ಳಿ, ಬೆಂಗಳೂರು.

೫೧. ಸಿ.ಪಿ.ಕೆ, ಜಾನಪದ ಸತ್ತ್ವ ಮತ್ತು ತತ್ತ್ವ, ೨೦೧೫, ಅಖಿಲಾ ಏಜೆನ್ಸೀಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮೀ ಟಾಕೀಸ್ ಹಿಂಭಾಗ, ಮೈಸೂರು-೫೭೦೦೨೪.

೫೨. ಸೀತಾರಾಮಯ್ಯ.ವಿ (ಸಂ), ಜನಪದ ಸಾಹಿತ್ಯ, ೨೦೧೨, ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿ ನಗರ, ಬೆಂಗಳೂರು-೫೬೦೦೦೯.

೫೩. ಸುನಂದಮ್ಮ. ಆರ್ (ಸಂ), ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂಪುಟ-೮, ಜನಪದ, ೨೦೧೩, ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ.

೫೪. ಹಂಪನಹಳ್ಳಿ ತಿಮ್ಮೇಗೌಡ (ಸಂ), ಜೀವನಾವರ್ತನ ಗೀತೆಗಳು, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೫೫. ಹಲಸಂಗಿ ಚೆನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮತ್ತು ಗೆಳೆಯರು (ಸಂಗ್ರಾಹಕರು), ಗರತಿಯ ಹಾಡು, ೧೯೯೦, (೨೦೧೨), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ವಕ್ತೃಗಳ ವಿವರ

ಕ್ರಸಂ	ಹೆಸರು	ಗ್ರಾಮ	ಉದ್ಯೋಗ	ವಯಸ್ಸು
೦೧.	ತಿಮ್ಮಕ್ಕ	ಅರಕೆರೆ	ಕೃಷಿ	೬೫
೦೨.	ರಾಜೇಗೌಡ	ಹುಲಿಕೆರೆ	ಕೃಷಿ	೭೦
೦೩.	ನಂದಿನಿ ಎಚ್.ಎಂ	ನುಗ್ಗೇಹಳ್ಳಿ	ವಿದ್ಯಾರ್ಥಿನಿ	೧೦
೦೪.	ಸೋಮೇಶ	ನುಗ್ಗೇಹಳ್ಳಿ	ವಿದ್ಯಾರ್ಥಿ	೧೫
೦೫.	ನಿಂಗಪ್ಪ	ಶ್ರವಣೇರಿ	ಕೃಷಿ	೫೧
೦೬.	ಸುಶೀಲಮ್ಮ	ಹಿರೀಸಾವೆ	ಗೃಹಿಣಿ	೪೫
೦೭.	ರಾಚಯ್ಯ	ದಿಂಡಗೂರು	ಕೂಲಿ	೫೦
೦೮.	ಚಂದ್ರಮ್ಮ	ಕತ್ರಘಟ್ಟ	ಕೂಲಿ	೫೫
೦೯.	ಕಲಾವತಿ	ಅಣಿಕೆರೆ	ಕೃಷಿ	೪೦
೧೦.	ಮಹಾದೇವಯ್ಯ	ತೆಜ್ಜೇಗೆರೆ	ಕೃಷಿ	೬೧
೧೧.	ಧರಣಿ	ಬೂವನಹಳ್ಳಿ	ಹೈನುಗಾರಿಕೆ	೪೫
೧೨.	ಮಂಜೇಗೌಡ	ನವಲೆ	ಕೃಷಿ	೫೫
೧೩.	ರೇವಣ್ಣ	ಕಲ್ಕೆರೆ	ಕೃಷಿ	೫೨
೧೪.	ಮಾದೇಗೌಡ	ಬಾಗೂರು	ಹೈನುಗಾರಿಕೆ	೪೯
೧೫.	ಪೂರ್ಣಿಮಾ	ದಂಡಿಗನಹಳ್ಳಿ	ಗೃಹಿಣಿ	೪೧
೧೬.	ದೊಡ್ಡಯ್ಯ	ಅಕ್ಕನಹಳ್ಳಿ	ಕೂಲಿ	೬೩
೧೭.	ರಾಮಚಂದ್ರ	ಬಾಗೂರು	ಕೃಷಿ	೫೧
೧೮.	ರಂಗಪ್ಪ	ಶ್ರವಣಬೆಳಗೊಳ	ಕೃಷಿ	೪೯
೧೯.	ಅನ್ನಪೂರ್ಣಮ್ಮ	ಕುಂಟೂರು	ಗೃಹಿಣಿ	೪೯
೨೦.	ದೇವೀರಮ್ಮ	ಹಿರಿಸಾವೆ	ಕೂಲಿ	೫೩
೨೧.	ಗಂಗಮ್ಮ	ಕಲ್ಕೆರೆ	ಕೃಷಿ	೪೭

೨೨.	ಸಾಕಮ್ಮ	ಅಕ್ಕನಹಳ್ಳಿ	ಕೃಷಿ	೫೦
೨೩.	ಕಲ್ಲೇಶ	ಶ್ರವಣಬೆಳಗೊಳ	ಹೈನುಗಾರಿಕೆ	೪೬
೨೪.	ಸೋಮಣ್ಣ	ದಿಂಡಗೂರು	ಕೃಷಿ	೫೩
೨೫.	ಕೃಷ್ಣಪ್ಪ	ಕತ್ರಘಟ್ಟ	ಕೃಷಿ	೪೯
೨೬.	ನಂಜಪ್ಪ	ದಿಂಡಗೂರು	ಹೈನುಗಾರಿಕೆ	೫೧

ಛಾಯಾ ಚಿತ್ರಗಳು



ಜನಪದ ಗೀತೆಗಳ ಸಂಗ್ರಹದ ಸಮಯದಲ್ಲಿನ ಸಂದರ್ಶನ




ಜನಪದ ಗೀತೆಗಳ ಹಾಡುಗಾರಿಕೆಯಲ್ಲಿ ಮಗ್ನರಾಗಿರುವ ಕಲಾವಿದರು



ಹೊಲ ಕುಯ್ಯುವಾಗಿನ ಸಮಯದಲ್ಲಿ ಗೀತೆಗಳ ಹಾಡುಗಾರಿಕೆಯಲ್ಲಿ ನಿರತರಾದ ಕೃಷಿ ಹೆಣ್ಣುಮಕ್ಕಳು



ಹೊಲ ಕುಯ್ಯುವಾಗಿನ ಸಮಯದಲ್ಲಿ ಗೀತೆಗಳ ಹಾಡುಗಾರಿಕೆಯಲ್ಲಿ ನಿರತರಾದ ಕೃಷಿ ಹೆಣ್ಣುಮಕ್ಕಳು



ಜನಪದ ಗೀತೆಗಳ ಸಂಗ್ರಹದ ಸಮಯದಲ್ಲಿನ ಸಂದರ್ಶನ



ಜನಪದ ಗೀತೆಗಳ ಹಾಡುಗಾರಿಕೆಯಲ್ಲಿ ಮಗ್ನರಾಗಿರುವ ಯುವಕರು



ಹೊಲ ಕುಯ್ಯುವಾಗಿನ ಸಮಯದಲ್ಲಿ ಗೀತೆಗಳ ಹಾಡುಗಾರಿಕೆಯಲ್ಲಿ ನಿರತರಾದ ಕೃಷಿ ಹೆಣ್ಣುಮಕ್ಕಳು



ಮೈನೆರೆದ ಹಾಡುಗಳನ್ನು ಹಾಡುತ್ತಿರುವ ಮಹಿಳೆಯರು



ಸೋಬಾನೆ ಹಾಡುಗಳನ್ನು ಹಾಡುತ್ತಿರುವುದು



ಜನಪದ ಗೀತೆಗಳ ಹಾಡುವಿಕೆಯಲ್ಲಿ ತೊಡಗಿರುವುದು




ಜನಪದ ಗೀತೆಗಳ ಹಾಡುವಿಕೆಯಲ್ಲಿ ತೊಡಗಿರುವುದು



ಆರತಿ ಹಾಡುಗಳಲ್ಲಿ ನಿರತರಾಗಿರುವ ಮಹಿಳೆಯರು

ಭೂಪಟ



ಚನ್ನರಾಯಪಟ್ಟಣ ತಾಲ್ಲೂಕಿನ ನಕ್ಷೆ



ಜಾನಪದ ಅಧ್ಯಯನ ವಿಭಾಗ